ಕನ್ನಡ

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು : ಶ್ರೀ ಎಸ್. ಪಿ. ಪಾಟೀಲ

ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳೂ ಮುಂಬಯಿ ರಾಜ್ಯದ ರಾಜ್ಯಪಾಲರೂ ಆದ
ಮಾನ್ಯ ಡಾಕ್ಟರ ಹರೇಕೃಷ್ಣ ಮೆಹತಾಬರವರು.

ಬಿಡಿ ಪ್ರತಿ
೦—೩—೦

ಜಾನೇವಾರಿ ೧೯೫೬

ವಾ. ಚಂದಾ
೪—೦—೦

ಕನ್ನಡ ಪ್ರಾಥಮಿಕ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : **ಶ್ರೀ ಕೆ. ಬಿ. ತೇರಗಾಂವಕರ,** ಬಿ.ಎಸ್‌ಸಿ. (ಆನರ್ಸ), ಬಿ.ಟಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : **ಶ್ರೀ ಎಸ್. ಪಿ. ಪಾಟೀಲ,** ಬಿ.ಎ., ಬಿ.ಟಿ., ಡಿ.ಪಿ.ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ಹಾಗು ಗೌ. ಕಾರ್ಯದರ್ಶಿ
ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೧ | ಜಾನೆವಾರಿ ೧೯೫೬ | ಸಂಚಿಕೆ ೮

— ಪರಿವಿಡಿ —

೧	ಸಂಪಾದಕೀಯ	....	....	೧
೨	ನಯೀ ತಾಲೀಮ	....	ಶ್ರೀ ಶಿಂತ್ರಿ ಬಸಪ್ಪನವರು	೪
೩	ಶಾಲಾ ವರ್ಗಗಳಲ್ಲಿ ಪುನರುತ್ತಿಯೇ ?	....	ಶ್ರೀ ರಾ. ರು. ಕುಪ್ಪಸದ, ವಿಜಾಪೂರ	೫
೪	ಗುರ್ಚಿ	....	ಡಾಕ್ಟರ ಬಿ. ಎಸ್. ಗದ್ದಗಿಮಠ	೮
೫	ಮೂಲ ಶಿಕ್ಷಣದ ಅರಿವು	....	ಶ್ರೀ ಶಿಂತ್ರಿ ಬಸಪ್ಪನವರು	೧೩
೬	ಮಹಾತ್ಮಾಜಿಯವರು ಜಗತ್ತಿಗೆ ಬೀರಿದ ಸಂದೇಶಗಳು	....	ಶ್ರೀ ಜಿ. ಬಿ. ಇಚ್ಚಂಗಿ (ಶಿಕ್ಷಕ ವಿದ್ಯಾರ್ಥಿ)	೧೬
೭	ಜೀವನ ಶಿಕ್ಷಣ ವಾರ್ತೆಗಳು		ಶ್ರೀಮತಿ ಪಿ. ಎ ಭಾಸ್ಕರ	೨೦
೮	ಪ್ರಾಥಮಿಕ ಶಿಕ್ಷಣ ಪ್ರಪಂಚ		....	೨೩
೯	ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ ೧೯೫೬ (ಪ್ರ ಟಿಪ್ಪಿ)	....		೨೫

ಹೊದಿಕೆಯ ಪುಟ ೩ ನಾಟಕ ಕಲೆಯು ಅಲ್ಪಾವಧಿ ತರಬೇತಿ ಕೇಂದ್ರದ (ಧಾರವಾಡ) ಛಾಯಚಿತ್ರವೊಂದು.

— ಸಂಪಾದಕೀಯ —

ಶಿಕ್ಷಣ ಹಾಗೂ ಸಾಹಿತ್ಯ ಸಮ್ಮೇಲನಗಳು.

ಕಳೆದ ತಿಂಗಳ ಕೊನೆಗೆ ಹೊಸದಿಲ್ಲಿಯಲ್ಲಿ ಪ್ರಾರಂಭವಾದ ಅಖಿಲಭಾರತ ಶಿಕ್ಷಣ ಪರಿಷತ್ತನ್ನು ಉದ್ಘಾಟಿಸುತ್ತ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರು ಹೀಗೆ ಹೇಳಿದರು. ವ್ಯಕ್ತಿಯು ಗಳಿಸುವ ದುಡ್ಡಿನ ಮೇಲಿಂದ ಅವನ ಸ್ಥಾನಮಾನಗಳನ್ನು ಅಳೆಯುವ ಒಲವು ಬಯಲಾಗಿ ಅವನ ಆಚಾರ ವಿಚಾರ ಹಾಗು ಜ್ಞಾನಾರ್ಜನೆ ಇವುಗಳಿಂದ ಅವನ ಗೌರವ ಅಳೆಯುವ ಬಳಕೆಯು ಬೆಳೆಯಬೇಕು. ಗುಣಹೀನರ ಸಿರಿಗೆ ಬೆಲೆಕೊಡುವ ದೃಷ್ಟಿಕೋನವು ಬದಲಾಗದಿದ್ದರೆ ಅನಿಷ್ಟ ಪರಿಣಾಮವು ತಪ್ಪಿದ್ದಲ್ಲವೆಂದು ಎಚ್ಚರಿಕೆ ಕೊಟ್ಟರು. ದುಡ್ಡಿನ ಬೆನ್ನುಹತ್ತುವ ರೋಗವು ಶಿಕ್ಷಣ ಕ್ಷೇತ್ರದಲ್ಲಿಯೂ ಸೇರಿದೆ. ಪ್ರಾಚೀನಕಾಲದಲ್ಲಿ ಶಿಕ್ಷಕರಿಗಿದ್ದ ದೊಡ್ಡಿಸ್ತನವನ್ನು ನೆನೆದು ಈಗಿನ ಶಿಕ್ಷಕರಿಗಿದ್ದ ದುಡ್ಡಿನ ಹಾಗೂ ಗೌರವದ ಕೊರತೆಗಳನ್ನು ಎತ್ತಿ ಹೇಳಿ ಶಿಕ್ಷಣದ ಎಲ್ಲ ರಂಗಗಳಲ್ಲಿಯೂ ಮೂಡುವ್ವಾಗುವ ಒತ್ತಡವನ್ನು ತಿಳಿಸಿದರು.

ಹೊಸದಿಲ್ಲಿಯಲ್ಲಿ ಹೋದ ತಿಂಗಳ ಕೊನೆಗೆ ಅಖಿಲ ಭಾರತ ಸಮಾಜ ಶಿಕ್ಷಣ ಪರಿಷತ್ತು ನೆರೆದಿತ್ತು. ರಾಜ್ಯ ಪುನರ್ಘಟನಾ ಆಯೋಗದ ಸದಸ್ಯರೂ, ಭಾರತದ ಪ್ರಖ್ಯಾತ ಇತಿಹಾಸಕಾರರೂ ಆದ ಸರದಾರ ಕೆ. ಎಮ್. ಪಣಿಕ್ಕರರು ಆ ಪರಿಷತ್ತನ್ನು ತೆರೆದರು. ಅವರು ಆಗ ಭಾಷಣ ಮಾಡುತ್ತ ಸ್ವಾತಂತ್ರ್ಯಾನಂತರ ಉಂಟಾದ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ನಿರಕ್ಷರಿಗಳ ಬೌದ್ಧಿಕ ಮಟ್ಟವನ್ನು ಎತ್ತರಿಸುವದು ಸಮಾಜ ಶಿಕ್ಷಣದ ಮೊದಲ ಗುರಿಯಾಗಬೇಕೆಂದೂ ಸರ್ವತಂತ್ರ ಸ್ವತಂತ್ರ ರಾಜಪದ್ಧತಿಯಲ್ಲಿ ನಿರಕ್ಷರಿ ನಾಗರಿಕನಿಗೆ ತನ್ನ ಕರ್ತವ್ಯದ ಅರಿವು ಉಂಟಾಗುವಂತೆ ಅವನ ವ್ಯಕ್ತಿತ್ವವನ್ನು ಸಮಾಜ ಶಿಕ್ಷಣವು ಬೆಳೆಸಬೇಕೆಂದೂ ಹೇಳಿದರು.

ಸರದಾರ ಪಣಿಕ್ಕರರೇ ಕಲಕತ್ತೆಯಲ್ಲಿ ಭಾರತೀಯ ಇತಿಹಾಸ ಕಾಂಗ್ರೆಸ್ಸಿನ ಹತ್ತನೆಯ ಅಧಿವೇಶನದ ಅಧ್ಯಕ್ಷಸ್ಥಾನದಿಂದ ಮಾತನಾಡುತ್ತ ಒಂದೊಂದು ಕಾಲದಲಿ ಒಂದೊಂದು ಪ್ರದೇಶವು ಕೀರ್ತಿಶಾಲಿಯಾಗಿದ್ದುದು ಇತಿಹಾಸದಲ್ಲಿ ಕಂಡರೂ ಇತಿಹಾಸಕಾರರು ಯಾವುದೇ ಒಂದು ಪ್ರದೇಶದ ಗತವೈಭವವನ್ನೇ ಮುಂದುಮಾಡಿ ಅದನ್ನೇ ಹೊಗಳುತ್ತ ಸಾಗುವದು ಗಂಡಾಂತರವಾಗುವದೆಂದೂ ಅಂಥ ದಾರಿಯನ್ನು ಇತಿಹಾಸಕಾರರು ತುಳಿಯಬಾರದೆಂದೂ ಅಭಿಪ್ರಾಯಪಟ್ಟರು. ಸ್ಥಳಿಯ ಅರಸರ ಇಲ್ಲವೆ ವೀರರ ವಿಜಯಗಳನ್ನೇ ವರ್ಣಿಸುವ ಪ್ರಯತ್ನವನ್ನು ಬಿಟ್ಟು ಇತಿಹಾಸಕಾರರು ಜನತೆಯ ವಿಕಾಸದ ದೃಷ್ಟಿಯಿಂದ ಇತಿಹಾಸವನ್ನು ಬರೆಯುವಂತೆ ಜಾಗ್ರತರಾಗುವದು ಅಗತ್ಯವೆಂದು ಹೇಳಿದರು.

ಹೋದ ತಿಂಗಳ ದಿನಾಂಕ ೨೮ ರಂದು ಕರ್ನಾಟಕ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭವು ನಮ್ಮ ರಾಜ್ಯಪಾಲರೂ ಕ. ವಿ. ವಿದ್ಯಾಲಯದ ಕುಲಪತಿಗಳೂ ಆದ ಡಾ. ಮೆಹತಾಬರ ಅಧ್ಯಕ್ಷತೆಯಲ್ಲಿ ನೆರವೇರಿತು. ಅಸ್ವಸ್ಥತೆಯಿಂದಾಗಿ ಬಾರದಿದ್ದ ಭಾರತದ ಗೃಹಮಂತ್ರಿ ಪಂಡಿತ ಪಂತರಿಂದ ಬರೆದು ಬಂದ ಭಾಷಣದಲ್ಲಿ ಜೀವನ ರಂಗದಲ್ಲಿ ಕಾಲಿಡುವ ತರುಣಪದವೀಧರರಿಗಾಗಿ ಒಳ್ಳೆಯ ಮಾರ್ಮಿಕವಾದ ಉಪದೇಶದ ಮಾತುಗಳಿದ್ದವು. ಪದವೀಧರರು ತಾವು ಪ್ರತ್ಯೇಕವಾದ ಸುಶಿಕ್ಷಿತ ವರ್ಗದವರೆಂದು ತಿಳಿಯದೆ ಸಮಾಜದ ಸರ್ವಾಂಗೀಣ ಉನ್ನತಿಗೆ ಶ್ರಮಿಸಬೇಕೆಂದು ಸೂಚಿಸಿದ್ದರು. ಎಲ್ಲರೂ ಶಹರಗಳಲ್ಲಿಯೇ ಇರಲು ಪ್ರಯತ್ನಿಸದೆ ಹಳ್ಳಿಗಳಿಗೆ ಹೋಗಿ ವಿವಿಧ ಕ್ಷೇತ್ರಗಳಲ್ಲಿ ರಚನಾತ್ಮಕ ಕಾರ್ಯಗಳನ್ನು ಕೈಕೊಳ್ಳುವದು ಅತ್ಯವಶ್ಯವೆಂದು ಹೇಳಿದ್ದರು. ಭಾಷೆ, ಧರ್ಮ, ಪಕ್ಷ ಪಂಗಡ ಮುಂತಾದ ಸಂಕುಚಿತ ವಿಷಯಗಳಲ್ಲಿ ತಮ್ಮ ಬುದ್ಧಿ ಶಕ್ತಿಗಳನ್ನು ವ್ಯಯಮಾಡದೆ ಸುಶಿಕ್ಷಿತ ತರುಣರೆಲ್ಲರೂ ರಾಷ್ಟ್ರದ ಐಕ್ಯತೆಯನ್ನು ಕಾಯ್ದುಕೊಳ್ಳುವ ಹೊಣೆಯನ್ನು ಅರಿಯಬೇಕೆಂದು ಅವರಿಗೆ ಮಾರ್ಗದರ್ಶನ ಮಾಡಿದರು. ಅಧ್ಯಕ್ಷತೆಯನ್ನು ವಹಿಸಿದ್ದ ಡಾ. ಮೆಹತಾಬರು ಶಿಕ್ಷಣದ ಬೇರೆ ಬೇರೆ ಹಂತಗಳಲ್ಲಿ ಪ್ರಾದೇಶಿಕ ಭಾಷೆ, ರಾಷ್ಟ್ರಭಾಷೆ ಹಾಗೂ ಅಂತರ ರಾಷ್ಟ್ರಭಾಷೆಗಳ

ಮಹತ್ವವನ್ನು ವಿವರಿಸುತ್ತ ಕರ್ನಾಟಕದ ಉಜ್ವಲವಾದ ಪ್ರಾಚೀನತೆಯನ್ನು ಪ್ರಶಂಸಿಸಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಪಾತ್ರವನ್ನು ಬಾಯಿತುಂಬ ಹೊಗಳಿದರು.

ಐದನೆಯ ಅಖಿಲ ಕರ್ನಾಟಕ ಹಿಂದೀ ಪ್ರಚಾರ ಸಮಾರಂಭವು ಹೋದ ತಿಂಗಳು ೨೮ ರಂದು ಧಾರವಾಡದಲ್ಲಿ ಶ್ರೀ ಸುಬ್ರಹ್ಮಣ್ಯರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಮುಂಬಯಿ ರಾಜ್ಯದ ರಾಜ್ಯಪಾಲರಾದ ಡಾ. ಹರೇಕೃಷ್ಣ ಮೆಹತಾಬರವರು ಸಮ್ಮೇಲನವನ್ನು ಉದ್ಘಾಟಿಸಿದರು. ಅಂದು ಮುಂಜಾನೆ ಕ. ಹಿಂದೀ ಪ್ರ. ಸಭೆಯ ಇಮಾರತಿಯ ಶಂಕುಸ್ಥಾಪನೆಯು ರಾಜ್ಯಪಾಲರ ಅಮೃತ ಹಸ್ತದಿಂದ ನೆರವೇರಿತು. ಸಮ್ಮೇಲನದ ಉದ್ಘಾಟನೆ ಮಾಡುತ್ತ ರಾಜ್ಯಪಾಲರು ಕರ್ನಾಟಕದ ಉಜ್ವಲ ಇತಿಹಾಸ, ಅಪ್ರತಿಮ ತ್ಯಾಗ, ಅದ್ವಿತೀಯ ನಿಷ್ಠೆಗಳೆಲ್ಲವೂ ಭವ್ಯಭಾರತಕ್ಕೆ ನೀಡಲಾಗಬೇಕೆಂದೂ ಸೂಚಿಸಿ ಕಾರ್ಯಕರ್ತರು ಉತ್ಸಾಹದಿಂದ ಮುಂದೆ ಸಾಗಬೇಕೆಂದೂ ಹೇಳಿದರು. ಅಧ್ಯಕ್ಷರಾದ ಟಿ. ಸುಬ್ರಹ್ಮಣ್ಯರು ಕರ್ನಾಟಕದ ಹಿಂದೀ ಪ್ರಚಾರ ಸಭೆಯು ೩೦ ವರ್ಷಗಳವರೆಗೆ ಮಾಡಿದ ಕಾರ್ಯವನ್ನು ವಿವರಿಸಿ ಹಿಂದೀ ಪ್ರಚಾರ ಕ್ಷೇತ್ರದಲ್ಲಿ ದುಡಿಯುವವರು ಒಕ್ಕಟ್ಟಿನಿಂದ ಕಾರ್ಯ ಮಾಡಬೇಕೆಂದು ಹೇಳಿದರು. ಸಮ್ಮೇಲನದ ಮುಕ್ತಾಯ ಅಧಿವೇಶನವು ಮರುದಿನ ಮುಂಜಾನೆ ನಡೆಯಿತು. ಈ ಸಮಾರಂಭಕ್ಕೆ ಶ್ರೀ ಎಸ್. ನಿಜಲಿಂಗಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ಹೈದ್ರಾಬಾದ ರಾಜ್ಯದ ರಾಯಚೂರಿನಲ್ಲಿ ಕಳೆದ ತಿಂಗಳ ಕೊನೆಯ ವಾರದಲ್ಲಿ ೩೮ನೆಯ ಕನ್ನಡ ಸಾಹಿತ್ಯ ಸಮ್ಮೇಲನವು ಶ್ರೀ ಆದ್ಯರಂಗಾಚಾರ್ಯರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಮ್ಮೇಲನವನ್ನು ಆ ರಾಜ್ಯದ ಲೋಕೋಪಯೋಗಿ ಶಾಖೆಯ ಮಂತ್ರಿಗಳಾದ ಮಾನ್ಯ ಡಾ. ಮೇಲಕೋಟೆಯವರು ಉದ್ಘಾಟಿಸಿದರು. ನಾಟ್ಯಕಲಾಗೋಷ್ಠಿ ಲೇಖಕರಗೋಷ್ಠಿ ಹಾಗು ಮಹಿಳಾಗೋಷ್ಠಿಗಳು ಈ ಸಮ್ಮೇಲನದ ಅಂಗವಾಗಿ ಏರ್ಪಡಿಸಲ್ಪಟ್ಟಿದ್ದವು. ನಾಟ್ಯಕಲಾಗೋಷ್ಠಿಗೆ ನಾಟ್ಯಕಲಾ ರತ್ನ ಶ್ರೀ ಗುಬ್ಬಿ ವೀರಣ್ಣನವರೂ ಲೇಖಕರ ಗೋಷ್ಠಿಗೆ ನಿರಂಜನರೂ ಹಾಗೂ ಮಹಿಳಾ ಗೋಷ್ಠಿಗೆ ನಮ್ಮ ರಾಜ್ಯದ ಒಕ್ಕಲತನ ಹಾಗೂ ಅರಣ್ಯ ಖಾತೆಗಳ ಉಪಮಂತ್ರಿ ಮಾನ್ಯ ಶ್ರೀ ಕೆ. ಎಫ್. ಪಾಟೀಲರ ಸತಿ ಪುಟ್ಟಮ್ಮನವರೂ ಅಧ್ಯಕ್ಷರಾಗಿ ಸಮ್ಮೇಲನಕ್ಕೆ ಎಲ್ಲಾ ದೃಷ್ಟಿಯಿಂದಲೂ ಮಾರ್ಗದರ್ಶನ ಮಾಡಿ ಕನ್ನಡಿಗರಿಗೆ ಮಹದುಪಕಾರ ಮಾಡಿದರು. ಮುಂದಿನ ವರುಷದ ಈ ಸಾಹಿತ್ಯ ಸಮ್ಮೇಲನವು ಒಂದುಗೂಡಿದ ಕರ್ನಾಟಕದ ಮೊದಲನೆಯ ಸಮ್ಮೇಲನವಾಗುವ ಪುಣ್ಯವು, ಧಾರವಾಡಕ್ಕೆ ಬರುವ ಆಸೆಯಿದೆ.

ಡಿಸೆಂಬರ ೨೨, ೨೩ ಹಾಗು ೨೪ರಂದು ಬಾಗಿಲುಕೋಟೆಯ ಶ್ರೀ ಬಸವೇಶ್ವರ ಟ್ರೇನಿಂಗ ಕಾಲೇಜದ ಉದಾರಾಶ್ರಯದಲ್ಲಿ ಕರ್ನಾಟಕದ ಟ್ರೇನಿಂಗ ಕಾಲೇಜುಗಳ ವ್ಯಾಸಂಗಗೋಷ್ಠಿಯೂ ಮೂಲೋದ್ಯೋಗ ವಸ್ತು ಹಾಗು ಲಲಿತ ಕಲೆಗಳ ಪ್ರದರ್ಶನವೂ ನಡೆದವು. ಅಲ್ಲಿಯ ಶ್ರೀ ಬಸವೇಶ್ವರ ಕಾಲೇಜದ ಪ್ರಿನ್ಸಿಪಾಲರಾದ ಡಾ. ನಂದಿಮಠರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ನಮ್ಮ ರಾಜ್ಯದ ಉಪಮಂತ್ರಿ ಮಾನ್ಯ ಶ್ರೀ ಕೆ. ಎಫ್. ಪಾಟೀಲರು ಸಮಾರಂಭವನ್ನು ಉದ್ಘಾಟಿಸುತ್ತ ಶಿಕ್ಷಣ ಕ್ಷೇತ್ರದಲ್ಲಿ ಜೀವನ ಶಿಕ್ಷಣವು ಮಹತ್ವದ ಸ್ಥಾನಪಡೆದಿದೆಯೆಂದೂ ಅದರಲ್ಲಿ ತರಬೇತಿ ಹೊಂದಿದ ಶಿಕ್ಷಕರು ಮಕ್ಕಳ ಮನೋವಿಕಾಸವನ್ನುಂಟುಮಾಡಿ ಯಶಸ್ಸನ್ನು ಸಾಧಿಸಬಲ್ಲರೆಂದೂ ಹೇಳಿದರು. ಗುರುಶಿಷ್ಯರಲ್ಲಿ ಕಾರ್ಮಿಕ ವೃತ್ತಿಯ ಸಂಬಂಧವಿರದೆ ಅವರಲ್ಲಿ ಪರಸ್ಪರ ಪ್ರೇಮಾದರಗಳು ಹೆಚ್ಚಾಗಿ ಕಾಯಕದ ಪಾವಿತ್ರ್ಯತೆ ಬೆಳೆದು ದೇಶೋದ್ಧಾರದ ಮಹಾಕಾರ್ಯವು ಶಿಕ್ಷಕರಿಂದ ಸಾಧಿಸಬೇಕೆಂದು ಆಶಿಸಿದರು. ಮುಂದಿನ ಎರಡು ದಿನಗಳಲ್ಲಿ ಕಾಲೇಜುಗಳ ಪ್ರಿನ್ಸಿಪಾಲರೂ ಪ್ರಾಧ್ಯಾಪಕರೂ ವಿಚಾರ ಸಂಕೀರ್ಣವನ್ನು ನಡೆಸಿ ಈ ಸಂಸ್ಥೆಗಳ ದೈನಂದಿನ ಕಾರ್ಯಕ್ಕೆ ಸಂಬಂಧಿಸಿದ ಹಲವಾರು ಮಹತ್ವದ ಸಮಸ್ಯೆಗಳ ಬಗ್ಗೆ ತಮ್ಮ ತಮ್ಮ ಅನುಭವಗಳನ್ನು ಎಲ್ಲರ ಮುಂದಿಟ್ಟು ಅವುಗಳ ಪರಿಹಾರೋಪಾಯಗಳನ್ನು ನೀಡಲು ಪ್ರಯತ್ನಿಸಿ ಇಂಥ ಸಮಾರಂಭಗಳ ಉಪಯುಕ್ತತೆಯನ್ನು ತೋರಿಸಿದರು. ಈ ದಿಶೆಯಲ್ಲಿ ಮೊದಲ ಹೆಜ್ಜೆಯನ್ನಿಟ್ಟು ಸಮಾರಂಭವನ್ನು ಒಳ್ಳೇ ಯಶಸ್ವಿಯಾಗುವಂತೆ ಮಾಡಿ ಶ್ರೇಯಸ್ಸಿಗೆ ಅರ್ಹರಾದ ಶ್ರೀ ಬಸವೇಶ್ವರ ಟ್ರೇನಿಂಗ ಕಾಲೇಜದವರನ್ನು ಹಾರ್ದಿಕವಾಗಿ ಅಭಿನಂದಿಸುವೆವು.

ಕ್ರಿಸ್‌ಮಸ್ ಹಬ್ಬದ ಸಂದೇಶ

ಈ ವರ್ಷದ ಕ್ರಿಸ್‌ಮಸ್ ಹಬ್ಬದ ನಿಮಿತ್ತ ಕ್ರೈಸ್ತ ಧರ್ಮದ ಜಗದ್ಗುರುಗಳಾದ ಪೋಪರು ಅಂತರರಾಷ್ಟ್ರೀಯ ರಾಜಕಾರಣಕ್ಕೆ ಸಂಬಂಧಿಸಿ ಜಗತ್ತಿಗೆ ಮಹತ್ವಪೂರ್ಣವಾದ ಸಂದೇಶವನ್ನು ಕೊಟ್ಟಿದ್ದಾರೆ. ಜಗದ್ಗುರುಗಳು ತಮ್ಮ ಸಂದೇಶದಲ್ಲಿ ವಸಾಹತುಗಳಿಗೆ ಸ್ವಾತಂತ್ರ್ಯ ಕೊಡಬೇಕು; ಮತ್ತು ಅಣುಶಸ್ತ್ರಗಳ ನಿಯಂತ್ರಣ ಜಾರಿಯಲ್ಲಿ ಬರಬೇಕು; ಇಲ್ಲದಿದ್ದರೆ ವಿಶ್ವಶಾಂತಿಗೆ ಅಡೆತಡೆಗಳುಂಟಾಗುವವೆಂದು ಎಚ್ಚರಿಕೆ ಕೊಟ್ಟಿದ್ದಾರೆ. ಮಾನವ ಜನಾಂಗಕ್ಕೆ ವಿನಯ, ದಯೆ, ಕ್ಷಮೆ, ಪ್ರೇಮ ಮುಂತಾದ ಅಮೂಲ್ಯವಾದ ಸದ್ಗುಣಗಳನ್ನು ಬೋಧಿಸಿದ ಮಹಾತ್ಮಾ ಏಸೂ ಕ್ರೈಸ್ತರ ಜಯಂತಿಯ ಶುಭಪ್ರಸಂಗದಲ್ಲಿ ಪೋಪರು ವಿಶ್ವಶಾಂತಿ ಸ್ಥಾಪನೆಯ ದೃಷ್ಟಿಯಿಂದ ರಾಜಕಾರಣವನ್ನೇ ತಮ್ಮ ಈ ವರ್ಷದ ಶುಭಸಂದೇಶದ ವಿಷಯವನ್ನಾಗಿಟ್ಟುಕೊಂಡಿರುವದರಲ್ಲಿ ತುಂಬಾ ವೈಚಿತ್ರ್ಯವಿದೆಯೆಂದು ಹೇಳಬಯಸುತ್ತೇವೆ.

ಹೊಸವರುಷದ ಆಶೆ ಆಕಾಂಕ್ಷೆಗಳು.

ಮತ್ತೊಂದು ಹೊಸ ವರುಷದಲ್ಲಿ ಕಾಲಿಡುವಾಗ ಹಿಂದಿನ ವರುಷದ ಘಟನೆಗಳು ನೆನಪಾಗದಿರವು. ಹಲಕೆಲ ಸಣ್ಣಪುಟ್ಟ ಘರ್ಷಣೆಗಳು ಸಂಭವಿಸಿದರೂ, ಅಂತರರಾಷ್ಟ್ರೀಯ ರಾಜಕಾರಣವನ್ನು ಹದಗೆಡಿಸುವಂತಹ ಯುದ್ಧದ ಭಯವು ತಪ್ಪಿದುದಕ್ಕಾಗಿ ಕಳೆದ ವರುಷವು ಚಿರಸ್ಮರಣೀಯವಾಗಿದೆ. ವಿಶ್ವಶಾಂತಿಯ ಸ್ಥಾಪನೆಯ ದಿಸೆಯಲ್ಲಿ ಪ್ರಯತ್ನಗಳು ನಡೆದವು. ಸಹಜೀವನದ ಪಂಚತತ್ವಗಳಿಗೆ ಚೀನ, ರಶಿಯಾ ಮೊದಲಾದ ರಾಷ್ಟ್ರಗಳು ತಮ್ಮ ಹಾರ್ದಿಕ ಬೆಂಬಲವನ್ನು ನೀಡಿವೆ. ಪಾಶ್ಚಿಮಾತ್ಯ ಹಾಗೂ ಪೌರ್ವಾತ್ಯ ಭೂಖಂಡಗಳ ಪ್ರಮುಖ ರಾಷ್ಟ್ರಗಳ ಉನ್ನತ ಮಟ್ಟದ ಸಭೆಗಳು ಬಾಂಡುಂಗ, ಜಿನೇವಾ ಹಾಗು ಇನ್ನಿತರ ಕಡೆಗೆ ನೆರೆದವು. ಭಾರತವು ವಹಿಸಿದ ತಟಸ್ಥ ಧೋರಣೆಯೂ ವಸಾಹತುಗಳ ಬಗ್ಗೆ ತಳೆದ ನ್ಯಾಯವಾದ ನಿಲವೂ ಎಲ್ಲರಿಗೂ ಸರಿಹೋಗಿವೆ. ನಮ್ಮ ಪ್ರಧಾನ ಮಂತ್ರಿಗಳು ಕೈಕೊಂಡ ರಶಿಯಾ ಹಾಗೂ ಇನ್ನುಳಿದ ಯುರೋಪ ದೇಶಗಳ ಸಂಚಾರದಿಂದ ಅಂತರರಾಷ್ಟ್ರೀಯ ಸ್ನೇಹ ಸಹಕಾರಗಳ ಸ್ಥಾಪನೆಯ ಶುಭಲಕ್ಷಣಗಳು ಸ್ಪಷ್ಟವಾಗಿ ಕಾಣಹತ್ತಿವೆ. ಇವೆಲ್ಲವುಗಳ ಮನ್ನಣೆಯ ದ್ಯೋತಕವಾಗಿ ಚೀನ, ರಶಿಯಾ, ಅರೇಬಿಯಾ, ನೇಪಾಳ ಹಾಗು ಇಂಡೋನೇಶಿಯ ರಾಷ್ಟ್ರಗಳ ರಾಜರೂ ಧುರೀಣರೂ ಭಾರತಕ್ಕೆ ಸದಿಚ್ಛೆ ಭೆಟ್ಟಿಯನ್ನಿತ್ತರು. ಪ್ರಥಮ ಪಂಚವಾರ್ಷಿಕ ಯೋಜನೆಯು ಮುಗಿಯುತ್ತ ಬಂದಂತೆ ದ್ವಿತೀಯ ಪಂಚವಾರ್ಷಿಕ ಯೋಜನೆಯು ತಯಾರಾಗಹತ್ತಿದೆ. ರಾಜ್ಯಗಳ ಪುನರ್ಘಟನಾ ಆಯೋಗದವರು ಸೂಚಿಸಿದಂತೆ ೨ ಕೋಟಿ ಕನ್ನಡಿಗರ ನಾಲ್ವತ್ತು ವರುಷಗಳ ಕನಸು ನನಸಾಗುವ ಕಾಲ ಸನ್ನಿಹಿತವಾಗಿದೆ. ನಾವು ಇವೆಲ್ಲವನ್ನು ೧೯೫೬ರಲ್ಲಿ ಕಾಣಬೇಕಾಗಿದೆ. ಕಾಣುವ ಆಶೆ ಬಲವಾಗಿದೆ. ಯುದ್ಧವು ಶಾಶ್ವತವಾಗಿ ನಿಲ್ಲುವ ಸಾಧ್ಯತೆ, ಸಹಜೀವನದ ಪಂಚತತ್ವಗಳನ್ನು ಎಲ್ಲ ರಾಷ್ಟ್ರಗಳೂ ಮನ್ನಿಸುವ ಭರವಸೆ ಹಾಗು ರಾಜ್ಯಗಳ ಪುನರ್ಘಟನೆಯು ಅಡ್ಡಿ ಆತಂಕಗಳಿಲ್ಲದೆ ನಡೆಯುವ ಬಯಕೆಗಳೆಲ್ಲವೂ ಹೊಸ ವರುಷದಲ್ಲಿ ಈಡೇರುವವೆಂದು ಹಾರೈಸಿ ಎಲ್ಲರಿಗೂ ಸುಖ-ಸಂವೃದ್ಧಿಗಳನ್ನು ಕೋರುವೆವು.

— ಗಂ. ಸ. ಟ್ರೇನಿಂಗ ಕಾಲೇಜ, ಧಾರವಾಡ —

ಡ್ರಾಯಿಂಗ ಗ್ರೇಡ ಪರೀಕ್ಷೆಯ ಪರಿಣಾಮ

೧೯೫೫

		ಕುಳಿತವರು	ಪಾಸಾದವರು
ಎಲಿಮೆಂಟರಿ ಡ್ರಾಯಿಂಗ	ಗ್ರೇಡ	೪೦	೩೯
ಇಂಟರಮೀಡಿಯೇಟ ಡ್ರಾಯಿಂಗ	ಗ್ರೇಡ	೨೬	೨೦

ಎಲಿಮೆಂಟರಿ ಡ್ರಾಯಿಂಗ ಗ್ರೇಡ ಪಾಸಾದವರಲ್ಲಿ ಇಬ್ಬರು 'ಅ' ಶ್ರೇಣಿಯಲ್ಲಿ ಹಾಗೂ ಏಳು ಜನ ಶಿಕ್ಷಕ ವಿದ್ಯಾರ್ಥಿಗಳು 'ಬ' ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ.

ನಯೀ ತಾಲೀಮ

(ಕಳೆದ ಸಂಚಿಕೆಯಿಂದ ಬಂದದ್ದು)

ಹಿರಿಮೆಗಳು

(ಅ) ಮೇಲೆ ಹೇಳಿದಂತೆ 'ನಯೀ ತಾಲೀಮು'ವು ಮಗುಪ್ರಧಾನ (Child centred)ವಿದೆ. ಹಳೆಯ ಶಿಕ್ಷಣವಾದರೆ ವಿಷಯ ಪ್ರಧಾನ (Subject centred) ವಾಗಿದ್ದಿತು. ಹಳೆಯ ಶಿಕ್ಷಣದಲ್ಲಿ ವಿಷಯಗಳಿಗೆ ಮಹತ್ವ ವಿತ್ತು; ಮಗುವಿಗೆ ಸ್ಥಾನವೇ ಇರಲಿಲ್ಲ. [illegible] ಮುಂತಾದವರು ಮಗುವನ್ನು ಶಿಕ್ಷಣದ ಕೇಂದ್ರವೆಂದು ಸಾರಿದರು. [illegible] ಮೊದಲಾದ ಆಧುನಿಕ ಶಿಕ್ಷಣ ತಜ್ಞರಾದ [illegible] ಎಲ್ಲ ತಜ್ಞರು 'ಮಗುವಿಗಾಗಿ ಶಿಕ್ಷಣ'ವೆಂದು [illegible] ಅದನ್ನು ಕಾರ್ಯಗತ ಮಾಡುವದರಲ್ಲಿ [illegible]. ಮಹಾತ್ಮರಾದರೂ ಈ ಮಾತನ್ನೇ ಒತ್ತಿ ಹೇಳಿ ಕಾರ್ಯರೂಪಕ್ಕೆ ಇಳಿಸಿದ್ದಾರೆ.

(ಆ) ಹಳೆಯ ಶಿಕ್ಷಣವು ಮಕ್ಕಳನ್ನು ಪರಾವಲಂಬಿಗಳನ್ನಾಗಿ ಮಾಡುತ್ತಿತ್ತು. ಅದು ಕರಣಿಕರನ್ನು ತಯಾರಿಸುವದೊಂದು ಯಂತ್ರವಂತಿತ್ತು. ಆ ಶಿಕ್ಷಣವನ್ನು ಹೊಂದಿದವನು ಕರಣಿಕನಾಗಬೇಕು, ಇಲ್ಲದಿದ್ದರೆ ಅವನ ಬಾಳು ಹಾಳು. ಹೊಸ ಶಿಕ್ಷಣವು ಮಕ್ಕಳನ್ನು ಸ್ವಾವಲಂಬಿಗಳನ್ನಾಗಿ ಮಾಡುತ್ತಿದೆ. ಮಗುವು ದೊಡ್ಡವನಾದ ಮೇಲೆ ಎರಡನೆಯವರ ಮೇಲೆ ಅವಲಂಬಿಸದೆ ತನ್ನ ಕಾಲ ಮೇಲೆ ತಾನು ನಿಲ್ಲಬಲ್ಲನು. ಶಿಕ್ಷಣವು ಮುಗಿಯುವದರೊಳಗಾಗಿ ಮೂಲೋದ್ಯೋಗದಲ್ಲಿ ನಿಪುಣನಾಗಿರುತ್ತಾನೆ. ತನಗೆ ಅನುರೂಪವಾದೊಂದು ಉದ್ಯೋಗವು ಸಿಗದೆ ಹೋದರೆ, ಶಾಲೆಯಲ್ಲಿ ಕಲಿತ ಉದ್ಯೋಗವನ್ನೇ ಸಾಗಿಸಿ ಹೊಟ್ಟೆ ತುಂಬಿಕೊಳ್ಳಬಲ್ಲನು.

(ಇ) ಸಾಂಘಿಕ ಜೀವನ (Community Life) ಇಲ್ಲವೆ ಕೌಟುಂಬಿಕ ಜೀವನವು ಹೊಸ ಶಿಕ್ಷಣದ ವೈಶಿಷ್ಟ್ಯವು. ಹಿಂದೂ ಸಮಾಜ, ಮುಸಲ್ಮಾನ ಸಮಾಜ, ಕ್ರೈಸ್ತ ಸಮಾಜ ಮೊದಲಾದ ನೂರೆಂಟು ಸಮಾಜಗಳಿಗೆ ಇಲ್ಲಿ ಸ್ಥಾನವಿಲ್ಲ. ಜಾತಿ-ಮತ, ಪಕ್ಷ-ಪಂಗಡ, ಹಿರಿ-ಕಿರಿ, ಮೇಲು-ಕೀಳು, ನರ-ನಾರಿ ಎಂಬ ಭೇದಗಳನ್ನು ಎಣಿಸುವಂತಿಲ್ಲ. ಎಲ್ಲರೂ ಮಾನವ ಸಮಾಜಕ್ಕೆ ಸೇರಿದವರೆಂದು ಗಾಂಧೀಜಿಯವರ ಅಮರ ವಾಣಿಯು. ಇದುವೇ ಪ್ರಜಾಪ್ರಭುತ್ವ (Democracy)ದ ಅಡಿಗಲ್ಲು, ನವ ಭಾರತದ ನೆಲಗಟ್ಟು, ವಿಶ್ವಬಂಧುತ್ವ (Universal Brother hood)ದ ಬೀಜಾಂಕುರವು. ವಿಶ್ವಕುಟುಂಬವು ಮಹಾತ್ಮರ ಆದರ್ಶವಾಗಿತ್ತು. ಆ ಆದರ್ಶಕ್ಕನುಸರಿಸಿ ಸಾಂಘಿಕ ಇಲ್ಲವೆ ಕೌಟುಂಬಿಕ ಜೀವನಕ್ಕೆ ಅಷ್ಟೊಂದು ಮಹತ್ವವನ್ನು ಈ ಶಿಕ್ಷಣದಲ್ಲಿ ಕೊಡಲಾಗಿದೆ. ನಮ್ಮ ರಾಷ್ಟ್ರದ ಈಗಿನ ಜಾತ್ಯತೀತ (Secular) ಧೋರಣೆಗೆ ಅದು ಹೇಳತೀರದಷ್ಟು ಪೋಷಕವಾಗಿದೆ. ಮಕ್ಕಳೆಲ್ಲ ಒತ್ತಟ್ಟಿಗೆ ವಾಸವಾಗಿದ್ದು ತಮ್ಮ ನಿತ್ಯದ ಹೋರೆಗಳನ್ನೆಲ್ಲ ಸಾಮೂಹಿಕವಾಗಿಯೇ ಮಾಡತಕ್ಕದ್ದು.

(ಈ) ಹಳೆ ಶಿಕ್ಷಣವಲ್ಲಿ ಪುಸ್ತಕೀ ಜ್ಞಾನಕ್ಕೆ ವಿಶೇಷ ಮಹತ್ವವಿತ್ತು. "ಓದಿಕೆಟ್ಟ ಕೂಸಿಭಟ್ಟ" ಎಂಬ ಗಾದೆಯ ಮಾತಿದೆಯಲ್ಲವೇ? ಓದಿ ಕೆಟ್ಟಂತಹ ಕೂಸಿಭಟ್ಟರೇ ಶಾಲೆ-ಕಾಲೇಜುಗಳಿಂದ ಹೊರಬೀಳುತ್ತಿದ್ದರು. ವ್ಯವಹಾರ ಜ್ಞಾನವು ಇಲ್ಲವೆ ಮೇಲು ಬುದ್ಧಿಯು ಅವರಲ್ಲಿ ಎಳ್ಳಷ್ಟೂ ಇರುತ್ತಿರಲಿಲ್ಲ. ಈ ಶಿಕ್ಷಣದಲ್ಲಿ ಹಾಗಲ್ಲ. ಜೀವನದ ಸಂನಿವೇಶಗಳ ಮೂಲಕವೇ ಮಗುವಿನ ಶಿಕ್ಷಣ ನೆಲ್ಲವೂ ಸಾಗುತ್ತಿದೆ. ಜೀವನದ ಸಮಸ್ಯೆಗಳನ್ನೆಲ್ಲ ಮಗುವು ಎದೆಗೊಟ್ಟು ಎದುರಿಸುವದು, ನಿರ್ವಹಿಸುವದು. ವ್ಯವಹಾರ ಚಾತುರ್ಯವು ಬೆಳೆಯಲು ಇಲ್ಲಿ ಬಹಳಷ್ಟು ಅವಕಾಶವಿದೆ. ಈ ಶಿಕ್ಷಣವು ಜೀವನಕ್ಕೆ ಹೊಂದಿಕೆಯಾಗುವಂತಹದು. ಆದುದರಿಂದ ಇದಕ್ಕೆ "ಜೀವನ ಶಿಕ್ಷಣ" ಎಂಬ ಅಭಿದಾನವು ಬಂದಿದೆ. "ಓದು ಒಕ್ಕಾಲು, ಬುದ್ಧಿ ಮುಕ್ಕಾಲು" ಎಂಬ ನಾಣ್ಣುಡಿಯಿದೆ. ಈ ಲೋಕಪ್ರಿಯ ನುಡಿಯು ಹೊಸ ಶಿಕ್ಷಣವನ್ನು ಹೊಂದಿದ ಮಗುವಿಗೆ ಸಂಪೂರ್ಣವಾಗಿ ಅನ್ವಯಿಸುತ್ತಿದೆ.

(ಉ) ಕಾಯಕದ ಗೌರವ (Dignity of Labour)ವನ್ನು ಹೆಚ್ಚಿಸಿದೆ. ಸಾಂಘಿಕ ಇಲ್ಲವೆ ಕೌಟುಂಬಿಕ ಜೀವನದಲ್ಲಿ "ಸಫಾಯಿ" (ಸ್ವಚ್ಛತೆ)ಯ ಕೆಲಸವನ್ನು ಮಕ್ಕಳೇ ಮಾಡತಕ್ಕದ್ದು. ಇಲ್ಲಿಯ ವರೆಗೆ ಕೀಳುತರದ ಕೆಲಸಗಳೆಂದು ಗಣಿಸಲ್ಪಟ್ಟ ವರ್ಗದ ಕೋಣೆಯ ಸ್ವಚ್ಛತೆ, ಶಾಲೆಯ ಸ್ವಚ್ಛತೆ, ಆವಾರದ ಸ್ವಚ್ಛತೆ, ಮೂತ್ರಿಗಳನ್ನೂ ಶೌಚಕೂಪಗಳನ್ನೂ ರಚಿಸುವದು ಮತ್ತು ಹಸನಾಗಿಡುವದು ಮೊದಲಾದವುಗಳನ್ನೆಲ್ಲ

ಕ್ಕಳೇ ಮಾಡಬೇಕು. ಇಲ್ಲಿಯ ವರೆಗೆ ನಾವು ನಮ್ಮ ಜ್ಞಾನದಿಂದ ಯಾವು ಕೀಳುತರಹದ ಕೆಲಸಗಳೆಂದು ಳಿದುಕೊಂಡಿದ್ದೆವೋ ಅಂತಹವುಗಳಿಗೇ ಈಗಿನ ಅಭ್ಯಾಸ ತ್ರಿಕೆಯಲ್ಲಿ ಅಗ್ರಸ್ಥಾನವು ದೊರೆತಿದೆ. ಇದು ನಿಜಕ್ಕೂ ನಂದದ ಸಂಗತಿಯು! ಕೆಲಸಗಳಲ್ಲಿ ಇಲ್ಲವೆ ಉದ್ಯೋಗಳಲ್ಲಿ ಮೇಲು–ಕೀಳೆಂಬ ಭಾವನೆಯನ್ನು ಅನುಕೂಲಾವಾಗಿ ಕಿತ್ತೊಗೆದಿದೆ. ಪ್ರತಿಯೊಂದು ಉದ್ಯೋಗವು ಲ್ಲವೆ ಕಾಯಕವು ಮಹತ್ವವುಳ್ಳದ್ದಿದೆ; ಪ್ರತಿಯೊಂದು ಕಾಯಕದಲ್ಲಿ ಕೈಲಾಸವಿದೆ. "ಕಾಯಕವೇ ಕೈಲಾಸವಯ್ಯ" ಎಂಬ ಮಹಾನುಭಾವಿ ಬಸವಂಣನವರ ವಚನವು ಇದೇ ಮಾತನ್ನು ಎಷ್ಟು ಅಂದಚಂದವಾಗಿ ಹೇಳುತ್ತಿದೆಯಲ್ಲವೇ? ಆದುದರಿಂದಲೇ, ಆ ವಚನವು ಈಗ ಎಲ್ಲರೂ ಪಠಿಸುವ ಜನಪ್ರಿಯ ನುಡಿಯಾಗಿದೆ, ನಾಂಣುಡಿಯಾಗಿದೆ. ಕಾಯಕದ ಗೌರವವು ನವಭಾರತದ ನಿರ್ಮಾಣಕ್ಕೆ ಅವಶ್ಯವಾಗಿ ಬೇಕಲ್ಲವೇ?

: ಸಿರಿಗನ್ನಡ ಬಾಳುಗೆ :

(ಲೇಖಕರು:– ಶ್ರೀ ಶಿಂತ್ರಿ ಬಸಪ್ಪನವರು)

ಶಾಲಾ–ವರ್ಗಗಳಲ್ಲಿ ಪುನರುಕ್ತಿಯೇ?

ಲೇಖಕರು:— **ಶ್ರೀ ರಾ ರು. ಕುಪ್ಪಸದ,** ಎಂ.ಎ., ಬಿ.ಟಿ., ಮುಖ್ಯಾಧ್ಯಾಪಕರು,
ಸರಕಾರಿ ಕೃಷೀ ಮಾಧ್ಯಮಿಕ ಶಾಲೆ, ವಿಜಾಪುರ

'ನಿಮ್ಮ ಮಗು ಇನ್ನೂ ಸಣ್ಣವನಿದ್ದಾನೆ.'

'ಇನ್ನೂ ಬಿನ್ನೆಯತ್ತೆದಾಗ ಕಲೀತಿದ್ದಾನೆ.'

ಈ ಮಾತುಗಳು ಇನ್ನೂ ಕೇಳಬರುತ್ತಿರುವವಲ್ಲ!

ಸಣ್ಣ–ಬಿನ್–ಇಯತ್ತೆ, ದೊಡ್ಡ–ಬಿನ್–ಇಯತ್ತೆ ಈ ವರ್ಗಗಳಲ್ಲಿ ಕಲಿತವರು ಈಗ್ಯೂ ಇರಬಹುದು. ಈ ವರ್ಗಗಳಲ್ಲಿ ಮಕ್ಕಳನ್ನು ತರಬೇತಿ ಮಾಡಿದ ಕೆಲ ಶಿಕ್ಷಕರೂ ಈಗ ಸಿಕ್ಕಬಹುದು. ಅವರಿಗೆ ಈ ವರ್ಗಗಳು ಯಾವವು, ಎಂತಹವು ಎಂಬ ಮಾತಿನ ಅರಿವು ಸಾಕಷ್ಟಿರಲು ಸಾಕು. ಮಕ್ಕಳು ಶಾಲೆಗೆ ಪ್ರವೇಶವಾದ ನಂತರ ವರುಷೆರಡು ವರುಷ ಬಿನ್–ಇಯತ್ತೆಯಲ್ಲಿ ಇರಬೇಕಾದ ಸಮಯವೊಂದಿತ್ತು. ಅದೇಕೆ? ಸಣ್ಣ, ದೊಡ್ಡ ಬಿನ್–ಇಯತ್ತೆಗಳಲ್ಲಿ ಪ್ರತಿಯೊಂದರಲ್ಲಿಯೂ ವರುಷೆರಡು ವರುಷಗಳ ವರೆಗೆ ಮಕ್ಕಳು ಕೊಳೆಯುವ ಪ್ರಸಂಗವೂ ಬರುತ್ತಿತ್ತು. ಅದು ಏಕಿತ್ತು, ಹೇಗಿತ್ತು, ಎಂದಿತ್ತು ಎಂಬುದರ ವಿಚಾರಣೆಯೂ ಗೊಡವೆಯೂ ಈಗ ಅಪ್ರಸ್ತುತವೇ ಸೈ. ಆದರೆ 'ಬಿನ್–ಇಯತ್ತೆ' ಅರ್ಥಾತ್ 'ಇಲ್ಲದ ಇಯತ್ತೆ', 'ಇಯತ್ತೆ ಅಲ್ಲದ್ದು' ಈಗಲೂ ಕಂಡು ಬರುವದೆಂದರೆ, ಕೇಳಿಬರುವದೇಂದರೆ ಆಶ್ಚರ್ಯವಲ್ಲದೆ ಮತ್ತೇನು? ಕೆಲ ಶಿಕ್ಷಕರ ನಾಲಿಗೆಯ ಮೇಲೆ ಇನ್ನೂ ಬಿನ್–ಇಯತ್ತೆಯು ನಲಿದಾಡುತ್ತಲೇ ಇದೆ, ಕೆಲ ಶಾಲೆಗಳ ಹಾಜರಿ ಪುಸ್ತಕದಲ್ಲಿಯೂ ಸಹ ಬಿನ್ ಇಯತ್ತೆಯು ಮೂಡದೆ ಇರದಿರುವದೇನು ಸೋಜಿಗವಲ್ಲ. ಕೆಲ ಶಾಲೆಗಳ ಬಾಗಿಲ ಮೇಲೆ ಸಹ 'ಬಿನ್ ಇಯತ್ತೆ'ಯ ಪಟ್ಟಿಯು ಇರುವದನ್ನು ನೋಡುವ ಸುಪ್ರಸಂಗ (?)ವು ನನಗೆ ಒದಗಿ ಬಂದಿತ್ತು.

ಬಿನ್ ಇಯತ್ತೆ ಅಂದರೆ ಈಗಿನ ಮೊದಲಿನ ವರ್ಗವಲ್ಲವೇ? ಹೌದು, ಈಗಿನ ೧ನೆಯ ವರ್ಗವು. ೧ನೆಯ ವರ್ಗವನ್ನು ಬಿನ್ ಇಯತ್ತೆ (ವರ್ಗವಿಲ್ಲದ್ದು)ಯನ್ನಾಗಿ ಮಾಡಿ ಬಿಟ್ಟಿರುವರಲ್ಲ!! ೧ನೆಯ ವರ್ಗವನ್ನಷ್ಟೇ ಬಿನ್ ವರ್ಗವನ್ನು ಮಾಡಿದರಷ್ಟೇ ಸಾಕಾಗಿದೆ. ೧ನೆಯ ವರ್ಗವಲ್ಲದೆ, ಉಳಿದ ಮುಂದಿನ ವರ್ಗಗಳೂ (೨, ೩, ೪....) ಅಲ್ಲಲ್ಲಿ ಒಂದಿಲ್ಲೊಂದು ರೀತಿಯಿಂದ ಮಾತಿನಲ್ಲಿಯೂ,

ಕೃತಿಯಲ್ಲಿಯೂ, ತಿಳುವಳಿಕೆಯಲ್ಲಿಯೂ ಬಿನ್ ಇಯತ್ತೆ (ಇಲ್ಲದ ಇಯತ್ತೆ)ಗಳಾಗಿ ಪರಿಣಮಿಸಿವಲ್ಲಿ ಗತಿಯೇನು? ದೇವರೇ ಗತಿ. ಶಾಲೆಗಳಲ್ಲಿ, ಯಾವ ಯಾವ ವರ್ಗದಲ್ಲಿ ಏನೇನು ನಡೆಯಬೇಕು, ಆಯಾ ವರ್ಗಗಳಲ್ಲಿಯ ಕೆಲಸ ವ್ಯಾಪ್ತಿ, ಯಾವ ವರ್ಗವು ಹೇಗೆ ಇರಬೇಕು, ಯಾವ ವರ್ಗದಲ್ಲಿಯ ಮಗುವು ಹೇಗೆ ಇರಬೇಕು ಎಂಬುವದನ್ನು ತುಸುಮಟ್ಟಿಗೆ ವಿವೇಚಿಸುವದು ಅವಶ್ಯ ತೋರುತ್ತದೆ. ಸುಮ್ಮಸುಮ್ಮನೇ ಯಾವದೇ ವರ್ಗವು ವಿನಾಕಾರಣವಾಗಿ ಬಿನ್ ಇಯತ್ತೆ (ಇಯತ್ತೆ ಅಲ್ಲದ್ದು) ಯಾಗುವದು ಬೇಡಾಗಿದೆ. ಬೇಡಾದುದು ಬೇಡ; ಬೇಕಾದುದು ಬೇಕು. ಯಾವದು ಬೇಡಾಗಿದೆ, ಯಾವದು ಬೇಕಾಗಿದೆ ಎಂಬುವದನ್ನು ತಿಳಿಯಬೇಕಾಗಿದೆ. ಶಾಲಾ ವರ್ಗಗಳಲ್ಲಿ ಪುನರುಕ್ತಿ ಬೇಡಾಗಿದೆ; ಅವುಗಳಲ್ಲಿ ಸರಾಗತೆಯು, ಏಕಸೂತ್ರತೆಯು ಬೇಕಾಗಿದೆ.

ಬಿನ್ ಇಯತ್ತೆಯು ಒಂದೇ ಇದ್ದಾಗ ಅದು ಎರಡು ಟಿಸಿಲಾಗಿ ಸಣ್ಣ ಬಿನ್ ಇಯತ್ತೆ, ದೊಡ್ಡ ಬಿನ್ ಇಯತ್ತೆಯಾಗಿರಬಹುದು. ಇದ್ದ ಇಯತ್ತೆಗಳನ್ನು ಈ ಪ್ರಕಾರ ಒಡೆದು ಅದೇಕೆ ಭಿನ್ನಗೊಳಿಸಿದರೋ? ಭಿನ್ನ ಭಿನ್ನ ಇಯತ್ತೆಗಳಾಗಿ ಎಲ್ಲೆಲ್ಲಿಯೂ ಭಿನ್ನತೆಯು. ಇಯತ್ತೆಗಳಾಗಲಿ, ವರ್ಗಗಳಾಗಲಿ ಅವುಗಳಲ್ಲಿಯ ಭಿನ್ನತೆಯನ್ನು ಅಳಿದು ಅವುಗಳ ಏಕಸೂತ್ರತೆಯನ್ನು ತಿಳಿಯುವದೇ ಶಿಕ್ಷಕನ ಆದ್ಯ ಕರ್ತವ್ಯವಿದೆ.

ಅಂತೆಯೇ ಇತ್ತಿತ್ತಲಾಗಿ ಶಾಲೆಗಳಲ್ಲಿಯ ವರ್ಗಗಳಿಗೆ ಕೊಟ್ಟ ಕ್ರಮಾಂಕಗಳು ಗಮನಾರ್ಹವಾಗಿವೆ. ವರ್ಗಗಳೆನ್ನಿರಿ, ತರಗತಿಗಳೆನ್ನಿರಿ, ಇಯತ್ತೆಗಳೆನ್ನಿರಿ ಇವುಗಳು ಶಾಲೆಗಳಲ್ಲಿ ಮಾತ್ರ ಇವೆ. ಅವುಗಳ ಮಾತು ಕಾಲೇಜಗಳಲ್ಲಿಲ್ಲ. ಶಾಲೆಗಳೆಂದರೆ ಅವು ಪ್ರಾಥಮಿಕ ಶಾಲೆಗಳಿರಲಿ, ಮಾಧ್ಯಮಿಕ ಶಾಲೆಗಳಿರಲಿ ಅಲ್ಲಿ ಮಾತ್ರ ವರ್ಗಗಳನ್ನೆಣಿಸುವದು. ಈ ಪ್ರಕಾರ ವರ್ಗಗಳನ್ನೆಣಿಸುವದು ಕಾಲೇಜದಲ್ಲಿ ಅಷ್ಟೊಂದಿಲ್ಲ. ಅಂದರೆ ಕಾಲೇಜದಲ್ಲಿ ವರ್ಗಗಳಿಲ್ಲವೆಂತಲ್ಲ; ಅಲ್ಲಿಯೂ ವರ್ಗಗಳಿವೆ. ಟ್ರೇನಿಂಗ ಕಾಲೇಜದಲ್ಲಿ ೧ನೆಯ ವರ್ಷ, ೨ನೆಯ ವರ್ಷ, ವಿಶ್ವವಿದ್ಯಾಲಯ ಕಾಲೇಜಗಳಲ್ಲಿ ಫರ್ಸ್ಟ ಇಯರ, ಇಂಟರ, ಬಿ.ಎ. ಇತ್ಯಾದಿ ವರ್ಗಗಳಿವೆ. ಆದರೆ ಪ್ರಾಥಮಿಕ ಮಾಧ್ಯಮಿಕ ಶಾಲೆಗಳಲ್ಲಿ ಇರುವ ವರ್ಗಗಳ ಕ್ರಮಾಂಕಕ್ಕಿರುವಷ್ಟು ಮಹತ್ವವು ಅಥವಾ ಕಲ್ಪನೆಯು ಕಾಲೇಜದ ವರ್ಗಗಳಿಗಿಲ್ಲ.

ಶಾಲೆಗಳಲ್ಲಿಯ ವರ್ಗಗಳ ಮಾತೆತ್ತಿದ ಕೂಡಲೇ ಸದ್ಯಕ್ಕಿರುವ ವರ್ಗಗಳ ಸಂಖ್ಯೆಯೂ, ಕ್ರಮಾಂಕಗಳೂ ನಮ್ಮ ಕಲ್ಪನೆಗೆ ಬಾರದಿರವು.

"ನಿಮ್ಮ ಮಗನು ಎಷ್ಟನೆಯ ವರ್ಗದಲ್ಲಿ ಕಲಿಯುತ್ತಿದ್ದಾನೆ?"

'೧ನೆಯ ವರ್ಗದಲ್ಲಿ' 'ಸರಿ ಅರ್ಥವಾಯಿತು'
'೨ನೆಯ ವರ್ಗದಲ್ಲಿ', 'ಸರಿ ಅರ್ಥವಾಯಿತು'
'೩ನೆಯ ವರ್ಗದಲ್ಲಿ', 'ಸರಿ ಅರ್ಥವಾಯಿತು'
'೪ನೆಯ ವರ್ಗದಲ್ಲಿ', 'ಸರಿ ಅರ್ಥವಾಯಿತು.'

ಉತ್ತರವು ೧ ರಿಂದ ೪ರ ವರೆಗೆ ಬಂದುದಾದರೆ ಆ ಮಗುವು ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಅಥವಾ ಮರಾಠಿ ಅಥವಾ ಉರ್ದು— ಆ ವರ್ಗದಲ್ಲಿ ಓದುತ್ತಿದ್ದಾನೆ ಎಂಬುದು ದೃಢವಾಗಿ ತಿಳಿಯುತ್ತದೆ.

ಆದರೆ ಉತ್ತರವು "೫ನೆಯ ವರ್ಗದಲ್ಲಿ"
ಅಥವಾ "೬ನೆಯ ವರ್ಗದಲ್ಲಿ"
ಅಥವಾ "೭ನೆಯ ವರ್ಗದಲ್ಲಿ"

ಎಂದು ಬಂದುದಾದರೆ ಆ ಮಗುವು ಕಲಿಯುವ ವರ್ಗದ ಕಲ್ಪನೆಯು ಪೂರ್ಣ ಬಾರದಾಗಿ ಮತ್ತೆ ಪ್ರಶ್ನಿಸಬೇಕಾಗುತ್ತದೆ.

"ಏನ್ರಿ, ನಿಮ್ಮ ಮಗನು ೫ನೆಯ ವರ್ಗದಲ್ಲಿ ಕಲಿಯುತ್ತಿದ್ದಾನೆಂದರೆ ಪ್ರಾಥಮಿಕ ಶಾಲೆಯಲ್ಲಿಯೊ ಅಥವಾ ಮಾಧ್ಯಮಿಕ ಶಾಲೆಯಲ್ಲಿಯೋ?" ಈ ಮೇಲಿನ ಪ್ರಶ್ನೆಗೆ ಉತ್ತರ ಸಿಕ್ಕ ಮೇಲೆ ೫ನೆಯ, ೬ನೆಯ, ೭ನೆಯ ವರ್ಗಗಳ ಕಲ್ಪನೆಯು ಪೂರ್ಣವಾಗುತ್ತದೆ.

ಆದ್ದರಿಂದ ಈಗಿನ ವರ್ಗಗಳನ್ನು ೧ ರಿಂದ ೧೧ರ ವರೆಗೆ ಕರೆದಾಗ್ಗೆ ೫, ೬, ೭ನೆಯ ವರ್ಗಗಳ ವಿಷಯವಾಗಿ ಮಾತಾಡುವಾಗ್ಗೆ ಅಥವಾ ವಿಚಾರಿಸುವಾಗ್ಗೆ ಪುನರುಕ್ತಿಯು ಅವಶ್ಯಕತೆಯು ಬಿದ್ದೇ ಬೀಳುತ್ತದೆ. ಇದೇಕೆ ಎಂಬದನ್ನು ತುಸು ವಿಚಾರಿಸುವಾ.

ಈಗಲಾದರೂ ಈ ಕೆಳಗಿನಂತಹ ಮಾತುಗಳಿಗೆ ಕೊರತೆಯಿಲ್ಲ.

"ನಿಮ್ಮ ಮಗನು ಕನ್ನಡ ಶಾಲೆಗೆ ಹೋಗುವನೋ ಇಂಗ್ರೇಜಿ ಶಾಲೆಗೆ ಹೋಗುವನೋ?"

ಶಾಲಾ-ವರ್ಗಗಳಲ್ಲಿ ಪುನರುಕ್ತಿಯೇ?

“ ನಮ್ಮ ಮಗಳು ೬ನೆಯ ಇಯತ್ತೆಯಲ್ಲಿ ಅಂದರೆ ಇಂಗ್ರೇಜಿ ೨ನೆಯ ಇಯತ್ತೆಯಲ್ಲಿ ಓದುತ್ತಿದ್ದಾಳೆ.”

“ ನಮ್ಮ ಹುಡುಗನು ಇಂಗ್ರೇಜಿ ಶಾಲೆಯ ೬ನೆಯ ವರ್ಗದಲ್ಲಿ ಅಲ್ಲಲ್ಲ, ೧೦ನೆಯ ವರ್ಗದಲ್ಲಿ ಕಲಿಯುತ್ತಿದ್ದಾನೆ.

ಹೀಗಾಗಿ ಎಷ್ಟೋ ಮಕ್ಕಳಲ್ಲಿಯೂ, ಪಾಲಕರಲ್ಲಿಯೂ ಆಯಾ ವರ್ಗಗಳ ಆಯಾ ಶಾಲೆಗಳ ತಕ್ಕ ಮಾಹಿತಿಯು ಇಲ್ಲದಾಗಿದೆ, ಯೋಗ್ಯ ಕಲ್ಪನೆಯೂ ಇಲ್ಲದಾಗಿದೆ. ‘ಇಂಗ್ರೇಜಿ ಶಾಲೆ’ ಎನ್ನುವ ಗ್ರಹಿಕೆಯು ಕಡಿಮೆಯಾಗಿಲ್ಲ. ಪ್ರಾಥಮಿಕ ಶಾಲೆ, ಮಾಧ್ಯಮಿಕ ಶಾಲೆಗಳ ಸಾಮ್ಯತೆಯೂ, ಅವುಗಳಲ್ಲಿಯ ಅಂತರವೂ ಎಷ್ಟೋ ಪಾಲಕರಿಗೆ ಗೊತ್ತಾಗದಿರುವದರಿಂದ ಒಮ್ಮೊಮ್ಮೆ ಅದೆಷ್ಟೋ ಗೊಂದಲವಾಗುವ ಸಂಭವವಿದೆ. ಈಗಿನ ಪ್ರಾಥಮಿಕ ಶಾಲೆ, ಮಾಧ್ಯಮಿಕ ಶಾಲೆ ಇವುಗಳಲ್ಲಿಯ ಭೇದಾಭೇದಗಳೂ, ಸಾಮ್ಯ ವೈಷಮ್ಯಗಳೂ ಹಾಗೂ ಅವುಗಳಲ್ಲಿಯ ವರ್ಗಗಳೆಂದರೆ ಅವಾವು ಅವುಗಳ ಮರ್ಮವೇನು, ಅವುಗಳಲ್ಲಿಯ ಕೆಲಸವಾವುದು ಎಂಬ ವಿಷಯಗಳು ಕೆಲ ಶಿಕ್ಷಕರಿಗೂ ಕೂಡ ಅಪರಿಚಿತವಾಗಿವೆ ಎಂದು ಬಿಚ್ಚು ಮಾತಿನಲ್ಲಿ ಹೇಳಿದಲ್ಲಿ ಯಾವ ಶಿಕ್ಷಕರೂ ಅನ್ಯಥಾ ಭಾವಿಸುವದಿಲ್ಲವೆಂದು ಆಶಿಸಲಾಗಿದೆ. ಹೀಗಾಗಿ, ಕೆಲವೊಂದು ಪ್ರಸಂಗಗಳಲ್ಲಿ ಪಾಲಕರಿಗೂ ಶಿಕ್ಷಕರಿಗೂ ತಿಳಿಯದಲೆ ಕೆಲಕೆಲವು ಮಕ್ಕಳ ಅಭ್ಯಾಸವು ಕುಂಠಿತವಾದ ಮತ್ತು ಅವರ ಅಭ್ಯಾಸದಲ್ಲಿ ವಿನಾಕಾರಣ ತೊಂದರೆಯಾದ ಹಾಗು ಹಿಡಿಯಬೇಕಾದ ಹಾದಿಯನ್ನು ಬಿಟ್ಟ ಉದಾಹರಣೆಗಳು ಹೇರಳವಾಗಿವೆ. ಈಗಿನ ಪ್ರಾಥಮಿಕ ಶಾಲೆಗಳ ಕಕ್ಷವೆಷ್ಟು, ಮಾಧ್ಯಮಿಕ ಶಾಲೆಗಳ ಕಕ್ಷವೆಷ್ಟು ಇದನ್ನು ತಿಳಕೊಳ್ಳುವದು ಎಷ್ಟೋ ಜನರಿಗೆ ಇನ್ನೂ ಕಷ್ಟವಾಗಿದೆ. ಮಾಧ್ಯಮಿಕ ಶಾಲೆಯ ಕಲ್ಪನೆಯು ಪಾಲಕರಲ್ಲಿ ಇನ್ನೂ ಚನ್ನಾಗಿ ಮೂಡಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ‘ಇಂಗ್ರೇಜಿ ಶಾಲೆ’ಯ ಭಾಸವು ಇನ್ನೂ ಕಡಿಮೆಯಾಗಿಲ್ಲ. ಕೆಲ ಪಾಲಕರು ತಮ್ಮ ಮಕ್ಕಳನ್ನು ಮಾಧ್ಯಮಿಕ ಶಾಲೆಗೆ ಕಳಿಸಿದ ಮೇಲೆ ‘೫ನೆಯ ಅಥವಾ ೬ನೆಯ ವರ್ಗದಲ್ಲಿ ಇಂಗ್ಲಿಷ ಅಭ್ಯಾಸ ಇಲ್ಲ’ ಎಂದು ತಿಳಿದ ಕೂಡಲೆ ‘ಇಂಗ್ರೇಜಿಯನ್ನು ಅದೇಕೆ ಕಲಿಸುವದಿಲ್ಲ’ ಎಂದು ಕೇಳಿದ್ದುಂಟು. ೫ನೆಯ, ೬ನೆಯ ವರ್ಗಗಳಲ್ಲಿ ಇಂಗ್ರೇಜಿ ಕಲಿಸುವದಿಲ್ಲ ಎಂಬುದನ್ನು ತಿಳಿದ ಕೂಡಲೆ ತಿರುಗಿ ಪ್ರಾಥಮಿಕ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕರೆದೊಯ್ದ ಉದಾಹರಣೆಗಳೂ ಉಂಟು.

ಇದಕ್ಕೆ ಕಾರಣವೆಂದರೆ ೫, ೬, ೭ನೆಯ ವರ್ಗಗಳ ತಕ್ಕ ಕಲ್ಪನೆಯ ಅಭಾವವಲ್ಲದೆ ಮತ್ತೊಂದಿಲ್ಲ. ಈ ಬಗ್ಗೆ ಪ್ರತಿಯೊಬ್ಬ ಶಿಕ್ಷಕನೂ, ಶಿಕ್ಷಣಾಭಿಮಾನಿಯೂ ಲಕ್ಷ್ಯವನ್ನೀಯುವದು ಅವಶ್ಯವಿದೆ.

ಈಗಿನ ಹೊಸ ಅಭ್ಯಾಸ ಪತ್ರಿಕೆಯಂತೆ ೫, ೬, ೭ ಈ ವರ್ಗಗಳಲ್ಲಿ- ಪ್ರಾಥಮಿಕ ಶಾಲೆಗಳಲ್ಲಿ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ನಡೆಯಬೇಕಾದ ಅಭ್ಯಾಸವು ಮಾತ್ರ ಒಂದೇ. ಇದನ್ನನುಸರಿಸಿ ಪ್ರಾಥಮಿಕ ಶಾಲೆಯ ೧ನೆಯ ವರ್ಗದಿಂದ ಮಾಧ್ಯಮಿಕ ಶಾಲೆಯ ೧೧ನೆಯ ವರ್ಗದ ವರೆಗೆ ೧ ರಿಂದ ೧೧ ವರ್ಗಗಳನ್ನು ಕರೆಯಲಾಗಿವೆ. ೫, ೬, ೭ನೆಯ ವರ್ಗಗಳ ಅಭ್ಯಾಸ ಪತ್ರಿಕೆಯು ಪ್ರಾಥಮಿಕ ಶಾಲೆ ಇರಲಿ ಅಥವಾ ಮಾಧ್ಯಮಿಕ ಶಾಲೆ ಇರಲಿ- ಒಂದೇ. ಆದರೆ ಪ್ರಾಥಮಿಕ ಶಾಲೆಯಲ್ಲಿಯ ೫ನೆಯ ವರ್ಗವು ಮಾಧ್ಯಮಿಕ ಶಾಲೆಯ ೫ನೆಯ ವರ್ಗಕ್ಕೆ ಎಲ್ಲ ರೀತಿಯಿಂದಲೂ ಸಮಾನವಾಗುವದೇ? ಪ್ರಾಥಮಿಕ ಶಾಲೆಯಲ್ಲಿಯ ೫, ೬, ೭ನೆಯ ವರ್ಗಗಳು ಮಾಧ್ಯಮಿಕ ಶಾಲೆಯಲ್ಲಿಯ ೫, ೬, ೭ನೆಯ ವರ್ಗಗಳಿಗೆ ಅನುಕ್ರಮವಾಗಿ ಎಲ್ಲ ರೀತಿಯಿಂದಲೂ ಸರಿಸಮಾನವಾಗಬಹುದೇ? ಸರಿಸಮಾನ ಇರುವದೇ?

೧ ರಿಂದ ೧೧ ರ ವರೆಗೆ ವರ್ಗಗಳನ್ನು ಕರೆದಾಗ್ಗೆ ೧ ರಿಂದ ೪ನೆಯ ವರ್ಗದ ವರೆಗೆ, ೫ ರಿಂದ ೭ ರ ವರೆಗೆ, ೮ ರಿಂದ ೧೧ ರ ವರೆಗೆ ವರ್ಗಗಳಿರುವ ಮೂರು ಮೆಟ್ಟಲುಗಳ ಪೂರ್ಣ ಕಲ್ಪನೆಯು ಹಾಗೂ ಅರ್ಥವು ಆಗುವಂತಿಲ್ಲ. ಅದರಲ್ಲಿಯೂ ೫, ೬, ೭ನೆಯ ವರ್ಗಗಳೆಂದರೆ ಮಾತು ಮಾತಿನಲ್ಲಿ ಸಂದಿಗ್ಧ ವರ್ಗಗಳಾಗಿ ಪರಿಣಮಿಸಿವೆ. ೫, ೬, ೭ನೆಯ ವರ್ಗಗಳಲ್ಲಿ ಕಂಡುಬರುವ ಈ ತೆರನಾದ ಸಂದಿಗ್ಧತೆಯನ್ನು ಹಾಗು ಪುನರುಕ್ತಿಯನ್ನು ದೂರೀಕರಿಸಬೇಕೆನ್ನುವದೇ ಈ ಲೇಖನದ ಉದ್ದೇಶವು.

ಅಭ್ಯಾಸ ಪತ್ರಿಕೆಯನ್ನು ಹಿಡಿದು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ೫, ೬, ೭ನೆಯ ಈ ವರ್ಗಗಳು ಅವೇನೋ ಒಂದೇ ಕಾಣುತ್ತಿವೆ. ಆದರೆ

ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ನಡೆಯುವ ೫, ೬, ೭ನೆಯ ವರ್ಗಗಳು ಅವುಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳೂ, ಕಲಿಸುವ ಶಿಕ್ಷಕರೂ, ಶಾಲಾ ಗೃಹಗಳೂ, ಉಪಕರಣಗಳೂ ಒಟ್ಟಿನಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿಯ ೫, ೬, ೭ನೆಯ ವರ್ಗಗಳ ವಾತಾವರಣವೇ ಬೇರೆಬೇರೆ ಯಾಗಿರುತ್ತದೆಂಬವನ್ನು ಬೇರೆ ಹೇಳಲು ಬೇಡ.

೧-ರಿಂದ ೪ನೆಯ ವರ್ಗದ ವರೆಗೆ ಪ್ರಾಥಮಿಕ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಯು ಪ್ರಾಥಮಿಕ ಶಾಲೆಯ ೫ನೆಯ ವರ್ಗಕ್ಕೆ ಹೋಗುವದೆಂದರೆ ಆ ವಿದ್ಯಾರ್ಥಿಯು ಪ್ರಾಥಮಿಕ ಶಾಲೆಯ ವರ್ಗಗಳ ದಾರವನ್ನೇ ಹಿಡಿದುಕೊಂಡು ಪ್ರಾಥಮಿಕ ಶಾಲೆಯ ೭ನೆಯ ವರ್ಗದ ಕಡೆಗೆ ಅವನ ಲಕ್ಷ್ಯವು ಹರಿಯುತ್ತಿರುತ್ತದೆ. ಮತ್ತು ಪ್ರಾಥಮಿಕ ಶಾಲೆಯ ಪೂರ್ಣ ಅಭ್ಯಾಸವನ್ನು ಮುಗಿಸಿ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ (P. S. C. Examination) ಪಾಸಾಗಬೇಕೆಂಬುವ ಹವಣಿಕೆಯಲ್ಲಿರುತ್ತಾನೆ.

ಆದರೆ ಅದೇ ವಿದ್ಯಾರ್ಥಿಯು ೧ ರಿಂದ ೪ನೆಯ ವರ್ಗದ ವರೆಗೆ ಪ್ರಾಥಮಿಕ ಶಾಲೆಯಲ್ಲಿ ಕಲಿತು ಮಾಧ್ಯಮಿಕ ಶಾಲೆಯ ೫ನೆಯ ವರ್ಗಕ್ಕೆ ಸೇರಿದುದಾದರೆ, ಅವನ ಲಕ್ಷ್ಯವು ಪ್ರಾಥಮಿಕ ಶಾಲೆಯ ೭ನೆಯ ವರ್ಗದ ಕಡೆಗೆ ಇರದೆ ಮಾಧ್ಯಮಿಕ ಶಾಲೆಯ (ಹಳೆಯ ೭ನೆಯ) ೧೧ನೆಯ ವರ್ಗದ ಕಡೆಗೆ ಇರುತ್ತದೆ. ಅಂದರೆ ಮಾಧ್ಯಮಿಕ ಪೂರ್ಣ ಅಭ್ಯಾಸ ಮುಗಿಸಿ ಮಾಧ್ಯಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ (S. S. C. Examination) ಯನ್ನು ಪಾಸಾಗಬೇಕೆನ್ನುವ ಲವಲವಿಕೆಯು ಅವನಲ್ಲಿರುತ್ತದೆ. ಮಾಧ್ಯಮಿಕ ಶಾಲೆಯಲ್ಲಿದ್ದಾಗ್ಗೇನೇ-೭ನೆಯ ಇಯತ್ತೆಯಲ್ಲಿ-ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಗೆ ಅವನು ತಯಾರ ಮಾಡಬಹುದು. ಮತ್ತು ಆ ಪರೀಕ್ಷೆಯನ್ನು ಪಾಸಾಗಬಹುದು. ಆದರೆ ಅದು ಅವನ ಸ್ವೇಚ್ಛೆಯ ಮಾತು. ಮಾಧ್ಯಮಿಕ ಶಾಲೆಯಲ್ಲಿ ಅಭ್ಯಾಸ ಮಾಡುತ್ತಲೇ ಮತ್ತೊಂದು ಪರೀಕ್ಷೆ ಪಾಸಾಗಬಹುದು. ಹಾಗೆ ಮಾಡಿದಲ್ಲಿ ಅವನಿಗೆ ಮಾಧ್ಯಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ (S. S. C. Examination) ಯನ್ನು ಪಾಸಾಗಬೇಕೆನ್ನುವ ತನ್ನ ಧ್ಯೇಯದಲ್ಲಿ ಏನೊಂದೂ ಚ್ಯುತಿ ಬರುವದಿಲ್ಲ. ಅವನ ಲಕ್ಷ್ಯವು ೧೧ನೆಯ ವರ್ಗದ ಕಡೆಗೇ ಇರುತ್ತದಲ್ಲದೆ, ೭ನೆಯ ವರ್ಗದ ಕಡೆಗೆ ಇರುವದಿಲ್ಲ. ಅರ್ಥಾತ್ ಮಾಧ್ಯಮಿಕ ಶಾಲೆಯ ೭ನೆಯ ವರ್ಗದ ಕಡೆಗೇನೇ ಅವನ ಲಕ್ಷ್ಯವಿರುತ್ತದೆ.

★ ಗುರ್ಚಿ ★

ಡಾ. ಬಿ. ಎಸ್. ಗದ್ದಗಿಮಠ, ಎಮ್.ಎ., ಪಿಎಚ್.ಡಿ.

ಭಾದ್ರಪದ-ಆಶ್ವಿಜ ಮಾಸಗಳಲ್ಲಿ ಉತ್ತರ ಕರ್ನಾಟಕ (ವಿಶೇಷವಾಗಿ ಬೆಳುವಲ) ದಲ್ಲಿ ಮಳೆಯಾಗದಿರಲು 'ಗುರ್ಚಿ'ಯು ಊರೂರು ತಿರುಗುವುದು ದೃಷ್ಟಿಗೋಚರವಾಗುವುದು. ಆಗ ಈ ಸಂಪ್ರದಾಯವನ್ನು ಬಹುತರವಾಗಿ ಎಲ್ಲ ಹಳ್ಳಿಗರು ಆಚರಿಸುವರು. ಕೊರವರಾಗಲಿ, ಇಲ್ಲವೆ ಊರಲ್ಲಿಯ ಹುಡುಗರಾಗಲಿ ಈ ಗುರ್ಚಿಯನ್ನು ಹೊತ್ತು ತಿರುಗುತ್ತಾರೆ. ಮಲೆನಾಡಿನ ಗಡಿಭಾಗಗಳಲ್ಲಿ ಊರ ಹುಡುಗರೇ ಮಳೆ ಹೋಗಲು ಈ ಗುರ್ಚಿಯನ್ನು ಹೊತ್ತು ತಿರುಗಿ ದೇವರಿಗೆ ಕಾಯಿಕಪ್ಪುರ ಬೆಳಗಿ ಮಳೆಯಾಗಲೆಂದು ಬೇಡಿಕೊಳ್ಳುವರು. ಬೆಳುವಲದಲ್ಲಿ ಕುಂಚಿಕೊರವರ ಮಕ್ಕಳು ಗುರ್ಚಿಯನ್ನು ಹೊತ್ತು ತಿರಗುತ್ತಾರೆ. -ಲಿಂಗದಾಕೃತಿಯ ಶೆಗಣಿಯ ಉಂಡಿಯನ್ನು ಮಾಡಿ ಅದಕ್ಕೆ ನೆತ್ತಿಯ ಮೇಲೆ ಕರಕಿಯ ಪತ್ರಿಯನ್ನು ಚುಚ್ಚಿ, ಕಜ್ಜಾಯ (ರೊಟ್ಟಿ) ಬೇಯಿಸುವ

ಕೊಪ್ಪರಿಗೆ (ಹಂಚು) ಯನ್ನು ದಬ್ಬು ಮಾಡಿ ಅದರ ಮೇಲೆ ಅದನ್ನು ಸ್ಥಾಪಿಸುವರು. ಈ ಕರಕಿಯ ಪತ್ರಿಯನ್ನು ಹೊತ್ತ ಶೆಗಣಿಯ ಲಿಂಗದಾಕೃತಿಯೇ ಒಕ್ಕಲಿಗರಿಗೆ ಮಳೆಕೊಟ್ಟು ಕೊಡುವ 'ಗುರ್ಜಿ'ಯು. ಈ ಗುರ್ಜಿಯು ಒಕ್ಕಲಿಗರಿಗೆ ಕರ್ನಾಟಕದಲ್ಲಿ ಮಳೆಯನ್ನು ತರುವ ಸಂಪ್ರದಾಯಕ ದೇವರಾಗಿದೆ. ಹೀಗೆ ಸ್ಥಾಪಿಸಿದ ಕೊಪ್ಪರಿಗೆಯ ಮೇಲಿನ ಗುರ್ಜಿಯನ್ನು ಏಳು ಅಥವಾ ಎಂಟು ವರುಷದ ಹುಡುಗನಾಗಲಿ, ಹುಡುಗಿಯಾಗಲಿ ಹೊರುತ್ತಾರೆ. ಅವರ ಬೆನ್ನ ಹಿಂದೆ ಹಲಕೆಲವು ಹುಡುಗರು ಬೆನ್ನಹತ್ತಿ ಮನೆ ಮನೆಗೆ ಹೋಗಿ 'ಗುರ್ಜಿ' ಬಂದಿಹುದೆಂದು ಹಾಡುವರು. ಮನೆಯವರು ತಂಬಿಗೆ ನೀರನ್ನು ತಂದು ಗುರ್ಜಿಯ ಮೇಲೆ ಸುರುವಲು ಆ ಗುರ್ಜಿಯನ್ನು ಹೊತ್ತವನು ಒಂದೆಡೆ ಸುಮ್ಮನೆ ನಿಲ್ಲದೆ ತನ್ನ ಸುತ್ತ ತಿರುಗುವನು. ನೀರೆರೆದ ಮೇಲೆ ಮನೆಯವರು ಮೊರ ತುಂಬಿ ಜೋಳ ಹಾಕುವರಲ್ಲದೆ ದುಡ್ಡನ್ನೂ ಕೊಟ್ಟು ಕಳುಹಿಸುವರು. ಹೀಗೆ ಓಣಿ ಓಣಿಯ ತಿರುಗಿ ಊರೆಲ್ಲ ಅಲೆದಾಡಿ ಮುಗಿದ ಮೇಲೆ ಮಳೆ ಬರಲೆಂದು ಆ ಗುರ್ಜಿಯನ್ನು ಪೂಜೆ ಮಾಡಿ ಬೇಡಿಕೊಳ್ಳುತ್ತಾರೆ. ಈ ಗುರ್ಜಿಯನ್ನು ಹೊತ್ತು ಮನೆ ಮನೆಗೆ ತಿರಗುವಾಗ ಹಾಡುವ ಹಾಡವು ಎಲ್ಲರ ಮನಸ್ಸನ್ನು ಹಿಡಿಯದಿರದು.

ಗುರ್ಜಿಯ ಹಾಡು †

ಗುರ್ಜೀ ಗುರ್ಜೀ ಎಲ್ಯಾಡಿ ಬಂದಿ

೧ನೆಯ ಚೌಕು:–

ಹಳ್ಳಾ ಕೊಳ್ಳಾ ತಿರಗಾಡಿ ಬಂದೆ
ಕಾರಮಳಿಯೇ ಕಪ್ಪತ ಮಳಿಯೇ
ಸುರಿ ಮಳಿಯೇ ಸುರಿ ಮಳಿಯೇ.
ಸುರಿಮಳಿಯಾದರ ಒಕ್ಕಲಿಗ ಒಕ್ಕಲಿಗ.
ಒಕ್ಕಲಿಗಣ್ಣಾ ಬಿತ್ತೋ ಹೊನ್ನ
ಸುತ್ತ ಸುರಿಯಿತು ಸುರಿಮಳಿಯೋ ಸುರಿಮಳಿಯೋ.
ಹಸರ ಬೆಳಿಯು ಭೂತಾಯೀ ಭೂತಾಯೀ.
ಮುಗಿ ಮಳೆಯಾಗಿ ಹೂಬೆಳಿಸೀ ಹೂಬೆಳಿಸೀ.
ಹಕ್ಕಿಯ ಹಬ್ಬ ಹೊಲದಾಗ ಹೊಲದಾಗ.
ಕಾರಮಳಿಯೇ ಕಪ್ಪತ ಮಳಿಯೇ
ಸುರಿ ಮಳಿಯೇ ಸುರಿಮಳಿಯೇ.

೨ನೆಯ ಚೌಕು:–

ಅಯ್ಯಾರಣ್ಣಾ ಅಯಾ ಬೇಡೊ
ಕದರನಾಲೀ ಕಂಬಾರಾ ಕಂಬಾರಾ.
ಬಿದರನಾಲೀ ಮ್ಯಾದಾರಾ ಮ್ಯಾದಾರಾ.
ಅಯ್ಯಾರ್ನ ಹೆಂಡತಿ ಗಂಡ ಹಡೆದಾಳೊ
ನೆತ್ತಿಗೆ ಎರಿಯಾಕ ನೀರಿಲ್ಲ ನೀರಿಲ್ಲ.
ಕರೆಗಂಬಳಿಯ ಗುರುಸಿದ್ಧ ಗುರುಸಿದ್ಧ
ಕಂಬಳಿ ಬೀಸೊ ಸುರಿ ಮಳಿಯೋ.
ಸುರಿಮಳಿಯೋ
ಕಾರಮಳಿಯೇ ಕಪ್ಪತ ಮಳಿಯೇ
ಹಳ್ಳಾಕೊಳ್ಳಾ ತುಂಬಿಸು ಮಳಿಯೇ
ಸುಣ್ಣಾ ಕೊಡತಿನಿ ಸುರಿಯಲೆ ಮಳಿಯೇ
ಬಣ್ಣಾ ಕೊಡತಿನಿ ಬಾರಲೆ ಮಳಿಯೇ
ಸುರಿ ಮಳಿಯೇ ಸುರಿಮಳಿಯೇ.

ಇಷ್ಟೊಂದು ಹೆಸರುವಾಸಿಯಾದ ಈ ಗುರ್ಜಿಯು ಯಾರಿರಬಹುದು? ಜನಪದವು ಇಷ್ಟೊಂದು ಅದರ ಸತ್ಕಾರದಿಂದ ಪೂಜೆ ಮಾಡಿ ಬರಮಾಡಿಕೊಳ್ಳುವುದೇಕೆ? 'ಮಳೆಕೊಡು' ಎಂದು 'ಗುರ್ಜಿ'ಗೆ ನೆರಗೊಡ್ಡಿ ಬೇಡಿಕೊಳ್ಳುವುದೇಕೆ? ಇವೇ ಮೊದಲಾದ ತೊಡಕುಗಳು ನಮ್ಮೆಲ್ಲರನ್ನು ಎದುರಿಸದಿರವು. ಅಲ್ಲದೆ ಈ ಗುರ್ಜಿಯು ಆಡಿ ಹೋದ ಏಳೆಂಟು ದಿನಗಳಲ್ಲಿಯೇ ಮಳೆಯಾಗುವುದೆಂದು ಜನರಲ್ಲಿ ಈಗಲೂ ದೃಢವಾದ ನಂಬಿಗೆಯು.

ಮೇಲಿನ ಹಾಡನ್ನು ಹಿಂಜಿ ಅಭ್ಯಸಿಸಿ ನೋಡಲು ಹಲಕೆಲವು ಗುಪ್ತ ಸಂಗತಿಗಳು ವೇದ್ಯವಾಗುವುವು.

೧. ಗುರ್ಜಿಯು 'ಕರೆಗಂಬಳಿಯ ಗುರುಸಿದ್ಧ.'

೨. ಈ ಪುಣ್ಯಪುರುಷನು ಮಹಾ ಮುಗ್ಧ ಪಾವನ ಪುರುಷನಿದ್ದನಲ್ಲದೆ ಅವನ ಪೂಜ್ಯತೆಗೆ ನಿಸರ್ಗವೇ ತಲೆಬಾಗಿತ್ತು; ಬಾಗುತ್ತ ಬಂದಿದೆ.

೩. ಇವನ ಕಾಲವಲ್ಲಿ ಒಮ್ಮೆ ದೊಡ್ಡ ಬರಗಾಲ ಬಿದ್ದಾಗ ಇವನ ಪೂಜ್ಯತೆಯನ್ನು ಮುನಗಂಡ ಜನವು ಮಳೆ ಕೊಡು ಎಂದು ಭಯಭಕ್ತಿಯಿಂದ ಕೇಳಿಕೊಂಡಿದೆ.

† ಹಲವೆಡೆಯಲ್ಲಿ ಈ ಹಾಡಿನ ಒಂದೆರಡು ಅರ್ಥ ಸುರ್ಥ ಬೇರೆ ರೂಪಾಂತರಗಳು ಕಂಡರೂ ಮೇಲೆ ಕೊಟ್ಟ ಹಾಡವು ಸಂಪೂರ್ಣವಿದ್ದುದರಿಂದ ಇಲ್ಲಿ ಎತ್ತಿಕೊಳ್ಳಲಾಗಿದೆ.

೪. ಈ ಶಿವಶರಣನು ಜನರ ಗೋಳನ್ನು ಕೇಳಲಾರದೆ ತಾನು ಹೊತ್ತ ಕರೆಗಂಬಳಿಯನ್ನು ಬೀಸಲು ನೋಡಿಲ್ಲದ ಮುಗಿಲು ಕೂಡಲೇ ಬಿರುಮಳೆಯನ್ನು ಸುರುವ ಹತ್ತಲು ಹಳ್ಳ ಕೊಳ್ಳಗಳು ತುಂಬಿ ನಾಡೆಲ್ಲ ಬೆಳಸಾಯಿತು. ಎಂದು ಹಾಡಿನಲ್ಲಿ ಬಂದಿದೆ.

ಇಂದು ಗುರ್ಚಿಯನ್ನು ಆಚರಿಸುವ ರೀತಿಯನ್ನು ನೋಡಿದರೆ ಅದರಿಂದ ಆ ಪುಣ್ಯ ಪುರುಷನ ಚಿತ್ರವನ್ನು ಸಹಜವಾಗಿ ಕಲ್ಪಿಸಬಹುದು. ಗುರ್ಚಿಗೆ ನೆತ್ತಿಯ ಮೇಲೆ ಕರಕಿಯ ಪತ್ರಿಯನ್ನು ಚುಚ್ಚುತ್ತಾರೆ. ಈ ಪತ್ರಿಯು ಆ ಪುಣ್ಯ ಪುರುಷನ ಪೂಜ್ಯತೆಯನ್ನು ತೋರಿಸುವುದು. ಲಿಂಗದಾಕೃತಿಯ ಗುರ್ಚಿಯು ಆ ಪುಣ್ಯ ಪುರುಷನು ವೀರಶೈವನಿದ್ದಿರಬಹುದೆಂದು ಸೂಚಿಸುವುದು. ಇದೇ ಆಕಾರದ ಪೂಜೆಗೊಳ್ಳುವ ಇನ್ನೊಂದು ಮೂರ್ತಿಯನ್ನು ಉತ್ತರ ಕರ್ನಾಟಕದ ಎಲ್ಲ ಒಕ್ಕಲಿಗರ ಸುಗ್ಗಿಯ ಕಣದಲ್ಲಿ ನೋಡಬಹುದು. ಅದಕ್ಕೆ ನೆತ್ತಿಯಲ್ಲಿ ಕರಕಿಯ ಪತ್ರಿಯು ಇರದೆ ಜುಟ್ಟುಗಳಿರುವುವು. ಜುಟ್ಟುಗಳು ಜ್ಞಾನ ಭಾಂಡಾರದ ಗುರುತನ್ನು ತೋರಿಸುವುವು. ಇದೇ ಆ "ಸುಗ್ಗಿಯ ಲಿಂಗಯ್ಯ," "ಬುದ್ಧಿವಂತ-ಲಿಂಗ", ಅಥವಾ ಈಗ ಕಣದಲ್ಲಿ ರೂಢಿಯಲ್ಲಿರುವ "ಬೂದ".

ದಬ್ಬು ಹಾಕಿದ ಕಜ್ಜಾಯ ಬೇಯಿಸುವ ಕೊಪ್ಪರಿಗೆ (ಹಂಚು)ಯು ಆ ಪುಣ್ಯ ಪುರುಷನು ತನ್ನ ಶಿವ ಪೂಜೆಯ ಕಾಲದಲ್ಲಿ ಹಾಸಿಕೊಳ್ಳುವ ಕರೆಗಂಬಳಿಯ ಗದ್ದಿಗೆಯನ್ನು ಸೂಚಿಸುವುದು. ಅಥವಾ ಅವನು ಉಳಿದ ವೇಳೆಯಲ್ಲಿ ಹೊದ್ದುಕೊಳ್ಳುವ ಕರೆಗಂಬಳಿಯನ್ನೂ ಸೂಚಿಸದಿರದು. ಲಂಗೋಟಿ ಹಾಕಿ ಬತ್ತಲೆಯಾಗಿ ಗುರ್ಚಿಯನ್ನು ಹೊರುವ ಹುಡುಗರು ಕೌಪಣ ಧರಿಸುವ ವಿರಕ್ತ ಮೂರ್ತಿಯನ್ನು ಕಣ್ಮುಂದೆ ಚಿತ್ರಿಸದಿರವು. ಏಳು ಅಥವಾ ಎಂಟು ವರುಷದ ಹುಡುಗರೇ ಈ ಗುರ್ಚಿಯನ್ನು ಹೊರುವುದರಿಂದ ಆ ಮುಗ್ಧ ಮಕ್ಕಳು ಆ ಪುಣ್ಯ ಪುರುಷನ ಮುಗ್ಧ ಪಾವನತೆಯನ್ನು ಸೂಚಿಸುತ್ತವೆ. ಇದರ ಮೇಲಿಂದ ಆ 'ಕರೆಗಂಬಳಿಯ ಗುರಸಿದ್ಧನು' ಮಹಾ ಮುಗ್ಧ ವಿರಕ್ತಸಿದ್ಧನೆಂದೂ ಅವನಿಗೆ ನಿಸರ್ಗವೇ ಅಧೀನವಾಗಿತ್ತೆಂದೂ, ಕೌಪಣಧಾರನಾಗಿ ಯಾವಾಗಲೂ ಕರೆಗಂಬಳಿಯನ್ನು ಹೊರುತ್ತಿದ್ದನೆಂದೂ ಆ ಪಾವನ ಮೂರ್ತಿಯ ಚಿತ್ರವನ್ನು ಸಾಧಾರವಾಗಿ ಚಿತ್ರಿಸಬಹುದು.

ಹಳ್ಳಿಗಳಲ್ಲಿ ಈಗಲೂ ಜನರು 'ಗುರುಸಿದ್ಧ'ನೆಂದು ಹೆಸರಿಡುತ್ತಾರೆ. ಒಮ್ಮೊಮ್ಮೆ ಬಳಕೆಯಲ್ಲಿ ಮಾತಾಡುವಾಗ ಹಳ್ಳಿಗರು ಈ ಹೆಸರನ್ನು ಕೆಡಿಸಿ 'ಗುಸ್ಯಾ' ಎಂದೂ ಕರೆಯುವರು. ಪ್ರಸಂಗ ಬಂದಾಗ ಪ್ರೇಮದಿಂದ ಅಣಕಿಸಿ ಈ ಹೆಸರನ್ನು 'ಗುರ್ಚಿ'ಯೆಂದೂ ಕರೆಯುತ್ತಾರೆ. ಹಾಗೆಯೇ ಈ 'ಗುರುಸಿದ್ಧ' ಪುಣ್ಯ ಪುರುಷನ ಹೆಸರನ್ನು ಅವನ ಮುಗ್ಧ ಪಾವನತೆಗೆ ಜನಪದವೇ ಶರಣು ಹೋಗಿ ಅತಿ ಭಕ್ತಿಯಿಂದ 'ಗುರ್ಚಿ'ಯೆಂದು ಕರೆದು ಆ ವಿರಕ್ತನ ಸ್ಮಾರಕವನ್ನು ಮಾಡುತ್ತ ಬಂದಿರಬೇಕು. ಮಳೆ ಹೋದಾಗ ಜನರು ಅವನನ್ನು ಪೂಜಿಸಲು ಗುರ್ಚಿಯನ್ನು (ಲಿಂಗದಾಕೃತಿಯನ್ನು) ಮಾಡಿ ಮಳೆ ಬೆಳೆಗಳ ಶಕುನವನ್ನು ಕೇಳಹತ್ತಿದರಲ್ಲದೆ ಅದನ್ನು ಹೊತ್ತುಕೊಂಡು 'ಮಳೆಕೊಡು' ಎಂದು ಮನೆ ಮನೆಗೆ ಅಲೆದಾಡಿ ಊರೂರ ತಿರಗಹತ್ತಿದರು. ಬರಗಾಲದಲ್ಲಿ ನೋಡಿಲ್ಲದ ಮಳೆತಂದ ಈ ಪುಣ್ಯ ಪುರುಷನನ್ನು ಜನಪದವು ಹೇಗೆ ಮರೆಯಬೇಕು? ಅಂತೆಯೇ ಇಂದು 'ಗುರ್ಚಿ'ಯು ಸಂಪ್ರದಾಯವಾಗಿ ಬಂದಿದೆ

ಇನ್ನು ಈ ವಿರಕ್ತ ಪುರುಷನು ನಿಜವಾದ ಐತಿಹಾಸಿಕ ಪುರುಷನಿರಬಹುದೇ? ಇವನ ಕಾಲದಲ್ಲಿ ದೊಡ್ಡ ಬರಗಾಲವು ಕರ್ನಾಟಕದಲ್ಲಿ ಬಿದ್ದಿರಬಹುದೇ? ಎಂಬ ಸಂಗತಿಗಳನ್ನು ತಿಳಿದುಕೊಳ್ಳುವುದು ಬಹಳ ಮಹತ್ವವಾದುದು.

ವೀರಶೈವ ಶಿವಾಚಾರದ ಹಾಡುಗಬ್ಬಗಳನ್ನು ಹಾಡಿದ ಮುಪ್ಪಿನ ಷಡಕ್ಷರಿಯು ಆಧ್ಯಾತ್ಮೋನ್ನತಿಯ ಮೇಲ್ಪಟ್ಟದಲ್ಲಿ ಒಬ್ಬ ಶ್ರೇಷ್ಠ ವಿರಕ್ತ ಕವಿಯು. ಈ ಕವಿಯು ತನ್ನ ಹಾಡಿನಲ್ಲಿ 'ಎರಗಂಬಳಿಯ ಸಿದ್ಧವರಲಿಂಗನಾಮದಿಂ' ತನಗೆ ದೀಕ್ಷೆಯಾಯಿತೆಂದು ಗುರುಕುಲವನ್ನು ಹೇಳಿದ್ದಾನೆ.

ಸಕಲಕೆಲ್ಲಕೆ ನೀನೆ
ಅಕಳಂಕ ಗುರುವೆಂದು
ನಿಖಿಳ ಶಾಸ್ತ್ರವು ಪೇಳುತಿರಲಂದೆನು || ಪ ||
ಎರಗಂಬಳಿಯ ಸಿದ್ಧ
ವರಲಿಂಗ ನಾಮದಿಂ
ಹರನೆ! ನೀನೆನಗೆ ದೀಕ್ಷೆಯ ಮಾಡಿದೆ!

ವರ ಷಡಕ್ಷರಿಯ ದೇ-
ವರ ನಾಮದಿಂದೆನಗೆ
ಅರುಹಿದಿರಿ ಶಿವಶಾಸ್ತ್ರವನುಭವವನು ||

ಇದರ ಮೇಲಿಂದ 'ಎರಗಂಬಳಿ ಮಠವು' ಮುಪ್ಪಿನ ಷಡಕ್ಷರಿಗೆ ಗುರುಕುಲವೆಂದು ವಿಶದವಾಗುವುದು. ಆ ಮಠದ 'ಸಿದ್ಧವರ-ಲಿಂಗ' (ಗುರುಸಿದ್ಧಲಿಂಗ)ನ ಹೆಸರನ್ನು 'ಶಿವನೇ ನೀನೆನಗೆ ತಿಳಿಸಲು (ಜ್ಞಾಪಿಗೆ ತರಲು) ಅಥವಾ ಉಪದೇಶಿಸಲು ದೀಕ್ಷೆಯಾದಂತಾಯಿತು. ಎಂದು ಕವಿಯು ಹೇಳಿಕೊಂಡಿದ್ದಾನೆ ಈ 'ಎರಗಂಬಳಿ ಮಠ'ದ ಗುರುಸಿದ್ಧಲಿಂಗನು ಮುಪ್ಪಿನ ಷಡಕ್ಷರಿಯ ಕಿಂತಲೂ ಎಷ್ಟೋ ವರುಷ ಮುಂಚಿನವನೆಂದು ಮೇಲಿನ ಹಾಡಿನಿಂದ ಸ್ಪಷ್ಟವಾಗುವುದು. ಅಥವಾ ಈ ಗುರುಸಿದ್ಧನೇ ಎರಗಂಬಳಿಮಠದ ಮೂಲ ಗುರುವಾಗಿದ್ದರೂ ಇರಬಹುದು. ಅಂದರೆ ಮುಪ್ಪಿನ ಷಡಕ್ಷರಿಯಕಿಂತ ಇವನು ನೂರಾರು ವರುಷಗಳ ಹಿಂದೆ ಇದ್ದಿರಬಹುದು. ಮುಪ್ಪಿನ ಷಡಕ್ಷರಿಯು ನಿಜಗುಣ ಶಿವಯೋಗಿಗಳ ಸಮಕಾಲಿಗನೆಂದು ಕೆಲವು ಪಂಡಿತರು ಅಭಿಪ್ರಾಯ ಪಡುತ್ತಾರೆ. ಕವಿ ಚರಿತೆಕಾರರು ನಿಜಗುಣ ಶಿವಯೋಗಿಗಳ ಕಾಲವು ಸುಮಾರು ಕ್ರಿ. ಶ. ೧೫೦೦ ಎಂದು ನಿಶ್ಚಯಿಸಿದ್ದಾರೆ. ಶ್ರೀ. ಇ. ಪಿ. ರೈಸ ಅವರು ೧೭ನೆಯ ಶತಮಾನವೆಂದು ಹೇಳುತ್ತಾರೆ. ಆದರೆ ಪುರಂದರದಾಸ, ಕನಕದಾಸರ ಹಾಡುಗಳಲ್ಲಿ ನಿಜಗುಣ ಶಿವಯೋಗಿಗಳ ಆಧ್ಯಾತ್ಮ ಪದಗಳ ಛಾಯೆಯು ಕಂಡುಬರುವುದರಿಂದ ನಿಜಗುಣ ಶಿವಯೋಗಿಗಳು ೧೭ನೆಯ ಶತಮಾನದ ಆರಂಭದಲ್ಲಿ ಆಗಿ ಹೋದರೆಂದು ಹೇಳಬಹುದು. ಇದರ ಮೇಲಿಂದ ಮುಪ್ಪಿನ ಷಡಕ್ಷರಿಯು ಹೊಗಳಿದ ಗುರುಕುಲದ 'ಎರಗಂಬಳಿ ಸಿದ್ಧನು' ಸುಮಾರು ಕ್ರಿ. ಶ. ೧೪ನೆಯ ಶತಮಾನದಲ್ಲಿದ್ದಿರಬಹುದು. ಅಲ್ಲದೆ ಈ ಎರಗಂಬಳಿಮಠದ 'ಗುರುಸಿದ್ಧನ' ಹೆಸರು ಬಸವಾದಿ ಪ್ರಮಥರ ಮಾಲೆಯಲ್ಲಿ ಯಾಗಲಿ, ನೂರೊಂದು ವಿರಕ್ತರ ಮಾಲೆಯಲ್ಲಿಯಾಗಲಿ ಬರುವದಿಲ್ಲ. ಆದುದರಿಂದ ಈ ಮಹಾ ಪುರುಷನು ಬಸವಾದಿ ಪ್ರಮಥರ ಮತ್ತು ನೂರೊಂದು ವಿರಕ್ತರ ನಡುವಿನ ಕಾಲದಲ್ಲಿ ಆಗಿ ಹೋಗಿರಬಹುದು. ಅಲ್ಲದೆ ಜನಪದದಲ್ಲಿಯ 'ಗುರ್ಚಿ'ಯ ಹಾಡಿನಲ್ಲಿ ಅವನ ಕಾಲದಲ್ಲಿಯ ಒಂದು ದೊಡ್ಡ ಬರಗಾಲದ ಸೂಚನೆಯಿದೆ. ಈ ಬರಗಾಲವು ಕ್ರಿ. ಶ. ೧೩೯೬ ರಲ್ಲಿ ಪ್ರಾರಂಭವಾಯಿತೆಂದು ಇತಿಹಾಸದಿಂದ ತಿಳಿದು ಬರುವುದು. ಅಂದರೆ ಈ ಗುರುಸಿದ್ಧಲಿಂಗಯತಿಯು ಕ್ರಿ. ಶ ೧೪ನೆಯ ಶತಮಾನದ ತುತ್ತುದಿಯ ಭಾಗದಲ್ಲಿ ಆಗಿ ಹೋಗಿರಬಹುದು.

ವೀರಶೈವರಲ್ಲಿ ಕಂಬಳಿಯಮಠ, ಎರಗಂಬಳಿಮಠ ಎಂಬ ಹೆಸರಿನ ಮಠಗಳೂ ಆಗಿ ಹೋಗಿವೆ; ಈಗಲೂ ಅವೆ. ಮೇಲೆ ಹೇಳಿದ ಈ ಐತಿಹಾಸಿಕ ಎರಗಂಬಳಿಯ ಸಿದ್ಧಲಿಂಗನೇ 'ಗುರ್ಚಿ'ಯ ಸಂಪ್ರದಾಯದ 'ಕರೆಗಂಬಳಿಯ ಗುರುಸಿದ್ಧ'ನಿರಬೇಕು. ಈ 'ಸಿದ್ಧಲಿಂಗ' ವಿರಕ್ತನು ಮಠದ ಗುರುವು ಆದುದರಿಂದ ಜನಪದವು ಅವನಿಗೆ ಕೇವಲ 'ಸಿದ್ಧಲಿಂಗ'ನೆಂಬ ಒಂಟಿ ಹೆಸರನ್ನು ಕರೆಯದೆ 'ಗುರು' ಎಂಬ ಭಕ್ತಿವಾಚಕ ಉಪಪದವನ್ನು ಹಚ್ಚಿ 'ಗುರುಸಿದ್ಧಲಿಂಗ' ಎಂದು ಕರೆದಿರಬೇಕು. ಮುಂದೆ ಕಾಲಾಂತರದಿಂದ ಈ ಹೆಸರು 'ಗುರುಸಿದ್ಧ'ವೆಂದಾಗಿ ಕಡೆಗೆ 'ಗುರ್ಚಿ' ಯಾಗಿರಬಹುದು. ಕನ್ನಡದಲ್ಲಿ 'ಕರೆ' ಇದರರ್ಥವು 'ಕಪ್ಪು' ಎಂದಾಗುವುದು. 'ಎರೆ' ಇದರರ್ಥವಾದರೂ 'ಕಪ್ಪು' ಎಂದಾಗುವುದು. ಕಪ್ಪು ಭೂಮಿಗೆ ಎರೆಭೂಮಿಯೆಂದು ಈಗಲೂ ವಾಡಿಕೆಯಲ್ಲಿದೆ. ಆದುದರಿಂದ ಈ 'ಎರಗಂಬಳಿ ಗುರುಸಿದ್ಧಲಿಂಗ'ನನ್ನೇ ಜನಪದವು 'ಕರೆಗಂಬಳಿ ಗುರುಸಿದ್ಧ'ನೆಂದು ಕರೆದಿರಬೇಕು.

ಆಯ್ತಾರ್ನ ಹೆಂಡತಿ ಗಂಡ ಹಡೆದಾಳೊ
ನೆತ್ತಿಗೆ ಎರಿಯಾಕ ನೀರಿಲ್ಲ ನೀರಿಲ್ಲ
ಕರಿಗಂಬಳಿಯ ಗುರುಸಿದ್ಧ ಗುರುಸಿದ್ಧ
ಕಂಬಳಿ ಬೀಸಲು ಸುರಿಮಳಿಯೋ
ಸುರಿಮಳಿಯೊ

ಎಂಬ ಹಾಡಿನಲ್ಲಿ ಬರುವ ಈ ನುಡಿಗಳು ನೀರಿಲ್ಲದ ಒಂದು ಕಾಲವನ್ನು ಸೂಚಿಸುತ್ತವೆ. ಈ ನೀರಿಲ್ಲವ ಕಾಲವು ಕರ್ನಾಟಕದಲ್ಲಿ ಯಾವುದಿರಬಹುದು?

ಕ್ರಿ. ಶ. ಪೂ ೩೦೦ ವರುಷಗಳ ಹಿಂದೆ ಉತ್ತರ ಹಿಂದುಸ್ತಾನದಲ್ಲಿ ಘೋರವಾದ ೧೨ ವರುಷದ ಬರವು ಬೀಳಲು ಜೈನ ಧರ್ಮದ ಗುರುವಾದ 'ಭದ್ರಬಾಹು' ತನ್ನ ಶಿಷ್ಯರೊಡಗೂಡಿ ಮಳೆ ಬೆಳೆ ಸಮೃದ್ಧವಾದ ಕರ್ನಾಟಕದ ಬೆಳಗುಳಕ್ಕೆ ಬಂದನೆಂದು ಇತಿಹಾಸವು ಹೇಳು

ತ್ತವೆ. ದ್ರಾವಿಡರು ದಕ್ಷಿಣ ತಪ್ಪಲು ಭೂಮಿ (ದಂಡಕಾರಣ್ಯದ ಕೊಳ್ಳ)ಯನ್ನು ಸಾಗುವಳಿ ಮಾಡಿದಾಗಿನಿಂದ ಕ್ರಿ. ಶ. ೧೪ನೆಯ ಶತಮಾನದ ವರೆಗೆ ಕರ್ನಾಟಕದಲ್ಲಿ ಬರವೆಂಬುವೇ ಗೊತ್ತಿದ್ದಿಲ್ಲವೆನ್ನಬಹುದು. ಸಾಗುಮಾಡಿದ ಫಲವತ್ತಾದ ಗಂಗಾ ಯಮುನಾ ನದಿಗಳ ಪ್ರದೇಶವನ್ನು ಆರ್ಯರಿಗೆ ಬಿಟ್ಟುಗೊಟ್ಟು ದಕ್ಷಿಣಕ್ಕೆ ಬಂದ ದ್ರಾವಿಡರು ತಮಗೆ ಬರ ಬಿತ್ತೆಂದು ಉತ್ತರಕ್ಕೆ ಹೋದದ್ದು ಎಲ್ಲಿಯೂ ಉಲ್ಲೇಖವಿಲ್ಲ. ಚಾಲುಕ್ಯ, ಕದಂಬ, ರಾಷ್ಟ್ರಕೂಟ ಮೊದಲಾದ ಕನ್ನಡ ಅರಸರ ಅರಸೊತ್ತಿಗೆಯಲ್ಲಿ ಮಳೆ ಬೆಳೆ ಸಮೃದ್ಧ ಕರ್ನಾಟಕವಿತ್ತೆಂದು ಪರದೇಶದವರೂ ಬರೆದಿದ್ದಾರೆ. ಪಂಪ ಮೊದಲಾದ ಮಹಾ ಕವಿಗಳು ಕರ್ನಾಟಕ ಮಳೆ-ಬೆಳೆ, ಸಮೃದ್ಧ ಸಂಪತ್ತನ್ನು ಹಾಡಿದ್ದಾರೆ. ಬಸವಾದಿ ಪ್ರಮಥರ ಕಾಲದಲ್ಲಿ ಎಲ್ಲಿಯೂ ಬರಗಾಲದ ಸುಳಿವೇ ಇಲ್ಲ. ಅಲ್ಲದೆ ಕರ್ನಾಟಕದ ಬೈಲು ಪ್ರದೇಶಗಳ ಮಳೆ ಬೆಳೆಗಳ ಸಮೃದ್ಧಿಯನ್ನು ಕಂಡು, ಕೇಳಿ, ಮುಸಲ್ಮಾನ ಶಾಹಿಗಳು ಕರ್ನಾಟಕದ ಬೈಲುಗಳಲ್ಲಿಯೇ ತಮ್ಮ ರಾಜ್ಯಗಳನ್ನು ಕಟ್ಟಿದ್ದಾರೆ. ಇಂತಹ ಸಮೃದ್ಧಿಯಾದ ಕನ್ನಡನಾಡಿಗೆ ಪುಣ್ಯ ಪುರುಷರ ಬಲವು ತೀರಿತೋ ಅಥವಾ ದುರ್ದೈವವೋ ಏನೋ ಅನ್ನುವಂತೆ ಕ್ರಿ. ಶ. ೧೪ನೆಯ ಶತಮಾನದಲ್ಲಿ ಒಮ್ಮೆ ಭೀಕರ ಬರವು ಬಂತು. ಈ ಬರವೇ ಇತಿಹಾಸ ಪ್ರಸಿದ್ಧವಾದ '**ದುರ್ಗಾದೇವಿ**' ಎಂಬ ಬರವು. ಈ ಬರವು ಕ್ರಿ. ಶ. ೧೩೯೬ನೆಯ ವರುಷ ಆರಂಭವಾಗಿ ಹನ್ನೆರಡು ವರುಷಗಳ ವರೆಗೆ ಒಂದೇ ಸವನೆ ಭೀಕರವಾಗಿ ದಕ್ಷಿಣ ದೇಶಗಳಲ್ಲಿ ತಾಂಡವವಾಡಿತೆಂದು ಐತಿಹ್ಯವಿದೆ.

ದ್ರಾವಿಡರು ದಕ್ಷಿಣ ತಪ್ಪಲು ಭೂಮಿ (ದಂಡಕಾರಣ್ಯ)ಯನ್ನು ಕಡಿದು ಸಾಗು ಮಾಡಿದ ಮೇಲೆ ಈ ಫಲವತ್ತಾದ ಕೊಳ್ಳವು ಸಂಪತ್ತು ತುಂಬಿ ರಾಜ್ಯ ವೈಭವದಿಂದ ಮೆರೆಯುತ್ತ ಬಂತು. ಬರಬರುತ್ತ ಒಕ್ಕಲಾದ ನಿವಾಸಿಗಳು ಪ್ರಪಂಚದ ಉಪಯೋಗಕ್ಕೆ ಈ ತಪ್ಪಲ ಭೂಮಿಯನ್ನು ಕಡಿಯಲು ಪೂರ್ಣ ಬಯಲಾಯಿತು. ಹೇಗೆ ಈ ಭಾಗವು ಬಯಲಾಗಹತ್ತಿತೊ ಹಾಗೆ ಮಳೆಯು ಕಡಿಮೆಯಾಗಿ ಬರಬರುತ್ತ ಮಳೆಯ ನಿಯಮಿತತನವೇ ತಪ್ಪಹತ್ತಿತು. ಹೀಗಾಗಿ ಕ್ರಿ. ಶ. ೧೩೯೬ ರಲ್ಲಿ ಭೀಕರ ಬರಗಾಲದ ದವಡೆಯಲ್ಲಿ ದೇಶವು ಬೀಳಬೇಕಾಯಿತು.

ಈ ಬರಗಾಲ ಬಿದ್ದಕಾಲವೂ ಮತ್ತು 'ಕರೆಗಂಬಳಿ ಗುರು ಸಿದ್ಧ' ನಿದ್ದ ಕಾಲವೂ ಸರಿ ಹೋಗುತ್ತದೆ. ಆದುದರಿಂದ ಈ ವಿರಕ್ತನು ಕರ್ನಾಟಕದಲ್ಲಿ ಮೊದಲನೆಯ ಭೀಕರ ಬರಗಾಲದಲ್ಲಿ ಇದ್ದನು. ಇಂದು ಮಳೆ ಬರಬಹುದು ನಾಳೆ ಮಳೆ ಬರಬಹುದು ಎಂದು ಜನರು ದಾರಿ ನೋಡಿ ನೋಡಿ ನಿರಾಶಯ ನಿರಾಶ್ರಿತರಾಗಿ ಬರಗಾ ಭೀಕರತೆಯಲ್ಲಿ ಈ ವಿರಕ್ತನಿಗೆ ಭವಿಷ್ಯ ಕೇಳಿರಬಹುದು ಲೀಲಾ ಮೂರ್ತಿಯಾದ ಈ 'ಗುರುಸಿದ್ಧಲಿಂಗ' ವಿ ಕ್ತನು. ಜನರ ಗೋಳನ್ನು ಕೇಳದೆ ಕರೆಕಂಬಳಿಯನ್ನು ಬೀಸಲು ಅವನ ಅಜ್ಞೆಗೆ ನಿಸರ್ಗವು ತಲೆಬಾಗಿ ಒಂದೆ ಸವನೆ ಮೋಡಿಲ್ಲದ ಮಳೆ ಸುರಿಸಿತು. ಕ್ಷಾಮವು ಕಣ್ಮ ಯಾಗಿ ದೇಶದ ತುಂಬೆಲ್ಲ ಸುಭಿಕ್ಷೆಯು ತೋರಲು ಜನರ ಭಕ್ತಿಯಿಂದ ಈ ವಿರಕ್ತನನ್ನು ಹಾಡಿ ಕೊಂಡಾಡಿದರು ಅವನ ಮರಣದ ನಂತರ ಮಳೆಯಾಗದಿರಲು ಲಿಂ ದಾಕೃತಿಯನ್ನು ಮಾಡಿ ಅದರ ನೆತ್ತಿಯಲ್ಲಿ ಕರಕಿಯ ಪತ್ರಿಯನ್ನಿಟ್ಟು ಗುರುಸಿದ್ಧಲಿಂಗವೆಂದು ಅವನ ಸ್ಮಾರ ವನ್ನು ಮಾಡಹತ್ತಿರಬಹುದು. ಮುಂದೆ ಈ ಸ್ಮಾರಕ ಸಂಪ್ರದಾಯವಾಗಿ ಜನಪದದಲ್ಲಿ ಬಂದಿರಬಹುದು ಈಗಲೂ ಮಳೆಯಾಗದಿರಲು ಜನರು ಈ ಸಂಪ್ರದಾಯ ವನ್ನು ಭಕ್ತಿಯಿಂದ ಆಚರಿಸುತ್ತಾರೆ.

ಉತ್ತರ ಕರ್ನಾಟಕದಲ್ಲಿ ಮಳೆಬೆಳೆಗಳನ್ನು ಹೇಳು ಹಲಕೆಲವು ಮಠಗಳುಂಟು. ಮಳೆ ಹೋದರೆ ಜನರ ಈ ಮಠಗಳಿಗೆ ನಡೆದುಕೊಳ್ಳುತ್ತಾರೆ. ಈ ಮಠಗ ಸ್ವಾಮಿಗಳು ಮಳೆಯನ್ನು ತರುವೆವೆಂದು ಕರೆಗಂಬಳಿಯ ಕುಂಚಿಗೆ ಹೊತ್ತು ಅವಿಗೆ ಮೆಟ್ಟಿ, ಕೈಯಲ್ಲಿ ಬೆತ್ತವನ ಹಿಡಿದು ಕಣಿ, ಡಿಮ್ಮ ಮೊದಲಾದ ವಾದ್ಯಗಳನ್ನು ನು ಸುತ್ತ ಮಳೆ ಬೆಳೆಯ ಭವಿಷ್ಯವನ್ನು ಜನಪದದಲ್ಲಿ ಸಾರು ದನ್ನು ಪ್ರತ್ಯಕ್ಷ ನೋಡಿ ಮನಗಾಣಬಹುದು. ಬಬಲಾ ಹಾಗೂ ಕೊಡೆಕಲ್ಲ ಮಠದ ಸ್ವಾಮಿಗಳು ಈಗಲು ಈ ರೀತಿಯಲ್ಲಿ ಮಳೆ-ಬೆಳೆಗಳನ್ನು ಸಾರುತ್ತಾರೆ. ಕ ಕಂಬಳಿಯ ಗುರುಸಿದ್ಧನಿಂದಲೇ ಈ ಸ್ವಾಮಿಗಳು ಕ ಕಂಬಳಿಯನ್ನು ಹೊರುತ್ತಿರಬಹುದೇ?

ಈ ಬರಗಾಲ ಬಿದ್ದಾಗ ವಿಜಯನಗರ ರಾಜ ವನ್ನು ಇಮ್ಮಡಿ ಹರಿಹರದೇವನು ಆಳುತ್ತಿದ್ದನು. ಅವನ ಈ ಭೀಕರ ಬರಗಾಲದಲ್ಲಿಯೇ ತುಂಗಭದ್ರಾ ನದಿ

ಒಡ್ಡು ಹಾಕಿಸಿ ಕಾಲುವೆ ಕಟ್ಟಿಸಿ ಜನರಿಗೆ ನೀರಿನ ಅನುಕೂಲತೆಯನ್ನು ಮಾಡಿಕೊಟ್ಟನೆಂದು ಇತಿಹಾಸವು ಹೇಳುವುದು. ಇದೇ ಕನ್ನಡ ಅರಸರು ಕೈಕೊಂಡ ಮೊದಲನೆಯ ನೀರಾವರಿಯ ಯೋಜನೆಯೆಂದು ಹೇಳಬಹುದು. ಮುಂದೆ ಬರಗಾಲಗಳು ಮೇಲಿಂದ ಮೇಲೆ ಕರ್ನಾಟಕದಲ್ಲಿ ಬೀಳಹತ್ತಿದುವು. ಅಂದಿನಿಂದಲೂ ಗುರ್ಜಿಯ ಸಂಪ್ರದಾಯವನ್ನು ಜನರು ಆಚರಿಸುತ್ತ ಬಂದಿದ್ದಾರೆ.

ಮೂಲ ಶಿಕ್ಷಣದ ಅರಿವು

ಅನುವಾದಕರು :– ಶ್ರೀ ಶಿಂತ್ರಿ ಬಸಪ್ಪನವರು, ಧಾರವಾಡ

೧. ಪ್ರಕರಣ

ಐತಿಹಾಸಿಕ ಹಿನ್ನೆಲೆ

ಮೂಲ ಶಿಕ್ಷಣವನ್ನು ಅರಿಯಬೇಕೆನ್ನುವವರು ಆ ಶಿಕ್ಷಣ ವಿಚಾರ ಪ್ರಣಾಲಿಯು ಮಹಾತ್ಮರಲ್ಲಿ ಒಡಮೂಡಲು ಕಾರಣೀಭೂತವಾದ ಅವರ ಅನುಭಗಳ ಅಲ್ಪ ಪರಿಚಯವನ್ನು ಮಾಡಿಕೊಳ್ಳುವದು ಲೇಸು. ಸುಮಾರು ಅರ್ಧ ಶತಮಾನದ ವರೆಗೆ ಮಹಾತ್ಮಾ ಗಾಂಧಿಯವರು ನಮ್ಮ ರಾಷ್ಟ್ರದ ನಾಯಕತ್ವವನ್ನು ವಹಿಸಿದರು. ಆ ಐವತ್ತು ವರ್ಷಗಳಲ್ಲಿ ಜನತೆಯ ಧಾರ್ಮಿಕ, ನೈತಿಕ, ಆರ್ಥಿಕ ಮತ್ತು ಸಾಮಾಜಿಕ ಏಳ್ಗೆಗೋಸ್ಕರ ಹಲವಾರು ಚಳವಳಿಗಳನ್ನು ಹೂಡಿದರು. ೧೯೧೭ರಲ್ಲಿ ಬಿಹಾರ ಪ್ರಾಂತದಲ್ಲಿ ಚಂಪಾರಣ್ಯ ಸತ್ಯಾಗ್ರಹವನ್ನು ಹೂಡಿದರು. ೧೯೨೦ರಲ್ಲಿ ಅಸಹಕಾರ ಅಂದೋಲನವನ್ನು ಕೈಕೊಂಡರು. ಅದೇ ಸಮಯಕ್ಕೆ ಖಾದಿ ಚಳವಳಿಯನ್ನು ಪ್ರಾರಂಭಿಸಿ ಅದರ ಸಂದೇಶವನ್ನು ಹಿಂದುಸ್ತಾನದಲ್ಲೆಲ್ಲ ಬೀರಲು ಇತಿಹಾಸ ಪ್ರಸಿದ್ಧವಾದ ಪ್ರವಾಸವನ್ನು ೧೯೨೭ರಲ್ಲಿ ಕೈಕೊಂಡರು. ೧೯೩೦ರಲ್ಲಿ ಉಪ್ಪಿನ ಸತ್ಯಾಗ್ರಹವನ್ನೂ ೧೯೩೨ರಲ್ಲಿ ಸವಿನಯ ಕಾಯಿದೆಭಂಗ ಚಳವಳಿಯನ್ನೂ ಹೂಡಿದ ನಂತರ ಅಸ್ಪೃಶ್ಯತಾ–ನಿವಾರಣೆಗೋಸ್ಕರ ದೊಡ್ಡದೊಂದು ಅಂದೋಲನವನ್ನು ಪ್ರಾರಂಭಿಸಿ ಪೆಡಂಭೂತದಂತಿದ್ದ ಆ ಸಾಮಾಜಿಕ ಕಲಂಕವನ್ನು ಹೊಡೆದೋಡಿಸಲು ೧೯೩೩ರಲ್ಲಿ ಬಿರುಗಾಳಿಯ ವೇಗದ ಸಂಚಾರವನ್ನು ನಮ್ಮ ದೇಶದ ತುಂಬೆಲ್ಲ ಮಾಡಿದರು. ಕೆಲವು ವರ್ಷಗಳ ನಂತರ ಜನತೆಯ ಆರ್ಥಿಕ ಸುಧಾರಣೆಯನ್ನು ಕುರಿತು ಅಖಿಲ ಭಾರತ ಗ್ರಾಮೋದ್ಯೋಗಗಳ ಚಳವಳಿಯನ್ನು ಊದಿದರು. ಈ ಎಲ್ಲ ಚಳವಳಿಗಳ ಅನುಭವವು ಮಹಾತ್ಮರಿಗಾದುದು ಅಷ್ಟಿಷ್ಟಲ್ಲ. ನಮ್ಮ ಜನರ ದೋಷಗಳನ್ನೂ ಕಷ್ಟ–ಕಾರ್ಪಣ್ಯಗಳನ್ನೂ ದುಃಖ–ದುಮ್ಮಾನಗಳನ್ನೂ ನಿವಾರಿಸಲು ನಮ್ಮ ಶಿಕ್ಷಣದ ತಕ್ಕ ಯೋಜನೆಯು ಒಂದೇ ಒಂದು ಉಪಾಯವೆಂದು ಕೊನೆಗೊಮ್ಮೆ ಕಂಡು ಹಿಡಿದರು. ಮೂಲ ಶಿಕ್ಷಣವು ಅವರು ರಾಷ್ಟ್ರಕ್ಕೆ ನೀಡಿದ ಕೊನೆಯ ಮತ್ತು ಅತಿ ಬೆಲೆಯುಳ್ಳ ಕೊಡುಗೆಯು: ಈ ಶಿಕ್ಷಣದ ಒಳ–ಹೊರಗನ್ನು ಸಂಪೂರ್ಣವಾಗಿ ಅರಿಯಬೇಕೆನ್ನುವವರು ಅದನ್ನು ಮಹಾತ್ಮರು ಸಮರ್ಥಿಸಲು ಕಾರಣೀಭೂತವಾದ ಅವರ ಅನುಭವಗಳತ್ತ ಹಾಗೂ ಪ್ರಸಂಗಗಳತ್ತ ಗಮನವೀಯುವದೊಳಿತು.

ಓಡಿಸಾ ಪ್ರಾಂತದಲ್ಲಿಯ ಬರಗಾಲದ ಕಾಲಕ್ಕೆ ಅವರಿಗೆ ವಿಲಕ್ಷಣವಾದೊಂದು ಅನುಭವವು ಪ್ರಾಪ್ತವಾಯಿತು. ಕ್ಷಾಮಪೀಡಿತರಾದ ಜನರಿಗೆ ತಮ್ಮ ಕೈಲಿಂದಾದಷ್ಟು ಸಹಾಯವನ್ನು ಸಲ್ಲಿಸಬೇಕೆಂಬ ಸದುದ್ದೇಶದಿಂದ ಅವರು ಓಡಿಸಾಕ್ಕೆ ಧಾವಿಸಿದರು. ಅಲ್ಲಿ ಜನರಿಗೆ ಹೊಟ್ಟೆಗೆ ಕೂಳಿದ್ದಿಲ್ಲ; ಮೈಮೇಲೆ ಬಟ್ಟೆಯಿದ್ದಿಲ್ಲ. ದುಡಿಯುವವರಿಗೆ ದುಡಿಮೆಯಿಲ್ಲದ್ದರಿಂದ ಜನರು ಉಪವಾಸದಿಂದ ಬಳಲುತ್ತಿದ್ದರು. ಗಾಂಧೀಜಿಯವರು ಫಂಡನ್ನು ಕೂಡಿಸಿ ಆ ಜನರಿಗೆ ಅನ್ನವನ್ನೂ ಬಟ್ಟೆಯನ್ನೂ ಉಚಿತವಾಗಿ ಹಂಚುವ ವ್ಯವಸ್ಥೆಯನ್ನು ಮಾಡಿದರು. ಬಡಬಗ್ಗರು ಅವರಿದ್ದೆಡೆಗೆ ಓಡುತ್ತ ಬಂದು ಸಹಾಯವನ್ನು ಹೊಂದಿದರು. ಮಹಾತ್ಮರು ಆ ಜನರಿಗೆ ಹೆಚ್ಚು ಸಹಾಯವನ್ನು ಕೊಟ್ಟಂತೆ ಅವರು ಹೆಚ್ಚೆಚ್ಚು ಬೇಡಲಿಕ್ಕೆ ಹತ್ತಿ ಕೆಲಸ ಮಾಡುವ ಶಕ್ತಿಯನ್ನೂ ಉತ್ಸಾಹವನ್ನೂ ಕಳಕೊಂಡರು. ಬರಬರುತ್ತ ಅವರಲ್ಲಿಯ ಆತ್ಮವಿಶ್ವಾಸವೂ ಸ್ವಾಭಿಮಾನವೂ ಹೊರಟಿದ್ದು ಹೋದವು. ಆ ಜನರಿಗೆ ಅನ್ನ-ಅರಿವೆಗಳನ್ನು ಉಚಿತವಾಗಿ ಕೊಟ್ಟದ್ದೇ ಅವರನ್ನು ಈ ಸ್ಥಿತಿಗೆ ತಂದಿತೆಂದು ಅವರಿಗೆ ಹೊಳೆಯಿತು. ತಾವು ಮಾಡಿದ ದಾನವು ಅವರನ್ನು ಸುಧಾರಿಸದೆ ಅವರ ವ್ಯಕ್ತಿತ್ವವನ್ನು ಹಾಳು ಮಾಡಿತು. ಅವರನ್ನು ಸಬಲರನ್ನಾಗಿ ಮಾಡದೆ ದುರ್ಬಲರನ್ನಾಗಿ ಮಾಡಿತು ಮತ್ತು ಎಳ್ಳಷ್ಟೂ ಹಿತವನ್ನು ಮಾಡದೆ ಬಹಳಷ್ಟು ಅಹಿತವನ್ನು ಮಾಡಿತೆಂದು ಅವರಿಗೆ ಮನವರಿಕೆಯಾಯಿತು. ಆ ಜನರಿಗೆ ಆಹಾರ, ವಸ್ತ್ರ ಇಲ್ಲವೆ ಹಣವನ್ನು ಕೊಟ್ಟರೆ ಅದು ನಿಜವಾದ ಸಹಾಯವಾಗಲಾರದು; ಅವರಿಗೆ ಕೆಲಸಕೊಟ್ಟು ಆ ದುಡಿತದಿಂದ ಬಂದ ಹಣದಿಂದ ತಮ್ಮ ಬೇಡಿಕೆಗಳನ್ನು ಪೂರೈಸಿಕೊಳ್ಳುವಂತೆ ಮಾಡುವದೇ ಅವರಿಗೆ ಸಲ್ಲಿಸುವ ಯೋಗ್ಯ ಸಹಾಯವೆಂಬುದನ್ನು ಆಗ ಮನಗಂಡರು. ಆ ದುಡಿತವು ಕೆಲಸ ಮಾಡುವ ಶಕ್ತಿಯನ್ನೂ ಆತ್ಮ ವಿಶ್ವಾಸವನ್ನೂ ಸ್ವಾಭಿಮಾನವನ್ನೂ ಅವರಲ್ಲಿ ತುಂಬುವದು. ಅವರಿಗೆ ಎಂತಹ ಕೆಲಸವನ್ನು ಕೊಡಬೇಕೆಂಬುದರ ಬಗೆಗೆ ಆಲೋಚಿಸತೊಡಗಿದರು. ಅವರಿಗೆ ಕೊಡುವ ಕೆಲಸವು ತೀರ ಸಾದಾ ಇದ್ದು ಎಲ್ಲರಿಗೂ ಸಿಗುವಂತಹದಿರಬೇಕು; ಕೆಲವು ದಿನ ಇಲ್ಲವೆ ವಾರಗಳ ವರೆಗೆ ತರಬೇತಿಯನ್ನು ಕೊಟ್ಟರೆ, ಮಾಡಲು ಸಾಮರ್ಥ್ಯವನ್ನು ಪಡೆಯುವಂತಹ ಕೆಲಸವು ಅದಾಗಿರಬೇಕು; ಎಲ್ಲ ಜನರು ಆ ಕೆಲಸವನ್ನು ಮಾಡಲು ಮುಂದೆ ಬಂದರೆ, ಅದು ಬಹಳ ಖರ್ಚು ಹಿಡಿಯದಂತಹದಿರಬೇಕು. ಅಂತಹ ಕೆಲಸವೆಂದರೆ, ನೂಲುವದು ಮತ್ತು ನೇಯುವದೊಂದೇ ಎಂಬ ನಿರ್ಧಾರಕ್ಕೆ ದೀರ್ಘ ವಿಚಾರದ ನಂತರ ಬಂದು ಮುಟ್ಟಿದರು. ಚಂಖವು ಅಗ್ಗವಾಗಿ ಸಿಗುತ್ತಿದೆ, ನೂಲುವದು ಸುಲಭ; ಅದರಿಂದ ತಯಾರಾಗುವ ವಸ್ತ್ರವು ಮಾನವನ ಮೂಲ ಬೇಡಿಕೆಗಳಲ್ಲೊಂದಾಗಿದೆ.

ಮಹಾತ್ಮರ ಮಾತಿನಲ್ಲಿಯೇ ಹೇಳುವದಾದರೆ:—
“ಜನತೆಯಲ್ಲಿದ್ದ ರೋಗವು ಹಣದ ಕೊರತೆಯಲ್ಲ, ಕೆಲಸದ ಕೊರತೆಯು. ಕೆಲಸವು ಹಣವನ್ನು ತರುತ್ತಿದೆ. ಬಡಬಗ್ಗರಿಗೆ ಅವರವರ ಗುಡಿಸಲುಗಳಲ್ಲಿ ದುಡಿಯಲಿಕ್ಕೆ ಹಚ್ಚಿದರೆ, ಅವರಿಗೆ ಅನ್ನ-ಅರಿವೆಗಳನ್ನು ಪೂರೈಸಿದಂತೆ. ನಮ್ಮ ಜನರಲ್ಲಿದ್ದ ನಿಜವಾದ ರೋಗವು ಆಲಸ್ಯತನ, ಬಡತನವಲ್ಲ; ಕೆಲಸದ ಅಭಾವದ ಮೂಲಕ ಸೋಮಾರಿತನವು ನಮ್ಮ ಜನರಲ್ಲಿ ಸೇರಿ ಈಗ ಅದು ಚಟವಾಗಿ ಪರಿಣಮಿಸಿದೆ. ನಮ್ಮ ಜನರು ಅಧೋಗತಿಗಿಳಿದುದರ ಮೂಲ ಕಾರಣವು ಆಲಸ್ಯತನವು. ಅದನ್ನು ಹೊಡೆದೋಡಿಸಿದರೆ, ನಮ್ಮ ಜನರ ಕಷ್ಟಗಳು ದೂರಾಗುವವು. ಮೇಲಿಂದ ಮೇಲೆ ಬರಗಾಲವು ಸಂಭವಿಸುವದರಿಂದ ಓಡಿಸಾದಲ್ಲಿಯ ಬಹಳಷ್ಟು ಜನರು ಭಿಕ್ಷುಕವೃತ್ತಿಯನ್ನು ಕೈಕೊಂಡಿದ್ದಾರೆ. ಆ ಜನರನ್ನು ದುಡಿಯ ಹಚ್ಚುವದು ಅತಿ ಕಷ್ಟಕರವಾದದ್ದು. ನೂಲುವದನ್ನು ಪುನರುಜ್ಜೀವನಗೊಳಿಸುವದರಲ್ಲಿಯೇ ಆಶಾಂಕುರವಿದೆ.” ಇದುವೇ ಮಹಾತ್ಮರು ಘೋಷಿಸಿದ ಖಾದಿ ಸಂದೇಶದ ಹುಟ್ಟು.

ಖಾದಿಯ ಹುಟ್ಟಿನ ಈ ಅನುಭವವೇ ಮೂಲ ಶಿಕ್ಷಣದ ಉಗಮವು. ನಾಲ್ವತ್ತು ಕೋಟಿ ಜನಸಂಖ್ಯೆಯುಳ್ಳ ಅಂದರೆ ವಿಶ್ವದ ಒಂದು ಐದಾಂಶದಷ್ಟು ಜನಸಂಖ್ಯೆಯುಳ್ಳವರಾದ ನಾವು ಆಹಾರದಲ್ಲಿಯೂ ಬಟ್ಟೆಯಲ್ಲಿಯೂ ಜೀವನಾವಶ್ಯಕವಾದ ಪ್ರತಿಯೊಂದು ವಸ್ತುವಿನಲ್ಲಿಯೂ ಅಸಹಾಯಕರಾಗಿದ್ದೇವೆ. ಭೌತಿಕ ಬಡತನಕ್ಕಿಂತಲೂ ಹೆಚ್ಚು ಉಗ್ರ ಸ್ವರೂಪದ ಆಧ್ಯಾತ್ಮಿಕ ಬಡತನವು ನಮ್ಮಲ್ಲಿದೆ. ಯಾಕಂದರೆ ನಮ್ಮಲ್ಲಿ ಆತ್ಮವಿಶ್ವಾಸವಿಲ್ಲ, ನಮ್ಮ ಸಂಸ್ಕೃತಿಯಲ್ಲಿಯೂ ನಮ್ಮ ವಿಶ್ವಾಸವಿಲ್ಲ; ಪಾಶ್ಚಿಮಾತ್ಯರಿಂದ ಬಂದ ಪ್ರತಿಯೊಂದಕ್ಕೂ ನಾವು ತಲೆದೂಗಿ ಅದನ್ನು ಗೌರವಿಸುತ್ತಿದ್ದೇವೆ. ನಮ್ಮ ಭೌತಿಕ ಬಡತನವು

ನಮ್ಮಲ್ಲಿಯ ಆತ್ಮವಿಶ್ವಾಸವನ್ನೂ ನಮ್ಮ ಕೆಲಸಮಾಡುವ ಶಕ್ತಿಯನ್ನೂ ನಾಶ ಮಾಡಿದೆ. ಅದು ಮುಖ್ಯವಾಗಿ ನಮ್ಮ ಸೋಮಾರಿತನದ ಪರಿಣಾಮವೂ ಅಹುದು, ದೈಹಿಕ ಶ್ರಮವು ಕಡಿಮೆ ತರಗತಿಯದೆಂಬ ನಮ್ಮ ಭಾವನೆಯ ಪರಿಣಾಮವೂ ಅಹುದು. ಎಷ್ಟೋ ಶತಮಾನಗಳಿಂದ ನಡೆದು ಬಂದ ನಮ್ಮ ಸಮಾಜ ರಚನೆಯು ಜಂಗು ತಿಂದು ಹುಳಿತಂತಾಗಿ ಕಾಯಕಕ್ಕೆ ಸಲ್ಲಬೇಕಾದ ಗೌರವವನ್ನು ಕೊಡಲಿಲ್ಲ. ಹಗಲು-ರಾತ್ರಿಯೆನ್ನದೆ ಕಾಯಕಷ್ಟದಿಂದ ದುಡಿದು ಶ್ರೀಮಂತಿಕೆಯನ್ನು ಪಡೆದವನು ಸಮಾಜದಲ್ಲಿ ಕಡಿಮೆ ತರಗತಿಯವನೆಂದು ಗಣಿಸಲ್ಪಟ್ಟನು. ಮಧ್ಯಸ್ಥಗಾರಿಕೆಯಿಂದ ಶ್ರೀಮಂತನಾದ ವ್ಯಾಪಾರಸ್ಥನು ಅವನಿಗಿಂತ ಹೆಚ್ಚಿನ ತರಗತಿಯವನು, ಕಾಯಕಷ್ಟವಿಲ್ಲದೆ ಖಡ್ಗಧಾರಿಯಾಗಿ ಯುದ್ಧ ಮಾಡಿದವನು ವ್ಯಾಪಾರಸ್ಥನಿಗಿಂತ ಹೆಚ್ಚಿನವನು, ಏನೂ ಕಾಯಕಷ್ಟವಿಲ್ಲದ ಧರ್ಮೋಪದೇಶಕನು ಎಲ್ಲಕ್ಕೂ ಶ್ರೇಷ್ಠನೆಂದು ಜನರು ತಿಳಿಯ ಹತ್ತಿದರು. ಇದರ ಪರಿಣಾಮದಿಂದ, ಕೆಳಗಿನ ದರ್ಜೆಯ ಜನರು ಮೇಲಿನವರ ಕೀರ್ತಿಯನ್ನು ತೀಡಲಿಕ್ಕೆ ಹತ್ತಿ, ದಿನಗಳೆದಂತೆ ಕಾಯಕಷ್ಟವು ಕೀಳುತನದ್ದೆಂದು ಗಣಿಸಲ್ಪಟ್ಟು, ಎಲ್ಲರು ದೈಹಿಕ ಶ್ರಮವಿಲ್ಲದ ಜೀವನವನ್ನು ಸಾಗಿಸಲು ಬಯಸಿದರು. ನಮ್ಮ ರಾಜಕೀಯ ಹಾಗೂ ಸಾಮಾಜಿಕ ಅವನತಿ, ನಮ್ಮ ಬಡತನ, ನಮ್ಮ ಪಾರತಂತ್ರ್ಯ, ಇವೆಲ್ಲವುಗಳ ಮೂಲ ಕಾರಣವು ನಮ್ಮ ಮಾನಸಿಕ ಹಾಗೂ ಸಾಮಾಜಿಕ ದುರ್ಬಲತೆಯು. ಭಾರತವು ಚೇತರಿಸಿಕೊಂಡು ಮೇಲಕ್ಕೇಳಬೇಕೆಂದಿದ್ದರೆ, ಪ್ರತಿಯೊಬ್ಬನು ಮೈಮುರಿದು ದುಡಿಯುವಂತಹದೊಂದು ಹೊಸ ಸಮಾಜವನ್ನು ನಾವು ನಿರ್ಮಿಸಬೇಕು. ದುಡಿಮೆಯು ಸ್ವಾಭಾವಿಕವಾಗಿ ನಮ್ಮಲ್ಲಿ ಧೈರ್ಯವನ್ನೂ ಶಕ್ತಿಯನ್ನೂ ಹುಟ್ಟಿಸುತ್ತಿದೆ. ಸುಖಮಯವಾದ ಜೀವನವನ್ನು ಸಾಗಿಸುವ ಸಮಾಜ ರಚನೆಗೆ ಕಾಯಕವೇ ತಳಹದಿಯೆಂದು ಗಾಂಧೀಜಿಯವರು ಕಂಡುಹಿಡಿದರು. ಅಂತಹ ಸಮಾಜವನ್ನು ರಚಿಸಲಿಚ್ಛಿಸುವ ಯಾವುದೇ ಶಿಕ್ಷಣವು ಮೇಲೆ ಹೇಳಿದ ಅಭಿಪ್ರಾಯವನ್ನು ಸ್ವಾಗತಿಸುವಂತಹದಿರಬೇಕು, ಹಾಗೂ ಸಮಾಜದಲ್ಲಿ ಕಾಯಕದ ಗೌರವವನ್ನು ಮನ್ನಿಸುವಂತಹದಿರಬೇಕು. ಇದುವೇ ಮೂಲ ಶಿಕ್ಷಣಕ್ಕೆ ಅತ್ಯಗತ್ಯವಾಗಿ ಬೇಕಾಗಿದ್ದ ತತ್ತ್ವವು.

೧೯೩೭ರಲ್ಲಿ ವರ್ಧಾ ಪಟ್ಟಣದಲ್ಲಿ ಕಲೆತ ಶಿಕ್ಷಣ ತಜ್ಞರ ಸಮ್ಮೇಲನದಲ್ಲಿ ತಮ್ಮ ವಿಚಾರ ತರಂಗಗಳನ್ನು ಮಂಡಿಸುವ ಮೊದಲು ಎಷ್ಟೋ ವರ್ಷಗಳ ವರೆಗೆ ಗಾಂಧೀಜಿಯವರು ಈ ರಾಷ್ಟ್ರೀಯ ದೊಡ್ಡ ದೊಡ್ಡ ಸಮಸ್ಯೆಗಳ ಬಗೆಗೆ ಆಲೋಚನೆ ಮಾಡಿರಲೇಬೇಕು. ಈ ಕೈಪಿಡಿಯ ಗ್ರಂಥಕಾರರು ಆ ಸಮ್ಮೇಲನದಲ್ಲಿ ಕಲೆತವರಲ್ಲೊಬ್ಬರಾಗಿದ್ದರು. ಆಗ ಗಾಂಧೀಜಿಯವರು ಶಿಕ್ಷಣದ ಸಮಸ್ಯೆಯ ಬಗೆಗೆ ತಮ್ಮ ವಿಚಾರಗಳನ್ನು ಹೇಗೆ ಮಂಡಿಸಿದರೆಂಬುದು ಅವರ ಜ್ಞಾಪಕದಲ್ಲಿದೆ. ನಮ್ಮ ಜನರಿಗೋಸ್ಕರ ಹೊಸದೊಂದು ಮಾದರಿಯ ರಾಷ್ಟ್ರೀಯ ಶಿಕ್ಷಣವು ಅವಶ್ಯವಾಗಿ ಬೇಕೆಂಬುದರ ಬಗೆಗೆ ಭಿನ್ನಾಭಿಪ್ರಾಯವೇ ಇರಲಿಲ್ಲ. ನಮ್ಮ ದೇಶದಲ್ಲಿಯ ಕಲಿಯುವ ವಯಸ್ಸಿನೊಳಗಿನ ಎಲ್ಲ ಮಕ್ಕಳಿಗೂ ಆ ಶಿಕ್ಷಣವು ಸಾರ್ವತ್ರಿಕವಾಗಿ ಲಭಿಸುವಂತಹದಿರಬೇಕು. ಅದಕ್ಕೋಸುಗ ಬೇಕಾಗುವ ಅಪಾರವಾದ ಹಣವನ್ನು ಹೇಗೆ ದೊರಕಿಸಬೇಕು? ಈ ಸಮಸ್ಯೆಯನ್ನು ಬಗೆ ಹರಿಸಲು ಕ್ರಾಂತಿಕಾರಕವಾದೊಂದು ಉಪಾಯವನ್ನು ಮಂಡಿಸಿದರು. ದುಡಿಮೆಯು ಶಿಕ್ಷಣದ ತಳಹದಿಯಾಗಿರುವದರಿಂದ ಆವುದಾದರೊಂದು ಕಾಯಕವನ್ನು ಮಕ್ಕಳು ಕೈಕೊಂಡು ತಮ್ಮ ಶಿಕ್ಷಣವು ಮುಗಿಯುವ ವರೆಗೆ ಅವರಲ್ಲಿ ದುಡಿಯುತ್ತಾರೆ. ಆ ದುಡಿತದ ಫಲದಿಂದ ಹಣವು ಬರಬಹುದಲ್ಲವೇ? ನಮ್ಮದು ಬಡ ದೇಶವು. ಮೊದಲೇ ದುಡ್ಡಿನ ವ್ಯವಸ್ಥೆಯನ್ನು ಮಾಡಿಟ್ಟುಕೊಂಡು ಆ ಮೇಲೆ ಎಲ್ಲ ಮಕ್ಕಳಿಗೆ ಶಿಕ್ಷಣವನ್ನು ಪೂರೈಸಬೇಕೆಂದರೆ, ನಾವು ಎಷ್ಟೋ ವರ್ಷಗಳ ವರೆಗೆ ದಾರೀ ಕಾಯುತ್ತ ಸುಮ್ಮನೆ ಕೂಡ್ರಬೇಕಾಗುವದು. ಎಲ್ಲ ಮಕ್ಕಳಿಗೆ ಸಾರ್ವತ್ರಿಕವಾಗಿ ಶಿಕ್ಷಣವನ್ನು ಕೊಡಲು ಒಂದೇ ಒಂದು ಶಕ್ಯವಾದ ವ್ಯಾವಹಾರಿಕ ಉಪಾಯವೆಂದರೆ ಮಕ್ಕಳು ತಮ್ಮ ದುಡಿಮೆಯಿಂದ ದುಡ್ಡನ್ನು ಗಳಿಸಿ ನಾಳೆಯ ಖರ್ಚನ್ನು ಸಾಗಿಸಲು ಸಹಾಯಕರಾಗಬೇಕು. ಮೂಲ ಶಿಕ್ಷಣದಲ್ಲಿ ಇದಕ್ಕೆ ಸ್ವಾವಲಂಬಿ ತತ್ತ್ವವೆಂಬ ಹೆಸರಿದೆ. ಇದನ್ನು ಕುರಿತು ಅನೇಕರಿಂದ ಅನೇಕ ತೆರನಾಗಿ ತಪ್ಪು ಕಲ್ಪನೆಗಳೂ ಲೇಖಗಳೂ ಬರೆಯಲ್ಪಟ್ಟಿವೆ. ಅವುಗಳ ಬಗ್ಗೆ ಮುಂದೆ ಸಂದರ್ಭೋಚಿತವಾಗಿ ಬರೆಯಲಾಗುವದು.

(ಮುಂದುವರಿಯುವದು)

ಮಹಾತ್ಮಾಜಿಯವರು

ಜಗತ್ತಿಗೆ ಬೀರಿದ ಸಂದೇಶಗಳು

ಲೇಖಕರು:- **ಶ್ರೀ ಜಿ. ಬಿ. ಇಚ್ಚಂಗಿ,** ಶಿಕ್ಷಕ ವಿದ್ಯಾರ್ಥಿ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ ಧಾರವಾಡ.

[೧೯೫೫ನೆಯ ಚರಖಾ ಜಯಂತಿಯ ಕಾಲಕ್ಕೆ ಕ. ಗಂ. ಸ. ಟ್ರೀ. ಕಾ. ದಲ್ಲಿ ಏರ್ಪಡಿಸಿದ ನಿಬಂಧ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದುದು. ಪ್ರ. ಸಂ.]

ಜಗತ್ತಿನಲ್ಲಿ ಸತ್ಯ, ನ್ಯಾಯ, ಧರ್ಮಗಳ ಅಭಾವವಾಗಿ ಅನ್ಯಾಯ, ಅಶಾಂತಿಗಳು ತಲೆದೋರಲು ಪರಮಾತ್ಮನು ಓರ್ವ ಮಹಾತ್ಮರ ಅವತಾರ ಧರಿಸಿ ಭೂಮಿಗಿಳಿದು ಲೋಕದಲ್ಲಿಯ ಅಸಮಾಧಾನ, ಅಸಂತುಷ್ಟತೆಗಳನ್ನು ಹೋಗಲಾಡಿಸುತ್ತಾನೆ. ಇಂಥ ಮಹತ್ಕಾರ್ಯಕ್ಕಾಗಿಯೇ ಬುದ್ಧ, ಬಸವೇಶ್ವರ, **ಕ್ರೈಸ್ತ,** ಪೈಗಂಬರರೇ ಮೊದಲಾಗಿ ಜಗತ್ತಿನಲ್ಲಿ **ಜನ್ಮವೆತ್ತಿ ಲೋಕ** ಕಲ್ಯಾಣ ಮಾಡಿ ಮಹಾತ್ಮರೆಂದೆನಿಸಿಕೊಂಡು ಅಮರರಾಗಿರುತ್ತಾರೆ.

ಇದೇ ಪ್ರಕಾರ ನಮ್ಮ ರಾಷ್ಟ್ರಪಿತ ಮೋಹನದಾಸರ ಅವತಾರವು ನಮ್ಮ ಪುಣ್ಯ ಭೂಮಿಯಲ್ಲಾಗಿ ಇಡಿಯ ಲೋಕದ ಉದ್ಧಾರಕ್ಕಾಗಿ ತಮ್ಮ ಇಡಿಯ ಆಯುಷ್ಯವನ್ನೇ ಮುಡುಪಾಗಿಟ್ಟರು ಎಂದರೆ ಅತಿಶಯೋಕ್ತಿಯಾಗಲಾರದು. ಅಂತೆಯೇ ಅವರ ಅಮರ ಸಂದೇಶಗಳತ್ತ ಜಗತ್ತಿನ ಎಲ್ಲ ರಾಷ್ಟ್ರಗಳ ದೃಷ್ಟಿಯೂ ಕೇಂದ್ರೀಕೃತವಾಗಿದೆ.

ಮಾನವನು ಮಾನವನಾಗಿಯೇ ಬಾಳಿ ಬದುಕಬೇಕಾದರೆ ಸತ್ಯವನ್ನೇ ತನ್ನ ಆರಾಧ್ಯ ದೇವತೆಯನ್ನಾಗಿ ಮಾಡಿಕೊಳ್ಳಬೇಕು. ಅಂದರೆ ಜೀವನದಲ್ಲಿ ಶಾಂತಿ ಸೌಖ್ಯತೆಗಳು ನೆಲೆಸುವವು. ಸತ್ಯವು ಮೈಗೂಡಿ ಬರಬೇಕಾದರೆ ಪ್ರೇಮ ಮತ್ತು ಅಹಿಂಸೆಗಳ ಹೆದ್ದಾರಿಗಳಿಂದಲೇ ಸಾಗಬೇಕು. ಅಂದರೆ ಮಾನವನು ಸಕಲ ಪ್ರಾಣಿಗಳಲ್ಲಿ ಪ್ರೀತಿಯುಳ್ಳವನಾಗಬೇಕು. ಇದರಂತೆ ಅಹಿಂಸೆಯಲ್ಲಿಯೂ ಅಚಲ ವಿಶ್ವಾಸವುಳ್ಳವನಾಗಬೇಕು.

ಅಹಿಂಸೆಯೆಂದರೆ ಕೇವಲ ಜೀವ ಹಿಂಸೆಮಾಡುವದಷ್ಟೇ ಅಲ್ಲ ಒಬ್ಬರನ್ನೊಬ್ಬರು ದ್ವೇಷಿಸುವದು, ಒಬ್ಬರ ಸೊತ್ತನ್ನೊಬ್ಬರು ಅನ್ಯಾಯವಾಗಿ ಅಪಹರಿಸುವದು ಅನ್ಯ ಧರ್ಮದವರ ಬಗ್ಗೆ ಕುತ್ಸಿತ ಮತ್ತು ಕೀಳು ಭಾವನೆಯನ್ನು ತಾಳುವದು. ಅನ್ಯರ ಮನ ನೋಯುವಂತೆ ಮಾತಾಡುವದು ಇಲ್ಲವೆ ಹೀನ ಕೃತ್ಯ ಗೈಯುವದು, ಇವೆಲ್ಲವುಗಳು ಹಿಂಸೆಯೇ ಎಂದೂ, ಯಾರೂ ಇಂಥ ಕೃತಿ ಎಸಗಬಾರದೆಂದೂ ಬಾಪೂ ಹೇಳಿದ್ದಾರೆ.

ಪ್ರತಿಯೊಬ್ಬನಲ್ಲಿ ವಿಶ್ವಾಸ ನಂಬುಗೆಗಳು ಇರಬೇಕೆಂದೂ, ಇವುಗಳಿಲ್ಲದೆ ಮಾನವನ ಬಾಳುವೆಯು ಸುಖರೂಪವಾಗಿ ಯಶಸ್ವಿಯಾಗಿ ಸಾಗಲಾರದೆಂದೂ ಬಾಪೂಜಿಯವರು ಬೋಧಿಸಿದ್ದಾರೆ. ಅಂತೆಯೇ ಅವರು ಹೀಗೆ ಹೇಳಿದ್ದಾರೆ. "ವಿಶ್ವಾಸ ಮತ್ತು ನಂಬುಗೆಯು ಅತಿ ಸಣ್ಣ ಗಾಳಿಗೂ ಮುದುಡಿಕೊಳ್ಳುವಂತ ಹೂವಲ್ಲ. ಅದು ಶಾಶ್ವತವಾಗಿ ನಿಲ್ಲುವ ಹಿಮಾಚಲದಂತಿದೆ" ಎಂದು ಹೇಳಿದ್ದಾರೆ. ಅಂದರೆ ಪ್ರತಿಯೊಬ್ಬ ಮಾನವನಾಗಲಿ, ಸಮಾಜವಾಗಲಿ ತನ್ನ ನ್ಯಾಯವಾದ ಕಾರ್ಯದಲ್ಲಿ ಅಚಲವಾದ ವಿಶ್ವಾಸ, ನಂಬುಗೆಗಳನ್ನು ಇಟ್ಟುಕೊಂಡು ಕಾರ್ಯ ಪ್ರವೃತ್ತರಾಗಬೇಕೆಂದು ಹೇಳಿದ್ದಾರೆ.

ಮಾನವರು ದೇವರಲ್ಲಿ ಅಚಲ ಶ್ರದ್ಧೆಯುಳ್ಳವರಾಗಬೇಕು. ಶ್ರದ್ಧೆಯುಂಟಾಗಬೇಕಾದರೆ ಪ್ರಾರ್ಥನೆಯು ಅವಶ್ಯವಾಗಿ ಆಚರಿಸಬೇಕಾದ ಸಾಧನವಾಗಿದೆ. ಪ್ರಾರ್ಥನೆಯಿಂದ ಶ್ರದ್ಧೆಯೂ, ಶ್ರದ್ಧೆಯಿಂದ ಭಕ್ತಿಯೂ ಉತ್ಪನ್ನವಾಗಿ ಮಾನವನು ತನ್ನ ಆತ್ಮೋದ್ಧಾರ ಮಾಡಿಕೊಳ್ಳಲು ಅವಕಾಶದೊರೆಯುತ್ತದೆಂದು ಗಾಂಧೀಜಿಯವರು ಹೇಳಿದ್ದಾರೆ. ಆತ್ಮೋದ್ಧಾರವೆಂದರೆ ಸ್ವಾರ್ಥ, ಇಂದ್ರಿಯ

ಮತ್ತು ಮನೋವಿಕಾರಗಳನ್ನು ಮಾನವನು ತನ್ನ ಹಿಡಿತದಲ್ಲಿಟ್ಟುಕೊಳ್ಳುವದು. ಆತ್ಮೋದ್ಧಾರಕ್ಕೆ ಸತ್ಯವೇ ರಾಜಮಾರ್ಗ ಯಾಕಂದರೆ "ಮಾನವನಿಗೆ ಸತ್ಯವೇ ಮೊದಲು ಅನ್ವೇಷಿಸತಕ್ಕ ಪ್ರಥಮ ವಸ್ತು; ಸೌಂದರ್ಯ, ಶುಭ ಇವು ಆ ಮೇಲೆ ಅದನ್ನು ಹಿಂಬಾಲಿಸುವವು" ಎಂದು ಒಂದು ಪ್ರಸಂಗದಲ್ಲಿ ಹೇಳಿದ್ದಾರೆ. ಗಾಂಧಿಜೀಯವರಿಗೆ ಪ್ರಾರ್ಥನೆಯಲ್ಲಿ ಅಚಲಶ್ರದ್ಧೆ, ವಿಶ್ವಾಸಗಳಿದ್ದವು. ದೇವರ ಬಗ್ಗೆ ಒಮ್ಮೆ ಅವರು ಹೀಗೆ ಹೇಳಿರುತ್ತಾರೆ. "ಗಾಳಿ ನೀರಿಲ್ಲದೆ ಬದುಕಿದರೂ ಬದುಕಬಹುದು ಆದರೆ ದೇವರನ್ನು ಬಿಟ್ಟು ಬದುಕಲಾರೆ. ಬಾಳಲಾರೆನೆಂದು ಹೇಳಿದ್ದಾರೆ" ಅಂತೆಯೇ ಅವರು ಎಂಥ ಪ್ರಸಂಗದಲ್ಲಿಯೂ ಪ್ರಾತಃಕಾಲದ ಮತ್ತು ಸಾಯಂಕಾಲದ ಪ್ರಾರ್ಥನೆಯನ್ನು ಬಿಡುತ್ತಿದ್ದಿಲ್ಲ. ಪ್ರಾರ್ಥನೆಯ ಪೀಠಿಕೆಯಿಂದಲೇ ಅವರ ಆಶ್ರಮದ ನಿತ್ಯ ಕಾರ್ಯಕ್ರಮಗಳು ಸಾಂಗವಾಗುತ್ತಿದ್ದವು.

ಮಾನವನ ಕಲ್ಯಾಣಕ್ಕಾಗಿ ಸ್ವಾರ್ಥತ್ಯಾಗ, ದೃಢ ಸಂಕಲ್ಪ, ಆತ್ಮ ಶುದ್ಧೀಕರಣಗಳು ಅವಶ್ಯವಾಗಿ ಬೇಕೆಂದು ಬಾಪೂಜಿಯವರು ಸಾರಿದ್ದಾರೆ. ಮಾನವನು ತನ್ನ ಸುಖಕ್ಕಾಗಿ ಚಿಂತಿಸುತ್ತಿರುವಂತೆ ತನ್ನ ನೆರೆ ಹೊರೆಯವರ ದೀನ ದರಿದ್ರರ ಸುಖಕ್ಕಾಗಿಯೂ ಹಗಲಿರುಳು ಚಿಂತಿಸಬೇಕಲ್ಲದೆ ಇವರಿಗಾಗಿ ತನ್ನ ಕೈಲಾದಮಟ್ಟಿಗೆ ಸಹಾಯ ಮಾಡಬೇಕು. ಸಮಾಜ ಸುಧಾರಣೆಯಾಗಬೇಕಾದರೆ ಸಮಾಜದ, ರಾಷ್ಟ್ರದ ಮುಂದಾಳುಗಳು ಸ್ವಾರ್ಥತ್ಯಾಗಮಾಡಿ ಮುಂದೆ ಬರಬೇಕೆಂದೂ, ಇಲ್ಲವಾದರೆ ಸಮಾಜ ಸುಧಾರಣೆಯು ಆಗಲಾರದೆಂದೂ ಗಾಂಧೀಜಿಯವರು ಹೇಳಿದ್ದಾರೆ.

ಮಾನವನು ತನ್ನ ಕಾರ್ಯದಲ್ಲಿ ದೃಢಸಂಕಲ್ಪವುಳ್ಳವನಾಗಿರಬೇಕು. ದೃಢ ಸಂಕಲ್ಪವಿಲ್ಲದ ಕಾರ್ಯಗಳು ಅರ್ಧಕ್ಕೇ ನಿಂತು ಅಯಶಸ್ವಿಯಾಗಬಹುದು. ಮತ್ತು ಇದರಿಂದ ಅಪಮಾನವೂ ಆಗುವ ಸಂಭವವಿರುತ್ತದೆಂದು ಹೇಳಿದ್ದಾರೆ. ಆದರೆ ನಮ್ಮ ಕಾರ್ಯಗಳಲ್ಲಿಯ ಧ್ಯೇಯಗಳಷ್ಟೇ ನಮ್ಮ ಉಪಾಯ ಮತ್ತು ಯೋಜನೆಗಳು ಶುದ್ಧವಾಗಿರಬೇಕು. ಅಂದರೇನೇ ನಮ್ಮ ಕಾರ್ಯಗಳು ಕೈಗೂಡುವವು. ತದ್ವಿರುದ್ಧವಾಗಿ ನಮ್ಮ ಧ್ಯೇಯಗಳಲ್ಲಿ ಅಸತ್ಯ, ಅನ್ಯಾಯಗಳು ಇದ್ದರೆ ಆ ಕಾರ್ಯಗಳು ಕೈಗೂಡಲಾರವೆಂದು ಹೇಳುತ್ತಿದ್ದರು.

ಮಾನವನಿಗೆ ಆತ್ಮ ಶುದ್ಧೀಕರಣವೂ ಒಂದು ಪವಿತ್ರ ಸಾಧನವೆಂದು ಬಾಪೂ ಹೇಳಿದ್ದಾರೆ. ಆತ್ಮ ಶುದ್ಧೀಕರಣಕ್ಕೆ ಮೌನ, ಉಪವಾಸಗಳೇ ಯೋಗ್ಯ ಮಾರ್ಗವೆಂದು ಗಾಂಧೀಜಿ ಹೇಳಿದ್ದಾರೆ. ಅಂತೆಯೇ ಅವರು ಯಾವದೊಂದು ವಿಷಯದ ಇಲ್ಲವೆ ಘಟನೆಯ ಬಗ್ಗೆ ತಮ್ಮ ಮನಸ್ಸಿಗೆ ದುಃಖವೆನಿಸಿದಾಗಲೆಲ್ಲ ಅನೇಕ ದಿನಗಳ ಉಪವಾಸ, ಮೌನ ವ್ರತವನ್ನು ಆಚರಿಸುತ್ತಿದ್ದರು.

ಮಾನವನು ಪಾಪಕ್ಕೆ ಕೈ ಹಾಕಬಾರದು. ಯಾಕಂದರೆ ಪಾಪದ ಪ್ರಾಯಶ್ಚಿತ್ತವು ಮರಣಾನಂತರವಾಗದೆ, ಜೀವಂತರಿದ್ದಾಗಲೇ ಆಗುವದೆಂದೂ; "ಪಾಪಕ್ಕೆ ಹೆದರಿ ಮಾನವಕೋಟಿಯ ಸೇವೆಗೈಯುವವನೇ ನಿಜವಾದ ಪವಿತ್ರಾತ್ಮನೆಂದೂ ಬಾಪೂ ಹೇಳಿದ್ದಾರೆ. ಅಂದರೆ ಯಾವನೊಂದು ಸಮಾಜವಾಗಲಿ, ರಾಷ್ಟ್ರವಾಗಲಿ ಪಾಪದ ಕೆಲಸಕ್ಕೆ ತೊಡಗದೆ ಪರಹಿತದ ಕಾರ್ಯವನ್ನೇ ಮಾಡಬೇಕೆಂದು ಇವರ ಸ್ಪಷ್ಟ ಅಭಿಪ್ರಾಯವಾಗಿದೆ.

ಸೇವಾ ಧರ್ಮವೇ ಮಾನವಕುಲದ ಧರ್ಮವೆಂದು ಬಾಪೂ ಹೇಳಿದ್ದಾರೆ. ದೀನ, ದರಿದ್ರರ ಸೇವೆಯೇ ಈಶ ಸೇವೆಯೆಂದು ತಿಳಿದು ಆಚರಿಸಬೇಕೆಂದೂ ಸಹಬಂಧುಗಳ ಮತ್ತು ತನ್ನ ಸಮಾಜದ ರಾಷ್ಟ್ರದ ಸೇವೆಗಾಗಿ ಪ್ರತಿಯೊಬ್ಬನು ತ್ಯಾಗ, ಪ್ರೇಮ, ಸೇವೆ ಎಂಬ ತತ್ವಗಳನ್ನು ಆಚರಣೆಯಲ್ಲಿ ತಂದು ಅವಿರತವಾಗಿ ಪರಿಶ್ರಮಿಸಬೇಕೆಂದು ಹೇಳಿದ್ದಾರೆ.

ಪ್ರತಿಯೊಬ್ಬ ಮಾನವನಾಗಲಿ, ಸಮಾಜವಾಗಲಿ, ರಾಷ್ಟ್ರವಾಗಲಿ ಸುಖಸಂಪತ್ತಿನಿಂದ ಬಾಳಬೇಕಾದರೆ ದೇವಪುತ್ರರಾದ ಮಾನವ ಕೋಟಿಯಲ್ಲಿ ಮೇಲು, ಕೀಳುಗಳೆಂಬ ಕ್ಷುಲ್ಲಕ ಭಾವನೆಗಳಿಗೆ ಆಸ್ಪದವಿರಬಾರದು. ನೈಸರ್ಗಿಕ ಸಂಪತ್ತುಗಳಾದ ನೀರು ನೆಲಗಳಲ್ಲಿ ಪ್ರತಿಯೊಬ್ಬರಿಗೂ ಸರಿಯಾದ ಅಧಿಕಾರವಿರಬೇಕು. ಅವು ಪ್ರತಿಯೊಬ್ಬರ ಉಪಯೋಗಕ್ಕಾಗಿಯೇ ಇರುವವಲ್ಲದೆ, ಕೆಲವೇ ವ್ಯಕ್ತಿಗಳ ಅಥವಾ ಗುಂಪಿನವರ ಅಥವಾ ಸಮಾಜದವರ ಸುಖಕ್ಕಾಗಿ ಅಲ್ಲವೆಂಬುದನ್ನು ಪ್ರತಿಯೊಬ್ಬನೂ ಅರಿಯಬೇಕೆಂಬುದೇ ಅವರ ಸುಬೋಧೆಯಾಗಿದೆ. ಅಂತೆಯೇ ಭಾರತದಲ್ಲಿಯ ಅಸ್ಪೃಶ್ಯತೆಯನ್ನು ಬಲವಾಗಿ ಖಂಡಿಸಿ ಭಾರತ ಸಂಸ್ಕೃತಿಗೆ ಅಸ್ಪೃಶ್ಯತೆಯು ಒಂದು ಮಹಾಭೂತವಾಗಿ ಬಡಿದು

ಕೊಂಡಿವೆ ಎಂದು ಸಾರಿ ಅವರ ನಿರ್ಮೂಲನೆಗಾಗಿ ತಮ್ಮ ಜೀವವನ್ನೇ ಮುಡುಪಾಗಿಟ್ಟು ಶ್ರಮಿಸಿದರು.

ಪ್ರತಿಯೊಬ್ಬನು ಎರಡನೇಯವರ ಧರ್ಮ, ಸಂಸ್ಕೃತಿ, ಭಾಷೆಗಳ ಬಗ್ಗೆ ಸಮ ದೃಷ್ಟಿಯುಳ್ಳವನಾಗಿ ನಡೆಯಬೇಕಲ್ಲದೆ, ಅವುಗಳ ಬಗ್ಗೆ ಹೀನ ದೃಷ್ಟಿಯನ್ನಿಡುವದಾಗಲಿ, ಉದ್ವೇಗಗೊಳ್ಳುವದಾಗಲಿ ಭೂಷಣವಲ್ಲ. ಮತ್ತು ಪ್ರತಿಯೊಂದು ಧರ್ಮ, ಸಂಸ್ಕೃತಿ, ಭಾಷೆಗಳಲ್ಲಿಯ ಉತ್ತಮಾಂಶವನ್ನು ಆರಿಸಿಕೊಳ್ಳಬೇಕು. ಅಲ್ಲದೆ ಪರಧರ್ಮ ಸಹಿಷ್ಣುತೆಯು ನಮ್ಮಲ್ಲಿ ಮೂಡಬೇಕಲ್ಲದೆ ಒಬ್ಬರನ್ನೊಬ್ಬರು ಪ್ರೀತಿಯಿಂದ ಕಾಣಬೇಕೆಂದು ಹೇಳುತ್ತಾರೆ.

ಯಾವದೊಂದು ಸಮಾಜವಾಗಲಿ, ರಾಷ್ಟ್ರವಾಗಲಿ ಆಕ್ರಮಣಶೀಲ ಪ್ರವೃತ್ತಿಗೆ ಎಡೆಗೊಡಬಾರದೆಂದೂ, ಒಬ್ಬರನ್ನೊಬ್ಬರು ಆಕ್ರಮಿಸುವದು ಮಹಾ ಪಾಪವೆಂದೂ ಹೇಳಿದ್ದಾರೆ. ಒಬ್ಬರನ್ನೊಬ್ಬರು ಸದಸದ್ವಿವೇಕದಿಂದಲೂ ಪ್ರೀತಿಯಿಂದಲೂ ಕಾಣಬೇಕೆಂದೂ ಆಪತ್ಕಾಲದಲ್ಲಿ ಒಬ್ಬರಿಗೊಬ್ಬರು ನೆರವಾಗಬೇಕೆಂದೂ ಹೇಳಿದ್ದಾರೆ. ಯಾಕಂದರೆ ಒಂದು ಸಮಾಜವಾಗಲೀ, ರಾಷ್ಟ್ರವಾಗಲೀ ತನ್ನಷ್ಟಕ್ಕೆ ತಾನು ಸುಖ ಶಾಂತಿಗಳನ್ನು ನೆಲೆಸಿಕೊಂಡು ಕುಳಿತರೆ ಅದರಿಂದ ನಿಜವಾದ ಸೌಖ್ಯವು ಸಿಗಲಾರದು. ಹೇಗೆಂದರೆ ಮಾನವನ ದೇಹದ ಯಾವದಾದರೊಂದು ಅವಯವಕ್ಕೆ ಘಾಯವಾದರೆ ಇಡಿಯ ದೇಹಕ್ಕೇ ವೇದನೆಯಾಗುವದಲ್ಲದೆ ಆ ಒಂದೇ ಅವಯವಕ್ಕಲ್ಲ. ಇದರಂತೆ ಯಾವದಾದರೊಂದು ಸಮಾಜದಲ್ಲಾಗಲೀ, ರಾಷ್ಟ್ರದಲ್ಲಾಗಲೀ ಅಸಂತೋಷ, ಅಶಾಂತಿಗಳು ಉದ್ಭವಿಸಿದರೆ ಅವುಗಳ ಜ್ವಾಲೆಗಳು ನೆರೆಯ ಸಮಾಜಕ್ಕಾಗಲೀ, ರಾಷ್ಟ್ರಕ್ಕಾಗಲೀ ಹಬ್ಬದೇ ಇರಲಾರವು. ಕಾರಣ ಯಾವದೊಂದು ಸಮಾಜವಾಗಲೀ, ರಾಷ್ಟ್ರವಾಗಲೀ ಗಂಡಾಂತರದಲ್ಲಿದ್ದಾಗ ಇಲ್ಲವೆ ಕೊರತೆಯಲ್ಲಿದ್ದಾಗ, ಉಳಿದೆಲ್ಲ ಸಮಾಜಗಳಾಗಲಿ, ರಾಷ್ಟ್ರಗಳಾಗಲಿ ತಮ್ಮ ಶಕ್ತಿಮೀರಿ ಸಹಾಯ ಮಾಡಬೇಕೆಂದು ಹೇಳಿದ್ದಾರೆ. ತಾನು ಕಷ್ಟದಲ್ಲಿದ್ದಾಗ ಬೇರೆಯವರ ಸಹಾಯವನ್ನು ಅಪೇಕ್ಷಿಸುವಂತೆ ಉಳಿದವರೂ ಅಪೇಕ್ಷಿಸುತ್ತಾರೆಂಬದನ್ನು ಪ್ರತಿಯೊಬ್ಬರು ತಿಳಿಯಬೇಕೆಂಬುದೇ ಗಾಂಧಿಯವರ ಆಶೆಯಾಗಿತ್ತು.

ಪ್ರತಿಯೊಬ್ಬರು ಸ್ವಾವಲಂಬಿಯಾಗಿ ತಮ್ಮ ಆಹಾರ, ಆಚ್ಛಾದನ, ಆಶ್ರಯಗಳನ್ನು ತಾವೇ ಸಂಪಾದಿಸಿಕೊಳ್ಳುವಂತಾಗಬೇಕು. ಅವುಗಳನ್ನು ಹೆರವರಿಂದ ಬೇಡಿಯಾಗಲಿ, ಕೊಂಡಾಗಲಿ ತರುವದು ಬಹಳೇ ನಾಚಿಕೆಗೇಡಿಯಾದ ವಿಷಯು. ಪ್ರತಿಯೊಬ್ಬರು ತಮ್ಮ ತಮ್ಮ ಗೃಹೋದ್ಯೋಗಗಳನ್ನು ಬೆಳೆಯಿಸಿಕೊಂಡು ಆರ್ಥಿಕ ಸಮಾನತೆಯನ್ನು ಕಾಯ್ದುಕೊಳ್ಳಬೇಕು. ಮುದುಕರು, ಅಂಗವಿಕಲರು, ಬಾಲಕರು ಇವರ ಹೊರ್ತಾಗಿ ಪ್ರತಿಯೊರ್ವ ಸ್ತ್ರೀ ಪುರುಷರು ಒಂದಿಲ್ಲೊಂದು ಉದ್ಯೋಗ ಮಾಡಿದರೇನೇ ಅವರಿಗೆ ಊಟ ಮಾಡಲು ಅಧಿಕಾರವಿರುವದೆಂದೂ ದುಡಿಯದವರಿಗೆ ಊಟ ಮಾಡುವ ಅಧಿಕಾರವೇ ಇಲ್ಲವೆಂದೂ ಹಾಗೆ ದುಡಿಯದೆ ಊಟ ಮಾಡುವದು ಮಹಾ ಪಾಪಕರವೆಂದೂ; ಅಂಥವರು ಸಮಾಜದ, ರಾಷ್ಟ್ರದ ಘಾತುಕರೆಂದೂ ಅಂಥವರಿಗೆ ಸಮಾಜ, ರಾಷ್ಟ್ರ ಮುಂದರಿಯಲಾರವೆಂದೂ ಹೇಳಿ ಅಂತೆಯೇ ಇವರು ಭಾರತದಲ್ಲಿ ವಸ್ತ್ರೋತ್ಪಾದನೆಯಂಥ ಮಹಾ ಉದ್ಯೋಗವನ್ನು ಪ್ರಾರಂಭಿಸಿ, ಕೋಟ್ಯಂತರ ಜನರಿಗೆ ಅನ್ನದ ಮಾರ್ಗ ಮಾಡಿಕೊಟ್ಟರು.

ಪ್ರತಿಯೊಂದು ರಾಷ್ಟ್ರವು ಕೂಡಾ ಸ್ವಾವಲಂಬಿಯಾಗಿ ಬಾಳಬೇಕೆಂದೂ, ಅನ್ನ ಅರಿವೆ ಮೊದಲಾದ ಜನಜೀವನೋಪಾಯಕ್ಕಾಗಿ ಪರರಾಷ್ಟ್ರಗಳನ್ನು ಕೈಯೊಡ್ಡಿ ಬೇಡಬಾರದೆಂದೂ, ಹಾಗಾದಲ್ಲಿ ಆ ರಾಷ್ಟ್ರದ ಆಡಳಿತೆಯಲ್ಲಿ ಯಾವುದೋ ಒಂದು ಮಹಾ ದೋಷವಿದೆಯೆಂದು ತಿಳಿಯಬೇಕೆಂದೂ ಹೇಳಿದ್ದಾರೆ.

ಯಾವದೊಂದು ರಾಷ್ಟ್ರವೂ ಗುಲಾಮಗಿರಿಯಲ್ಲಿರದೆ ತನ್ನ ಸ್ವಾತಂತ್ರ್ಯಕ್ಕಾಗಿ ಅಹಿಂಸಾತ್ಮಕ ಹೋರಾಟವನ್ನು ಹೂಡಿ ಸ್ವಾತಂತ್ರ್ಯಗಳಿಸಿ ಪ್ರತಿಯೊಬ್ಬ ಪ್ರಜೆಯೂ ತನ್ನ ರಾಷ್ಟ್ರದ ಉದ್ಧಾರಕ್ಕಾಗಿ, ಭದ್ರತೆಗಾಗಿ ಸದಾ ಶ್ರಮಿಸಬೇಕು. ಅಲ್ಲದೆ ಅಲ್ಲಿಯ ಎಲ್ಲ ಪ್ರಜೆಗಳಿಗೂ ತನ್ನ ರಾಷ್ಟ್ರದ ಆಗುಹೋಗುಗಳ ಬಗ್ಗೆ ತನ್ನ ಅಭಿಪ್ರಾಯ ವ್ಯಕ್ತಮಾಡಲು, ವಾಕ್ ಸ್ವಾತಂತ್ರ್ಯ, ಲೇಖನ ಸ್ವಾತಂತ್ರ್ಯಗಳು ಇರಲೇಬೇಕು. ಪ್ರಜೆಗಳ ಬಹುಮತಕ್ಕೆ ಬೆಲೆ ಇರಬೇಕು. ಇವುಗಳಿಲ್ಲದೆ ಯಾವದೇ ಸ್ವತಂತ್ರ ರಾಷ್ಟ್ರವೂ ಸಜೀವವೆನಿಸದು. ಪ್ರಜಾಪ್ರಭುತ್ವವೆನಿಸದು ಎಂದು ಅಂದಿದ್ದಾರೆ.

" ಮಹಾತ್ಮಾಜಿಯವರು ಜಗತ್ತಿಗೆ ಬೀರಿದ ಸಂದೇಶಗಳು "

ಯಾರೊಬ್ಬರಾಗಲಿ ಅಥವಾ **ಯಾವದೊಂದು ರಾಷ್ಟ್ರವಾಗಲಿ ತನಗಾದ ಅನ್ಯಾಯದ** ಬಗ್ಗೆ, **ಶಾಂತಿಯುತ** ವಾದ **ಅಹಿಂಸಾತ್ಮಕ** ಸತ್ಯಾಗ್ರಹವನ್ನು ಹೂಡಿ ನ್ಯಾಯ ವನ್ನು **ಪಡೆಯಬೇಕಲ್ಲದೆ;** ಅನ್ಯಾಯಕ್ಕೆ ಕಾರಣವಾದ ವ್ಯಕ್ತಿಯ ಇಲ್ಲವೆ ರಾಷ್ಟ್ರದ ಬಗ್ಗೆ ತಿರಸ್ಕಾರವಾಗಲೀ ದ್ವೇಷವಾಗಲಿ ಇರಬಾರದು. ಎಂಬುದೇ ಅವರ ದಿವ್ಯ ವಾಣಿಯಾಗಿದೆ. ಅಂತೆಯೇ ಅವರು ಬ್ರಿಟಿಶರ ವಿರುದ್ಧ ಶಾಂತಿಯುತ ಸತ್ಯಾಗ್ರಹ ಹೂಡಿ ಅವರಿಂದ ಪಡಬಾರದ ಕಷ್ಟಗಳನ್ನು ಅನುಭವಿಸಿ ಕಾರಾಗ್ರಹವಾಸಿಯಾದರೂ, ಬ್ರಿಟಿಶರ ಬಗ್ಗೆ ಅವರಲ್ಲಿ ದ್ವೇಷವಾಗಲೀ ತಿರಸ್ಕಾರ ವಾಗಲೀ ಎಳ್ಳಷ್ಟು ಇದ್ದಿದ್ದಿಲ್ಲ. ಅವರ ಬಗ್ಗೆ ಪ್ರೇಮ ಸಹಾನುಭೂತಿಗಳೇ ಇದ್ದವು. ಅಷ್ಟೇಕೆ ಅವರು ಇಂಗ್ಲಂ ಡಕ್ಕೆ ಹೋದಾಗ ಅಲ್ಲಿಯ ಜನರ ಶಿಸ್ತು ಸಂಯಮ ಗಳನ್ನು ಕಂಡು ಅವರನ್ನು ಬಾಯಿ ತುಂಬ ಹೊಗಳಿ ಅವರ ಮುದ್ದು ಮಕ್ಕಳನ್ನು ಎತ್ತಿಕೊಂಡು ಮುದ್ದಾಡಿ ಬಂದಿದ್ದಾರೆ.

ಯಾರೂ ಮದ್ಯವೇ ಮೊದಲಾದ ಮಾದಕ ಪೇಯ ಗಳನ್ನು ಸೇವಿಸಬಾರದು. ಇದರಿಂದ ದೇಹಸಂಪತ್ತು, ಆರ್ಥಿಕ ಸಂಪತ್ತು ನಾಶವಾಗಿ ಕೊನೆಗೆ ಅವನು ರಾಕ್ಷಸೀ ವೃತ್ತಿಗೆ ಇಳಿದು ಸಮಾಜ ಕಂಟಕನಾಗುತ್ತಾನಲ್ಲದೆ, ಯಾವದೇ ಹೇಯ ಕೆಲಸವನ್ನಾದರೂ ಮಾಡುವವ ನಾಗುತ್ತಾನೆಂತಲೂ; ಅದರಂತೆಯೇ ಈ ದುಷ್ಟವ್ಯಸನಕ್ಕೆ ಯಾವದೇ ಸಮಾಜದಲ್ಲಾಗಲಿ ರಾಷ್ಟ್ರದಲ್ಲಾಗಲಿ ಆಸ್ಪದ ವಿದ್ದರೆ ಆ ಸಮಾಜದ ಅಥವಾ ರಾಷ್ಟ್ರದ ವೃಕ್ಷದ ತಾಯಿ ಬೇರುಗಳು ಸಡಿಲಾಗಿ ಅಸಂತುಷ್ಟತೆ ಅನ್ಯಾಯಗಳೆಂಬ ಬಿರುಗಾಳಿಗೆ ಸಿಲುಕಿ ಉರುಳಿ ಬೀಳುವದರಲ್ಲಿ ಸಂಶಯವೇ ಇಲ್ಲ. ಅಲ್ಲದೆ ಇಂಥ ದುಷ್ಟ ವ್ಯಸನಗಳಿಂದ ಬರುವ ಆದಾಯದಿಂದ ಪವಿತ್ರ ಮನಸ್ಸಿನ ಮಕ್ಕಳಿಗೆ ಶಿಕ್ಷಣ ಕೊಡುವದಕ್ಕಿಂತ ಶಿಕ್ಷಣ ಕೊಡದಿರುವದೇ ಲೇಸೆಂದು ಹೇಳಿದ್ದಾರೆ.

ಹೀಗೆ ಗಾಂಧೀಜಿಯವರು ರಾಜನೀತಿ, ಅರ್ಥ ಶಾಸ್ತ್ರ, **ಸಮಾಜ ಸುಧಾರಣೆ,** ಶಿಕ್ಷಣ ಸುಧಾರಣೆ ಹರಿಜ ನೋದ್ಧಾರ, ವಿಶ್ವಬಾಂಧವ್ಯಗಳ ಬಗ್ಗೆ ಅವಿಶ್ರಾಂತವಾಗಿ ನಮ್ಮೆಲ್ಲರ ಮಧ್ಯ ನಿಂತು ೩೫ ವರುಷಗಳ ವರೆಗೆ ಶ್ರಮಿಸಿ ಭಾರತ ಸ್ವಾತಂತ್ರ್ಯ ಬೀಜವನ್ನು ಬಿತ್ತಿ ಅದು ಹುಟ್ಟಿ ಕುಡಿಯಿಡುತ್ತಿರುವಾಗಲೇ ನರರಕ್ಕಸನೋರ್ವನ ಗುಂಡಿಗೆ ಆಹುತಿಯಾಗಿ ಪರಂಧಾಮವನ್ನೈದಿ ಎಂಟು ವರುಷಗಳು ಸಮೀಪಿಸಿದವು.

ಅವರ ದೇಹವು ಇಂದು ಜಗತ್ತಿನಿಂದ ಕಣ್ಮರೆಯಾಗಿ ದ್ದರೂ ಅವರ ಅಮರ ಸಂದೇಶಗಳು ಪ್ರಪಂಚದ ಜನರ ಮನೆ ಮನೆಯಲ್ಲಿಯೂ ಮನದಲ್ಲಿಯೂ ಜಾಜ್ವಲ್ಯಮಾನ ವಾಗಿ ಶುಕ್ರ ನಕ್ಷತ್ರದಂತೆ ಪ್ರಕಾಶಿಸುತ್ತಿವೆ. ಅವರ ಸಂದೇಶ ಗಳು ಇಂದು ಜೀವನದ ಯಾತ್ರೆ ಮಾಡುವ ಪ್ರಪಂಚದ ಮಾನವಕುಲಕ್ಕೆ ದಾರಿ ದೀಪಗಳಾಗಿವೆ. ಅಂದು ಭಾರ ತೀಯರಿಗಷ್ಟೇ ಪೂಜ್ಯವಾಗಿದ್ದ ಪ್ರಿಯವಾಗಿದ್ದ ಅವರ ದಿವ್ಯ ಸಂದೇಶಗಳು ಇಂದು ವಿಶ್ವಕ್ಕೇ ಪೂಜ್ಯವಾಗಿವೆ. ಪ್ರಿಯವಾಗಿವೆ. ಆಗ ಅವರನ್ನು ಕ್ರೂರ ದೃಷ್ಟಿಯಿಂದಲೂ ಹೀನ ದೃಷ್ಟಿಯಿಂದಲೂ ನೋಡುತ್ತಿದ್ದ ಪರಕೀಯರೇ ಇಂದು ಅವರ ಅಮರ ಸಂದೇಶಗಳನ್ನು ಆಚರಣೆಯಲ್ಲಿ ತರಲು ತವಕಪಡುತ್ತಾರೆ. ಅಣು ಹೈಡ್ರೋಜನ್ ಬಾಂಬಿ ನಂಥ ಕಂಟಕ ಪ್ರಾಯವಾದ ಮಹಾ ಅಸ್ತ್ರಗಳನ್ನು ನಿರ್ಮಿಸಿಕೊಂಡು ಯುದ್ಧದ ಭಯವೆಂಬ ಅಗ್ನಿಯನ್ನು ಉಡಿಯಲ್ಲಿ ಕಟ್ಟಿಕೊಂಡು ಬಾಯಿಬಿಡುತ್ತಿರುವ ಪಾಶ್ಚಾತ್ಯ ರಾಷ್ಟ್ರಗಳು ಇಂದು ಬಾಪೂಜಿಯ ದಿವ್ಯ ಸಂದೇಶಗಳನ್ನು ತಲೆಯ ಮೇಲೆ ಹೊತ್ತುಕೊಂಡು ಕುಣಿ ಯುತ್ತಿವೆ. ಮತ್ತು ಜಾಗತಿಕ ಶಾಂತಿ ಸ್ಥಾಪನೆಗಾಗಿ ಮಧ್ಯಸ್ಥಿಕೆ ವಹಿಸಲು ಭಾರತವನ್ನು ಪ್ರೇಮದಿಂದ ಆಮಂತ್ರಿಸಿ ಭಾರತದ ಸ್ನೇಹಕ್ಕಾಗಿ " ಹಸಿದ ಹಸು ಳೆಕರು ತಾಯಿಯ ದಾರಿಯನ್ನು ಕಾಯುವಂತೆ " ಕಾಯುತ್ತಿವೆ. ಇದಕ್ಕೆ ನಮ್ಮ ಮಹಾ ಪ್ರಧಾನರಾದ ಶ್ರೀ ನೆಹರೂರವರಿಗೆ ರಶಿಯ ಪ್ರವಾಸದಲ್ಲಿ ದೊರೆತ ಅಪೂರ್ವ ಸ್ವಾಗತವೇ ಸಾಕ್ಷಿಯಾಗಿದೆ. ಮಹಾತ್ಮರ ಅನಂತ ಸಂದೇಶಗಳಲ್ಲಿ ಮುಖ್ಯವಾದ ಅಹಿಂಸೆ, ಅಸ್ತೇಯ, ಸಂಯಮ, ಸತ್ಯ, ಮದ್ಯಾದಿವರ್ಜನ ಇವೇ ಐದು ಸಂದೇಶಗಳು ಇಂದು " ಪಂಚಶೀಲ "ಗಳೆಂದು ಜಗನ್ಮಾ ನ್ಯವಾಗಿವೆ. ಇವುಗಳನ್ನು ಆಚರಣೆಯಲ್ಲಿ ತರಲು ಪ್ರಪಂಚದ ಎಲ್ಲ ರಾಷ್ಟ್ರಗಳೂ ಇಂದು ಒಪ್ಪಿಕೊಂಡಿವೆ ಯಲ್ಲದೆ. ಪ್ರಮುಖ ರಾಷ್ಟ್ರಗಳು ಒಂದೆಡೆ ಸೇರಿ ನಿಶ್ಶ ಸ್ತ್ರೀಕರಣದ ಬಗ್ಗೆ ಆಲೋಚಿಸುತ್ತಿವೆ. ಗಾಂಧೀಜಿಯ ವರ ವಾರಸದಾರರಂತಿರುವ ಪಂಡಿತ ಜವಾಹರಲಾಲರು

ಇಂದು ಜಗತ್ತಿನ ಶಾಂತಿದೂತರಾಗಿ ನಿಂತಿದ್ದಾರೆ. ಈ ಸಂಗತಿಯು ಭಾರತೀಯರಾದ ನಮಗೆ ತುಂಬಾ ಅಭಿಮಾನವಾದದ್ದು.

ಬಾಪೂಜಿಯವರಂಥ ಅದ್ವಿತೀಯ ಅಲೌಕಿಕ ಮಹಾ ಪುರುಷನನ್ನು ಪಡೆದ ನಮ್ಮ ಭಾರತಾಂಬೆಯು ಧನ್ಯಳು. ಅಲ್ಲದೆ ಅಂಥ ಭಾರತದ ನೆಲದಲ್ಲಿ ಜನ್ಮ ತಾಳಿದ ನಾವೂ ಧನ್ಯರು.

ಜೀವನ ಶಿಕ್ಷಣ ವಾರ್ತೆಗಳು

ನವಂಬರ ೧೯೫೫

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ ಸರಕಾರಿ ಹೆಣ್ಣುಮಕ್ಕಳ ಕ. ಟ್ರೇನಿಂಗ ಕಾಲೇಜ, ಧಾರವಾಡ

ಮೂಲ ಶಿಕ್ಷಣ ಶಾಲೆಗಳಲ್ಲಿ ವೇಳೆಯ ವಿಭಾಗ

ಇಲ್ಲಿಯ ವರೆಗೆ ಮೂಲ ಶಿಕ್ಷಣ ಶಾಲೆಗಳಲ್ಲಿ ವಿವಿಧ ಕಾರ್ಯಗಳಿಗೆ ಸರಿಯಾದ ವೇಳೆಯ ಹಂಚುವಿಕೆ ಇದ್ದಿದ್ದಿಲ್ಲ. ಈ ಶಾಲೆಗಳು ಸಾದಾ ಶಾಲೆಗಳಲ್ಲಿ ಅನುಸರಿಸುವ ವೇಳೆಯ ಹಂಚುವಿಕೆಯನ್ನೇ ಅನುಸರಿಸುತ್ತಿದ್ದವು. ಆದರೆ ಇದು ಮೂಲೋದ್ಯೋಗ ಶಾಲೆಗಳ ಕಾರ್ಯಕ್ಕೆ ಯೋಗ್ಯವಾಗುತ್ತಿರಲಿಲ್ಲ. ಸಾದಾ ಶಾಲೆಗಳಲ್ಲಿ ವಿವಿಧ ವಿಷಯಗಳು ಪುಸ್ತಕಗಳ ಮುಖಾಂತರ ಕಲಿಸಲ್ಪಡುತ್ತವೆ. ಮತ್ತು ವೇಳೆಯ ಹಂಚುವಿಕೆಯು ವಿಷಯ ಪ್ರಾಧಾನ್ಯತೆಯನ್ನು ಅವಲಂಬಿಸಿರುತ್ತದೆ. ಆದರೆ ಮೂಲ ಶಿಕ್ಷಣ ಶಾಲೆಗಳಲ್ಲಿ ವಿಷಯಗಳು ಚಟುವಟಿಕೆಯ ಮುಖಾಂತರ ಕಲಿಸಲ್ಪಡುತ್ತವೆ. ಪ್ರತಿಯೊಂದು ಚಟುವಟಿಕೆಯು ವಿವಿಧ ವಿಷಯಗಳನ್ನು ಕಲಿಸಲು ಕೇಂದ್ರವಾಗಿರುತ್ತದೆ. ಈ ಪ್ರಕಾರ ವಿಷಯಾನುಗುಣ ಹಂಚುವಿಕೆಯು ಮೂಲ ಶಿಕ್ಷಣ ಶಾಲೆಯ ವ್ಯವಸ್ಥೆಗೆ ಸರಿಯಾಗಿ ಹೊಂದಲಾರದು. ಮೂಲ ಶಿಕ್ಷಣ ಶಾಲೆಗಳಲ್ಲಿ ವೇಳೆಯ ಹಂಚುವಿಕೆಯು ಕೈಕೊಳ್ಳುವ ಕಾರ್ಯದ ಪ್ರಕಾರದ ಮೇಲೆ ಅವಲಂಬಿಸಿರಬೇಕಾಗುತ್ತದೆ. ಮೂಲ ಶಿಕ್ಷಣ ಶಾಲೆಗಳಲ್ಲಿ ಕೈಕೊಳ್ಳುವ ಕಾರ್ಯಗಳನ್ನು ಕೆಳಗೆ ತೋರಿಸಿದ ನಾಲ್ಕು ಪ್ರಕಾರಗಳಲ್ಲಿ ವಿಂಗಡಿಸಬಹುದು.

೧) ನಿತ್ಯದ ಕಾರ್ಯ— ಸಫಾಯಿ, ಪ್ರಾರ್ಥನೆ, ಸಭೆ, ಆರೋಗ್ಯ ತಪಾಸಣೆ, ಸುದ್ದಿಗಳನ್ನು ಓದುವದು ಮೊದಲಾದವು.

೨) ವಿಷಯ ಶಿಕ್ಷಣ— ಇದನ್ನು ಎರಡು ಪ್ರಕಾರಗಳಲ್ಲಿ ವಿಂಗಡಿಸಬಹುದು.

(೧) ಚಟುವಟಿಕೆಗಳಿಗೆ ಸಮವೇತಗೊಳಿಸಿ, ವಿಷಯಗಳನ್ನು ಕಲಿಸುವದು. ಮತ್ತು

(೨) ಕಲಿಸಿದ್ದನ್ನು ದೃಢೀಕರಿಸಲು ಅಥವಾ ಬಿಟ್ಟದ್ದನ್ನು ತುಂಬಿಕೊಳ್ಳಲು ಕೆಲವು ಅವಧಿ. ಮೂಲೋದ್ಯೋಗ ಮತ್ತು ವಿದ್ಯಾರ್ಥಿಗಳ ಸಾಮಾಜಿಕ ಹಾಗೂ ಸ್ವಾಭಾವಿಕ ಸನ್ನಿವೇಶವನ್ನು ಮಧ್ಯವರ್ತಿಯಾಗಿಟ್ಟುಕೊಂಡು ಚಟುವಟಿಕೆಗಳು ಸಾಗುತ್ತವೆ. ಅವರು ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ. ಆದರೆ ಅಪ್ರತ್ಯಕ್ಷವಾಗಿ ಅವುಗಳ ಮುಖಾಂತರ ವಿಷಯ ಜ್ಞಾನವನ್ನು ಮಾ-

ಕೊಳ್ಳುತ್ತಾರೆ. ಈ ಚಟುವಟಿಕೆಗಳು ಪ್ರತ್ಯಕ್ಷವಿರಬಹುದು. ಅಥವಾ ಅವು ಹಿನ್ನೆಲೆಯಲ್ಲಿ ಇರಬಹುದು. ಈ ಚಟುವಟಿಕೆಗಳ ಮುಖಾಂತರ ಕಲಿಸಿದ ಜ್ಞಾನವನ್ನು ವ್ಯವಸ್ಥಿತಗೊಳಿಸಬೇಕಾಗುವದು. ದೃಢೀಕರಿಸಬೇಕಾಗುವದು. ಮತ್ತು ಮಧ್ಯದಲ್ಲಿ ಬಿಟ್ಟ ಅಂತರವನ್ನು ತುಂಬಿಕೊಳ್ಳಬೇಕಾಗುವದು.

(೩) ಮೂರನೆಯ ಪ್ರಕಾರದ ಕಾರ್ಯವು ಮೂಲೋದ್ಯೋಗವು. ಇದಕ್ಕಾಗಿ ಕೆಲವು ಗುರಿಗಳು ನಿರ್ಧರಿಸಲ್ಪಟ್ಟಿವೆ. ಮತ್ತು ಅವುಗಳನ್ನು ಮುಟ್ಟಲು ಸಾಕಷ್ಟು ರೂಢಿಯು ಅತ್ಯವಶ್ಯವಾಗಿದೆ.

(೪) ನಾಲ್ಕನೆಯ ಪ್ರಕಾರದ ಕಾರ್ಯವೆಂದರೆ ಶಾರೀರಿಕ ಶಿಕ್ಷಣ ಮತ್ತು ಆಟ.

ಈ ಪ್ರಕಾರದ ಕಾರ್ಯಗಳಿಗೆ ವೇಳೆಯ ಹಂಚುವಿಕೆಯ ಯೋಜನೆಯನ್ನು ಸರಕಾರವು ಗೊತ್ತುಪಡಿಸಿದೆ. ಪ್ರತಿದಿನ ಒಂದರಂತೆ ವಾರಕ್ಕೆ ಆರು ಅವಧಿಗಳನ್ನು ನಿತ್ಯ ಕಾರ್ಯಕ್ಕಾಗಿ ಬೇರೆ ತೆಗೆದಿಡಲಾಗಿದೆ. ಇದು ದಿನದ ಮೊದಲನೆಯ ಅವಧಿಯು. ಚಟುವಟಿಕೆಗಳ ಮುಖಾಂತರ ಸಮವಾಯಿ ಪದ್ಧತಿಯಿಂದ ಕಲಿಸಲು ಹತ್ತು ಅವಧಿಗಳು ಸಾಮಾನ್ಯವಾಗಿ ದಿನಕ್ಕೆ ಎರಡು ಅವಧಿಗಳಂತೆ ಐದು ದಿವಸಗಳ ವರೆಗೆ ಇವನ್ನು ಉಪಯೋಗಿಸಲಾಗುವದು. ಚಟುವಟಿಕೆಗಳು ಮೇಲೆ ಹೇಳಿದ ಮೂರು ಸನ್ನಿವೇಶಗಳಿಂದ ಆರಿಸಲ್ಪಟ್ಟಂಥವು ಇರಬೇಕು. ಮಧ್ಯಾಹ್ನದಲ್ಲಿಯ ವೇಳೆಯನ್ನು ಚಟುವಟಿಕೆಗಳ ಮುಖಾಂತರ ಕೊಟ್ಟ ಜ್ಞಾನವನ್ನು ವಿಷಯವಾರ ತಳಹದಿಯ ಮೇಲೆ ದೃಢೀಕರಿಸಲು ಉಪಯೋಗಿಸಬೇಕು. ಇದಕ್ಕಾಗಿ ವಾರದಲ್ಲಿ ಹದಿನಾಲ್ಕು ಅವಧಿಗಳು ಮೀಸಲಾಗಿಡಲ್ಪಟ್ಟಿವೆ. ಮೂಲೋದ್ಯೋಗ ರೂಢಿಗಾಗಿ ಹತ್ತು ಅವಧಿಗಳು ಕೊಡಲ್ಪಟ್ಟಿವೆ. ಮತ್ತು ಶಾರೀರಿಕ ಶಿಕ್ಷಣ ಹಾಗೂ ಆಟಗಳಿಗಾಗಿ ಐದು ಅವಧಿಗಳು. ವಿಷಯವನ್ನು ದೃಢೀಕರಿಸುವದು, ಮೂಲೋದ್ಯೋಗ ರೂಢಿ ಮತ್ತು ಶಾರೀರಕ ಶಿಕ್ಷಣಗಳನ್ನು ಮಧ್ಯಾಹ್ನದಲ್ಲಿ ತೆಗೆದುಕೊಳ್ಳಬಹುದು.

೨) ಈ ಹಂಚುವಿಕೆಯು ಮೂಲ ಶಿಕ್ಷಣ ಶಾಲೆಗಳ ಅವಶ್ಯಕತೆಗಳನ್ನು ಈಡೇರಿಸುವದೆಂದು ಆಶಿಸಲಾಗಿದೆ. ಕೇಂದ್ರಭೂತ ಚಟುವಟಿಕೆಗಳ ತಳಹದಿಯ ಮೇಲೆ ವಿಷಯ ಜ್ಞಾನವನ್ನು ಅವರು ಸಂಘಟಿಸಲು ಶಕ್ತರಾಗಬಹುದು. ಅಲ್ಲದೆ ಕೊಟ್ಟ ಜ್ಞಾನವನ್ನು ಸರಿಯಾದ ರೀತಿಯಲ್ಲಿ ಸ್ಥಿರೀಕರಿಸಲು ವೇಳೆಯು ದೊರೆಯುವದು. ವೇಳೆಯ ಹಂಚುವಿಕೆಯ ಯೋಜನೆಯಲ್ಲಿ ಶಾಲೆಗಳು ಅವಶ್ಯವಿದ್ದ ಬದಲಾವಣೆಗಳನ್ನು ಮಾಡಿಕೊಳ್ಳಬಹುದೆಂದು ಸರಕಾರವು ವಿಶದಪಡಿಸಿದೆ.

೨) ನೂಲುವ ಸ್ಪರ್ಧೆಗಳು

ನೇಯುವದರಲ್ಲಿ ನೈಪುಣ್ಯ, ಉತ್ತಮ ನೂಲನ್ನು ಅವಲಂಬಿಸಿರುತ್ತದೆ. ಮತ್ತು ಉತ್ತಮ ನೂಲಿನ ತಯಾರಿಯು ನೂಲುವ ಜಾಣ್ಮೆಯನ್ನು ಅವಲಂಬಿಸಿರುವದು. ಅರಿವೆಯನ್ನು ತಯಾರಿಸಲು ಯೋಗ್ಯವಾದ ೧೬ರಿಂದ ೨೦ ನಂಬರಿನ ಗಟ್ಟಿಯಾದ ನೂಲನ್ನು ಹೊರಡಿಸಲು ಕೌಶಲ್ಯವನ್ನು ಸಂಪಾದಿಸುವದಕ್ಕಾಗಿ ಬಾಲಕರಿಗೆ ಪ್ರೋತ್ಸಾಹವೀಯಬೇಕೆಂಬ ಉದ್ದೇಶದಿಂದ ನೂಲುವ ಸ್ಪರ್ಧೆಗಳನ್ನು ರಾಜ್ಯದಲ್ಲೆಲ್ಲ ಸಂಘಟಿಸಲಾಯಿತು. ಇದರ ವಿಷಯವಾಗಿದ್ದ ನಿಯಮಗಳನ್ನು ಈ ಮೊದಲೇ ಪ್ರಕಟಿಸಲಾಗಿದೆ. ಪ್ರತಿ ಜಿಲ್ಹೆಯಲ್ಲಿ ಇಂತಹ ಮೂರು ಸ್ಪರ್ಧೆಗಳನ್ನು ಸಂಘಟಿಸಲಾಗಿದೆ. ಮತ್ತು ಒಟ್ಟು ಹತ್ತು (೧೦) ರೂಪಾಯಿ ಬೆಲೆಯ ಮೂರು ಬಹುಮಾನಗಳನ್ನು ಪ್ರತಿ ಕೇಂದ್ರಕ್ಕೆ ಮಂಜೂರ ಮಾಡಲಾಗಿದೆ. ಈ ಸ್ಪರ್ಧೆಗಳ ಸಂಘಟನೆಯಲ್ಲಿ ಶಾಲೆಗಳು ಸಕ್ರಿಯ ಭಾಗವಹಿಸಿ, ಈ ಉದ್ಯೋಗದ ಕ್ಷಮತೆಯನ್ನು ಅಭಿವೃದ್ಧಿಗೊಳಿಸಲು, ಅಪ್ರತ್ಯಕ್ಷವಾಗಿ ಸಹಾಯ ಸಲ್ಲಿಸುವವೆಂದು ಅಪೇಕ್ಷಿಸಲಾಗಿದೆ.

೩) ಸುರತ ಸಮ್ಮೇಲನ

ರಾಜ್ಯದ ಅ. ಡೆ. ಎ. ಇನಸ್ಪೇಕ್ಟರರ ಎರಡನೆಯ ಸಮ್ಮೇಲನವನ್ನು ೧೫ ಮತ್ತು ೧೬ನೆಯ ಅಕ್ಟೋಬರ ೧೯೫೫ರಂದು ಸುರತದಲ್ಲಿ ಕೂಡಿಸಲಾಗಿದ್ದಿತು. ಮೊದಲಿನ ಬಡೋದಾ ವಿಭಾಗದ ಮೂಲೋದ್ಯೋಗದ ಅ. ಡೆ. ಎ. ಇನಸ್ಪೇಕ್ಟರರು ಡೆ. ಎ. ಇನಸ್ಪೇಕ್ಟರರು ಮತ್ತು ಎಡ್ಮಿನಿಸ್ಟ್ರೇಟಿವ್ಹ ಆಫೀಸರರು ಈ ಸಮ್ಮೇಲನದಲ್ಲಿ ಭಾಗವಹಿಸಿದ್ದರು. ಸಮ್ಮೇಲನದ ಅಧ್ಯಕ್ಷತೆಯನ್ನು ರಾಜ್ಯದ ಶಿಕ್ಷಣ ಶಾಖೆಯ ಉಪಸಚಿವರು ವಹಿಸಿದ್ದರು. ಈ ಸಭೆಯು ವಿವಿಧ ಪ್ರಕಾರದ ಶಾಲೆಗಳ ಬಗ್ಗೆ, ಅನೇಕ ಮಹತ್ವದ ಸಮಸ್ಯೆಗಳನ್ನು ಚರ್ಚಿಸಿತು. ವಿಷಯ ಪಟ್ಟಿಯಲ್ಲಿದ್ದ ವಿಷಯಗಳು ನಾಲ್ಕು ಉಪಸಭೆಗಳಲ್ಲಿ ತೆಗೆದುಕೊಳ್ಳ

ಲ್ಪಟ್ಟವು. ಮತ್ತು ಚರ್ಚೆಯಲ್ಲಿ ಮೂಲೋದ್ಯೋಗ ಶಿಕ್ಷಣದ ಸುಧಾರಣೆ, ಉತ್ಪಾದನೆಯ ಮಾರಾಟ ಮೊದಲಾದ ವಿಷಯಗಳು ಮುಖ್ಯವಾಗಿದ್ದವು. ಉಪಸಚಿವರು ಸಭೆಯನ್ನುದ್ದೇಶಿಸಿ ಮಾತನಾಡುತ್ತ ಮೂಲೋದ್ಯೋಗ ಶಿಕ್ಷಣದ ಮುಖಾಂತರ ಮಗುವಿನ ಸರ್ವಾಂಗೀಣ ವ್ಯಕ್ತಿತ್ವ ವಿಕಾಸದ ಮಹತ್ವ ಹಾಗೂ ಅದರಲ್ಲಿ ಶಿಕ್ಷಕರು ಮತ್ತು ಶಿಕ್ಷಣದ ಸಂಘಟಕರು ವಹಿಸಬೇಕಾದ ಮಹತ್ವದ ಪಾತ್ರದ ಬಗ್ಗೆ ಹೇಳಿದರು. ಇದಲ್ಲದೆ ಅವರು ತಮ್ಮ ಭಾಷಣದಲ್ಲಿ ಈ ವರುಷದಿಂದ ಪ್ರಾರಂಭಿಸಲ್ಪಟ್ಟ ಶೈಕ್ಷಣಿಕ ಯೋಜನೆಗಳ ವಿಕಾಸದ ಬಗ್ಗೆ ಹೇಳಿದರಲ್ಲದೆ ಅವುಗಳನ್ನು ಪರಿಣಾಮಕಾರಿಯಾಗಿ ಮಾಡಲು, ಅವಶ್ಯವಿರುವ ಉಪಾಯಗಳನ್ನು ಸೂಚಿಸಿದರು. ಸಮ್ಮೇಲನದ ಅಂಗವಾಗಿ ನಾಲ್ಕು ಜಿಲ್ಲೆಗಳ ಮೂಲೋದ್ಯೋಗ ಮತ್ತು ಕೈಗಾರಿಕೆಯ ಪ್ರದರ್ಶನವನ್ನು ಮತ್ತು ಮೂಲ ಶಿಕ್ಷಣದ ಮೇಲೆ ವಿಚಾರ ಸಂಕಲನವನ್ನು ಏರ್ಪಡಿಸಲಾಗಿದ್ದಿತು. ಎರಡು ದಿನ ಸಂಜೆ ಸ್ಥಳಿಕ ಟ್ರೇನಿಂಗ ಕಾಲೇಜುಗಳ ವಿದ್ಯಾರ್ಥಿಗಳು ಮನೋರಂಜಕವಾದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಸಮ್ಮೇಲನದ ಪ್ರತಿನಿಧಿಗಳಿಗೆ ತಮ್ಮ ಸಮಸ್ಯೆಗಳನ್ನು ಚರ್ಚಿಸಲು ಮತ್ತು ಒಬ್ಬರೊಬ್ಬರ ಅನುಭವದ ಲಾಭ ಪಡೆಯಲು ಒಂದು ಸುಸಂಧಿಯು ದೊರೆತಿದ್ದಿತು.

ವಿನಂತಿ

'ನಮ್ಮ ಸಮಸ್ಯೆಗಳು' ಈ ವಿಭಾಗದಲ್ಲಿ ಶಿಕ್ಷಕರಿಂದ ಹಲವಾರು ಪ್ರಶ್ನೆಗಳು ಬರುತ್ತಿದ್ದುದು ಸ್ತುತ್ಯ; ಆದರೆ ಕೆಲವು ಪ್ರಶ್ನೆಗಳು ಆಡಳಿತಕ್ಕೆ ಸಂಬಂಧಿಸಿದವು ಇರುವದು ಕಂಡುಬಂದಿದೆ. ಹೀಗೆ ಆಡಳಿತಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳದೆ. ಕೇವಲ ಶಿಕ್ಷಣ ಕಾರ್ಯಕ್ಕೆ ಸಂಬಂಧಿಸಿದ ಶೈಕ್ಷಣಿಕ ಪ್ರಶ್ನೆಗಳನ್ನಷ್ಟೇ ಕೇಳಬೇಕೆಂದು ಈ ಮೂಲಕ ಎಲ್ಲ ಶಿಕ್ಷಕರಿಗೆ ಮತ್ತೊಮ್ಮೆ ವಿನಂತಿ.

ಪ್ರಧಾನ ಸಂಪಾದಕರು

ಶೀಘ್ರದಲ್ಲಿ ಪ್ರಕಟವಾಗುತ್ತದೆ.

— ೪ನೆಯ ಪ್ರಕಟಣೆ —

ಅತಿದೂರದ ಜಗತ್ತಿನಲ್ಲಿ

ನಕ್ಷತ್ರ ರಾಜ್ಯದ ಒಂದು ಸಾಹಸಿ ಪ್ರೇಮಕತೆ.

ಶ್ರೀ ಹೆಗಡೆ ಬಂಧುಗಳು. ಬೆಲೆ: ೦-೧೦-೦

— ೫ನೆಯ ಪ್ರಕಟಣೆ —

ಕುಮಾರಿ ಸುನೇತ್ರಾ

ಚೀನದ ಹೆಸರಾಂತ ಬರೆಹಗಾರರಾದ
ಲಿನ್. ಯು. ಟಿಂಗರ
ಒಂದು ಕಾದಂಬರಿಯ ಆಧಾರದ ಮೇಲೆ ಬರೆದದ್ದು.

ಶ್ರೀ ತಲಚೇರಕರ. ಬೆಲೆ: ೦-೧೦-೦

— ಚಂದಾದಾರರಿಗೆ ಸವಲತ್ತು —

೬ ರೂ. ಗಳಿಗೆ ೧೨ ಪುಸ್ತಕಗಳು.

ಸುಲಭ ಸಾಹಿತ್ಯ ಪ್ರಕಾಶನ, ಕುಮಟಾ

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋಶಿ, ಮತ್ತು
ಶ್ರೀ. ಜಿ. ಡಿ. ಮಾಳಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. ಬೆಲೆ ೧-೧೨-೦ ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.
ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ನಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟೆ, ಪುಣೆ.

ಪ್ರಾಥಮಿಕ ಶಿಕ್ಷಣ ಪ್ರಪಂಚ

ಗ್ರಾಮ ಸುಧಾರಣಾ ಸಪ್ತಾಹವು ದಿನಾಂಕ ೨-೧೦-೧೯೫೫ರಿಂದ ಹರಿಜನ ದಿನಾಚರಣೆ, ಗಾಂಧಿ ಜಯಂತಿ ಉತ್ಸವಗಳನ್ನೊಳಗೊಂಡು ಕೆಳಗೆ ಕಾಣಿಸಿದ ಊರುಗಳ ಸಂಸ್ಥೆಗಳಲ್ಲಿ ಉತ್ಸಾಹದಿಂದ ಆಚರಿಸಲ್ಪಟ್ಟಿತು. ಧ್ವಜವಂದನೆ, ಮೂಲೋದ್ಯೋಗಗಳ ಸ್ಪರ್ಧೆ, ಸಮಾಜಸೇವೆ ಮುಂತಾದವುಗಳು ವೈಶಿಷ್ಟ್ಯಗಳಾಗಿದ್ದವು.

೧) ಅಮಲಝುರಿ (ಕ. ಗಂ.) ೨) ಸರಕಾರಿ ಗ. ಟ್ರೇ. ಕಾ. ಕಾರವಾರ ಹಾಗೂ ಧಾರವಾಡ ಮತ್ತು ಸರಕಾರಿ ಹೆ. ಟ್ರೇ. ಕಾ. ಧಾರವಾಡ. ೩) ಹಳ್ಳಿ ಕ. ಗಂ. ತಾ :- ಜತ್ತಿ. ೪) ಕಮತಗಿ ಕ. ಗಂ. ೫) ಖನಗಾವಿ ಕ. ಗಂ. ೬) ಬೇವೂರ ಕ. ಗಂ. ೭) ಹೊಸಾಳಿ ತಾ:- ಕಾರವಾರ. ೮) ಕುರುಬನಹಟ್ಟಿ ತಾ:- ಗೋಕಾಕ. ೯) ಕಜ್ಜಿಡೋಣಿ. ೧೦) ತೆವರಮೆಳ್ಳಿಹಳ್ಳಿ. ೧೧) ಹೆಬ್ಬಾಳ ಕ. ಗಂ. ೧೨) ಸ. ಗ. ಟ್ರೇ ಕಾ. ಜಮಖಂಡಿ. ೧೩) ಗಂದಿಗವಾಡ. ೧೪) ಅರೇಮಲ್ಲಾಪೂರ. ೧೫) ಛಬ್ಬಿ. ೧೬) ಡೋಣಿಹಾಳ. ೧೭) ಕುರಡೀಕೇರಿ. ೧೮) ಕಗದೀಕೊಪ್ಪ. ೧೯) ಖಾರಗೆ. ೨೦) ಬಟ್ಕೂರ. ೨೧) ಬದಾಮಿ ೨೨) ಹೊಸೂರ ತಾ:- ಬದಾಮಿ. ೨೩) ಯಡಹಳ್ಳಿ. ೨೪) ಕರ್ಲಕೊಪ್ಪ. ೨೫) ಗ. ಟ್ರೇ. ಕಾ. ಹುಬ್ಬಳ್ಳಿ. ೨೬) ಲಚ್ಯಾಣ ಗ. ಟ್ರೇ. ಕಾ. ೨೭) ಬೇಲೂರ. ೨೮) ಎಡಹಳ್ಳಿ—ಇಂಗಳಗಿ. ೨೯) ಭಗತವಾಡ ಕ. ಗಂ. ಶಾಲಾ. ೩೦) ಮುಳವಾಡ.

ನೇರಲಿ (ಹುಕ್ಕೇರಿ) :– ದಿನಾಂಕ ೧೬-೧೦-೫೫ ರಂದು ಶ್ರೀಯುತ M. P. ಜಾಲಿ, ಡಿ. ಇ. ಆಯ್. ಬೆಳಗಾಂವ ಇವರ ಹಿರಿಯತನದಲ್ಲಿ ಶಿಕ್ಷಕ–ಶಿಕ್ಷಕಿಯರ ಗ್ರೂಪ್ ಸಮ್ಮೇಲನವು ಯಶಸ್ವಿಯಾಗಿ ಜರುಗಿತು. ಶಿಕ್ಷಕ, ಬಾಲಕ ಹಾಗೂ ಪಾಲಕ ಇವರ ಪರಸ್ಪರ ಸಂಬಂಧ ಹಾಗೂ ಸಹಕಾರಗಳ ಬಗ್ಗೆ ಚರ್ಚೆ, ವಿವಿಧ ವಿನೋದಾವಳಿಗಳು ವೈಶಿಷ್ಟ್ಯಗಳಾಗಿದ್ದವು.

ನಂದೀಗದ್ದಿ (ಹಳಿಯಾಳ) :– ದಿ. ೮-೧೦-೫೫ ರಂದು ದ್ವಿತೀಯ ಕ್ರೀಡಾ ಮಹೋತ್ಸವ ಸ್ಪರ್ಧೆಗಳು ಶ್ರೀ ಬಸಲಿಂಗ ಶಾಸ್ತ್ರಿಗಳ ಹಿರಿಯತನದಲ್ಲಿ ಜರುಗಿದವು.

ಸೀತೆಮನೆ (ಆಲೂರ) :– ಇಲ್ಲಿಯ ಶಾಲೆಯ ನಾಲ್ಕನೆಯ ವಾರ್ಷಿಕೋತ್ಸವವು ಡಿ. ಎಸ್. ಬಿ. ವಿಜಾಪೂರ ಚೇರಮನ್‌ರಾದ ಶ್ರೀಯುತ ನಾಡಗೌಡರ ಹಿರಿಯತನದಲ್ಲಿ ವಿಜೃಂಭಣೆಯಿಂದ ಜರುಗಿತು.

ಗುಳೇದಗುಡ್ಡ :– (ಉ. ಗಂ. ನಂ. ೨) ಹಿಂದುಳಿದ ವಿದ್ಯಾರ್ಥಿಗಳಿಗಾಗಿ ಅಂಜುಮನ್ ಇಸ್ಲಾಮ ಸಂಸ್ಥೆಯವರು ಉದಾರ ಹಸ್ತದಿಂದ ಕೊಟ್ಟ ಪಾಟಿ ಪುಸ್ತಕಗಳ ವಿತರಣ ಸಮಾರಂಭವು ಶ್ರೀ ಎಸ್. ವ್ಹಿ. ಗಟ್ಟಿ, ನಗರಾಧ್ಯಕ್ಷರು ಇವರ ಹಿರಿಯತನದಲ್ಲಿ ನೆರವೇರಿಸಲ್ಪಟ್ಟಿತು.

ಶಿರಕನಹಳ್ಳಿ :– ದಿನಾಂಕ ೯-೧೦-೫೫ರಂದು ಶ್ರೀ ಚ. ಬ. ಪಾವಟೆ ಅ. ಡೆ. ಎ. ಇ. ಇವರ ಹಿರಿಯತನದಲ್ಲಿ ಊರ ಪ್ರಮುಖರ ಸಭೆ ಸೇರಿ ವಿವಿಧ ವಿನೋದಾವಳಿಗಳು ಜರುಗಿಸಲ್ಪಟ್ಟವು. ಊರ ಜನರ ಸಹಕಾರದ ದ್ಯೋತಕವಾಗಿ ಮುಂದೆ ಏರ್ಪಡಿಸುವ ಸ್ಪರ್ಧೆಗೋಸುಗ ಒಂದು ಬೆಳ್ಳಿಯ ಕಪ್ಪನ್ನು ಕೊಡುವ ಆಶ್ವಾಸನವನ್ನು ಶ್ರೀ ವಿರುಪಾಕ್ಷಗೌಡರು ಪಾಟೀಲ ಇವರು ಕೊಟ್ಟರು. ಮತ್ತು ಇಲ್ಲಿಯ ಹೊಸ ಶಾಲೆಯ ಇಮಾರತಿಗಾಗಿ ಆರು ಸಾವಿರ ರೂ. ಕೊಡಲು ಸಿದ್ಧರಾಗಿದ್ದಾರೆ.

ಹಿಡಕಲ್ಲ :– ಇಲ್ಲಿಯ ಕ. ಗಂ. ಶಾಲೆಯಲ್ಲಿ ೨-೧೦-೫೫ ರಿಂದ ೪-೧೦-೫೫ ಮುಂಜಾನೆ ೧೦ ಘಂ. ಯ ವರೆಗೆ ೫೧ ತಾಸಿನ ಅಖಂಡ ಸೂತ್ರ ಯಜ್ಞವನ್ನು ಜರುಗಿಸಲಾಯಿತು.

ಶಿವರಮುಳ್ಳಿಹಳ್ಳಿ ;– ದಿ. ೨೪, ೨೫–೧೦–೫೫ ರಂದು ಗ್ರೂಪ್ ಕ್ರೀಡಾ ಮಹೋತ್ಸವ ಅಂಗವಾಗಿ ಪಂದ್ಯಾಟಗಳು ಜರುಗಿಸಲ್ಪಟ್ಟವು. ಹೆಚ್ಚು ಗುಣಪಡೆದು ವೀರಾಗ್ರಣಿ ಶಾಲೆಯೆಂದು ಇದು ಪರಿಗಣಿಸಲ್ಪಟ್ಟಿದೆ.

ಅಮೀನಗಡ :– ಉರ್ದು ಸ್ಕೂಲ ಸ. ಸೇ. ಪಥಕದ ನಾಲ್ಕನೆಯ ವಾರ್ಷಿಕೋತ್ಸವವು ಶ್ರೀ ರಾಜೇಸಾಬ ಯಂಕಂಚಿ ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ಹೂವಿನಸಿಗ್ಗಲಿ :– ಗ್ರೂಪ್ ಪಂದ್ಯಾಟಗಳ ಸ್ಪರ್ಧೆಯಲ್ಲಿ ಇಲ್ಲಿಯ ಶಾಲೆಯು ವೀರಾಗ್ರಣಿಯೆಂದು ಹೆಸರು ಗಳಿಸಿತು.

ಅಗಸಾಲ-ಬಮ್ಮನಹಳ್ಳಿ (ಶಿರ್ಶಿ) :– ದಿ. ೧೨–೧೦–೫೫ರಂದು ಗ್ರೂಪ್ ಸಮ್ಮೇಲನವು ಶ್ರೀ ವ್ಹಿ. ಬಿ. ದೇಸಾಯಿ ಜಿ. ಶಿಕ್ಷಣಾಧಿಕಾರಿಗಳು ಕಾರವಾರ ಇವರ ಹಿರಿಯತನದಲ್ಲಿ ಜರುಗಿತು. ಈ ಪ್ರಸಂಗದಲ್ಲಿ ಸ. ಶಿ. ಅಧಿಕಾರಿಗಳಾದ ಶ್ರೀ ಮೆಣಸಿಯವರು ಸ. ಶಿ. ಮಹತ್ವದ ಬಗ್ಗೆ ಕಳಕಳಿಯಿಂದ ಮಾತನಾಡಿದರು.

ಲಚ್ಯಾಣ :– (ಟ್ರೇ. ಕಾ.) ಗ್ರಾಮ ಸುಧಾರಣಾ ಸಪ್ತಾಹದ ಮುಕ್ತಾಯ ಸಮಾರಂಭವು ಬಂಥನಾಳ ಶ್ರೀಗಳ ಹಾಗು ಬಬಲೇಶ್ವರದ ಶಾಂತವೀರ ಸ್ವಾಮಿಗಳವರ ಸಾನ್ನಿಧ್ಯದಲ್ಲಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಕಾಲವಾಡ (ನವಿಲುಗುಂದ) :– ಕ. ಗಂ. ಶಾಲೆಗೆ ಶ್ರಮದಾನದ ಫಲವಾಗಿ ಒಂದು ಗಡಿಯಾರವು ದೇಣಿಗೆಯಾಗಿ ದೊರೆತಿದೆ.

ನಿಂಬರಗಿ :– ದಿ. ೨೯–೯–೫೫ರಂದು ಕೋ. ಆ. ಸೋ. ಸುಪರವಾಯಿಝರರಾದ ಶ್ರೀ ಹಳಗುಣಕಿಯವರ ಅಧ್ಯಕ್ಷತೆಯಲ್ಲಿ ಮನರಂಜನೆ ಕಾರ್ಯಕ್ರಮ ಜರುಗಿತು.

ಕೆಮತಗಿ :– ದಿ. ೨–೧೦–೫೫ರಂದು ಜರುಗಿದ ನೂಲುವ ಸ್ಪರ್ಧೆಯಲ್ಲಿ ಮೇಲ ನಂಬರ ಬಂದವರಿಗೆ ಬಹುಮಾನಗಳು ಕೊಡಲ್ಪಟ್ಟವು. ಶ್ರೀ ಮ. ನಿ. ಪ್ರ. ಸ್ವಾ. ಶ್ರೀ ಮುರಘಾರಾಜೇಂದ್ರ ಮಹಾಸ್ವಾಮಿಗಳವರ ಹಿರಿಯತನದಲ್ಲಿ ಸಭೆಯು ಸಾಂಗವಾಯಿತು. ಸಭೆಯಲ್ಲಿ ಪ್ರಾ.ಶಾ.ಪ್ರ. ಪ. ಯಲ್ಲಿ ಗುಳೇದಗುಡ್ಡ ಕೇಂದ್ರಕ್ಕೆ ಒಂದು ಹಾಗೂ ಎರಡು ನಂಬರು ಗಳಿಸಿದ ಕು. ಕುಲಕರ್ಣಿ ಹಾಗೂ ಗಡೇದಗೌಡರ ಇವರಿಗೆ ೨೫, ೧೦ ರೂ. ಗಳನ್ನು ಅನುಕ್ರಮವಾಗಿ ಬಹುಮಾನವೆಂದು ಕೊಡಲಾಯಿತು. ಹಾಗೂ ಮುಂದಿನಸಲ ಕೇಂದ್ರಕ್ಕೆ ಮೊದಲ ನಂಬರ ಗಳಿಸಿದ ಬಾಲಕನಿಗೆ ೫೧ ರೂ. ಗಳ ಪಾರಿತೋಷಕವನ್ನು ಕೊಡುವದೆಂದು ಅಪ್ಪಣೆ ಕೊಡಿಸಿದರು.

ಖನಗಾವಿ (ಗೋಕಾಕ) :– ಇಲ್ಲಿಯ ಹೊಸ ಶಾಲೆಯ ಉದ್ಘಾಟನಾ ಸಮಾರಂಭವು ಆರೋಗ್ಯ ಖಾತೆಯ ಮಾನ್ಯ ಉಪಮಂತ್ರಿಗಳಾದ ಶ್ರೀ ಜತ್ತಿಯವರಿಂದ ನೆರವೇರಿಸಲ್ಪಟ್ಟಿತು. ಮಾನ್ಯ ಅತಿಥಿಗಳು ಹಳ್ಳಿಗರ ಸಹಕಾರವನ್ನು ಕೊಂಡಾಡಿದರು.

ಕೋಡಿಭಾಗ:– (ಕ.ಹೆ.ಶಾ.) ೨೮–೯–೫೫ರಂದು ಶ್ರೀ ಸರಸ್ವತಿ ವಾಚನಾಲಯ ಹಾಗೂ ವಸ್ತುಸಂಗ್ರಹಾಲಯ ಮತ್ತು "ಬೆಳಕು" ಎಂಬ ಕೈಬರಹ ಪತ್ರಿಕೆಗಳ ಉದ್ಘಾಟನಾ ಸಮಾರಂಭವು ಡಿ. ಎಸ್. ಬಿ. ಕಾರವಾರದ ಅಧ್ಯಕ್ಷರೂ, ಸುಪ್ರಸಿದ್ಧ ವಕೀಲರೂ ಆದ ಶ್ರೀ ಕೆ. ಎಮ್. ಚಾಲಿಸ್ಗತ್ತಿಗಿಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಸೂಡಿ :– ಬಾಲದಳ ಸಂಘದ ವತಿಯಿಂದ ನಾಡ ಹಬ್ಬವನ್ನು ಹುಬ್ಬಳ್ಳಿಯ ಹೆ. ಟ್ರೇ. ಕಾ. ದ ಸಂಚಾಲಕರಾದ ಕು. ಹುಲಸೋಗಿ ಇವರ ಅಧ್ಯಕ್ಷತೆಯಲ್ಲಿ ಜರುಗಿಸಲಾಯಿತು.

ಧಾರವಾಡ :– ಹೆ. ಸರಕಾರೀ ಟ್ರೇ. ಕಾಲೇಜದಲ್ಲಿ ದಿ. ೧೭–೧೦–೫೫ರಿಂದ ೧೯–೧೦–೫೫ರ ವರೆಗೆ ನಾಡಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಯಿತು ಶ್ರೀ ಬಾಳಪ್ಪ ಹುಕ್ಕೇರಿ, ಪ್ರಾ. ಎನ್. ಆರ್. ಹಿರೇಮಠ ಜಿ. ಬಿ. ಟಿ. ಸಿ. ಧಾರವಾಡ ಹಾಗೂ ಶ್ರೀಮತಿ ರುಕ್ಮಿಣಮ್ಮರವರು ಅನುಕ್ರಮವಾಗಿ ೩ ದಿನಗಳ ಅತಿಥಿಗಳಾಗಿದ್ದರು. ಭಾಷಣ, ಮನರಂಜನೆ ಕಾರ್ಯಕ್ರಮ, ಕೀರ್ತನ ಮುಂತಾದವುಗಳು ಜರುಗಿದವು.

ಸ. ಗ. ಟ್ರೇ. ಕಾ. ಹಾಗೂ ಹೆ. ಟ್ರೇ. ಕಾ. ಗಳಲ್ಲಿ ಸಂ. ರಾ. ಸಂ. ದಿನಾಚರಣೆಯನ್ನು ಆಚರಿಸಲಾಯಿತು.

ದಿ. ೩೧–೧೦–೫೫ರಂದು ಹಿಂದೀ ಅಲ್ಪಾವಧಿ ಕೋರ್ಸ (೨)ರ ಮುಕ್ತಾಯ ಸಮಾರಂಭವು ಶ್ರೀ ಕೆ. ಬಿ. ತೇರಗಾಂವಕರ ಎ. ಇ. ಧಾರವಾಡರವರ ಅಧ್ಯಕ್ಷತೆಯಲ್ಲಿ ಜರುಗಿತು. ಮಾನ್ಯ ಅಧ್ಯಕ್ಷರು "ಫುಲವಾರಿ" ಎಂಬ ಪತ್ರಿಕೆಯನ್ನು ಉದ್ಘಾಟಿಸಿ, ಹಿಂದೀ ಭಾಷೆಯ ಪ್ರಚಾರದಲ್ಲಿ ಸಕ್ರಿಯವಾಗಿ ದುಡಿಯಬೇಕೆಂದು ಕೇಳಿಕೊಂಡರು.

ಧಾರವಾಡ :– ಕ. ಗಂ. ಶಾಲೆ ಹಾಗೂ ಹೆಣ್ಣು ಮಕ್ಕಳ ಶಾಲೆಗಳಲ್ಲಿ ನಾಡಹಬ್ಬವನ್ನು ಶ್ರೀ ಗಿರಿಮಲ್ಲಪ್ಪ ಪಾಲಿಯವರ ಹಿರಿತನದಲ್ಲಿ ಹಾಗೂ ಶ್ರೀಮತಿ ಸುಶೀಲಾ ಬಾಯಿ ಶಹಾ ಅವರ ಹಿರಿತನದಲ್ಲಿ ಆಚರಿಸಲಾಯಿತು.

ವಿಜಾಪುರ :– ಸರಕಾರೀ ಮಾಧ್ಯಮಿಕ ಕೃಷಿ ಶಾಲೆಯಲ್ಲಿ ದಿನಾಂಕ ೨೨-೧೦-೫೫ರಂದು ಪಾಲಕ ದಿನಾಚರಣೆಯನ್ನು ಹಾಗೂ ದಿನಾಂಕ ೨೪-೧೦-೫೫ ರಂದು ನಾಡಹಬ್ಬ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಪ್ರೊ. ಬಿ. ಟಿ. ಸಾಸನೂರ ಹಾಗೂ ಡಾ. ಡಿ. ಎಸ್. ಕರ್ಕಿಯವರು ಅನುಕ್ರಮವಾಗಿ ಆಯಾ ದಿನಾಚರಣೆಗಳಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಪ್ರೊ. ಸಾಸನೂರರವರು ಶಿಕ್ಷಕ, ಪಾಲಕ-ಸರಕಾರಗಳ ಪರಸ್ಪರ ಸಂಬಂಧದ ಬಗೆಗೆ ಹಾಗೂ ಡಾ. ಕರ್ಕಿಯವರು "ಕೃಷಿ" "ಋಷಿ"ಗಳ ಅನ್ಯೋನ್ಯ ಸಂಬಂಧದ ಬಗೆಗೆ ಮಾರ್ಮಿಕವಾಗಿ ಮಾತನಾಡಿದರು.

ಸಂಗೊಂದಿ (ಬಾಗಿಲಕೋಟೆ) :– ಇಲ್ಲಿಯ ಗಾಂವಠಿ ಶಾಲೆಯನ್ನು ೧-೧೧-೫೫ರಿಂದ ಡಿ. ಎಸ್. ಬಿ. ಶಾಲೆಯೆಂದು ಪರಿವರ್ತಿಸಲಾಯಿತು. ಶಾಲಾ ಕಟ್ಟಡದ ಬಗ್ಗೆ ಗ್ರಾಮಸ್ಥರು ೧೫೨೫ ರೂ. ಗಳನ್ನು ಕೊಡುವದಾಗಿ ವಾಗ್ದಾನವಿತ್ತರು.

ಭಗವತಿ (ಬಾಗಿಲಕೋಟೆ) :– ಇಲ್ಲಿಯ ಜೀ. ಶಿ. ಶಾಲೆಯ ಮೇಲಿನ ವರ್ಗದ ವಿದ್ಯಾರ್ಥಿಗಳು ಗುರುಗಳೊಂದಿಗೆ ವಿಜಾಪೂರಕ್ಕೆ ಶೈಕ್ಷಣಿಕ ಪ್ರವಾಸ ಕೈಕೊಂಡರು.

ಹಡಪ (ಅಂಕೋಲಾ) :– ಇಲ್ಲಿಯ ಸ. ಶಿ. ವರ್ಗದಲ್ಲಿ ಮನರಂಜನೆ ಕಾರ್ಯಕ್ರಮಗಳು ದಿ. ೨೯-೧೦-೫೫ ರಂದು ಶ್ರೀ ಅ. ಡಿ. ಎ. ಇ. ಕಲಾಲ ಇವರ ಅಧ್ಯಕ್ಷತೆಯಲ್ಲಿ ಜರುಗಿಸಲ್ಪಟ್ಟವು.

ತೆರಗಾಂವ :– ಇಲ್ಲಿಯ ಒಕ್ಕಲುತನದ ಪೂರ್ವೋದ್ಯೋಗ ಶಾಲೆಯನ್ನು ಶ್ರೀ ವ್ಹಿ. ಬಿ. ದೇಸಾಯಿ, ಎ. ಇ. ಕಾರವಾರ ಅವರು ಸಂದರ್ಶಿಸಿ ಶಾಲೆಗೆ ಕೊಟ್ಟ ರಾಷ್ಟ್ರಪುರುಷರ ಭಾವಚಿತ್ರಗಳ ಅನಾವರಣ ಸಮಾರಂಭವನ್ನು ದಿ. ೨೯-೯-೫೫ರಂದು ನೆರವೇರಿಸಿದರು.

ಜಮಖಂಡಿ :– ಇಲ್ಲಿಯ ಸ. ಪ್ರಾ. ಶಾಲೆಯಲ್ಲಿ "ಸಮಾಜ ದಿನವನ್ನು" ಆಚರಿಸಲಾಯಿತು. ಮುಂಬಯಿ ರಾಜ್ಯದ ಆರೋಗ್ಯ ಖಾತೆಯ ಉಪಮಂತ್ರಿಗಳಾದ ಶ್ರೀ ಬಿ. ಡಿ. ಜತ್ತಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. "ಕಿಶೋರವಾಣಿ"ಯ ಉದ್ಘಾಟನೆಯು ಮಾನ್ಯ ಅತಿಥಿಗಳ ಅಮೃತ ಹಸ್ತದಿಂದ ಜರುಗಿತು. ಶ್ರೀ ಬೆಣ್ಣೂರ M.Ed. ಎ. ಇ. ವಿಜಾಪುರದವರ ಅಮೃತ ಹಸ್ತದಿಂದ ಪ್ರದರ್ಶನದ ಉದ್ಘಾಟನೆಯು ಜರುಗಿತು.

ಪ್ರ ಕ ಟ ನೆ

ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ, ೧೯೫೬

ಗಂಡು ಹಾಗೂ ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯು ಸಂಬಂಧಿಸಿದ ಅಭ್ಯಾಸ ಪತ್ರಿಕೆಯ ಪ್ರಕಾರ ಸೋಮವಾರ ದಿನಾಂಕ ೯-೪-೧೯೫೬ರಿಂದ ಶನಿವಾರ ದಿನಾಂಕ ೧೪-೪-೧೯೫೬ರ ವರೆಗೆ ಧಾರವಾಡ ಜಿಲ್ಲೆಯ ಕೆಳಗಿನ ಕೇಂದ್ರಗಳಲ್ಲಿ ನಡೆಯುವದು.

ಅ. ನಂ.	ಕೇಂದ್ರಗಳು	ಪಿ. ಎಸ್. ಸಿ. ಪರೀಕ್ಷೆಯ ಅಧ್ಯಕ್ಷರು
೧	ಧಾರವಾಡ	ಲೇಡಿ ಸುಪರಿಂಟೆಂಡೆಂಟ ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.
೨	ಹುಬ್ಬಳ್ಳಿ	ಹೆಡ್‌ಮಿಸ್ಟ್ರೆಸ್, ಎ. ಕೆ. ಗರ್ಲ್ಸ ಹಾಯಸ್ಕೂಲ, ಧಾರವಾಡ.
೩	ಹಾವೇರಿ (ಮುಖ್ಯ ಕೇಂದ್ರ) ರಾಣೆಬೆನ್ನೂರ (ಉಪ ಕೇಂದ್ರ) ಸವಣೂರ (,,)	ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

೪	ಗದಗ (ಮುಖ್ಯ ಕೇಂದ್ರ) ಶಿರಹಟ್ಟಿ (ಉಪ ಕೇಂದ್ರ) ರೋಣ (,,) ನರಗುಂದ (,,)	ಡೆಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ

ಬೇಸಿಕ್ ಪ್ರಾಥಮಿಕ ಶಾಲಾಪ್ರಮಾಣ ಪತ್ರ ಪರೀಕ್ಷೆಯು ಈ ಮೊದಲು ಪ್ರತ್ಯೇಕವಾಗಿ ನಡೆಯುತ್ತಿದ್ದು, ೧೯೫೬ನೆಯ ಇಸ್ವಿಯಿಂದ ಈ ಪ್ರತ್ಯೇಕತೆಯನ್ನು ಬಂದು ಮಾಡಿದೆ. ಕೆಳಗೆ ಕಾಣಿಸಿದ ಒಕ್ಕಲುತನ ಸಾಲೆಗಳ ವಿದ್ಯಾರ್ಥಿಗಳು ತಮ್ಮ ಎದುರಿಗೆ ತೋರಿಸಿದ ಕೇಂದ್ರಗಳಲ್ಲಿ ಪರೀಕ್ಷೆಗೆ ಕೂಡ್ರಬೇಕು.

೧.	ರಟ್ಟೀಹಳ್ಳಿ	ಹಿರೇಕೆರೂರ ತಾಲೂಕ	ರಾಣೆಬೆನ್ನೂರ ಉಪ ಕೇಂದ್ರ
೨.	ಕುಡುಪಲಿ	.... ,, ...	,,
೩.	ಮಾಕನೂರ	ರಾಣೆಬೆನ್ನೂರ ತಾಲೂಕ	,,
೪.	ಮೋಟೆಬೆನ್ನೂರ	.... ,, ...	,,
೫.	ದೇವಗಿರಿ	ಹಾವೇರಿ ತಾಲೂಕ	,,
೬.	ಗುತ್ತಲ	.... ,, ...	,,
೭.	ಮುಳಗುಂದ	ಗದಗ ತಾಲೂಕ	ಗದಗ ಕೇಂದ್ರ
೮.	ಡಂಬಳ	.... ,, ...	,,
೯.	ಹುಲಕೋಟಿ	.... ,, ...	,,
೧೦.	ನರೇಗಲ್ಲ	ರೋಣ ತಾಲೂಕ	,,
೧೧.	ಅಣ್ಣೀಗೇರಿ	ನವಲಗುಂದ ತಾಲೂಕ	,,
೧೨.	ತುಪ್ಪದ ಕುರಹಟ್ಟಿ	.... ,, ...	,,
೧೩.	ನರೇಂದ್ರ	ಧಾರವಾಡ ತಾಲೂಕ	ಧಾರವಾಡ ಕೇಂದ್ರ
೧೪.	ಅಮ್ಮಿನಭಾವಿ	.... ,, ...	,,
೧೫.	ಕೊಟಬಾಗಿ	.... ,, ...	,,
೧೬.	ಬ್ಯಾಹಟ್ಟಿ	ಹುಬ್ಬಳ್ಳಿ ತಾಲೂಕ	,,
೧೭.	ಸುಳ್ಳ	.... ,, ...	,,
೧೮.	ಶಿರಗುಪ್ಪಿ	.... ,, ...	,,
೧೯.	ಮಿಶ್ರಿಕೋಟಿ	ಕಲಘಟಗಿ ತಾಲೂಕ	,,
೨೦.	ದುಂಡಸಿ	ಶಿಗ್ಗಾಂವ ತಾಲೂಕ	,,

ಪರೀಕ್ಷೆಗೆ ಕೂಡ್ರಲಿಚ್ಛಿಸುವ ಉಮೇದವಾರರಿಗೆ ಅರ್ಹತೆಯ ಕರಾರುಗಳು—

(೧) ಎಜ್ಯುಕೇಶನಲ್ ಇನಸ್ಪೆಕ್ಟರರಿಂದ ವಿಶೇಷವಾಗಿ ಮುಕ್ತತೆಯನ್ನು ಪಡೆಯದ ಹೊರತು ಉಮೇದವಾರನು ಪರೀಕ್ಷೆಗೆ ಕೂಡ್ರಲಿಚ್ಛಿಸುವ ಹಳ್ಳಿಯಲ್ಲಿ ಹಿಂದಿನ ಆರು ತಿಂಗಳು ವಾಸವಾಗಿರಲಿಕ್ಕೆಬೇಕು. ವಾಸಿಸತಕ್ಕ ಈ ನಿರ್ಬಂಧವು ಸ್ತ್ರೀ ಉಮೇದವಾರರಿಗೆ ಅನ್ವಯಿಸುವದಿಲ್ಲ.

(೨) ಮಾನ್ಯತೆ ಹೊಂದಿದ ಶಾಲೆಯಲ್ಲಿ, ೭ನೆಯ ಇಯತ್ತೆಯಲ್ಲಿ ಉಮೇದವಾರನು ೧೨೦ ದಿನಗಳ ಹಾಜರಿಯನ್ನು ಇಟ್ಟಿರಬೇಕು. (ಪ್ರಾಥಮಿಕ ಇಲ್ಲವೆ ಮಾಧ್ಯಮಿಕ)

ಹಾಜರಿಯ ದಿನಗಳನ್ನು ಶಿಕ್ಷಣ ಖಾತೆಯ ಡಾಯರೆಕ್ಟರರ ಪರಿಪತ್ರ ನಂ. ಎಸ್‌-೬೨ (ಜಿ)-೨೧೬-ಡಿ ದಿನಾಂಕ ೨೮-೮-೧೯೫೬ನೇದ್ದರ ಪ್ರಕಾರ ಎಣಿಸಬೇಕು.

(i) ಶಾಲೆಯಲ್ಲಿ ಹಾಜರಿಯ ದಿನಗಳನ್ನು ಎಣಿಸುವಲ್ಲಿ ಒಂದೇ ತರದ ಪದ್ಧತಿ ಇರಬೇಕೆಂಬ ಉದ್ದೇಶದಿಂದ ಶನಿವಾರಗಳನ್ನು ಮತ್ತು ಅರ್ಧಬಿಡುವಿನ ದಿನಗಳನ್ನು ಪೂರ್ಣ ಕೆಲಸದ ದಿನಗಳೆಂದು

ತಿಳಿಯತಕ್ಕದ್ದು.

(ii) ಐದು ದಿನಗಳು **ಕಡಿಮೆ** ಇದ್ದುದನ್ನು ಯೋಗ್ಯ ಕಾರಣಗಳಿಗಾಗಿ ಜಿಲ್ಹೆಯ ಎಜ್ಯುಕೇಶನಲ್ ಇನಸ್ಪೆಕ್ಟರರು.

(iii) ೧೦ನೆಯ ಫೆಬ್ರುವರಿ ಮತ್ತು ಪ್ರತ್ಯಕ್ಷ ಪರೀಕ್ಷೆಯ ದಿನಾಂಕ ಇವುಗಳ ಮಧ್ಯದಲ್ಲಿಯ ಪ್ರತ್ಯಕ್ಷ ಕೆಲಸ ನಡೆದ ದಿನಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಮತ್ತು ಪರೀಕ್ಷೆಗೆ ಕೂಡ್ರಲು ಅರ್ಹತೆಯನ್ನು ನಿರ್ಣಯಿಸುವದಕ್ಕಾಗಿ ಉಮೇದವಾರನಿಗೆ ಈ ಎಲ್ಲ ದಿನಗಳ ಲಾಭವನ್ನು ಕೊಡಬೇಕು.

(iv) ವಿದ್ಯಾರ್ಥಿಯು ಒಂದೇ ಸಾಲೆಯಲ್ಲಿ ೧೨೦ ದಿನಗಳನ್ನು ತುಂಬಬೇಕೆಂಬ ಅವಶ್ಯಕತೆಯಿಲ್ಲ. ಅಭ್ಯಾಸದ ಒಂದು ವರ್ಷದ ಅವಧಿಯಲ್ಲಿ ಅವನು ಕಲಿತ ಎಲ್ಲಸಾಲೆಗಳ ಹಾಜರಿಯನ್ನು ಗಣಿಸಬೇಕು.

ಐದು ಮೈಲಿನ ತ್ರಿಜ್ಯದಲ್ಲಿ ಪೂರ್ಣ ಪ್ರಾಥಮಿಕ ಸಾಲೆ ಇಲ್ಲದಂಥ ಹಳ್ಳಿಗಳಿಂದ ಪರೀಕ್ಷೆಗೆ ಕೂಡ್ರತಕ್ಕ ಉಮೇದವಾರರಿಗೆ ಈ ನಿಯಮವು ಅನ್ವಯಿಸುವದಿಲ್ಲ.

ಸೂಚನೆ:— ವಿಶೇಷ ಪ್ರಸಂಗಗಳಲ್ಲಿ ಎಜ್ಯುಕೇಶನಲ್ ಇನಸ್ಪೆಕ್ಟರರು ತಮ್ಮ ಇಚ್ಛೆಯಂತೆ ಈ ಕರಾರನ್ನು ಪರೀಕ್ಷೆಯು ನಡೆಯಬೇಕೆಂದು ಸೂಚಿತವಾಗಿರುವ ತಿಂಗಳಿನ ೧ನೆಯ ತಾರೀಖಿಗೆ ೨೦ನೆಯ ವಯಸ್ಸನ್ನು ಮುಗಿಸಿದ ಅಥವಾ ಮುಗಿಸುವ ಪುರುಷ ಉಮೇದವಾರನ ಸಂಬಂಧದಲ್ಲಿ ಇಲ್ಲವೆ ೧೬ನೆಯ ವಯಸ್ಸನ್ನು ಮುಗಿಸಿದ ಅಥವಾ ಮುಗಿಸುವ ಸ್ತ್ರೀ ಉಮೇದವಾರಳ ಸಂಬಂಧದಲ್ಲಿ ರದ್ದುಮಾಡಬಹುದು.

(೩) ಪ್ರಾ. ಶಾ. ಪ್ರ. ಪ. ಪರೀಕ್ಷೆಗೆ ಕೂಡ್ರಲು ವಯಸ್ಸಿನ ನಿರ್ಬಂಧವಿಲ್ಲ.

(೪) **ಈ ಮೊದಲು ಜರುಗಿದ ಹಳೆ** ಅಥವಾ ಹೊಸ ಅಭ್ಯಾಸಕ್ರಮದ ಪ್ರಾ. ಶಾ. ಪ್ರ. ಪ. ಪರೀಕ್ಷೆಯಲ್ಲಿ ಪಾಸಾದ ಉಮೇದವಾರರು ತದನಂತರ ಪರೀಕ್ಷೆಗೆ ಕೂಡ್ರುವದರ ಸಲುವಾಗಿ ಸಾಲೆಯಲ್ಲಿ ೧೨೦ ದಿನಗಳ ಹಾಜರಿಯನ್ನು ತುಂಬಬೇಕೆಂಬ ಕರಾರನ್ನು ಪಾಲಿಸುವದು ಅವಶ್ಯವಿಲ್ಲ.

(೫) **ಮಾಧ್ಯಮಿಕ ಸಾಲೆಗಳ ಉಮೇದವಾರರಿಗಾಗಿ:—** ಮಾನ್ಯತೆ ಪಡೆದ ಮಾಧ್ಯಮಿಕ ಸಾಲೆಗಳಲ್ಲಿ ಪರೀಕ್ಷೆಯು ನಡೆಯುವ, ಸಾಲೆಯ ವರ್ಷದಲ್ಲಿ ೮ನೆಯ ಅಥವಾ ಅದಕ್ಕೂ ಮೇಲಿನ ಇಯತ್ತೆಯಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ, ಅವರು ಬೇರೆ ರೀತಿಯಿಂದಲೂ ಅರ್ಹರಿದ್ದರೆ, ಪರೀಕ್ಷೆಗೆ ಕೂಡ್ರಲು ಪರವಾನಿಗೆ ದೊರೆಯುವದು. ಇದರಂತೆ, ಈ ಹಿಂದೆ ಯಾವದೇ ವೇಳೆಗೆ ೮ನೆಯ ಮತ್ತು ಅದಕ್ಕೂ ಮೇಲಿನ ಇಯತ್ತೆಗಳಿಂದ ತಮ್ಮ ಅಭ್ಯಾಸವನ್ನು ಬಿಟ್ಟಂಥ ಉಮೇದವಾರರಿಗೆ, ಅವರು ಬೇರೆ ರೀತಿಯಿಂದ ಅರ್ಹರಿದ್ದರೆ, ಪರೀಕ್ಷೆಗೆ ಕೂಡ್ರಲು ಪರವಾನಿಗೆ **ದೊರೆಯುವದು.** ಈ ಉಮೇದವಾರರು ತಮ್ಮ ಅರ್ಜಿಯ ಜೊತೆಗೆ ಈ ಬಗ್ಗೆ ತಾವು ಹಿಂದೆ ಕಲಿತ ಮಾಧ್ಯಮಿಕ ಸಾಲೆಯ ಮುಖ್ಯಾಧ್ಯಾಪಕರಿಂದ ಸರ್ಟಿಫಿಕೇಟನ್ನು ಇಡಬೇಕು.

೧೨೦ ದಿನಗಳ ಹಾಜರಿಯು ಮಾಧ್ಯಮಿಕ ಸಾಲೆಗಳ ೮ನೆಯ ಹಾಗು ಅದಕ್ಕೂ ಮೇಲಿನ ಇಯತ್ತೆಗಳಿಂದ ಪರೀಕ್ಷೆಗೆ ಕೂಡ್ರುವ ವಿದ್ಯಾರ್ಥಿಗಳಿಗೆ ಅನ್ವಯಿಸುವದಿಲ್ಲ.

(೬) ಪರೀಕ್ಷೆಯ ಪರವಾನಗಿಯ ಅರ್ಜಿಗಳನ್ನು ನಿರ್ದಿಷ್ಟ ಮುದ್ರಿತ ನಮೂನೆಯಲ್ಲಿ ಕಳಿಸಬೇಕು. ಮತ್ತು ಉಮೇದವಾರನು ಪರೀಕ್ಷೆಗೆ ಕೂಡ್ರಲಿಚ್ಛಿಸುವ ಕೇಂದ್ರದ ಅಧ್ಯಕ್ಷರಿಗೆ ಉಲ್ಲೇಖಿತವಾಗಿರಬೇಕು.

ಅರ್ಜಿಯ ನಮೂನೆಗಳು, ವಿನಂತಿಯ ಮೇರೆಗೆ, (ಮೇಲ್ಕಾಣಿಸಿದ) ಪರೀಕ್ಷಾಸಮಿತಿಯ ಅಧ್ಯಕ್ಷರಿಂದ ದೊರೆಯುವವು.

(೭) ಪರೀಕ್ಷೆಯ ಪರವಾನಗೆಯ ಅರ್ಜಿಗಳು ಮತ್ತು ಪ್ರತಿ ಉಮೇದವಾರನಿಗೆ ಪರೀಕ್ಷೆಯ ಫೀ ಹಣ ಮೂರು ರೂಪಾಯಿಗಳು ಸಂಬಂಧಿಸಿದ ಕೇಂದ್ರದ ಪರೀಕ್ಷಾ ಸಮಿತಿಯ ಅಧ್ಯಕ್ಷರಿಗೆ ೧೯೫೬ ಫೆಬ್ರುವರಿ ೧೦ರಂದು ಇಲ್ಲವೆ ಅದರೊಳಗಾಗಿ ಮುಟ್ಟಲಿಕ್ಕೇಬೇಕು. ಈ ತಾರೀಖಿನ ನಂತರ ಅರ್ಜಿಯನ್ನಾಗಲಿ, ಫೀ ಹಣವನ್ನಾಗಲಿ ಯಾವದೇ ಕಾರಣದಿಂದ ಸ್ವೀಕರಿಸಲಾಗುವದಿಲ್ಲ.

ಹಿಂದುಳಿದ ವರ್ಗಗಳ ಉಮೇದವಾರರಿಗೆ (ಶೆಡ್ಯೂಲ್ಡ ಜಾತಿಗಳು, ಗುಡ್ಡಗಾಡ ಜನಾಂಗಗಳು, ಅಥವಾ ರಾಜ್ಯ **ಸರಕಾರದಿಂದ ಹಿಂದುಳಿದವು** ಎಂದು ವರ್ಗೀಕರಿಸಲ್ಪಟ್ಟ ಗುಂಪುಗಳು.) ಪರೀಕ್ಷೆಯ ಫೀ ಹಣವು ಒಂದು

ಕೂಡಾಯಿ ಮಾತ್ರ ಇರುವದು.

ಪರೀಕ್ಷೆಯು ಸ್ವೀಕರಿಸುವ ಕ್ರಮದ ಬಗ್ಗೆ ೧೯೫೫ನೆಯ ಇಸ್ವಿಯ ಜೂನ ತಿಂಗಳ ' ಪ್ರಾಥಮಿಕ ಶಿಕ್ಷಣ ' ಸಂಚಿಕೆಯನ್ನು ನೋಡಿರಿ.

ಅರ್ಜಿಯ ನಮೂನೆಗಳನ್ನು ಒಂದೇ ಕಟ್ಟಿನಲ್ಲಿ (ಬಂಡಲ್) ಕಳಿಸಬೇಕು; ಮತ್ತು ಕೆಳಗಿನ ಸೂಚನೆಗಳನ್ನು ಲಕ್ಷ್ಯದಲ್ಲಿಡಬೇಕು.

(i) ೪ನೆಯ ಮತ್ತು ೫ನೆಯ ಸದರುಗಳಲ್ಲಿ ತೆಗೆದುಕೊಂಡ ವಿಷಯಗಳ ಪ್ರಕಾರ ಅರ್ಜಿಗಳನ್ನು ವಿಂಗಡಿಸಬೇಕು.

(ii) ಅರ್ಜಿಗಳನ್ನು ಅಕ್ಷರಾನು ಕ್ರಮದಂತೆ ಹೊಂದಿಸಬೇಕು. (ಉಮೇದವಾರರ ಹೆಸರುಗಳಿಂದ ಆರಂಭಿಸುವದು; ಕನ್ನಡ ಅಕ್ಷರಾನುಕ್ರಮವನ್ನು ಅನುಸರಿಸಬೇಕು.)

(iii) ಅರ್ಜಿಯ ಬಲ ಮೇಲಿನ ಮೂಲಿಯಲ್ಲಿ ಹಳೆ, ಖಾಸಗಿ ಮತ್ತು / ಅಥವಾ ಹಿಂದುಳಿದ ಉಮೇದವಾರರ ಸಂಬಂಧದಲ್ಲಿ ಹಳೆ, ಖಾಸಗಿ ಮತ್ತು / ಅಥವಾ ಹಿಂದುಳಿದವರು ಎಂದು ಕೆಂಪು ಮಸಿಯಲ್ಲಿ ಬರೆಯಬೇಕು.

(iv) ಹಳೆಯ ಉಮೇದವಾರರ ಸಂಬಂಧದಲ್ಲಿ, ಅರ್ಜಿಯ ೨ನೆಯ ಪುಟದ ಮೇಲೆ ಸಾಲೆಗಳ ಹೆಡ್ ಮಾಸ್ತರರಿಂದ ತುಂಬಲ್ಪಡುವ ಸರ್ಟಿಫಿಕೇಟುಗಳ ಕೆಳಗೆ ಉಮೇದವಾರನು ಮೊದಲು ಕುಳಿತ ಸೀಟ ನಂಬರು, ಪರೀಕ್ಷೆಯ ವರ್ಷ, ಕೇಂದ್ರದ ಹೆಸರು ಈ ಮಾಹಿತಿಯನ್ನು ಅವಶ್ಯವಾಗಿ ಕೊಡಲೇಬೇಕು.

(೮) ಪ್ರಾ. ಶಾ. ಪ್ರ. ಪ. ಪರೀಕ್ಷೆಗೆ ಉಮೇದವಾರರನ್ನು ಕಳಿಸುವ ಪ್ರತಿಯೊಬ್ಬ ಪ್ರಾಥಮಿಕ ಅಥವಾ ಮಾಧ್ಯಮಿಕ ಸಾಲೆಗಳ ಹೆಡ್ ಮಾಸ್ತರರು ನಿರ್ದಿಷ್ಟ ನಮೂನೆಯಲ್ಲಿ ಉಮೇದವಾರರ ವಿವರಗಳನ್ನು ಪರೀಕ್ಷೆಯು ಮುಗಿದ ಒಂದು ವಾರದೊಳಗಾಗಿ ಸಂಬಂಧಿಸಿದ ಕೇಂದ್ರದ ಪರೀಕ್ಷಾ ಸಮಿತಿಯ ಅಧ್ಯಕ್ಷರ ಕಡೆಗೆ ಕಳಿಸಿದರೆ, ಅಧ್ಯಕ್ಷರು ಆಯಾ ಹೆಡ್ ಮಾಸ್ತರರಿಗೆ ಆ ಕೇಂದ್ರದಲ್ಲಿ ಆಯಾ ಶಾಲೆಯಿಂದ ಪರೀಕ್ಷೆಗೆ ಕುಳಿತ ಉಮೇದವಾರರ ನಿಜವಾದ ಪರಿಣಾಮವನ್ನು ಪೂರೈಸುವರು. ಹೀಗೆ ಬಂದ ಪತ್ರಿಕೆಗಳನ್ನು ತುಂಬಿ ಪರೀಕ್ಷಾ ಕೇಂದ್ರದ ಅಧ್ಯಕ್ಷರು ಸಹಿ ಮಾಡಿ ಸಂಬಂಧಿಸಿದ ಶಾಲೆಗಳ ಹೆಡ್ ಮಾಸ್ತರರಿಗೆ ಕಳಿಸುವರು. ಸಾಲೆಗಳ ಹೆಡ್ ಮಾಸ್ತರರು ಯಾದಿಯಲ್ಲಿಯ ಉಮೇದವಾರರ ಸಂಬಂಧ ಅವಶ್ಯವಿದ್ದ ವಿವರಗಳನ್ನು ಅತ್ಯಂತ ದಕ್ಷತೆಯಿಂದ ತುಂಬಬೇಕು. ನಿರ್ದಿಷ್ಟ ನಮೂನೆಯ ಪ್ರತಿಗಳನ್ನು ಪರೀಕ್ಷಾ ಕೇಂದ್ರಗಳ ಅಧ್ಯಕ್ಷರಿಂದ ಅರ್ಜಿಮಾಡಿ ಪುಕ್ಕಟೆಯಾಗಿ ಪಡೆಯಬೇಕು.

(೯) ಮೂಲೋದ್ಯೋಗಗಳ ಮತ್ತು " ಆರೋಗ್ಯ ಹಾಗೂ ಸಾಂಘಿಕ ಜೀವನದಲ್ಲಿ ತರಬೇತಿ " ಇವುಗಳ ಪ್ರಾಯೋಗಿಕ ಪರೀಕ್ಷೆಯು ಸಾಮಾನ್ಯವಾಗಿ ೧೫-೨-೧೯೫೬ ಕ್ಕೆ ಪ್ರಾರಂಭವಾಗಿ ೨೫-೩-೧೯೫೬ಕ್ಕೆ ಮುಗಿಯುವದು. ಈ ಅವಧಿಯಲ್ಲಿ ಎಲ್ಲ ಸಾಲೆಗಳನ್ನು ಮುಗಿಸುವದು ಆಗದಿದ್ದರೆ ಉಳಿದ ಸಾಲೆಗಳ ಪರೀಕ್ಷೆಯು ಬರೆಹ ಪರೀಕ್ಷೆಯು ಮುಗಿದನಂತರ ಎಪ್ರಿಲ್ ತಿಂಗಳಲ್ಲಿ ಸಂಬಂಧಿಸಿದ ಸಾಲೆಗಳಲ್ಲಿ ನಿಶ್ಚಿತವಾಗುವದು. ಬೇಸಿಕ್ ಸಾಲೆಗಳ ಹೆಡ್ ಮಾಸ್ತರರು ಪರೀಕ್ಷೆಗೆ ಕಟ್ಟಿದ ಹಳೆಯ ಉಮೇದವಾರರಿಗೆ ಈ ಸೂಚನೆಗಳನ್ನು ತಿಳಿಸಬೇಕು.

(೧೦) ಉರ್ದು, ಮರಾಠಿ ಮತ್ತು ಇತರ ಭಾಷೆಗಳ ಮುಖಾಂತರ ಕೂಡ್ರುವ ಉಮೇದವಾರರ ಪರೀಕ್ಷೆಯು ಆಯಾ ಕೇಂದ್ರಗಳಲ್ಲಿ ನಡೆಯುವದು.

(೧೧) ಮೂರು ಬಹುಮಾನಗಳು, ಮೊದಲನೆಯದು ರೂ. ೨೫-೦-೦ ಎರಡನೆಯದು ರೂ. ೧೫-೦-೦ ಮೂರನೆಯದು ರೂ. ೧೦-೦-೦ ಪರೀಕ್ಷೆಯಲ್ಲಿ ಇದೇ ಜಿಲ್ಹೆಗೆ, ಉಮೇದವಾರನು ಹುಡುಗ, ಹುಡಿಗೆಯೆಂಬುದನ್ನು ಗಣಿಸದೆ ಮತ್ತು ಉಮೇದವಾರನ ಪರೀಕ್ಷೆಯ ಮಾಧ್ಯಮವನ್ನು ಗಣಿಸದೆ, ಅನುಕ್ರಮವಾಗಿ ಒಂದನೆಯ ಎರಡನೆಯ, ಮೂರನೆಯ ಸ್ಥಾನವನ್ನು ಪಡೆದ ಉಮೇದವಾರರಿಗೆ ಕೊಡಲ್ಪಡುವವು.

(೧೨) ಪರೀಕ್ಷೆಯ ವಿವರವಾದ ಕಾರ್ಯಕ್ರಮವನ್ನು ಹಿಂದಿನಿಂದ ಪ್ರಸಿದ್ಧಿಪಡಿಸಲಾಗುವದು. ಪ್ರ. ಸಂ.

೧೯೫೬ನೆಯ ಫೆಬ್ರುವರಿ ತಿಂಗಳಲ್ಲಿ ಜರಗಲಿರುವ ಹಾಯ ಮತ್ತು ಮಿಡಲ್ ಸ್ಕೂಲ ಸ್ಕಾಲರಶಿಪ್ಪ ಪರೀಕ್ಷೆಗಳ

— ವೇಳಾಪತ್ರಿಕೆ —

ವಾರ ಹಾಗು ದಿನಾಂಕ	ವಿಷಯ	ಮಿಡಲ್ ಸ್ಕೂಲ ಸ್ಕಾಲರ ಶಿಪ್ಪ ಪರೀಕ್ಷೆ ವೇಳೆ	ಹಾಯುಸ್ಕೂಲ ಸ್ಕಾಲರ ಶಿಪ್ಪ ಪರೀಕ್ಷೆ ವೇಳೆ	ಗುಣ
ಸೋಮವಾರ ೬-೨-೧೯೫೬	ಉಮೇದವಾರರ ಹಾಜರಿ ತೆಗದುಕೊಳ್ಳುವದು	೧೧ ರಿಂದ ೧೧-೧೫	೧೧ ರಿಂದ ೧೧-೧೫	—
	ಗಣಿತ	೧೧-೩೦ ರಿಂದ ೧೨-೩೦	೧೧-೩೦ ರಿಂದ ೧೨-೩೦	೧೦೦
	ಸಾಮಾನ್ಯ ಜ್ಞಾನ ಕಾಗದ ೧. (ಇತಿಹಾಸ ಭೂಗೋಲ ರಾಜಕೀಯ)	೧-೩೦ ರಿಂದ ೨-೧೫	೧-೩೦ ರಿಂದ ೨-೧೫	೫೦
	ಸಾಮಾನ್ಯ ಜ್ಞಾನ ಕಾಗದ ೨. (ಭೂಗೋಲ ನೈಸರ್ಗಿಕ ಶಾ. ವಿಷಯ)	೩-೩೦ ರಿಂದ ೪-೧೫	೩-೩೦ ರಿಂದ ೪-೩೦	೫೦
ಮಂಗಳವಾರ ೭-೨-೧೯೫೬	ಪ್ರಾದೇಶಿಕ ಭಾಷೆ ಕಾಗದ ೧. (ಮೌನವಾಚನ,ಮರುಬರೆಹ,ನಿಬಂಧಬರೆಹ)	೨-೦ ರಿಂದ ೨-೪೫	೨-೦ ರಿಂದ ೩-೦	೫೦
	ಪ್ರಾದೇಶಿಕ ಭಾಷೆ ಕಾಗದ ೨. (ವಾಚನ, ತಿಳಿದುಕೊಳ್ಳುವದು ಇತ್ಯಾದಿ)	೪-೦ ರಿಂದ ೪-೪೫	೪-೦ ರಿಂದ ೫-೦	೫೦

ಧಾರವಾಡ ದಿ. ೨೯—೧೨—೫೫

ಪ್ರ. ಸಂ.



ನಾಟ್ಯ ಕಲೆಯ ಅಲ್ಪಾವಧಿ ತರಬೇತಿ ಕೇಂದ್ರದ (ಧಾರವಾಡ) ಭಾವಚಿತ್ರ
ದಿ. ೧೪-೧೧-೫೫ ರಂದು ಪ್ರಾರಂಭವಾಗಿ ದಿ. ೨-೧೨-೫೫ ರಂದು ಕೊನೆಗೊಂಡಿತು.

Regd. No. B. 53

ಸಹಜ ಸಾಹಿತ್ಯ ! ★ **ಜ್ಞಾನರಸ ಸಾಹಿತ್ಯ** ★ ಶಾಶ್ವತ ಸಾಹಿ

ಮಾಸಿದ ತಲೆಯನ್ನು ಮಡಿಮಾಡುವ ಪವಿತ್ರ ಸಾಹಿತ್ಯ !!

ಪ್ರತಿಯೊಂದು ವಾಚನಾಲಯದ ಬೆಲೆಯನ್ನು ಹೆಚ್ಚಿಸುವ ಪ್ರಭಾವೀ ಗ್ರಂಥಗಳು.

೧. ಪವಿತ್ರ ಜೀವನ (ಟಾಲಸ್ಟಾಯರ ಜಗದ್ವಿಖ್ಯಾತ ಕಥಾಸಂಗ್ರಹ) ೧-೨
೨. ಸುಂದರ ಕಥೆಗಳು (ಪಾಂಡಿಚೇರಿ ಆಶ್ರಮದ ಶ್ರೀ ತಾಯಿಯವರು ಹೇಳಿದವು) ೧-೪
೩. ಸಪ್ತಪದಿ (ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಏಕಾಂಕಗಳು) ೧-೪
೪. ದೀಪವರ್ತಿ (ಶ್ರೀ ಅರವಿಂದರ ೨ ಉಜ್ವಲ ಕಥೆಗಳು) ೦-೬
೫. ಶ್ರೀ ಅರವಿಂದರು (ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ) ೧-೮
೬. ಮುಗಿಲ ಜೇನು (ಉತ್ಸಾಹದಾಯಕವಾದ ಕವನ ಸಂಕಲನ) ೧-೮
೭. ಪೂಜಾ (ನಿತ್ಯ ಪಠನೀಯವಾದ ಗದ್ಯಗೀತೆಗಳು) ೦-೧೨
೮. ಭಾರತದ ಭವ್ಯಸಿದ್ಧತೆ (ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ) ೧-೦
೯. ಬೆಟ್ಟದ ಹೊಳೆ (ಪ್ರಗತಿಗಾಮಿಯಾದ ಕಾದಂಬರಿ) ೧-೪
೧೦. ಸ್ವರ್ಗದೋಲೆಗಳು (ಕರ್ನಾಟಕ ಸಂಸ್ಕೃತಿಯ ಕನ್ನಡಿ) ೧-೮
೧೧. ಕನ್ನಡ ಕುಲದೀಪ ಬಸವಣ್ಣ (ಉದಿತ ಜೀವನಕ್ಕೆ ಕೈಗೋಲು) ೧-೪
೧೨. ಗರತಿಯ ಬಾಳು (ನಿತ್ಯ ಜೀವನದ ರಸಘಟ್ಟಿ) ೧-೪
೧೩. ಆರ್ಯದೇಶಭಕ್ತಿ (ಧ್ಯೇಯ ಜೀವಿಗೆ ಈಸುಗುಂಬಳ) ೦-೩
೧೪. ಜೀವನ ದೃಷ್ಟಿ (ವಿವಿಧ ಪ್ರಬಂಧಗಳು) ೧-೨
೧೫. ದತ್ತ ಸಾಹಿತ್ಯ (ಶ್ರೀ ಬೇಂದ್ರೆ ಸಾಹಿತ್ಯ ಪರಿಚಯ) ೧-೮

ಇವಲ್ಲದೆ ಶ್ರೀ ಅರವಿಂದ ಮಹಾಯೋಗಿಗಳ ವಿವಿಧ ಸಾಹಿತ್ಯ ಗ್ರಂಥಗಳೂ ನಮ್ಮಲ್ಲಿ ಯೋಗ್ಯ ಬೆಲೆಗೆ ಸಿಗು ಹತ್ತು ರೂ.ಗಿಂತ ಹೆಚ್ಚಿನ ಬೆಲೆಯ ಪುಸ್ತಕ ಕೊಂಡುಕೊಳ್ಳುವವರ ಅಂಚೆ ವೆಚ್ಚವನ್ನು ನಾವೇ ನೋಡಿಕೊಳ್ಳುವೆವು.

ಶ್ರೀ ಅರವಿಂದ ಗ್ರಂಥಾಲಯ ಪ್ರೋ:— **ಚಡಚಣ** ಜಿ. ವಿಜ

— ಬಾಲ ವಾಚನಾಲಯಗಳ ಬೆಲೆ ಹೆಚ್ಚಿಸುವ, ಕನ್ನಡ ಕಂದನು ಕಾದಿಡುವ ಅಮೌಲ್ಯ ಕೃತಿಗಳು

ಪ್ರಾಥಮಿಕ ಶಿಕ್ಷಕರಿಂದ ನಡೆಸಲ್ಪಡುವ, ಒಂದೇ ಒಂದಾದ ಪ್ರಾಥಮಿಕ ಶಿಕ್ಷಕರ ಪ್ರೋತ್ಸಾಹನಾರ್ಥ ತೆರೆದ ಸಮಿತಿಯಿ
ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗಾಗಿಯೇ ಹೆಣೆದ

ಪುಟಚೆಂಡು - ಕವಿತಾ ಸಂಕಲನ — **ಆಣೆಕಲ್ಲು** - ಕಥಾ ಸಂಕಲನ

ಭಾಗ-೧. ೧೨೪, ಭಾಗ-೨. ೧೦೪ ಜನರ ಕವಿತೆಗಳು — ಭಾಗ-೧. ೪೦, ಭಾಗ-೨. ೩೬ ಜನರ ಕಥೆಗ

ಭಾಗ ೧ - ೧ ರಿಂದ ೪, ೨ - ೫ ರಿಂದ ೭ ವರ್ಗಕ್ಕೆ. ಬೆಲೆ ೧೨ ಆಣೆಯಂತೆ ಉತ್ತರದ ಶ್ರೀ ಬೇಂದ್ರೆಯವರಿಂದ ದ ಕುವೆಂಪು, ಪೂರ್ವದ ಶ್ರೀ ಕಾವ್ಯಾನಂದರಿಂದ ಪಶ್ಚಿಮದ ಗೋವಿಂದ ಪೈ ಅವರ ವರೆಗಿನ ೩೦೦ ಜನ ಲೇಖಕರ ಕೃತಿ, ವ ವ್ಯಕ್ತಿ ಪರಿಚಯಗಳನ್ನೂ ಒಂದೇ ಕಡೆಗೆ ಕಾಣಬೇಕೆಂದಿದ್ದರೆ, ಶಿಕ್ಷಕರಿಗೆ ಬೆಂಬಲ ನೀಡಲು ಇಂದೇ ಬರೆ
ವಿದ್ಯಾರ್ಥಿಗಳಿಗೆ ಅಂಚೆ ವೆಚ್ಚ ಉಚಿತ.

— ಶಿಕ್ಷಕರೆಲ್ಲ ಬೆಂಬಲನೀಡಿ ಸೇವೆ ತಕ್ಕೊಳ್ಳಬೇಕಾಗಿ ಬಿನ್ನಹ. —

ಭಾರತೀ ಸಾಹಿತ್ಯ ಭಂಡಾರ ಯರ
ಅಂಚೆ :— ಮನಗೋಳಿ— **ಜಿ.** ವಿಜಾಪು

Printed by Shri S. F. Kattimani at Manohar Power Printing Press, Hubli. Edited
Published by Sjts S. P. Patil, B. M. Shintri. S. R. Tatti & Smti. P. A. Bhaskar at the Kan

ಕನ್ನಡ

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು- ಶ್ರೀ ಎಸ್. ಬಿ. ಪಾಟೀಲ

ಧೀರನಾಯಕ ಸುಭಾಸಚಂದ್ರ ಬೋಸ ಅವರು

ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.
ಹಿಂದೀ ಅಲ್ಪಾವಧಿ ತರಬೇತಿ ವರ್ಗ



೧. ನೀರಸಾಗರ ಕೆರೆಯ ದಡ ಮತ್ತು
ನೀರಿನ ನಿಯಂತ್ರಣದ ಬುರುಜು.



೨. ಕ್ರೇನುಗಳು.
ಟ್ರಕ್ಕಿನಲ್ಲಿ ಮಣ್ಣನ್ನು ಹಾಕುತ್ತಿರುವದು.

೩. ನೀರಸಾಗರ ಆಣೆಕಟ್ಟಿನ
ಕೋಡಿಯ ದೃಶ್ಯ.

ಕನ್ನಡ ಪ್ರಾಥಮಿಕ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : **ಶ್ರೀ ಕೆ. ಬಿ. ತೇರಗಾಂವಕರ,** ಬಿ.ಎಸ್‌ಸಿ. (ಆನರ್ಸ), ಬಿ.ಟಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : **ಶ್ರೀ ಎಸ್. ಪಿ. ಪಾಟೀಲ,** ಬಿ.ಎ., ಬಿ.ಟಿ., ಡಿ.ಪಿ.ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೧ | ಫೆಬ್ರುವರಿ ೧೯೫೬ | **ಸಂಚಿಕೆ ೯**

— ಪರಿವಿಡಿ —

೧. ಸಂಪಾದಕೀಯ ೨
೨. ಜೀವನ ಶಿಕ್ಷಣ ವಾರ್ತೆಗಳು .... ಶ್ರೀಮತಿ ಪಿ. ಎ. ಭಾಸ್ಕರ ೪
೩. ಮೂಲಶಿಕ್ಷಣದ ಅರಿವು .... ಶ್ರೀ ಶಿಂತ್ರಿ ಬಸಪ್ಪನವರು ೫
೪. ಶಾಲಾ ವರ್ಗಗಳಲ್ಲಿ ಪುನರುಕ್ತಿಯೇ ? .... ಶ್ರೀ ರಾ. ರು. ಕುಪ್ಪಸದ, ವಿಜಾಪುರ ೮
೫. ಗಾಂಧೀಜಿಯವರು ಜಗತ್ತಿಗೆ ಬೀರಿದ ಸಂದೇಶಗಳು ಶ್ರೀ ಸಿ. ಜೆ. ಮೊಗಲಿ (ಶಿ. ವಿದ್ಯಾರ್ಥಿ) ೧೨
೬. ಸುಗ್ಗಿಯ ಸಂಪ್ರದಾಯಗಳು .... ಡಾ. ಬಿ. ಎಸ್. ಗದ್ದಗಿಮಠ ೧೫
೭. ರಾಷ್ಟ್ರೀಯ ಶಿಕ್ಷಣ — ಕಾರ್ಯಕರ್ತರ ಹೊಣೆ ಶ್ರೀ ವಿರೇಶ ಹಿರೇಮಠ ೨೦
೮. ನಾಟಕ ಕಲೆಯ ಅಲ್ಪಾವಧಿ ತರಬೇತಿ ಕೇಂದ್ರ ಶ್ರೀ ಗಂ. ನಾ. ಸಗರ ೨೧
೯. ಪ್ರಕಟನೆ ೨೨
೧೦. ಕಲಾದಗಿ ಬೀಟಿನಲ್ಲಿ ಪೆನ್ಸಿಲ ತಯಾರಿಸುವ ಯೋಜನಾ ಕಾರ್ಯ ಶ್ರೀ ಎಮ್. ಆರ್. ಗಾಣಿಗೇರ ೨೩
೧೧. ಗ್ರಂಥ ವಿಮರ್ಶೆ ೨೪
೧೨. ಪ್ರಾಥಮಿಕ ಶಿಕ್ಷಣ ಪ್ರಪಂಚ ೨೭
ಹೊದಿಕೆ ಪುಟ :— ವೀರ ನಾಯಕ ಸುಭಾಸಚಂದ್ರ ಬೋಸ ೧
ನೀರಸಾಗರ ಕೆರೆಯ ನಿರ್ಮಾಣದಲ್ಲಿ ಕೆಲ ದೃಶ್ಯಗಳು ೨
ನಮ್ಮ ಸಮಸ್ಯೆಗಳು ೩

ಸಂಪಾದಕೀಯ

ಕೇಂದ್ರ ಶಿಕ್ಷಣ ಸಲಹಾ ಮಂಡಲದ ಸೂಚನೆಗಳು.

ಅಖಿಲ ಭಾರತ ಮಾಧ್ಯಮಿಕ ಶಿಕ್ಷಣ ಸಮಿತಿಯವರ ಸೂಚನೆಗಳನ್ನು ಸ್ವೀಕರಿಸಿ ಕೇಂದ್ರ ಶಿಕ್ಷಣ ಸಲಹಾ ಮಂಡಲದವರು ಮಾಧ್ಯಮಿಕ ಸಾಲೆಗಳಲ್ಲಿ ಮೂರು ಭಾಷೆಗಳನ್ನು ಕಡ್ಡಾಯವಾಗಿ ಕಲಿಸಬೇಕೆಂದು ನಿರ್ಣಯಿಸಿದ್ದಾರೆ. ಈ ವಿಷಯದಲ್ಲಿ ರಾಜ್ಯಗಳ ಅಭಿಪ್ರಾಯಗಳನ್ನೂ ಕೇಳಬಹುದು. ಜೀವನ ಶಿಕ್ಷಣದ ಬಗೆಗೂ ಮಹತ್ವವಾದ ನಿರ್ಣಯಗಳನ್ನು ಅಂಗೀಕರಿಸಿದ್ದಾರೆ. ಆ ನಿರ್ಣಯಗಳ ಪ್ರಕಾರ ಜೀವನ ಶಿಕ್ಷಣದ ಪ್ರಸಾರ ಹಾಗು ಬೆಳವಣಿಗೆಯನ್ನು ಸಾಧಿಸುವ ದೃಷ್ಟಿಯಿಂದ ಪ್ರತಿಯೊಂದು ರಾಜ್ಯದಲ್ಲಿ ಯೋಜನಾ ಮಂಡಲವು ಸ್ಥಾಪಿಸಲ್ಪಡುವದಲ್ಲದೆ ರಾಷ್ಟ್ರೀಯ ಮೂಲಭೂತ ಶಿಕ್ಷಣದ ಕೇಂದ್ರ ಹಾಗು ಜೀವನ ಶಿಕ್ಷಣದಲ್ಲಿಯ ಸಂಶೋಧನದ ರಾಷ್ಟ್ರೀಯ ಕೇಂದ್ರಗಳು ಹಳ್ಳಿಗಳಲ್ಲಿ ತೆರೆಯಲ್ಪಡುವವು. ಹಿಂದೀ ಭಾಷಾ ಶಿಕ್ಷಣದ ಸಮಸ್ಯೆ ಹಾಗು ಪದ್ಧತಿಗಳನ್ನು ಕೂಲಂಕಷವಾಗಿ ಪರಿಶೀಲಿಸುವ ನಿರ್ಣಯವನ್ನು ಮಾಡಿದ್ದಾರೆ; ಮತ್ತು ಶಿಕ್ಷಣದ ವಿವಿಧ ಹಂತಗಳ ಅಭ್ಯಾಸಕ್ರಮಗಳಲ್ಲಿ ಗಾಂಧೀ ತತ್ವಗಳ ಬೋಧನೆಯನ್ನು ಸಮಾವೇಶ ಮಾಡಬೇಕೆಂದೂ ತೀರ್ಮಾನಿಸಿದ್ದಾರೆ.

ಇತ್ತೀಚಿಗಿನ ಗಲಭೆಗಳೂ ವಿದ್ಯಾರ್ಥಿಗಳೂ

ರಾಜ್ಯ ಪುನರ್ಘಟನಾ ಆಯೋಗದವರು ಹೋದ ಸಪ್ಟಂಬರ ತಿಂಗಳಲ್ಲಿ ತಮ್ಮ ವರದಿಯನ್ನು ಕೇಂದ್ರ ಸರಕಾರಕ್ಕೆ ಒಪ್ಪಿಸಿದ ನಂತರ ಅದರಲ್ಲಿ ಅಡಕವಾದ ಸೂಚನೆಗಳ ಬಗೆಗೆ ರಾಜ್ಯ ಹಾಗು ಕೇಂದ್ರ ವಿಧಿಮಂಡಲಗಳ, ಕಾಂಗ್ರೆಸ್ಸಿನ ಕಾರ್ಯನಿರ್ವಾಹಕ ಸಮಿತಿಯ ಮುಖ್ಯಮಂತ್ರಿಗಳ ಹಾಗು ಇನ್ನುಳಿದ ರಂಗಗಳ ಆಲೋಚನೆ ಪ್ರತ್ಯಾಲೋಚನೆಗಳನ್ನು ಗಮನಿಸಿ ಕೇಂದ್ರ ಸರಕಾರವು ಅಂಗೀಕರಿಸಿದ ಕೊನೆಯ ನಿರ್ಣಯಗಳನ್ನು ರಾಷ್ಟ್ರದ ಮುಂದಿಡುತ್ತ ಪ್ರಧಾನ ಮಂತ್ರಿಗಳಾದ ಶ್ರೀ ನೇಹರೂರವರು ಹೋದ ತಿಂಗಳ ದಿನಾಂಕ ೧೬ರಂದಿನ ರಾತ್ರಿ ದಿಲ್ಲಿಯ ಆಕಾಶವಾಣಿಯಿಂದ ಆ ಎಲ್ಲ ನಿರ್ಣಯಗಳನ್ನು ಶಾಂತತೆ ಹಾಗು ಸಹಕಾರಗಳಿಂದ ಕಾಣಬೇಕೆಂದು ಜನತೆಯನ್ನು ಬಿನ್ನವಿಸಿದರು. ಸಾಮಾನ್ಯವಾಗಿ ಆಯೋಗದ ಸಿಫಾರಸುಗಳನ್ನೆಲ್ಲ ಒಪ್ಪಿಕೊಂಡಿದ್ದರೂ ಮೂರು ತಿಂಗಳ ಅವಧಿಯಲ್ಲಿ ನಡೆದ ಘಟನೆಗಳನ್ನು ಲಕ್ಷಿಸಿ ಕೇಂದ್ರ ಸರಕಾರದವರು ಹಲಕೆಲವು ಬದಲಾವಣೆಗಳನ್ನು ಸೂಚಿಸಿದರು. ಇಂಥ ಕೆಲವು ಬದಲಾವಣೆಗಳು ಮುಖ್ಯವಾಗಿ ಮಹಾರಾಷ್ಟ್ರ, ಬಂಗಾಲ, ಬಿಹಾರ, ಓರಿಸಾ ರಾಜ್ಯಗಳಿಗೆ ಒಪ್ಪಿತವಾಗದ್ದರಿಂದ ಅಲ್ಲಿ ತೀವ್ರ ಗಲಭೆಗಳು ಸಂಭವಿಸಿ ಕೆಲವು ಕಡೆ ಆಸ್ತಿ ಹಾಗು ಪ್ರಾಣ ಹಾನಿಯಾಗಿ, ಅಂತರ ರಾಷ್ಟ್ರೀಯ ರಂಗದಲ್ಲಿ ತಟಸ್ಥ ಧೋರಣೆಯನ್ನು ತಳೆದು ವಿಶ್ವಶಾಂತಿ ಹಾಗು ಸಹಜೀವನದ ತತ್ವಗಳ ಅಮರ ಸಂದೇಶವನ್ನು ವಿಶ್ವದ ಮೂಲೆಮೂಲೆಗೂ ಯಶಸ್ವಿಯಾಗಿ ಮುಟ್ಟಿಸಿ ಎಲ್ಲರ ಮೆಚ್ಚುಗೆಯನ್ನು ಪಡೆದ ಭಾರತದ ಕೀರ್ತಿಗೆ ಕಲಂಕ ಬಂದಿದೆ. ವ್ಯಕ್ತಿಗಳೂ ಸಂಸ್ಥೆಗಳೂ ತಮಗೆ ಅಸಮ್ಮತವಾದ ವಿಷಯಗಳ ಬಗ್ಗೆ ಅಭಿಪ್ರಾಯಗಳನ್ನು ವ್ಯಕ್ತಮಾಡಲು ಯೋಗ್ಯವಾದ ರೀತಿನೀತಿಗಳನ್ನು ಬದಿಗಿರಿಸಿ ತಮ್ಮ ಅನುಯಾಯಿಗಳನ್ನು ವಿಧ್ವಂಸಕ ಚಟುವಟಿಕೆಗಳಿಗೆ ಪ್ರಚೋದಿಸಿ ಪರಿಸ್ಥಿತಿಯನ್ನು ಹದಗೆಡಿಸಿ ಸರಕಾರವು ಗಂಭೀರ ವಾತಾವರಣವನ್ನು ಎದುರಿಸುವಂತೆ ಮಾಡಿದುದು ಯಾವ ದೃಷ್ಟಿಯಿಂದಲೂ ಸಮರ್ಥನೀಯವಾಗದು. ಇದು ನಮ್ಮ ರಾಷ್ಟ್ರದ ಭವಿಷತ್ತನ್ನು ನಿರ್ಮಿಸುವ ಇಂದಿನ ವಿದ್ಯಾರ್ಥಿಗಳಿಗೆ ಸ್ಪಷ್ಟವಾಗಿ ತಿಳಿಯಬೇಕು. ಹಾಗೆ ಶಿಕ್ಷಕರು ಯತ್ನಿಸುವದು ಅತ್ಯಗತ್ಯ. ಯಾಕಂದರೆ ಎಳೆವಯಸ್ಸಿನ ವಿದ್ಯಾರ್ಥಿಗಳು ತಮಗೆ ಇಷ್ಟವಾದ ಬೇಡಿಕೆಗಳನ್ನು ಸಾಧಿಸಲು ಸಮಾಜ ಘಾತುಕ ಚಟುವಟಿಕೆಗಳೇ ಒಳ್ಳೇ ಸಾಧನವೆಂದು ನಂಬುವ ಮನಸ್ಸುಳ್ಳವರಾದರೆ ರಾಷ್ಟ್ರಕ್ಕೆ ಅದರಂಥ ಕೇಡು ಮತ್ತೊಂದಿಲ್ಲ. ಅದರಿಂದ ಇದೀಗ ಪ್ರಾರಂಭವಾದ ಪ್ರಜಾಪ್ರಭುತ್ವಕ್ಕೆ ಬಲವಾದ ಪೆಟ್ಟು ಬೀಳಬಹುದು. ಸ್ವಾತಂತ್ರ್ಯ ಸಾಧನೆಗೆ ಮಾಡಿದ ಮಹಾತ್ಮರ ತಪಸ್ಸೂ ಸಮಾಜವಾದಿ ರಾಜ್ಯವನ್ನು ಕಟ್ಟಲು ರಾಷ್ಟ್ರನಾಯಕರು ಪಡುತ್ತಿರುವ ಪರಿಶ್ರಮಗಳೂ ವ್ಯರ್ಥವಾಗಬಹುದು. ವಿದ್ಯಾರ್ಥಿಗಳ ಸುತ್ತುಮುತ್ತಲು ಸಂಭ

ವಿಸುತ್ತಿರುವ ಘಟನೆಗಳ ಬಗೆಗೆ ಅವರಿಗೆ ರಾಷ್ಟ್ರದ ಐಕ್ಯತೆ ಹಾಗು ಘನತೆಗಳ ದೃಷ್ಟಿಯಿಂದ ಸರಿಯಾದ ತಿಳುವಳಿಕೆಯಾಗುವಂತೆ ನೋಡುವುದು ಶಿಕ್ಷಕರ ಮೇಲಿರುವ ಒಂದು ದೊಡ್ಡ ಹೊಣೆಯೆಂದು ನಾವು ಭಾವಿಸುವೆವು.

ನೇತಾಜಿ ಬೋಸರ ಜಯಂತಿ.

ಹೋದ ತಿಂಗಳ ದಿನಾಂಕ ೨೩ರಂದು ನೇತಾಜಿ ಸುಭಾಸಚಂದ್ರ ಬೋಸರ ಜಯಂತಿಯು ಎಲ್ಲ ಕಡೆಗೂ ಆಚರಿಸಲ್ಪಟ್ಟಿರಲು ಸಾಕು. ಭಾರತದ ಬಂಧ ವಿಮೋಚನೆಗಾಗಿ ಬ್ರಿಟಿಶರ ವಿರುದ್ಧ ಹೋರಾಡುವಾಗ ಶೂರ ಸುಭಾಸರು ತೋರಿಸಿದ ಸಾಹಸ, ತ್ಯಾಗ ಹಾಗು ಕ್ರಾಂತಿಗಳು ಬ್ರಿಟಿಶ ಸಾಮ್ರಾಜ್ಯವನ್ನೇ ಚಕಿತಗೊಳಿಸಿದ್ದವು. ಅವರ ಧೈರ್ಯಸ್ಥೈರ್ಯಗಳು, ಅಗಾಧವಾದ ಪಾಂಡಿತ್ಯ ಆಕರ್ಷಣೀಯವಾದ ವ್ಯಕ್ತಿತ್ವ, ಕಷ್ಟಕಾರ್ಪಣ್ಯಗಳ ಸಹಿಷ್ಣುತೆ, ಅದ್ಭುತ ಸಂಘಟನಾಶಕ್ತಿ, ಅದ್ವಿತೀಯ ತ್ಯಾಗ ಇವೆಲ್ಲವುಗಳಿಂದ ಅವರು ಭಾರತೀಯರಿಗೆ ನಚ್ಚಿನ ನಾಯಕರಾಗಿ ಒಂದು ಕಾಲು ಶತಮಾನದ ವರೆಗೆ ಭಾರತ ಮಾತೆಗೆ ಉಜ್ವಲವಾದ ಸೇವೆಯನ್ನು ಸಲ್ಲಿಸಿ ಸ್ವಾತಂತ್ರ್ಯ ವೀರರಲ್ಲಿ ಅಗ್ರಗಣ್ಯರಾದರು. ಇಂಥ ಭಾರತ ಪುತ್ರ ಶ್ರೇಷ್ಠನ ದಿವ್ಯ ಜೀವನದ ಬೆಳಕನ್ನು ನಾವೂ ಕಾಣಬೇಕು. ಆ ದಿಶೆಯಲ್ಲಿ ಪ್ರಯತ್ನ ಬೇಕು. ಅದುವೇ ಅವರ ನಿಜವಾದ ಜನ್ಮದಿನಾಚರಣೆ.

ಪ್ರಜಾರಾಜ್ಯ ದಿನೋತ್ಸವ.

ಕಳೆದ ತಿಂಗಳ ೨೬ ರಂದು ಭಾರತವು ಪ್ರಜಾರಾಜ್ಯವಾಗಿ ೬ ವರುಷಗಳು ಮುಗಿದು ೭ನೆಯ ವರುಷವು ಪ್ರಾರಂಭವಾಯಿತು. ಅಂದು ಭಾರತದ ಹೊರಗೂ ಒಳಗೂ ಉತ್ಸವಗಳು ವಿಜೃಂಭಣೆಯಿಂದ ನಡೆದವು, ಹಿಂದಿನ ಕೆಲವು ದಿನಗಳಲ್ಲಿ ಸಂಭವಿಸಿದ ದುರ್ಘಟನೆಗಳು ಪ್ರತಿಯೊಬ್ಬ ಭಾರತೀಯನ ಅಂತರಾಳದಲ್ಲಿ ಚುಚ್ಚುತ್ತಿದ್ದವು. ಪ್ರಭಾತ ಫೇರಿ, ರಾಷ್ಟ್ರಧ್ವಜಾರೋಹಣ, ಗೃಹರಕ್ಷಕರ, ಪೋಲೀಸರ ಹಾಗು ಸೈನಿಕರ ಕೂಚು, ದೀಪೋತ್ಸವ, ಮನರಂಜನೆಯ ವಿವಿಧ ವಿನೋದಾವಳಿ ಮೊದಲಾದವುಗಳು ಅಂದಿನ ಕಾರ್ಯಕ್ರಮದ ಮುಖ್ಯ ಭಾಗಗಳಾಗಿದ್ದವು. ಆ ಶುಭ ಮುಹೂರ್ತದಲ್ಲಿ ರಾಷ್ಟ್ರಪತಿಗಳೂ, ರಾಜ್ಯಪಾಲರೂ ಹಾಗು ರಾಷ್ಟ್ರ ಮುಖಂಡರೂ ಸಂದೇಶಗಳನ್ನು ಕೊಟ್ಟು, ಭಾಷಣಗಳನ್ನು ಮಾಡಿ ಈ ಆರು ವರುಷಗಳಲ್ಲಿ ಭಾರತವು ಸಾಧಿಸಿದ್ದೇನು ಮತ್ತು ಮುಂದೆ ಸಾಧಿಸಬೇಕಾದುದೇನೆಂಬುದರ ಸ್ಪಷ್ಟ ಕಲ್ಪನೆಯನ್ನು ಜನತೆಯ ಮುಂದಿಟ್ಟು ಒಂದು ರೀತಿಯಿಂದ ಸಾಧಿಸಿದ ಪ್ರಗತಿಯ ಬಗ್ಗೆ ಅಭಿಮಾನವನ್ನು ಸೂಚಿಸಿ ಮತ್ತೊಂದು ರೀತಿಯಿಂದ ಮುಂದಿನ ಆಶೋತ್ತರಗಳನ್ನು ಈಡೇರಿಸಲು ಅವಶ್ಯವಾದ ಉತ್ಸಾಹ ಹಾಗು ಸ್ಫೂರ್ತಿಗಳಿಂದ ರಾಷ್ಟ್ರವನ್ನು ಹುರಿದುಂಬಿಸಿದ್ದಾರೆ. ಸ್ವತಂತ್ರ ಭಾರತವು ಅನೇಕ ಎಡರು—ತೊಡರುಗಳನ್ನು ಎದುರಿಸಬೇಕಾಯಿತು. ಯುದ್ಧಾನಂತರದ ಸಂಕಟಗಳು ಒಂದೆಡೆ ಇದ್ದರೆ ಇಬ್ಭಾಗದ ನೋವು ಮತ್ತೊಂದೆಡೆ. ಆರ್ಥಿಕ ಬಿಕ್ಕಟ್ಟನ್ನು ಎದುರಿಸಲೂ ಬೇಕಾಯಿತು. ರಾಷ್ಟ್ರದ ಭದ್ರತೆಯನ್ನು ಕಾಯ್ದುಕೊಳ್ಳಲೂ ಬೇಕಾಯಿತು. ಸರ್ವತಂತ್ರ ಸ್ವತಂತ್ರಗಣ ರಾಜ್ಯ ಘಟನೆಯನ್ನು ಕಾರ್ಯರೂಪಕ್ಕಿಳಿಸಿ ಪಂಚವಾರ್ಷಿಕ ಯೋಜನೆಯನ್ನು ಕೈಕೊಳ್ಳಬೇಕಾಯಿತು. ಸಮಾಜವಾದೀ ರಾಜ್ಯವನ್ನು ಒಳಗೆ ಕಟ್ಟಿದರೆ ಹೊರಗೆ ತಟಸ್ಥ ಧೋರಣೆಯನ್ನೇ ಅನುಸರಿಸಿ ಸಹಜೀವನದ ತತ್ವಗಳನ್ನೊಳಗೊಂಡ ಪಂಚಶೀಲಗಳನ್ನು ವಿಶ್ವನಾಯಕರೆದುರಿಗೆ ತಂದು ವಿಶ್ವಶಾಂತಿಯ ಸ್ಥಾಪನೆಯ ದಿಶೆಯಲ್ಲಿ ಸ್ಪಷ್ಟ ಮುನ್ನಡೆಯನ್ನು ತೋರಿಸಿದ ಶ್ರೇಯಸ್ಸಿನ ಬಗ್ಗೆ ಯಾರಿಗೆ ಅಭಿಮಾನವಾಗದು ? ಈ ರೀತಿಯಾಗಿ ಭಾರತವು ಸಾಧಿಸಿದ ಅಪೂರ್ವ ಹಾಗು ಅತ್ಯದ್ಭುತ ಪ್ರಗತಿಯೇ ನಮ್ಮ ಮುಂದಿನ ಹೆಜ್ಜೆಗಳಿಗೆ ಶಕ್ತಿಯನ್ನೀಯಬೇಕು.

ಮಹಾತ್ಮರ ಪುಣ್ಯ ದಿನಾಚರಣೆ

ಪ್ರತಿ ವರುಷದಂತೆ ಈ ಸಾರೆಯೂ ಕಳೆದ ತಿಂಗಳ ೩೦ ರಂದು ನಮ್ಮ ದೇಶದಲ್ಲಿಯೂ ಉಳಿದ ದೇಶಗಳಲ್ಲಿಯೂ ಮಹಾತ್ಮರ ಪುಣ್ಯ ದಿನಾಚರಣೆಯು ನಡೆಯಿತು. ಅಂದು ಬೆಳಗಿನಿಂದ ಸಂಜೆಯವರೆಗೆ ವ್ಯಕ್ತಿಗಳೂ ಸಂಘ-ಸಂಸ್ಥೆಗಳು ವಿಧಾಯಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಭಾರತಕ್ಕೆ ತನ್ಮೂಲಕ ಮಾನವಕೋಟಿಗೆ ಮಹಾತ್ಮರಿಂದಾದ ಸೇವೆಯ ಸ್ಮರಣೆ ಮಾಡಿದವು. ಆ ದಿನ ಮುಂಜಾನೆ ೧೧ ಗಂಟೆಗೆ ಭಾರತೀಯರು ಎರಡು ನಿಮಿಷಗಳ ವರೆಗೆ ಮೌನವನ್ನಾಚರಿಸಿ ಸ್ವಾತಂತ್ರ್ಯವನ್ನು ದೊರಕಿಸಲು ಪ್ರಾಣಾರ್ಪಣೆ ಮಾಡಿದ ವೀರರೆಲ್ಲರಿಗೆ ತಮ್ಮ ಗೌರವವನ್ನು ಸಲ್ಲಿಸಿದರು. ಸಂಯುಕ್ತ ಸಂಸ್ಥಾನದವರು ತಮ್ಮ ದೇಶಕ್ಕೆ ಜಾರ್ಜ

ವಾಶಿಂಗ್ಟನ್ನ ಹಾಗು ಏಬ್ರಹಾಂ ಲಿಂಕನ್ನರು ಸಲ್ಲಿಸಿದ ಸೇವೆಯನ್ನೂ, ಚೀನ ದೇಶದವರು ಸನ್‌ಯತ್ಸನ್ನರ ಸೇವೆಯನ್ನೂ, ರಶಿಯಾದವರು ಮಹಾನುಭಾವರಾದ ಲೆನಿನ್ನರ ಸೇವೆಯನ್ನೂ ಸ್ಮರಿಸುತ್ತಿರುವಂತೆ ಭಾರತೀಯರಾದ ನಾವು ಪೂಜ್ಯ ಬಾಪೂಜಿಯವರ ತ್ಯಾಗಮಯವಾದ ದಿವ್ಯ ಸೇವೆಯನ್ನು ಸ್ಮರಿಸುವದಷ್ಟೇ ಅಲ್ಲದ ಅವರು ಆಚರಿಸಿ ಬೋಧಿಸಿದ ತತ್ವಗಳಲ್ಲಿ ಅಚಲವಾದ ಶ್ರದ್ಧೆಯನ್ನಿಟ್ಟು ಅವನ್ನೇ ಕಾರ್ಯರೂಪದಲ್ಲಿ ತರಲು ಅಂತಃಕರಣಪೂರ್ವಕವಾಗಿ ಪ್ರಯತ್ನಿಸುವದೇ ನಮ್ಮ ಪವಿತ್ರ ಕಾರ್ಯವೆಂದು ಭಾವಿಸಬೇಕು

ಜೀವನ ಶಿಕ್ಷಣ ವಾರ್ತೆಗಳು

ಸಮವಾಯ ಶಿಕ್ಷಣಕ್ಕೆ ಹೊಸ ಮಾರ್ಗ

ಅನುವಾದಕರು : **ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ** ಸುಪರಿಂಟೆಂಡೆಂಟ, **ಹೆ. ಟ್ರೇ.** ಕಾಲೇಜ, **ಧಾರವಾಡ.**

ಸಧ್ಯಕ್ಕೆ ಟ್ರೇನಿಂಗ ಕಾಲೇಜುಗಳಲ್ಲಿಯೂ ಜೀವನ ಶಿಕ್ಷಣ ಶಾಲೆಗಳಲ್ಲಿಯೂ ಕೊಡಲ್ಪಡುವ ಸಮವಾಯ ಪಾಠಗಳು ಮೂರು ಭಾಗಗಳನ್ನೊಳಗೊಂಡಿವೆ. ಮೊದಲನೆಯದು ಚಟುವಟಿಕೆಯ ದಿಗ್ದರ್ಶನ, ಎರಡನೆಯದು ವಿದ್ಯಾರ್ಥಿಗಳ ಚಟುವಟಿಕೆಯ ಕೃತಿ, ಮೂರನೆಯದು ಅದರಿಂದ ಹೊರಟ ಶಾಲೆಯ ವಿವಿಧ ವಿಷಯಗಳಿಗೆ ಸಂಬಂಧಿಸಿದ ಶೈಕ್ಷಣಿಕ ಸಮವಾಯ. ಪಾಠದ ಒಟ್ಟು ಅವಧಿಯು ಸುಮಾರು ೭೦ ಮಿನಿಟುಗಳು. ಇವುಗಳಲ್ಲಿ ೧೫-೨೦ ಮಿನಿಟು ಮೊದಲನೆ ಭಾಗಕ್ಕೆ, ೨೦-೩೦ ಮಿನಿಟು ಎರಡನೆಯ ಭಾಗಕ್ಕೆ, ಹಾಗೂ ಉಳಿದ ವೇಳೆಯನ್ನು ಮೂರನೆಯ ಭಾಗಕ್ಕೆ ವಿನಿಯೋಗಿಸಲಾಗುತ್ತದೆ. ಈ ಪ್ರಕಾರದ ಸಮವಾಯ ಪಾಠಗಳಲ್ಲಿ ಅನೇಕ ಕುಂದು ಕೊರತೆಗಳಿರುತ್ತವೆ.

ಮೊದಲನೆಯದಾಗಿ ಇಂಥ ಪಾಠಗಳು ಜೀವನ ಶಿಕ್ಷಣ ಶಾಲೆಗಳ ಪ್ರತಿನಿತ್ಯದ ಕೆಲಸಗಳ ಉಪಯೋಗಕ್ಕಾಗಿ ವ್ಯವಹಾರಿಕವಾಗಿರುವದಿಲ್ಲ. ಎಷ್ಟೋ ಶಾಲೆಗಳಲ್ಲಿ ಇಂತಹ ಪಾಠಗಳು ಕ್ವಚಿತ್ತಾಗಿ ಕೊಡಲ್ಪಡುವದು ಅನುಭವಕ್ಕೆ ಬಂದಿದೆ. ನಿತ್ಯದ ಕಲಿಸುವಿಕೆಯು ಸಾದಾ ಪಾಠಗಳ ಮುಖಾಂತರವೇ ಸಾಗಿದೆ.

ಎರಡನೆಯದಾಗಿ ಈ ಪಾಠಗಳಲ್ಲಿ ಚಟುವಟಿಕೆಯಾಗಲಿ ಅಥವಾ ಶೈಕ್ಷಣಿಕ ಸಮವಾಯವಾಗಲಿ ಸಮರ್ಪಕವಾಗಿ ಮಾಡಲ್ಪಡುವದಿಲ್ಲ. ಚಟುವಟಿಕೆಗೆ ವೇಳೆಯು ತೀರ ಕಡಿಮೆ ಇರುವದು; ಹಾಗೂ ೨-೩ ವಿಷಯಗಳನ್ನು ಆವರಿಸುವ ಶೈಕ್ಷಣಿಕ ಸಮವಾಯದ ವೇಳೆಯು ವಿಷಯಗಳ ಪೂರ್ಣ ತಿಳುವಳಿಕೆಯನ್ನುಂಟು ಮಾಡಲು ಅತ್ಯಲ್ಪವಾಗಿರುವದು. ಮಕ್ಕಳು ಚಟುವಟಿಕೆಯಲ್ಲಿ ಹೆಚ್ಚು ಆಸ್ಥೆ ವಹಿಸುವದಿಲ್ಲ; ಅಲ್ಲದೆ ಶೈಕ್ಷಣಿಕ ಸಮವಾಯವು ಬಹಳ ಅವಸರದ್ದಾಗುತ್ತದೆ; ಚಟುವಟಿಕೆ ಮತ್ತು ಶಾಲೆಯ ಕೆಲಸಗಳು ಹಿಂದೆ ಉಳಿಯುವವು.

ಮೂರನೆಯದಾಗಿ ಜೀವನ ಶಿಕ್ಷಣ ಶಾಲೆಗಳಲ್ಲಿ ಎರಡು ಪ್ರಕಾರದ ಪಾಠಗಳು—ಅಂದರೆ ಸಮವಾಯ ಹಾಗೂ ಸಾದಾ ಪಾಠಗಳು ಇರುವದು ಅಗ್ರಾಹ್ಯವಾದುದು. ಜೀವನ ಶಿಕ್ಷಣದ ಧ್ಯೇಯವು ಜೀವನದ ಮುಖಾಂತರವಾಗಿ ಶಿಕ್ಷಣವನ್ನು ಒದಗಿಸುವದು ಇದ್ದುದರಿಂದ ಸಾಮಾನ್ಯವಾಗಿ ಎಲ್ಲ ಪಾಠಗಳು ಸಮವಾಯ ಪಾಠಗಳೇ ಇರಬೇಕು.

೨. ಶಾಲೆಯಲ್ಲಿ ಎರಡು ಪ್ರಕಾರದ ಪಾಠಗಳು ಇರಬಲ್ಲವು ಮೊದಲನೆಯ ಪ್ರಕಾರವೆಂದರೆ ಚಟುವಟಿಕೆಯ ಪಾಠ. ಇದರಲ್ಲಿ ಚಟುವಟಿಕೆಗೆ ಹೆಚ್ಚು ಪ್ರಾಶಸ್ತ್ಯವು ಕೊಡಲ್ಪಡುವದು. ನಿಶ್ಚಿತವಾದ ಕಾರ್ಯಕ್ರಮವನ್ನು ಅನುಸರಲಿಕ್ಕೆ ನಿರ್ದಿಷ್ಟ ಗುರಿಗಳನ್ನು ಮುಟ್ಟಲಿಕ್ಕೆ

— ೨೬ನೇ ಪುಟಕ್ಕೆ

ಮೂಲ ಶಿಕ್ಷಣದ ಅರಿವು

ಲೇಖಕರು : **ಶ್ರೀ ಶಿಂತ್ರಿ ಬಸಪ್ಪನವರು,** ಬಿ.ಎ., ಬಿ.ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದಕ್ಷಿಣ ಭಾಗ, ಧಾರವಾಡ ಹಾಗೂ ಗೌರವ ಕಾರ್ಯದರ್ಶಿ
ಮತ್ತು ಲಾಯಿಬ್ರೇರಿಯನ್, ಸಾಹಿತ್ಯ ಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಅರ್ಧ ಶತಮಾನದ ವರೆಗೆ ಮಹಾತ್ಮರು ರಾಷ್ಟ್ರಕ್ಕೆ ಸಲ್ಲಿಸಿದ ಭಕ್ತಿಯುತ ಸೇವೆಯ ಪರಿಣಾಮದಿಂದ ಹೊರ ಹೊಮ್ಮಿದ ಶಿಕ್ಷಣದ ಬಗೆಗಿನ ಅವರ ಅಭಿಪ್ರಾಯಗಳು ಮೇಲೆ ಹೇಳಿದ ಸಮ್ಮೇಲನದಲ್ಲಿ ಮೈಗೊಂಡವು. ಆ ಸಮ್ಮೇಲನದಲ್ಲಿ ಭಾಗವಹಿಸಿದ್ದ ಶಿಕ್ಷಣ ತಜ್ಞರಿಗೆಲ್ಲ ತಾವು ಮಂಡಿಸಿದ್ದ ಅಭಿಪ್ರಾಯಗಳನ್ನು ನಿರ್ವಿಕಾರ ಮನಸಿನಿಂದ ಆಲೋಚಿಸಲು ಅರಿಕೆ ಮಾಡಿಕೊಂಡರು. ಆ ಸಮ್ಮೇಲನಕ್ಕೆ ಬೇರೆ ಬೇರೆ ಪ್ರಾಂತಗಳ ಶಿಕ್ಷಣ ಮಂತ್ರಿಗಳೂ ಸಹ ಆಗಮಿಸಿದ್ದರು. ಶಿಕ್ಷಣದ ಸಮಸ್ಯೆಯನ್ನು ಪರಿಹರಿಸಲು ಇದೊಂದೇ ರಚನಾತ್ಮಕ ಉಪಾಯವೆಂದು ಆ ಶಿಕ್ಷಣ ಮಂತ್ರಿಗಳಿಗೆಲ್ಲ ಅರುಹಿದರು. ಎಲ್ಲ ಪ್ರಾಂತಗಳ ಉತ್ಪನ್ನವು ಆಗ ಸೆರೆ-ಸಿಂದಿಗಳ ಮೇಲಿನ ಕರದಿಂದ ಬರುತ್ತಿತ್ತು. ಕಾಂಗ್ರೆಸ್ಸು ಪಾನಪ್ರತಿಬಂಧಕ್ಕೆ ಅಂಟಿಕೊಂಡಿತ್ತಾದುದರಿಂದ ಉತ್ಪನ್ನದ ಬಹು ದೊಡ್ಡ ಬಾಬು ಇಲ್ಲದಂತಾಗಿ ಮೊದಲೇ ತತ್ತರಿಸುತ್ತಿದ್ದ ಎಲ್ಲ ಪ್ರಾಂತಗಳ ಹಣಕಾಸು ಮತ್ತಷ್ಟು ಹದಗೆಡುತ್ತಿತ್ತು. ಇಂತಹ ಪರಿಸ್ಥಿತಿಯಲ್ಲಿ ದೇಶದ ತುಂಬೆಲ್ಲ ರಾಷ್ಟ್ರೀಯ ಶಿಕ್ಷಣದ ಬೇಡಿಕೆಗಳನ್ನು ಎಷ್ಟು ಉತ್ತಮ ರೀತಿಯಿಂದ ಪೂರೈಸಬೇಕೆಂಬುದನ್ನು ಕುರಿತು ಆಲೋಚಿಸಲು ಅವರನ್ನೆಲ್ಲ ಕೇಳಿಕೊಂಡರು. ತಾವು ಈ ವಿಷಯದಲ್ಲಿ ಅಪರಿಚಿತರೆಂಬ ಮಾತನ್ನು ಒಪ್ಪಿಕೊಂಡು ತಮ್ಮ ವಿಚಾರಗಳು ಸಮಂಜಸವೆಂದು ಕಂಡುಬಂದರೆ ಇಲ್ಲವೆ ಎಷ್ಟರ ಮಟ್ಟಿಗೆ ಯೋಗ್ಯವೆಂದು ಕಂಡು ಬರುವವೋ ಅಷ್ಟರ ಮಟ್ಟಿಗೆ ಅವುಗಳನ್ನು ಸ್ವೀಕರಿಸಲು ವಿನಂತಿಸಿಕೊಂಡರು.

ಸ್ಥೂಲಮಾನದ ಹಾಗೂ ಪ್ರಾರಂಭಿಕ ಚರ್ಚೆಗಳಾದ ನಂತರ ಗಾಂಧೀಜಿಯವರಿಂದ ಮೂಲತಃ ತಯಾರಿಸಲ್ಪಟ್ಟ ಮಂಡನೆಗಳ ಬಗೆಗೆ ವಿಚಾರಣೆಯು ಕೆಳಗೆ ಕೊಟ್ಟಂತೆ ಸಾಗಿತು :—

(೧) ಈಗಿನ ಶಿಕ್ಷಣ ಪದ್ಧತಿಯು ದೇಶದ ಬೇಡಿಕೆಗಳನ್ನು ಆವ ದೃಷ್ಟಿಯಿಂದಲೂ ಪೂರೈಸುವದಿಲ್ಲ. ಉಚ್ಚ ಶಿಕ್ಷಣದ ಶಾಖೆಗಳಲ್ಲೆಲ್ಲ ಇಂಗ್ಲೀಷ ಭಾಷೆಯು ಮಾಧ್ಯಮವಾಗಿರುವದರಿಂದ ಉಚ್ಚ ಶಿಕ್ಷಣವನ್ನು ಹೊಂದಿದ ಕೆಲವೇ ಜನರ ಸಣ್ಣ ಗುಂಪೊಂದು ಬೇರೆ, ಶಿಕ್ಷಣ ಹೊಂದದ ಅಸಂಖ್ಯ ಜನರ ದೊಡ್ಡ ಗುಂಪೊಂದು ಬೇರೆಯಾಗಿ ಅವುಗಳ ನಡುವೆ ಪರಸ್ಪರ ಸಂಪರ್ಕವಿಲ್ಲದಷ್ಟು ಶಾಶ್ವತವಾದ ಅಂತರವು ಬೆಳೆದಿದೆ. ಸುಶಿಕ್ಷಿತರ ಜ್ಞಾನವು ಅಶಿಕ್ಷಿತರಿಗೆ ಮುಟ್ಟದಂತಾಗಿದೆ. ಸುಶಿಕ್ಷಿತರಿಗೆ ಆವುದಾದರೊಂದು ಕಾಯಕದಲ್ಲಿ ತರಬೇತಿಯು ಇಲ್ಲದ್ದರಿಂದ ಉತ್ಪಾದಕ ಶಕ್ತಿಯುಳ್ಳ ಕೆಲಸವನ್ನು ಕೈಕೊಳ್ಳಲು ಅನರ್ಹರಾಗಿ ಅವರ ದೈಹಿಕ ಸ್ಥಿತಿಯು ಬಲಗುಂದಿದೆ. ಪ್ರಾಥಮಿಕ ಶಿಕ್ಷಣಕ್ಕೋಸ್ಕರ ಖರ್ಚು ಮಾಡಿದ ಹಣವು ನೀರಿನಲ್ಲಿ ಹೋಮ ಮಾಡಿದಂತಿದೆ. ಯಾಕಂದರೆ, ಮಕ್ಕಳು ಸಾಲೆಯಲ್ಲಿ ಅಲ್ಪಸ್ವಲ್ಪ ಕಲಿತದ್ದನ್ನೆಲ್ಲ ಬೇಗನೆ ಮರೆತು ಬಿಡುವದರಿಂದ, ಹಳ್ಳಿಗಳಿಗೂ ಅದರಿಂದ ಲಾಭವಿಲ್ಲ, ಶಹರಗಳಿಗೂ ಅದರಿಂದ ಲಾಭವಿಲ್ಲ; ಈ ಶಿಕ್ಷಣದಿಂದ ಕರ ತೆತ್ತುವವನಿಗೂ ಪ್ರಯೋಜನವಿಲ್ಲ, ಅವನ ಮಕ್ಕಳು-ಮರಿಗಳಿಗೂ ಪ್ರಯೋಜನವಿಲ್ಲ.

(೨) ಪ್ರಾಥಮಿಕ ಶಿಕ್ಷಣದ ಕ್ರಮವು ಏನಿಲ್ಲೆಂದರೂ ಏಳು ವರ್ಷಗಳ ವರೆಗೆ ಸಾಗಬೇಕು. ಮ್ಯಾಟ್ರಿಕ್ ಪರೀಕ್ಷೆಗಾಗುವಷ್ಟು ಸಾಮಾನ್ಯ ಜ್ಞಾನವು ಮಕ್ಕಳಿಗೆ ಲಭಿಸಬೇಕು. ಇಂಗ್ಲೀಷ ಭಾಷೆಯನ್ನು ತೆಗೆದು ಹಾಕಿ ಅದರ ಬದಲು ಆವುದಾದರೊಂದು ಕಾಯಕವನ್ನು ಜೋಡಿಸಬೇಕು.

(೩) ಮಕ್ಕಳ ಸರ್ವತೋಮುಖವಾದ ವಿಕಾಸಕ್ಕೋಸುಗ ಆವುದಾದರೊಂದು ಲಾಭದಾಯಕವಾದ ಉದ್ಯೋಗದ ಮುಖಾಂತರ ಎಲ್ಲ ತರಹದ ತರಬೇತಿಯು ಸಿಗುವಂತಾಗಬೇಕು. ಬೇರೆ ಮಾತಿನಲ್ಲಿ ಹೇಳುವದಾದರೆ ಆ ಕಾಯಕವು ಎರಡು ಉದ್ದೇಶಗಳನ್ನೊಳಗೊಂಡಿರಬೇಕು.— ಒಂದನೆಯದು, ಮಕ್ಕಳು ತಮ್ಮ ಕಾಯಕಷ್ಟದಿಂದ ತಯಾರಿಸಿದ ಹುಟ್ಟುವಳಿಯಿಂದ ಶಿಕ್ಷಣದ ವೆಚ್ಚವನ್ನು ಸಾಗಿಸುವಷ್ಟು ಯೋಗ್ಯತೆಯನ್ನು ಪಡೆಯಬೇಕು; ಎರಡನೆಯದಾಗಿ, ಸಾಲೆಯಲ್ಲಿ ಕಲಿತ ಕಾಯಕದ ಮುಖಾಂತರ ಅವರು ತಮ್ಮ ವ್ಯಕ್ತಿತ್ವದ ವಿಕಾಸವನ್ನು ಹೊಂದಬೇಕು.

ಶಿಕ್ಷಣದ ವೆಚ್ಚದಲ್ಲಿ ನೆಲ, ಇಮಾರತು ಮತ್ತು ಉಪಕರಣಗಳಿಗಾಗಿ ತಗಲುವ ವೆಚ್ಚವು ಸಮಾವೇಶಗೊಳ್ಳಬಾರದೆಂಬ ಉದ್ದೇಶವನ್ನಿಟ್ಟುಕೊಂಡಿದೆ.

ಹತ್ತಿ ಬಿಡಿಸುವದು, ಸ್ವಚ್ಛ ಮಾಡುವದು, ಅರಿಯುವದು, ಹಂಜಿ ಮಾಡುವದು, ನೂಲುವದು, ಬಣ್ಣ ಕೊಡುವದು, ಹಾಸು ಹೊಯ್ಯುವದು, ಉಂಕಿ ಮಾಡುವದು, ಗಂಟೆ ಕಟ್ಟುವದು, ನೇಯುವದು, ಪಕ್ಕೆಗಳನ್ನು ಹಾಕುವದು, ಕಸೂತಿ, ಹೊಲಿಯುವದು, ಅಂಗಿಗಳನ್ನು ಮಾಡುವದು, ಚೀಲವನ್ನು ತಯಾರಿಸುವದು, ಈ ಕಾಯಕಗಳೆಲ್ಲ ವಿಶೇಷ ಖರ್ಚಿಲ್ಲದೆ ಕಲಿಯಲು ಬರುವಂತಹವುಗಳಾಗಿವೆ.

ತಮ್ಮ ಉಪಜೀವನವನ್ನು ತಾವೇ ನಡೆಸಿ ಸಾಗಿಸಲು ಮಕ್ಕಳನ್ನು ಪ್ರಾಥಮಿಕ ಶಿಕ್ಷಣವು ಅಣಿಗೊಳಿಸಬೇಕು. ಮಕ್ಕಳು ಕಲಿತ ಕಾಯಕದಲ್ಲಿ ಕೆಲಸವನ್ನು ಪೂರೈಸಲು ಸರಕಾರವು ಕಂಕಣಬದ್ಧವಿರಬೇಕು. ಇಲ್ಲವೆ ಮಕ್ಕಳು ತಯಾರಿಸಿದ ವಸ್ತುಗಳನ್ನು ಸರಕಾರವು ತಾನು ಗೊತ್ತುಪಡಿಸಿದ ಬೆಲೆಗೆ ಕೊಳ್ಳಲು ವಚನಬದ್ಧವಿರಬೇಕು.

(೪) ಕಾಯಕಗಳಲ್ಲಾಗಲಿ, ವಿಶಿಷ್ಟ ಕೈಗಾರಿಕೆಗಳಲ್ಲಾಗಲಿ ಇಲ್ಲವೆ ಲಲಿತ ಕಲೆಗಳಲ್ಲಾಗಲಿ ರಾಜ್ಯಕ್ಕೆ ಅವಶ್ಯವಿರುವ ಉಚ್ಚ ಶಿಕ್ಷಣವನ್ನು ಸರಕಾರೇತರ ಸಂಸ್ಥೆಗಳಿಗೆ ಬಿಟ್ಟು ಕೊಡಬೇಕು. ರಾಜ್ಯ ಸರಕಾರಗಳು ಕೇವಲ ಪರೀಕ್ಷಾ ಮಂಡಳಗಳಾಗಬೇಕು ಮತ್ತು ಆ ಮಂಡಳಗಳ ವೆಚ್ಚವನ್ನು ಪರೀಕ್ಷಾ ಶುಲ್ಕದಿಂದಲೇ ಬಗೆಹರಿಸಿಕೊಳ್ಳಬೇಕು.

ವಿಶ್ವವಿದ್ಯಾನಿಲಯಗಳು ಇಡಿಯ ಶಿಕ್ಷಣ ಕ್ಷೇತ್ರದ ಮೇಲ್ವಿಚಾರಣೆಯನ್ನು ಮಾಡಬೇಕು ಹಾಗೂ ಶಿಕ್ಷಣದ ವಿವಿಧ ಶಾಖೆಗಳಲ್ಲಿಯ ಅಭ್ಯಾಸ ಪತ್ರಿಕೆಗಳನ್ನು ತಯಾರಿಸಬೇಕು ಮತ್ತು ಮಂಜೂರಿಯನ್ನು ಕೊಡಬೇಕು. ಆಯಾ ವಿಶ್ವವಿದ್ಯಾನಿಲಯಗಳ ಮಂಜೂರಿಯನ್ನು ಮೊದಲೇ ಪಡೆದುಕೊಳ್ಳದೆ ಆವ ಸರಕಾರೇತರ ಸಂಸ್ಥೆಯನ್ನು ನಡೆಸಲು ಕೊಡಕೂಡದು. ಎಲ್ಲ ದೃಷ್ಟಿಯಿಂದ ಭದ್ರವೆಂದು ಕಂಡು ಬಂದ ಸಂಸ್ಥೆಗಳಿಗೆ ವಿಶ್ವವಿದ್ಯಾನಿಲಯಗಳು ತಮ್ಮ ಮಂಜೂರಿಯನ್ನು ಬಿಚ್ಚುಗೈಯಿಂದ ಕೊಡಬೇಕು

ಪ್ರಾರಂಭಿಕ ಚರ್ಚೆಗಳೂ ಗಾಂಧೀಜಿಯವರ ಭಾಷಣವೂ ನೆರವೇರಿದ ತರುವಾಯ ಅವರಿಂದ ಮಂಡಿಸಲ್ಪಟ್ಟ ಹೊಸ ಶಿಕ್ಷಣವನ್ನು ಕುರಿತು ವಿಚಾರಿಸಲು ಉಪಸಮಿತಿಯೊಂದು ನಿರ್ಮಿಸಲ್ಪಟ್ಟಿತು. ಡಾ. ಝಾಕೀರ ಹುಸೇನ, ಶ್ರೀ ಆರ್ಯನಾಯಕಂ, ಡಾ. ಕೇ. ಟಿ. ಶಹ, ಮೊದಲಾದ ನಮ್ಮ ದೇಶದ ನಾಮಾಂಕಿತ ಶಿಕ್ಷಣ ತಜ್ಞರು ಸಮ್ಮೇಲನಕ್ಕೆ ಆಗಮಿಸಿ ಅದರಲ್ಲಿ ಭಾಗವಹಿಸಿದರು. ರಾಷ್ಟ್ರೀಯ ಶಿಕ್ಷಣದಲ್ಲಿ ಪ್ರಯೋಗಗಳನ್ನು ಕೈಕೊಂಡಿದ್ದ ನಮ್ಮ ದೇಶದ ಎಲ್ಲ ಭಾಗಗಳಲ್ಲಿಯ ಪುರುಷರೂ ಸ್ತ್ರೀಯರೂ ಆಗಮಿಸಿದ್ದರು. ಬೇರೆ ಬೇರೆ ರಾಜ್ಯಗಳ ಶಿಕ್ಷಣ ಮಂತ್ರಿಗಳನೇಕರು ಸಮ್ಮೇಲನದಲ್ಲಿ ಭಾಗವಹಿಸಿದರು. ಹೊಸ ವಿಚಾರಗಳನ್ನು ಕೂಲಂಕಷವಾಗಿ ಚರ್ಚಿಸಿದನಂತರ ಉಪಸಮಿತಿಯು ಕೆಳಗೆ ಕೊಟ್ಟ ಗೊತ್ತುವಳಿಗಳನ್ನು ತಯಾರಿಸಿತು ಮತ್ತು ಮುಂದೆ ಬಹಿರಂಗಾಧಿವೇಶನದಲ್ಲಿ ಅವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟವು.

(೧) "ರಾಷ್ಟ್ರದಲ್ಲೆಲ್ಲ ಏಳು ವರ್ಷಗಳವರೆಗೆ ಉಚಿತ ಮತ್ತು ಒತ್ತಾಯದ ಶಿಕ್ಷಣವು ಕೊಡಲ್ಪಡಬೇಕೆಂದು ಸಮ್ಮೇಲನದ ಅಭಿಪ್ರಾಯವಿದೆ."

(೨) "ತಾಯ್ನುಡಿಯು ಶಿಕ್ಷಣದ ಮಾಧ್ಯಮವಿರಬೇಕು."

(೩) "ಆ ಅವಧಿಯಲ್ಲಿಯ ಶಿಕ್ಷಣಕ್ರಮವು ದೈಹಿಕ ಶ್ರಮವುಳ್ಳ ಮತ್ತು ಉತ್ಪಾದಕ ಶಕ್ತಿಯುಳ್ಳ ಆವುದಾದರೊಂದು ಕಾಯಕಕ್ಕೆ ಅಂಟಿಕೊಂಡಿರಬೇಕು ಹಾಗೂ ಮಗುವಿನ ಪರಿಸ್ಥಿತಿಗೆ ಒಗ್ಗುವಂತೆ ಆಯ್ದುಕೊಂಡ ಕಾಯಕಕ್ಕೂ ಶಿಕ್ಷಣಕ್ಕೂ ಸಮವಾಯವಿದ್ದು ಮಗುವಿನ ವ್ಯಕ್ತಿತ್ವದ ವಿಕಾಸವಾಗಬೇಕೆಂಬ ಮಹಾತ್ಮರ ಸೂಚನೆಯನ್ನು ಈ ಸಮ್ಮೇಲನವು ಪುಷ್ಟೀಕರಿಸುತ್ತಿದೆ."

(೪) "ಶಿಕ್ಷಕರ ವೇತನದ ಖರ್ಚನ್ನು ಹೊರುವಷ್ಟು ಶಕ್ತಿಯನ್ನು ಹೊಸ ಶಿಕ್ಷಣವು ದಿನಗಳೆದಂತೆ ಪಡೆಯಬೇಕೆಂಬುದು ಈ ಸಮ್ಮೇಲನದ ನಿರೀಕ್ಷಣೆಯಿದೆ."

ರಚನಾತ್ಮಕ ಕಾಯಕದ ಮುಖಾಂತರ ಶಿಕ್ಷಣವೆಂದು ಗಾಂಧೀಜಿಯವರಿಂದ ಸಾರಲ್ಪಟ್ಟ ಶಿಕ್ಷಣದ ಈ ಹೊಸ ದೃಷ್ಟಿಯನ್ನು ಸಮ್ಮೇಲನವು ಒಪ್ಪಿಕೊಂಡಿತಾದರೂ ಅದರಲ್ಲಿ ಅಡಕವಾಗಿದ್ದ ಸ್ವಾವಲಂಬನದ ವಿಚಾರ ಪ್ರಣಾಲಿಯನ್ನು ಮಾತ್ರ ಸಂಪೂರ್ಣವಾಗಿ ಮನ್ನಿಸಲಿಲ್ಲೆಂಬುದು ಗಮನಾರ್ಹವಿದೆ. ಸ್ವಾವಲಂಬನದ ತತ್ತ್ವವನ್ನು ತಾವು ಇಚ್ಛಿಸಿದ್ದಷ್ಟನ್ನೆಲ್ಲ ಸಮ್ಮೇಲನವು ಒಪ್ಪದಿದ್ದರೂ ಸಮ್ಮೇಲನದ ಗೊತ್ತುವಳಿಯು ತಮ್ಮ ಧ್ಯೇಯದತ್ತ ಸಾಗಿದ ಪ್ರಥಮ ಹೆಜ್ಜೆಯೆಂದು ತಿಳಿದು ಅದಕ್ಕೆ ತಮ್ಮ ಅನುಮತಿಯನ್ನು ಕೊಟ್ಟರು. ಈ ಗೊತ್ತುವಳಿಯಿಂದಲೇ ಹೊಸ ಶಿಕ್ಷಣದ ಮುನ್ನಡೆಗೋಸ್ಕರ ಪ್ರಚಂಡ ಚಳವಳಿಯೆಂದೆನಿಸಿಕೊಂಡಂತಹ ಮೂಲ ಶಿಕ್ಷಣವು ಜನ್ಮತಾಳಿತು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸು ಗುಜರಾತದಲ್ಲಿ ತಾಪೀನದಿಯ ತೀರದಲ್ಲಿದ್ದ ಹರಿಪುರವೆಂಬಲ್ಲಿ ೧೯೩೮ರ ಫೆಬ್ರುವರಿಯಲ್ಲಿ ಕಲೆತ ಅಧಿನಿವೇಶನದಲ್ಲಿ ತನ್ನದೊಂದು ಗೊತ್ತುವಳಿಯಿಂದ ಅದನ್ನು ಸ್ಥಿರೀಕರಿಸಿತು. ಅದರ ಆಶಯವು ಇಂತಿದೆ:-

"೧೯೨೦ನೆಯ ಇಸವಿಯಿಂದ ಕಾಂಗ್ರೆಸ್ಸು ರಾಷ್ಟ್ರೀಯ ಶಿಕ್ಷಣದ ಮಹತ್ವವನ್ನು ಒತ್ತಿ ಹೇಳುತ್ತ ಬಂದಿದೆ. ಅದು ಸಾರ್ವತ್ರಿಕ ಶಿಕ್ಷಣದ ತಕ್ಕ ಯೋಜನೆಗೋಸುಗ ಹೆಚ್ಚಿನ ಮಹತಿಯನ್ನು ಕೊಟ್ಟಿದೆ ಹಾಗೂ ರಾಷ್ಟ್ರದ ಸರ್ವಾಂಗೀಣ ಉನ್ನತಿಯು ಜನತೆಗೆ ಕೊಡತಕ್ಕ ಶಿಕ್ಷಣದ ಗೊತ್ತು-ಗುರಿ, ರೂಪ-ರೇಷೆ, ಪದ್ಧತಿ ಇವುಗಳನ್ನವಲಂಬಿಸಿದೆಯೆಂದು ಅದು ನಂಬಿದೆ. ಆದುದರಿಂದ, ಹೊಸ ತಳಹದಿಯ ಮೇಲೆ ಸಾರ್ವತ್ರಿಕವಾದ ರಾಷ್ಟ್ರೀಯ ಶಿಕ್ಷಣವನ್ನು ರಚಿಸುವದು ಆತ್ಯಗತ್ಯವಿದೆ. ಅಂತಹ ಶಿಕ್ಷಣದ ಸುಗಮತೆಗೋಸ್ಕರ ಮೂಲ ತತ್ತ್ವಗಳನ್ನು ರೂಪಿಸಿ ಅವು ಕಾರ್ಯರಂಗಕ್ಕಿಳಿಯುವಂತೆ ಮಾಡಲು ತಕ್ಕ ಉಪಾಯಗಳನ್ನು ಕೈಕೊಳ್ಳುವದವಶ್ಯವಿದೆ. "ಕೆಳಗೆ ಕೊಟ್ಟ ತತ್ತ್ವಗಳಿಗೆ ಹೊಂದಿಕೆಯಾಗುವಂತೆ ಪ್ರಾಥಮಿಕ ಹಾಗೂ ಮಾಧ್ಯಮಿಕ ಪಟ್ಟಿಗಳಲ್ಲಿ ಮೂಲ ಶಿಕ್ಷಣವನ್ನು ಕಲಿಸತಕ್ಕದ್ದೆಂದು ಕಾಂಗ್ರೆಸ್ಸಿನ ಅಭಿಪ್ರಾಯವಿದೆ :—

(೧) "ಉಚಿತ ಮತ್ತು ಸಕ್ತಿ ಶಿಕ್ಷಣವು ಏಳು ವರ್ಷಗಳ ವರೆಗೆ ಸಾರ್ವತ್ರಿಕವಾಗಿ ಕೊಡಲ್ಪಡಬೇಕು.

(೨) "ತಾಯ್ನುಡಿಯು ಶಿಕ್ಷಣದ ಮಾಧ್ಯಮವಾಗಿರಬೇಕು.

(೩) "ಆ ಅವಧಿಯಲ್ಲಿ ದುಡಿಮೆಯುಳ್ಳ ಹಾಗೂ ಉತ್ಪಾದಕ ಶಕ್ತಿಯುಳ್ಳ ಆವುದಾದರೊಂದು ಕಾಯಕದ ಮುಖಾಂತರ ಶಿಕ್ಷಣವು ಕೊಡಲ್ಪಡಬೇಕು. ಮಕ್ಕಳಿಗೆ ಕೊಡತಕ್ಕ ತರಬೇತಿಗೂ ಇಲ್ಲವೆ ವಿಕಾಸಗೊಳಿಸತಕ್ಕ ಉಳಿದೆಲ್ಲ ಚಟುವಟಿಕೆಗಳಿಗೂ ಮತ್ತು ಆಯ್ದುಕೊಂಡ ಮೂಲ ಕಾಯಕಕ್ಕೂ ಸಮವಾಯವಿರಬೇಕು.

'ಆ ಪ್ರಕಾರ ಮೂಲ ಶಿಕ್ಷಣದ ಬಗೆಗೆ ಮುಂದಿನ ಕಾರ್ಯ ಕೈಕೊಳ್ಳಲು ಅಖಿಲ ಭಾರತೀಯ ಶಿಕ್ಷಣ ಸಮಿತಿಯೊಂದು ಸ್ಥಾಪಿಸಲ್ಪಡಬೇಕೆಂದು ಕಾಂಗ್ರೆಸ್ಸು ಅಭಿಪ್ರಾಯ ಪಡುತ್ತಿದೆ. ಅದಕ್ಕೋಸ್ಕರ ಡಾ. ಝಾಕೀರ ಹುಸೇನ ಮತ್ತು ಶ್ರೀ. ಈ. ಆರ್ಯನಾಯಕಂ ಇವರಿಗೆ ಗಾಂಧೀಜಿಯವರ ಉಪದೇಶ ಹಾಗೂ ಮಾರ್ಗದರ್ಶನದಂತೆ ಆದಷ್ಟು ಬೇಗನೆ ಸಮಿತಿಯೊಂದನ್ನಾಯ್ದುಕೊಳ್ಳಲು ವಿನಂತಿಸಿಕೊಂಡು ಅವರೀರ್ವರಿಗೆ ಹಾಗೆ ಮಾಡಲು ಅಧಿಕಾರವನ್ನು ಕೊಟ್ಟಿದೆ. ಆ ಸಮಿತಿಯು ಮೂಲ ಶಿಕ್ಷಣದ ಬಗೆಗೆ ಸುಸಂಘಟಿತವಾದೊಂದು ಕಾರ್ಯಕ್ರಮವನ್ನು ಕೂಡಲೆ ರಚಿಸಿ ರಾಜ್ಯಗಳ ಸರಕಾರಗಳಿಗೂ ಸರಕಾರೇತರ ಸಂಸ್ಥೆಗಳಿಗೂ ಅಂಗೀಕರಿಸಲು ಶಿಫಾರಸು ಮಾಡತಕ್ಕದ್ದು.'

ಅಖಿಲ ಭಾರತೀಯ ಮೂಲಶಿಕ್ಷಣ ಸಮಿತಿಯು ಹೇಗೆ ಜನ್ಮ ತಾಳಿತೆಂಬುದರ ಐತಿಹ್ಯವು ಇದಾಗಿದೆ. ಅದಕ್ಕೆ ಹಿಂದುಸ್ತಾನಿ ತಾಲೀಮಿ ಸಂಘ ಎಂಬ ಹೆಸರು ಪ್ರಾಪ್ತವಾಗಿದೆ. ಆ ವರ್ಷ ರೂಪಗೊಂಡ ಮೊತ್ತಮೊದಲಿನ ಸಮಿತಿಯ ಸದಸ್ಯರಲ್ಲಿ ಈ ಕೈಪಿಡಿಯ ಗ್ರಂಥಕಾರ (ಶ್ರೀ ಟಿ. ಎಸ್. ಅವಿನಾಶಲಿಂಗಂ)ರೊಬ್ಬರಾಗಿದ್ದರು.

(ಮುಂದುವರಿಯುವದು)

ಶಾಲಾ ವರ್ಗಗಳಲ್ಲಿ ಪುನರುಕ್ತಿಯೇ?

ಲೇಖಕರು: ಶ್ರೀ ರಾ. ರು. ಕುಪ್ಪಸದ, ಎಂ.ಎ.ಬಿ.ಟಿ., ಮುಖ್ಯಾಧ್ಯಾಪಕರು,
ಸರಕಾರಿ ಕೃಷೀಮಾಧ್ಯಮಿಕ ಶಾಲೆ, ವಿಜಾಪುರ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಪ್ರಾಥಮಿಕ ಶಾಲೆಗಳ ಹಾಗೂ ಮಾಧ್ಯಮಿಕ ಶಾಲೆಗಳ ವರ್ಗಗಳಲ್ಲಿ ಕಂಡು ಬರುವ ವೈವಿಧ್ಯತೆಯ ಬಗ್ಗೆ ಕೆಳಗಿನ ಚಿತ್ರದ ಸಹಾಯದಿಂದ ಇನ್ನೂ ಹೆಚ್ಚಿಗೆ ನಿಚ್ಚಳವಾಗಿ ತಿಳಕೊಳ್ಳಬಹುದಾಗಿದೆ.



ಮಗುವು ತನ್ನ ೫ನೆಯ ಅಥವಾ ೬ನೆಯ ವಯಸ್ಸಿನ ಸುಮಾರಿಗೆ ಪ್ರಾಥಮಿಕ ಶಾಲೆಯ ಬಾಗಿಲದ ಹೊಸ್ತಿಲಲ್ಲಿ ಕಾಲಿಡುತ್ತಾನೆ. ಹೀಗೆ ಶಾಲಾ ಮಂದಿರದ ದ್ವಾರವನ್ನು ಪ್ರವೇಶಿಸಿ ಮೆಲ್ಲ ಮೆಲ್ಲನೆ ಒಂದೊಂದೇ ಸೋಪಾನವನ್ನು ಹತ್ತಲುಪಕ್ರಮಿಸುತ್ತಾನೆ. ಪ್ರಥಮತಃ ಶಾಲೆಯನ್ನು ಪ್ರವೇಶಿಸಿದಾಗ್ಗೆ ಆ ಮಗುವಿನ ಲಕ್ಷ್ಯವೆಲ್ಲ ಪ್ರಾಥಮಿಕ ಶಾಲಾ ಮಂದಿರದ ಕಡೆಗೇ ಇರುತ್ತದೆ. ಅವನು ಆ ಪ್ರಾಥಮಿಕ ಶಾಲೆಯ ವಾತಾವರಣದಲ್ಲಿಯೇ ಕಾಲಕಳೆಯಲು ಪ್ರಾರಂಭಿಸುತ್ತಾನಲ್ಲದೆ, ಆ ಪ್ರಾಥಮಿಕ ಶಾಲೆಯ ವಾತಾವರಣಕ್ಕೆ ಹೊಂದಿ ನಡೆಯಲೂ ಆ ವಾತಾವರಣವನ್ನು ತನ್ನದನ್ನಾಗಿ ಮಾಡಿಕೊಳ್ಳಲೂ ಪ್ರಯತ್ನಿಸುವದು ಸ್ವಾಭಾವಿಕವಾಗಿ ಒಡೆದು ಕಾಣುತ್ತದೆ. ಈ ತೆರನಾಗಿ ಆ ಮಗುವು ಪ್ರಾಥಮಿಕ ಶಾಲೆಯ ಸೋಪಾನಗಳನ್ನು ೧, ೨, ೩, ೪ ಹೀಗೆ ಒಂದೊಂದನ್ನು ಒಂದೊಂದು ವರುಷದ ಅವಧಿಯಲ್ಲಿ ಹತ್ತುತ್ತಾ ನಡೆದಾಗ್ಗೆ, ೪ನೆಯ ಸೋಪಾನವನ್ನು ದಾಟಿದ ಕೂಡಲೇ ಎಡಕ್ಕೂ ಬಲಕ್ಕೂ

ನೋಡಿದಾಗ್ಗೆ ೫ನೆಯ ಸೋಪಾನವು ತುಸು ದೊಡ್ಡದಾಗಿ ಪಸರಿಸಿದ್ದು ಅವನಿಗೆ ಅನಿಸುತ್ತದೆ. ಆಗ್ಗೆ ಆ ಮಗುವು ಮುಂದೆ ನೋಡುತ್ತದೆ. ಮುಂದೆಯೂ ೫, ೬, ೭ನೆಯ ಪ್ರಾಥಮಿಕ ಶಾಲೆಯ ಸೋಪಾನಗಳಿವೆ, ಹೀಗೆ ಮುಂದಿರುವ ಸೋಪಾನಗಳು ೭ನೆಯದಕ್ಕೆ ಪೂರ್ತಿಯಾದುದು ಕಾಣುತ್ತದೆ. ಹಾಗು ಬಲಗಡೆಗೆ ಮಾತ್ರ ಅದೇ ೫, ೬, ೭ನೆಯ ಮೆಟ್ಟಿಲುಗಳು (ಮಾಧ್ಯಮಿಕ ಶಾಲೆಯ) ೭ರಿಂದ ಮುಂದೆ ಸಾಗಿದ್ದೂ ಕಾಣುತ್ತದೆ. ಸ್ವಲ್ಪ ದೃಷ್ಟಿಯನ್ನು ಚಾಚಿದಲ್ಲಿ ಈ ಬಲಗಡೆಯ ಸೋಪಾನಗಳು ೫ರಿಂದ ೧೧ರ ವರೆಗೆ–೭ ಸೋಪಾನಗಳು ಪ್ರತ್ಯೇಕವಾಗಿ ಇದ್ದದ್ದೂ ಕಾಣುತ್ತದೆ.

ಅಂದರೆ ಮೆಟ್ಟಿಲುಗಳು ಅರ್ಥಾತ್ ವರ್ಗಗಳೇನೋ ೧ರಿಂದ ೧೧ರ ಮೈಲುಗಲ್ಲುಗಳಂತೆ ಕ್ರಮಾಂಕಗಳನ್ನು ಪಡೆದಿದ್ದರೂ ಪ್ರಾಥಮಿಕ ಶಾಲೆಯ ೧ರಿಂದ ೭ನೆಯ ವರ್ಗಗಳೂ ಹಾಗೂ ಮಾಧ್ಯಮಿಕ ಶಾಲೆಯ ೧ರಿಂದ (೫ರಿಂದ) ೭ನೆಯ (೧೧ನೆಯ) ವರ್ಗಗಳು ಬೇರೆ ಬೇರೆಯಾಗಿ, ಬೇರೆ ಬೇರೆ ಸಾಲಿನಲ್ಲಿ ಬೇರೆ ಬೇರೆ ರೂಪದಿಂದ ನಿಂತದ್ದು ಸ್ಪಷ್ಟವಾಗಿ ಕಾಣುತ್ತದೆ. ಪ್ರಾಥಮಿಕ ಶಾಲೆಯ ಮೆಟ್ಟಿಲುಗಳು ೧ರಿಂದ ೭ರ ವರೆಗೆ ಒಂದು ಏಕರೂಪತೆಯಲ್ಲಿ ಸಾಗಿದ್ದೂ, ಮಾಧ್ಯಮಿಕ ಶಾಲೆಯ ಮೆಟ್ಟಿಲುಗಳು ೧ರಿಂದ (೫ರಿಂದ) ೭ರ (೧೧ರ) ವರೆಗೆ ಮತ್ತೊಂದು ಏಕರೂಪತೆಯಲ್ಲಿ ಸಾಗಿದ್ದೂ ನಿಚ್ಚಳವಿದೆ. ಪ್ರಾಥಮಿಕ ಶಾಲೆಯ ೭ನೆಯ ಮೆಟ್ಟಿಲನ್ನು ದಾಟಿದ ಕೂಡಲೇ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯು (P. S C. Examination) ಕಳಸವಿದ್ದು ಪ್ರಾಥಮಿಕ ಶಾಲೆಯ ಮಂದಿರದ ಪೂರ್ತಿಯಿದೆ. ಅದರಂತೆಯೇ ಮಾಧ್ಯಮಿಕ ಶಾಲೆಯ ೭ನೆಯ (೧೧ನೆಯ) ಮೆಟ್ಟಿಲನ್ನು ದಾಟಿದ ಕೂಡಲೇ ಮಾಧ್ಯಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯು (S. S. C. Examination) ಗೋಪುರವಿದ್ದು ಅಲ್ಲಿ ಮಾಧ್ಯಮಿಕ ಶಾಲೆಯ ಪೂರ್ಣತೆ ಇದೆ.

ಮಧ್ಯದಲ್ಲಿ ಮಾತ್ರ ೫, ೬, ೭ನೆಯ ವರ್ಗಗಳು ಪ್ರಾಥಮಿಕ ಶಾಲೆ ಹಾಗು ಮಾಧ್ಯಮಿಕ ಶಾಲೆಯ ಸೋಪಾನಗಳ ಸಾಲಿನಲ್ಲಿ ಒಂದಕ್ಕೊಂದು ಹೊಂದಿಕೊಂಡಿದ್ದರಿಂದ ಅದೆಷ್ಟೋ ಜನರು ಅವೆರಡೂ ಮೆಟ್ಟಿಲುಗಳ (೫, ೬, ೭) ಜೋಡಿಯು ಒಂದೇ ಎಂದು ಭಾವಿಸಿಕೊಂಡಿದ್ದಾರೆ. ಅವೆರಡರಲ್ಲಿಯೂ ಏನೊಂದೂ ಭೇದವಿಲ್ಲ; ಒಂದೆಂದರೆ ಇನ್ನೊಂದು ಎಂದು ತಿಳಿದುಕೊಂಡದ್ದು ತಪ್ಪು. ೫, ೬, ೭ ಕ್ರಮಾಂಕಗಳನ್ನು ಈ ವರ್ಗಗಳಿಗೆ ಕೊಟ್ಟಿದ್ದಕ್ಕೆ ಮಾತ್ರವೇ ಈ ತಪ್ಪು ತಿಳುವಳಿಕೆಗೆ ಆಸ್ಪದವಾಯಿತೇನೋ ಎಂದು ಒಮ್ಮೊಮ್ಮೆ ಭಾಸವಾಗುತ್ತದೆ.

ಇಷ್ಟೆಲ್ಲವನ್ನು ವಿಹಂಗಮ ದೃಷ್ಟಿಯಿಂದ ನಿರೀಕ್ಷಿಸಿದೊಡನೆ ಪ್ರಾಥಮಿಕ ಶಾಲೆಯ ೫, ೬, ೭ನೆಯ ಈ ಮೂರು ವರ್ಗಗಳು ಮಾಧ್ಯಮಿಕ ಶಾಲೆಯ ೫, ೬, ೭ನೆಯ ವರ್ಗಗಳೊಡನೆ ಅಂಕಿಗಳ ಹೆಸರಿನಲ್ಲಿ ಮಾತ್ರ ಒಂದನ್ನೊಂದು ಹೋಲುತ್ತವೆಯಲ್ಲದೆ ಉಳಿದ ಯಾವ ವಿಷಯದಲ್ಲಿಯೂ ಹೋಲುವಂತಿಲ್ಲ. ಇವೆರಡರಲ್ಲಿ ಅಂಕಿಗಳ ಸಾಮ್ಯವಿದೆಯೇ ಹೊರತು, ಎಲ್ಲದರಲ್ಲಿಯೂ ವೈಷಮ್ಯವೇ ಇದೆ ಎಂಬುದನ್ನು ತಿಳಿಯದಲೆ ಕೆಲಕೆಲವರಿಗೆ ಈ ೫, ೬, ೭ನೆಯ ವರ್ಗಗಳೆಂದರೆ ಸಂದಿಗ್ಧ ವರ್ಗಗಳಾಗಿ ಪರಿಣಮಿಸಿಬಿಟ್ಟಿವೆ. ಈ ಸಂದಿಗ್ಧ ಸಮಸ್ಯೆಯನ್ನು ಪಾಲಕರಿಗೂ, ವಿದ್ಯಾರ್ಥಿಗಳಿಗೂ, ಶಿಕ್ಷಕರಿಗೂ ಬಿಡಿಸಿ ಹೇಳುವ ಪ್ರಸಂಗವು ಎಷ್ಟೋ ಸಲ ನನಗೆ ಬಂದುದನ್ನು ಇಲ್ಲಿ ಉಲ್ಲೇಖಿಸದಿರಲಾರೆನು.

ಅದರಲ್ಲಿಯೂ ಪ್ರಾಥಮಿಕ ಶಾಲೆಗಳ ಹಾಗು ಮಾಧ್ಯಮಿಕ ಶಾಲೆಗಳ ಫೀ ದರದ ಮಾತು ಬಂದಾಗ್ಗೆಯಂತೂ ಅನೇಕ ಪಾಲಕರು ಮತ್ತಷ್ಟು ಗೊಂದಲದಲ್ಲಿ ಬಿದ್ದದ್ದು ನನ್ನ ಅನುಭವಕ್ಕೆ ಬಂದ ಮಾತಾಗಿದೆ. ಮತ್ತೆ ಕೈಕೆಲಸ, ಜೀವನ ಶಿಕ್ಷಣ, ಕೇಂದ್ರ ಶಾಲೆ, ಮಾದರಿ ಶಾಲೆ, ವಿವಿಧೋದ್ದೇಶ ಶಾಲೆ, ಒಬ್ಬ ಶಿಕ್ಷಕರ ಶಾಲೆ, ಹೊಸ ಅಭ್ಯಾಸ ಪತ್ರಿಕೆ, ಪ್ರಯೋಗ ಶಾಲೆ, ನಿರೀಕ್ಷಣೆ, ಚಟುವಟಿಕೆಯ ಮುಖಾಂತರ ಅಭ್ಯಾಸ ಮುಂತಾದ ವಿಷಯಗಳ ಮಾತು ಬಂದರಂತೂ ತೀರಿತು; ಪ್ರಾಥಮಿಕ ಶಾಲೆಯ ೫, ೬, ೭ಯ ವರ್ಗಗಳ ಹಾಗು ಮಾಧ್ಯಮಿಕ ಶಾಲೆಯ ೫, ೬, ೭ನೆಯ ವರ್ಗಗಳ ಸೂಕ್ಷ್ಮ ತಾರತಮ್ಯವನ್ನು ಅರಿಯುವದೂ ಆಯಾ ಶಾಲೆಗಳಲ್ಲಿ ಆಯಾ ವರ್ಗಗಳಲ್ಲಿ ಮಕ್ಕಳಿಗೆ ದೊರೆಯುವ ಶಿಕ್ಷಣ, ಶಿಕ್ಷಣದ ಮಟ್ಟ, ಅವುಗಳ ಧ್ಯೇಯ ಮತ್ತು ಮಕ್ಕಳ ಮನಸ್ಸಿನ ಮೇಲೆ ಆಗುವ ಶೈಕ್ಷಣಿಕ ಪರಿಣಾಮ ಇವುಗಳನ್ನು ತಿಳಕೊಳ್ಳುವದಂತೂ ಏನೂ ಅರಿಯದ ಸಾಮಾನ್ಯ ಜನರಿಗೆ ದೂರತೋ ವಾಸ್ತವವೇ ಸರಿ. ಸೂಕ್ಷ್ಮ ಸಂಗತಿಗಳನ್ನು ಈಗ ಸ್ಥೂಲ

ಮಾನದಿಂದ ಇಷ್ಟೇ ಹೇಳಿ, ಮತ್ತೊಮ್ಮೆ ಅವುಗಳನ್ನು ವಿಶದವಾಗಿ ವಿಸ್ತರಿಸೋಣ.

ಪ್ರಸ್ತುತ ಪ್ರಸಂಗದಲ್ಲಿ ವಿಚಾರಿಸಬೇಕಾದುದೆಂದರೆ ಪ್ರಾಥಮಿಕ ಶಾಲೆಯ ೫, ೬, ೭ನೆಯ ವರ್ಗಗಳು, ಮಾಧ್ಯಮಿಕ ಶಾಲೆಯ ಆ ವರ್ಗಗಳು ಇವು ಎರಡೂ ಒಂದೇ ಎಂದು ತಿಳಕೊಳ್ಳುವದು ಸಮಂಜಸವೇ ಹೇಗೆ? ಹಾಗೆ ತಿಳಿದುಕೊಂಡಲ್ಲಿ ಇವೆರಡೂ ವರ್ಗಗಳ ಜೋಡಿಗಳಲ್ಲಿ ನಡೆಯುವ ಕಾರ್ಯವೂ ಆ ಕಾರ್ಯದ ಪರಿಣಾಮವೂ ಒಂದೇ ಬಗೆಯಾಗಿ ಇರುವದೇ ಹೇಗೆ? ಒಂದೇ ಆದುದಾದರೆ, ಅದು ಹೇಗೆ? ಪ್ರಾಥಮಿಕ ಮತ್ತು ಮಾಧ್ಯಮಿಕ ಈ ಎರಡೂ ಶಾಲೆಗಳಲ್ಲಿಯ ವರ್ಗಗಳನ್ನು ೫, ೬, ೭ ಎಂದು ಒಂದೇ ತೆರನಾಗಿ ಕರೆದ ಕ್ಷಣಕ್ಕೆ ಎರಡೂ ಗುಂಪುಗಳು ಒಂದೇ ಆಗಬಲ್ಲವೆ?

ಕಾಜಿನ ಕೊಳವೆಯ ರೂಪದಿಂದ ೫, ೬, ೭ನೆಯ ವರ್ಗಗಳು ಒಂದೇ ಕಂಡರೂ, ಆ ಕೊಳವೆಗಳಲ್ಲಿ ಹಾಕುವ ನೀರೂ ಒಂದೇ ಇದ್ದರೂ, ಆ ನೀರನ್ನು ಕೊಳವೆಯಲ್ಲಿ ಹಾಕುವ ರೀತಿ ಮತ್ತು ಆ ನೀರಿನ ಬಣ್ಣ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಬೇರೆ ಬೇರೆಯಾಗಿ ಪರಿಣಮಿಸುತ್ತವೆ. ಎರಡು ಕೊಳ್ಳಗಳಲ್ಲಿ ಮಳೆಯ ನೀರು ಹಾದು ಹೋಗುತ್ತಿದ್ದರೂ, ಒಂದು ಕೊಳ್ಳದಲ್ಲಿ ಹಾಯುವ ನೀರು ಹಳ್ಳವಾಗಿಯೂ ಮತ್ತೊಂದು ಕೊಳ್ಳದಲ್ಲಿ ಹಾಯುವ ನೀರು ಹೊಳೆಯಾಗಿಯೂ ಹರಿಯುವದು. ಪ್ರಾಥಮಿಕ ಶಾಲೆಯ ಹಾಗು ಮಾಧ್ಯಮಿಕ ಶಾಲೆಯ ೫,೬,೭ನೆಯ ವರ್ಗಗಳು ಅಂಕಿಗಳ ಹೆಸರಿನಲ್ಲಿ ಅಭ್ಯಾಸ ಪತ್ರಿಕೆಯಲ್ಲಿ ಅದೇಕೆ ಪಡಿಯಚ್ಚಿನಲ್ಲಿ ಹಾಗು ಚೌಕಟ್ಟಿನಲ್ಲಿ ಒಂದೇ ಹೌದು; ಆದರೆ ಪ್ರಾಥಮಿಕ ಶಾಲೆಯ ೫, ೬, ೭ನೆಯ ವರ್ಗಗಳ ಪಡಿಯಚ್ಚಿನಲ್ಲಿ ಹಾಕುವದು ಬೆಲ್ಲದ ಅಣವು, ಮಾಧ್ಯಮಿಕ ಶಾಲೆಯ ೫, ೬, ೭ನೆಯ ವರ್ಗಗಳ ಪಡಿಯಚ್ಚಿನಲ್ಲಿ ಹೊಯ್ಯುವದು ಸಕ್ಕರೆಯ ಅಣವು.

ಮೇಲೆ ಕೊಟ್ಟ ವರ್ಗ-ಸೋಪಾನಗಳ ಚಿತ್ರದಲ್ಲಿ ೫, ೬, ೭ನೆಯ ವರ್ಗ-ಸೋಪಾನಗಳೇನೋ ಅಳತೆಯಲ್ಲಿ ಮತ್ತು ಗಾತ್ರದಲ್ಲಿ ಕೂಡ ನೋಡುಗರಿಗೆ ಒಂದೇ ಕಂಡರೂ ಪ್ರಾಥಮಿಕ ಶಾಲೆಯ ೫, ೬, ೭ನೆಯ ಸೋಪಾನಗಳು ಪ್ರಾಥಮಿಕ ಶಾಲಾ ಮಂದಿರದ ಪ್ರಾ. ಶಾ. ಪ್ರ. ಪ. ಪರೀಕ್ಷೆ (P. S. C. Examination)ಯ ಗೋಪುರದ ಕೆಳಗೆ, ಮತ್ತು ಮಾಧ್ಯಮಿಕ ಶಾಲೆಯ ೫, ೬, ೭ನೆಯ ಸೋಪಾನಗಳು ಮಾಧ್ಯಮಿಕ ಶಾಲಾ ಮಂದಿರದ ಮಾ. ಶಾ. ಪ್ರ. ಪ. ಪರೀಕ್ಷೆ (S. S. C. Examination)ಯ ಗೋಪುರದ ಕೆಳಗೆ ಬೇರೆ ಬೇರೆ ಸಾಲುಗಳಲ್ಲಿ ಬೇರೆ ಬೇರೆ ತಳಹದಿಯ ಮೇಲೆ ಇದ್ದುದನ್ನು ಮಾತ್ರ ನಾವು ಮರೆಯ ಕೂಡದು.

೫, ೬, ೭ನೆಯ ವರ್ಗಗಳು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆ ಎರಡರಲ್ಲಿಯೂ ಒಂದೇ ಎಂಬುವ ಗ್ರಹಿಕೆಯನ್ನು ದೂರಿಕರಿಸಿದರೆ, ಈಗ ಕಂಡು ಬರುವ ಗೊಂದಲಕ್ಕೆ ಆಸ್ಪದವು ಉಳಿಯದು, ಹಾಗು ಪಾಲಕರಲ್ಲಿ ಮೂಡಿರುವ ಸಂಶಯವೂ ನಿವಾರಣೆಯಾಗುವದು. ಇದಕ್ಕೆ ಉಪಾಯವೇನು? ಒಮ್ಮೊಮ್ಮೆ ಹೀಗೆ ಎನಿಸುತ್ತದಲ್ಲಾ! ಮೊದಲಿನಂತೆ ಪ್ರಾಥಮಿಕ ಶಾಲೆಯಲ್ಲಿಯ ವರ್ಗಗಳನ್ನು ೧, ೨,...........೭ ಹೀಗೆ, ಮತ್ತು ಮಾಧ್ಯಮಿಕ ಶಾಲೆಯಲ್ಲಿಯ ವರ್ಗಗಳನ್ನು ೧,೨,........೭ ಹೀಗೆ ಕರೆಯೋಣವೇ? ಅಂದರೆ ಮೇಲೆ ವಿವರಿಸಿದ ಸಂಶಯವೂ, ಗೊಂದಲವೂ ಅಳಿಯಬಹುದಲ್ಲವೆ? ಇದನ್ನು ಶಿಕ್ಷಕರೂ, ಶಿಕ್ಷಣಾಭಿಮಾನಿಗಳೂ, ಪಾಲಕರೂ, ವಿಚಾರಿಸಿ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರೆ ಒಳ್ಳೆಯದು.

ಎರಡನೆಯ ಸೂಚನೆ ಎಂದರೆ, ಈಗಿದ್ದಂತೆ ಶಾಲಾ ವರ್ಗಗಳ ಹೆಸರುಗಳನ್ನು ೧ರಿಂದ ೧೧ರ ವರೆಗೆ ಇಟ್ಟಾಗ್ಯೂ ಪ್ರಾಥಮಿಕ ಶಾಲೆಯ ೫, ೬,೭ನೆಯ ವರ್ಗಗಳೇ ಮಾಧ್ಯಮಿಕ ಶಾಲೆಯ ೫, ೬, ೭ನೆಯ ವರ್ಗಗಳೆಂದು ಸಾಗಿದಲ್ಲಿ ಮೇಲ್ಕಾಣಿಸಿದ ಸಂಶಯಗಳು ಮತ್ತಿಷ್ಟು ಕಲಬೆರಿಕೆಯಾಗಬಹುದೆಂದು ಸಂಶಯವು ಉದ್ಭವಿಸುತ್ತದೆ. ಆದ್ದರಿಂದ ಈ ಸಂಶಯವನ್ನು ಆದಷ್ಟು ಬೇಗನೆ ನಿವಾರಿಸುವದು ಅತಿ ಅವಶ್ಯವೆನಿಸುತ್ತದೆ. ಕಾರಣ ಪ್ರಾಥಮಿಕ ಶಾಲೆಯ ೫, ೬, ೭ ನೆಯ ವರ್ಗಗಳೇ ಬೇರೆ, ಮಾಧ್ಯಮಿಕ ಶಾಲೆಯ ೫, ೬, ೭ ನೆಯ ವರ್ಗಗಳೇ ಬೇರೆ ಎಂಬುದನ್ನು ತೋರಿಸಲು ಆಯಾ ವರ್ಗಗಳನ್ನು ಒಂದು ತರಹದಿಂದ ಬೇರೆಯಾಗಿ ಸಂಬೋಧಿಸುವದೇ ಲೇಸು. ಆಯಾ ವರ್ಗಗಳನ್ನು ಹೀಗೆ ಬೇರೆಯಾಗಿ ಸಂಬೋಧಿಸಲು ಅವುಗಳಿಗೆ ಒಂದು ಸಂಕೇತ ಸೂಚಕವನ್ನಾದರೂ ಹಚ್ಚಲೇಬೇಕಾಗುವದು. ಇಲ್ಲವಾದರೆ ಗತ್ಯಂತರವಿಲ್ಲ.

ಶಾಲಾ ವರ್ಗಗಳಲ್ಲಿ ಪುನರುಕ್ತಿಯೇ?

ಮೊದಲಿನ ನಾಲ್ಕು ವರ್ಗಗಳಲ್ಲಿ ಅಂದರೆ, ೧, ೨, ೩, ೪, **ಈ ವರ್ಗಗಳ ಹೆಸರಿನಲ್ಲಿ ಸಂಶಯವು ಉದ್ಭವಿಸುವದಿಲ್ಲ. ಈ ವರ್ಗಗಳು** ಪ್ರಾಥಮಿಕ ಶಾಲೆಯ ವರ್ಗಗಳೇ. ಅದರಂತೆ **ಕಡೆಯ** ನಾಲ್ಕು ವರ್ಗಗಳಲ್ಲಿ ಅಂದರೆ ೮, ೯, ೧೦, ೧೧ **ಈ** ವರ್ಗಗಳಲ್ಲಿಯೂ ಸಂಶಯವು ಅನಿಸುವದಿಲ್ಲ. **ಈ ಕಡೆಯ** ನಾಲ್ಕು ವರ್ಗಗಳು ಮಾಧ್ಯಮಿಕ ಶಾಲೆಯ ವರ್ಗಗಳೆಂಬುದು ನಿರ್ವಿವಾದ ಮಾತು. ಆದರೆ ನಡುವೆ ಸಿಕ್ಕ **ಮೂರು** ವರ್ಗಗಳು ೫, ೬, ೭, ಇವು ಹೆಸರಿನಲ್ಲಿ ಸಂದಿಗ್ಧ ವರ್ಗಗಳಾಗಿವೆ. ಆದುದರಿಂದ ಪ್ರಾಥಮಿಕ ಶಾಲೆಯ ೫, ೬, ೭, ನೆಯ ವರ್ಗಗಳಿಗೆ 'ಪ್ರಾ' ಜೋಡಿಸಿ, ಹೀಗೆ— **ಪ್ರಾ. ೫, ಪ್ರಾ. ೬, ಪ್ರಾ. ೭,** ವರ್ಗಗಳೆಂದೂ ಹಾಗೂ, ಮಾಧ್ಯಮಿಕ ಶಾಲೆಯ ೫, ೬, ೭ ನೆಯ ವರ್ಗಗಳಿಗೆ ಆದಿಯಲ್ಲಿ 'ಮಾ' ಜೋಡಿಸಿ ಹೀಗೆ— **ಮಾ. ೫, ಮಾ. ೬, ಮಾ. ೭** ವರ್ಗಗಳೆಂದೂ ಕರೆದಲ್ಲಿ ೫, ೬, ೭ ನೆಯ ವರ್ಗಗಳ ಹೆಸರಿನ ಬಗ್ಗೆ ಮತ್ತು ಅವುಗಳನ್ನು ಕರೆಯುವಬಗ್ಗೆ ಉಂಟಾದ ಸಂಶಯದ ಸೊಲ್ಲು ಇಲ್ಲವಾಗಬಹುದೆಂದು ಅನಿಸುತ್ತದೆ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವ ಮಹನೀಯರೂ, ಶಿಕ್ಷಣ ಪ್ರೇಮಿಗಳೂ, ವಿಶೇಷತಃ ಶಿಕ್ಷಕರೂ ಈ ವಿಷಯದ ಬಗ್ಗೆ ಇನ್ನೂ ಹೆಚ್ಚಿಗೆ ವಿಚಾರಿಸಿ ತಮ್ಮ ಮತ್ತಿತರ ರಚನಾತ್ಮಕ ಹಾಗೂ ಉಪಯುಕ್ತವಾದ ಸೂಚನೆಗಳನ್ನೂ, ಅಭಿಪ್ರಾಯವನ್ನೂ ವ್ಯಕ್ತಗೊಳಿಸುವರಾಗಿ ಆಶಿಸಲಾಗಿದೆ.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋಶಿ, ಮತ್ತು

ಶ್ರೀ. ಜಿ. ಡಿ. ಮಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. **ಬೆಲೆ ೧-೧೨-೦** ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟೆ, ಪುಣೆ.

ಶೀಘ್ರದಲ್ಲಿ ಪ್ರಕಟವಾಗುತ್ತದೆ.

— ೪ನೆಯ ಪ್ರಕಟಣೆ —

ಅತಿದೂರದ ಜಗತ್ತಿನಲ್ಲಿ

ನಕ್ಷತ್ರ ರಾಜ್ಯದ ಒಂದು ಸಾಹಸಿ ಪ್ರೇಮಕಥೆ.

ಶ್ರೀ ಹೆಗಡೆ ಬಂಧುಗಳು. ಬೆಲೆ: ೦-೧೦-೦

— ೫ನೆಯ ಪ್ರಕಟನೆ —

ಕುಮಾರಿ ಸುನೇತ್ರಾ

ಚೀನದ ಹೆಸರಾಂತ ಬರೆಹಗಾರರಾದ

ಲಿನ್. ಯು. ಟಿಂಗರ

ಒಂದು ಕಾದಂಬರಿಯ ಆಧಾರದ ಮೇಲೆ ಬರೆದದ್ದು.

ಶ್ರೀ ತಲಚೇರಕರ. ಬೆಲೆ: ೦-೧೦-೦

— ಚಂದಾದಾರರಿಗೆ ಸವಲತ್ತು —

೬ ರೂ. ಗಳಿಗೆ ೧೨ ಪುಸ್ತಕಗಳು.

ಸುಲಭ ಸಾಹಿತ್ಯ ಪ್ರಕಾಶನ, ಕುಮಟಾ

ಗಾಂಧೀಜಿಯವರು ಜಗತ್ತಿಗೆ ಬೀರಿದ ಸಂದೇಶಗಳು

ಲೇಖಕರು : ಶ್ರೀ ಸಿ. ಜಿ. ಮೊಗಲಿ, ಶಿಕ್ಷಕ-ವಿದ್ಯಾರ್ಥಿ ಗಂಡು ಮಕ್ಕಳ ಸ. ಟ್ರೇ. ಕಾಲೇಜ, ಧಾರವಾಡ.

[೧೯೫೫ನೆಯ ಚರಖಾ ಜಯಂತಿಯ ಕಾಲಕ್ಕೆ ೧೦, ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ಏರ್ಪಡಿಸಿದ ನಿಬಂಧ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದುದು. — ಪ್ರ. ಸಂ.]

" ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ
....ಸಂಭವಾಮಿ ಯುಗೇ ಯುಗೇ "

— ಭಗವದ್ಗೀತೆ

ಅದೆಷ್ಟೋ ದಿನಗಳಿಂದ ಪರದಾಸ್ಯದ ಸಂಕೋಲೆಗಳ ಹಿಡಿತದ ನೋವಿನಿಂದ ನರಳುತ್ತಿದ್ದ ಬಡ ಭಾರತಾಂಬೆಯ ಬಂಧವಿಮೋಚನೆಯ ಮಹಾಕಾರ್ಯವನ್ನು ಹೊರುವದ ಕ್ಕಾಗಿಯೇ ಈ ಜಗತ್ತಿಗೆ ಬಾಪೂಜಿ ಹುಟ್ಟಿ ಬಂದಿರ ಬೇಕು. ಹಾಗೂ ಮೇಲಿನ ಭಗವದ್ಗೀತೆಯ ಶ್ರೀಕೃಷ್ಣನ ಉಕ್ತಿಗಳೂ ಈ ಮಹಾತ್ಮನಿಗೆ ಎಷ್ಟು ಸಾಮ್ಯ !

ಸತ್ಯ, ಅಹಿಂಸೆ, ಪ್ರೇಮಗಳ ಸತ್ವಗಳನ್ನು ತನ್ನ ಜೀವಿತದಲ್ಲಿಳಿಸಿ ಜಗತ್ತಿಗೆ ತನ್ಮೂಲಕ ಸುಖ ಶಾಂತಿಗಳ ದಾರಿ ತೋರಿಸಿದ ದಿವ್ಯಾತ್ಮನೀತ. ಸಾವಿರ ವರುಷಗಳಿಂದ ಸಂಗ್ರಾಮಗಳಿಂದಾಗದ ಕಾರ್ಯ, ಈತನ ಅಹಿಂಸೆಯ ಅಚಲ ಮಂತ್ರದಿಂದ ಅದೆಷ್ಟು ಸ್ವಲ್ಪ ಕಾಲದಲ್ಲಿ ಸಾಧಿಸಿತು. ಜಗತ್ತಿನಲ್ಲಿ ಬಲಾಢ್ಯವೆನಿಸಿಕೊಂಡ ಬ್ರಿಟಿಶ್ ಸಾಮ್ರಾಜ್ಯಶಾಹಿಯಿಂದ ಯಾವ ದೇಶವೂ ಎಂದೂ ದೊರೆಕಿಸದ ಸ್ವಾತಂತ್ರ್ಯವನ್ನು ಈ ಬಾಪೂ ನಮಗೆ ತಂದು ಕೊಟ್ಟ. ಇಡಿಯ ವಿಶ್ವವನ್ನೇ ಸುತ್ತು ಹಾಕಿದರೂ, ಯಾವ ಸಂಸ್ಕೃತಿಗಳ ವ್ಯಾಮೋಹಕ್ಕೆ ಒಳಗಾಗದೇ ತನ್ನದೇ ಆದ ಉಚ್ಚ ಸಂಸ್ಕೃತಿ ಕಾಯ್ದು, ಅದರಂತೆಯೇ ಆಚರಿಸಿ ಬಂದ ವೀರನಿವನು. ವಿಶ್ವದ ಪ್ರತಿ ಜನಾಂಗದವರಿಂದಲೂ ಅತಿ ಉಚ್ಚಮಟ್ಟದ ಮೆಚ್ಚುಗೆ ಪಡೆದುಬಂದ ವಿಶ್ವ ಮಾನ್ಯ ವಿಶ್ವಪ್ರೇಮಿ ಈ ನಮ್ಮ ಬಾಪೂಜಿ.

ಸತ್ಯ :

ಸತ್ಯವೆಂದರೆ ದೇವರು ಅಥವಾ ಸತ್ಯ ವಿಚಾರ. ಸತ್ಯವಾಣಿ ಅಥವಾ ಸತ್ಯಕರ್ಮ. ದೂರದೃಷ್ಟಿಯಿಂದ ನೋಡಿದರೆ ಸತ್ಯವಿದ್ದುದು ಒಳಿತಾದುದೂ, ಹಿತಕರವಾದುದೂ ಇರುವದು. ಯಾವ ಸತ್ಯ ಮತ್ತು ಸನಾತನ ನಿಯಮಗಳಿಂದ ವಿಶ್ವದ ಜಡ ಚೇತನ ಯಂತ್ರವು ನಡೆಯುತ್ತಿದೆಯೋ ಅದನ್ನು ಶೋಧಿಸುತ್ತಿರುವದು, ಮತ್ತು ಅವುಗಳಂತೆ ತನ್ನ ಜೀವನವನ್ನು ಮಾರ್ಪಡಿಸುತ್ತಿರುವದು, ಹಾಗೂ ಅಸತ್ಯವನ್ನು ಸತ್ಯಾದಿ ಸಾಧನಗಳಿಂದ ಪ್ರತಿಭಟಿಸುವದು ಸತ್ಯಾಗ್ರಹವೆನಿಸುವದು. ಕೊನೆಯವರೆಗೆ ಇಲ್ಲವೆ ಆಯಾ ಪ್ರಸಂಗಗಳಲ್ಲಿ ಶಕ್ಯವಿದ್ದಷ್ಟು ಬಹುಕಾಲದ ವರೆಗೆ ನಮ್ಮ ರಾಗದ್ವೇಷ ರಹಿತ, ನಿಷ್ಪಕ್ಷಪಾತ ಶ್ರದ್ಧಾಭಕ್ತಿಯುತ ಬುದ್ಧಿಗೆ ಯೋಗ್ಯವೂ ಮತ್ತು ನ್ಯಾಯವೂ ಎಂದೆನಿಸಿದ ವಿಚಾರವೇ ನಮ್ಮ ಮಟ್ಟಿಗೆ ಸತ್ಯ ವಿಚಾರವು.

ಏನನ್ನಾದರೂ ಹೇಳುವ ಪ್ರಸಂಗ ಬಂದಾ
ಗೊತ್ತಿದ್ದ ಸಂಗತಿಯನ್ನು ಇದ್ದಕಿದ್ದ ಹಾಗೆ
ವದು ಸತ್ಯವು. ವಿಚಾರದಿಂದ ಸತ್ಯವೆನಿಸಿದ್ದನ್ನು
ದಿಂದ ಆಚರಿಸುವದೇ ಸತ್ಕರ್ಮವು. ಸತ್ಯವನ್ನು
ಅರಿತುಕೊಳ್ಳಲು ಅಪಾರ ಸತ್ಯವೇ ಸಾಧನ. ಸ
ಸತ್ಯ ವಾಣಿ ಮತ್ತು ಸತ್ಯಕರ್ಮ ಇಷ
ಸತ್ಯದ ಪಾಲನೆಯಿಂದ ದೊರೆತ ಪೂರ್ಣ ಸಿ
ಮಾತ್ಮನ ಸಾಕ್ಷಾತ್ಕಾರದ ಒಂದೊಂದು

ಏರಿ ಏರಿ ಸತ್ಯದಿಂದ ಶಿವನ ಸಾನ್ನಿಧ್ಯವನ್ನು ಹೊಂದ ಬಹುದೆಂದು ತೋರಿಸಿದವರಲ್ಲಿ ಗಾಂಧೀಜಿಯವರು ಶ್ರೇಷ್ಠ ರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಅಹಿಂಸೆ :

ಬೇರೆ ಜೀವಿಯನ್ನು ಕೊಲ್ಲದಿರುವದೇ ಅಹಿಂಸೆ ಯೆಂದು ತಿಳಿಯಲಾಗದು. ಅಹಿಂಸೆಯು ಆಚರಿಸಲು ಬರುವಂತಹ ಒಂದು ಸ್ಥೂಲವಾದ ನಿಯಮವಲ್ಲ. ಇದು ಮನಸ್ಸಿನ ಒಂದು ವೃತ್ತಿಯು. ಯಾವ ವೃತ್ತಿಯಲ್ಲಿ ಎಲ್ಲಿಯೂ ದ್ವೇಷದ ಗಂಧವೂ ಕೂಡ ಇರುವದಿಲ್ಲವೋ ಅದೇ ಅಹಿಂಸೆಯು. ಇಂತಹ ಅಹಿಂಸೆಯು ಸತ್ಯದಷ್ಟೇ ವ್ಯಾಪಕವಿರುವದು. ಇಂತಹ ಅಹಿಂಸೆಯು ಸಿದ್ಧಿಯಾಗದ ಹೊರತು, ಸತ್ಯದ ಸಿದ್ಧಿಯು ಆಗದು. ಇನ್ನೂ ಹೆಚ್ಚಿಗೆ ವಿಚಾರ ಮಾಡಿದಲ್ಲಿ ಸತ್ಯವು ಅಹಿಂಸೆಯ ಪರಾಕಾಷ್ಠೆ. ಪೂರ್ಣ ಸತ್ಯ ಮತ್ತು ಪೂರ್ಣ ಅಹಿಂಸೆ ಇವುಗಳಲ್ಲಿ ಭೇದ ವಿಲ್ಲ. ಆದ್ದರಿಂದ ಅರಿತುಕೊಳ್ಳಲು ಅನುಕೂಲವಾಗಬೇ ಕೆಂದು ಸತ್ಯವು ಸಾಧ್ಯವೆಂದೂ ಅಹಿಂಸೆಯು ಸಾಧನ ವೆಂದೂ ಎಣಿಸಲಾಗಿದೆ. ನಾಣ್ಯದ ಎರಡು ಮೈಗಳಂತೆ ಸತ್ಯ ಮತ್ತು ಅಹಿಂಸೆ ಇವು ಹಾಸು ಹೊಕ್ಕಾಗಿವೆ.

ಅಹಿಂಸೆಯ ಸಾಧಕನು ಪ್ರಾಣಿಗಳಿಗೆ ಕೇವಲ ಉದ್ವೇಗವನ್ನು ಹುಟ್ಟಿಸುವಂಥ ನುಡಿಯನ್ನಾಡದಿದ್ದರೆ ಅಥವಾ ಅಂಥ ಕೆಲಸವನ್ನು ಮಾಡದಿದ್ದರೆ ಮತ್ತು ಮನ ದಲ್ಲಿ ಭೂತಮಾತ್ರದ ವಿಷಯವಾಗಿ ದ್ವೇಷಭಾವನೆಯನ್ನು ಬರಗೊಡದಿದ್ದರೆ ತಾನು ಯಶಸ್ಸನ್ನು ಪಡೆದನೆಂಬು ಸಂತೋಷ ಪಡಕೂಡದು. ಜಗತ್ತಿನಲ್ಲಿ ಪ್ರಚಲಿತವಿದ್ದ ದುಃಖವನ್ನು ತಾನು ಅರಿತುಕೊಂಡು ಅವುಗಳನ್ನು ಹೋಗಲಾಡಿಸುವ ಉಪಾಯುಗಳನ್ನು ಯೋಜಿಸುತ್ತಿರ ಬೇಕು. ಆದುದರಿಂದ ಅಹಿಂಸೆಯೆಂಬುದು ಕೇವಲ ನಿವೃತ್ತಿ ರೂಪ ಕರ್ಮವಲ್ಲ. ಅದು ಬಲವಾದ ಪ್ರವೃತ್ತಿಯೂ ಅಥವಾ ಪ್ರಕ್ರಿಯೆಯೂ ಇರುವದು.

ಅಹಿಂಸೆಯಲ್ಲಿ ಕಾರ್ಯವನ್ನು ಅತ್ಯಂತ ಬೇಗನೆ ಸಾಧಿಸುವ ಶಕ್ತಿಯಿದೆ. ಇದರಲ್ಲಿಯ ಅಪಾರಶಕ್ತಿಯ ಸಂಪೂರ್ಣ ಸಂಶೋಧನೆಯು ಆಗಿಲ್ಲವೆಂದೇ ಹೇಳ ಬಹುದು. ಅಹಿಂಸೆಯ ಬಳಿಯಲ್ಲಿ ಎಲ್ಲ ಕಪಟ ವೈರ ಗಳು ತಣ್ಣಗಾಗಿ ಹೋಗುತ್ತವೆ. ಪೂಜ್ಯ ಬಾಪೂಜಿ ಯವರು ಇಡಿಯ ಪ್ರಪಂಚಕ್ಕೆ ಈ ತತ್ವಗಳ ಪ್ರಣಾಲಿ ಯನ್ನು ಬೀರಿದರು. ಅಹಿಂಸಾಮಯ ಸಾತ್ವಿಕ ಜೀವನ ವನ್ನು ಸಾಗಿಸಿ ಜನರಲ್ಲಿ 'ದಯವೇ ಧರ್ಮದ ಮೂಲ' ವೆಂಬ ಭಾವನೆಯನ್ನು ಮೂಡಿಸಿದರು. ಶಾಂತ ರೀತಿ ಯಿಂದ ಸರಳ ಜೀವನ ಸಾಗಿಸಿ ಸುಖಿಗಳಾಗಿರೆಂದು ಎಲ್ಲ ರಿಗೂ ಬಿನ್ನವಿಸಿದರು.

ಅವರ ಈ ಉಪದೇಶವು ಭಾರತಕ್ಕಂತೂ ಅಮೃತದ ಆಹಾರವಾದಂತಾಯಿತು; ಭಾರತದ ಸ್ವಾತಂತ್ರ್ಯಕ್ಕೆ ವಜ್ರಾಯುಧವಾಯಿತು; ಭಾರತದ ಸರ್ವೋನ್ನತಿಗೆ ಜಪ ಮಂತ್ರವಾಯಿತು.

ಪ್ರೇಮ :

ಪರಮಾತ್ಮ ಪ್ರೇಮಸ್ವರೂಪನಿರುವನೆಂದು ಅನೇಕ ಧರ್ಮಗಳಲ್ಲಿ ಹೇಳಿದೆ. ಆ ಪ್ರೇಮ ಮತ್ತು ಈ ಅಹಿಂಸೆ ಬೇರೆಯಲ್ಲ. ಪ್ರೇಮದ ಶುದ್ಧ ವ್ಯಾಪಕ ಸ್ವರೂಪವೇ ಅಹಿಂಸೆಯು. ಯಾವ ಪ್ರೇಮದಲ್ಲಿ ರಾಗವ ಅಥವಾ ಮೋಹವ ಬೆರಿಕೆ ಇರುವದೋ ಅದು ಅಹಿಂಸೆಯಲ್ಲ. ರಾಗ ಮೋಹಗಳಿದ್ದಲ್ಲಿ ದ್ವೇಷದ ಬೀಜವು ಇದ್ದೇ ಇದೆ. ಪ್ರೇಮ ದಲ್ಲಿ ಕೆಲವು ಸಲ ರಾಗ ದ್ವೇಷಗಳು ಕಂಡು ಬರುವದುಂಟು. ಆದುದರಿಂದ ತತ್ವಜ್ಞಾನಿಗಳು ಪ್ರೇಮ ಶಬ್ದವನ್ನು ಉಪ ಯೋಗಿಸದೆ ಅಹಿಂಸೆ ಶಬ್ದವನ್ನು ಉಪಯೋಗಿಸಿ ಅದನ್ನು ಪರಮೋಧರ್ಮವೆಂದು ಕರೆದಿರುವರು. ಗಾಂಧೀಜಿಯವರು ಪ್ರಾಣಿಮಾತ್ರರನ್ನು ಪ್ರೇಮದಿಂದ ಕಾಣುತ್ತಿದ್ದರು. ವೈರಿಗಳೆಂಬುವವರೇ ಇಲ್ಲದ ಅವರು ಅಜಾತ ಶತ್ರುಗಳೆಂದು ಹೇಳಬಹುದಾಗಿದೆ.

ಗಾಂಧೀಜಿ ಮತ್ತು ಪ್ರಾರ್ಥನೆ :

ಬಹುದಿನಗಳಿಂದ ಬೇರೆ ಬೇರೆ ಧರ್ಮಗಳ ಜನರಲ್ಲಿ ಆಗುತ್ತಿರುವ ಕಲಹ, ದ್ವೇಷ, ಅಸೂಯೆಗಳನ್ನು ತಪ್ಪಿಸಲು ಮತ್ತು ಸರ್ವ ಧರ್ಮಗಳ ಸಮನ್ವಯ ಮಾಡಲು ಗಾಂಧೀಜಿಯವರು ಯೋಚಿಸಿದ ಕೆಲವು ಉಪಾಯಗಳಲ್ಲಿ ಪ್ರಾರ್ಥನೆಯು ಒಂದೆಂದು ಗಣಿಸಬಹುದು. ಎಲ್ಲ ಧರ್ಮ ಗಳ ಬಗೆಗೆ ಎಲ್ಲರಿಗೂ ಪ್ರೀತಿ ವಿಶ್ವಾಸಗಳು ಹುಟ್ಟುವಂತೆ ಹಿಂದುಸ್ತಾನದಲ್ಲಿಯ ಮುಖ್ಯ ಧರ್ಮಗಳ ಉದಾತ್ತ ತತ್ವ

ಗಳ ಸಮನ್ವಯ ಮಾಡಿ ಹೊಸದೊಂದು ಧರ್ಮವನ್ನು ಪ್ರಾರ್ಥನೆಯ ಮುಖಾಂತರ ಜಗತ್ತಿಗೆ ಬೀರಿದರು. ಅವರು ತೋರಿದ ಈ ಧರ್ಮಕ್ಕೆ ಮಾನವ ಧರ್ಮವೆಂದು ಕರೆಯಬಹುದು.

ಸತ್ಯ, ತ್ಯಾಗ ಮತ್ತು ಭ್ರಾತೃಪ್ರೇಮುವನ್ನು ಆದರ್ಶಮಯವಾಗಿ ಜಗತ್ತಿಗೆ ತೋರಿಸಿದ "ಶ್ರೀ ರಾಮನಾಮ" ಅವರ ಪ್ರಾರ್ಥನೆಯ ಪ್ರೇರಕ ನಾಮವಾಗಿತ್ತು. ಇದಲ್ಲದೆ "ಸತ್ಯ-ಅಹಿಂಸೆಯ" ತತ್ವಗಳನ್ನೊಳಗೊಂಡ ಜೈನ-ಬೌದ್ಧ ಧರ್ಮ, "ದೇವನೊಬ್ಬ; ಧರ್ಮದ ಮುಂದೆ ನೀವೆಲ್ಲರೂ ಸಮಾನರು" ಎಂಬ ಇಸ್ಲಾಂ ಧರ್ಮ, "ಕ್ಷಮೆ ಮತ್ತು ತಾಳ್ಮೆಯ" ಪಾಠವನ್ನು ಕಲಿಸಿದ ಕ್ರೈಸ್ತಧರ್ಮ, "ಕಾಯಕವೇ ಕೈಲಾಸ" ವೆಂದು ಬೋಧಿಸಿದ ಬಸವ ಧರ್ಮ ಮುಂತಾದ ಎಲ್ಲ ಧರ್ಮಗಳ ತತ್ವಗಳನ್ನೊಳಗೊಂಡ ಪ್ರಾರ್ಥನೆಯ ಮಾದರಿಯನ್ನು ಜಗತ್ತಿಗೆ ತೋರಿಸಲು ತಮ್ಮ ಆಶ್ರಮದಲ್ಲಿ ಮಾದರಿಯ ಪ್ರಾರ್ಥನೆಯನ್ನು ಏರ್ಪಡಿಸಿದ್ದರು.

ಮೊದಲು ವೇದದ ಶ್ಲೋಕ, ನಂತರ ಕುರಾಣ ಪಠಣ, ಆ ನಂತರ ಬೈಬಲ್ಲಿನ ಓದು, ಕೊನೆಗೆ ಸಾಮೂಹಿಕ ಭಜನಾಗೀತೆಗಳನ್ನು ಹಾಡುವದು ಈ ರೀತಿಯ ಪ್ರಾರ್ಥನೆಯು ಅವರ ಆಶ್ರಮದಲ್ಲಿ ದಿನಾಲು ಮುಂಜಾವು ಹಾಗೂ ಸಂಜೆಯ ಸಮಯದಲ್ಲಿ ನಡೆಯುತ್ತಿತ್ತು. ಹಿಂದು ಸಂಸ್ಕೃತಿಯು ಉಜ್ವಲವಾದದ್ದು. ಆದಕಾರಣ ಈ ಸಂಸ್ಕೃತಿಯ ಪರಂಪರೆಯನ್ನು ಕಾಯುವದಕ್ಕಾಗಿ ಮೊದಲು ವೇದದ ಶ್ಲೋಕಗಳ ಪಠಣ; ಆನಂತರ ನಮ್ಮ ಭಾರತದಲ್ಲಿ ಪ್ರಸಿದ್ಧವಾದ ಮುಖ್ಯ ಧರ್ಮಗಳಲ್ಲಿ, ಪರಸ್ಪರರಲ್ಲಿ ಪ್ರೇಮಾದರಗಳನ್ನು ಬೆಳೆಯಿಸುವ ಸದುದ್ದೇಶದಿಂದ ಮತ್ತು ಎಲ್ಲ ಧರ್ಮಗಳಲ್ಲಿಯ ಉದಾತ್ತ ತತ್ವಗಳನ್ನು ಜನರಿಗೆ ಬೋಧಿಸುವ ದೃಷ್ಟಿಯಿಂದ ಎಲ್ಲ ಧರ್ಮಗಳ ಗೀತೆಗಳನ್ನು ಇಲ್ಲವೆ ವಚನಗಳನ್ನು ಪಠಿಸುತ್ತಿದ್ದರು. ಈ ಎಲ್ಲ ಧರ್ಮಗಳ ಗುರಿಯು ಒಂದೇ. ಅದು ದೇವ ಸಿದ್ಧಿಯೆಂದು ತಿಳಿಸಲೆತ್ನಿಸಿದರು. ಅವರ ಪ್ರಾರ್ಥನೆಯು ವೈಯಕ್ತಿಕತೆಗಿಂತ ಸಾಮೂಹಿಕತೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟಿತ್ತು. ಆದರೆ ವೈಯಕ್ತಿಕ ಪ್ರಾರ್ಥನೆಗೆ ಆತಂಕವಿರಲಿಲ್ಲ. ವೈಯಕ್ತಿಕ ಪ್ರಾರ್ಥನೆಯು ಸಾಮೂಹಿಕ ಪ್ರಾರ್ಥನೆಗೆ ಧಕ್ಕೆ ತಗಲುವಂತಿದ್ದರೆ ಮಾತ್ರ ಆತಂಕವಿತ್ತು. ಅವರ ಸಾಮೂಹಿಕ ಪ್ರಾರ್ಥನೆಯಲ್ಲಿ ಮೇಲು ಕೀಳುಗಳೆಂಬ ಭೇಧವಿರಲಿಲ್ಲ. ಉಚ್ಚ-ನೀಚ ಮತ್ತು ಶ್ರೀಮಂತ-ಬಡವನೆಂಬ ಭೇಧಭಾವವಿರಲಿಲ್ಲ. ಎಲ್ಲರೂ ಸರಿಸಮಾನರೆಂಬ ತಿಳುವಳಿಕೆಯು ಅವರ ಪ್ರಾರ್ಥನೆಯಲ್ಲಿ ಗೋಚರವಾಗುತ್ತಿತ್ತು.

ಇವರ ಇನ್ನೊಂದು ತೆರನಾದ ಪ್ರಾರ್ಥನೆಯೆಂದರೆ ಸೂತ್ರಯಜ್ಞ, ಅಥವಾ ಮೌನಕತಾಯಿ. ದಿನಾಲು ಏನಿಲ್ಲೆಂದರೂ ಅರ್ಧತಾಸು ವೇಳೆಯನ್ನು ಮೌನರೀತಿ ನೂಲಲು ಮಹಾತ್ಮಾಜಿಯವರು ವಿನಿಯೋಗಿಸುತ್ತಿದ್ದರು. ಇದರಿಂದ ಏಕಾಗ್ರತೆಯು ಸಾಧಿಸುವದೆಂದೂ, ಮನಸ್ಸಿನ ಈ ಏಕಾಗ್ರತೆಯು ಆತ್ಮವಿಕಾಸಕ್ಕೆ ಹಾಗೂ ಪರಮಾತ್ಮನ ಸಾಕ್ಷಾತ್ಕಾರಕ್ಕೆ ಸಾಧಕವೆಂದೂ ಅವರು ತಿಳಿದಿದ್ದರು. ಅವರು ಬೋಧಿಸಿದ ವಿಷಯ ಅಷ್ಟೊಂದು ಬುದ್ಧಿಯ ವಿಷಯವಲ್ಲದಿದ್ದರೂ ಶ್ರದ್ಧೆಯ ವಿಷಯವೆಂದು ಸಾರಿ ಹೇಳಬಹುದು. ಎಂಥವನೂ ಶ್ರದ್ಧೆಯಿಂದ ಶುದ್ಧನಾಗದೇ ಇರಲಾರ. ಇದರಂತೆ ದೀನದಲಿತರ ಸೇವೆ ಮಾಡುವದು ಗಾಂಧೀಜಿಯವರ ಇನ್ನೊಂದು ಮಾರ್ಗವಾಗಿತ್ತು. ಸತ್ಯರೂಪನಾದ ಪರಮಾತ್ಮನು ಸರ್ವಾಂತರಯಾಮಿಯಾಗಿರುವನು. ಆದ್ದರಿಂದ ಜೀವಮಾತ್ರರೊಡನೆ ಐಕ್ಯವನ್ನು ಸಾಧಿಸತಕ್ಕದ್ದು. ಜೀವಮಾತ್ರರೊಡನೆ ಐಕ್ಯವನ್ನು ಸಂಪಾದಿಸುವದೆಂದರೆ ದೀನದಲಿತರ ಸೇವೆಯೆಂದು ಅವರು ತಿಳಿದಿದ್ದರು.

ಗಾಂಧೀಜಿಯವರು ಅತ್ಯಂತ ಸಾದಾ ಜೀವನವನ್ನು ಸಾಗಿಸಿದರು. ಪ್ರತಿಯೊಬ್ಬರಿಗೂ ಆಹಾರ, ಆಶ್ರಯ ಆಚ್ಛಾದನೆಗಳು ಸಿಗಲಿಕ್ಕೇಬೇಕು. ಆ ದಿಶೆಯಲ್ಲಿ ಎಲ್ಲರೂ ಒಂದಾಗಿ ಬಾಳಬೇಕು. ಎಂದು ಯೋಚಿಸಿ ಜೀವನ ಶಿಕ್ಷಣವೆಂಬ ಸಾಧನದಿಂದ ಇವೆಲ್ಲವನ್ನು ಎಲ್ಲರಿಗೆ ಒದಗಿಸಲು ಯೋಜಿಸಿದರು.

ಸತ್ಯ ಮಾತಾಡುವದು, ಸತ್ಯ ಶುದ್ಧವಾದ ಕಾಯಕ ಕೈಕೊಳ್ಳುವದು, ವಿಧಾಯಕ ಕಾರ್ಯಕ್ರಮಗಳನ್ನು ಏರ್ಪಡಿಸುವದು, ಸಾಮೂಹಿಕ ಭಾವನೆ ಬೆಳೆಯಿಸಿಕೊಳ್ಳುವದು, ಇವೇ ಮುಂತಾದ ಒಳ್ಳೆಯ ವಿಚಾರಗಳನ್ನು ಭಾರತಕ್ಕೆ ಹಾಗೂ ಇಡಿಯ ವಿಶ್ವಕ್ಕೆ ಇವರು

ಬೀರಿದರು. ಎಂದೂ ಅಳಿಸಲಾರದ ಸತ್ಯ ಕೀರ್ತಿಗಳಿಸಿ ಭಾರತದ ಬಾಪೂ ಆಗಿ ಬಾಹ್ಯ ಪ್ರಪಂಚವನ್ನು ಅಗಲಿದರು. ಅವರು ಪರಂಧಾಮುವನ್ನೈದಿದರೂ, ಅವರ ಈ ತತ್ವಗಳು ಚಿರಂತನವಾಗಿ ಉಳಿಯುವವು. ಬಾಪೂಜಿ ನಿಜವಾಗಿಯೂ ಮಾನವರೊಳು ದೇವಮಾನವನಾಗಿ ದೇವತ್ವವನ್ನೇ ಪಡೆದರು. ಬಾಪೂ ಮತ್ತೆ ಉದಯಿಸಿ ಬರಲಿ.

ಜಯ ಬಾಪೂ ! ಜಯ ಭಾರತ !!

ಸುಗ್ಗಿಯ ಸಂಪ್ರದಾಯಗಳು

ಡಾಕ್ಟರ ಬಿ. ಎಸ್. ಗದ್ದಗಿಮಠ, ಎಮ್.ಎ., ಪಿಎಚ್.ಡಿ.

(ಹಕ್ಕುಗಳನ್ನು ಕಾಯ್ದಿರಿಸಲಾಗಿದೆ.)

ಸಂಪ್ರದಾಯಗಳು ಎಲ್ಲ ಜನಾಂಗದಲ್ಲಿಯೂ ಕಂಡು ಬರುವುವು. ಜನರ ನಡೆನುಡಿಗಳ ವಿಶಿಷ್ಟ ರೀತಿಗಳನ್ನೂ ಪೌರಾಣಿಕ, ಧಾರ್ಮಿಕ, ಸಾಮಾಜಿಕ ಸಂಗತಿಗಳನ್ನೊಳಗಂಡು ಎಲ್ಲ ದೇಶಗಳಲ್ಲಿ ಸಂಪ್ರದಾಯಗಳಿರುವುವಲ್ಲದೆ ಜನಾಂಗದ ಸಂಸ್ಕೃತಿಯು ಅವುಗಳಲ್ಲಿ ತುಂಬ ಬಿಂಬಿತ-ವಾಗಿರುವುದು. ಸಂಪ್ರದಾಯವು (Tradition) ಸುಧಾರಣೆ (Reformation)ಯಲ್ಲ. ಅದೊಂದು ಜನರೂಢಿಯಲ್ಲಿರುವ ವಿಶಿಷ್ಟ ಆಚರಣೆ. ಅದು ಇಂದು ಹುಟ್ಟಿ ಇಂದೇ ಬೆಳೆದು ಜನಾಂಗದಲ್ಲಿ ಬಂದಿಲ್ಲ. ಅದಕ್ಕೆ ದೊಡ್ಡ ಪರಂಪರೆಯೂ ಉಂಟು. ಬುನಾದಿಯಿಂದಲೂ ಅದು ಜನಾಂಗದಲ್ಲಿ ಬಂದಿದೆ. ಅದರ ಮಹತ್ವವನ್ನರಿತು ಜನಾಂಗವು ಅದನ್ನು ಉಳಿಸಿಕೊಂಡು ಬಂದಿದೆ; ಆಚರಿಸುತ್ತ ಬಂದಿದೆ. ಅಂತೆಯೇ ಅದು ಹೇಗಿದ್ದರೂ ಅದನ್ನುಜನರು ಆಚರಿಸುತ್ತಾರೆ; ಅದರ ಸಂಬಂಧ ಅಭಿಮಾನ ತಾಳುತ್ತಾರೆ. ಸಂಪ್ರದಾಯದ ಬೇರುಗಳು ಜನಾಂಗದ ರಕ್ತರಕ್ತದಲ್ಲಿ ದೂರ ದೂರ ಹೋಗಿವೆ. ಒಮ್ಮೊಮ್ಮೆ ಜನರು ಧರ್ಮವನ್ನೂ ಮರೆಯಬಹುದು; ಆದರೆ ಪರಂಪರೆಯಿಂದ ಬಂದ ಸಂಪ್ರದಾಯವನ್ನು ಮರೆಯುವದು ಕಠಿಣವಾಗುತ್ತದೆ. ಹಲಕೆಲವು ಸಂಪ್ರದಾಯಗಳಿಗೆ ಪೌರಾಣಿಕ ಸಂದರ್ಭಗಳೂ ಬೇರೆ ಕೆಲವುಗಳಿಗೆ ಧಾರ್ಮಿಕಭಾವನೆಯೂ ಕೆಲವುಗಳಿಗೆ ಮಾತ್ರ ಐತಿಹಾಸಿಕ ಮಹತ್ವವೂ ಇನ್ನೂ ಕೆಲವುಗಳಿಗೆ ಸಾಮಾಜಿಕ ಅಸ್ತಿತ್ವವೂ ಉಳಿದ ಕೆಲವುಗಳಿಗೆ ಈ ಎಲ್ಲ ಸಂದರ್ಭಗಳಿದ್ದದ್ದು ನಿದರ್ಶನಕ್ಕೆ ಬರುವುದು.

ಒಕ್ಕಲು ನಾಡಾದ ಕರ್ನಾಟಕವು ಇದಾವುದಕ್ಕೂ ಹೊರತಾಗಿಲ್ಲ. ನಮ್ಮ ಜನಪದದಲ್ಲಿ ಅನೇಕ ಸಂಪ್ರದಾಯಗಳು ಕಂಡುಬರುವುವು. ಕನ್ನಡ ಸಂಸ್ಕೃತಿಯನ್ನೊಳಗೊಂಡ ನಮ್ಮ ನಾಡಿನ ಸಂಪ್ರದಾಯಗಳು ಇಂದು ನಮಗೆ ತಿಳಿಯದಿರುವುದು ನಮ್ಮ ಸಂಸ್ಕೃತಿಯ ಅವನತಿಯೇ ಸರಿ. ಕಳೆದ ಹನ್ನೆರಡು ವರುಷಗಳಿಂದ ಜನಪದ ಗೀತೆಗಳನ್ನು ಸಂಕಲನ ಮಾಡುತ್ತ ಅಲೆದಾಡುವಾಗ ಅನೇಕ ಸಂಪ್ರದಾಯಗಳು ಈ ಹಾಡುಗಳಲ್ಲಿ ಅಡಕವಾಗಿದ್ದುದು ನಿದರ್ಶನಕ್ಕೆ ಬಂದಿದೆ. ಸೂಕ್ಷ್ಮವಾಗಿ ಅವುಗಳನ್ನು ಪರಿಶೀಲಿಸಿ ನೋಡಲು ಅವುಗಳ ಗೂಢಾರ್ಥಗಳು ತಿಳಿಯುತ್ತಿದುವು. ಅವುಗಳನ್ನು ಬೆಳಕಿಗೆ ತರಬೇಕೆಂದು ಇಲ್ಲಿ ಪ್ರಯತ್ನ ಮಾಡಲಾಗಿದೆ.

ಸಂಪ್ರದಾಯಗಳಲ್ಲಿ ಎರಡು ದೊಡ್ಡ ಭಾಗಗಳನ್ನು ಮಾಡಬಹುದು. (೧) ಸುಗ್ಗಿಯ ಸಂಪ್ರದಾಯಗಳು. (೨) ಜನಪದ ಸಂಪ್ರದಾಯಗಳು. ಕನ್ನಡ ನಾಡಿನ ಒಕ್ಕಲುತನಕ್ಕೆ ಸಂಬಂಧಿಸಿದ ಎಲ್ಲ ಸಂಪ್ರದಾಯಗಳನ್ನು

ಒಂದೆಡೆಗೆ ಶೇಖರಿಸಿ "ಸುಗ್ಗಿಯ ಸಂಪ್ರದಾಯಗಳು" ಎಂದು ಕರೆಯಲಾಗಿದೆ. ಇವು ಹೆಚ್ಚಾಗಿ ಶಿವಶರಣರ ಹಂತಿಯ ಹಾಡುಗಳಲ್ಲಿ ಹುದುಗಿಕೊಂಡಿರುವುವು.

ಕಾಡು ಬೀಡಾಗಿ, ನಾಡಾಗಿ ಮಾನವನು ಮನೆ ಕಟ್ಟಿಕೊಂಡು ಇರಹತ್ತಿದ ಮೇಲೆ ಆಗಲೆ ಆವನಿಗೆ ಜನಾಂಗ (Race)ದ ಅರಿಕೆಯಾಗಿತ್ತು. ಕಾಡುಸ್ಥಿತಿಯು ಕಣ್ಮರೆಯಾಗಿ ಊರುವುದೊಕ್ಕವುದನ್ನರಿತು ಕೃಷಿ ಕರ್ಮವೇ ಮೂಲವೆಂದು ತಿಳಿದುಕೊಂಡ ಮಾನವನು ದಿನದಿನಕ್ಕೆ ಆವರ ಪ್ರಗತಿಯ ಹಾದಿಯನ್ನೇ ಕಾಯುತ್ತಿದ್ದ. ಕೊಲೆಗೆಲಸ ಕೈಕೊಂಡ ಮೇಲೆ ಆವನಿಗೆ ಹೊಸ ಹೊಸ ಯೋಜನೆಗಳು ಹೊಳೆಯಹತ್ತಿದುವು. ಒಕ್ಕಲುತನಕ್ಕೆ ಬೇಕಾಗುವ ಸಲಕರಣೆಗಳನ್ನೂ ಉಪಕರಣೆಗಳನ್ನೂ ತಯಾರಿಸಿ ಭೂಸಾಗುವಳಿಯನ್ನು ಮುಂದುವರಿಸಿ ಹೊಲದ ಹುಟ್ಟುವಳಿಯನ್ನು ಹೆಚ್ಚಿಸಿ ಜನಾಂಗದ ಜೀವನಕ್ಕೆ ಆವನು ಮೂಲ ಸಾಧನ ಮಾಡಿಕೊಂಡ. ಒಕ್ಕಲುತನವು ಮಾನವ ಜನಾಂಗಕ್ಕೆ ಮುಖ್ಯ ಉದ್ಯೋಗವಾಯಿತು.

ಆರ್ಯರು ಅಲೆದಾಡುತ್ತ ಏಶಿಯಾದ ಮಧ್ಯ ಪ್ರದೇಶದಿಂದ ಸರಿದು ದಕ್ಷಿಣಕ್ಕೆ ಭರತ ಖಂಡವನ್ನು ಸೇರಿದಾಗ ಅಲ್ಲಿಯ ಮೂಲ ನಿವಾಸಿಗಳಾದ ದ್ರಾವಿಡರು ಒಕ್ಕಲುತನವನ್ನು ತಮ್ಮ ಮುಖ್ಯ ಉದ್ಯೋಗವನ್ನಾಗಿ ಮಾಡಿಕೊಂಡು ಒಕ್ಕಲಾಗಿದ್ದರು. ದ್ರಾವಿಡರು ಆರ್ಯರ ಉಪಟಳಕ್ಕೆ ಬೇಸತ್ತು ಸಾಗುಮಾಡಿದ ಭೂಭಾಗವನ್ನು ಉದಾರ ಮನಸ್ಸಿನಿಂದ ಬಿಟ್ಟುಕೊಟ್ಟು ವಿಂಧ್ಯದ ಕೆಳಗೆ ಸರಿಯುತ್ತ ಹೊಲಮನೆ ಮಾಡಿಕೊಂಡು ದಂಡಕಾರಣ್ಯದ ತಪ್ಪಲದಲ್ಲಿ ಕಾಲೂರಿ ನಿಂತರು. ದ್ರಾವಿಡ ಭಾಷೆಗಳನ್ನಾಡುವ ಈಗಿನ ಈ ಭೂಪ್ರದೇಶವು ಫಲವತ್ತಾದ ಅನೇಕ ನದಿಗಳ ಕೊಳ್ಳವಾಗಿದೆ. ಮೊದಲಿನಿಂದಲೂ ಈ ಭಾಗದಲ್ಲಿ ಮೂಲ ಉದ್ಯೋಗವು ಒಕ್ಕಲುತನ. ಕೃಷಿಕರ್ಮಕ್ಕೆ ಸಂಬಂಧಿಸಿದ ಎಲ್ಲ ಪ್ರತ್ಯೇಕ ಶಬ್ದಗಳು ಎಲ್ಲ ದ್ರಾವಿಡ ಭಾಷೆಗಳಲ್ಲಿಯೂ ಕಂಡು ಬರುವುವು. ದ್ರಾವಿಡರು ತಮ್ಮ ಮನೆಗೆಲಸಗಳಿಗೆ ಆರ್ಯರ ಮೇಲೆ ಅವಲಂಬಿಸಿಲ್ಲ. ದ್ರಾವಿಡರ ಅನೇಕ ಕಸಬುಗಳನ್ನು ಆರ್ಯರು ಕಲಿತುಕೊಂಡರೆಂದೂ ಕೃಷಿಕರ್ಮವನ್ನು ದ್ರಾವಿಡರಿಂದಲೇ ಕಲಿತಿರಬಹುದೆಂದೂ 'ಮಹೆಂಜದಾರೊ', 'ಹರಪ್ಪ'ಗಳ ಸಂಶೋಧಕರು ನಿರ್ಧಾರಕ್ಕೆ ಬಂದಿದ್ದಾರೆ. ಕೃಷಿಕರ್ಮಕ್ಕೆ ಬೇಕಾಗುವ ಅನೇಕ ಪ್ರತ್ಯೇಕ ಶಬ್ದಗಳು ಕನ್ನಡದಲ್ಲಿ ಎಂದೋ ಬಳಸಲ್ಪಟ್ಟಿವೆ. ನೇಳಿ, ಕುಂಟೆ, ರಂಟೆ, ಕೂರಿಗೆ ಮೊದಲಾದ ಭೂಮಿಯನ್ನೂಳುವ ಸಲಕರಣೆಗಳೂ ಅವಕ್ಕೆ ಜೋಡಾಗಿ ಬೇಕಾಗುವ ಕುಡ, ಮುಂಜ, ತಾಳ ಮೊದಲಾದ ಲೋಹದ ಸಾಮಾನುಗಳೂ ಗುದ್ದಲಿ, ಸಲಿಕೆ ಮೊದಲಾದ ಅಗಿಯುವ ಹಾಗೂ ಕೊಯ್ತು, ಕುಡುಗೋಲುಗಳೇ ಮೊದಲಾದ ಕೊಯ್ಯುವ ಕೊರೆಯುವ ಉಪಕರಣಗಳೂ ಬೆಳಕಿಗೆ ಬಂದುವು. ಊಳುವ, ಬಿತ್ತುವ, ಅಗಿಯುವ, ಹಸಗೈಯುವ, ಕೊಯ್ಯುವ, ಕೊರೆಯುವ, ರಾಶಿ ಮಾಡುವ ಸಲಕರಣಗಳೇ ಬೇರೆ. ಇವೆಲ್ಲವುಗಳಿಗೂ ಎಲ್ಲ ದ್ರಾವಿಡ ಭಾಷೆಗಳಲ್ಲಿ ಪ್ರತ್ಯೇಕ ಅಚ್ಚ ಶಬ್ದಗಳಿವೆ.

ಒಕ್ಕಲಿಗನು ತನ್ನ ಬೇಸಾಯದಲ್ಲಿ ಕಾಲಮಾನಕ್ಕೆ ತಕ್ಕಂತೆ ಅನೇಕ ಸಂಪ್ರದಾಯಗಳನ್ನು ಆಚರಿಸುತ್ತ ಬಂದಿದ್ದಾನೆ. ವಿಶೇಷವಾಗಿ ಈ ಸಂಪ್ರದಾಯಗಳು ಕರ್ನಾಟಕದಲ್ಲಿ ಶತ ಶತಮಾನಗಳಲ್ಲಿ ಬದಲಾಗುತ್ತ ಬಂದು ಮುಂದೆ ಹನ್ನೆರಡನೆಯ ಶತಮಾನದಲ್ಲಿ ಶಿವಶರಣರ ಕಾಲಕ್ಕೆ ವಿಶಿಷ್ಟ ರೂಪಗಳನ್ನು ತಾಳಿ ಈಗಲೂ ಕರ್ನಾಟಕದ ಬಹು ಭಾಗಗಳಲ್ಲಿ ಬಳಕೆಯಲ್ಲಿದ್ದುದು ಕಂಡು ಬರುವುವು. ಹನ್ನೆರಡನೆಯ ಶತಮಾನವು ಎಲ್ಲ ಕ್ಷೇತ್ರಗಳಲ್ಲಿಯೂ ಕ್ರಾಂತಿಯ ಕಾಲ. ಇದು ತನ್ನ ಪ್ರಭಾವವನ್ನು ಕೃಷಿಕರ್ಮ ಕ್ಷೇತ್ರದಲ್ಲಿಯೂ ತೋರಿಸಿರುವುದು. ಹೊಸಮತವಾದ ಲಿಂಗಾಯತಮತವು ತನ್ನ ಭೇರಿಯನ್ನು ಸುತ್ತಲೂ ಹೊಡೆಯಹತ್ತಿತು. ದೇಶದೊಳಗಿನ ಅನೇಕ ಜನರು ಈ ಭೇರಿಯನ್ನು ಕೇಳಿ ಈ ಹೊಸ ಮತಕ್ಕೆ ಸೇರಿದರು. ಈ ಮತವು ಎಲ್ಲ ಕಸಬುಗಳಿಗೆ ಸ್ಥಾನಕೊಟ್ಟು ಶಿವಾಚಾರವನ್ನು ಬೀರಿದ ಮೂಲಕ ಮಾನವನು ತನ್ನ ಕಾಯಕ ಮಾಡಿ ಬಿಡುವೇಳೆಯಲ್ಲಿ ಸಮಾಜದಲ್ಲಿ ಸಮಾನಸ್ಕಂಧನಾಗಿ ಧಾರ್ಮಿಕ, ಆರ್ಥಿಕ, ಶಾರೀರಿಕ ಸಂಪತ್ತುಗಳನ್ನು ಗಳಿಸಿ, ಬೆಳಿಸಿ, ಊರ್ಜಿತ ಸ್ಥಿತಿಗೆ ಬಂದನು. ಈ ಸಮಾಜವು ಅಂದಿನಿಂದ ಉದ್ಯೋಗ ದೃಷ್ಟಿಯಿಂದ ಸ್ವಯಂಪೂರ್ಣವಾಯಿತು. ಆರ್ಥಿಕ ದೃಷ್ಟಿಯಿಂದ ಆಗಿನ ಕಾಲದಲ್ಲಿ ವ್ಯಾಪಾರಕ್ಕಿಂತಲೂ ಒಕ್ಕಲುತನವೇ ಮಿಗಿಲೆಂದು ಹೇಳಬಹುದು. ಆಗ ಮಾನವನ ಭೌಗೋಲಿಕ ಜ್ಞಾನವು ಅಷ್ಟೊಂದು

ಬೆಳೆದಿದ್ದಿಲ್ಲ. ವಿಜ್ಞಾನ ಶಾಸ್ತ್ರವು ಪ್ರಗತಿಯನ್ನು ಹೊಂದಿದ್ದಿಲ್ಲ. ಪ್ರವಾಸವು ಪ್ರಾಣಸಂಕಟವಾಗಿತ್ತು. ಜನರು ಒಕ್ಕಲುತನದಲ್ಲಿಯೇ ಅಭಿರುಚಿಯುಳ್ಳವರಾಗಿದ್ದರು.

ಒಕ್ಕಲುತನದಲ್ಲಿ ಮೂರು ಕ್ರಮ ಭಾಗಗಳನ್ನು ಕಾಣಬಹುದು. ೧ ಊಳುವುದು. ೨ ಬಿತ್ತುವುದು. ೩ ಒಕ್ಕುವುದು. ಈ ಮೂರರಲ್ಲಿಯೂ ಒಕ್ಕಲಿಗನು ಕೆಲವು ವಿಶಿಷ್ಟ ಸಂಪ್ರದಾಯಗಳನ್ನು ನೇಮ ನಿತ್ಯದಿಂದ ಪಾಲಿಸುವುದು ಕಂಡು ಬರುವುದು. ಇವುಗಳಲ್ಲಿ ಸುಗ್ಗಿಯ ಕಾಲದ ಸಂಪ್ರದಾಯಗಳು ಸಂಶೋಧಕರ ಮನಸ್ಸನ್ನು ಸೆಳೆಯದೆ ಬಿಡವು. ಅವುಗಳನ್ನು ನೋಡಿ ಮನಸ್ಸು ಚಕಿತವಾಗಿ ಸಂಶೋಧನೆಗೆ ಧುಮುಕುವುದು. ಅವುಗಳನ್ನರಿಯಬೇಕಾದರೆ ಅಗತ್ಯವಾದ ಸಹಾಯ ಸಂಪತ್ತು ಜಾನಪದ ಸಾಹಿತ್ಯ. ಇದು ನಿತ್ಯ ಜೀವನದ ವಾಸ್ತವ ಚಿತ್ರ ಅಲ್ಲದೆ ಸರಳ ಸ್ವಭಾವದ ಹಳ್ಳಿಗರ ಹೃದಯದಿಂದ ಉಕ್ಕಿಬಂದುದು; ಬಹುತರವಾಗಿ ನಂಬಲರ್ಹವಾದುದು.

ಮೇಲೆ ಕಾಣಿಸಿದ ಮೂರೂ ಸಮಯಗಳಲ್ಲಿ ದಣಿವನ್ನಾರಿಸಿಕೊಳ್ಳಲಿಕ್ಕಾಗಲಿ, ಮನೋಲಹರಿಗಾಗಲಿ ಒಕ್ಕಲಿಗನು ಅನೇಕ ಹಾಡುಗಳನ್ನು ಹಾಡುವುದು ಕೇಳಬಹುದು. ಇವುಗಳನ್ನು ಕೂಲಂಕಷವಾಗಿ ಅಭ್ಯಸಿಸಿ ನೋಡಲು ಈ ಸಂಪ್ರದಾಯಗಳು ಹಾಡುಗಳಲ್ಲಿ ಬೆಡಗಿನ ರೂಪದಿಂದ ಸೂಕ್ಷ್ಮವಾಗಿ ಹೇಳಲ್ಪಟ್ಟಿರುವುವು. ಬಸವಾದಿ ಪ್ರಮಥರು ಹೊಸಮತವನ್ನು ಹಬ್ಬಿಸಿದರು. ಕಾಯಕವೇ ಕೈಲಾಸವಾದ ಈ ಮತದಲ್ಲಿ ಭಿಕ್ಷೆಗೆ ಸ್ಥಾನವಿಲ್ಲ. ಎಲ್ಲರೂ ಕಾಯಕಮಾಡಿ ನೀತಿವಂತರಾಗಿ ಬಾಳುತ್ತಿದ್ದರು. ಈ ಮತದ ಘೋಷಣೆಗೂ ಪೋಷಣೆಗೂ ಎಲ್ಲ ಕಸಬುಗಾರರು ಆ ಧರ್ಮವನ್ನು ಸ್ವೀಕರಿಸಿ ತಮ್ಮ ಕಾಯಕ ಮುಖಾಂತರ ನೆರವಾಗುತ್ತಿದ್ದರು. ಅವರಲ್ಲಿ ಒಕ್ಕಲಿಗನು ಮಾತ್ರ ಎಲ್ಲರ ಸ್ತುತಿಗೆ ಪಾತ್ರನಾಗಿದ್ದಾನೆ. ಪ್ರಮಥರಲ್ಲಿ ಅನೇಕರು ಒಕ್ಕಲಿಗರಿದ್ದಾರೆ. ಇಳಿಹಾಳ ಬೊಮ್ಮಯ್ಯ, ಒಕ್ಕಲು ಮುದ್ದಯ್ಯ, ಏಲೇಶ ಕೇತಯ್ಯ, ಮಾರಗೌಡ ಮೊದಲಾದ ಶಿವಶರಣರು ಹೊಲಗೆಲಸವು ತಮ್ಮ ಕಾಯಕವೆಂದು ಮಾಡಿ ಅದರಲ್ಲಿಯೇ ಕೈಲಾಸ ಹೊಂದಿದ್ದಾರೆ.

ಹಗಲಿರುಳು ಹೊಲದಲ್ಲಿ ದುಡಿಯುವ ಒಕ್ಕಲಿಗನಿಗೆ ಶಿವಕೂಟ, ಶಿವಗೋಷ್ಠಿಗೆ ಬರಲು ಬಿಡುವು ದೊರೆಯದು. ಅವನು ಶಿವಾನುಭವವನ್ನು ತನ್ನ ಕಾಯಕದಲ್ಲಿಯೇ ಅರಿತು ಮನಗಾಣಬೇಕು. ಕಾರಣ ಶಿವಶರಣರಾದ ಈ ಒಕ್ಕಲಿಗರು ಕೃಷಿಕರ್ಮದ ಅನೇಕ ಪ್ರಸಂಗಗಳಲ್ಲಿ ವಿಶಿಷ್ಟವಾದ ಹಲಕೆಲವು ಸಂಪ್ರದಾಯಗಳನ್ನು ಹಾಕಿಕೊಂಡು ಅವುಗಳನ್ನು ತಮ್ಮ ನಡೆನುಡಿಗಳಲ್ಲಿ ಬಳಕೆಗೆ ತಂದರು. ಈ ಒಕ್ಕಲಿಗರಿಗೆ ಹೊಲಗೆಲಸವೇ ಕಾಯಕವು; ಸುಗ್ಗಿಯೇ ದಾಸೋಹ; ರಾಶಿಯ ದಿನವೇ ಕೊನೆಯ ಆರಾಧನೆಯ ದಿನ. ಆ ದಿನ ರಾತ್ರಿಯಲ್ಲಿಯೇ ಒಕ್ಕಲಿಗನು ತನ್ನ ಬೇಸಾಯದ ಸಲಕರಣೆಗಳನ್ನು ಕುರಿತು ಶಿವಗೋಷ್ಠಿಯನ್ನು ಹಾಡಿ ಶಿವಾನುಭವವನ್ನು ತಿಳಿಯಲು ಪ್ರಯತ್ನಿಸುವುದು ಕಂಡುಬರುವುದು. ಈ ಎಲ್ಲ ಪ್ರಸಂಗಗಳಲ್ಲಿ ಅವನು ಶಿವಾನುಭವ ಗೋಷ್ಠಿಯಿಂದ ಕೆಲವು ಸಂಪ್ರದಾಯಗಳನ್ನೆತ್ತಿಕೊಂಡು ಅವಕ್ಕೆ ತನ್ನ ಕಾರ್ಯದಲ್ಲಿ ಪಾವನತೆಯನ್ನಂಟಿಸಿ ಆಚರಿಸುತ್ತ ಬಂದನು. ಇವುಗಳಲ್ಲಿ ಸುಗ್ಗಿಯ ಸಂಪ್ರದಾಯಗಳು ಅತಿ ಮಹತ್ವದವಾಗಿವೆ.

ಸುಗ್ಗಿಯ ಸಾಹಿತ್ಯಗಳು:—

೧ ಕಣವ ಮಾಡುವುದು. ೨ ಮೇಟಿಯ ನಾಟುವುದು ೩ ತೆನೆಯ ಕೊಯ್ಲಿ ಹಂತಿಯ ಕಟ್ಟುವುದು. ೪ ಮೆದ, ಕಂಕಿಗಳನ್ನು ವಿಂಗಡಿಸುವುದು. ೫ ತೂರಿ ರಾಶಿಯ ಮಾಡುವುದು. ೬. ಮೇಟಿಯ ಗಾಳಿ. ಬುದ್ಧಿವಂತಲಿಂಗ (ಬೂದ)ನ ರಾಶಿ. ೭. ಕರಿಬಂಟ ಬಿಳಿಬಂಟ. ೮. ಗೋಪಾಳ. ದಾನಧರ್ಮ ಮಾಡುವುದು. ಈ ಎಲ್ಲವುಗಳಲ್ಲಿ ಒಕ್ಕಲಿಗನು ಕೆಲವೊಂದು ಸಂಪ್ರದಾಯಗಳನ್ನು ಪಾಲಿಸುತ್ತಾನೆ. ಆದರೆ ನಮ್ಮ ದುರ್ದೈವದ ಮೂಲಕ ಅವುಗಳ ಅರ್ಥವನ್ನು ಅವನು ಇಂದು ಬಿಡಿಸಿ ಹೇಳಲಾರ. ಜ್ಞಾನದ ತಿಳಿ ಬೆಳಕನ್ನರಿಯದ ಅವನು ಇದನ್ನರಿಯ. ಹೆಚ್ಚಿಗೆ ಕೇಳಹೋದರೆ ತಮ್ಮ ಹಿರಿಯರು ಆಚರಿಸುತ್ತ ಬಂದಕಾರಣ ತಾನೂ ಅವುಗಳನ್ನು ಪಾಲಿಸುವೆನೆಂದು ಹೇಳಿಬಿಡುವನು. ಶಿವಶರಣರ ಕಾಲದನಂತರ ಒಕ್ಕಲಿಗನ ಜೀವನವು ಪರತಂತ್ರವಾಗಿ ದಾಸ್ಯದಲ್ಲಿ ಉಳಿಯಿತು. ಜ್ಞಾನಭಾಂಡಾರವು ಅವನಿಗೆ ದೂರದಲ್ಲಿ ಕಾಣುವ ಕ್ಷಿತಿಜವೇ ಆಯಿತು. ಸರಳ ಸ್ವಭಾವಿಯಾಗಿ ಅವನು ತನ್ನ ಕಾಯಕ ಮಾಡುತ್ತ ಬಂದ. ವ್ಯವಹಾರದ ಅನು

ಭವವು ಅವನಿಗೆ ದೂರಾಯಿತು. ಆದುದರಿಂದ ಪ್ರಪಂಚದಲ್ಲಿ ಅವನು ಇಂದಿಗೂ ಬಲು ತೊಳಲಬೇಕಾಗಿದೆ.

ಒಕ್ಕಲಿಗನು ಶುಭದಿನದಲ್ಲಿ ಕಣಕೆತ್ತಿ ನೀರ್ಗೊಡೆದು * 'ಕರೆಗಣ' ಕಟ್ಟಿ ಮೇಟಿಯ ನಾಟಲು ಕುಣಿಯನ್ನು ತೆಗೆಯುತ್ತಾನೆ. ಆ ಕುಣಿಯ ಹಸಿಮಣ್ಣನ್ನೊಯ್ದು ಹೊಲದ ಸಮೀಪದ ಹಾದಿಯ ಮೇಲೆ ಹಾಕುವ ಸಂಪ್ರದಾಯವು ಈಗಲೂ ಕಣ್ಣಿಗೆ ಬೀಳುವುದು. ಸಂಪ್ರದಾಯಗಳ ಗೂಢಾರ್ಥಗಳು ಈಗ ಮರೆತು ಹೋಗಿವೆ. ಆದರೆ ಅವು ಬಳಕೆಯಲ್ಲಿ ಉಳಿದು ಬಂದಿರುವುದೇ ಕನ್ನಡಿಗರ ಸುದೈವವೆಂದು ಹೇಳಬೇಕಾಗಿದೆ ಈ ಸಂಪ್ರದಾಯಗಳನ್ನು ಬಿಚ್ಚಿ ಹೇಳುವ ಪಂಡಿತರಾಗಲಿ, ಅನುಭಾವಿಗಳಾಗಲಿ ಇಲ್ಲದ ಮೂಲಕ ಅವು ತೀವ್ರ ಕಣ್ಮರೆಯಾಗ ಹತ್ತಿವೆ. ಇವುಗಳನ್ನು ಆಳವಾದ ಅಭ್ಯಾಸದಿಂದ ಪರಿಶೀಲಿಸಿ ನೋಡಿದರೆ ಇವುಗಳಲ್ಲಿ ಹುದುಗಿದ ಗೂಢಾರ್ಥವು ತಿಳಿದು ಬರುವುದು. ಕಣದ ಮೇಟಿಯ ಕುಣಿಯ ಐದು ಬೊಗಸೆ ಹಸಿ ಮಣ್ಣನ್ನು ಹಾದಿಗೆ ಹಾಕುವುದೆಂದರೆ ಹಾದಿಗೆ ಔತನ ಕೊಟ್ಟಂತೆ. ಸುಗ್ಗಿಯು (ದಾಸೋಹ) ನಡೆದಿದೆ. ರಾಶಿಯ ಆರಾಧನೆಯ ಕೊನೆಯ ದಿನಗಳು ಸುರುವಾದುವು. ಜೋಗಿ, ಜಂಗಮ, ದಾಸ, ಬಡವರು, ಪರದೇಶಿಗಳು, ಭಿಕ್ಷುಕರು ಮೊದಲಾದವರು ಒಕ್ಕಲಿಗನ ಕಣಕ್ಕೆ ಬಂದು ಅವನು ಕೊಡುವ ದಾನವನ್ನು ಒಯ್ಯಬೇಕೆಂದು ಹಾದಿಗೆ ಹಾಕಿದ ಈ ಹಸಿ ಮಣ್ಣು ಸೂಚಿಸುತ್ತದೆ. ಆ ಹಸಿ ಮಣ್ಣು ಗುರುತಿಸಿ ಮೇಲೆ ಸೂಚಿಸಿದ ಎಲ್ಲ ಜನರೂ ಸುಗ್ಗಿಯ ಕಣಕೆ ಭಿಕ್ಷೆಗೆಂದು ಹೋಗುವುದನ್ನು ಬೆಳುವಲದ ಎಲ್ಲ ಹಳ್ಳಿಗಳಲ್ಲಿಯೂ ಪ್ರತ್ಯಕ್ಷ ಕಾಣಬಹುದು. ಸಮಾಜದಲ್ಲಿ ಒಕ್ಕಲಿಗನು ತನ್ನ ಗಳಿಕೆಯನ್ನು ಹೇಗೆ ಬಳಸುತ್ತಿದ್ದನೆಂಬುದು 'ಇಳಿಹಾಳ ಬೊಮ್ಮಯ್ಯ'ನ ಹಂತಿಯ ಹಾಡಿನಲ್ಲಿ ಬಂದಿದೆ.

ಇಳಿಹಾಳ ಬೊಮ್ಮಯ್ಯ ಹೊಲಗೆಲಸ ಕಾಯಕವ
ನಲುಮೆಯಲಿ ಸುಗ್ಗಿ ದಾಸೋಹ। ಹರ ಸೇವೆ
ಸಲಿಸಿ ಲಿಂಗದೊಳು ಬಯಲಾದ ॥ ೧ ॥

ಒಕ್ಕಲಿಗನಿಗೆ ಹೊಲಗೆಲಸವೇ ಕಾಯಕ; ಸುಗ್ಗಿಯೇ ದಾಸೋಹ, ಹರಸೇವೆ. ಹಂಗಿಲ್ಲದ ಉದ್ಯೋಗವೆಂದರೆ ಒಕ್ಕಲುತನ. ನಿಸರ್ಗವು ದಯಮಾಡಿದರೆ ಸಾಕು. ಒಕ್ಕಲಿಗನ ಹನ್ನೆರಡು ತಿಂಗಳ ಕಾಯಕ ದಾಸೋಹವೇ ದಾಸೋಹ. ಅವನು ಸದಾ ಕೊಡುಗೈಯು.

ಮೂತಾಳ ಕೂರಿಗೆಗೆ, ಯಾತರದು ಹಂಗಿಲ್ಲ.
ಭೂತಾಯಿ ಬೆಳೆಯೆ ಒಕ್ಕಲಿಗ। ಜಗದೊಳಗೆ
ಕೋತುಳ್ಳ ಮೇಳಿ ಬಲಗೊಂಡ ॥ ೨ ॥

ಕಡೆಯ ಬಲಕಿನ ತಾಳ, ಎಡೆಯಾಯ್ತು ಅರಸನಿಗೆ
ಎಡಗಡೆಯ ತಾಳ ಪಶುಪಕ್ಷಿ। ಜೀವನಕೆ
ನಡುವಿನಾ ತಾಳ ರೈತನಿಗೆ ॥ ೩ ॥

ಒಂದು ತಾಳದ ಬೆಳೆಯ, ಬಂದವರಿಗಿಲ್ಲೆನ್ನ
ಮುಂದು ಕೊಡಗೈಯು ಒಕ್ಕಲಿಗ। ನಾಡೊಳಗೆ
ಹೊಂದಿ ದಾಸೋಹ ಶಿವಮತಕೆ ॥ ೪ ॥ ಇ.ಬೊ.

ಹೀಗೆ ಒಕ್ಕಲಿಗನ ಗಳಿಕೆಯು ಎಲ್ಲರಿಗೂ ಹಂಚಿ ಹೋಗುವುದು. ಅವನು ಜಿಪುಣನಾದರೆ ಜೀವರಾಶಿಯು ಬದುಕುವ ಬಗೆ ಹೇಗೆ?

"ಕಣವೇ ಕಲ್ಯಾಣ ಮಂಟಪವಯ್ಯ! ಪರವುಚಿತ್ಕಳೆ, ಪ್ರಭುವೇ ಬುದ್ಧಿವಂತಲಿಂಗ ಬೂದಯ್ಯನಯ್ಯ. ಮೇಟಿಯೇ ಚೆನ್ನಬಸವಣ್ಣ. ಹಂತಿಗಣ್ಣೆಯೇ ಮಾದರ ಚೆನ್ನಣ್ಣ. ಒಕ್ಕಲಿಗನೇ ದಾಸೋಹಿ ಬಸವಣ್ಣ. ಕಣದ ಬಂಟರೇ ನೂರೊಂದು ಶಿವಶರಣರು. ತೂರುವ ಮೆಟ್ಟೇ ತ್ರಿವಿಧ ಲಿಂಗ. ತೂರಿದ ರಾಶಿಯೇ ವಚನ ರಾಶಿ. ದೋಹರ ಕಕ್ಕಯ್ಯನೇ ಸೆಳ್ಳಾದ. ಎಂಟು ಕಟ್ಟಿನಿಕ್ಕಲಿಯನ್ನೊಳಗೊಂಡ ರಾಶಿಯು ಕಣವೇ ಅಷ್ಟಾವರಣಬದ್ಧ ವಿಶ್ವಧರ್ಮ. ಸಕಲವ ತೂಗಿನೋಡೆಂದ ಒಕ್ಕಲು ಮುದ್ದು ಸಾವಳಿ ಶಿವಲಿಂಗೇಶ್ವರ."

"ಮುದ್ದು ಕಾಯಕವೇ ಒಕ್ಕಲುತನವಯ್ಯ. ಸುಗ್ಗಿಯೇ ದಾಸೋಹದ ಆರಾಧನೆಯ ದಿನಗಳಯ್ಯ. ಎಂಬಲಿ, ಅಂಬಲಿ, ಶಿವದಾನದ ತೆರನೋಡಾ! ಒಕ್ಕಲಗಿತ್ತಿಯ ಕಡಗೋಲು ಒಕ್ಕಲಿಗನ ಕುಡುಗೋಲು ಒಂದಕ್ಕೊಂದು ಹಿತಮಿತವಯ್ಯ. ಒಕ್ಕಲು ಮುದ್ದು ಸಾವಳಿ ಶಿವಲಿಂಗೇಶ್ವರ" ಎಂಬಿವೇ ಮೊದಲಾದ 'ಒಕ್ಕಲು ಮುದ್ದು ಸಾವಳಿ ಶಿವಲಿಂಗೇಶ್ವರ'ನ ಅನೇಕ ವಚನಗಳನ್ನು ಒಕ್ಕ

---

* 'ಕರೆಗಣ'ವು ಬರೆಗಣವು ಎಂಬರ್ಥ. ಕಣವನ್ನು ಮಾಡುವಾಗ ನೀರುಗ್ಗಿ ಊಜೊಗೆದು ಮೇಟಿಯಿಲ್ಲದ ನೆಲವನ್ನು ತುಳಿಸುವುದಕ್ಕೆ ಬೆಳುವಲದಲ್ಲಿ 'ಕರೆಗಣ'ವೆಂದು ಕರೆಯುವರು.

ಲಿಗರಾದ ನನ್ನ ತೀರ್ಥರೂಪರು ಆಗಾಗ ಹೇಳುತ್ತಿದ್ದರು. ಒಕ್ಕಲಿಗನಿಗೆ ಸುಗ್ಗಿಯ ಕಣವೇ ಮಂಟಪವು, ಮೇಟಿಯೇ ಚೆನ್ನಬಸವೇಶ. ಆರಾಧನೆಯ ಮಾಡುವ ಹೊಣೆಗಾರ ರೈತನೇ ದಾಸೋಹಿ ಬಸವಣ್ಣ. ಇದಕ್ಕೆ ಗಣಿಯಾದ ಶೂನ್ಯಪೀಠಾಧಿಕಾರಿ ಗುರು ಪ್ರಭುದೇವರೇ ಕಣದೊಳಗಿನ ಬುದ್ಧಿವಂತಲಿಂಗ, ಬೂದ.

ಕಣವೆ ಮಂಟಪವಾತೊ ಗುಣವಂತ ಬಸವೇಶ
ಹೊಣೆಗಾರ ರೈತ ದಂಡೇಶ। ಕಣಮೇಟಿ
ಗಣಿ ಗುರುವು ಕಣಕೆ ಪ್ರಭುಲಿಂಗೊ॥

ಮೂರು ಕಾಲಿನ 'ಮೆಟ್ಟು' ತ್ರಿವಿಧ ಲಿಂಗಗಳು. ತೂರುವ ಜೀವ ಚಿತ್ಕಳೆ. ತೂರಿದ ರಾಶಿ ವಚನ ರಾಶಿ.

ಮೂರು ಕಾಲಿನ ಮೆಟ್ಟು ಮೂರು ಲಿಂಗಗಳೇನೊ
ತೂರುವ ಜೀವಿ ಚಿತ್ಕಳೆಯು। ವಚನಗಳು
ತೂರಿದಾ ರಾಶಿ ಶಿವಮತಕೆ॥ ಜಾ. ಸಂ.

ಮಹಾಶಿವಶರಣ "ಡೋಹರ ಕಕ್ಕಯ್ಯ"ನೇ ಈ ವಚನ ರಾಶಿಗೆ ಸೆಳ್ವಾದ. ವಚನಗಳೇ ಚೊಕ್ಕ ಮುತ್ತಿನ ರಾಶಿ. ಎಂಟುಕಟ್ಟಿನ ಇಕ್ಕಲಿಯೇ ಅಷ್ಟಾವರಣ ಬದ್ಧವಾದ ಲಿಂಗಾಯತ ಮತ. ಇದರಿಂದ ಹುಲುಸಾಗಿ ಉಕ್ಕಿದ ವಚನ ರಾಶಿಯೇ ವಚನ ಶಾಸ್ತ್ರವು.

ಕಕ್ಕಯ್ಯ ಸೆಳ್ವಾಗಿ, ಚೊಕ್ಕ ಮುತ್ತಿನ ರಾಶಿ
ಇಕ್ಕಲಿಯು ಎಂಟು ಕಟ್ಟುಗಳು। ಹುಲುಸಾಗಿ
ಉಕ್ಕಿದವು ರಾಶಿ ವಚನಗಳು॥
ಹಂತಿಗಣ್ಣೆಯು ಚೆನ್ನ ಚಿಂತೆ ಇಲ್ಲದ ರಾಶಿ
ಬಂತು ಮಹಮನೆಗೆ ಬಸವಣ್ಣ। ಉಣಿಸಿದನು
ನಿಂತು ಶಿವಮತವ ಅಂಬಲಿಯ॥

ಈ ಮಹಾಮನೆಯು ಬಸವಣ್ಣನವರ ಪ್ರಸಾದನಿಲಯವೇ ಇರಬೇಕು. ಈ ಪ್ರಕಾರ ಅನೇಕ ಹಂತಿಯ ಪದ್ಯಗಳನ್ನು ಹಂತಿಯ ಹಾಡುಗಬ್ಬಗಳಲ್ಲಿ ಕಾಣಬಹುದು.

ತೂರುವ ಮೆದಕ್ಕೆ 'ಬಿಳಿಬಂಟ'ನನ್ನೂ ರಾಶಿಗೆ 'ಕರಿಬಂಟ' ಅಥವಾ 'ಬಿಳಿಬಂಟ'ನನ್ನೂ ಕಟ್ಟುವ ಸಂಪ್ರದಾಯವು ಸುಗ್ಗಿಯ ಕಣದಲ್ಲಿ ಉಂಟು. ಈ ಕರಿ ಬಂಟ ಬಿಳಿಬಂಟರು ಯಾರು? ಎಂಬುದನ್ನು ವಿಚಾರ ಮಾಡಬೇಕಾಗಿದೆ. ಒಕ್ಕಲಿಗನು ತನ್ನ ಹಂತಿಯ ಹಾಡುಗಳಲ್ಲಿ ಎಲ್ಲ ಶರಣರಿಗೆ ಶಿವಮೆಚ್ಚಿದ ಬಂಟರೆಂದು ಕರೆದಿದ್ದಾನೆ. ಶಿವಶರಣರಿಗೆ ಬಂಟರೆಂದು ಕರೆಯುವ ವಾಡಿಕೆಯು ಬಸವಾದಿ ಪ್ರಮಥರ ಕಾಲದಿಂದಲೂ ಬಳಕೆಯಲ್ಲಿ ಬಂದಂತೆ ಕಾಣುತ್ತದೆ. ಬಸವೇಶ್ವರನು ತನ್ನ ಒಂದು ವಚನದಲ್ಲಿ ತಾನು *'ಚೆನ್ನ ಚಾರಮನಬಂಟ' ಎಂದರೆ ಸೇವಕನೆಂದು ಹೇಳಿಕೊಂಡಿದ್ದಾನೆ. ಒಕ್ಕಲಿಗನೂ ಇದೇ ಅರ್ಥದಲ್ಲಿಯೇ ಬಂಟ ಈ ಶಬ್ದವನ್ನು ಉಪಯೋಗಿಸಿದ್ದಾನೆ. ಅನುಭವ ಮಂಟಪವೆಂದು ಕರೆಯಲ್ಪಡುವ ಸುಗ್ಗಿಯ ಕಣದೊಳಗೆ ಒಕ್ಕಲಿಗನು ನೂರೊಂದು ಸ್ಥಳಗಳಿಗೆ ನೂರೊಂದು ಶರಣರನ್ನು ಪ್ರತ್ಯೇಕವಾಗಿ ತೋರಿಸಲಾಗದೆ ಮುಖ್ಯವಾಗಿ ಅವರ (ಶರಣರ) ಪೈಕಿಯಿಂದ ಇಬ್ಬರು ಬಂಟ ಶರಣರನ್ನು ಆರಿಸಿಕೊಂಡು ಅವರಿಗೆ ತನ್ನ ಕಾಯಕದಲ್ಲಿ ವಿಶೇಷ ಮಹತ್ವದ ಸ್ಥಳಗಳನ್ನು ಕೊಟ್ಟಿದ್ದಾನೆ. ಕಣದ ರಾಶಿಯೇ ವಚನರಾಶಿಯು. ಅದನ್ನು ಕಾಯಲು "ಉಗ್ರವೀರ, 'ಬಂಟ' ವೀರಘಂಟೆಯ ಮಡಿವಾಳನಿಗೆ" ಒಕ್ಕಲಿಗನು 'ಕರಿಬಂಟ'ನೆಂದೂ ಪಾವನಭಕ್ತಿಯುಳ್ಳ ಮಹಾಶರಣ ಹರಳಯ್ಯನಿಗೆ 'ಬಿಳಿಬಂಟ'ನೆಂದೂ ಕರೆದಿರುವನು. ಕರಿಬಂಟನೆಂದರೆ ಈಗಿನ ಒಕ್ಕಲಿಗರಿಗೆ ಕಂಕಿಯ ಸುಟ್ಟ ಕರುಕಾಗಿದೆ; ಬಿಳಿಬಂಟನೆಂದರೆ ಕಣದ ದಂಡೆಯ ಮೇಲಿರುವ ಒಲೆಯಲ್ಲಿಯ ಬೂದಿಯಾಗಿದೆ. ಅವನು ಈಗ ಈ ಬಂಟರ ಮಹತ್ವವನ್ನರಿಯ? ಬಂಟರನ್ನು ರಾಶಿಗೆ ಕಟ್ಟುವದರಿಂದ 'ಸಂಕದೇವ'ನ ಬಲವಾಗಿ ರಾಶಿಯು ಹುಲುಸಾಗುವುದೆಂದು ಹೇಳುವನು.

ನೂರೊಂದು ಶರಣರು ನೂರೊಂದು ಬಂಟರು
ಸಾರಿ ಹೇಳ್ಯಾನೊ ಒಕ್ಕಲಿಗ। ಹೊಲಸುಗ್ಗಿ
ಧೀರಕಾಯಕದ ದಿನವೆಂದು॥
ಶರಣ ಮಡಿವಾಳಾದ ಕರಿಬಂಟ ಕಣದಾಗ
ಹರಳಾದ ಕಣಕೆ ಬಿಳಿಬಂಟ। ಪ್ರಭುಲಿಂಗ
ಗುರುಬುದ್ಧಿವಂತ ಲಿಂಗಾದ॥ ಜಾ. ಸಂ.

ಈ ಕಡೆಯ ಸಾಲು ಸಂಶೋಧಕರಿಗೆ ಸುಗ್ಗಿಯ ಕಣದಲ್ಲಿಯ ಇನ್ನೊಂದು ಸಂಪ್ರದಾಯವನ್ನು ಸೂಚಿಸುವುದು. ಅಲ್ಲಮಪ್ರಭುದೇವರೇ ಕಣದಲ್ಲಿ ಪೂಜೆಗೊಳ್ಳುವ 'ಬುದ್ಧಿವಂತ ಲಿಂಗ'. ಈಗ ಅದು 'ಬೂದ' ಎಂದು ಕಣದಲ್ಲಿ ಕರೆಯಲ್ಪಡುತ್ತದೆ.

(ಮುಂದುವರಿಯುವದು)

---

* ಹೊಸಪದ್ಧತಿಯ ಬಸವೇಶ್ವರನ ವಚನಗಳು ೨೮೭ನೆಯ ವಚನ ನೋಡಿರಿ.

ರಾಷ್ಟ್ರೀಯ ಶಿಕ್ಷಣ

ಕಾರ್ಯಕರ್ತರ ಹೊಣೆ

ಲೇಖಕರು : ಶ್ರೀ ವೀರೇಶ ಹಿರೇಮಠ. ಬಿ.ಎ.,ಬಿ.ಟಿ., ಬೆಳಗಾವ.

ರಾಷ್ಟ್ರೀಯ ಶಿಕ್ಷಣವು ಪ್ರಗತಿಶೀಲವಾಗಬೇಕಾದರೆ ಫಲದಾಯಕವಾಗಬೇಕಾದರೆ, ಕ್ರಾಂತಿಕಾರಕವಾಗಬೇಕಾದರೆ, ಸಾಮಾಜಿಕ ಜೀವನದ ಮಾರ್ಪಾಡಾಗಬೇಕಾದರೆ ಸ್ವತಂತ್ರ ಭಾರತವು ತೇಜೋಮಯ ಹಾಗೂ ಉಜ್ವಲಮಯವಾಗಬೇಕಾದರೆ, ರಾಷ್ಟ್ರೀಯ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಕಾರ್ಯಕರ್ತರು ಅಸಾಮಾನ್ಯರಾಗಿರಬೇಕಾದುದು ಅವಶ್ಯ. ಇಂತಹ ಕಾರ್ಯಕರ್ತರಲ್ಲಿ ಜ್ಞಾನಕ್ಕಿಂತ ಈ ಹೊಸ ಶಿಕ್ಷಣದ ಬಗ್ಗೆ ಅಪರಿಮಿತ ಶ್ರದ್ಧೆ, ಅಭಿಮಾನ, ಉತ್ಸಾಹ, ಭಕ್ತಿ ಮುಖ್ಯವಾಗಿ ಬೇಕು. ಕಲಿಸುವ ವಿಷಯ ಜ್ಞಾನ ಇಲ್ಲವೆ ವಿಧಾನಕ್ಕಿಂತಲೂ ಅವರಲ್ಲಿ ಕಾರ್ಯತತ್ಪರತೆ, ಕಾರ್ಯ ತಲ್ಲೀನತೆ, ಪ್ರಚಾರಕ ಶಕ್ತಿ, ಕಾರ್ಯಪ್ರೇರಕ ಶಕ್ತಿ ಮೊದಲಾದ ಸದ್ಗುಣಗಳು ಅತ್ಯವಶ್ಯ. ಶಿಕ್ಷಕರು ಉತ್ಸಾಹದ ಮೂರ್ತಿಗಳಾಗಬೇಕು. ಚೈತನ್ಯದ ಚಿಲುಮೆಗಳಾಗಬೇಕು. ಯಾವದೇ ರಾಷ್ಟ್ರದ ಯಾವದೇ ಶಿಕ್ಷಣ ಪದ್ಧತಿಯು ಹಾಳಾಗಲು ಮೂಲ ಕಾರಣವೆಂದರೆ ಆ ಶಿಕ್ಷಣ ಪದ್ಧತಿಯ ದೋಷಗಳಲ್ಲ. ಆ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವ ಕಾರ್ಯಕರ್ತರ ನಿರುತ್ಸಾಹ ಹಾಗೂ ಮೈಗಳ್ಳತನ. ಈ ನವೀನ ಶಿಕ್ಷಣ ಪದ್ಧತಿಯಲ್ಲಿ ಮೇಲುಕೀಳು ಎಂಬ ತಾರತಮ್ಯವಿಲ್ಲ. ಆಚಾರ್ಯ ಕೃಪಲಾನಿಯವರು ಶಿಕ್ಷಕರ ಬಗ್ಗೆ ಹೇಳುವಾಗ ಒಂದು ಉಜ್ವಲ ಮಾತನ್ನು ಹೇಳಿರುವರು. ಯಾವದೇ ಒಬ್ಬ ಶಿಕ್ಷಕ ತನ್ನ ಕಾರ್ಯವನ್ನು ಯೋಗ್ಯ ರೀತಿಯಲ್ಲಿ ಮಾಡುತ್ತಿದ್ದರೆ ಆತನ ಆರ್ಥಿಕ ಪರಿಸ್ಥಿತಿ ತೀರ ವಿಷಮವಾಗಿದ್ದರೂ ಸಾಮಾಜಿಕ ದೃಷ್ಟಿಯಲ್ಲಿ ಆತನು ಕಿಂಕರ ವ್ಯಕ್ತಿಯಾಗಿದ್ದರೂ ದಿನ ಬೆಳಗೂ ಸಾಲಗಾರರ ಕಾಟ ಅವನಿಗಿದ್ದರೂ ಸಾಂಸ್ಕೃತಿಕ ದೃಷ್ಟಿಯಿಂದ ಆತನು ಹಿಮಾಲಯದ ಉನ್ನತ ಶಿಖರದ ಮೇಲಿದ್ದಂತೆ. ಶಿಕ್ಷಕರು ಸಂಸಾರವನ್ನು ತ್ಯಜಿಸಿ, ವೈರಾಗಿಗಳ ಜೀವನ ಅನುಸರಿಸಬೇಕಂತಲ್ಲ. ಜೀವನದಲ್ಲಿ ಅವರಿಗೆ ಸುಖ-ಶಾಂತಿ-ಸಮಾಧಾನಗಳು ಬೇಡವಂತಲ್ಲ. ಕೇವಲ ವಾಯು ವಿಹಾರಿಯಾಗಿ ಆಯುಷ್ಯಮಣ ಮಾಡಬೇಕಂತಲ್ಲ. ಅವನಿಗೂ ಸಾಮಾನ್ಯ ಜೀವಿಯಂತೆ, ಹಸಿವೆನೀರಡಿಕೆಗಳುಂಟು, ಬೇಕು ಬೇಡಿಕೆಗಳು ಉಂಟು, ನೋವುನಲಿವುಗಳುಂಟು, ಐಶ್ವರ್ಯ-ಲಾಲಸೆಯುಂಟು. ಪ್ರತಿಯೊಬ್ಬ ಬಾಲಕನನ್ನು, ಉತ್ತಮ ನಾಗರಿಕನನ್ನಾಗಿ ಮಾಡುವದು ಅವನ ಆದ್ಯಕರ್ತವ್ಯ. ಪ್ರತಿಯೊಬ್ಬ ಶಿಕ್ಷಕನು ತನ್ನ ಜೀವಮಾನದಲ್ಲಿ ಸಾವಿರಾರು ರಾಜಕಾರಣ ಪಟುಗಳನ್ನು, ಪ್ರತಿಭಾವಂತ ಕವಿಗಳನ್ನು, ತೇಜಸ್ವಿಯಾದ ಯೋಗಿಗಳನ್ನು, ಉದ್ದಾಮ ವಾಗ್ಮಿಗಳನ್ನು, ಅನುಪಮವಾದ ಭೋಗಿಗಳನ್ನು, ಅಮರ ತ್ಯಾಗಿಗಳನ್ನು, ವೀರಮಾತೆಯರನ್ನು ನಿರ್ಮಾಣ ಮಾಡಬಲ್ಲನು. ಶಿಕ್ಷಕರು ಮನಸ್ಸು ಮಾಡಿದರೆ ಇಡೀ ಸಾಮಾಜಿಕ ತಳಹದಿಯನ್ನೇ ಪರಿವರ್ತಿಸಬಹುದು. ಭರತಖಂಡದ ಮೂಲೆ-ಮೂಲೆಗಳಲ್ಲಿದ್ದ ಚಾಪೆಯ-ಗುಡಿಸಲುಗಳಲ್ಲಿ ಕೂಡ ಶಿಕ್ಷಣ-ಭಾಸ್ಕರನ ಕಿರಣಗಳು ಪಸರಿಸಬೇಕಾಗಿವೆ. ಈ ಕಾರ್ಯವನ್ನು 'ಸಾಧನೆ' ಮಾಡುವದೇ ಕಾರ್ಯಕರ್ತರ ಹಾಸು-ಹೊಕ್ಕು. ಪ್ರತಿಯೊಬ್ಬ ಶಿಕ್ಷಕನು ಧರ್ಮ ಪ್ರಸಾರಕನಿದ್ದಂತೆ: ಭಾರತೀಯ ಸಂಸ್ಕೃತಿಯ ಕೈದೀಪಗಳಾಗಬೇಕು. ಶಿಕ್ಷಕರು ಸತ್ಯದ ಬೀಜಗಳನ್ನು ಬಿತ್ತಿ, ಅಮೃತ ಫಲಗಳನ್ನು ಹೊರಹೊಮ್ಮಿಸಬೇಕು. ಶಿಕ್ಷಕರು ಸತ್ಯೋಪಾಸಕರಾಗಬೇಕು. ಅಹಿಂಸಾವೃತ್ತಿಯನ್ನು ಕಾರ್ಯದಲ್ಲಿ ಒಡಮೂಡಿಸಬೇಕು. ಸ್ವಾರ್ಥವೂ ಹಿಂಸೆಯ ಕುರುಹು. ಸ್ವಾರ್ಥವನ್ನು ಹತ್ತಿಕ್ಕಬೇಕು. ವೃಥಾ ಮತಾಭಿಮಾನವನ್ನು ತ್ಯಜಿಸಬೇಕು. ಸಂಕುಚಿತ ರಾಷ್ಟ್ರೀಯ ವೃತ್ತಿಯನ್ನು ಬಿಟ್ಟುಕೊಡಬೇಕು. ಹರಿಜನೋದ್ಧಾರ ಕಾರ್ಯವನ್ನು ವಿಧಾಯಕ ರೀತಿಯಲ್ಲಿ ಕೈಕೊಳ್ಳಬೇಕು. ಪರಧರ್ಮ ಸಹಿಷ್ಣುತೆ ಪ್ರತಿಯೊಬ್ಬ ರಾಷ್ಟ್ರೀಯ ಶಿಕ್ಷಕನ ಉಸಿರಾಗಬೇಕು. ಪ್ರತಿಯೊಬ್ಬ ರಾಷ್ಟ್ರೀಯ ಶಿಕ್ಷಕನು ಹರಿಶ್ಚಂದ್ರನಂತೆ, ಸತ್ಯೋಪಾಸಕನೂ, ಅಲ್ಲಮ ಪ್ರಭುವಿನಂತೆ, ಜ್ಞಾನೋಪಾಸಕನೂ,

ಬಸವಣ್ಣನವರಂತೆ ಭಕ್ತಿ-ಭಾಂಡಾರಿಯೂ ವಿವೇಕಾನಂದರಂತೆ ವೀರ-ಪುತ್ರನೂ ವಾಯು-ಸುತನಂತೆ ಶಕ್ತಿದಾಯಕನೂ ಆಗಿ ಶಿಕ್ಷಣ ಕಲೋಪಾಸಕನಾಗಬೇಕು. ಅಂದೇ ನಮ್ಮ ನಾಡು ನಂದನ ವನವಾದೀತು. ಉಜ್ವಲವಾದೀತು.

ನಾಟಕ ಕಲೆಯ ಅಲ್ಪಾವಧಿ ತರಬೇತಿ ಕೇಂದ್ರ ಧಾರವಾಡ

ಲೇಖಕರು : ಗಂ. ನಾ. ಸಗರ, ಅ|| ಮಾಸ್ತರ, ಸರಕಾರಿ ಪ್ರ್ಯಾ. ಸ್ಕೂಲ T.C.M. ಧಾರವಾಡ.

ಇದೀಗ ನಾಟಕ ಕಲೆಯನ್ನು ಶಿಕ್ಷಣದ ಅಂಗವಾಗಿ ಮಕ್ಕಳಿಗೆ ಕಲಿಸುವದಕ್ಕೆ ಮಾಡಿದ ಯೋಜನೆಯ ಪ್ರಥಮ ಹೆಜ್ಜೆಯಲ್ಲಿ ಮುಂಬಯಿ ಸರಕಾರದಿಂದ ಮೂರು ಪ್ರಾದೇಶಿಕ ಕೇಂದ್ರಗಳು ತೆರೆಯಲ್ಪಟ್ಟವು. ಅವುಗಳಲ್ಲೊಂದು ತರಬೇತಿ ವರ್ಗವನ್ನು ಕರ್ನಾಟಕ ಪ್ರಾದೇಶಿಕ ಕೇಂದ್ರವಾದ ಧಾರವಾಡದೊಳಗೆ ಗಂ. ಮು. ಸರಕಾರಿ ಟ್ರೇ. ಕಾಲೇಜದಲ್ಲಿ ತೆರೆಯಲಾಗಿತ್ತು. ಈ ವರ್ಗಕ್ಕೆ ಕರ್ನಾಟಕ ಕಾಲೇಜದ ಪ್ರಿನ್ಸಿಪಾಲರಾದ ಶ್ರೀ ಗೋಕಾಕರವರನ್ನು ಸಲಹೆಗಾರರೆಂದೂ. ಧಾ. ಜಿ. ಶಿಕ್ಷಣಾಧಿಕಾರಿಗಳಾದ ಶ್ರೀ ತೇರಗಾಂವಕರರನ್ನು. ಮೇಲ್ವಿಚಾರಕರೆಂದೂ, ಟ್ರೇ. ಕಾಲೇಜದ ಪ್ರಿನ್ಸಿಪಾಲರಾದ ಶ್ರೀ ಪಾಟೀಲರನ್ನು ಸಂಚಾಲಕರೆಂದೂ ಮತ್ತು ನಾಟ್ಯಾಚಾರ್ಯ ಶ್ರೀ ಕುಲಕರ್ಣಿ ಶ್ರೀನಿವಾಸರಾಯರನ್ನು ವರ್ಗದ ಗುರುಗಳೆಂದೂ ನೇಮಿಸಲಾಗಿತ್ತು.

ನಾಟಕ ಕಲೆಯಲ್ಲಿ ತಜ್ಞರಾದ ಹೊಣೆಗಾರ ವ್ಯಕ್ತಿಗಳ ವೈಚಾರಿಕ ಸಲಹೆಪಡೆದು ಸಿದ್ಧಪಡಿಸಿದ ಅಭ್ಯಾಸ ಕ್ರಮವನ್ನು (Syllabus) ಬೋಧಿಸಲಾಯಿತು. ಈ ತರಬೇತಿಯ ಅವಧಿಯು ೧೫ ದಿವಸಗಳದಿದ್ದು ದಿನಾಂಕ ೧೮-೧೧-೫೫ರಿಂದು ಪ್ರಾರಂಭವಾಗಿ ೨-೧೨-೫೫ ರಂದು ಕೊನೆಗೊಂಡಿತು. ಮೊದಲನೇ ದಿನ ಕಾಲೇಜದ ಪ್ರಾರ್ಥನಾ ಮಂದಿರದಲ್ಲಿ ಶ್ರೀ ತೇರಗಾಂವಕರರಿಂದ ಪ್ರಾರಂಭೋತ್ಸವವು ನೆರವೇರಿತು. ಈ ವರ್ಗಕ್ಕೆ ಧಾರವಾಡ ಬೆಳಗಾವಿ ವಿಜಾಪೂರ ಕಾರವಾರ ಜಿಲ್ಹೆಗಳಿಂದ ಒಟ್ಟಿಗೆ ೨೫ ತರಬೇತುಗಾರರು (೨೩ ಶಿಕ್ಷಕರು ೨ ಶಿಕ್ಷಕಿಯರು) ಆರಿಸಲ್ಪಟ್ಟಿದ್ದರು. ವರ್ಗವು ಪ್ರತಿದಿವಸ ಮುಂಜಾನೆ ೮-೩೦ರಿಂದ ೧೧ರ ವರೆಗೆ ಮಧ್ಯಾಹ್ನ ೩ರಿಂದ ೫-೩೦ರ ವರೆಗೆ ನಡೆಯುತ್ತಿತ್ತು.

ಶ್ರೀ ಕುಲಕರ್ಣಿ ಶ್ರೀನಿವಾಸರಾಯರು ಪ್ರತಿನಿತ್ಯದಲ್ಲಿ ಭರತ ನಾಟ್ಯ ಶಾಸ್ತ್ರ, ಅಭಿನಯದರ್ಶನ, ಸಂಗೀತಗಳ ಅಭ್ಯಾಸವನ್ನು ಮಾಡಿಸಿದರಲ್ಲದೆ, ನಾಟಕಕಲೆಯ ಅಭ್ಯಾಸ ಕ್ರಮದ ವಿವಿಧ ಭಾಗಗಳ ಮೇಲೆ ಮಹತ್ವದ ಜ್ಞಾನವನ್ನು ಪಾಠಗಳ ಮುಖಾಂತರ ನೀಡಿದರು. ಇದಲ್ಲದೆ ನಾಟ್ಯಶ್ರೀ ಕಲಾ ಪ್ರವೀಣರೂ ಮತ್ತು ಅಭಿನಯ ಕಲಾಕುಶಲರೂ ಆದ ಅನೇಕ ವಿದ್ವನ್ಮಣಿಗಳು ಈ ವರ್ಗವನ್ನು ಸಂದರ್ಶಿಸಿ ಭಾಷಣಗಳನ್ನೂ, ಅಭಿನಯಗಳನ್ನೂ ನೀಡಿದರು.

ಈ ವರ್ಗದ ಸರ್ವಾಂಗೀಣ ಉನ್ನತಿಗಾಗಿ ಶ್ರೀ ಗೋಕಾಕರವರು ವಿಶೇಷ ಲಕ್ಷ್ಯವನ್ನು ಸೂಚಿಸಿದರಲ್ಲದೆ ಅಮೋಘವಾದ ತಮ್ಮ ಸಲಹೆಸೂಚನೆಗಳನ್ನೂ ನೀಡಿದರು. ಶ್ರೀ ತೇರಗಾಂವಕರರೂ ಶ್ರೀ ಪಾಟೀಲರೂ ಕಾಲಕಾಲಕ್ಕೆ ಸರ್ವಸಹಾಯಗಳನ್ನು ನೀಡಿ ಯೋಗ್ಯ ಮಾರ್ಗದರ್ಶನ ಮಾಡಿದ್ದರಿಂದ ಈ ವರ್ಗವು ಅತ್ಯಂತ ಯಶಸ್ವಿಯಾಯಿತೆಂದು ಹೇಳಲಿಕ್ಕೆ ತುಂಬಾ ಅಭಿಮಾನವೆನಿಸುತ್ತದೆ.

ಕೇವಲ ನಾಟಕ ಪುಸ್ತಕಗಳ, ನಾಟ್ಯ ಶಾಸ್ತ್ರ ಮತ್ತು ಪ್ರಬಂಧ ಪುಸ್ತಕಗಳ ತಾತ್ಪೂರ್ತಿಕವಾದ ಒಂದು ವಾಚನಾಲಯವನ್ನು ಈ ವರ್ಗಕ್ಕೆ ಸಂಚಾಲಕರಾದ ಶ್ರೀ ಪಾಟೀಲರು ಏರ್ಪಡಿಸಿಕೊಟ್ಟರಲ್ಲದೆ, ಶಿಕ್ಷಕರ ಊಟ ವಸತಿಗಳ ಸೌಕರ್ಯದ ಬಗೆಗೆ ಅತ್ಯಂತ ಕಳಕಳಿಯಿಂದ ವ್ಯವಸ್ಥೆಯನ್ನೂ ಮಾಡಿಸಿಕೊಟ್ಟರು. ೨೬-೧೨-೫೫ನೇ

ದಿನಸ ತಡಿ ವರ್ಗದವರು ಹುಬ್ಬಳ್ಳಿಯಲ್ಲಿ ಪ್ರದರ್ಶಿಸಿದ "ನನ್ನ ಕೋಣಾಲಿ" ಎಂಬ ನಾಟಕವನ್ನು ನೋಡಿ ಅಭಿನಯದ ಪ್ರಾಯೋಗಿಕ ನಿರೀಕ್ಷಣೆಯನ್ನೂ ವಿಮರ್ಶಾ ವಿಭಾಗವನ್ನೂ ಮುಗಿಸಿದರು.

ವರ್ಗದ ಮುಕ್ತಾಯ ಸಮಾರಂಭವು ಶ್ರೀ ದೀಕ್ಷಿತ B.A.LL.B. ಅವರ ಅಧ್ಯಕ್ಷತೆಯಲ್ಲಿ ೨-೧೨-೫೫ರಂದು ಸಂಜೆ ೬ ಗಂಟೆಗೆ ಜರುಗಿತು. ಅಧ್ಯಕ್ಷರ ಹಸ್ತದಿಂದ "ನಾಟಕ ಕಲೆ" ಎಂಬುವ ಸರ್ವಾಂಗ ಸುಂದರವಾದ ಹಸ್ತಲಿಖಿತ ಪತ್ರಿಕೆಯು ಉದ್ಘಾಟಿಸಲ್ಪಟ್ಟಿತು. ಅಧ್ಯಕ್ಷರ ಭಾಷಣದ ನಂತರ ತರಬೇತಿ ವರ್ಗದವರಿಂದ ಎನ್ಕೆವಿರಚಿತ "ಮಂದಿರ ಪ್ರವೇಶ" "ಬುಶ್‌ಕೋಟ" ಹಾಗೂ ವಿವಿಧ ಮನರಂಜನೆಯ ಕಾರ್ಯಕ್ರಮಗಳು ಪ್ರದರ್ಶಿಸಲ್ಪಟ್ಟವು.

ತರಬೇತಿ ವರ್ಗದವರು ತಮ್ಮ ವರ್ಗದ ಸ್ಮರಣಾರ್ಥವಾಗಿ ಸರಕಾರಿ ಟ್ರೇ. ಕಾಲೇಜದಲ್ಲಿ ಅತ್ಯುತ್ತಮ ರೀತಿಯಿಂದ ನಾಟಕ ಕಲೆಯನ್ನು ಪ್ರದರ್ಶಿಸಿದ ಶಿ. ವಿ. ಗಳ ವರ್ಗಕ್ಕೆ ಬಹುಮಾನವೀಯಬೇಕೆಂಬ ಉದ್ದೇಶದಿಂದ ಒಂದು ರೋಲಿಂಗ ಶೀಲ್ಡನ್ನು ಕಾಣಿಕೆಯಾಗಿ ಸ್ವಯಂ ಸ್ಫೂರ್ತಿಯಿಂದ ನೀಡಿದರು. ಇಂಥ ಮಹಾ ಯೋಜನೆಯ ಸುವರ್ಣ ಸಂಧಿಯನ್ನು ಕಲ್ಪಿಸಿಕೊಟ್ಟು ನಾಟಕ ಕಲೆಯ ಜ್ಞಾನವನ್ನು ಹೊಂದಲಿಕ್ಕೆ ಅನುವು ಮಾಡಿಕೊಟ್ಟ ಶ್ರೀ ತೇರಗಾಂವಕರರ ಹಾಗೂ ಶ್ರೀ ಪಾಟೀಲರ ಉಪಕಾರವನ್ನು ಕರ್ತವ್ಯ ಬುದ್ಧಿಯ ಪ್ರಾಂಜಲ ಮನಸ್ಸಿನಿಂದ ಸ್ಮರಿಸುವದರಲ್ಲಿ ಈ ವರ್ಗಕ್ಕೆ ಗೌರವ ಹೆಮ್ಮೆಯೆನಿಸುತ್ತಿದೆ.

ಪ್ರಕಟನೆ

ಈ ಸಲದ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಹಾಗೂ ಪ್ರಾಥಮಿಕ ಶಿಕ್ಷಕರ ಪ್ರಮಾಣ ಪತ್ರ ಪರೀಕ್ಷೆಗಳು ಕೆಳಗೆ ಕಾಣಿಸಿದ ದಿನಾಂಕಗಳಲ್ಲಿ ನಡೆಯುವವು.

ತಾತ್ವಿಕ (ಬರಹ) ಪರೀಕ್ಷೆ

೧.	ಗಂಡು ಮಕ್ಕಳ ಹಾಗೂ ಹೆಣ್ಣು ಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ, ೧೯೫೬.	ಸೋಮವಾರ, ದಿ. ೯-೪-೧೯೫೬ ರಿಂದ ಶನಿವಾರ, ದಿ. ೧೪-೪-೧೯೫೬ರ ವರೆಗೆ
೨.	ಪ್ರಾಥಮಿಕ ಶಿಕ್ಷಕರ ಪ್ರಮಾಣ ಪತ್ರ ಪರೀಕ್ಷೆ, ೧೯೫೬.	ದಿ. ೨೪-೪-೧೯೫೬ ರಿಂದ ೨೫-೪-೧೯೫೬ರ ವರೆಗೆ (ಎರಡೂ ದಿನಗಳನ್ನೊಳಗೊಂಡು)

ಜೀವನ ಶಿಕ್ಷಣ ಸಾಲೆಗಳ ವಿದ್ಯಾರ್ಥಿಗಳ ಮೂಲೋದ್ಯೋಗಗಳ ಮತ್ತು ಸಾಂಘಿಕ ಜೀವನದ ಪ್ರಾಯೋಗಿಕ ಪರೀಕ್ಷೆಗಳು ಮತ್ತು ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜುಗಳ ಮೂಲೋದ್ಯೋಗಗಳ ಪ್ರಾಯೋಗಿಕ ಪರೀಕ್ಷೆಯು ತಾತ್ವಿಕ ಪರೀಕ್ಷೆಯು ಪ್ರಾರಂಭವಾಗುವ ಮೊದಲು ಆಯಾ ಪರೀಕ್ಷಾ ಕೇಂದ್ರಗಳ ಅಧ್ಯಕ್ಷರು ಇಲ್ಲವೆ ಸಂಬಂಧಿಸಿದ ಜಿಲ್ಹೆಗಳ ಎಜ್ಯುಕೇಶನಲ್ ಇನಸ್ಪೆಕ್ಟರರು ನಿಶ್ಚಯಿಸಿದ ದಿನಾಂಕಗಳಂದು ನಡೆಯುವವು.

ನಂ. ಎಸ್. ೬೨ (ಜಿ)-೧೮೦-ಎಚ್. (ಪಿ. ಎಸ್. ಸಿ.)
ಪುಣೆ ೧. ೯ನೆಯ ಜನೆವರಿ, ೧೯೫೬.

ಸಹಿ. x x x
ಶಿಕ್ಷಣ ಖಾತೆಯ ಡೈರೆಕ್ಟರರ ಪರವಾಗಿ.

ಕಲಾದಗಿ ಬೀಟಿನಲ್ಲಿ ಪೆನ್ಸಿಲ ತಯಾರಿಸುವ ಯೋಜನಾ ಕಾರ್ಯ

ಕಲಾದಗಿ ಬೀಟ ಆಫೀಸರರಾದ ಶ್ರೀ ಎಮ್. ಆರ್. ಗಾಣಿಗೇರ ಅವರು ತಮ್ಮ ಬೀಟಿನಲ್ಲಿ ಮೃದುವಾದ ಕಲ್ಲುಗಳು (ಮಟ್ಟಿ) ವಿಪುಲವಾಗಿ ದೊರೆಯುತ್ತಿದ್ದು ಅವುಗಳಿಂದ ಪೆನ್ಸಿಲುಗಳನ್ನು ತಯಾರಿಸುವ ಯೋಜನೆಯನ್ನು ಉದಗಟ್ಟಿ ಮತ್ತು ಅಂಕಲಗಿ ಕ. ಗಂ. ಸಾಲೆಗಳಲ್ಲಿ ಪ್ರಾಯೋಗಿಕವಾಗಿ ಮಕ್ಕಳಿಂದ ಮಾಡಿಸಿದರು. ಈ ಪ್ರಯೋಗದ ವಿವರಗಳು ಕೆಳಗೆ ಇವೆ.

ಸಾಲೆಯ ಹೆಸರು	ದಿನಾಂಕ	ವೇಳೆ	ಭಾಗವಹಿಸಿದ ವಿದ್ಯಾರ್ಥಿಗಳ ಸಂಖ್ಯೆ		[illegible]	ಆಕಾರ	ಶಿಕ್ಷಕರ ಹೆಸರು
೧	೨	೩	೪		೫	೬	೭
			ಗಂ.	ಹೆ.			
ಕ. ಗಂ. ಸಾಲೆ ಉದಗಟ್ಟಿ ತಾ. ಬಾಗಲಕೋಟ	೪-೭-೧೯೫೫	೫ರಿಂದ೫-೨೦	೧೨	೩	೭೫	೭"ರಿಂದ೮½"	ಎಸ್. ಎಚ್. ಗೌಡರ
	೧೧-೭-೧೯೫೫	೫ರಿಂದ೫-೧೫	೧೫	೫	೫೮	೬"	
	೧೭-೭-೧೯೫೫	೫ರಿಂದ೫-೧೩	೨೦	೫	೧೦೦	೫"	
	೧೮-೭-೧೯೫೫	೫ರಿಂದ೫-೧೦	೨೦	—	೭೫	೪"	
	೨೦-೭-೧೯೫೫	೫ರಿಂದ೫-೮	೧೫	೫.	೭೫	೩"	
	೨೧-೭-೧೯೫೫	೫ರಿಂದ೫-೫	೧೭	೩	೭೫	೨"	
ಕ. ಗಂ. ಸಾಲೆ ಅಂಕಲಗಿ ತಾ. ಬಾಗಲಕೋಟ	೧೬-೭-೧೯೫೫	೧೫ ಮಿನಿಟು	೧೨	—	೨೫	೩"	ವೈ. ಎಸ್. ವಾಸನದ

ಉದಗಟ್ಟಿಯ ಸಾಲೆಯ ಅಂಕಿ ಸಂಖ್ಯೆಗಳನ್ನು ಪರಿಶೀಲಿಸಿದರೆ ಒಬ್ಬ ಹುಡುಗನು ಒಂದು ಮಿನಿಟಿನಲ್ಲಿ ೧" ರಿಂದ ೨" ಪೆನ್ಸಿಲನ್ನು ತಯಾರಿಸುವನೆಂದು ಕಂಡು ಬರುವದು. ಈ ಯೋಜನೆಯು ಅವರ ಬೀಟಿನ ಎಲ್ಲ ಸಾಲೆಗಳಿಗೆ ಒಯ್ಯಲ್ಪಟ್ಟಿತು ಮತ್ತು ಪರಿಣಾಮವು ಹಾಗೂ ಪ್ರತಿಕ್ರಿಯೆಗಳು ತೃಪ್ತಿಕರವಿವೆ. ಈ ಕಾರ್ಯದಲ್ಲಿ ಸಾಕಷ್ಟು ರೂಢಿಯಾದಂತೆ ಪ್ರಗತಿಯು ಹೆಚ್ಚುವದು. ಈ ಪ್ರಯೋಗವು ಯಶಸ್ವಿಯಾದ್ದರಿಂದ ಎಲ್ಲ ಸಾಲೆಗಳಿಗೆ ಇದನ್ನು ಸೂಚಿಸಲಾಯಿತು: ಮತ್ತು ಎಲ್ಲ ಸಾಲೆಗಳು ಪೆನ್ಸಿಲಿನ ಪೂರೈಕೆಯಲ್ಲಿ ಸ್ವಯಂಪೂರ್ಣವಾಗುವವೆಂದು ತಿಳಿಯಿತು. ಇದೇ ಸಂದರ್ಭದಲ್ಲಿ ೧೪ ಸಾಲೆಗಳು ೧೫ ದಿನಗಳಲ್ಲಿ ೧,೭೪೪ ಪೆನ್ಸಿಲುಗಳನ್ನು ತಯಾರಿಸಿದ ಸಂಗತಿಯನ್ನು ಹೇಳಬಹುದು. ಕಲಾದಗಿ ಬೀಟಿನ ವಿದ್ಯಾರ್ಥಿಗಳು ಒಂದು ತಿಂಗಳಲ್ಲಿ ವಿವಿಧ ಆಕಾರದ (೧½"–೮½")ಪೆನ್ಸಿಲುಗಳನ್ನು ತಯಾರಿಸಬಲ್ಲರೆಂದು ಗಣಿಸಲಾಗಿದೆ. ಈ ಯೋಜನೆಯನ್ನು ಕಾರ್ಯಗತ ಮಾಡಿದರೆ ವೇಳೆಯು ಅಥವಾ ಶ್ರಮದ ಅಪವ್ಯಯವಾಗುವದಿಲ್ಲ; ಖರ್ಚು ತಗಲುವದಿಲ್ಲ. ಮಕ್ಕಳ ಬಿಡುವಿನ ವೇಳೆಯು ಸದುಪಯೋಗವಾಗುವದು. ಮಕ್ಕಳು ಹೆಚ್ಚು ಸಂಖ್ಯೆಯಲ್ಲಿ ಪೆನ್ಸಿಲುಗಳನ್ನು ತಯಾರಿಸಿದರೆ ಅವೆಲ್ಲವನ್ನು ಸಾಲೆಯ ಸಹಕಾರಿ ಭಾಂಡಾರದಲ್ಲಿ ಇಟ್ಟು ಇಡೀ ಜಿಲ್ಲೆಯಲ್ಲಿ ಮಾರಿಬಂದ ಹಣವನ್ನು ತಯಾರಿಸಿದ ಮಕ್ಕಳಿಗೆ ಹಂಚಿದರೆ ಕೆಲಮಟ್ಟಿಗಾದರೂ ತಂದೆಯ ಆರ್ಥಿಕ ಭಾರವನ್ನು ಕಡಿಮೆ ಮಾಡಲು ಸಹಾಯಕಾರಿಯಾಗುವದು.

ಗ್ರಂಥ ವಿಮರ್ಶೆ

ಪುಸ್ತಕದ ಹೆಸರು– **ಪ್ರಸನ್ನ ರೇಣುಕ ಗೀತಾವಳಿ**

ಲೇಖಕರು– ಬಸವರಾಜ ಅಂಗಡಿ; ಬಂಕಾಪೂರ

ಪ್ರಕಾಶಕರು– ವೇ|| ವೀ. ರು ಹೊಸಮಠ

ಪುಟಗಳು– ೩೨ ಬೆಲೆ ೧ ರೂ.

ಈ ಗ್ರಂಥದಲ್ಲಿ ಶ್ರೀ ಜಗದ್ಗುರು ಪ್ರಸನ್ನ ರೇಣುಕ ಭಗವತ್ಪಾದರ ಲೀಲೆಯನ್ನು ಶ್ರೀ ಬಸವರಾಜರು ಹಾಡಿ ಭಜನಾ ಪ್ರೇಮಿಗಳ ಹಾಗೂ ಆಸ್ತಿಕವಾದಿಗಳ ಎದೆಯನ್ನು ತಣಿಸಿದ್ದಾರೆ. ಇಲ್ಲಿ ಬಂದಿರುವ ೩೫ ಗೀತೆಗಳೆಲ್ಲ ಭಕ್ತಿ ಗೀತೆಗಳು. ಈ ಭಕ್ತಿಗೀತೆಗಳಿಗೆ ಚಲಚ್ಚಿತ್ರ ಪದಗಳ ಧಾಟಿಯ ಮೆರುಗನ್ನು ಲೇಖಕರು ಕೊಟ್ಟಿದ್ದಾರೆ ಇದ ರಿಂದ ಹಲವರ ಮುಖದಲ್ಲಿ ಈ ಹಾಡುಗಳು ಸುಳಿದಾಡು ವದರಲ್ಲಿ ಸಂದೇಹವಿಲ್ಲ; ಆದರೆ ಇಷ್ಟೇ- ಮುಖದಲ್ಲಿ ಸುಳಿ ದಾಡಿ. ಕಿವಿಗೆ ಇಂಪಾದರೆ ಸಾಲದು; ಇವುಗಳಲ್ಲಿಯ ಭಕ್ತಿರಸವು ಹೃದಯಕ್ಕೆ ಇಳಿಯಬೇಕು. ಜನರ ನೈತಿ ಕತೆಯು ಹೆಚ್ಚಬೇಕು. ಮೇಲಿಂದ ಮೇಲೆ ಹಾಡಿ, ಕೇಳಿ ಈ ಭಕ್ತಿಯ ಸುಧೆಯು ಹಾಡುವವರ ಕೇಳುವವರ ಹೃದ ಯಕ್ಕೂ ಇಳಿಯಬಹುದಾಗಿದೆ. ‘ ಇದರಂತೆ ಮುಕ್ತಿಯ ಮಂದಿರ!’ ‘ ಮುಕ್ತಿಯ ಮಂದಿರಕೆ ನಡಕೊಳ್ಳಬೇಕು! ’ ಇಂತಹ ಕೆಲವು ಗೀತೆಗಳಂತೂ ಒಳ್ಳೆಯ ಸುಂದರವಾಗಿವೆ.

ಬಸವರಾಜರು ಇಂತಹ ಪ್ರಕಟನೆಗಳನ್ನು ಇನ್ನೂ ಹೆಚ್ಚಾಗಿ ಹೊರಡಿಸುವರೆಂದು ಹಾರೈಸದಿರೆವು.

— ಪ್ರ. ಸಂ.

ಪುಸ್ತಕದ ಹೆಸರು– **ಶ್ರೀ ತಾಯಿಯವರ ಹೊಸ ಪ್ರವಚನಗಳು**

ಲೇಖಕರು– ಸಿಂಪಿ ಲಿಂಗಣ್ಣ

ಪುಟಗಳು– ೯೬ ಬೆಲೆ

ಪಾಂಡಿಚೇರಿಯ ಶ್ರೀ ಅರವಿಂದಾಶ್ರಮದ ಶ್ರೀ ತಾಯಿಯವರು ಹೇಳಿದ ಅಮೃತಮಯ ಪ್ರವಚನಗಳನ್ನು ಪ್ರಸಿದ್ಧ ಸಾಹಿತಿಗಳೂ, ನಾಮಾಂಕಿತ ಶಿಕ್ಷಕರೂ ಆದ ಶ್ರೀ ಸಿಂಪಿ ಲಿಂಗಣ್ಣ ಅವರು ಕನ್ನಡದಲ್ಲಿ ಬರೆದು ನಾಡಿನ ಪ್ರೀತಿಗೆ, ಆದರಕ್ಕೆ ಪಾತ್ರರಾಗಿದ್ದಾರೆ. ಇದು ಮುಖ್ಯವಾಗಿ ಆಧ್ಯಾತ್ಮಿಕ ವಿಚಾರಗಳನ್ನು ಒಳಗೊಂಡಿದೆ. ನಮ್ರತೆ, ಶ್ರದ್ಧೆ, ತ್ಯಾಗ, ಆಕಸ್ಮಿಕತೆ ಇವೇ ಮೊದಲಾದವುಗಳ ನೈಜ ಕಲ್ಪನೆಯನ್ನು ಇಲ್ಲಿ ನಾವು ಕಾಣಬಹುದಾಗಿದೆ. ಮಹರ್ಷಿ ಅರವಿಂದರ ವಿಚಾರಧಾರೆಯ ಅಲಗುಗಳ ಝಳುಕನ್ನು ಗ್ರಂಥದುದ್ದಕ್ಕೂ ಹಿನ್ನೆಲೆಯಲ್ಲಿ ಹಾಸು ಹೊಕ್ಕಾಗಿದ್ದುದನ್ನೂ ನೋಡಬಹುದು. ೨೫ ಚಿಕ್ಕ ಪ್ರಕರ ಣಗಳಲ್ಲಿ ಪ್ರವಚನಗಳು ಹೇಳಲ್ಪಟ್ಟಿವೆಯಾದ್ದರಿಂದ ಓದ ಲಿಕ್ಕೆ ಬೇಸರವೆನಿಸುವದಿಲ್ಲ. ಚಿಕ್ಕ ವಾಕ್ಯಗಳಲ್ಲಿ, ಸುಲಭ ಶಬ್ದಗಳಲ್ಲಿ ಬಳಕೆನೆತ್ತುದರಿಂದ ತಿಳಿದುಕೊಳ್ಳಲು ಕಠಿಣ ವೆನಿಸುವದಿಲ್ಲ. ಪ್ರಸ್ತುತ ಪುಸ್ತಕವು ನಾಡವರಿಂದ ಸ್ವಾಗತವನ್ನು ಹೊಂದುವದರಲ್ಲಿ ಸಂದೇಹವೇನಿದೆ?

— ಪ್ರ. ಸಂ.

ಪುಸ್ತಕದ ಹೆಸರು– “ **ನನ್ನ ನಲ್ಲ** ”

ಸಂಗ್ರಾಹಕರು– ಶ್ರೀ ಸಿಂಪಿ ಲಿಂಗಣ್ಣ

ಪ್ರಕಾಶಕರು– ಶ್ರೀ ಬಿ. ಡಿ. ಅಕ್ಕಿ

ಪುಟಗಳು– ೧೬೫ ಬೆಲೆ ಸಾದಾ ಪ್ರತಿ ೧-೧೨-೦

ಕ್ಯಾಲಿಕೊ ಪ್ರತಿ ೨--೪-೦

‘ ಮಧುರಚೆನ್ನ ’ರೆಂದು ಖ್ಯಾತಿವೆತ್ತ ಹಲಸಂಗಿ ಚೆನ್ನಮಲ್ಲಪ್ಪನವರು ೫೦ ವರ್ಷಗಳ ಪವಿತ್ರ ಜೀವನ ವನ್ನು, ಕಾವ್ಯಮಯ ಜೀವನವನ್ನು ಬಾಳಿ ಎಲ್ಲರಿಗೂ ಮಧುರರಾಗಿ ೧೫-೮-೧೯೫೩ ರಂದು ಪರಂಧಾಮವ ನ್ನೈದಿದರು ಅವರು ಬರೆದ ಕವನಗಳನ್ನು ಸಂಗ್ರಹಿಸಿ ಅವರಂತೆಯೇ ಪವಿತ್ರ ಹಾಗೂ ಕಾವ್ಯಮಯ ಜೀವಿ ಗಳಾದ ಶ್ರೀ ಸಿಂಪಿ ಲಿಂಗಣ್ಣ ಅವರು ಕನ್ನಡಿಗರ ಮುಂದೆ ಇಟ್ಟು ಮಹದುಪಕಾರ ಮಾಡಿದ್ದಾರೆ. ಹಳ್ಳಿ ಯಲ್ಲಿ ಜನಿಸಿ, ಅಲ್ಲಿಯೇ ವಾಸಿಸಿ, ಅದೇ ಜೀವನವನ್ನು ನಾಗಿಸಿದ ಚೆನ್ನಮಲ್ಲಪ್ಪನವರು ಗೆಳೆಯರ ಬಳಗದ ಅಧ್ವರ್ಯುಗಳಾಗಿ ಸಾಹಿತ್ಯಾರಾಧಕರೂ ನಿಸರ್ಗ ಪ್ರಿಯರೂ, ಆಧ್ಯಾತ್ಮವಾದಿಗಳೂ ಭಕ್ತಿಮಾರ್ಗಾನು ಗಾಮಿಗಳೂ ಆಗಿ ಉಜ್ವಲ ಸಾಹಿತಿಗಳೆಂದು ನಾಮಕರಣ ವೆತ್ತರು. ಅವರು ಬಿಟ್ಟು ಹೋದ ಕವನ ಮಾಣಿಕಗಳ

ಒಂದೇ ಸರದಲ್ಲಿ ಪೋಣಿಸಿದ್ದವು. ಶ್ರೀ ಸಿಂಪಿಯವರ ಸಂಗ್ರಾಹಕತ್ವದಲ್ಲಿ ಮಧುರ ಚೆನ್ನರ ಈ ಕವನಗಳು 'ರನ್ನವಣಿಯಂ ಪೊನ್ನಿಂ ಬಿಗಿದಂತೆ' ಈ ಸಂಗ್ರಹದಲ್ಲಿ ಎಸಗುತ್ತಿವೆ. ಈ ಕವನಗಳನ್ನು 'ನನ್ನನಲ್ಲ' ಮಧುರಗೀತ, ಅಭೀಪ್ಸಾ, ಸಂಧ್ಯಾ, ಮತ್ತು ವಿರಾಟ ಶಕ್ತಿಯ ದರ್ಶನ ಎಂಬ ಐದು ಗುಂಪುಗಳಲ್ಲಿ ವಿಭಾಗಿಸಲಾಗಿದೆ. 'ನನ್ನ ನಲ್ಲ', 'ಕೆಸರಿನೊಳಗಿನ ಕಮಲ' 'ಮಧುರ ಗೀತ' 'ದೀನ ಬಂಧು ಅಂಡ್ರೂಜ', 'ಶ್ರೀ ಅರವಿಂದರು', 'ಮಾತೆಗೆ ಮೊರೆ' 'ಶ್ರೀ ವಿವೇಕಾನಂದರಿಗೆ' ಮೊದಲಾದ ಕವನಗಳ ರುಚಿಯಂತೂ ಕಬ್ಬಿನ ಮೇಲಿಟ್ಟ ಜೇನಿನಂತೆ ಅತ್ಯಂತ ಮಧುರವಾಗಿವೆ. 'ಮಧುರ ಚೆನ್ನ'ರ ಈ ಕವನ ಸಂಗ್ರಹವು ನಾಡಿನಲ್ಲಿ ಆಧ್ಯಾತ್ಮಿಕತೆಯನ್ನೂ, ಭಕ್ತಿಭಾವವನ್ನೂ ಬೆಳೆಸುವದೆಂದು ಹಾರೈಸುವೆವು.

— ಪ್ರ. ಸಂ.

ಪುಸ್ತಕದ ಹೆಸರು– **ಕೆನೆ ಮೊಸರು**
ಲೇಖಕರು– ಶ್ರೀ ಅನಂತರಾವ ಕೆ. ಭೋಸಗೆ
ಪ್ರಕಾಶಕರು– ಶ್ರೀ ಮಿರ್ಜಿ ಅಣ್ಣಾರಾಯರು, ಸೇಡಬಾಳ
ಪುಟಗಳು– ೨೫ ಬೆಲೆ: ೦–೪–೦

ಆರು ಕಥೆಗಳ ಚಿಕ್ಕ ಪುಸ್ತಕವಿದು. ಕೆನೆಮೊಸರೆಂದರೆ ಎಲ್ಲರಿಗೂ ಪ್ರೀತಿ; ಚಿಕ್ಕಮಕ್ಕಳಿಗಂತೂ ಅದು ಜೀವ. ಹಾಲಿನ ಮಾಧುರ್ಯ, ಬೆಣ್ಣೆಯ ಸತ್ವ, ಮೊಸರಿನ ಸಾಪೇಕ್ಷ ಹುಳಿ, ಈ ತ್ರಿವೇಣಿಯ ಸಮತೂಕದಿಂದ ಕೆನೆ ಮೊಸರು ರುಚಿಸುವಂತೆ, ಶರೀರಕ್ಕೆ ಬುದ್ಧಿಗೆ ಆರೋಗ್ಯಕರವಾಗಿ ಪರಿಣಮಿಸುವಂತೆ ಇಲ್ಲಿಯ ಎಲ್ಲ ಕಥೆಗಳನ್ನು ಮಕ್ಕಳು ಓದಿ, ಮೆಚ್ಚುವದರಲ್ಲಿ ಸಂದೇಹವಿಲ್ಲ. ಸಣ್ಣ ವಾಕ್ಯಗಳು, ತಕ್ಕ ಸನ್ನಿವೇಶಗಳು, ಸುಲಭ ವಾಕ್ಯ ಪ್ರಯೋಗಗಳು, ಒತ್ತಕ್ಷರದ ಶಬ್ದಗಳಿಲ್ಲದಿರುವದು ಇವೆಲ್ಲ ಮಕ್ಕಳ ಮನೋಗುಣಕ್ಕೆ, ಬುದ್ಧಿ ಗುಣಕ್ಕೆ ಯೋಗ್ಯವಾಗಿರುವದರಿಂದ ಇವುಗಳನ್ನೇ ಇಲ್ಲಿಯ ಆರೂ ಕಥೆಗಳಲ್ಲಿ ಕಾಣಬಹುದಾಗಿದೆ. ಚಿಕ್ಕಮಕ್ಕಳಿಗೆ ಪೂರಕ ವಾಚನ ಮಾಡಿಸಲಿಕ್ಕೆ ಈ ಪುಸ್ತಕವು ಯಥಾಯೋಗ್ಯವಾಗಿದೆ.

— ಪ್ರ. ಸಂ.

ಪುಸ್ತಕದ ಹೆಸರು– **"ಮಕ್ಕಳಿಗೆ ಓದು ಕಲಿಸುವದು"**
ಲೇಖಕರು– ಡಾ. ವಿ. ಕೊ. ಜವಳಿ,
ಎಂ. ಈಡಿ., ಪಿಎಚ್. ಡಿ. (ಬಾಂಬೆ)
ಎಂ.ಎ. (ಕೋಲಂಬಿಯಾ)
ಶಿಕ್ಷಣ ಪ್ರೊಫೆಸರ, ಟೀಚರ್ಸ ಕಾಲೇಜ, ಬೆಳಗಾಂವ
ಪ್ರಕಾಶಕರು– ಆಕಳವಾಡಿ ಬುಕ್‌ಡಿಪೋ, ಧಾರವಾಡ
ಪುಟಗಳು– ೨೬೬ ಬೆಲೆ– ರೂ ೨-೦-೦

ಮಕ್ಕಳಿಗೆ ಆರಂಭದಲ್ಲಿ ಓದು ಕಲಿಸುವದನ್ನು ಕುರಿತು ಲೇಖಕರು, ಬಹಳ ಪರಿಶ್ರಮವಹಿಸಿ ಪ್ರತ್ಯಕ್ಷ ಪ್ರಯೋಗಮಾಡಿ ಪಡೆದ ಸಿದ್ಧಾಂತಗಳನ್ನೇ ತಳಹದಿಯಾಗಿಟ್ಟುಕೊಂಡು, ಹಲವಾರು ಉಪಯುಕ್ತ ಹಾಗೂ ವ್ಯವಹಾರಿಕ ಸೂಚನೆಗಳನ್ನು ಇಲ್ಲಿ ಚರ್ಚಿಸಿದ್ದಾರೆ. ಹೀಗೆ ಮಾಡುವಾಗ ೧ನೆಯ, ೨ನೆಯ ವರ್ಗಗಳ ಪಠ್ಯಪಾಠಗಳು ಎಂಥವಿರಬೇಕೆಂಬುದನ್ನೂ ಅವು ಯಾವ ತತ್ವಗಳನ್ನನುಸರಿಸಿ ಬರೆಯಲ್ಪಡಬೇಕೆಂಬುದನ್ನೂ ವಿಶೇಷವಾಗಿ ಓದು ಕಲಿಸುವ ಉದ್ದೇಶವನ್ನೂ ಒಳ್ಳೇ ಕೂಲಂಕಷವಾಗಿ ವಿವರಿಸಿದ್ದಾರೆ. ಓದು ಕಲಿಸುವದರ ಬಗೆಗೆ ತಾವು ಮಾಡಿದ ಪ್ರಯೋಗದ ಹಿನ್ನೆಲೆ, ಪ್ರಾತ್ಯಕ್ಷಿಕೆ, ಫಲಿತಾಂಶಗಳನ್ನು ಲೇಖಕರು ಮಾರ್ಮಿಕವಾಗಿ, ರಸವತ್ತಾಗಿ ವರ್ಣಿಸಿ ತಮ್ಮ "ಲೀಲಾ ಪದ್ಧತಿ"ಯ ಮಹತ್ವವನ್ನು ಚಿತ್ರರಿಸಿದ್ದಾರೆ. ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರಚಲಿತವಿದ್ದ ಪದ್ಧತಿಯನ್ನು ಅರಿತು, ಅದನ್ನು ನಮ್ಮ ನಾಡಿನ ಸನ್ನಿವೇಶಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡು, ಪ್ರಯೋಗದ ಒರೆಗಲ್ಲಿಗೆ ತಿಕ್ಕಿ ಸ್ಪುಟವಾಗಿ ಪ್ರಕಟಗೊಂಡ ಈ ಪುಸ್ತಕವನ್ನು ಅಂದು ಕ್ಷೀರಸಮುದ್ರವನ್ನು ಮಥಿಸಿದಾಗ ಹೊರಟ ಅಮೃತದ ಕುಂಭಕ್ಕೆ ಹೋಲಿಸಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಅನೇಕ ಮಕ್ಕಳ ಪುಸ್ತಕಗಳನ್ನು ಪರಿಶೀಲಿಸಿ ಮೇಲಿಂದ ಮೇಲೆ ಬಂದಂಥ ಸುಮಾರು ೨೦೦೦ ಶಬ್ದಗಳ ಪಟ್ಟಿಯನ್ನು ಈ ಪುಸ್ತಕದ ಕೊನೆಗೆ ಕೊಟ್ಟಿರುತ್ತಾರೆ.

ಹೀಗೆ ಈ ಪುಸ್ತಕವು ಶಿಕ್ಷಕರಿಗೆ, ಪಾಲಕರಿಗೆ, ಪುಸ್ತಕಗಳನ್ನು–ವಿಶೇಷವಾಗಿ–ಪಠ್ಯಪುಸ್ತಕಗಳನ್ನು ರಚಿಸುವವರಿಗೆ ಅತ್ಯಂತ ಉಪಯುಕ್ತವಾಗಿದೆಯೆಂದು ಹೇಳಬಯಸುವೆವು.

— ಪ್ರ. ಸಂ.

(೪೯ನೆಯ ಪುಟದಿಂದ ಬಂದದ್ದು)

ಈ ಪಾಠಗಳು ಕೊಡಲ್ಪಡುವವು ಒಂದು ಚಟುವಟಿಕೆಯು ಇನ್ನೊಂದಕ್ಕೆ ಮಾರ್ಗಮಾಡಿಕೊಡುವದು. ಇವು ನಿತ್ಯದ ಚಟುವಟಿಕೆಗಳಾಗಿರಬಹುದು. ಆಗಾಗ ಬರುವ ಉತ್ಸವಗಳು, ಆಚರಣೆಗಳು, ಮೂಲೋದ್ಯೋಗಗಳು, ಆಟಗಳು, ಪ್ರವಾಸಗಳು, ಶಿಕ್ಷಣ ದೃಷ್ಟಿಯಿಂದ ಮಹತ್ವವುಳ್ಳ ಸ್ಥಳಗಳ ಸಂದರ್ಶನಗಳು ಇರಬಹುದು. ಪೂರ್ವಾಲೋಚಿತ ಕಾರ್ಯಕ್ರಮವು ಈ ಚಟುವಟಿಕೆಗಳಲ್ಲಿ ಮಾಡಬೇಕಾದ ಕಾರ್ಯವನ್ನು ನಿಶ್ಚಯಿಸುವದು.

೩ ಇದರ ಹೊರತಾಗಿ ಜ್ಞಾನಾರ್ಜನೆಯುವೆಂದು ಕರೆಯಬಹುದಾದ ಪಾಠಗಳು ಇರುವವು ಇವು ಭಾಷೆ, ಗಣಿತ ಇತ್ಯಾದಿ ವಿವಿಧ ವಿಷಯಗಳ ಅಭ್ಯಾಸ ಪತ್ರಿಕೆಯನ್ನು ಆವರಿಸುವವು ಚಟುವಟಿಕೆಯ ಪಾಠದ ಅವಧಿಯು ಚಟುವಟಿಕೆಯನ್ನು ಸಂಪೂರ್ಣವಾಗಿ ಮುಗಿಸಲು ಸುಮಾರು ಒಂದು ತಾಸಿನದು ಮತ್ತು ಜ್ಞಾನಾರ್ಜನೆಯ ಪಾಠದ ಅವಧಿಯು ೩೦-೩೫ ಮಿನಿಟು ಇರುವದು.

೪. ಜೀವನ ಶಿಕ್ಷಣ ಶಾಲೆಯಲ್ಲಿ ಚಟುವಟಿಕೆಯನ್ನು ಜ್ಞಾನದೊಡನೆ ಸಮನ್ವಿತಗೊಳಿಸುವ ಅಭೀಷ್ಟೆಯಿರುತ್ತದೆ ಅದ್ದರಿಂದ ಪ್ರತಿಯೊಂದು ಚಟುವಟಿಕೆಯ ಪಾಠದ ಮೇಲೆ ಅಭ್ಯಾಸ ಪತ್ರಿಕೆಯಿಂದ ಆಯ್ದುಕೊಂಡ ಹಲವಾರು ಜ್ಞಾನಾರ್ಜನೆಯ ಪಾಠಗಳನ್ನು ಹೊಂದಿಸಬೇಕಾಗುವದು. ಚಟುವಟಿಕೆಯ ಪಾಠವು ಚಟುವಟಿಕೆಯನ್ನು ಆವರಿಸುವ ಕೇಂದ್ರವಾಗುವದು. ಸಂದರ್ಭಕ್ಕನುಸರಿಸಿ ಜ್ಞಾನಾರ್ಜನೆಯ ಪಾಠವು ಚಟುವಟಿಕೆಯ ಮೊದಲು ಇಲ್ಲವೆ ತದನಂತರ ಬರುವದು. ಇದರಿಂದ ಅವಲಂಬಿತ ಜ್ಞಾನಾರ್ಜನೆಯ ಪಾಠ ಸಹಿತ ಚಟುವಟಿಕೆಯ ಪಾಠವು ಸಂಪೂರ್ಣವಾಗಿ ಒಂದು ಸಮವಾಯ ಪಾಠವೆನಿಸುವದು. ಚಟುವಟಿಕೆಯ ಪಾಠವು ಜ್ಞಾನಾರ್ಜನೆಯ ಪಾಠಗಳಿಗೆ ಪ್ರೇರಕವಾಗುವದು. ಚಟುವಟಿಕೆಯ ಪಾಠದಲ್ಲಿ ಚಟುವಟಿಕೆಯು ಮುನ್ನೆಲೆಯಾಗಿರುವದು ಜ್ಞಾನಾರ್ಜನೆಯ ಪಾಠದಲ್ಲಿ ಚಟುವಟಿಕೆಯು ಹಿನ್ನೆಲೆಯಾಗಿರುವದು.

೫ ಚಟುವಟಿಕೆಯ ಪಾಠಕ್ಕೆ ಕೆಳಗಿನ ಮೆಟ್ಟಲುಗಳನ್ನು ಸೂಚಿಸಲಾಗಿದೆ.

೧ ಚಟುವಟಿಕೆಯ [illegible] ಪತ್ರಿ,

೨. ಚಟುವಟಿಕೆಗೆ ಬೇಕಾದ ಉಪಕರಣಗಳು

೩. ಶಿಕ್ಷಕನಿಂದ ಚಟುವಟಿಕೆಯ ಕಾರ್ಯಾಚರಣೆ

೪. ಮಾಡಬೇಕಾದ ಕಾರ್ಯದ ಪರಿಮಾಣವನ್ನು ನಿರ್ದಿಷ್ಟಗೊಳಿಸುವದು.

೫. ವಿದ್ಯಾರ್ಥಿಗಳಲ್ಲಿ ಗುಂಪು ಮಾಡುವದು.

೬. ಮಕ್ಕಳು ಚಟುವಟಿಕೆಯನ್ನು ಮಾಡುವದು.

೭. ನಿರ್ದಿಷ್ಟಗೊಳಿಸಿದ ಗುರಿಗಳನ್ನು ಎಷ್ಟರ ಮಟ್ಟಿಗೆ ಸಾಧಿಸಿದೆಯೆಂಬುದನ್ನು ನೋಡುವದಕ್ಕಾಗಿ ಮಾಡಿದ ಕೆಲಸದ ಪರಿಶೀಲನೆ.

ಜ್ಞಾನಾರ್ಜನೆಯ ಪಾಠಗಳು ಹರ್ಬಾರ್ಟನ ಮೆಟ್ಟಲುಗಳಂತೆ ಸಾಗುವವು. ಪ್ರಾರಂಭದ ಮೆಟ್ಟಲಿನಲ್ಲಿ ಚಟುವಟಿಕೆಯು ಉಲ್ಲೇಖಿಸಲ್ಪಡುವದು. ಚಟುವಟಿಕೆಗೆ ಅವಶ್ಯನಿದ್ದ ಜ್ಞಾನದ ಅವಶ್ಯಕತೆಯು ಹೇಳಲ್ಪಡುವದು. ಶಾಲೆಯ ವಿವಿಧ ಚಟುವಟಿಕೆಗಳಿಗೆ ಅಭ್ಯಾಸ ಪತ್ರಿಕೆಯೊಳಗಿನ ಸಾಕಷ್ಟು ವಿಷಯ ಜ್ಞಾನವನ್ನು ಹೊಂದಿಸಿಕೊಳ್ಳುವದು ಸಾಧ್ಯವಿದೆ.

೬. ಜೀವನ ಶಿಕ್ಷಣ ಸಾಲೆಗಳಲ್ಲಿ ವೇಳೆಯ ಹಂಚುವಿಕೆಯು ಕೆಳಗಿನ ನಿಯಮವನ್ನು ಅನುಸರಿಸುತ್ತದೆ :—

ಇದನ್ನು ಎರಡು ಭಾಗಗಳಲ್ಲಿ ವಿಂಗಡಿಸಬಹುದು.

i) ಚಟುವಟಿಕೆಯ ಪಾಠಗಳು ii) ಜ್ಞಾನಾರ್ಜನೆಯ ಪಾಠಗಳು.

ಚಟುವಟಿಕೆಯ ಪಾಠಗಳಲ್ಲಿ ನಿತ್ಯದ ಚಟುವಟಿಕೆಗಳು (೬ ಅವಧಿಗಳು); ಮೂಲೋದ್ಯೋಗದ ಚಟುವಟಿಕೆಗಳು (೧೦ ಅವಧಿಗಳು) ಮತ್ತು ಆಟಗಳು (೫ ಅವಧಿಗಳು) ಇವು ಒಟ್ಟಿಗೆ ೨೧ ಅವಧಿಗಳಾಗುತ್ತವೆ. ಇದಲ್ಲದೆ ನಿಯಮಿತ ಕಾಲದ ಉತ್ಸವಗಳು; ಪ್ರವಾಸಗಳು ಮೊದಲಾದವುಗಳನ್ನು ಶಾಲೆಯ ಹೊರಗಿನ ಅವಧಿಯಲ್ಲಿಯೇ ಆಚರಿಸಬೇಕು. ಜ್ಞಾನಾರ್ಜನೆಯ ಪಾಠಗಳು ಎರಡನೆಯ ಪ್ರಕಾರದಲ್ಲಿ ಸಮಾವೇಶವಾಗುತ್ತವೆ. ಇವುಗಳಿಗೆ ಒಟ್ಟು ೨೪ ಅವಧಿಗಳು ಬೇಕಾಗುತ್ತವೆ. ಇವುಗಳಲ್ಲಿ ೧೦ ಅವಧಿಗಳು ಚಟುವಟಿಕೆಗೆ ಸಮನ್ವಯಿಸಿದ ಪಾಠಗಳಿಗೆ ಉಪಯೋಗಿಸಲ್ಪಡುತ್ತವೆ ಅವು ಚಟುವಟಿಕೆಯ ಅವಧಿಗಳಲ್ಲಿ ಮಾಡಿಸಿದ ಚಟುವಟಿಕೆಗಳನ್ನು ಇಲ್ಲವೆ ಶಾಲೆಯ

ಬೀಗೆ ಮಾಡಿಸಿದ ಚಟುವಟಿಕೆಗಳನ್ನು ಅವಲಂಬಿಸಿರ ಬಹುದು. ಉಳಿದ ೧೪ ಅವಧಿಗಳನ್ನು ಸರಿಯಾಗಿ ವ್ಯವಸ್ಥಿತಗೊಳಿಸುವದು, ದೃಢೀಕರಣ, ಬಿಟ್ಟ ವಿಷಯಗಳನ್ನು ತುಂಬಿಕೊಳ್ಳುವದು-ಇತ್ಯಾದಿ ಅಭ್ಯಾಸ ಪತ್ರಿಕೆಯಂತೆ ಅವಶ್ಯವಿರುವ ಕಾರ್ಯವನ್ನು ಪೂರ್ತಿಗೊಳಿಸುವದಕ್ಕಾಗಿ ವಿನಿಯೋಗಿಸಲಾಗುವದು.

— ಪ್ರಾಥಮಿಕ ಶಿಕ್ಷಣ ಪ್ರಪಂಚ —

ಪ್ರಜಾರಾಜ್ಯೋತ್ಸವ

ನೆಗಳೂರ, ಜಾಡಬಬಲಾದ, ಇಳಕಲ್ಲ, ಅಮಲಝರಿ, ಹೊಸಶಿಡೇನೂರ, ಬದಾಮಿ, ಬಟ್ಟೂರ, ಲಾಯದಗಂದಿ, ಸಂಗಮ, ಹೊಸೂರು (ಸಿಗ್ಗಾಂವ), ಕಣಗಿನಹಾಳ, ಆಗರಖೇಡ, ಕರ್ಲಕೊಪ್ಪ, ತುಪ್ಪದಕುರಹಟ್ಟಿ, ತಿಳವಳ್ಳಿ, ಹೊಳೆಮಣ್ಣೂರ, ಕೆರೂರ, ಯಲಗೂರು, ಬೆಳ್ಳಟ್ಟಿ, ಕಿತ್ತೂರ, ಬಸವನಾಳ, ಕಮತಗಿ, ಉಣಕಲ್ಲ, ಕಲ್ಲೂರ (ಗದಗ), ಹುಲ್ಲೊಳ್ಳಿ, ಕೆಕ್ಕಾರ, ಕಾಳಗಿ, ತಬಕದ ಹೊನ್ನಿಹಳ್ಳಿ, ಇಲ್ಲಿಯ ಸಾಲೆಗಳಲ್ಲಿ ಪ್ರಜಾರಾಜ್ಯ ದಿನೋತ್ಸವವು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಲಾಯದಗಂದಿಯಲ್ಲಿ ಊರವರು ನಾಲ್ಕುಸಾವಿರ ರೂಪಾಯಿ ಶಾಲಾ ಇಮಾರತಿಗಾಗಿ ಕೊಡಿಸಲು ಒಪ್ಪಿ ಅದೇ ವೇಳೆಯಲ್ಲಿ ೧೦೧೧ ರೂಪಾಯಿ ಕೊಟ್ಟರು. ಸಂಗಮದ ಪ್ರಮುಖರು ವಾಚನಾಲಯಕ್ಕಾಗಿ ೧೫೦ ರೂಪಾಯಿಗಳನ್ನು ಕೊಟ್ಟರು,

ತಬಕದ ಹೊನ್ನಿಹಳ್ಳಿ, ಕನ್ಯಾಸಾಲೆ ಶಲವಡಿ, ಕಾಳಗಿ, ಟ್ರೇ.ಕಾ. ಜಮಖಂಡಿ, ಬಟ್ಟೂರ, ಈ ಸ್ಥಳಗಳಲ್ಲಿ ೩೦-೧-೫೬ರಂದು ಮಹಾತ್ಮಾಜಿಯವರ ಪುಣ್ಯತಿಥಿ ಆಚರಿಸಲ್ಪಟ್ಟಿತು.

ಸಭೆ-ಸಮ್ಮೇಲನಗಳು

ಹಾವೇರಿ :– ದಿ. ೨೮-೧-೫೬ರಂದು ಬೀಟ ಆಫೀಸರ ಶ್ರೀ ಕರಡಿಯವರ ಅಧ್ಯಕ್ಷತೆಯಲ್ಲಿ ಸ್ಥಳಿಕ ಎಲ್ಲ ಸಾಲೆಗಳ ಮಾಸಿಕ ಸಮ್ಮೇಲನ ಜರುಗಿತು.

ಉಣಕಲ್ಲ :– ದಿ. ೨೨-೧-೫೬ರಂದು ಒಕ್ಕಲುತನ ಒಲವಿನ ಸಾಲೆಗಳ ಗುಂಪಿನ ಸಮ್ಮೇಲನವು ಜರುಗಿತು.

ಬ್ಯಾಡಗಿ :– ಇಲ್ಲಿ ದಿನಾಂಕ ೧೮-೧೨-೫೫ರಂದು ಜೀವನ ಶಿಕ್ಷಣ ಸಮ್ಮೇಲನ ನಡೆಯಿತು. ಧಾರವಾಡ ಜಿಲ್ಹಾ ಶಿಕ್ಷಣಾಧಿಕಾರಿಗಳಾದ ಶ್ರೀ ತೀರಗಾಂವಕರ ಅವರು ಈ ಸಮ್ಮೇಲನ ಅಧ್ಯಕ್ಷತೆ ವಹಿಸಿದ್ದರು.

ಜಮಖಂಡಿ– ದಿನಾಂಕ ೩೦-೧-೫೬ರಂದು ಶಹರ ಶಿಕ್ಷಕರ ಅಭ್ಯಾಸ ಮಂಡಳದ ಪ್ರಾರಂಭೋತ್ಸವವು ವಿಜಾಪೂರ ಜಿಲ್ಹಾ ಶಿಕ್ಷಣಾಧಿಕಾರಿಗಳಾದ ಶ್ರೀ ಬೆನ್ನೂರ ಅವರ ಹಿರಿಯತನದಲ್ಲಿ ಸಾಂಗವಾಯಿತು. ಇಲ್ಲಿಯ ಟ್ರೇನಿಂಗ ಕಾಲೇಜದ ಶಿಕ್ಷಕ-ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಹಿರೇಪಡಸಲಗಿ, ಗುಣದಾಳ ಮೊದಲಾದ ಗ್ರಾಮುಗಳಲ್ಲಿ ವಾಸಮಾಡಿ ಶ್ರಮದಾನ, ಸಮಾಜ ಸೇವಾ ಕಾರ್ಯ ಮಾಡಿದರು.

ಅವಸಾನ– ಶಿಕ್ಷಕರ ಸಮ್ಮೇಲನವು ಕಾರವಾರ ಜಿಲ್ಹಾ ಶಿಕ್ಷಣಾಧಿಕಾರಿಗಳಾದ. ಶ್ರೀ ವ್ಹಿ. ಬಿ. ದೇಸಾಯಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮಂಚೀಕೇರಿ– ಕಾರವಾರ ಡಿ. ಎಸ್. ಬಿ. ಏ. ಓ. ರವರಾದ ಶ್ರೀ ದಳವಾಯಿಯವರ ಹಿರಿಯತನದಲ್ಲಿ ಗ್ರುಪ್ ಶಿಕ್ಷಕರ ಸಮ್ಮೇಲನವು ಆಯಿತು. ಬೆಳ್ಳಟ್ಟಿ, ಉಕ್ಕುಂದ, ಕೌಜಲಗಿ, ಮಳ್ಳಿಗೇರಿ, ಹಲಗಲಿ, ಕಿತ್ತೂರ, ಕೊಲ್ಹಾರ, ಮೊರಬ, ಚಿತ್ತವಾಡಗಿ ಈ ಸ್ಥಳಗಳಲ್ಲಿ ಶಿಕ್ಷಕರ ಸಮ್ಮೇಲನಗಳು ಜರುಗಿದವು.

ಖಾನಾಪೂರ– ದಿನಾಂಕ ೨೨-೧-೫೬ರಂದು ನಡೆದ ಸಮ್ಮೇಲನದ ಕಾಲಕ್ಕೆ ಶ್ರೀ ಎಸ್. ಆರ್. ದೇಶಪಾಂಡೆಯವರು ಸಾಲೆಗೆ ಬೇಕಾಗುವ ೩ ಎಕರೆ ಜಮೀನ ಕೊಡುವ ಆಶ್ವಾಸನವಿತ್ತರು.

ಇಬ್ರಾಹಿಮಪುರ– ಊರ ಪ್ರಮುಖರು ಸಾಲೆಯ ಸಹಕಾರೀ ಅಂಗಡಿಯ ಪ್ರಾರಂಭೋತ್ಸವದ ಕಾಲಕ್ಕೆ ಕುಡಿಯುವ ನೀರಿನ ಉಪಕರಣಗಳನ್ನು ಕೊಟ್ಟರು.

ದೇಣಿಗೆಗಳು

ತಮದಡ್ಡಿ– ದಿನಾಂಕ ೧೮-೧-೫೭ರಂದು ಶ್ರೀ ಶ್ರೀಶೈಲ ಜಗದ್ಗುರುಗಳು ಆಗಮಿಸಿ ವಾಚನಾಲಯಕ್ಕೆ ೨೫-೦-೦ ರೂ. ಗಳನ್ನು ಉದಾರ ದೇಣಿಗೆಯಾಗಿ ಕೊಟ್ಟರು; ಮುಂದಿನ ವರುಷದಿಂದ ೧೦ರೂಪಾಯಿಗಳನ್ನು ಕೊಡುವದಾಗಿ ವಾಗ್ದಾನ ಮಾಡಿದರು.

ನೀರಲಕೇರಿ ಗ್ರಾಮದ ಶ್ರೀ ಲ. ದ್ಯಾ. ಪಾಟೀಲರು ಅಲ್ಲಿಯ ವಾಚನಾಲಯಕ್ಕೆ 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯನ್ನು ಒಂದು ವರ್ಷದ ವರೆಗೆ ಉದಾರ ದೇಣಿಗೆಯಾಗಿ ಕೊಡಲು ಒಪ್ಪಿದ್ದಾರೆ.

ಯಲಗಚ್ಚ– ಹಿರೇಮಠ ಸ್ವಾಮಿಗಳವರು ಶಾಲೆಗೆ ತಮ್ಮ ಜಾಗೆಯನ್ನು ಪುಕ್ಕಟೆಯಾಗಿ ಕೊಡಲು ಹೇಳಿದ್ದಾರೆ ಮತ್ತು ಸ್ಥಳೀಯ ಶಾಲಾ ಸಮಿತಿಯವರು ಶ್ರಮರೂಪದಿಂದ ಗ್ರಾಮದವರು ಕೊಡಬೇಕಾದ ವಂತಿಗೆಯನ್ನು ಮುಟ್ಟಿಸುವದಾಗಿ ಒಪ್ಪಿರುವರು.

ಧುಂಡಸಿ– ಇಲ್ಲಿಯ ಕ. ಗಂ. ಸಾಲೆಗೆ ವ್ಹಿ. ಪಿ. ಸಿ.ಯವರು ಒಂದು ನೀರಿನ ಟಾಕಿ, ತಂಬಿಗೆ ಇತ್ಯಾದಿ ೫೦ ರೂಪಾಯಿಗಳ ಸಾಮಾನು ಕೊಡಿಸಿರುವರು.

ತದಲಬಾಗಿ– ಈ ಗ್ರಾಮದವರು ತಮ್ಮ ಸಾಲೆಗೆ ಒಂದು ದೊಡ್ಡ ಗಡಿಯಾರ ಹಾಗೂ ಜಾಂಗಟೆಯನ್ನು ಕೊಟ್ಟರು.

ಐರಣಿ– ಈ ಗ್ರಾಮದವರು ನೀರಿಗಾಗಿ ಬೇಕಾಗುವ ಸಾಧನ-ಸಾಮುಗ್ರಿಗಳನ್ನು ಕೊಡಿಸಿದರು; ಮತ್ತು ರಾಗದ ಪೆಟ್ಟಿಗೆಗಾಗಿ ೫೦ರೂಪಾಯಿ ಕೂಡಿಸಿ ಕೊಡುವದಾಗಿ ವಾಗ್ದಾನ ಮಾಡಿದರು.

ಸಂಗುಂದ– ಇಲ್ಲಿಯ ೧ನೆಯ ನಂ. ಕ. ಗಂ. ಸಾಲೆಗೆ ಶ್ರೀ ಕ. ಬಿ ಪಟ್ಟಣಶೆಟ್ಟಿಯವರು ೨ ರೂಪಾಯಿ ಬೆಲೆಯುಳ್ಳ ನಿಲುವುಗನ್ನಡಿ ಕೊಟ್ಟಿದ್ದಾರೆ.

ತಿಮ್ಮಾಪೂರ (ಹುನಗುಂದ)– ಲೇಖಕ ಸಹಕಾರಿ ಸಂಘದ ಸೆಕ್ರೆಟರಿಗಳಾದ ಶ್ರೀ ರಾಯಗೌಡರ ಅವರು ೧೦ರೂಪಾಯಿಗಳನ್ನು ಶಾಲೆಯ ಗಡಿಯಾರಕ್ಕಾಗಿ ಕೊಟ್ಟರು.

ಕೊಂಡಿಕೊಪ್ಪ– ಇಲ್ಲಿಯ ಸಾಲೆಗೆ ಶ್ರೀ ಎಸ್. ಸಿ. ಗೋಕಾವಿಯವರು ೫ ರೂಪಾಯಿ ಬಹುಮಾನವನ್ನು ಕೊಟ್ಟರು.

ಆಲಮೇಲ– ಇಲ್ಲಿಯ ಜ್ಞಾನೋದಯ ವಾಚನಾಲಯದ ಪುನರುಜ್ಜೀವನಕ್ಕಾಗಿ ಸ್ಥಳೀಯ ವಿದ್ಯಾಭಿಮಾನಿಗಳು ೧೩೩ ರೂಪಾಯಿಗಳನ್ನು ದೇಣಿಗೆ ಕೊಟ್ಟರು.

ಸೊರಟೂರ– ಇಲ್ಲಿಯ ಶಾಲೆಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳು "ಕಾರಸ್ಥಾನ" ನಾಟಕವನ್ನು ಆಡಿ ಕ. ಗಂ. ಸಾಲಯ ಜೀರ್ಣೋದ್ಧಾರಕ್ಕಾಗಿ ೬೧ ರೂ. ೮ ಆಣೆಗಳನ್ನು ಕೂಡಿಸಿದ್ದಾರೆ.

ಶಿರಕಾಡ– ಸ್ಥಳೀಯ ವಾಚನಾಲಯಕ್ಕೆ ಗ್ರಾಮ ಪಂಚಾಯತಿಯವರು ೨೫ ರೂ. ಕೊಟ್ಟದ್ದಲ್ಲದೆ ಊರ ಕೆಲವು ಪ್ರಮುಖರು ವೈಯಕ್ತಿಕವಾಗಿ ದೇಣಿಗೆ ಕೊಟ್ಟರು.

ಕಿರಸೂರ– ಪ್ರಜಾರಾಜ್ಯೋತ್ಸವದ ಕಾಲಕ್ಕೆ ಕೆಲ ದಾನಿಗಳು ಸಾಲೆಗೆ ದೊಡ್ಡ ಗಡಿಯಾರ, ನೀರಿನ ಟಾಕಿ, ತಂಬಿಗೆ, ಥಾಲಿ ಹಾಗೂ ೫೨ ರೂ. ಗಳನ್ನು ಕೊಡಲು ವಾಗ್ದಾನ ಮಾಡಿದರು.

ಚಿಕ್ಕಬೇವನೂರ– ಈ ಗ್ರಾಮದವರು ತಮ್ಮ ಸಾಲೆಗೆ ೮೭ ರೂ. ಗಡಿಯಾರವನ್ನು ಕೊಟ್ಟರು; ಶ್ರೀ ಭೀಮರಾವ ಪೋಲೀಸ ಪಾಟೀಲ ಅವರು ಸಾಲೆಗೆ ೫ ರೂ. ಕೊಡುವದಾಗಿ ಆಶ್ವಾಸನವಿತ್ತರು.

೧೯೫೭ನೆಯ ಇಸವಿಯಿಂದ ಪ್ರಾರಂಭವಾಗುವ
ಸಾಮಾನ್ಯ ಪ್ರಾ ಶಾ. ಪ್ರ. ಪರೀಕ್ಷೆಯ
ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

ಶೇಲಾರ ಕೃತ

ಪ್ರಾಥಮಿಕ ಭೂಮಿತಿ

[ಕ್ಷೇತ್ರಫಲ ಘನಫಲ ಸಹಿತ]
೪ ರಿಂದ ೭ನೆಯ ವರ್ಗದ ವರೆಗಿನ
ವಿಷಯವನ್ನೆಲ್ಲ ಒಳಗೊಂಡಿದೆ.

ಬೆಲೆ : ೧ರೂ. ೮ಆಣೆ ಮಾತ್ರ

ದೊರೆಯುವ ಸ್ಥಳ:–
ಸಾಯಿ ಪಬ್ಲಿಶಿಂಗ್ ಹಾವುಸ್,
ವಿಜಯ ರೋಡ, ಧಾರವಾಡ.

ನಮ್ಮ ಸಮಸ್ಯೆಗಳು

ಶ್ರೀ ಚಂ. ತಿ. ಭಟ್ಟ ಅಸಿ ಮಾಸ್ತರ ಧಾರೇಶ್ವರ ಇವರ ಪ್ರಶ್ನೆಗಳಿಗೆ ಉತ್ತರ—

ಪ್ರಶ್ನೆ:— ಪ್ರಾಯೋಗಿಕ ಒಕ್ಕಲುತನ ವಿಭಾಗದ ಅಭ್ಯಾಸ ಪತ್ರಿಕೆಯಲ್ಲಿ ೬-೭ ಇಯತ್ತೆಗಳಿಗೆ ವೈಯಕ್ತಿಕವಾಗಿ ಮಡಿಗಳನ್ನು ಹಂಚಬೇಕು ಎಂದಿದ್ದು ಅಂಥ ಸಂದರ್ಭದಲ್ಲಿ ಯಾವ ರೀತಿಯಿಂದ ಸಮವಾಯವನ್ನು ಹೊಂದಿಸಬೇಕು ? ಶಿಕ್ಷಕ ಮತ್ತು ವಿದ್ಯಾರ್ಥಿಗಳ ದಿನಚರಿಯ ಹೊಂದಿಕೆಯನ್ನು ಹೇಗೆ ಮಾಡಬೇಕು ?

ಉತ್ತರ:— ಕೆಲಸದ ಹಂಚಿಕೆಯು ವರ್ಗದಲ್ಲಿಯ ವಿದ್ಯಾರ್ಥಿಗಳ ಸಂಖ್ಯೆ, ಕೃಷಿ ಮಾಡಲಿಕ್ಕೆ ಸಿಕ್ಕ ಭೂಮಿ ಇವುಗಳನ್ನು ಅವಲಂಬಿಸಿರುವವಷ್ಟೇ ? ಎಲ್ಲ ವಿದ್ಯಾರ್ಥಿಗಳು ಏಕ ಕಾಲಕ್ಕೆ ಪ್ರಾಯೋಗಿಕ ಕೆಲಸದಲ್ಲಿ ತೊಡಗಿರುವದು ಸಾಧ್ಯವಿಲ್ಲದಾಗ ವರ್ಗದಲ್ಲಿ ಎರಡು ಭಾಗ ಮಾಡಿ ಅರ್ಧ ಹುಡುಗರಿಗೆ ಅವರು ಮುಂದೆ ಮಾಡಬೇಕಾಗಿರುವ ಕೆಲಸದ ವಿಷಯವಾಗಿ ಅವರ ವ್ಯವಹಾರ ಜ್ಞಾನವನ್ನನುಲಕ್ಷಿಸಿ ಪಾಠವನ್ನು ಕಲಿಸಬಹುದು; ಅಥವಾ ಶಿಕ್ಷಕನ ವಶದಲ್ಲ ಎರಡು ವರ್ಗಗಳಿದ್ದರೆ ಒಂದು ವರ್ಗವು ಪ್ರಾತ್ಯಕ್ಷಿಕೆಯಲ್ಲಿ ತೊಡಗಿದಾಗ ಇನ್ನೊಂದು ವರ್ಗಕ್ಕೆ ಪಾಠ ಕಲಿಸಬಹುದು; ಅರ್ಥಾತ್ ಪ್ರಾತ್ಯಕ್ಷಿಕೆಯಲ್ಲಿ ತೊಡಗಿದ ವರ್ಗದ ವಿದ್ಯಾರ್ಥಿಗಳು ತಮ್ಮ ಕೆಲಸವನ್ನು ತಿಳಿದುಕೊಂಡು ತಾವೇ ಮಾಡಹತ್ತಿದ ಮೇಲೆ ಶಿಕ್ಷಕನು ತನ್ನ ಸಂಬಂಧವು ಬೇರೆ ವಿದ್ಯಾರ್ಥಿಗಳೊಡನೆ ಬರುವಂತೆ ದಿನಚರಿಯನ್ನು ಬದಲಿಸಿಕೊಳ್ಳಬಹುದು; ಹಾಗಾಗುವವರೆಗೆ ಮೊದಲಿನ ವಿದ್ಯಾರ್ಥಿಗಳೊಡನೆ ಇದ್ದು ಅವರ ಕೆಲಸದಲ್ಲಿ ನೆರವಾಗಿ ಅವರು ಮಾಡುತ್ತಿರುವ ಕೆಲಸದ ಮೇಲ್ವಿಚಾರಣೆಯನ್ನು ವಹಿಸಬಹುದು.

ನವ್ಹಂಬರ ತಿಂಗಳ "ಪ್ರಾ. ಶಿಕ್ಷಣ" ದಲ್ಲಿ ಸಮವಾಯ ಶಿಕ್ಷಣದ ಬಗೆಗೆ ಸಾಮಾನ್ಯವಾಗಿ ಇದ್ದ ತಪ್ಪು ತಿಳವಳಿಕೆಯನ್ನು ದೂರ ಮಾಡಲಾಗಿದೆ. ಜೀವನ ಶಿಕ್ಷಣ ಸಮ್ಮೇಲನದ ವರದಿಯನ್ನು ಇನ್ನೊಮ್ಮೆ ಓದಿರಿ. ಸಮವಾಯದ ಪ್ರತಿಯೊಂದು ಪಾಠವೂ ಒಂದು ಪ್ರತ್ಯಕ್ಷ ಕಾರ್ಯಾಚರಣೆಯಿಂದಲೇ ಆರಂಭವಾಗಬೇಕೆಂಬ ನಿಯಮವಿಲ್ಲ. ಅದು ಒಂದೆರಡು ವಾರಗಳ ಮುಂದೆ ಮಾಡಬೇಕಾಗಿರುವ ಕಾರ್ಯಾಚರಣೆಗೆ ಸಂಬಂಧಿಸಿಯಾಗಲಿ, ಒಂದೆರಡು ವಾರಗಳ ಹಿಂದೆ ಮಾಡಿದ ಕೆಲಸಕ್ಕೆ ಸಂಬಂಧಿಸಿಯಾಗಲಿ– ಹೀಗೆ ಅಪ್ರತ್ಯಕ್ಷವಾಗಿ ಕಾರ್ಯಾಚರಣೆಗೆ ಸಂಬಂಧಿಸಿರಬಹುದು.

ಇನ್ನು ವರ್ಗದ ವಿದ್ಯಾರ್ಥಿಗಳ ಗುಂಪುಗಳು ಬೇರೆ ಬೇರೆ ಮಡಿಗಳಲ್ಲಿ ಬೇರೆ ಬೇರೆ ಧಾನ್ಯಗಳನ್ನಾಗಲಿ, ಕಾಯಿಪಲ್ಯಗಳನ್ನಾಗಲಿ ಬಿತ್ತಿ ಬೆಳೆದುಕೊಳ್ಳುತ್ತಿದ್ದರೂ ಅದಕ್ಕೆ ಅಪ್ರತ್ಯಕ್ಷವಾಗಿ ಸಂಬಂಧಿಸಿದ ಸಾದಾ ಪಾಠಗಳಲ್ಲಿ ಶಿಕ್ಷಕರು ಅವರೆಲ್ಲರ ತೊಂದರೆಗಳನ್ನು ಉಲ್ಲೇಖಿಸಿ ಅವರೆಲ್ಲರಿಗೂ ತಮ್ಮ ತಮ್ಮ ಕೆಲಸದಲ್ಲಿ ಆಸ್ಥೆಯುಂಟಾಗುವಂತೆ ಸಾಮಾನ್ಯವಾಗಿ ಪಾಠವನ್ನು ತಕ್ಕೊಳ್ಳಬೇಕು.

ಪ್ರಶ್ನೆ:— ೨, ೩, ೪ ವರ್ಗಗಳು ಒಬ್ಬ ಶಿಕ್ಷಕನ ಕಡೆಗಿರುವಾಗ ಸಮವಾಯವನ್ನು ಹೇಗೆ ಸಾಗಿಸಬೇಕು ?

ಉತ್ತರ:— ಸಮವಾಯ ಶಿಕ್ಷಣ ಬರುವುದಕ್ಕೆ ಪೂರ್ವದಲ್ಲಿ ಹೇಗೆ ಒಬ್ಬನೇ ಶಿಕ್ಷಕನು ಮೂರು ವರ್ಗಗಳಿಗೆ ಕೂಡಿ ಕಲಿಸುತ್ತಿದ್ದನೋ ಅದೇ ತಂತ್ರವು ಸಮವಾಯ ಪಾಠಗಳಿದ್ದಾಗಲೂ ಅನ್ವಯಿಸುವದು. ವರ್ಷದಲ್ಲಿ ಕಲಿಸಬೇಕಾದ ಒಟ್ಟು ಪಾಠಗಳಲ್ಲಿ ಪ್ರತ್ಯಕ್ಷ ಚಟುವಟಿಕೆಯಿಂದ ಆರಂಭಿಸುವ ಪಾಠಗಳು ಪ್ರತಿಶತ ೨೫ ಇದ್ದರೆ ಅಪ್ರತ್ಯಕ್ಷವಾಗಿ ಆ ಚಟುವಟಿಕೆಗಳನ್ನು ಹಿನ್ನೆಲೆಯಲ್ಲಿಟ್ಟುಕೊಂಡು ಪ್ರತಿಶತ ೭೫ ಪಾಠಗಳು ಸಾದಾ ಪಾಠಗಳಂತೆಯೇ ನಡೆಯುವವಾದಕಾರಣ ಅದಕ್ಕೂ ಬಹಳ ಹೆಚ್ಚಿನ ಕಷ್ಟವು ಸಮವಾಯವನ್ನು ಸಾಗಿಸುವಾಗ ಆಗಲಾರದು; ಏನಾದರೂ ಬದಲಾವಣೆಯಾದಿಗೆ ಅವ್ಯವಹಾರ್ಯವಾದ, ವ್ಯವಹಾರೋಪಯುಕ್ತವಲ್ಲದ ಬರಿಯ ಪುಸ್ತಕೀ ಜ್ಞಾನದ ಪಾಠಗಳು ಹೋಗಿ ಬಿಡುವವಷ್ಟೇ ?

Regd. No. B. 537

ಸಹಜ ಸಾಹಿತ್ಯ ! ★ **ಜ್ಞಾನರಸ ಸಾಹಿತ್ಯ** ★ ಶಾಶ್ವತ ಸಾಹಿತ್ಯ

ಮಾಸಿದ ತಲೆಯನ್ನು ಮಡಿಮಾಡುವ ಪವಿತ್ರ ಸಾಹಿತ್ಯ ! !

ಪ್ರತಿಯೊಂದು ವಾಚನಾಲಯದ ಬೆಲೆಯನ್ನು ಹೆಚ್ಚಿಸುವ ಪ್ರಭಾವೀ ಗ್ರಂಥಗಳು.

೧.	ಪವಿತ್ರ ಜೀವನ (ಟಾಲಸ್ಟಾಯರ ಜಗದ್ವಿಖ್ಯಾತ ಕಥಾಸಂಗ್ರಹ)	....	೧- ೨-
೨.	ಸುಂದರ ಕಥೆಗಳು (ಪಾಂಡಿಚೇರಿ ಆಶ್ರಮದ ಶ್ರೀ ತಾಯಿಯವರು ಹೇಳಿದವು)	....	೧- ೪-
೩.	ಸಪ್ತಪದಿ (ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಏಕಾಂಕಗಳು)	....	೧- ೪-
೪.	ದೀಪವರ್ತಿ (ಶ್ರೀ ಅರವಿಂದರ ೨ ಉಜ್ವಲ ಕಥೆಗಳು)	....	೦- ೬-
೫.	ಶ್ರೀ ಅರವಿಂದರು (ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ)	....	೧- ೮-
೬.	ಮುಗಿಲ ಜೇನು (ಉತ್ಸಾಹದಾಯಕವಾದ ಕವನ ಸಂಕಲನ)	....	೧- ೮-
೭.	ಪೂಜಾ (ನಿತ್ಯ ಪಠನೀಯವಾದ ಗದ್ಯ ಗೀತೆಗಳು)	....	೦-೧೨-
೮.	ಭಾರತದ ಭವ್ಯಸಿದ್ಧತೆ (ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ)	....	೧- ೦-
೯.	ಬೆಟ್ಟದ ಹೊಳೆ (ಪ್ರಗತಿಗಾಮಿಯಾದ ಕಾದಂಬರಿ)	....	೧- ೪-
೧೦.	ಸ್ವರ್ಗದೋಲೆಗಳು (ಕರ್ನಾಟಕ ಸಂಸ್ಕೃತಿಯ ಕನ್ನಡಿ)	....	೧- ೮-
೧೧.	ಕನ್ನಡ ಕುಲದೀಪ ಬಸವಣ್ಣ (ಉದಿತ ಜೀವನಕ್ಕೆ ಕೈಗೋಲು)	....	೧- ೪-
೧೨.	ಗರತಿಯ ಬಾಳು (ನಿತ್ಯ ಜೀವನದ ರಸಘಟ್ಟಿ)	....	೧- ೪-
೧೩.	ಆರ್ಯದೇಶಭಕ್ತಿ (ಧ್ಯೇಯ ಜೀವಿಗೆ ಈಸುಗುಂಬಳ)	....	೦- ೩-
೧೪.	ಜೀವನ ದೃಷ್ಟಿ (ವಿವಿಧ ಪ್ರಬಂಧಗಳು)	....	೧- ೨-
೧೫.	ದತ್ತ ಸಾಹಿತ್ಯ (ಶ್ರೀ ಬೇಂದ್ರೆ ಸಾಹಿತ್ಯ ಪರಿಚಯ)	....	೧- ೮-

ಇವಲ್ಲದೆ ಶ್ರೀ ಅರವಿಂದ ಮಹಾಯೋಗಿಗಳ ವಿವಿಧ ಸಾಹಿತ್ಯ ಗ್ರಂಥಗಳೂ ನಮ್ಮಲ್ಲಿ ಯೋಗ್ಯ ಬೆಲೆಗೆ ಸಿಗುತ್ತ ಹತ್ತು ರೂ.ಗಿಂತ ಹೆಚ್ಚಿನ ಬೆಲೆಯ ಪುಸ್ತಕ ಕೊಂಡುಕೊಳ್ಳುವವರ ಅಂಚೆ ವೆಚ್ಚವನ್ನು ನಾವೇ ನೋಡಿಕೊಳ್ಳುವೆವು.

ಶ್ರೀ ಅರವಿಂದ ಗ್ರಂಥಾಲಯ ಪೋ:— ಚಡಚಣ ಜಿ. ವಿಜಾ

— ಬಾಲ ವಾಚನಾಲಯಗಳ ಬೆಲೆ ಹೆಚ್ಚಿಸುವ, ಕನ್ನಡ ಕಂದನು ಕಾದಿಡುವ ಅಮೌಲ್ಯ ಕೃತಿಗಳು

ಪ್ರಾಥಮಿಕ ಶಿಕ್ಷಕರಿಂದ ನಡೆಸಲ್ಪಡುವ, ಒಂದೇ ಒಂದಾದ ಪ್ರಾಥಮಿಕ ಶಿಕ್ಷಕರ ಪ್ರೋತ್ಸಾಹನಾರ್ಥ ತೆರೆದ ಸಮಿತಿಯಿಂ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗಾಗಿಯೇ ಹೆಣೆದ

ಪುಟಚೆಂಡು - ಕವಿತಾ ಸಂಕಲನ

ಭಾಗ–೧. ೧೨೪, ಭಾಗ–೨. ೧೦೪ ಜನರ ಕವಿತೆಗಳು

ಆಣೆಕಲ್ಲು - ಕಥಾ ಸಂಕಲನ

ಭಾಗ–೧. ೪೦, ಭಾಗ -೨. ೩೬ ಜನರ ಕಥೆ

ಭಾಗ ೧ – ೧ ರಿಂದ ೪, ೨ – ೫ ರಿಂದ ೭ ವರ್ಗಕ್ಕೆ ಬೆಲೆ ೧೨ ಆಣೆಯಂತೆ ಉತ್ತರದ ಶ್ರೀ ಬೇಂದ್ರೆಯವರಿಂದ ದಕ್ಷಿ ಕುವೆಂಪು, ಪೂರ್ವದ ಶ್ರೀ ಕಾವ್ಯಾನಂದರಿಂದ ಪಶ್ಚಿಮದ ಗೋವಿಂದ ಪೈ ಅವರ ವರೆಗಿನ ೩೦೦ ಜನ ಲೇಖಕರ ವಿ ಕೃತಿ, ಪ ವ್ಯಕ್ತಿ ಪರಿಚಯಗಳನ್ನೂ ಒಂದೇ ಕಡೆಗೆ ಕಾಣಬೇಕೆಂದಿದ್ದರೆ, ಶಿಕ್ಷಕರಿಗೆ ಬೆಂಬಲ ನೀಡಲು ಇಂದೇ ಬರೆಯಿ ವಿದ್ಯಾರ್ಥಿಗಳಿಗೆ ಅಂಚೆ ವೆಚ್ಚ ಉಚಿತ.

— ಶಿಕ್ಷಕರಿಗೆ ಬೆಂಬಲನೀಡಿ ಸೇವೆ ತಕ್ಕೊಳ್ಳಬೇಕಾಗಿ ಬಿನ್ನಹ.

ಭಾರತೀ ಸಾಹಿತ್ಯ ಭಂಡಾರ ಯರ

ಅಂಚೆ :— ಮನಗೋಳಿ— ಜಿ. ವಿಜಾಪು

Printed by Shri S. F. Kattimani at Manohar Power Printing Press, Hubli. Edited Published by Sjts S. P. Patil, B. M. Shintri, S. R. Tatti & Smti. P. A. Bhaskar at the Kan Prathamik Shikshan Office, Govt. Training College for Men. Dharwar.

ಕನ್ನಡ

ಪ್ರಾಥಮಿಕ ಶಿಕ್ಷಣ



ಮುಖ್ಯ ಮಂತ್ರಿ ಶ್ರೀ ಮುರಾರಜಿ ದೇಸಾಯಿ ಅವರು

ತಬಕದ ಹೊನ್ನಿಹಳ್ಳಿ ಸಾಲೆಯ ವಿದ್ಯಾರ್ಥಿಗಳೂ ಶಿಕ್ಷಕರೂ
ಹಂಪೆಯ ಪ್ರವಾಸ ಕೈಕೊಂಡಾಗ ತೆಗೆದುಕೊಂಡ ಕೆಲವು ದೃಶ್ಯಗಳು.



ವಿರೂಪಾಕ್ಷ ದೇವರ ಗುಡಿಯ ಮಹಾದ್ವಾರ



ವಿಜಯ ವಿಠ್ಠಲನ ಕಲ್ಲಿನ ತೇರು

ಪುರಂದರದಾಸರ ಮಂಟಪದ ಎದುರು ಹೊಳೆಯಲ್ಲಿಯ ಕಲ್ಲು ಬಂಡೆಯ ಮೇಲೆ
ವಿದ್ಯಾರ್ಥಿಗಳು ಮತ್ತು ಗುರುಗಳು.

ಕನ್ನಡ ಪ್ರಾಥಮಿಕ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : **ಶ್ರೀ ಕೆ. ಬಿ. ತೇರಗಾಂವಕರ,** ಬಿ.ಎಸ್‌ಸಿ. (ಆನರ್ಸ), ಬಿ.ಟಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : **ಶ್ರೀ ಎಸ್. ಪಿ. ಪಾಟೀಲ,** ಬಿ.ಎ., ಬಿ.ಟಿ., ಡಿ.ಪಿ.ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ಹಾಗು ಗೌ. ಕಾರ್ಯದರ್ಶಿ
ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೧ | **ಮಾರ್ಚ ೧೯೫೬** | **ಸಂಚಿಕೆ ೧೦**

— ಪರಿವಿಡಿ —

೧. ಸಂಪಾದಕೀಯ ೨

೨. ಜೀವನ ಶಿಕ್ಷಣ ವಾರ್ತೆಗಳು — ಶ್ರೀಮತಿ ಪಿ. ಎ. ಭಾಸ್ಕರ ೪

೩. ಶ್ರೀ ದಿನಕರಭಾಯಿ ನರಭೇರಾಮ ದೇಸಾಯಿಯವರು — ಶ್ರೀ ಶಿಂತ್ರಿ ಬಸಪ್ಪನವರು ೫

೪. ಸುಗ್ಗಿಯ ಸಂಪ್ರದಾಯಗಳು — ಡಾ. ಬಿ. ಎಸ್. ಗದ್ದಗಿಮಠ ೭

೫. ಮೂಲ ಶಿಕ್ಷಣದ ಅರಿವು — ಶ್ರೀ ಶಿಂತ್ರಿ ಬಸಪ್ಪನವರು ೧೨

೬. ಕೃತಿಮೂಲ ಶಿಕ್ಷಣದ ಪ್ರಾಚೀನತೆ — ಶ್ರೀ ಮ. ಗ. ಯಾಜಿ, ಇಡಗುಂಜಿ ೧೪

೭. ಮಹಮ್ಮದೀಯ ಧರ್ಮದ ಉದಯ ಮತ್ತು ಬೆಳವಣಿಗೆ — ಶ್ರೀ ತಟ್ಟಿ ಶಾಮರಾಯರು ೧೮

೮. ಶಿಕ್ಷಣದಿಂದ ಮಾನವ ಪ್ರಗತಿ — ಶ್ರೀ ಶಿಂಪಿ ಲಿಂಗಣ್ಣ, ಚಡಚಣ ೨೦

೯. ಶಾಲೆಗಳಲ್ಲಿ ಮೂಲೋದ್ಯೋಗದ ಸಂಘಟನೆ — ಶ್ರೀ ಹು. ಹ. ಸಿಗ್ಗಾವ ೨೨

೧೦. ಪ್ರಾ. ಶಾಲಾ ಪ್ರಮಾಣ ಪತ್ರ ಪರೀಕ್ಷೆಯ ತಿದ್ದುಪಡೆಯಾದ ಕಾರ್ಯಕ್ರಮ ೨೫

೧೧. ಪ್ರಾ. ಶಿಕ್ಷಕರ ಪ್ರಮಾಣ ಪತ್ರ ಪರೀಕ್ಷೆಯ ವೇಳಾಪತ್ರಿಕೆ ೨೭

೧೨. ಪ್ರಾ. ಶಿಕ್ಷಣ ಪ್ರಪಂಚ ೨೮

ಹಂಪೆಯ ದೃಶ್ಯಗಳು .... **ಹೊದಿಕೆ ಪುಟ** ೨

ಜೀವನ ಶಿಕ್ಷಣ (ಕವನ) — ಶ್ರೀ ಶಿ. ಈ. ಕನ್ನೂರ ” ೩

ಸಂಪಾದಕೀಯ

ಮುಂಬಯಿ ರಾಜ್ಯದ ಮುಖ್ಯ ಮಂತ್ರಿಗಳ ಷಷ್ಠ್ಯಬ್ದಿ ಸಮಾರಂಭ

ಫೆಬ್ರುವರಿ ತಿಂಗಳ ೨೯ ರಂದು ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಮೊರಾರಜಿಯವರಿಗೆ ೬೦ ವರುಷಗಳು ತುಂಬಿ ಅವರು ೬೧ರಲ್ಲಿ ಕಾಲಿಟ್ಟರು. ಅಂದು ರಾಜಧಾನಿಯಲ್ಲಿ ಅವರ ಜಯಂತಿಯ ಕಾರ್ಯಕ್ರಮಗಳು ಬಹು ವಿಜೃಂಭಣೆಯಿಂದ ಜರುಗಿದವು. ಅವರನ್ನು ಅಭಿನಂದಿಸುವ ಸಹಸ್ರಾರು ಶುಭ-ಸಂದೇಶಗಳೂ ತಂತಿಗಳೂ ಬಂದವು. ಭಾರತದಲ್ಲೆಲ್ಲ ಸಂಪತ್ತಿಗೆ ಹೆಸರಾದ ಮುಂಬಯಿ ರಾಜ್ಯದ ಮುಖ್ಯ ಮಂತ್ರಿಯೆಂದೂ ರಾಜಕಾರಣದಲ್ಲಿ ಮಹಾತ್ಮಾಜಿಯವರ ಶ್ರೇಷ್ಠ ಅನುಯಾಯಿಗಳೆಂದೂ, ರಾಷ್ಟ್ರ ಸಭೆಯ ಸಂಘಟನೆಯ ಕಾರ್ಯದಲ್ಲಿ ದಿವಂಗತ ಸರದಾರರ ಹೆಜ್ಜೆಯನ್ನು ತುಳಿಯುವವರೆಂದೂ, ಬಲ್ಲಿದ ಆಡಳಿತಗಾರರೆಂದೂ ಅವರು ಹೆಸರಾಗಿದ್ದಾರೆ. ಮುಂಬಯಿಯಂಥ ದೊಡ್ಡ ರಾಜ್ಯದ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಕಾರ್ಯನಿರ್ವಹಣೆಯಲ್ಲಿ ಸತ್ಯ, ಸರಳತೆ, ಹಾಗೂ ನ್ಯಾಯಗಳಿಗೆ ಯಾವುದೂ ಅಡ್ಡಬರದಂತೆ ನೋಡುವಾಗ ಪಕ್ಷ ಪಂಗಡಗಳ ಕಹಿಯಾದ ಟೀಕೆಗೂ ಅಳುಕುವವರಲ್ಲೆಂಬುದು ಜಗತ್ಪ್ರಸಿದ್ಧವಾಗಿದೆ. ಆದುದರಿಂದಲೇ ರಾಜಕಾರಣದಲ್ಲಿಯ ಇವರ ವಿರೋಧಿಗಳೂ ಸಹ ಇವರ ಆಡಳಿತವನ್ನು ಶ್ಲಾಘಿಸುತ್ತಿರುವರು. ಕರ್ತವ್ಯ ದಕ್ಷತೆಯಲ್ಲಿ ಇವರನ್ನು ಮೀರುವವರು ವಿರಳ. ಇವರೊಬ್ಬ ಕರ್ಮಯೋಗಿಗಳಾಗಿದ್ದಾರೆ. ಭವ್ಯ ಭಾರತವನ್ನು ನಿರ್ಮಿಸುವ ಕಾರ್ಯದಲ್ಲಿ ಇವರು ಪ್ರಮುಖ ಪಾತ್ರವನ್ನು ವಹಿಸುವರು. ಅದ್ದರಿಂದ ಅವರಿಗೆ ಆರೋಗ್ಯ ಸಂಪತ್ತು ವೃದ್ಧಿಯಾಗಲೆಂದೂ ಅವರ ಜನ್ಮ ದಿನಗಳು ಅನಂತವಾಗಿ ಬರಲೆಂದೂ ನಾವು ದೇವರಲ್ಲಿ ಪ್ರಾರ್ಥಿಸುವೆವು.

ವಿದ್ಯಾದಾನವೇ ಮಿಗಿಲಾದ ದಾನ

ಹೋದ ತಿಂಗಳು ಮುಂಬಯಿಯಲ್ಲಿ ಸಮಾಜ ಶಿಕ್ಷಣದ ೭ನೆಯ ಸಪ್ತಾಹವನ್ನು ಉದ್ಘಾಟಿಸುತ್ತ ನಮ್ಮ ರಾಜ್ಯಪಾಲರಾದ ಡಾ. ಹರೆಕೃಷ್ಣ ಮಹತಾಬರವರು ಭಾರತದ ಇಂದಿನ ಪರಿಸ್ಥಿತಿಯಲ್ಲಿ ಶಿಕ್ಷಣ ಪ್ರಸಾರದ ಅವಶ್ಯಕತೆಯನ್ನು ಎತ್ತಿ ತೋರಿಸಿ ಸಮಾಜ ಸೇವೆಗಾಗಿ ವಿದ್ಯಾರ್ಥಿಗಳು ಮುಂದೆ ಬರಬೇಕೆಂದು ಸೂಚಿಸಿದರು. ಪ್ರಜಾಪ್ರಭುತ್ವದ ಮಹಾಪ್ರಯೋಗ ನಡೆದಾಗ ವಿದ್ಯಾದಾನವು ಭೂದಾನ ಶ್ರಮದಾನಗಳಿಗಿಂತ ಹೆಚ್ಚು ಅವಶ್ಯವಾಗಿದೆಯೆಂದು ಅವರು ಹೇಳಿದರು. ಜನತೆಗೆ ಎಷ್ಟು ಬೇಗ ಶಿಕ್ಷಣ ದೊರೆಯುವದೆಂಬುದರ ಮೇಲೆಯೇ ಪ್ರಜಾಸತ್ತೆಯ ಯಶಸ್ಸು ಅವಲಂಬಿಸಿದೆ. ಹತ್ತಿಪ್ಪತ್ತು ಕೋಟಿ ಮತದಾರರಲ್ಲಿ ನಿರಕ್ಷರಿಗಳೇ ಹೆಚ್ಚಿದ್ದಾಗ ಪ್ರಜಾಸತ್ತಾತ್ಮಕ ರಾಜ್ಯ ಪದ್ಧತಿಯು ಸುವ್ಯವಸ್ಥೆಯಿಂದ ನಡೆಯಲಾರದೆಂದು ರಾಜನೀತಿಜ್ಞರು ಅಭಿಪ್ರಾಯಪಡುತ್ತಾರೆ. ಒಂದು ವೇಳೆ ನಮ್ಮ ದೇಶದಲ್ಲಿ ಶತಮಾನಗಳಿಂದ ನಡೆದು ಬಂದ ಉಜ್ವಲ ಪರಂಪರೆಯೂ ಸತ್ಸಂಪ್ರದಾಯಗಳೂ ಗಣರಾಜ್ಯ ಪದ್ಧತಿಗೆ ಅನುಕೂಲವಾಗಿದ್ದರೂ ಇವೆಲ್ಲದರ ಜೊತೆಗೆ ನೂತನ ಸಮಾಜದ ಅತ್ಯಗತ್ಯವಾದ ಬೇಡಿಕೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವಷ್ಟು ಶಿಕ್ಷಣವು ದೊರೆತರೆ ಪ್ರಜಾಪ್ರಭುತ್ವಕ್ಕೆ ಭಯವಿಲ್ಲೆಂದು ಅವರು ಅಭಿಪ್ರಾಯಪಟ್ಟರು ನಮ್ಮ ಪ್ರದೇಶದಲ್ಲಿ ವಿದ್ಯಾದಾನಕ್ಕೆ ಮೊದಲಿನಿಂದಲೂ ಪ್ರಾಶಸ್ತ್ಯವಿದೆ. ಅದೊಂದು ಪವಿತ್ರ ಕಾರ್ಯವೆಂದು ನಮ್ಮ ಪೂರ್ವಜರು ಭಾವಿಸಿದ್ದರು. ಶಿಕ್ಷಣ ಪ್ರಸಾರದ ಪವಿತ್ರ ಕಾರ್ಯವು ತೀವ್ರಗತಿಯಿಂದ ಸಾಧಿಸಬೇಕಾದರೆ ಇಡೀ ಸಮಾಜವು ಸಹಕರಿಸುವದು ಅತ್ಯವಶ್ಯ. ವಿದ್ಯಾರ್ಥಿಗಳು ಮುಂದೆಬಂದು ವಿದ್ಯಾದಾನದ ಕಾರ್ಯದಲ್ಲಿ ಸಹಕರಿಸಿ ನಿರಕ್ಷರತೆಯ ಭೂತವನ್ನು ಹೊಡೆದೋಡಿಸಬೇಕೆಂದು ರಾಜ್ಯಪಾಲರು ಆಶಿಸಿದರು.

ಇರಾಣ ರಾಜದಂಪತಿಗಳ ಭಾರತ ಸಂಚಾರ

ಇರಾಣದ ರಾಜದಂಪತಿಗಳು ಭಾರತ ಸರಕಾರದ ಬಿನ್ನಹದ ಮೇರೆಗೆ ಕಳೆದ ತಿಂಗಳ ೧೬ ರಂದು ಭಾರತಕ್ಕೆ ಆಗಮಿಸಿದರು. ಅವರು ಅಂದಿನಿಂದ ನಮ್ಮ ದೇಶದಲ್ಲಿಸಂಚರಿಸುತ್ತಿದ್ದಾರೆ. ಅವರಿಗೆ ಹೋದಹೋದಲ್ಲೆಲ್ಲ ಸಂಭ್ರಮದ ಸ್ವಾಗತಗಳು ನಡೆದವು. ರಾಜದಂಪತಿಗಳು ತಮ್ಮ ಸಂಗಡ ತಮ್ಮ ಸರಕಾರ ಹಾಗು ಪ್ರಜೆಗಳ ಸದಿಚ್ಛೆಗಳನ್ನು ಭಾರತೀಯರಿಗಾಗಿ ತಂದಿದ್ದಾರೆ. ಭಾರತಕ್ಕೂ ಇರಾಣಕ್ಕೂ

ಶತಮಾನಗಳಿಂದಲೂ ಭದ್ರವಾದ ಸಂಬಂಧಗಳುಂಟು. ಕೆಲವು ಶತಮಾನಗಳ ಹಿಂದೆ ಪರ್ಶಿಯನ್ ಭಾಷೆಯು ಉತ್ತರ ಹಿಂದುಸ್ತಾನದಲ್ಲಿ ಮಹತ್ವದ ಭಾಷೆಯಾಗಿತ್ತು. ಹೀಗಾಗಿ ಇರಾಣ ಹಾಗು ಭಾರತದ ಸಂಬಂಧಗಳು ಉಳಿದ ಎಷ್ಟೋ ದೇಶಗಳಿಗಿಂತ ಹಳೆಯವಾಗಿವೆ. ಆ ದೇಶವು ಒಳ್ಳೇ ಆಯಕಟ್ಟಿನ ಕ್ಷೇತ್ರವಾಗಿರುವದರಿಂದ ಅದಕ್ಕೆ ಹೆಚ್ಚಿನ ಮಹತ್ವ ಬಂದಿದೆ. ವಿಶ್ವಶಾಂತಿ ಸ್ಥಾಪನೆಯ ಮಹಾಕಾರ್ಯದಲ್ಲಿ ನೆಹರೂರವರ ನಿಲುವೆಗೆ ಇರಾಣದ ಬೆಂಬಲವು ದೊರೆತಲ್ಲಿ ಪೌರ್ವಾತ್ಯ ರಾಜಕಾರಣದ ಸಮಸ್ಯೆಗಳೆಷ್ಟೋ ಸಹಜವಾಗಿ ಬಗೆಹರಿಯಬಲ್ಲವು. ಮೂರು ವಾರಗಳ ಸಂಚಾರದಲ್ಲಿ ಅವರು ಅನೇಕ ಸಂಘ ಸಂಸ್ಥೆಗಳನ್ನೂ ಪ್ರಮುಖ ಭಾರತೀಯರನ್ನೂ ಸಂದರ್ಶಿಸಿದಾಗ ಇರಾಣ ಹಾಗು ಇರಾಣಿಯರ ಬಗೆಗೆ ಭಾರತದ ಸ್ನೇಹಭಾವನೆ ಹಾಗೂ ಉದಾರಾಭಿಮಾನಗಳನ್ನು ಕಂಡಿರಲು ಸಾಕು. ರಾಜದಂಪತಿಗಳ ಭಾರತ ದರ್ಶನದಿಂದ ಇವೆರಡೂ ರಾಷ್ಟ್ರಗಳಲ್ಲಿದ್ದ ಸ್ನೇಹ ಸಂಬಂಧಗಳು ಇನ್ನಷ್ಟು ಭದ್ರವಾಗಿ ವಿಶ್ವಶಾಂತಿ ಸ್ಥಾಪನೆಯ ಕಾರ್ಯದಲ್ಲಿ ಪರಸ್ಪರ ಪೂರಕವಾಗುವದರಲ್ಲಿ ಯಾವ ಸಂಶಯವೂ ಇಲ್ಲ. 'ವಿದೇಶ ನೀತಿ ಯಾವುದೇ ಇರಲಿ ಶಾಂತಿ ರಕ್ಷಣೆ ನಮ್ಮ ಧ್ಯೇಯ' ವೆಂದೂ 'ಜಗತ್ತಿನ ಶಾಂತಿಯನ್ನು ರಕ್ಷಿಸಲು ಇರಾಣ ಹಾಗು ಭಾರತದ ಸಾಮಾನ್ಯ ಯತ್ನಗಳಾಗಿವೆ'ಯೆಂದೂ ರಾಜರು ಮುಂಬಯಿಯಲ್ಲಿ ತಮ್ಮ ಭಾಷಣಗಳಿಂದ ಸ್ಪಷ್ಟಮಾಡಿದ್ದಾರೆ. ರಾಜದಂಪತಿಗಳಿಬ್ಬರೂ ಭಾರತೀಯರ ಆದರಾತಿಥ್ಯ ಹಾಗು ಸದ್ಭಾವನೆಗಳಿಂದ ತುಂಬಿದವರಾಗಿ ತಮ್ಮ ದೇಶಕ್ಕೆ ಸೌಖ್ಯಕರವಾಗಿ ಮರಳುವರೆಂದು ಆಶಿಸುವೆವು.

ಶ್ರೇಷ್ಠ ಭಾರತೀಯರಿಬ್ಬರ ಕಣ್ಮರೆ

ಪ್ರಜಾ ಸೋಶಿಯಾಲಿಸ್ಟ ಪಕ್ಷದ ಅಧ್ಯಕ್ಷರಾದ ಆಚಾರ್ಯ ನರೇಂದ್ರದೇವರು ಕಳೆದ ತಿಂಗಳ ೧೯ ರಂದು ತಮ್ಮ ಇಹಲೋಕ ಯಾತ್ರೆಯನ್ನು ಮುಗಿಸಿದ್ದರಿಂದ ರಾಷ್ಟ್ರಕ್ಕೆ ಅತೀವ ದುಃಖವಾಗಿದೆ. ಆಚಾರ್ಯರಿಗೆ ಅಸ್ತಮಾ ರೋಗವು ಬಹಳ ದಿನಗಳಿಂದ ಗಂಟುಬಿದ್ದಿದ್ದು ನಿಜವಾಗಿದ್ದರೂ ಅವರು ಅದಕ್ಕೆ ಇಷ್ಟು ಬೇಗನೆ ಆಹುತಿಯಾಗಬಹುದೆಂದು ಯಾರಿಗೂ ಅನಿಸಿರಲಿಲ್ಲ. ಆದುದರಿಂದ ಅವರ ಮರಣ ಸುದ್ದಿಯು ಎಷ್ಟು ದುಃಖದಾಯಕವೋ ಅಷ್ಟೇ ಆಶ್ಚರ್ಯವೂ ಆಗಿದ್ದಿತು. ಪಾಂಡಿತ್ಯ, ಶೀಲ, ತ್ಯಾಗ, ಕರ್ತವ್ಯದಕ್ಷತೆ ಹಾಗು ರಾಷ್ಟ್ರಭಕ್ತಿಗಳಿಂದ ತುಂಬಿದ ಜೀವನವು ಅವರದಾಗಿತ್ತು. ರಾಜಕಾರಣವಿರಲಿ, ವಿಶ್ವವಿದ್ಯಾಲಯಗಳ ಆಡಳಿತವಿರಲಿ ಇಲ್ಲವೆ ಜ್ಞಾನಕ್ಷೇತ್ರವಿರಲಿ ತತ್ವನಿಷ್ಠೆಗೆ ಚ್ಯುತಿಬರದಂತೆ ನಡೆದದ್ದೇ ಅವರ ವೈಶಿಷ್ಟ್ಯ. ಆದುದರಿಂದಲೇ ಅವರು ಎಲ್ಲರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು. ಶ್ರೇಷ್ಠ ಬರೆಹಗಾರರೆಂದೂ ಶಿಕ್ಷಣ ತಜ್ಞರೆಂದೂ ಹೆಸರಾಗಿದ್ದರು. ಭಾರತದ ಪ್ರಾಚೀನ ಇತಿಹಾಸದ ಬಗ್ಗೆ ಅವರು ಆಳವಾದ ಅಭ್ಯಾಸವನ್ನು ಮಾಡಿದ್ದರು. ಬೌದ್ಧ ಸಾಹಿತ್ಯದಲ್ಲಿಯೂ ಪಾಂಡಿತ್ಯವನ್ನು ಗಳಿಸಿದ್ದರಲ್ಲದೆ ಬೌದ್ಧ ತತ್ವ ವಿಚಾರದಲ್ಲಿ ಗ್ರಂಥವನ್ನು ರಚಿಸಿದ್ದರು. ಅವರು ಇಂಗ್ಲೀಷ ಭಾಷೆಯಲ್ಲಿಯೂ ಸಹ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಈ ರೀತಿಯಾಗಿ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ದುಡಿದು ಅಮೋಘವಾದ ಸೇವೆಯನ್ನು ಸಲ್ಲಿಸಿದ ಆಚಾರ್ಯರ ಮರಣದಿಂದ ಭಾರತಕ್ಕೆ ಆದ ಅಪಾರವಾದ ಹಾನಿಯ ಬಗ್ಗೆ ದೇಶದಾದ್ಯಂತ ಕೊರಗು ನಡೆದಾಗಲೇ ಇನ್ನೊಂದು ಭಾರತದ ರತ್ನವು ಕಣ್ಮರೆಯಾಯಿತು.

ಲೋಕಸಭೆಯ ಪಿತಾಮಹರೆಂದು ಪ್ರಸಿದ್ಧರಾದ ಶ್ರೀ ಮಾವಳಣಕರರು ಹೋದ ತಿಂಗಳ ದಿನಾಂಕ ೨೭ ರಂದು ಸ್ವರ್ಗಸ್ಥರಾದರು. ಅವರಿಲ್ಲದ ಲೋಕಸಭೆಯು ರುಂಡವಿಲ್ಲದ ಮುಂಡದಂತಾಗಿದೆಯೆಂದು ಮುಖ್ಯ ಪ್ರಧಾನರು ಉದ್ಗಾರ ತೆಗೆದರು. ಮುಂಬಯಿ ರಾಜ್ಯದ ವಿಧಿ ಮಂಡಲದ ಅಧ್ಯಕ್ಷರೆಂದೂ ಸ್ವಾತಂತ್ರ್ಯಾನಂತರದಲ್ಲಿ ಕೇಂದ್ರದ ಲೋಕಸಭೆಯ ಅಧ್ಯಕ್ಷರೆಂದೂ ಕೆಲಸ ಮಾಡಿ ಭಾರತಕ್ಕೆ ಅದ್ವಿತೀಯ ಸೇವೆಯನ್ನು ಸಲ್ಲಿಸಿದರು. ರಾಜಕಾರಣದಲ್ಲಿ ಗಾಂಧೀಜಿಯವರ ಶಿಷ್ಯರೂ, ಸರದಾರರ ವಿಶ್ವಾಸಿಕ ಅನುಯಾಯಿಗಳೂ ಆಗಿದ್ದರು. ರಾಷ್ಟ್ರದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಶ್ರೀ ಮಾವಳಣಕರರು ಪ್ರಮುಖ ಭಾಗವಹಿಸಿದ್ದರು. ಗುಜರಾಥದಲ್ಲಿ ಅವರ ಸಂಬಂಧವಿರದ ಸಂಸ್ಥೆಗಳು ವಿರಳ. ಅವರು ಎಲ್ಲರಿಗೂ ದಾದಾಸಾಹೇಬರೆಂದೇ ಪರಿಚಿತರಾಗಿದ್ದರು. ಗುಜರಾಥಕ್ಕೂ ಭಾರತಕ್ಕೂ ಅವರಿಂದ ಅಪ್ರತಿಮ ಸೇವೆಯಾಗಿದೆ. ಅವರೊಬ್ಬ ಉಜ್ವಲ ದೇಶಭಕ್ತರಾಗಿದ್ದರು. ಶಾಸನ

ಸಂಪಾದಕೀಯ

ಮುಂಬಯಿ ರಾಜ್ಯದ ಮುಖ್ಯ ಮಂತ್ರಿಗಳ ಷಷ್ಟ್ಯಬ್ದಿ ಸಮಾರಂಭ

ಫೆಬ್ರುವರಿ ತಿಂಗಳ ೨೯ ರಂದು ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಮೊರಾರಜಿಯವರಿಗೆ ೬೦ ವರುಷಗಳು ತುಂಬಿ ಅವರು ೬೧ರಲ್ಲಿ ಕಾಲಿಟ್ಟರು. ಅಂದು ರಾಜಧಾನಿಯಲ್ಲಿ ಅವರ ಜಯಂತಿಯ ಕಾರ್ಯಕ್ರಮಗಳು ಬಹು ವಿಜೃಂಭಣೆಯಿಂದ ಜರುಗಿದವು. ಅವರನ್ನು ಅಭಿನಂದಿಸುವ ಸಹಸ್ರಾರು ಶುಭ-ಸಂದೇಶಗಳೂ ತಂತಿಗಳೂ ಬಂದವು. ಭಾರತದಲ್ಲೆಲ್ಲ ಸಂಪತ್ತಿಗೆ ಹೆಸರಾದ ಮುಂಬಯಿ ರಾಜ್ಯದ ಮುಖ್ಯ ಮಂತ್ರಿಯೆಂದೂ ರಾಜಕಾರಣದಲ್ಲಿ ಮಹಾತ್ಮಾಜಿಯವರ ಶ್ರೇಷ್ಠ ಅನುಯಾಯಿಗಳೆಂದೂ, ರಾಷ್ಟ್ರ ಸಭೆಯ ಸಂಘಟನೆಯ ಕಾರ್ಯದಲ್ಲಿ ದಿವಂಗತ ಸರದಾರರ ಹೆಜ್ಜೆಯನ್ನು ತುಳಿಯುವವರೆಂದೂ, ಬಲ್ಲಿದ ಆಡಳಿತಗಾರರೆಂದೂ ಅವರು ಹೆಸರಾಗಿದ್ದಾರೆ. ಮುಂಬಯಿಯಂಥ ದೊಡ್ಡ ರಾಜ್ಯದ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಕಾರ್ಯ ನಿರ್ವಹಣೆಯಲ್ಲಿ ಸತ್ಯ, ಸರಳತೆ, ಹಾಗೂ ನ್ಯಾಯಗಳಿಗೆ ಯಾವುದೂ ಅಡ್ಡ ಬರದಂತೆ ನೋಡುವಾಗ ಪಕ್ಷ ಪಂಗಡಗಳ ಕಹಿಯಾದ ಟೀಕೆಗೂ ಅಳಕುವವರಲ್ಲೆಂಬುದು ಜಗತ್ಪ್ರಸಿದ್ಧವಾಗಿದೆ. ಆದುದರಿಂದಲೇ ರಾಜಕಾರಣದಲ್ಲಿಯ ಇವರ ವಿರೋಧಿಗಳೂ ಸಹ ಇವರ ಆಡಳಿತವನ್ನು ಶ್ಲಾಘಿಸುತ್ತಿರುವರು. ಕರ್ತವ್ಯ ದಕ್ಷತೆಯಲ್ಲಿ ಇವರನ್ನು ಮೀರುವವರು ವಿರಳ. ಇವರೊಬ್ಬ ಕರ್ಮಯೋಗಿಗಳಾಗಿದ್ದಾರೆ. ಭವ್ಯ ಭಾರತವನ್ನು ನಿರ್ಮಿಸುವ ಕಾರ್ಯದಲ್ಲಿ ಇವರು ಪ್ರಮುಖ ಪಾತ್ರವನ್ನು ವಹಿಸುವರು. ಆದ್ದರಿಂದ ಅವರಿಗೆ ಆರೋಗ್ಯ ಸಂಪತ್ತು ವೃದ್ಧಿಯಾಗಲೆಂದೂ ಅವರ ಜನ್ಮ ದಿನಗಳು ಅನಂತವಾಗಿ ಬರಲೆಂದೂ ನಾವು ದೇವರಲ್ಲಿ ಪ್ರಾರ್ಥಿಸುವೆವು.

ವಿದ್ಯಾದಾನವೇ ಮಿಗಿಲಾದ ದಾನ

ಹೋದ ತಿಂಗಳು ಮುಂಬಯಿಯಲ್ಲಿ ಸಮಾಜ ಶಿಕ್ಷಣದ ಒನೆಯ ಸಪ್ತಾಹವನ್ನು ಉದ್ಘಾಟಿಸುತ್ತ ನಮ್ಮ ರಾಜ್ಯಪಾಲರಾದ ಡಾ. ಹರೆಕೃಷ್ಣ ಮಹತಾಬರವರು ಭಾರತದ ಇಂದಿನ ಪರಿಸ್ಥಿತಿಯಲ್ಲಿ ಶಿಕ್ಷಣ ಪ್ರಸಾರದ ಅವಶ್ಯಕತೆಯನ್ನು ಎತ್ತಿ ತೋರಿಸಿ ಸಮಾಜ ಸೇವೆಗಾಗಿ ವಿದ್ಯಾರ್ಥಿಗಳು ಮುಂದೆ ಬರಬೇಕೆಂದು ಸೂಚಿಸಿದರು. ಪ್ರಜಾಪ್ರಭುತ್ವದ ಮಹಾಪ್ರಯೋಗ ನಡೆದಾಗ ವಿದ್ಯಾದಾನವು ಭೂದಾನ ಶ್ರಮದಾನಗಳಿಗಿಂತ ಹೆಚ್ಚು ಅವಶ್ಯವಾಗಿದೆಯೆಂದು ಅವರು ಹೇಳಿದರು. ಜನತೆಗೆ ಎಷ್ಟು ಬೇಗ ಶಿಕ್ಷಣ ದೊರೆಯುವದೆಂಬುದರ ಮೇಲೆಯೇ ಪ್ರಜಾಸತ್ತೆಯ ಯಶಸ್ಸು ಅವಲಂಬಿಸಿದೆ. ಹತ್ತಿಪ್ಪತ್ತು ಕೋಟಿ ಮತದಾರರಲ್ಲಿ ನಿರಕ್ಷರಿಗಳೇ ಹೆಚ್ಚಿದ್ದಾಗ ಪ್ರಜಾಸತ್ತಾತ್ಮಕ ರಾಜ್ಯ ಪದ್ಧತಿಯು ಸುವ್ಯವಸ್ಥೆಯಿಂದ ನಡೆಯಲಾರದೆಂದು ರಾಜನೀತಿಜ್ಞರು ಅಭಿಪ್ರಾಯಪಡುತ್ತಾರೆ. ಒಂದು ವೇಳೆ ನಮ್ಮ ದೇಶದಲ್ಲಿ ಶತಮಾನಗಳಿಂದ ನಡೆದು ಬಂದ ಉಜ್ವಲ ಪರಂಪರೆಯೂ ಸತ್ಸಂಪ್ರದಾಯಗಳೂ ಗಣರಾಜ್ಯ ಪದ್ಧತಿಗೆ ಅನುಕೂಲವಾಗಿದ್ದರೂ ಇವೆಲ್ಲದರ ಜೊತೆಗೆ ನೂತನ ಸಮಾಜದ ಅತ್ಯಗತ್ಯವಾದ ಬೇಡಿಕೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವಷ್ಟು ಶಿಕ್ಷಣವು ದೊರೆತರೆ ಪ್ರಜಾಪ್ರಭುತ್ವಕ್ಕೆ ಭಯವಿಲ್ಲೆಂದು ಅವರು ಅಭಿಪ್ರಾಯಪಟ್ಟರು ನಮ್ಮ ಪ್ರದೇಶದಲ್ಲಿ ವಿದ್ಯಾದಾನಕ್ಕೆ ಮೊದಲಿನಿಂದಲೂ ಪ್ರಾಶಸ್ತ್ಯವಿದೆ. ಅದೊಂದು ಪವಿತ್ರ ಕಾರ್ಯವೆಂದು ನಮ್ಮ ಪೂರ್ವಜರು ಭಾವಿಸಿದ್ದರು. ಶಿಕ್ಷಣ ಪ್ರಸಾರದ ಪವಿತ್ರ ಕಾರ್ಯವು ತೀವ್ರ ಗತಿಯಿಂದ ಸಾಧಿಸಬೇಕಾದರೆ ಇಡೀ ಸಮಾಜವು ಸಹಕರಿಸುವದು ಅತ್ಯವಶ್ಯ. ವಿದ್ಯಾರ್ಥಿಗಳು ಮುಂದೆಬಂದು ವಿದ್ಯಾದಾನದ ಕಾರ್ಯದಲ್ಲಿ ಸಹಕರಿಸಿ ನಿರಕ್ಷರತೆಯ ಭೂತವನ್ನು ಹೊಡೆದೋಡಿಸಬೇಕೆಂದು ರಾಜ್ಯಪಾಲರು ಆಶಿಸಿದರು.

ಇರಾಣ ರಾಜದಂಪತಿಗಳ ಭಾರತ ಸಂಚಾರ

ಇರಾಣದ ರಾಜದಂಪತಿಗಳು ಭಾರತ ಸರಕಾರದ ಬಿನ್ನಹದ ಮೇರೆಗೆ ಕಳೆದ ತಿಂಗಳ ೧೬ ರಂದು ಭಾರತಕ್ಕೆ ಆಗಮಿಸಿದರು. ಅವರು ಅಂದಿನಿಂದ ನಮ್ಮ ದೇಶದಲ್ಲಿಸಂಚರಿಸುತ್ತಿದ್ದಾರೆ. ಅವರಿಗೆ ಹೋದಹೋದಲ್ಲೆಲ್ಲ ಸಂಭ್ರಮದ ಸ್ವಾಗತಗಳು ನಡೆದವು. ರಾಜದಂಪತಿಗಳು ತಮ್ಮ ಸಂಗಡ ತಮ್ಮ ಸರಕಾರ ಹಾಗು ಪ್ರಜೆಗಳ ಸದಿಚ್ಛೆಗಳನ್ನು ಭಾರತೀಯರಿಗಾಗಿ ತಂದಿದ್ದಾರೆ. ಭಾರತಕ್ಕೂ ಇರಾಣಕ್ಕೂ

ಶತಮಾನಗಳಿಂದಲೂ ಭದ್ರವಾದ ಸಂಬಂಧಗಳುಂಟು. ಕೆಲವು ಶತಮಾನಗಳ ಹಿಂದೆ ಪರ್ಶಿಯನ್ ಭಾಷೆಯು ಉತ್ತರ ಹಿಂದುಸ್ತಾನದಲ್ಲಿ ಮಹತ್ವದ ಭಾಷೆಯಾಗಿತ್ತು. ಹೀಗಾಗಿ ಇರಾಣ ಹಾಗು ಭಾರತದ ಸಂಬಂಧಗಳು ಉಳಿದ ಎಷ್ಟೋ ದೇಶಗಳಿಗಿಂತ ಹಳೆಯವಾಗಿವೆ. ಆ ದೇಶವು ಒಳ್ಳೇ ಆಯಕಟ್ಟಿನ ಕ್ಷೇತ್ರವಾಗಿರುವದರಿಂದ ಅದಕ್ಕೆ ಹೆಚ್ಚಿನ ಮಹತ್ವ ಬಂದಿದೆ. ವಿಶ್ವಶಾಂತಿ ಸ್ಥಾಪನೆಯ ಮಹಾಕಾರ್ಯದಲ್ಲಿ ನೆಹರೂರವರ ನಿಲುವಿಗೆ ಇರಾಣದ ಬೆಂಬಲವು ದೊರೆತಲ್ಲಿ ಪೌರ್ವಾತ್ಯ ರಾಜಕಾರಣದ ಸಮಸ್ಯೆಗಳೆಷ್ಟೋ ಸಹಜವಾಗಿ ಬಗೆಹರಿಯಬಲ್ಲವು. ಮೂರು ವಾರಗಳ ಸಂಚಾರದಲ್ಲಿ ಅವರು ಅನೇಕ ಸಂಘ ಸಂಸ್ಥೆಗಳನ್ನೂ ಪ್ರಮುಖ ಭಾರತೀಯರನ್ನೂ ಸಂದರ್ಶಿಸಿದಾಗ ಇರಾಣ ಹಾಗು ಇರಾಣಿಯರ ಬಗೆಗೆ ಭಾರತದ ಸ್ನೇಹಭಾವನೆ ಹಾಗೂ ಉದಾರಾಭಿಮಾನಗಳನ್ನು ಕಂಡಿರಲು ಸಾಕು. ರಾಜದಂಪತಿಗಳ ಭಾರತ ದರ್ಶನದಿಂದ ಇವೆರಡೂ ರಾಷ್ಟ್ರಗಳಲ್ಲಿದ್ದ ಸ್ನೇಹಸಂಬಂಧಗಳು ಇನ್ನಷ್ಟು ಭದ್ರವಾಗಿ ವಿಶ್ವಶಾಂತಿ ಸ್ಥಾಪನೆಯ ಕಾರ್ಯದಲ್ಲಿ ಪರಸ್ಪರ ಪೂರಕವಾಗುವದರಲ್ಲಿ ಯಾವ ಸಂಶಯವೂ ಇಲ್ಲ. 'ವಿದೇಶ ನೀತಿ ಯಾವುದೇ ಇರಲಿ ಶಾಂತಿ ರಕ್ಷಣೆ ನಮ್ಮ ಧ್ಯೇಯ' ವೆಂದೂ 'ಜಗತ್ತಿನ ಶಾಂತಿಯನ್ನು ರಕ್ಷಿಸಲು ಇರಾಣ ಹಾಗು ಭಾರತದ ಸಾಮಾನ್ಯ ಯತ್ನಗಳಾಗಿವೆ'ಯೆಂದೂ ರಾಜರು ಮುಂಬಯಿಯಲ್ಲಿ ತಮ್ಮ ಭಾಷಣಗಳಿಂದ ಸ್ಪಷ್ಟಮಾಡಿದ್ದಾರೆ. ರಾಜದಂಪತಿಗಳಿಬ್ಬರೂ ಭಾರತೀಯರ ಆದರಾತಿಥ್ಯ ಹಾಗು ಸದ್ಭಾವನೆಗಳಿಂದ ತುಂಬಿದವರಾಗಿ ತಮ್ಮ ದೇಶಕ್ಕೆ ಸೌಖ್ಯಕರವಾಗಿ ಮರಳುವರೆಂದು ಆಶಿಸುವೆವು.

ಶ್ರೇಷ್ಠ ಭಾರತೀಯರಿಬ್ಬರ ಕಣ್ಮರೆ

ಪ್ರಜಾ ಸೋಶಿಯಾಲಿಸ್ಟ ಪಕ್ಷದ ಅಧ್ಯಕ್ಷರಾದ ಆಚಾರ್ಯ ನರೇಂದ್ರದೇವರು ಕಳೆದ ತಿಂಗಳ ೧೯ ರಂದು ತಮ್ಮ ಇಹಲೋಕ ಯಾತ್ರೆಯನ್ನು ಮುಗಿಸಿದ್ದರಿಂದ ರಾಷ್ಟ್ರಕ್ಕೆ ಅತೀವ ದುಃಖವಾಗಿದೆ. ಆಚಾರ್ಯರಿಗೆ ಅಸ್ಥಮಾ ರೋಗವು ಬಹಳ ದಿನಗಳಿಂದ ಗಂಟುಬಿದ್ದಿದ್ದು ನಿಜವಾಗಿದ್ದರೂ ಅವರು ಅದಕ್ಕೆ ಇಷ್ಟು ಬೇಗನೆ ಆಹುತಿಯಾಗಬಹುದೆಂದು ಯಾರಿಗೂ ಅನಿಸಿರಲಿಲ್ಲ. ಆದುದರಿಂದ ಅವರ ಮರಣ ಸುದ್ದಿಯು ಎಷ್ಟು ದುಃಖದಾಯಕವೋ ಅಷ್ಟೇ ಆಶ್ಚರ್ಯವೂ ಆಗಿದ್ದಿತು. ಪಾಂಡಿತ್ಯ, ಶೀಲ, ತ್ಯಾಗ, ಕರ್ತವ್ಯದಕ್ಷತೆ ಹಾಗು ರಾಷ್ಟ್ರಭಕ್ತಿಗಳಿಂದ ತುಂಬಿದ ಜೀವನವು ಅವರದಾಗಿತ್ತು. ರಾಜಕಾರಣವಿರಲಿ, ವಿಶ್ವವಿದ್ಯಾಲಯಗಳ ಆಡಳಿತವಿರಲಿ ಇಲ್ಲವೆ ಬೇನ್ನಾವ ಕ್ಷೇತ್ರವಿರಲಿ ತತ್ವನಿಷ್ಠೆಗೆ ಚ್ಯುತಿಬರದಂತೆ ನಡೆದದ್ದೇ ಅವರ ವೈಶಿಷ್ಟ್ಯ. ಆದುದರಿಂದಲೇ ಅವರು ಎಲ್ಲರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು. ಶ್ರೇಷ್ಠ ಬರೆಹಗಾರರೆಂದೂ ಶಿಕ್ಷಣ ತಜ್ಞರೆಂದೂ ಹೆಸರಾಗಿದ್ದರು. ಭಾರತದ ಪ್ರಾಚೀನ ಇತಿಹಾಸದ ಬಗ್ಗೆ ಅವರು ಆಳವಾದ ಅಭ್ಯಾಸವನ್ನು ಮಾಡಿದ್ದರು. ಬೌದ್ಧ ಸಾಹಿತ್ಯದಲ್ಲಿಯೂ ಪಾಂಡಿತ್ಯವನ್ನು ಗಳಿಸಿದ್ದರಲ್ಲದೆ ಬೌದ್ಧ ತತ್ವ ವಿಚಾರದಲ್ಲಿ ಗ್ರಂಥವನ್ನು ರಚಿಸಿದ್ದರು. ಅವರು ಇಂಗ್ಲೀಷ ಭಾಷೆಯಲ್ಲಿಯೂ ಸಹ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಈ ರೀತಿಯಾಗಿ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ದುಡಿದು ಅಮೋಘವಾದ ಸೇವೆಯನ್ನು ಸಲ್ಲಿಸಿದ ಆಚಾರ್ಯರ ಮರಣದಿಂದ ಭಾರತಕ್ಕೆ ಆದ ಅಪಾರವಾದ ಹಾನಿಯ ಬಗ್ಗೆ ದೇಶದಾದ್ಯಂತ ಕೊರಗು ನಡೆದಾಗಲೇ ಇನ್ನೊಂದು ಭಾರತದ ರತ್ನವು ಕಣ್ಮರೆಯಾಯಿತು.

ಲೋಕಸಭೆಯ ಪಿತಾಮಹರೆಂದು ಪ್ರಸಿದ್ಧರಾದ ಶ್ರೀ ಮಾವಳಣಕರರು ಹೋದ ತಿಂಗಳ ದಿನಾಂಕ ೨೭ ರಂದು ಸ್ವರ್ಗಸ್ಥರಾದರು. ಅವರಿಲ್ಲದ ಲೋಕಸಭೆಯು ರುಂಡವಿಲ್ಲದ ಮುಂಡದಂತಾಗಿದೆಯೆಂದು ಮುಖ್ಯ ಪ್ರಧಾನರು ಉದ್ಗಾರ ತೆಗೆದರು. ಮುಂಬಯಿ ರಾಜ್ಯದ ವಿಧಿಮಂಡಲದ ಅಧ್ಯಕ್ಷರೆಂದೂ ಸ್ವಾತಂತ್ರ್ಯಾನಂತರದಲ್ಲಿ ಕೇಂದ್ರದ ಲೋಕಸಭೆಯ ಅಧ್ಯಕ್ಷರೆಂದೂ ಕೆಲಸ ಮಾಡಿ ಭಾರತಕ್ಕೆ ಅದ್ವಿತೀಯ ಸೇವೆಯನ್ನು ಸಲ್ಲಿಸಿದರು. ರಾಜಕಾರಣದಲ್ಲಿ ಗಾಂಧೀಜಿಯವರ ಶಿಷ್ಯರೂ, ಸರದಾರರ ವಿಶ್ವಾಸಿಕ ಅನುಯಾಯಿಗಳೂ ಆಗಿದ್ದರು. ರಾಷ್ಟ್ರದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಶ್ರೀ ಮಾವಳಣಕರರು ಪ್ರಮುಖ ಭಾಗವಹಿಸಿದ್ದರು. ಗುಜರಾಥದಲ್ಲಿ ಅವರ ಸಂಬಂಧವಿರದ ಸಂಸ್ಥೆಗಳು ವಿರಳ. ಅವರು ಎಲ್ಲರಿಗೂ ದಾದಾಸಾಹೇಬರೆಂದೇ ಪರಿಚಿತರಾಗಿದ್ದರು. ಗುಜರಾಥಕ್ಕೂ ಭಾರತಕ್ಕೂ ಅವರಿಂದ ಅಪ್ರತಿಮ ಸೇವೆಯಾಗಿದೆ. ಅವರೊಬ್ಬ ಉಜ್ವಲ ದೇಶಭಕ್ತರಾಗಿದ್ದರು. ಶಾಸನ

ಮಂಡಲಗಳ ಕಾರ್ಯ ಹಾಗು ಸಂಘಟನೆಯ ವಿಷಯದಲ್ಲಿ ಅವರಿಗಿದ್ದ ಅನುಭವದ ಮೂಲಕ ಲೋಕಸಭೆಯ ಕಾರ್ಯಕಲಾಪಗಳು ಮಾದರಿಯ ರೀತಿಯಲ್ಲಿ ನಡೆದು ಅವರಿಂದ ಅನೇಕ ಸತ್ಸಂಪ್ರದಾಯಗಳು ಪ್ರಾರಂಭಿಸಲ್ಪಟ್ಟವು. ಭಾರತದ ಪ್ರಜಾಪ್ರಭುತ್ವದ ಮುನ್ನಡೆಗೆ ದಿವಂಗತರ ಕಾಣಿಕೆ ಅಷ್ಟಿಷ್ಟಲ್ಲ. ಅವರನ್ನು ಲೋಕಸಭೆಯ ಪಿತಾಮಹರೆಂದು ಕರೆದಿದ್ದುದು ಔಚಿತ್ಯಪೂರ್ಣವಾಗಿದೆ. ನಮ್ಮನ್ನಗಲಿದ ಈ ಮಹಾನುಭಾವರ ದಿವ್ಯ ಜೀವನದಿಂದ ನಮಗೆ ಸ್ಫೂರ್ತಿ ದೊರೆಯಲೆಂದು ಹಾರೈಸಿ ಅವರ ಆತ್ಮಗಳಿಗೆ ಪರಮಾತ್ಮನು ಚಿರಶಾಂತಿಯನ್ನೀಯಲೆಂದು ಪ್ರಾರ್ಥಿಸುವೆವು.

ಮುಖ್ಯ ಪ್ರಧಾನರ ಉತ್ತರ ಕರ್ನಾಟಕ ಸಂಚಾರ

ನಮ್ಮ ರಾಷ್ಟ್ರದ ಮುಖ್ಯ ಪ್ರಧಾನರಾದ ಶ್ರೀ ಜವಾಹರಲಾಲ ನೆಹರೂರವರು ಇದೇ ತಿಂಗಳ ಕೊನೆಗೆ ಉತ್ತರ ಕರ್ನಾಟಕದ ಸಂಚಾರವನ್ನು ಕೈಕೊಳ್ಳುವದು ನಿಶ್ಚಿತವಾದದ್ದು ಎಲ್ಲರಿಗೂ ಸಂತೋಷವನ್ನುಂಟುಮಾಡಿರಲು ಸಾಕು. ಅವರು ತಮ್ಮ ನಾಲ್ಕು ದಿನಗಳ ಸಂಚಾರದಲ್ಲಿ ಬೆಳಗಾವಿ, ವಿಜಾಪುರ, ಧಾರವಾಡ ಹಾಗು ಹುಬ್ಬಳ್ಳಿಗಳಲ್ಲಿಯ ಅನೇಕ ಸಂಘ ಸಂಸ್ಥೆಗಳನ್ನು ಸಂದರ್ಶಿಸುವರೆಂದೂ ಒಂದೆರಡು ನಗರ ಸಭೆಗಳ ಶತಮಾನೋತ್ಸವಗಳಲ್ಲಿ ಭಾಗವಹಿಸುವರೆಂದೂ ಹಾಗೂ ಎಲ್ಲ ಕಡೆಗೆ ಸಾರ್ವಜನಿಕ ಭಾಷಣಗಳನ್ನು ಮಾಡುವರೆಂದೂ ನಿರೀಕ್ಷಿಸಲಾಗಿದೆ. ಇನ್ನು ಕೆಲವೇ ತಿಂಗಳಲ್ಲಿ ಆಗುವ ಕರ್ನಾಟಕದ ಪುನರ್ಘಟನೆಯ ಮುನ್ನ ಅವರು ಕೊಡಲಿರುವ ಈ ಭೆಟ್ಟಿಗೆ ಹೆಚ್ಚಿನ ಮಹತ್ವ ಬರಬಹುದಾಗಿದೆ. ಮುಖ್ಯ ಪ್ರಧಾನರಿಗೆ ಒಳ್ಳೇ ಹಾರ್ದಿಕವಾದ ಸ್ವಾಗತವನ್ನು ಕೋರಿ ಅವರ ಸಂಚಾರವು ಎಲ್ಲ ಬಗೆಯಿಂದಲೂ ಸೌಖ್ಯದಾಯಕವಾಗಲೆಂದು ಹಾರೈಸುವೆವು.

ಜೀವನ ಶಿಕ್ಷಣ ವಾರ್ತೆಗಳು

ಜೀವನ ಶಿಕ್ಷಣ ಸಾಲೆಗಳಲ್ಲಿ ಉತ್ಪಾದಿಸಿದ ವಸ್ತುಗಳ ವಿತರಣ.

ಅನುವಾದಕರು:- **ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ** ಸು. ಹೆಣ್ಣು ಮ. **ಸರಕಾರಿ ಟ್ರೇ. ಕಾ.** ಧಾರವಾಡ.

ಜೀವನ ಶಿಕ್ಷಣ ಶಾಲೆಗಳಲ್ಲಿಯ ಪಕ್ಕಾ ಮಾಲುಗಳ ಮಾರಾಟವು ಬಹಳ ದಿವಸಗಳಿಂದ ಒಂದು ತೊಂದರೆದಾಯಕ ಸಮಸ್ಯೆಯಾಗಿದೆ. ಜೀವನ ಶಿಕ್ಷಣದಲ್ಲಿ ಸ್ವಾವಲಂಬನವೆಂದರೆ ಬಳಗವು ತನ್ನ ಸ್ವಂತದ ಬೇಡಿಕೆಗೆ ಬೇಕಾಗುವ ವಸ್ತುಗಳನ್ನು ತಯಾರಿಸಿಕೊಳ್ಳುವದಿರುತ್ತದೆ. ಹೀಗೆ ನಿರ್ಮಿಸಿದ ಎಷ್ಟೋ ವಸ್ತುಗಳನ್ನು ನಿರ್ಮಾಪಕರೇ ಉಪಯೋಗಿಸುವರೆಂದು ಆಶಿಸಲಾಗಿದೆ. ಆದರೆ ಇದು ಯಾವಾಗಲೂ ಸಾಧ್ಯವಾಗಲಾರದು. ಉತ್ಪಾದಕರ— ಯಾರು ಸಾಮಾನ್ಯವಾಗಿ ಮಕ್ಕಳಿರುವರೋ-ಬೇಡಿಕೆಯು ಪರಿಮಿತವಾಗಿರುತ್ತದೆ. ಅಲ್ಲದೆ ಅವರ ಪಾಲಕರ ಅನುಮತಿಯನ್ನು ಅವಲಂಬಿಸಿರುತ್ತದೆ. ಸಾಲೆಯ ಸಮಾಜವು ತಾನು ಉತ್ಪಾದಿಸಿದ ಎಲ್ಲ ವಸ್ತುಗಳನ್ನು ಯಾವಾಗಲೂ ತಾನೇ ಖರ್ಚು ಮಾಡಲಾರದು. ಈ ಯೋಜನೆಯ ಜನಕರಾದ ಗಾಂಧೀಜಿಯವರು ಇಚ್ಛೆಯು ಹೆಚ್ಚಾಗಿ ಉಳಿದ ವಸ್ತುಗಳನ್ನು ರಾಜ್ಯವು ಕೊಂಡುಕೊಂಡು ತನ್ನ ಅಗತ್ಯತೆಗೆ ಉಪಯೋಗಿಸಿಕೊಳ್ಳಬೇಕೆಂದಿದ್ದಿತು ತಯಾಸಿಸಿದ ವಸ್ತುಗಳ ವಿತರಣದಲ್ಲಿ, ಗಾಂಧೀಜಿಯವರ ವಿಚಾರದಂತೆ ಸರಕಾರವು ಈಗಾಗಲೇ ಮುಂದೆ ಹೆಜ್ಜೆಯನ್ನಿಟ್ಟಿದೆಯೆಂದು ತಿಳಿಸಲು ಆನಂದವಾಗುವದು.

೧. ಜೀವನ ಶಿಕ್ಷಣ ಸಾಲೆಗಳಲ್ಲಿ ಉತ್ಪಾದಿಸಿದ ವಸ್ತುಗಳನ್ನುಕೊಳ್ಳಲು ಸ್ಕೂಲು ಬೋರ್ಡುಗಳಿಗೆ ಈಗಾಗಲೇ ಅಪ್ಪಣೆಗಳು ಕಳಿಸಲ್ಪಟ್ಟಿವೆ. ಇದರಂತೆ ಡೆಸ್ಕುಗಳಂತಹ ಕಟ್ಟಿಗೆಯ ಸಾಮಾನುಗಳು, ಫಾಲಕಾಚರಖಾಗಳಂತಹ ಮೂಲೋದ್ಯೋಗದ ಉಪಕರಣಗಳು ಮತ್ತು ಫಾಯಿಲು, ಒರೆಸುದಿಂಬುಗಳಂತಹ ಕಚೇರಿಯ ಬೇಡಿಕೆಯ ಸಾಮಾನುಗಳ ತಯಾರಿಕೆಗೆ ಸ್ಕೂಲಬೋರ್ಡುಗಳು ಜೀವನ ಶಿಕ್ಷಣ ಸಾಲೆಗಳಿಗೆ ಅಪ್ಪಣೆಯಿತ್ತಿವೆ. ಬಡಿಗತನವಿದ್ದ ಕೆಲವು ಸಾಲೆಗಳಲ್ಲಿ ತಮ್ಮ ಸ್ಕೂಲ ಬೋರ್ಡುಗಳ ಸಲುವಾಗಿ ಬಾಕುಗಳು ಮತ್ತು ಕರಿಹಲಗೆ

— ೨೮ನೇ ಪುಟಕ್ಕೆ

ಶ್ರೀ ದಿನಕರಭಾಯಿ ನರಭೇರಾಮ ದೇಸಾಯಿಯವರು

(ಮುಂಬಯಿ ರಾಜ್ಯದ ಶಿಕ್ಷಣ ಹಾಗೂ ಕಾಯದೆ ಮಂತ್ರಿಗಳು)

ಲೇಖಕರು : ಶ್ರೀ ಶಿಂತ್ರಿ ಬಸಪ್ಪನವರು, ಬಿ.ಎ., ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ
ದಕ್ಷಿಣ ಭಾಗ ಧಾರವಾಡ ಹಾಗೂ ಗೌರವ ಕಾರ್ಯದರ್ಶಿ ಮತ್ತು ಲಾಯಿಬ್ರೇರಿಯನ್ ಸಾಹಿತ್ಯ ಸಮಿತಿ
ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ಧಾರವಾಡ.

ಪ್ರಸ್ತಾವನೆ

ದಿನಾಂಕ ೧೩–೧–೧೯೫೫ರಂದು ನಮ್ಮ ರಾಜ್ಯದ ಶಿಕ್ಷಣ ಹಾಗೂ ಕಾಯದೆ ಮಂತ್ರಿಗಳಾದ ಶ್ರೀ ದಿನಕರ ಭಾಯಿ ದೇಸಾಯಿಯವರು ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಪ್ರಾರ್ಥನಾ ಮಂದಿರದಲ್ಲಿ ಲಿಂಗೈಕ್ಯ ಡೆಪ್ಯೂಟಿ ಚನ್ನಬಸವಪ್ಪನವರ ಭಾವಚಿತ್ರದ ಅನಾವರಣ ಸಮಾರಂಭವನ್ನು ಒಳ್ಳೇ ವಿಜೃಂಭಣೆಯಿಂದ ಸಾಂಗಗೊಳಿಸಿದುದನ್ನು ಓದುಗರು ಮರೆತಿರಲಿಕ್ಕಿಲ್ಲವಷ್ಟೇ. ಡೆಪ್ಯೂಟಿ ಚನ್ನಬಸವಪ್ಪನವರು ತಾಯ್ನಾಡು–ತಾಯ್ನುಡಿಗಳಿಗಾಗಿ ಸಲ್ಲಿಸಿದ ನಿಃಸ್ವಾರ್ಥ ಸೇವೆಯನ್ನು ಮಂತ್ರಿವರ್ಯರು ಮುಕ್ತ ಕಂಠದಿಂದ ಮನಸಾರೆ ಹೊಗಳಿ ತಮ್ಮಲ್ಲಿ ನೆಲೆಸಿದ್ದ ಗುಣಗ್ರಾಹಕತ್ವವನ್ನು ಆ ಸಮಾರಂಭದಲ್ಲಿ ಭಾಗವಹಿಸಲು ಆಗಮಿಸಿದ್ದ ಧಾರವಾಡ, ಹುಬ್ಬಳ್ಳಿ, ಗದಗ, ಬೆಳಗಾವಿ ಮೊದಲಾದ ಶಹರಗಳ ಪ್ರತಿಷ್ಠಿತ ಶ್ರೋತ್ರವೃಂದಕ್ಕೆಲ್ಲ ತೋರ್ಪಡಿಸಿದರು. ಅವರು ಮಾತನಾಡುವದು ಸ್ವಲ್ಪ, ಕಾರ್ಯ ಮಾಡುವದು ಬಹಳ. ಸ್ವಲ್ಪ ಮಾತನಾಡಿದರೂ ಅದು ಆವಾಗಲೂ ಅರ್ಥಪೂರ್ಣವಿರುತ್ತಿದೆ. ಗೊಳ್ಳು ಮಾತುಗಳು ಅವರ ಬಾಯಿಂದ ಎಂದೂ ಹೊರಬೀಳುವದಿಲ್ಲ. ಇದು ಅವರ ಹುಟ್ಟು ಸ್ವಭಾವವೆಂಬಂತೆ ತೋರುತ್ತಿದೆ. ಅಂತಹವರ ಬಗೆಗೆ ಅಲ್ಪ ಪರಿಚಯವು ನಮ್ಮ ಓದುಗರಿಗೆ ಇರುವದು ಒಳಿತಲ್ಲವೇ? ಆ ಸದುದ್ದೇಶದಿಂದ ನಮಗೆ ದೊರೆತ ವಿವರಗಳನ್ನು ಸಂಗ್ರಹಿಸಿ ಚಂದ ಕಾಣುವಂತೆ ಹೊಂದಿಸಿ ಈ ಪುಟ್ಟ ಲೇಖವೊಂದನ್ನು ಬರೆಯಲಾಗಿದೆ. ಮೇಲಿನ ಇಯತ್ತೆಗಳನ್ನು ಕಲಿಸುವ ಶಿಕ್ಷಕ-ಶಿಕ್ಷಿಕೆಯರು ಈ ಲೇಖನವನ್ನೋದಿಕೊಂಡು ತಮ್ಮ ತಮ್ಮ ವರ್ಗಗಳಲ್ಲಿ ಕಲಿಯುವ ಮಕ್ಕಳಿಗೆಲ್ಲ ಇದರ ಪೂರ್ಣ ಲಾಭವನ್ನು ಮಾಡಿಕೊಡುವರೆಂದು ನಂಬಿದ್ದೇವೆ.

ಬಾಲ್ಯ ಮತ್ತು ಶಿಕ್ಷಣ

ಗುಜರಾಥದಲ್ಲಿ ಪಂಚಮಹಾಲ ಎಂಬದೊಂದು ಜಿಲ್ಲೆ. ಆ ಜಿಲ್ಲೆಯಲ್ಲಿಯ ಗೋಧ್ರಾ ಎಂಬ ನಗರದಲ್ಲಿ ಶ್ರೀಯುತರು ೧೮೮೯ನೆಯ ಇಸವಿ ಜುಲೈಯ ತಿಂಗಳ ೧ನೆಯ ದಿನಾಂಕದಂದು ಜನ್ಮತಾಳಿದರು. ಅವರ ಪ್ರಾಥಮಿಕ ಶಿಕ್ಷಣವು ಹುಟ್ಟೂರಾದ ಗೋಧ್ರಾದಲ್ಲಿಯೇ ಜರುಗಿತೆಂಬಂತೆ ತೋರುತ್ತಿದೆ. ಮಾಧ್ಯಮಿಕ ಶಿಕ್ಷಣವನ್ನು ಭಡೋಚ ಹಾಯಸ್ಕೂಲದಲ್ಲಿ ಹೊಂದಿದರು. ಉಚ್ಚ ಶಿಕ್ಷಣಕ್ಕೋಸ್ಕರ ಮುಂಬಯಿಯಲ್ಲಿಯ ಸೇಂಟ ಜ್ಹೇವಿಯರ(St. Xavier)ಕಾಲೇಜವನ್ನು ಸೇರಿ ಆ ಕಾಲೇಜದಿಂದಲೇ ಎಮ್. ಎ. ಪರೀಕ್ಷೆಯನ್ನು ೧೯೧೨ರಲ್ಲಿ ಪಾಸಾದರು. ಮರುವರ್ಷವೇ ಅಂದರೆ ೧೯೧೩ರಲ್ಲಿ ಮುಂಬಯಿಯಲ್ಲಿಯ ಸರಕಾರಿ ಲಾ ಕಾಲೇಜದಿಂದ ಕೊನೆಯ ಎಲ್‌ಎಲ್.ಬಿ. ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ವಕೀಲಿವೃತ್ತಿ ಹಾಗೂ ಸಾರ್ವಜನಿಕ ಸೇವೆ

ವಕೀಲಿಯ ಸನದು ಪ್ರಾಪ್ತವಾದ ಕೂಡಲೇ ಭಡೋಚಕ್ಕೆ ಹೋಗಿ ಅಲ್ಲಿ ಅವರು ತಮ್ಮ ವಕೀಲಿಯ ವೃತ್ತಿಯನ್ನು ಪ್ರಾರಂಭಿಸಿದರು. ಉತ್ತಮೋತ್ತಮ ವಕೀಲರೆಂಬ ಕೀರ್ತಿಯನ್ನು ಪಡೆದು ೧೯೪೬ರ ವರೆಗೆ ತಮ್ಮ ವೃತ್ತಿಯನ್ನು ಸಾಗಿಸಿ ಸಾಕಷ್ಟು ಸಂಪತ್ತನ್ನು ಗಳಿಸಿದರು. ೧೯೧೭ರಿಂದ ೧೯೩೫ರ ವರೆಗೆ ಅವರು ಬಿಟ್ಟೂಬಿಡದೆ ೧೮ ವರ್ಷಗಳವರೆಗೆ ಭಡೋಚ ಮುನಿಸಿಪಾಲಿಟಿಯ ಸದಸ್ಯರಾಗಿದ್ದರು. ಮಾತ್ರವಲ್ಲದೆ, ಆ ಸುದೀರ್ಘವಾದ ಅವಧಿಯಲ್ಲಿ ೯ ವರ್ಷಗಳ ವರೆಗೆ ಆ ಮುನಿಸಿಪಾಲಿಟಿಯ ಅಧ್ಯಕ್ಷರಾಗಿಯೂ, ೧೫ ವರ್ಷಗಳವರೆಗೆ ಸ್ಕೂಲಬೋರ್ಡ ಚೇರಮನ್ನರಾಗಿಯೂ ಕೆಲಸ ಮಾಡಿದ್ದಾರೆ. ಇದು

ಅವರ ಲೋಕಪ್ರಿಯತೆಯನ್ನು ವ್ಯಕ್ತಪಡಿಸುತ್ತಿದೆಯಲ್ಲವೇ? ತಾವು ಸ್ಕೂಲಬೋರ್ಡ್ ಚೇರಮನ್ನರಾಗಿದ್ದಾಗ ಭಡೋಚ ಶಹರವಲ್ಲಿ ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ಜಾರಿಯಲ್ಲಿ ತಂದರು. 'ಭಡೋಚ ಶಿಕ್ಷಣ ಸಂಘ' (Broach Education Society) ಎಂಬ ಹೆಸರಿನದೊಂದು ಸಂಸ್ಥೆಯನ್ನು ಸ್ಥಾಪಿಸಿ ಈಗಲೂ ಅದರ ಅಧ್ಯಕ್ಷರಾಗಿದ್ದಾರೆ. ಆ ನಗರದಲ್ಲಿಯ 'ಸೇವಾಶ್ರಮ' ಎಂಬ ಹೆಸರಿನ ಬೇರೊಂದು ಸಾಂಸ್ಕೃತಿಕ ಸಂಸ್ಥೆಯ ವಿಶ್ವಸ್ಥ ಆಡಳಿತಗಾರ (Managing Trustee) ರಾಗಿದ್ದಾರೆ.

ಸ್ವಾತಂತ್ರ್ಯ ಸಂಗ್ರಾಮ

ಮಹಾತ್ಮರು ಹೂಡಿದ ಪ್ರತಿಯೊಂದು ಆಂದೋಲನದಲ್ಲಿ ಅವರು ತ್ರಿಕರಣಪೂರ್ವಕವಾಗಿ ಭಾಗವಹಿಸಿ ಐದುಸಲ ಕಾರಾಗೃಹ ವಾಸವನ್ನನುಭೋಗಿಸಿದ್ದಾರೆ. ೧೯೧೭ರಿಂದ ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸಲು ಪ್ರಾರಂಭಿಸಿದವರು ಸ್ವಾತಂತ್ರ್ಯ ಪ್ರಾಪ್ತಿಯವರೆಗೆ ಅವರೊಬ್ಬ ನಿಷ್ಠಾವಂತ ಸೈನಿಕನಂತೆ ದುಡಿದಿದ್ದಾರೆ. ಸೆರೆಮನೆಯಲ್ಲಿದ್ದಾಗ ಅವರು ಸೋಸಿದ ಕಷ್ಟ-ನಷ್ಟಗಳು ಅಷ್ಟಿಷ್ಟಲ್ಲ. ಆ ಸಮಯದಲ್ಲಿ ಅವರು ಅನುಭೋಗಿಸಿದ ದುಃಖ-ದುಮ್ಮಾನಗಳು ಪೂಜ್ಯ ಬಾಪೂಜಿಯವರಲ್ಲಿಟ್ಟಿದ್ದ ಅವರ ದೃಢವಾದ ಭಕ್ತಿ-ವಿಶ್ವಾಸಗಳನ್ನು ಕೈಮುತ್ತಿ ತೋರಿಸುತ್ತಿವೆ.

ಸ್ವಾತಂತ್ರ್ಯಾನಂತರ

'ಖೇರ ಮಂತ್ರಿಮಂಡಳ'ದಲ್ಲಿ ಅವರು ಕಾಯದೆ ಮತ್ತು ಪೂರೈಕೆ ಖಾತೆಗಳ ಮಂತ್ರಿಗಳಾಗಿ ಕೆಲಸ ಮಾಡಿದರು. ಆಗ ನಮ್ಮ ರಾಜ್ಯದಲ್ಲಿ ಹೇಳತೀರದಷ್ಟು ಆಹಾರದ ಕೊರತೆಯಿತ್ತು. ಕೇಂದ್ರ ಸರಕಾರದ ಗೂಡ ಪತ್ರ ವ್ಯವಹಾರಮಾಡಿ ಜಿಗಟುತನದಿಂದ ಹೋರಾಡಿ ನಮ್ಮ ರಾಜ್ಯಕ್ಕೆ ಸಾಕಷ್ಟು ಕಾಳಿನ ಸಂಗ್ರಹವನ್ನು ಮಾಡಿಟ್ಟುಕೊಂಡಿದ್ದರು. ರೇಶನ್ ಖಾತೆಯನ್ನು ತೊರೆಡಿಸಿ ಎಲ್ಲರಿಗೂ ನಿರ್ದಿಷ್ಟವಾದೊಂದು ಅಳತೆಯಂತೆ ಕಾಳು-ಕಡಿಗಳು ನಿಯಮಿತತನದಿಂದ ಸಿಗುವ ವ್ಯವಸ್ಥೆಯನ್ನು ಮಾಡಿದರು. ಮುಂಬಯಿ ಪಟ್ಟಣಕ್ಕೆ ಹಾಲನ್ನು ಪೂರೈಸಲು 'ಆರೇ' ಎಂಬ ಹೆಸರಿನದೊಂದು ಹಾಲಿನ ಕೇಂದ್ರವು ಅವರ ಕಾಲಕೀರ್ದಿಯಲ್ಲಿಯೇ ಸ್ಥಾಪಿಸಲ್ಪಟ್ಟಿತು. ೧೯೪೮ನೆಯ ಇಸವಿ ಡಿಸೆಂಬರ ತಿಂಗಳಲ್ಲಿ ವಾಶಿಂಗ್ಟನ್‌ದಲ್ಲಿ ಕಲೆತ ಯುಕ್ತರಾಷ್ಟ್ರಗಳ ಆಹಾರ ಮತ್ತು ಒಕ್ಕಲತನ ಸಂಘ (United Nations Food and Agriculture Organisation)ದ ನಾಲ್ಕನೆಯ ಅಧಿವೇಶನಕ್ಕೆ ಭಾರತದ ನಿಯೋಗ (Indian Delegation)ದ ಮುಖಂಡರಾಗಿ ಹೋಗಿದ್ದರು. ಈಗಿನ ಮಂತ್ರಿ ಮಂಡಳದಲ್ಲಿ ಅವರು ಶಿಕ್ಷಣ ಹಾಗೂ ಕಾಯದೆ ಮಂತ್ರಿಗಳಾಗಿ ಕೆಲಸ ಮಾಡುತ್ತಲಿದ್ದಾರೆ.

ಉಪಸಂಹಾರ

ಪ್ರಾಥಮಿಕ ಶಿಕ್ಷಣದ ಬಗೆಗೆ ಅವರು ಆಸ್ಥೆ ವಹಿಸಿ ಕೆಲಸ ಮಾಡುತ್ತಲಿದ್ದಾರೆ. ಜನತೆಯಲ್ಲಿ ಸಾಕಷ್ಟು ಶಿಕ್ಷಣ ಪ್ರಸಾರವಿಲ್ಲದೆ ಪ್ರಜಾಪ್ರಭುತ್ವವು ಯಶಸ್ವಿಯಾಗಲಾರದೆಂದು ಅವರು ದೃಢವಾಗಿ ನಂಬಿದ್ದಾರೆ. ಅದಕ್ಕೋಸ್ಕರ ಈಗ ೨೦೦ ಜನಸಂಖ್ಯೆಯುಳ್ಳ ಗ್ರಾಮಗಳಿಗೆ ಸಹ ಒತ್ತಾಯದ ಪ್ರಾಥಮಿಕ ಶಿಕ್ಷಣದ ಕಾಯದೆಯನ್ನು ಅನ್ವಯಿಸಿ ಲಿದ್ದಾರೆ. ಭಡೋಚ ಮುನಿಸಿಪಾಲಿಟಿಯಲ್ಲಿ ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ಅಮಲಿನಲ್ಲಿ ತಂದದ್ದರ ಅನುಭವವು ಅವರಿಗೆ ಸಾಕಷ್ಟಿದೆ. ತಮ್ಮ ಕಾಲಕೀರ್ದಿಯಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಹೆಚ್ಚಿನ ಸುಧಾರಣೆಗಳನ್ನು ಮಾಡಿ ತೋರಿಸಬೇಕೆಂಬ ಹುಮ್ಮಸ್ಸೂ ಅವರಲ್ಲಿದೆ. ಗಾವಠಿ ಸಾಲೆಗಳನ್ನೆಲ್ಲ ಲೋಕಲ್‌ಬೋರ್ಡ್ ಸಾಲೆಗಳನ್ನಾಗಿ ಮಾರ್ಪಡಿಸಬೇಕೆಂಬ ಸಂಕಲ್ಪವೊಂದನ್ನಿಟ್ಟುಕೊಂಡಂತೆ ತೋರುತ್ತಿದೆ. ಅದರ ಬಗೆಗೆ ಜನತೆಯಲ್ಲಿ ಊಹಾಪೋಹಗಳು ನಡೆದಿವೆ. ಮಂತ್ರಿವರ್ಯರ ಆಶೋತ್ತರಗಳೆಲ್ಲ ಬೇಗನೆ ಕೈಗೂಡಲೆಂದು ಹಾರೈಸುತ್ತೇವೆ.

ಸುಗ್ಗಿಯ ಸಂಪ್ರದಾಯಗಳು

ಲೇಖಕರು : **ಡಾ. ಬಿ. ಎಸ್. ಗದ್ದಗಿಮಠ, ಎಮ್.ಎ., ಪಿಎಚ್.ಡಿ.**

[ಕಳೆದ ಸಂಚಿಕೆಯಿಂದ ಮುಂದುವರೆದುದು]

ಬಹುತರವಾಗಿ ಕರ್ನಾಟಕದ ಒಕ್ಕಲಿಗರು ಮೊದಲಿನಿಂದಲೂ ಶಿವೋಪಾಸಕರು. ಅವರು ತಮ್ಮ ಕಾಲದಲ್ಲಿ ಅನ್ಯದೇವತೆಗಳನ್ನು ಪೂಜಿಸದಿರುವದೇ ಬಲವಾದ ದೃಷ್ಟಾಂತ. ರಾಶಿ ದೇವನೇ ಸಂಕದೇವನು. ಈ ಸಂಕದೇವನಿಗೆ ಸಂಕಪ್ಪನೆಂದೂ ಅನ್ನುತ್ತಾರೆ. ಸಂಕಪ್ಪ ಇದು ಶಂಕರಪ್ಪ ಈ ಶಬ್ದದ ವಿಕೃತರೂಪ. ಶಂಕರ–ಶಂಕರಪ್ಪ ಸಂಕ್ರಪ್ಪ–ಸಂಕಪ್ಪ ಎಂದಾಗುತ್ತದೆ. ಒಕ್ಕಲಿಗನ ಕಾಯಕ (ಒಕ್ಕಲುತನ) ದಲ್ಲಿ ವಿಘ್ನೇಶನಿಗೆ ಸ್ಥಾನವಿಲ್ಲ.

> **ಹಂತಿಪದಕೊಂದಿಲ್ಲ ನಿಂತುಬೆನಕನ ಪೂಜೆ**
> **ಹಂತಿಯೊಳು ಪೂಜೆ ಶರಣರಿಗೆ । ಒಕ್ಕಲಿಗ**
> **ಸ್ವಂತ ನೆನೆಯಂದ ಗಣಪತಿಗೆ ॥**

ಒಕ್ಕಲಿಗನು ತನ್ನ ಕಾಯಕದಲ್ಲಿ ಮಾನ ಮನ್ನಣೆಯಿಂದ ಬರಮಾಡಿಕೊಂಡದ್ದು ಶಿವಶರಣರನ್ನು.

ಕ್ರಿ. ಶ. ೧೨ನೆಯ ಶತಮಾನದಲ್ಲಿ ಶಿವಶರಣರ ಪ್ರಭಾವದಿಂದ ವೀರಶೈವ ಮತವು ಕರ್ನಾಟಕದ ತುಂಬೆಲ್ಲ ಹಬ್ಬಿತು. ಕಾಯಕದ ತಳಹದಿಯ ಮೇಲೆ ಕಟ್ಟಿದ ಈ ಮತಕ್ಕೆ ಎಲ್ಲ ಕಸಬುದಾರರು ಅನುಯಾಯಿಗಳಾದರು. ಶಿವೋಪಾಸಕರಾದ ಒಕ್ಕಲಿಗರು ಈ ಮತವನ್ನು ಎತ್ತಿ ಹಿಡಿದು ಪೋಷಕರಾದರು. ಅನೇಕರು ಪ್ರಸಿದ್ಧ ಶಿವಶರಣರಾಗಿ ಶಿವಗೋಷ್ಠಿಯನ್ನು ತಮ್ಮ ಕಾಯಕದಲ್ಲಿ ಹಾಡಿದ್ದಾರೆ. ಸುಗ್ಗಿಯ ಹಾಡುಗಳಲ್ಲಂತೂ ಅನೇಕ ಮಹತ್ವದ ಸಂಗತಿಗಳು ನಿದರ್ಶನಕ್ಕೆ ಬರುತ್ತವೆ. ಅವುಗಳಲ್ಲಿ ಈಗಲೂ ಬಳಕೆಯಲ್ಲಿರುವ 'ಸುಗ್ಗಿಯ ಬೂದನು' ಸಂಶೋಧಕರ ಮನಸ್ಸನ್ನು ಹಿಡಿಯದಿರನು. ಹಾಗಾದರೆ ಈ 'ಬೂದನು' ಯಾರು ?

ಬುದ್ಧಿವಂತಯ್ಯ, ಬುದ್ಧಯ್ಯ, ಬೂದಯ್ಯ ಎಂಬ ಹೆಸರುಗಳು ವೀರಶೈವರಲ್ಲಿ ಈಗಲೂ ಹೆಚ್ಚಾಗಿ ಕಂಡು ಬರುವುವು. ಈ ಹೆಸರುಗಳು ಅನ್ಯಮತಗಳಲ್ಲಿ ತೀರ ಕಡಿಮೆ; ಇಲ್ಲವೆಂದರೂ ಸಲ್ಲುವುದು. ಮಹಾಜ್ಞಾನಿಯಾದ ಅಲ್ಲಮ ಪ್ರಭುದೇವರು ವೀರಶೈವರಿಗೆ ಭೂಲೋಕದಲ್ಲಿ ಶಿವನ ಪರಮ ಚಿತ್ಕಳೆಯೆಂಬ ಗ್ರಹಿಕೆಯುಂಟು. ಹರಿಹರ, ಷಡಕ್ಷರಿ ಮೊದಲಾದ ವೀರಶೈವ ಕವಿಗಳು ಈ ಮಾತನ್ನು ತಮ್ಮ ಕಾವ್ಯಗಳಲ್ಲಿ ತುಂಬ ಬಳಸಿಕೊಂಡಿದ್ದಾರೆ. ಆದುದರಿಂದ ವೀರಶೈವರಲ್ಲಿ ಅಲ್ಲಮನಿಗೆ ಮೊದಲನೆಯ ಸ್ಥಾನವುಂಟು. ಒಕ್ಕಲಿಗರಾದ ವೀರಶೈವರು ಇದಾವುದಕ್ಕೂ ಹೊರತಾಗಿಲ್ಲ. ಅವರೂ ತಮ್ಮ ಕಾಯಕದಲ್ಲಿ ಅಲ್ಲಮಪ್ರಭುದೇವರಿಗೆ ಮುಖ್ಯ ಸ್ಥಾನವನ್ನಿತ್ತು ಕಣದಲ್ಲಿ ಬುದ್ಧಿವಂತ ಲಿಂಗನೆಂದು ಪೂಜೆ ಮಾಡಿದ್ದಾರೆ. ಈ ಬುದ್ಧಿವಂತಲಿಂಗನೇ ಬೆಳುವಲದ ಎರೆಯಲ್ಲಿ '**ಸುಗ್ಗಿಯ ಲಿಂಗಯ್ಯ**' ನಾಗಿದ್ದಾನೆ. ಬೆಳುವಲದ ಮಸಾರಿಯಲ್ಲಿ ಒಕ್ಕಲಿಗರು ಈ ಬುದ್ಧಿವಂತಲಿಂಗನಿಗೆ 'ಬುದ್ಧಯ್ಯ' ನೆಂದೂ 'ಬೂದಯ್ಯ' ನೆಂದೂ ಕಣದಲ್ಲಿ ಪೂಜಿಸುವರು. ಇದೇ ಈಗ ಒಂಟಿ ಹೆಸರಾಗಿ ಕಣದಲ್ಲಿ 'ಬೂದ' ನೆಂದು ಉಳಿದಿದೆ. ಉತ್ತರ ಕರ್ನಾಟಕದಲ್ಲಿ ಬಹುತರ ಎಲ್ಲ ಒಕ್ಕಲಿಗರು ಕುಲಜಾತಿಗಳ ಭಿನ್ನಭೇದವಿಡದೆ 'ಬೂದ' ನನ್ನು ಸುಗ್ಗಿಯ ಕಣದಲ್ಲಿ ಆದರದಿಂದ ಪೂಜಿಸುತ್ತಾರೆ.

> ಬೂದನಿಗೆ ಬಾಸಿಂಗ ಭೂಮಿ ತಾಯಿಗೆ ದಂಡೆ
> ಸಾಲಶರಣರಿಗೆ ಸರಮಾಲೆ । ಕಟೆಗೊಂಡು
> ಮಾದಯ್ಯ ಗೆದ್ದ ಕೈಲಾಸ ॥ **ಹೂ. ಮಾ.**

ಈ ಮಾದಯ್ಯನು ಶಿವಶರಣ ಹೂಗಾರ ಮಾದಯ್ಯನು. ಜೀರ (ಹೂಗಾರ) ರಿಗೂ ಒಕ್ಕಲಿಗನ ಕಣದಲ್ಲಿ ರಾಶಿಗೆ ಪತ್ರಿ ಹೂದಂಡೆಗಳನ್ನು ಕೊಡುವ ಬಾಬಿದೆ. ಇಲ್ಲಿ ಬಾಸಿಂಗವೆಂದರೆ ಪುಷ್ಪಪತ್ರಿಗಳ ಮುಕುಟ. ಅದನ್ನು ಒಕ್ಕಲಿಗನು ರಾಶಿಯ ದಿವಸ 'ಬೂದನ' ರಾಶಿಗೆ ಏರಿಸುವನು; ಹೂದಂಡೆಗಳನ್ನು ಸೋಟಿಗೆ ಕಟ್ಟಿ ಪೂಜೆ ಮಾಡುವನು. ತುಂಬುವ ರಾಶಿಯಲ್ಲಿ ತಟ್ಟೆತುಂಬ ಜೋಳವನ್ನು ಒಕ್ಕಲಿಗನು ಹೂಗಾರನಿಗೆ 'ಬಾಬು' ಎಂದು

ಕೊಡುವ ನಾಡಿಕೆಯು ಈಗಲೂ ಇರುವುದು. ಈ ಕಾಯಕವನ್ನು ಬಸವಾದಿ ಪ್ರಮಥರ ಕಾಲದಲ್ಲಿ ಹೂಗಾರ ಮಾದಯ್ಯನು ಮಾಡುತ್ತಿದ್ದನೆಂದು ಅವನ ಚರಿತ್ರದಿಂದ ತಿಳಿದು ಬರುವುದು.

ಬುದ್ಧಯ್ಯ ಬೂದಯ್ಯ ಎದ್ದು ತೋರಿದ ಮೆದವ
ಬಿದ್ದ ರಾಶೆಲ್ಲ ವಚನಗಳು, ಅಲ್ಲಮಗೆ
ಹುದ್ದೆ ಕಲ್ಯಾಣ ಗದ್ದಿಗೆಯು||

ಇಲ್ಲಿ ಬುದ್ಧಯ್ಯನೇ ಬೂದಯ್ಯನು. ಅವನೇ ಅಲ್ಲಮನು. ‘ಕಲ್ಯಾಣಗದ್ದಿಗೆ’ಯು ಶಿವಾನುಭವ ಮಂಟಪದ ಶೂನ್ಯ ಸಿಂಹಾಸನವನ್ನು ಸೂಚಿಸುವುದು. ಈ ಸಿಂಹಾಸನದ ಹುದ್ದೆಯನ್ನು ಪಡೆದವನೇ ಅಲ್ಲಮಪ್ರಭುದೇವರೆಂಬ ಐತಿಹಾಸಿಕ ಸಂಗತಿಯನ್ನು ಈ ಪದ್ಯ ಒಳಗೊಂಡಿದೆ.

ಸುಗ್ಗಿಯ ಲಿಂಗಯ್ಯ ಸಗ್ಗದ ಪೊರೆಯಾದ
ಬಗ್ಗಿ ಶಿವಗಣವು ಕೈ ಮುಗಿದು | ಒಕ್ಕಲಿಗ
ಉಗ್ಗಡಿಸಿ ರಾಶಿ ಒಕ್ಕ್ಯಾನೊ || ಜಾ. ಸಂ.

ಎಂಬೀ ಬಿಡಿ ಪದ್ಯಗಳು ಒಕ್ಕಲಿಗರು ಅಲ್ಲಮ ಪ್ರಭುದೇವರನ್ನು ತಮ್ಮ ಸುಗ್ಗಿಯ ಕಣದಲ್ಲಿ ‘ಬುದ್ಧಿವಂತಲಿಂಗ’ (ಬೂದ) ನೆಂದು ತಿಳಿದು ಪೂಜಿಸುವರೆಂದು ನಿರ್ಧರಿಸಿ ಹೇಳುವುವು.

ವೀರಶೈವ ಪಂಚಾಚಾರ ಮಠಗಳಲ್ಲಿ ವಿರಕ್ತ ಜಂಗಮ ಮಠವು ಹಳ್ಳಿಗಳಲ್ಲಿ ಧರ್ಮ-ದಾಸೋಹ ಸಮಾಜ ಕಾರ್ಯಗಳ ಸ್ಥಾನವಾಗಿವೆ. ಇದರ ಪೋಷಣೆಗೆ ಹೊಸಮಠದ ಎಲ್ಲ ಕಸಬುಗಾರರು ಶಿವಶರಣ (ಬಸವಾದಿ ಪ್ರಮಥ)ರ ಕಾಲದಿಂದ ಮುಡುಪುಗಳನ್ನು ಕಳಿಸುತ್ತ ಬಂದಿದ್ದಾರೆ. ಈ ಮುಡುಪುಗಳಲ್ಲಿ ಬಹುಭಾಗವು ಒಕ್ಕಲಿಗನ ಕಡೆಯಿಂದ ಬರುತ್ತಿತ್ತು, ಬರುತ್ತಿದೆ.

ರಾಶಿಗಾಳಿಯು ಬೀಸಿ ಸೂಸಿ ಹರಿಯಿತು ಕಣವು
ಕೂಸ ಕೋಳೂರ ಕಡೆಗಾಳಿ ! ಬೀಸಿಂದು
ಪೀಸಲೀ ರಾಶಿ ಜಂಗಮಕೆ || ಕೋ. ಕೊ.

ಹಿಂಗಾರಿ ಬೆಳಸಾಗಿ ಮುಂಗಡವೆ ಬೆಳೆ ಬಂದು
ಟಿಂಗ ಬಿಳಿ ಜೋಳ ಒಕ್ಕುವದು | ಬೆಳುವಲವು
ಜಂಗಮಕೆ ಎಡೆಯು ಹೊಸಬೆಳಸು|| ಕುಂ. ಗುಂ.
ಕಣದೊಳಗೆ ಒಕ್ಕಲಿಗ ದನಿಯೆತ್ತಿ ಬೆಳತನಕ
ಧನಿಯೆಂದು ಹಾಡಿ ಬೆಳಕೊಂಡು | ಒಕ್ಕುವನು
ಕಣರಾಶಿ ಉಣಿಸಿ ಜಂಗಮಕೆ|| ಮಾ. ಜಿ.

ಪೂರ್ವಕಾಲದಲ್ಲಿ ಎಲ್ಲ ಬೆಳಸುಗಳ ಮೊದಲನೆಯ ಬೀಜನ್ನು ಒಕ್ಕಲಿಗನು ಇಂತಹ ಮಠಗಳಿಗೆ ಭಕ್ತಿ ಪೂರ್ವಕವಾಗಿ ತಂದು ಕೊಡುತ್ತಿದ್ದ. ಈಗಲೂ ಈ ಪರಿಪಾಠನ್ನು ಹಳ್ಳಿಯ ಒಕ್ಕಲಿಗರಲ್ಲಿ ಕಾಣಬಹುದಾಗಿದೆ. ಆದರೆ ಕೊಡುವ ಪ್ರಮಾಣವು ಈಗ ಅಳತೆ ಮಾಪುಗಳಲ್ಲಿ ಮಾತ್ರ ಮೊದಲಿಗಿಂತಲೂ ಸ್ವಲ್ಪ ಹೆಚ್ಚು ಕಡಿಮೆಯಾಗಿರಬಹುದು. ಮೊದಲಿನ ಕಾಲದಲ್ಲಿ ಮೇಟಿಯ ರಾಶಿಯ ಹೊಂದಿಗೆ ಅದಕ್ಕೆ ಒಂದು ಪ್ರಮಾಣದಲ್ಲಿ ಬುದ್ಧಿವಂತ ಲಿಂಗ (ಬೂದ)ನ ರಾಶಿಯೆಂದು ಒಕ್ಕಲಿಗನು ತನ್ನ ಗುರು ಮಠಕ್ಕೆ ಬೇರೆ ರಾಶಿಯನ್ನೇ ಇಡುತ್ತಿದ್ದನು. ಈ ರಾಶಿಗೆ ಯಾರದೂ ಹಕ್ಕಿದ್ದಿಲ್ಲ. ಅದು ಸಮಾಜ ಸೇವೆಗೆ ಗುರು ಮಠಕ್ಕೆ ನೇರವಾಗಿ ಸಲ್ಲುತ್ತಿತ್ತು.

ಸುಗ್ಗಿಯ ದಾಸೋಹದ ಆರಾಧನೆಯ ಪೀಠದ ಗುರುವೆಂದರೆ ಬುದ್ಧಿವಂತ ಲಿಂಗ (ಬೂದ). ಇರುಳೆಲ್ಲ ಹಂತಿಯ ಹೊಡೆದು ಸುಂಕರಾಶಿಯು ಹುಲುಸಾಗಲೆಂದು ಶಿವಶರಣರ ಹಾಡುಗಳನ್ನು ಹಾಡಿ ಒಕ್ಕಲಿಗನು ಕಣದ ಹುಲುಸನ್ನು ದನದ ಶೆಗಣೆಯ ಕೂಡ ಹೊರಗೆ ಒಗೆಯಬಾರದೆಂದು ಹಂತಿಯ ಕಡೆಯೆತ್ತಿನ ಶೆಗಣೆಯನ್ನು ತೆಗೆದಿಟ್ಟು ಹಂತಿಯು ನುರಿತ ಮೇಲೆ ಬಿಡುವ ಕಾಲಕ್ಕೆ ಆ ಶೆಗಣೆಯಿಂದ ಇಷ್ಟಲಿಂಗಾಕೃತಿಯನ್ನು ಮಾಡಿ ಕಡೆಯೆತ್ತಿನ ಬಾಲದ ನಾಲ್ಕಾರು ಜವೆಗಳನ್ನು ಕಿತ್ತು ಆ ಮಾಡಿದ ಲಿಂಗದ ನೆತ್ತಿಯೊಳು ಚುಚ್ಚಿ ಜ್ಞಾನ ಭಂಡಾರದ ಶ್ರೇಷ್ಠ ಚಿನ್ಹವೆನ್ನುತ್ತ ಸೆಳ್ಳು, ಜಂತಿಗುಂಟೆ, ರಾಶಿಹೋಲು ಮೊದಲಾದ ಉಪಕರಣಗಳನ್ನು ಹೊತ್ತು–

ಬಸವ ಹಲೆ ಹಲೆ ಹಂತಿ ಬಸವ ಹಲೆ ಹಲೆ ರಾಶಿ
ಬಸವ ಹುಲು ಹುಲುಸು ಕಣ ಕಣಕೆ| ಒಕ್ಕಲಿಗ
ಬಸವ ಹೊಲಗೆಲಸ ಕಡೆತನಕೆ || ಕ. ಬ
ಆ ಕಲ್ಯಾಣ ಬಸವನನ್ಹಾಡಿ ಎಲ್ಲ ಶರಣರಿಗೆ

ಹುಲುಸನ್ನು ನೀಡಿರೆಂದು ಉಡಿಯೊಡ್ಡಿ ಬೇಡಿಕೊಳ್ಳುವ ರೂಢಿಯು ಉತ್ತರ ಕರ್ನಾಟಕದ ಬಹುತರ ಎಲ್ಲ ಭಾಗಗಳಲ್ಲಿ ಉಂಟು. ಈಗ ಸಂಕಲನ ಮಾಡಿದ ಶಿವಶರಣರ ಹಂತಿಯ ಹಾಡುಗಬ್ಬಗಳಲ್ಲಿ ಈ ಬೇಡಿಕೆಯ ಪದ್ಯಗಳು ಕಂಡು ಬರುವುವು. ಕೆಲವನ್ನು ಮಾತ್ರ ಕೆಳಗೆ ಉದಹರಿಸಲಾಗಿದೆ:–

ರಾಶಿ ಗಾಳಿಯು ಬೀಸಿ ಸೂಸಿ ಹರಿಯಿತು ಕಣವು
ಕೂಸು ಕೋಳೂರ ಕಡೆಗಾಳಿ । ಬೀಸಿಂದು
ಮೀಸಲೀ ರಾಶಿ ಜಂಗಮಕೆ ॥
ಹರಿಚಂದಗಾಳಿಗಳು ಭರದಿ ಬೈಲಿಗೆ ಬೀಸಿ
ಸುರಿ ಮಳೆಯು ನಮ್ಮ ಬೆಳುವಲಕೆ । ಕೋಳೂರ
ಬರಿಗಾಳಿ ಬೀಸಿ ಹಗೆ ತುಂಬಿ ॥
ಜಂತೆ ಗುಂಟೆಲಿ ಎಳೆವ ನಿಂತ ಕಣಕದ ರಾಶಿ
ಬಂತು ನಿನ್ನಾಡ ಹಾಡುತಲಿ । ಬೆಳತನಕ
ಚಿಂತಿಲ್ಲದೆಡೆಯು ಶಿವನಡಿಗೆ ॥ ಕೋ. ಕೊ.

ರಾಶಿಗಾಳಿ, ಕೋಳೂರ ಗಾಳಿಗಳು ಬೀಸಿದರೆ ಆ ರಾಶಿ ಮತ್ತಿಷ್ಟು ಹುಲುಸು ತುಂಬುವುದು. ಆ ಗಾಳಿಗಳು ಬೀಸಲು ಅವನು ಮೆದ ತೂರಿ ರಾಶಿಯನ್ನು ಮಾಡುವನು.

ಗುಂಡ ತಿಗರಿಯ ತಿರುವಿ ರುಂಡಧಾರಿಯು ಕುಣಿದು
ಥಂಡಿ ಬೀಳುತಲಿ ಬೆಳುವಲಕೆ । ಕುಂಬಾರ
ಗಿಂಡಿ ರಸಗಾಳಿ ಬೀಸುತಲಿ ॥ ಕುಂ. ಗುಂ

ಬೆಳುವಲದಲ್ಲಿ ಕುಂಬಾರ ಗಾಳಿಯು ಬೀಸಹತ್ತಲು ಥಂಡಿ ಬೀಳುವುದು. ಥಂಡಿಗೆ ಹಿಂಗಾರಿ ಬೆಳೆಗಳು ಬೆಳೆದು ಹುಲುಸಾಗುವುವೆಂಬ ಭಾವನೆಯು ಒಕ್ಕಲಿಗರಲ್ಲಿರುವುದು. ಹೀಗೆ ಬೀಸುವ ಗಾಳಿಗಳನ್ನು ಒಕ್ಕಲಿಗನು ಹಂತಿಯಲ್ಲಿ ಹಾಡಿದ್ದಾನೆ.

ಸುಂಕರಾಶಿಯ ಕಣಕೆ ಸಂಕದೇವನ ಬಲವು
ಕಂಕಿಯಾ ಕಣಕೆ ನಿನ ಬಲವು । ಮಾದೇವಿ
ಸೊಂಕಿದರೆ ರಾಶಿ ಕಣತುಂಬಿ ॥ ಬಿ. ಮಾ.

ಒಕ್ಕಲಿಗನ ಸುಂಕರಾಶಿಯ ಕಣಕೆ ಸಂಕದೇವನ ಬಲವು ಇದ್ದರೂ ಬಿಜ್ಜಮಹಾದೇವಿಯ ಹಾಡನ್ನು ಹಾಡಲು ರಾಶಿಯು ಉಕ್ಕಿ ಬರುವುದೆಂದು ಅವನ ಮುಗ್ಧ ಭಾವನೆಯಿದೆ.

ಅಡವಿ ಪೂಜೆಯ ಮಾಡಿ ಎಡೆ ಮಾಡಿ ಕೂರಿಗಿಗೆ
ಒಡೆಯ ಗೊಲ್ಲಾಳ ಬಿತ್ತಿದರೆ । ಮಳೆಯಾಗಿ
ಕಡೆ ರಾಶಿ ತುಂಬಿ ಕೈ ಸೋತು ॥ ಗೊ. ಗೊ.

ಈ ಪದ್ಯವು ಬಿತ್ತುವ ಸಮಯದಲ್ಲಿಯ ಒಂದು ವಿಶಿಷ್ಟ ಸಂಪ್ರದಾಯವನ್ನು ಸೂಚಿಸುತ್ತದೆ. ಬೆಳುವಲದೊಳಗೆ, ಅಷ್ಟೇಕೆ ಇಡೀ ಉತ್ತರ ಕರ್ನಾಟಕದಲ್ಲಿ ಅಡವಿಯ ಪೂಜೆ ಮಾಡುವವರು ಕುರುಬರು. ಗೊಲ್ಲಾಳೇಶ್ವರನ ಮುಗ್ಧ ಭಕ್ತಿಗೆ ಶಿವನು ಕುರಿಯ ಹಿಕ್ಕಿಯಲ್ಲಿ ಮೂಡಿದ. ಬಿತ್ತದಲೆ ಅಡವಿಯೆಲ್ಲ ಬೆಳೆ ಬಂದು ಬಿಟ್ಟಿತು. ಕಾರಣ ಒಕ್ಕಲಿಗರು ಈ ಮುಗ್ಧ ಶರಣನ ಹೆಸರಿಗೆ ಪಾವನತೆಯನ್ನಂಟಿಸಲು ಅಂದಿನಿಂದಲೂ ಊರ ಕುರುಬರಿಗೆ ಅಡವಿಯ ಪೂಜೆ ಮಾಡುವ ಹಕ್ಕು ಬೆಳುವಲದಲ್ಲಿ ಚ್ಯಾಜಾಗಿ ಬಂದಿರುವುದೆಂದು ಆ ಭಾಗದ ಹಿರಿಯ ಒಕ್ಕಲಿಗರೆಲ್ಲ ಹೇಳುವರು. ಈಗಲೂ ಈ ಸಂಪ್ರದಾಯವನ್ನು ಎಲ್ಲ ಹಳ್ಳಿಗರು ಮುಗ್ಧ ಭಕ್ತಿಯಿಂದ ತಪ್ಪದಲೆ ಆಚರಿಸುವರು.

ಬೆಚ್ಚು ಗಡಿಗೆಯು ಗುಂಡ ನುಚ್ಚು ಜೋಕನು ಚೆರಗ
ಬೆಚ್ಚಾಕಿ ಹೊಲಕೆ ಒಕ್ಕಲಿಗ । ಚೆರಗೊಗೆದ
ಬಚ್ಚಿಡಲು ಹುಲುಸು ಹೊಲದೊಳಗೆ ॥
ಬೆಚ್ಚು ಹಾಕಿದ ಗಡಿಗಿ ಮುಚ್ಚಿಟ್ಟ ಬನಹುಲುಸು
ಬಚ್ಚಾದ ಬೆಳೆಯ ಕಣವುಕ್ಕಿ ಗುಂಡಯ್ಯ
ಹೆಚ್ಚಾಯ್ತು ನಿನ್ನ ಶಿವಭಕ್ತಿ । ಕುಂ. ಗುಂ.

ಮಹಾಶಿವ ಶಿವಶರಣ ಗುಂಡಯ್ಯನ ಸಮರಸ ಭಕ್ತಿಯು ಅಮರವಾಗಿ ಉಳಿಯಲೆಂದು ಒಕ್ಕಲಿಗನು ತನ್ನ ಕಾಯಕದಲ್ಲಿ ಅದಕ್ಕೆ ಹೆಚ್ಚಿನ ಪಾವನತೆಯನ್ನು ಅಂಟಿಸಿದ್ದಾನೆ. ಭೂಮಿಯ ಬಿತ್ತಿದಮೇಲೆ ಸಸಿಯೆದ್ದು ಹೊಡೆ ಹೊರುವ ಸಮಯದಲ್ಲಿ ಹೊಲದ ಹುಲುಸು ಹೊಡೆಯಿಂದ ಹಾರಿ ಹೋಗಬಾರದೆಂದೂ ಬನದ ಹುಲುಸೆಲ್ಲ ಸಮರಸವಾಗಿ ಹೊಲದ ಬೆಳೆಯಲ್ಲಿಯೇ ಅಡಗಲೆಂದೂ ಗುಂಡಯ್ಯನ ಮಡಕೆಯನ್ನು ಪೂಜೆ ಮಾಡಿ ಜೋಕುಮಾರನ ಅಳಕ ಅಂಬಲಿ (ಹುಳಿ ನುಚ್ಚು) ಚೆರಗವನ್ನು ಹೊಲದ ತುಂಬೆಲ್ಲ ಸೂಸಾಡಿ ಹೊಲದ ಮಧ್ಯದಲ್ಲಿ ಆ ಮಡಕೆಯನ್ನು ಬೆಚ್ಚಿಂದು ದಬ್ಬುಹಾಕುವ ರೂಢಿಯು ಒಕ್ಕಲಿಗರಲ್ಲಿ ಉಂಟು. ಮೊದಲು 'ಬೆಚ್ಚು' ಈ ಶಬ್ದವು 'ಬೈಚು' ಅಂದರೆ 'ಮುಚ್ಚಿಡು' ಎಂಬರ್ಥವನ್ನೊಳಗೊಂಡು ಬಳಕೆಯಲ್ಲಿರಬಹುದೇ ? ಶಿಲಾಶಾಸನಗಳಲ್ಲಿಯ 'ಬೈಚೇಯ' ದಂಡನಾಯಕ, ಜನಪದದಲ್ಲಿಯ 'ಬೈಚಪ್ಪ' 'ಬೆಚ್ಚಪ್ಪ' 'ಎಚ್ಚರಪ್ಪ' ಎಂಬ ಹೆಸರುಗಳು ಇದೇ ಶಬ್ದದ ಬೇರೆ ರೂಪಾಂತರಗಳು. ವಚನ ಶಾಸ್ತ್ರದಲ್ಲಿ ಈ ಶಬ್ದವನ್ನು ವಚನಕಾರರು ಹೇರಳವಾಗಿ ಬಳಸಿ

ದ್ದಾರೆ. "ಉದಕದೊಳಗೆ ಬೆಚಿಟ್ಟ ಬಯಕೆಯ ಕಿಚ್ಚಿ ನಂತಿದ್ದೀತು" ಎಂಬ ಪ್ರಯೋಗವು ಬಸವಣ್ಣನವರ ಷಟ್‌ಸ್ಥಲ ವಚನ ಶಾಸ್ತ್ರದಲ್ಲಿ ಬಂದಿದೆ. ಆದರೆ ಈ 'ಬೆಚ್ಚು' ಈಗ ಹೊಲದಲ್ಲಿ ಕೇವಲ 'ಬೆದರು' ಎಂಬರ್ಥ ದಲ್ಲಿ ಉಪಯೋಗಿಸಲ್ಪಡುವುದು. ಬನದ ಹುಲುಸನ್ನು ಕುಂಬಾರ ಗುಂಡಯ್ಯನ ಸಮರಸ ಶಿವಭಕ್ತಿಯ ಮಡಕೆ ಯಲ್ಲಿ ಮುಚ್ಚಿಟ್ಟರೆ ಅದು ಹೊಲಬಿಟ್ಟು ಹಾರಿಹೋಗ ಲಾರದೆಂಬ ಮುಗ್ಧ ಭಾವನೆಯಿಂದ ಹೊಲದಲ್ಲಿ ಶಿವಶರ ಣನ ಹೆಸರಿಲೆ ದಬ್ಬುಹಾಕುವ ಮಡಕೆಗೆ ಒಕ್ಕಲಿಗನು "ಬೆಚ್ಚು" ಎಂದು ಕರೆದಿರುವನು. ಈ ಬೆಚ್ಚು ಗಡಿ ಗೆಯೇ ಗುಂಡನೆಂದೂ "ನುಚ್ಚು (ಅಂಬಲಿ) ಜೋಕನು" ಹೊಲಕ್ಕೆ ಚೆಲ್ಲುವ ಅಳಕಂಬಲಿ ಚೆರಗವೆಂದೂ ಒಕ್ಕಲಿ ಗನು ಕುಂಬಾರ ಗುಂಡಯ್ಯನ ಹಂತಿಯ ಹಾಡಿನಲ್ಲಿ ಹಾಡಿದ್ದಾನೆ. ಹೀಗೆ ಭಕ್ತಿಯಿಂದ ಶಿವಶರಣ ಗುಂಡಯ್ಯ ನನ್ನು "ಬೆಚ್ಚು" ಎಂದು ಪೂಜೆ ಮಾಡಿದಮೇಲೆ ಬೆಳೆಯು ಬಚ್ಚಾದರೇನು ? ಕಣವುಕ್ಕಿ ದೊಡ್ಡ ರಾಶಿಯಾಗುವು ದೆಂದು ಹೇಳಿ ಕಡೆಗೆ ಗುಂಡಯ್ಯನ ಶಿವಭಕ್ತಿಯೇ ಮಿಗಿ ಲೆಂದು ಒಕ್ಕಲಿಗನು ಹಾಡಿದ್ದಾನೆ.

> ನಿನ್ನ ಹೆಸರಿಲೆ ಹಂತಿ, ಹೊನ್ನ ಮುತ್ತಿನ ರಾಶಿ
> ಹೆಣ್ಣಾದ ಮನಸಿನೊಕ್ಕಲಿಗ | ಒಕ್ಕುವನು
> ಕನ್ನೆ ಶಿವಭಕ್ತಿ ದಾಸೋಹ ॥ ಇ. ಬೊ.

> ನೇಗಿ ಹೂಡಿದ ಜೇಡ, ನೇಗಲಿಯ ಒಕ್ಕಲಿಗ
> ಹಾಗಿನಲಿ ಹಾಡಿ ಹುಲುಸಾಗಿ | ಭೂಲೋಕ
> ತೂಗಿ ತೊನೆಯುವದು ಬೆಳೆತುಂಬಿ ॥ ನೇ. ಅ.

> ಚಿಕ್ಕಮಾ್ನ ಹಾಡು ಉಕ್ಕಿಸಿತು ತೆನೆರಾಶಿ
> ಒಕ್ಕುದಕೆ ಸೋತು ಒಕ್ಕಲಿಗ | ಜಂಗಮಕೆ
> ತೆಕ್ಕೆ ತೆಕ್ಕೆಯಲಿ ಉಡಿತುಂಬಿ ॥ ಹೂ. ಮ.

> ಹಾಡುತಲಿ ಒಕ್ಕಲಿಗ ಮಾಡುವನು ಸುಗ್ಗಿಯನು
> ನೀಡು ಚೆನ್ನಯ ನೀಹುಲುಸ | ಕಾಡೊಳಗೆ
> ನಾಡು ತುಂಬಿರಲಿ ಶಿವಭಕ್ತಿ ॥ ಮಾ. ಚೆ.

ಹೀಗೆ ಒಕ್ಕಲಿಗನು ತನ್ನ ಬೆಳೆಯು ಹುಲುಸಾಗಲೆಂದು ಭಕ್ತಿಭಾವದಿಂದ ಶಿವಶರಣರನ್ನು ಪೂಜಿಸಿ ಹಾಡುತ್ತಾನೆ. ಅಂತೆಯೇ ಅವನು ಶರಣರನ್ನು ಹುಲಸನ್ನೀಯುವ "ಶಿವಬಂಟ" ರೆಂದು ಹೊಗಳಿದ್ದಾನೆ.

> ಸುಗ್ಗಿಯಾ ಕಣಕೇಕೊ, ಸಗ್ಗವದು ರೈತನಿಗೆ
> ಹಿಗ್ಗಿ ಹಾಡುದಕೆ ಬೆಳುವಲವು | ಚೌಡಯ್ಯ
> ಬುಗ್ಗೆ ಕುಣಿಯುದಕೆ ಶಿವರೂಪ ॥

> ಕುಣಿಕುಣಿದು ಚೌಡಯ್ಯ ಮಣಿಮಣಿದು ಹಾಡಿದ
> ಕಣತುಂಬಿ ರಾಶಿ ಹೊರಸೂಸಿ | ಒಕ್ಕಲಿಗ
> ಮಣಿದು ದಾಸೋಹ ಹೊಸ ಮತಕೆ ॥

> ಸುಂಕರೂಪವ ಹಾಕಿ ಕಂಕರಿಯ ಬಾರಿಸುತ
> ಕಂಕಣವ ಕಟ್ಟಿ ಚೌಡಯ್ಯ | ಕುಣಿಯುದಕೆ
> ಕಂಕಿ ಹುಲುಸಾಗಿ ಕಣತುಂಬಿ ॥

> ಗೆಜ್ಜೆಕಟ್ಟಿದ ಕಾಲು ಹೆಜ್ಜೆಹಾಕುತ ಕುಣಿದು
> ಸಜ್ಜು ನಿನ್ನಾಡು ಬೆಳುವಲಕೆ | ಚೌಡಯ್ಯ
> ಗುಜ್ಜಿ ಕಣದೊಳಗೆ ಬೆಳೆತನಕೆ ॥

> ನೆನಸಿ ಕುಣಿಕುಣಿದಾಡಿ ತೆನೆ ರಾಶಿ ಹಂತಿಯೊಳ
> ಬನದ ಹುಲುಸೆಲ್ಲ ಕಣಕೆರಗಿ | ಚೌಡಯ್ಯ
> ಉಣಿಸೊ ಬೆಳುವಲವ ಬೆಳೆಹೊಕ್ಕು ॥

> ಚೌದ ಕುಣಿಯುವ ಹಾಡ ಹಾಡಿ ಹೊಲ ಹದಮಾ
> ಮೋಡ ಮಳೆಗರೆಯೆ ಒಕ್ಕಲಿಗ | ಬಿತ್ತಿದರೆ
> ನಾಡೆಲ್ಲ ಬೆಳೆಸು ಹುಲುಸಾಗಿ ॥ ಜಾ. ಚೌ

ಬೆಳುವಲದ ರೈತರು ಹಂತಿಯಲ್ಲಿ ಚೌಡಯ್ಯನ ಹಾಡನು ಹಾಡಿ ದಪ್ಪು ಬಾರಿಸಿ ಕುಣಿದು ಹೆಜ್ಜೆಯ ಹಾಕುವರು ಅವನ ಹಾಡು ಅವರಿಗೆ ಬೆಳೆಗೆ ಬೆಳುವಲಿಯು.

> ಸುಗ್ಗಿ ದಾಸೋಹೆಂದು ಹಿಗ್ಗಿ ಬೆಳುವಲ ನೋ
> ಹುಗ್ಗಿ ಹೋಳಿಗೆಯು ನಿನ್ನಾಡು | ಸುಗ್ಯಾಟ
> ನಗ್ಗೇಡು ಇದಕೆ ಮಲೆನಾಡು ॥

> ಹಾರಿ ಬರುವದು ಹುಲುಸು ಏರಿ ಮಾದನ ಪತ್ರಿ
> ಸೂರಿ ಹಾಡುವೆನು ನಿನ್ನಾಡ | ಬೆಳತನಕ
> ಯಾರು ಕೈತಟ್ಟಿ ನಿಲ್ಲುವರು ॥ ಹೂ. ಮಾ.

ಬೆಳುವಲ ಒಕ್ಕಲಿಗರಿಗೆ ಸುಗ್ಗಿಯು ದಾಸೋಹ. ಈ ಸಂದರ್ಭದಲ್ಲಿ ಮಲೆನಾಡು ನಗ್ಗೇಡು. ಬನದ ಹುಲುಸು ಹಾರಿಬಂದು ತನ್ನ ರಾಶಿಯಲ್ಲಿ ಬೆರೆಯಲೆಂದು ಪತ್ರಿ ಪುಷ್ಪಗಳನ್ನು ರಾಶಿಗೆ ಏರಿಸಿ ಒಕ್ಕಲಿಗನು ಕಣತುಂಬ ಸೂಸಾಡುವನು.

ಶರಣು ಶರಣೆಂಬುವೆವು ಹರಣ ಹಾರುವತನಕ
ಕರುಣಿಸರಿ ಶರಣ ಬೊಮ್ಮಯ್ಯ | ನಮಗಿನ್ನು
ಹರಸರಿ ಹುಲುಸು ಹುಲ್ಲುಲ್ಲಿಗೂ ||

ಎಂಬ ಬೇಡಿಕೆಯ ಪದ್ಯವು ಎಲ್ಲ ಶಿವಶರಣರ ಹಂತಿಯ ಹಾಡುಗಳ ಕೊನೆಯನ್ನು ಹೇಳುವ ಪದ್ಯವಾಗಿವೆ. ಈ ಪ್ರಕಾರ ಈ ಹಂತಿಯ ಹಾಡುಗಬ್ಬಗಳ ಕೊನೆಯಲ್ಲಿ ಒಕ್ಕಲಿಗನು ಶರಣರಿಗೆ (ಶಿವಬಂಟರಿಗೆ) ಹುಲುಸನ್ನು ಕೊಡಿರೆಂದು ಬೇಡಿಕೊಂಡಿದ್ದಾನೆ.

ಕನ್ನ ಬೇಟೆಯನಾಡಿ ಹೊನ್ನ ಬೆಟ್ಟವ ತಿರುಗಿ
ಪನ್ನಂಗ ಧರಗೆ ಎಡೆಮಾಡಿ | ನರಿಕೂಗಿ
ಸಣ್ಣಾ ರಾಸ್ಯುಕ್ಕಿ ಕಣತುಂಬಿ || ಬೇ. ಕ.

ಇಲ್ಲಿ ರಾಶಿಯನ್ನು ತುಂಬುವ ಕಾಲದಲ್ಲಿಯ ಇನ್ನೊಂದು ಸಂಪ್ರದಾಯವು ಅಡಕವಾಗಿದೆ. ಒಕ್ಕಲಿಗನು ರಾಶಿ ಬುತ್ತಿಯ ಮಾಡಿ ಕಣದಲ್ಲಿ ಶಿವಶರಣರಿಗೆ ಪೂಜೆ ಮಾಡಿ ಭೂತಾಯಿಗೆ ಕಡೆಯ ಚೆರಗವನ್ನೊಗೆದು ಬಂದವರೊಡನೆ ಆನಂದದಿಂದುಂಡು ರಾಶಿಯನ್ನು ಕಾಯಲು ಇರುಳೆಲ್ಲ ಜಾಗರಣೆ ಮಾಡುವನು ಬೆಳಗಿನ ಜಾವದಲ್ಲಿ ನರಿಯು ಕೂಗಲು ರಾಶಿಯನ್ನು ತುಂಬುವ ಸಂಪ್ರದಾಯವು ವಾಡಿಕೆಯಲ್ಲಿರುವುದು. ಶಿವಶರಣ ಕನ್ನಯ್ಯನು ಶಿವನ ಪೂಜೆಯ ಮಾಡಿ ಬೆಳಗಿನ ಜಾವದಲ್ಲಿ ತಾನು ತಂದ ಮಾಂಸವನ್ನು ಕುಚ್ಚಿ ಶಿವನಿಗೆ ಎಡೆ ಮಾಡುವಕಾಲಕ್ಕೆ ನರಿಯು ಕೂಗಲು ಶಿವನು ಪ್ರತ್ಯಕ್ಷನಾಗಿ ಕನ್ನಯ್ಯನ ಭಕ್ತಿಗೆ ಮೆಚ್ಚಿ ಶಿವಪದವನ್ನು ಕೊಟ್ಟನೆಂಬ ಕಥೆಯನ್ನು ಕೇಳಿದ ಒಕ್ಕಲಿಗನು ಕನ್ನಯ್ಯನ ಕನ್ನೆ ಭಕ್ತಿಗೆ ಮೆಚ್ಚಿದ್ದಾನೆ. ಆ ಶಿವಶರಣನು ಶಿವಪದ ಹೊಂದಿದ ಸಮಯವು ಶುಭವೆಂದು ಬೆಳಗಿನ ನರಿಯು ಕೂಗುವಾಗ ತನ್ನ ರಾಶಿಯು ಹುಲುಸಾಗಲೆಂದು ಕನ್ನಯ್ಯನನ್ನು ನೆನಿಸಿ ರಾಶಿಯನ್ನು ತುಂಬುವನು. ಹೀಗೆ ಮಾಡುವುದರಿಂದ ರಾಶಿಯು ಹುಲುಸಾಗುವುದೆಂದು ಒಕ್ಕಲಿಗರು ಹೇಳುತ್ತಾರೆ.

ಬೆಳ್ಳಿ ಮೂಡುವ ಮುನ್ನ ಕೊಳ್ಳ ಕೊಳ್ಳವ ತಿರುಗಿ
ಕಳ್ಳಂದ ಬೇಟೆಯಾಡುವನು | ಕಣದೊಳಗೆ
ಒಕ್ಕಿ ಹಂತ್ಯಾಗಿ ಹುಲುಸಾಗಿ|| ಬೇ. ಕ.

ಎಂಬ ಮುಗ್ಧ ಭಾವನೆಯು ಒಕ್ಕಲಿಗರಲ್ಲಿದೆ. ಇಷ್ಟು ಪ್ರಭಾವವಾಗಿದೆ ಶಿವಶರಣರದು ಒಕ್ಕಲಿಗನಮೇಲೆ !

ಶಿವಶರಣರ ಕಾಲದಲ್ಲಿ ಒಕ್ಕಲಿಗನ ಕಣದಲ್ಲಿ ಗೋಪಾಳವಿದ್ದಿಲ್ಲ. 'ಗೋಪಾಳವು' ವೈಷ್ಣವದಾಸರ ಗುರುತಿದ್ದು ದಾಸರ ಕಾಲದಲ್ಲಿ ಅದು ಒಕ್ಕಲಿಗನ ಸುಗ್ಗಿಯ ಕಣದಲ್ಲಿ ಕಾಲಿಟ್ಟಿತು. ಬುದ್ಧಿವಂತ ಲಿಂಗನು ಬೂದಾದನು. ಇದು ಹೇಗೆ? ಎಂಬ ಪ್ರಶ್ನೆಯು ಸಂಶೋಧಕರ ಮಿದುಳನ್ನು ಕಿವುಚದೆ ಬಿಡದು.

(ಮುಂದುವರಿಯುವದು)

ಶೀಘ್ರದಲ್ಲಿ ಪ್ರಕಟವಾಗುತ್ತದೆ.

— ೪ನೆಯ ಪ್ರಕಟಣೆ —

ಅತಿದೂರದ ಜಗತ್ತಿನಲ್ಲಿ

ನಕ್ಷತ್ರ ರಾಜ್ಯದ ಒಂದು ಸಾಹಸಿ ಪ್ರೇಮಕಥೆ.

ಶ್ರೀ ಹೆಗಡೆ ಬಂಧುಗಳು. ಬೆಲೆ: ೦-೧೦-೦

— ೫ನೆಯ ಪ್ರಕಟನೆ —

ಕುಮಾರಿ ಸುನೇತ್ರಾ

ಚೀನದ ಹೆಸರಾಂತ ಬರೆಹಗಾರರಾದ
ಲಿನ್. ಯು. ಟೆಂಗರ
ಒಂದು ಕಾದಂಬರಿಯ ಆಧಾರದ ಮೇಲೆ ಬರೆದದ್ದು.

ಶ್ರೀ ತಲಚೇರಕರ. ಬೆಲೆ: ೦-೧೦-೦

— ಚಂದಾದಾರರಿಗೆ ಸವಲತ್ತು —

೬ ರೂ. ಗಳಿಗೆ ೧೨ ಪುಸ್ತಕಗಳು.

ಸುಲಭ ಸಾಹಿತ್ಯ ಪ್ರಕಾಶನ, ಕುಮಟಾ

ಇದೇ ಅಚ್ಚಾಗಿದೆ

ಮೂಲೋದ್ಯೋಗದ ಹೊಸ ಅಭ್ಯಾಸ ಪತ್ರಿಕೆ

(ಪ್ರಾಥಮಿಕ ಶಾಲೆಗಳಲ್ಲಿ ೧ ರಿಂದ ೭ನೆಯ ಇ.ಗಳಿಗಾಗಿ)

ಬೆಲೆ: ೦—೨—೬

ಅಂಚೆವೆಚ್ಚ ರೂ. ೦—೧—೦ ಪ್ರತಿಯೊಂದಕ್ಕೆ

ಪ್ರತಿಗಳು ಸಿಗುವ ಸ್ಥಳ:—

ಪ್ರಧಾನ ಸಂಪಾದಕರು ಕನ್ನಡ ಪ್ರಾಥಮಿಕ ಶಿಕ್ಷಣ ಧಾರವಾಡ.

ಮೂಲ ಶಿಕ್ಷಣದ ಅರಿವು

ಅನುವಾದಕರು:– ಶ್ರೀ ಶಿಂತ್ರಿ ಬಸಪ್ಪನವರು

೧. ಪ್ರಕರಣ

ಹಲವು ತಪ್ಪು ಕಲ್ಪನೆಗಳು

ಮೂಲ ಶಿಕ್ಷಣದ ಬಗೆಗೆ ಪ್ರಾರಂಭದಲ್ಲಿಯೇ ಬಹುಜನರ ತಪ್ಪು ಕಲ್ಪನೆಯಾದದ್ದು ದುರ್ದೈವವು. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಅದನ್ನು ರಾಷ್ಟ್ರೀಯ ದೃಷ್ಟಿಯಿಂದ ಸ್ವೀಕರಿಸಿದಾಗ್ಯೂ ಸಹ ಅವರ ಬಗೆಗೆ ಹಲವು ತೆರನಾಗಿ ತಪ್ಪು ಗ್ರಹಿಕೆಗಳಾಗಿವೆ. ಹಳೇ ಸಂಪ್ರದಾಯಗಳಿಗೆ ಮನಸೋತವರೂ ಪ್ರಗತಿಪರ ವಿಚಾರಶೀಲರಲ್ಲದವರೂ ಗಾಂಧೀಜಿಯವರ ಶಿಕ್ಷಣದ ಬಗೆಗಿನ ವಿಚಾರಗಳು ಅವ್ಯವಹಾರ್ಯವೆಂದೂ ಅನಿಷ್ಟವೆಂದೂ ಬಗೆದರು. ಶಿಕ್ಷಣವನ್ನು ಸ್ವಾವಲಂಬಿಯನ್ನಾಗಿ ಮಾಡಬೇಕೆಂಬ ಮಹಾತ್ಮರ ವಿಚಾರವು ಅಶಕ್ಯವೆಂದು ಬಗೆದು ಮೂಲ ಶಿಕ್ಷಣವನ್ನು ಹಳಿಯಲು ಜನರಿಗೆ ಅದು ಸಾಕಷ್ಟು ಕಾರಣವನ್ನೊದಗಿಸಿತು. ಎಷ್ಟೋ ಜನರು ಕಾಂಗ್ರೆಸ್ಸದ ವಿರುದ್ಧ ಪಕ್ಷದವರಿದ್ದರು. ಕಾಂಗ್ರೆಸ ಪಕ್ಷವು ಮೂಲ ಶಿಕ್ಷಣವನ್ನು ಪುಷ್ಟೀಕರಿಸಿತಾದುದರಿಂದ ವಿರುದ್ಧ ಪಕ್ಷದವರಿಗೆ ವಿರೋಧ ಭಾವವನ್ನು ತಾಳಲು ಅವಕಾಶವನ್ನು ಕೊಟ್ಟಿತು. ಕೆಲವು ವರ್ಷಗಳ ನಂತರ ರಾಜ್ಯ ಸರಕಾರಗಳು ಮೂಲ ಶಿಕ್ಷಣವನ್ನು ಕುರಿತು ತಮ್ಮ ತಮ್ಮ ರಾಜ್ಯದಲ್ಲಿಯ ಶಿಕ್ಷಣತಜ್ಞರ ಸಮಿತಿಗಳನ್ನು ನಿಯಮಿಸಿ ಆಯಾ ಸಮಿತಿಗಳ ಶಿಫಾರಸುಗಳನ್ವಯ ಅದನ್ನು ಸ್ವೀಕರಿಸಿದಾಗ್ಯೂ ಜನರಲ್ಲಿಯ ವಿರೋಧ ಭಾವವು ಇನ್ನೂ ಸಂಪೂರ್ಣವಾಗಿ ಅಳಿದಿಲ್ಲ. ಮೂಲ ಶಿಕ್ಷಣದ ಒಳಹೊರಗನ್ನು ಚನ್ನಾಗಿ ಅಭ್ಯಾಸ ಮಾಡದೆ ಗಾಂಧೀಜಿಯವರ ಅನುಯಾಯಿಗಳಾದಂಥ ಹಲವು ಕಾಂಗ್ರೆಸ ಪಕ್ಷದವರು ಸಹ ಅದರ ಬಗೆಗೆ ತಪ್ಪು ವಿಚಾರಗಳನ್ನು ಹರಡಲು ಕಾರಣೀಭೂತರಾದರು. ಹೀಗಾಗಿ ಹೊಸ ಶಿಕ್ಷಣದ ಬಗೆಗೆ ಜನರನ್ನು ತಪ್ಪು ದಾರಿ ಹಿಡಿಸಲು ಮಿತ್ರರೂ ವಿರೋಧಿಗಳೂ ಕೂಡಿಯೇ ಕೆಲಸ ಮಾಡಿದರು.

ಮೂಲ ಶಿಕ್ಷಣವು ಆವುದೇ ಬಗೆಯ ರಾಜ್ಯಕೀಯ ಪಕ್ಷ ಪಂಗಡಗಳಿಗೆ ಅಂಟಿಕೊಂಡಿಲ್ಲೆಂಬುದನ್ನು ಸ್ಪಷ್ಟವಾಗಿ ಅರಿತುಕೊಳ್ಳಬೇಕು. ರಾಷ್ಟ್ರೀಯ ಕಾಂಗ್ರೆಸ್ಸಿನ ಒಂದು ಠರಾವಿನನ್ವಯ ಮೊತ್ತಮೊದಲಿನ ಮೂಲ ಶಿಕ್ಷಣ ಸಮಿತಿಯು ಸ್ಥಾಪಿಸಲ್ಪಟ್ಟಿತೆಂಬುದು ನಿಜವಿದೆ. ಆದರೆ, ಡಾಲ್ಟನ್ ಇಲ್ಲವೆ ಮಾಂಟಿಸೋರಿ ಪದ್ಧತಿಗಳಂತೆ ಅದು ಚನ್ನಾಗಿ ಮನ್ನಿಸಲ್ಪಟ್ಟದ್ದೊಂದು ಪದ್ಧತಿಯಾಗಿ ತನ್ನ ವೈಯಕ್ತಿಕ ಹಿರಿಮೆಯ ಮೇಲೆ ನಿಂತಿದೆ. ಅಮೇರಿಕೆ ಮೊದಲಾದ ಮುಂದರಿದ ರಾಷ್ಟ್ರಗಳಲ್ಲಿ ಪುಸ್ತಕೀಯ ಶಿಕ್ಷಣದಿಂದ ಮಕ್ಕಳ ವಿಕಾಸವು ಅಷ್ಟೊಂದು ಚನ್ನಾಗಿ ಆಗುವದಿಲ್ಲೆಂದೂ ಮನಃಶಾಸ್ತ್ರದ ದೃಷ್ಟಿಯಿಂದ ಅದು ಅಯೋಗ್ಯವೆಂದೂ ಕಂಡು ಹಿಡಿಯಲ್ಪಟ್ಟಿದೆ. ಮಗುವಿನ ವಯೋಮಾನಕ್ಕನುಸರಿಸಿ ಚಟುವಟಿಕೆಗಳ ಮುಖಾಂತರ ಶಿಕ್ಷಣವು ಸಾಗಬೇಕೆಂಬ ಪದ್ಧತಿಯೊಂದನ್ನು ಆ ರಾಷ್ಟ್ರಗಳು ಸೂಚಿಸಿವೆ. ಅದು ಎಲ್ಲ ದೃಷ್ಟಿಯಿಂದಲೂ ಪ್ರಗತಿಪರ ಪದ್ಧತಿಯೆಂದು ಅಂಗೀಕರಿಸಲ್ಪಟ್ಟಿದೆ. ಗಾಂಧೀಜಿಯವರು ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಚಟುವಟಿಕೆಯು ಉದ್ದೇಶಪೂರಿತವಿದ್ದು ಕೊನೆಯ ವರೆಗೆ ಸಾಗಿಸಲ್ಪಡಬೇಕೆಂದು ಅಂದಿದ್ದಾರೆ. ಮೂಲ ಶಿಕ್ಷಣವು ಮಕ್ಕಳ ಮೇಲೆ ಪಂಚಪ್ರಾಣನಾಗಿದ್ದವನಿಂದ ಆವಿರ್ಭವಿಸಿದ ಪ್ರಗತಿಪರ ಪದ್ಧತಿಯಾಗಿದೆಯೆಂಬುದನ್ನು ಗಮನಿಸುವದೊಳಿತು. ಅದರಿಂದ ಹೊರಹೊಮ್ಮುವ ಪರಿಣಾಮಗಳ ಮೇಲಿಂದ ಅದರ ಯೋಗ್ಯತೆಯನ್ನು ನಿರ್ಧರಿಸುವದು ಲೇಸು.

೧೯೩೭ ರಲ್ಲಿ ಜನಪ್ರಿಯ ಸರಕಾರಗಳು ಅಧಿಕಾರಾರೂಢವಾದಾಗ ಕೆಲವು ಪ್ರಾಂತಗಳಲ್ಲಿ ಮೂಲ ಶಿಕ್ಷಣವು ಪ್ರಾರಂಭಿಸಲ್ಪಟ್ಟಿತು. ಆದರೆ ಎರಡನೆಯ

ಮಹಾಯುದ್ಧವು ಪ್ರಾರಂಭವಾದ ಕೂಡಲೆ ಕಾಂಗ್ರೆಸ್ಸು ಅಧಿಕಾರತ್ಯಾಗ ಮಾಡಿದ್ದರಿಂದಲೂ ಎಷ್ಟೋ ಕಾಂಗ್ರೆಸ್ಸಿಗರು ಸೆರೆಮನೆಯನ್ನು ಸೇರಿದ್ದರಿಂದಲೂ ಅದು ಸರಕಾರದ ಉದಾರಾಶ್ರಯವನ್ನು ಕಳಕೊಂಡಿತು. ಆ ಅವಧಿಯಲ್ಲಿ ಶ್ರೀ ಆರ್ಯನಾಯಕಂ ಹಾಗೂ ಶ್ರೀಮತಿ ಆಶಾದೇವಿ ಇವರೀರ್ವರು ಸೇವಾಗ್ರಾಮದಲ್ಲಿ ಸದ್ದಿಲ್ಲದೆ ದುಡಿದು ಅದನ್ನು ಕಾರ್ಯರೂಪಕ್ಕಿಳಿಸಿದರು. ಅಷ್ಟರೊಳಗೆ ಆಗಿನ ಹಿಂದುಸ್ತಾನ ಸರಕಾರಕ್ಕೆ ಸರ್ ಜಾನ್ ಸಾರ್ಜೆಂಟರವರು ಶಿಕ್ಷಣ ಖಾತೆಯ ಉಪದೇಶಕರಾಗಿದ್ದರು. ನಮ್ಮ ರಾಷ್ಟ್ರದ ಶೈಕ್ಷಣಿಕ ವಿಕಾಸಕ್ಕೋಸ್ಕರ ಯೋಜನೆಯೊಂದನ್ನು ತಯಾರಿಸಲು ಅವರನ್ನು ನೇಮಿಸಲಾಗಿತ್ತು. ಆ ಯೋಜನೆಯು ಮುಂದೆ "ಸಾರ್ಜೆಂಟ ಯೋಜನೆ" ಎಂಬ ಹೆಸರಿನಿಂದ ಕರೆಯಲ್ಪಟ್ಟಿತು. ಅವರು ನಾಮಾಂಕಿತ ಶಿಕ್ಷಣತಜ್ಞರಿದ್ದುದರಿಂದ ಮೂಲ ಶಿಕ್ಷಣವು ತನ್ನ ಹಿರಿಮೆಗಳಿಂದ ಈ ದೇಶದ ಜನರಿಗೆ ಹೊಂದಿಕೆಯಾಗುವದೆಂಬುದನ್ನು ಕಂಡುಹಿಡಿದರು. ಯುದ್ಧಾನಂತರದ ಶೈಕ್ಷಣಿಕ ವಿಕಾಸಕ್ಕೋಸುಗ ಯೋಜನೆಯನ್ನು ತಯಾರಿಸಲು ಶಿಕ್ಷಣತಜ್ಞರ ಸಮಿತಿಯೊಂದು ನೇಮಿಸಲ್ಪಟ್ಟಿತು. ಈ ಸಮಿತಿಯು ಮೂಲ ಶಿಕ್ಷಣದ ವಿವಿಧಾಂಗಗಳನ್ನೆಲ್ಲ ಕೂಲಂಕಷವಾಗಿ ಪರೀಕ್ಷಿಸಿ ಸ್ವಾವಲಂಬನದ ಬಗೆಗೆ ಹಲವು ಸಂದೇಹಗಳನ್ನೆತ್ತಿ ಅದು ರಾಷ್ಟ್ರೀಯ ಶಿಕ್ಷಣವೆಂದು ಒಪ್ಪಿಕೊಂಡಿತು. ಉಪದೇಶಕರ ಆಡಳಿತೆಗಳು ನಡೆದಾಗ ಮೂಲ ಶಿಕ್ಷಣವನ್ನು ಪ್ರಾರಂಭಿಸಿದ್ದ ಪ್ರಾಂತಗಳೆಲ್ಲ ತಮ್ಮ ತಮ್ಮ ಪ್ರಯೋಗಗಳನ್ನು ಬಿಟ್ಟುಗೊಟ್ಟವು. ಬಿಹಾರ ಪ್ರಾಂತದಲ್ಲಿ ಮಾತ್ರ ಅದು ಅಬಾಧಿತವಾಗಿ ಸಾಗಿದ್ದರಿಂದ ಅಲ್ಲಿ ಅದು ಉಳಿದ ಪ್ರಾಂತಗಳಿಗಿಂತ ಹೆಚ್ಚು ಪ್ರಗತಿಯನ್ನು ಸಾಧಿಸಿದೆ. ೧೯೪೬ ರಲ್ಲಿ ಲೋಕಪ್ರಿಯ ಮಂತ್ರಿಮಂಡಳಗಳು ಪುನಃ ಅಧಿಕಾರವನ್ನು ವಹಿಸಿದ ಕೂಡಲೆ ಮೂಲ ಶಿಕ್ಷಣವು ಎಲ್ಲ ರಾಜ್ಯಸರಕಾರಗಳಿಂದ ಅಂಗೀಕರಿಸಲ್ಪಟ್ಟಿತು. ಆದುದರಿಂದ, ಅದು ಈಗ ಪ್ರಯೋಗಾವಸ್ಥೆಯನ್ನು ದಾಟಿ ಕೇಂದ್ರ ಸರಕಾರದಿಂದ ಹಾಗೂ ರಾಜ್ಯ ಸರಕಾರಗಳಿಂದ ರಾಷ್ಟ್ರೀಯ ಶಿಕ್ಷಣವೆಂದು ಮನ್ನಿಸಲ್ಪಟ್ಟಿದೆ.

ಮೂಲ ಶಿಕ್ಷಣದಲ್ಲಿ ದುಡಿಯುತ್ತಿದ್ದ ಹಲವು ಹುರುಪಿನ ಕಾರ್ಯಕರ್ತರು ಉಳಿದವರಿಗಿಂತ ಹೆಚ್ಚು ಅಹಿತವನ್ನು ಮಾಡಿದ್ದಾರೆ. ಹಲವರು ತಮ್ಮ ಹುರುಪು-ಹುಮ್ಮಸ-ನಿಷ್ಠೆಗಳಿಂದ ತಾವು ಸಾಧಿಸಬೇಕೆಂದಿರುವ ಮಹತ್ಕಾರ್ಯಕ್ಕೆ ಹಿತಕ್ಕಿಂತ ಹೆಚ್ಚು ಅಹಿತವನ್ನು ಹೇಗೆ ಮಾಡತ್ತಿರುವರೆಂಬ ಬಗೆಗೆ ಇದು ವಿಲಕ್ಷಣವಾದೊಂದು ನಿದರ್ಶನವಾಗಿದೆ. ಕೆಳಗಿನ ಪ್ರಾಥಮಿಕ ಸಾಲೆಗಳಲ್ಲಿ ನೂಲುವದನ್ನು ಸೇರಿಸಿದರೆ ಅದು ಮೂಲ ಶಿಕ್ಷಣವಾಯಿತೆಂದು ಅಂತಹವರ ಕಲ್ಪನೆ. ಮೂಲ ಶಿಕ್ಷಣವೆಂದರೇನು ಅದರ ಧ್ಯೇಯವಾವುದು ಎಂಬುದರ ಗಾಳಿಯು ಸಹ ಅವರಿಗೆ ಬಡಿದಿಲ್ಲ. ಕೇವಲ ನೂಲುವದಷ್ಟೇ ಮೂಲಶಿಕ್ಷಣವಾಗುತ್ತಿದ್ದರೆ, ದಿನಾಲು ಎಂಟು ತಾಸಿನಂತೆ ದುಡಿಯುತ್ತಿರುವ ಗಂಡಸರೂ ಹೆಂಗಸರೂ ಮೂಲ ಶಿಕ್ಷಣವನ್ನು ಹೊಂದಿದ್ದಾರೆಂಬರ್ಥವಾಗುತ್ತಿದೆ. ಯಾಕಂದರೆ, ಅವರು ನೂಲುವದರಲ್ಲಿ ಕುಶಲರಿರುತ್ತಾರೆ. ಆದುದರಿಂದ, ಅದು ಸರ್ವಥಾ ಮೂಲ ಶಿಕ್ಷಣವಾಗಲಾರದು. ಗಾಂಧೀಜಿಯವರು ಈ ಮಾತನ್ನು ಎಷ್ಟೋ ಸಲ ಸುಸ್ಪಷ್ಟವಾಗಿ ಹೇಳಿದ್ದಾರೆ. ಅವರ ಮಾತಿನಲ್ಲಿ ಹೇಳುವದಾದರೆ, "ಕೇವಲ ನೂಲುವದಕ್ಕೂ ಮೂಲ ಶಿಕ್ಷಣಕ್ಕೂ ಇರುವ ಅಂತರವನ್ನು ನೀವು ಅರಿತುಕೊಳ್ಳುವದು ನನಗೆ ಬೇಕಾಗಿದೆ. ಒಬ್ಬ ಬಡಿಗನು ನನಗೆ ಬಡಿಗತನವನ್ನು ಕಲಿಸುತ್ತಾನೆಂದು ತಿಳಿಯಿರಿ. ನಾನು ಅವನಿಂದ ಕೃತ್ರಿಮವಾಗಿ ಕಲಿತು ಆಯುಧಗಳ ಉಪಯೋಗವನ್ನರಿಯಬಲ್ಲೆನು. ಅಷ್ಟರಿಂದ ನನ್ನ ಬೌದ್ಧಿಕ ಪ್ರಗತಿಯಾಗಲಾರದು. ಆದರೆ, ಬಡಿಗತನದಲ್ಲಿ ಶಾಸ್ತ್ರೀಯ ದೃಷ್ಟಿಯಿಂದ ತರಬೇತಿಯನ್ನು ಹೊಂದಿದವನಿಂದ ನಾನು ಕಲಿತರೆ, ನನ್ನ ಬೌದ್ಧಿಕ ವಿಕಾಸವೂ ಆಗುವದು. ನಾನು ಬಡಿಗನಾಗುವೆನಲ್ಲದೆ ಎಂಜಿನೀಯರನೂ ಆಗಬಲ್ಲೆನು. ಯಾಕಂದರೆ, ಅವನು ನನಗೆ ಗಣಿತ ವಿಷಯಗಳನ್ನು ಕಲಿಸಬಲ್ಲನು. ಬೇರೆ ಬೇರೆ ಇಮಾರತಿ ಕಟ್ಟಿಗೆಗಳಲ್ಲಿರುವ ಹೆಚ್ಚು ಕಡಿಮೆಗಳನ್ನು ತೋರಿಸಿಕೊಟ್ಟು ಅವು ಎಲ್ಲಿ ಬೆಳೆಯುವವು ಎಲ್ಲಿಂದ ಬರುವವು ಎಂಬುದರ ಬಗೆಗೆ ಹೇಳಿ ನನಗೆ ಭೂಗೋಲ ಮತ್ತು ಕೃಷಿಕರ್ಮಗಳ ಬಗೆಗೆ ಅಲ್ಪ ಜ್ಞಾನವನ್ನು ಮಾಡಿ ಕೊಡುವನು. ಆಯುಧಗಳ ಮಾಡೆಲ್ಲುಗಳನ್ನು ತಯಾರಿಸಲು ಕಲಿಸುತ್ತ ಗಣಿತ-ಭೂಮಿತಿಗಳ ಪ್ರಾರಂಭಿಕ ಜ್ಞಾನವನ್ನು ಮಾಡಿ ಕೊಡಬಲ್ಲನು. ಹೀಗೆ ದೈಹಿಕ ಹಾಗೂ ಬೌದ್ಧಿಕ ತರಬೇತಿಗಳು ಜತೆಜತೆಯಾಗಿ

"ಸಾಗುವವು ಮೂಲ ಶಿಕ್ಷಣದಲ್ಲಿ ದೈಹಿಕ ತರಬೇತಿಯು ವಾಗಿದೆ."
ಬೌದ್ಧಿಕ ವಿಕಾಸವನ್ನು ಪ್ರೇರೇಪಿಸುವ ಮುಖ್ಯ ಸಾಧನ

(ಮುಂದುವರಿಯುವದು)

ಕೃತಿಮೂಲ ಶಿಕ್ಷಣದ ಪ್ರಾಚೀನತೆ

ಲೇಖಕರು : ಮು. ಗ. ಯಾಜಿ, ಇಡಗುಂಜಿ.

ಇಂದು ನಮ್ಮ ದೇಶದಲ್ಲಿ ಕೃತಿ ಮೂಲ ಶಿಕ್ಷಣವು ಪ್ರಯೋಗಾವಸ್ಥೆಯನ್ನು ದಾಟಿ ನಿಶ್ಚಿತ ರೂಪವನ್ನು ಹೊಂದುತ್ತಿದೆ. ಭಾರತದ ಪ್ರತಿಯೊಂದು ರಾಜ್ಯವೂ ತನ್ನ ಶಿಕ್ಷಣ ನೀತಿಯಲ್ಲಿ ಒಂದಿಲ್ಲೊಂದು ರೀತಿಯಿಂದ ಕೃತಿಮೂಲ ಶಿಕ್ಷಣವನ್ನು ಪ್ರಾರಂಭಿಸಲು ಕಾರ್ಯೋನ್ಮುಖವಾಗಿದೆ. ಬಹುತೇಕ ಶಿಕ್ಷಕರ ಟ್ರೇನಿಂಗ ಕಾಲೇಜುಗಳೆಲ್ಲ ಬೇಸಿಕ್ ಟ್ರೇನಿಂಗ ಕಾಲೇಜುಗಳಾಗಿ ಮಾರ್ಪಟ್ಟಿವೆ. ಹಾಗೂ ಹೊಸ ಹೊಸ ಬೇಸಿಕ್ ಟ್ರೇನಿಂಗ ಕಾಲೇಜುಗಳು ಅಸ್ತಿತ್ವದಲ್ಲಿ ಬರುತ್ತಿವೆ. ಸಣ್ಣ ದೊಡ್ಡ ಪಟ್ಟಣಗಳ ಹಾಗೂ ಅವುಗಳ ಸುತ್ತಮುತ್ತಲಿನ ಹಳ್ಳಿಗಳ ಶಾಲೆಗಳು ಸಹಿತ ಬೇಸಿಕ್ ಶಾಲೆಗಳಾಗಿ ಮಾರ್ಪಾಟು ಹೊಂದುತ್ತಿವೆ. ಹಾಗೂ ಕ್ರಮೇಣ ನಮ್ಮ ದೇಶದ ಶಾಲೆಗಳನ್ನೆಲ್ಲ ಬೇಸಿಕ್ ಶಾಲೆಗಳನ್ನಾಗಿ ಪರಿವರ್ತಿಸಿ ಕೃತಿಮೂಲ ಶಿಕ್ಷಣವನ್ನು ದೇಶದ ಅತ್ಯಂತ ಜ್ಯಾರಿಯಲ್ಲಿ ತರಬೇಕೆಂಬುದು ಜನತಾ ಸರಕಾರದ ಇಚ್ಛೆಯಾಗಿದೆ. ಮಾಧ್ಯಮಿಕ ಹಾಗೂ ಕಾಲೇಜ ಶಿಕ್ಷಣದಲ್ಲೂ ಮೆಲ್ಲನೆ ಕೃತಿಮೂಲ ಶಿಕ್ಷಣವು ತಲೆ ಎತ್ತಿ ಮುಂದರಿಯುತ್ತಿದೆ.

ಈ ಕೃತಿಮೂಲ ಶಿಕ್ಷಣವನ್ನು ಯೋಜನಾ ಬದ್ಧವಾಗಿ ಕೃತಿಯಲ್ಲಿ ತರಲು ಮೊದಲಾಗಿ ಹೆಣಗಿದವರು ಹಾಗೂ ಅದರ ಪುರಸ್ಕರ್ತರು ಮಹಾತ್ಮಾ ಗಾಂಧಿಯವರು. ಹಿಂದಿನ ಅನೇಕ ಶತಮಾನಗಳಿಂದ ನಮ್ಮ ದೇಶದಲ್ಲಿ ರಾಜಕೀಯ ಐಕ್ಯತೆಯು ನಷ್ಟವಾಗಿತ್ತು. ಅಶೋಕ, ಚಂದ್ರಗುಪ್ತರ ಕಾಲದಲ್ಲಿ ಸಾಮಾನ್ಯವಾಗಿ ಭಾರತವು ಏಕಾಧಿಪತ್ಯದಲ್ಲಿ ಬಂದಿದ್ದರೂ ಮುಂದೆ ಮುಸಲ್ಮಾನರ ಅಭಿಯೋಗದಿಂದ ದೇಶದ ರಾಜಕೀಯ ಜೀವನವು ಛಿನ್ನವಿಚ್ಛಿನ್ನವಾಗಿ ಹೋಯಿತು. ಕೆಲವು ಪ್ರದೇಶಗಳು ಮುಸಲ್ಮಾನ ಅರಸರ ಅಧಿಕಾರದಲ್ಲಿದ್ದರೆ ಮತ್ತೆ ಕೆಲವು ಪ್ರದೇಶಗಳನ್ನು ಅಲ್ಲಲ್ಲಿಯ ಸಣ್ಣ ಸಣ್ಣ ದೇಶೀ ಅರಸರು ತಮ್ಮ ತಮ್ಮ ಅಧಿಕಾರದಲ್ಲಿ ಉಳಿಸಿಕೊಳ್ಳಲು ಹೆಣಗಾಡುತ್ತಿದ್ದರು. ಅದರಿಂದ ಅಖಿಲ ಭಾರತೀಯ ತಳಹದಿಯ ಮೇಲೆ ಯಾವದೇ ಕೆಸಲ ಕಾರ್ಯಗಳನ್ನು ಕೈಕೊಳ್ಳಲು ಅನುಕೂಲ ಸಂದರ್ಭಗಳೇ ಒದಗಲಿಲ್ಲವೆನ್ನಬಹುದು. ಆ ಮೇಲೆ ಸುಮಾರು ಎರಡು ಸಾವಿರ ವರ್ಷಗಳ ನಂತರ ಈ ವಿಶಾಲ ದೇಶದ ರಾಜಕೀಯ ಐಕ್ಯತೆಯನ್ನು ಸಾಧಿಸಿದವರೆಂದರೆ ಬ್ರಿಟಿಷರು. ಆದರೆ ದುರ್ದೈವದಿಂದ ಅವರ ಮುಖ್ಯ ವಿಚಾರ ಈ ದೇಶದ ಶೋಷಣೆ ಮಾಡುವದು ಆಗಿತ್ತೇ ವಿನಃ ಯಾವದೇ ಸುಧಾರಣೆ ಮಾಡುವದು ಇರಲಿಲ್ಲ. ಅಲ್ಲಲ್ಲಿ ಹಲಕೆಲವು ಸುಧಾರಣೆಗಳೂ, ಜನಹಿತದ ಕಾರ್ಯಗಳೂ ನಡೆದಿದ್ದರೂ ಅವುಗಳನ್ನು ಬ್ರಿಟಿಷರು ತಮ್ಮ ಅನುಕೂಲತೆಗಾಗಿಯೋ, ಪರಿಸ್ಥಿತಿಯ ಒತ್ತಡಕ್ಕಾಗಿಯೋ ಕೈಕೊಂಡರೇ ಹೊರತು ಈ ದೇಶವು ಮುಂದುವರಿಯಬೇಕೆಂಬ ಬಯಕೆಯಿಂದಲ್ಲ. ಅದರಂತೆ ಬ್ರಿಟಿಷರ ಆಡಳಿತೆಯಲ್ಲಿ ನಮ್ಮ ದೇಶದಲ್ಲಿ ಬಹಳಷ್ಟು ಶಾಲೆ, ಹ್ಯಾಸ್ಕೂಲುಗಳು ಸ್ಥಾಪಿಸಲ್ಪಟ್ಟಿದ್ದವೇನೋ ನಿಜ. ಆದರೆ ಅಲ್ಲಿ ಕಲಿಸುವ ಶಿಕ್ಷಣವು ಪುಸ್ತಕೀಯವಾಗಿತ್ತು. ಪ್ರತ್ಯಕ್ಷ ಜೀವನಕ್ಕೂ ಶಿಕ್ಷಣಕ್ಕೂ ಏನೂ ಸಂಬಂಧವೇ ಇರುತ್ತಿರಲಿಲ್ಲ. ಕೇವಲ ಪುಸ್ತಕ ಪಾಂಡಿತ್ಯವನ್ನು ಸಂಪಾದಿಸಿ ಖುರ್ಚಿ ಮೇಜುಗಳ ದಾಸರಾಗಿ ಈ ದೇಶದ ಬಗ್ಗೆ ಏನೂ

ಕೃತಿಮೂಲ ಶಿಕ್ಷಣದ ಪ್ರಾಚೀನತೆ

ಕಳಕಳಿಯಿಲ್ಲದ ಮೇಲಾಧಿಕಾರಿಗಳಾದ ಸಾಹೇಬರು ಹೇಳಿದಷ್ಟನ್ನು ಮಾಡುವ ಹಾಗೂ ಅವರ ಮರ್ಜಿಯನ್ನು ಸಂಪಾದಿಸುವದರಲ್ಲೇ ತಮ್ಮ ದೈವವನ್ನು ಕಂಡುಕೊಳ್ಳುತ್ತಿದ್ದ ಗುಲಾಮೀ ಮನೋವೃತ್ತಿಯ ಸುಶಿಕ್ಷಿತರನ್ನಷ್ಟೇ ತಯಾರಿಸುವದು ಆ ಶಿಕ್ಷಣದ ಮುಖ್ಯ ಉದ್ದೇಶವಾಗಿತ್ತು. ನಮಗೆ ತೀರ ಪರಕೀಯವಾದ ಇಂಗ್ಲೀಷ ಶಿಕ್ಷಣವನ್ನೂ, ಆಂಗ್ಲ ಸಂಸ್ಕೃತಿಯನ್ನೂ ಪ್ರಸಾರ ಮಾಡಿ ಸುಶಿಕ್ಷಿತ ಹಾಗೂ ಅಶಿಕ್ಷಿತರಲ್ಲಿಯ ಅಂತರವನ್ನು ಬೆಳೆಸಿ ಒಡೆದು ಆಳುವ ನೀತಿಯನ್ನೇ ಅವರು ನಡೆಸಿದರು. ಆದರೂ ರಾಷ್ಟ್ರೀಯ ಜಾಗ್ರತಿಯ ಪರಿಣಾಮವಾಗಿ ಕೆಲವು ಕಾಲದ ಮೇಲೆ ಬ್ರಿಟಿಷ ಸರಕಾರದವರು ಝಾಕೀರ ಹುಸೇನ ಸಮಿತಿಯೆಂದು ಪ್ರಸಿದ್ಧವಾದ ರಾಷ್ಟ್ರೀಯ ಶಿಕ್ಷಣ ಸಮಿತಿಯನ್ನು ನಿಯಮಿಸಲೇ ಬೇಕಾಯಿತು. ಈ ಝಾಕೀರ ಸಮಿತಿಯ ವರದಿಯಿಂದ ರೂಪಿಸಲ್ಪಟ್ಟ ಶಿಕ್ಷಣ ಕ್ರಮವೇ ಮೂಲ ಶಿಕ್ಷಣವಾಗಿ ರೂಪುಗೊಂಡಿತು. ಈ ಮೂಲ ಶಿಕ್ಷಣದ ಮುಖ್ಯ ಧ್ಯೇಯವೆಂದರೆ ಮಗುವಿಗೆ ಶಿಕ್ಷಣವನ್ನು ಕೃತಿಯ ಮುಖಾಂತರ ಕೊಡುವದು. ಅದು ಓದು ಬರಹ ಹಾಗೂ ಇತರ ಜ್ಞಾನಗಳ ಜೊತೆಗೆ ಯಾವದಾದರೊಂದು ಉದ್ಯೋಗವನ್ನು ಕಲಿತು ಶಿಕ್ಷಣ ಸಂಸ್ಥೆಗಳಿಂದ ಹೊರ ಬರುವದು. ಮುಖ್ಯ ಉದ್ಯೋಗದ ಜೊತೆಗೆ ತನ್ನ ದೈನಂದಿನ ಹಾಗೂ ಸಾಂಸ್ಕೃತಿಕ ಜೀವನಕ್ಕೆ ಅಗತ್ಯವಾದ ಅನೇಕ ವಿಷಯಗಳನ್ನು ಕಲಿಯಬೇಕಾಗುವದು. ಹಾಗೂ ಪ್ರತ್ಯಕ್ಷ ಕೆಲಸಗಳನ್ನು ಮಾಡಬೇಕಾಗುವದು ಇದರಿಂದ ಜೀವನದ ಬಗ್ಗೆ ಆತ್ಮ ವಿಶ್ವಾಸವೂ, ಸ್ವಾಭಿಮಾನವೂ, ದೇಶಾಭಿಮಾನವೂ, ಶ್ರಮ ಗೌರವವೂ ಬೆಳೆಯುವವೆಂಬದು ಸಹಜ. ಹಾಗಾದರೆ ಈ ಕೃತಿಮೂಲ ಶಿಕ್ಷಣದ ವ್ಯಾಪಕತೆ ಎಷ್ಟೆಂಬುದನ್ನು ಸ್ವಲ್ಪದರಲ್ಲಿ ವಿಚಾರಿಸುವಾ.

ಇಂದು ಶಿಕ್ಷಣದ ಧ್ಯೇಯ ಕೇವಲ ಓದು ಬರಹವನ್ನಷ್ಟೇ ಕಲಿಯುವದಲ್ಲ. ಭಾವೀ ಜೀವನದ ಪೂರ್ವ ತಯಾರಿಯೇ ಶಿಕ್ಷಣ ಎಂದು ಪರಿಗಣಿಸಲಾಗಿದೆ. ಜೀವನವೊಂದು ವಿಶಾಲ ಸಾಗರದ ಹಾಗೆ ಅಪಾರವಾಗಿದ್ದಂತೆ ಶಿಕ್ಷಣವೂ ಅಪಾರವಾಗಿವೆ. ಅದರ ರೀತಿ ನೀತಿಗಳು ಬೇಕು ಬೇಡಗಳು ಅತ್ಯಂತ ವಿಸ್ತಾರವಾಗಿವೆ. ನಾಗರಿಕತೆಯು ಬೆಳೆಯುತ್ತ ಸಾಗಿದಂತೆ ಶಿಕ್ಷಣದ ಹೊಸ ಹೊಸ ಅವಶ್ಯಕತೆಗಳೂ ಬೆಳೆಯುವದು ಸಹಜ. ಇಂದು ಈ ಕೃತಿ ಮೂಲ ಶಿಕ್ಷಣದಲ್ಲಿ ಮುಖ್ಯವಾಗಿ ನೂಲುವದು, ನೇಯುವದು, ರಟ್ಟಿನ ಕೆಲಸಗಳು, ಒಕ್ಕಲುತನ, ಬಡಿಗತನ, ಬಣ್ಣ ಹಾಕುವದು, ಬೆತ್ತ ಬಿದಿರುಗಳಿಂದ ಉಪಯುಕ್ತ ಸಾಮಾನುಗಳನ್ನು ತಯಾರಿಸುವದು, ಮೀನುಗಾರಿಕೆ ಮುಂತಾದವುಗಳ ಮೂಲಕ ಅಲ್ಲಲ್ಲಿಯ ಸ್ಥಾನಿಕ ಅನುಕೂಲತೆಗಳಿಗೆ ತಕ್ಕಂತೆ ಶಿಕ್ಷಣವನ್ನು ಕೊಡಲಾಗುತ್ತಿದೆ. ತೋಟಗಾರಿಕೆ, ಚರ್ಮಗಾರಿಕೆ, ಅಡಿಗೆ ತಯಾರಿಸುವದು ಮುಂತಾದವುಗಳ ಮೂಲಕ ಶಿಕ್ಷಣವನ್ನು ಕೊಡುವ ಏರ್ಪಾಟುಗಳು ಆಗುತ್ತಿರುವದನ್ನು ನಾವು ಪತ್ರಿಕೆಗಳಲ್ಲಿ ಓದುತ್ತೇವೆ. ಇವುಗಳು ಇನ್ನೂ ಹೆಚ್ಚುತ್ತ ಹೋಗುವದಲ್ಲದೆ ಹೊಸ ಹೊಸ ವಿಧಾನಗಳ ಮೂಲಕ ಶಿಕ್ಷಣ ಕೊಡುವ ಏರ್ಪಾಟುಗಳು ಆಗುತ್ತ ಹೋಗುವದು ಸಹಜವೂ ಅವಶ್ಯವೂ ಆಗಿವೆ. ಕ್ರಮೇಣ ಅವು ನಮ್ಮ ಜೀವನದ ಪ್ರತಿಯೊಂದು ಅಂಗವನ್ನೂ ಆಕ್ರಮಿಸುವದು ಖಂಡಿತ. ಹಾಗಾದರೆ ಈ ಕೃತಿ ಮೂಲ ಶಿಕ್ಷಣವು ಭಾರತೀಯರಿಗೆ ಹೊಸ ವಿಚಾರವೇ? ಅಥವಾ ಪ್ರಾಚೀನ ಕಾಲದಲ್ಲಿ ಕೃತಿ ಮೂಲ ಶಿಕ್ಷಣ ಪದ್ಧತಿಯೇನಾದರೂ ಇತ್ತೇ ಎಂಬುದನ್ನು ಸ್ವಲ್ಪದರಲ್ಲಿ ವಿಚಾರಿಸುವಾ.

ಪುರಾತನ ಇತಿಹಾಸವನ್ನು ಅವಲೋಕಿಸುತ್ತ ಹೋದರೆ ಆಗಿನ ರಾಜರಾಣಿಯರಿಗೆ, ಅರಸು ಮನೆತನಗಳಿಗೆ ಹಾಗೂ ಪ್ರಸಿದ್ಧ ಪುರುಷರಿಗೆ ಸಂಬಂಧಿಸಿದ ವಿಷಯಗಳೇ ಹೆಚ್ಚಾಗಿ ದೊರೆಯುತ್ತವೆ. ದುರ್ದೈವದಿಂದ ಜನ ಸಾಮಾನ್ಯರ, ದೀನದಲಿತರ, ಚರಿತ್ರೆಗಳು ತೀರ ಅಪರೂಪವಾಗಿಯೇ ದೊರೆಯುತ್ತವೆ. ಆದರೂ ಪ್ರಾಚೀನ ಕಾಲದ ಶಿಕ್ಷಣದ ವಿಷಯಗಳನ್ನು ಅಭ್ಯಸಿಸಿದರೆ ಆಗಲೂ ಕೃತಿ ಮೂಲ ಶಿಕ್ಷಣ ಪದ್ಧತಿಯು ಇತ್ತೆಂಬುದನ್ನು ನಾವು ಕಂಡುಕೊಳ್ಳಬಹುದು. ಭಾರತದ ಐತಿಹಾಸಿಕ ಗ್ರಂಥಗಳಲ್ಲಿ ತೀರ ಹಳೆಯವುಗಳೆಂದರೆ ರಾಮಾಯಣ ಮಹಾಭಾರತಗಳು. ಅವುಗಳಲ್ಲಿ ಅಲ್ಲಲ್ಲಿ ಆಗಿನ ಅರಸು ಮಕ್ಕಳ ಹಾಗೂ ಇತರ ಜನರ ಶೈಕ್ಷಣಿಕ ವಿಷಯಗಳು ದೊರೆಯುತ್ತವೆ. ಕೃಷ್ಣ ಬಲರಾಮರು, ಸಾಂದೀಪರಲ್ಲಿ ವಿದ್ಯಾಭ್ಯಾಸ ಮಾಡಿದ, ಕಟ್ಟಿಗೆ ತರಲಿಕ್ಕೆ ಅಡವಿಗೆ ಹೋದ, ಹಾಗೂ ಗುರು ದಕ್ಷಿಣೆಗಾಗಿ ಸತ್ತ ಅವರ ಮಗನನ್ನು ಬದುಕಿಸಿ ಕೊಟ್ಟ ಸಂಗತಿಗಳು ತಿಳಿಯುತ್ತವೆ. ಪಾಂಡವರೂ ಕೌರವರೂ ದ್ರೋಣಾಚಾರ್ಯರಲ್ಲಿ ವಿದ್ಯಾಭ್ಯಾಸ ಮಾಡಿದ

ಹಲಕೆಲವು ಸನ್ನಿವೇಶಗಳ ಕಥೆಗಳು ದೊರೆಯುತ್ತವೆ. ರಾಮ ಲಕ್ಷ್ಮಣರು ವಿದ್ಯಾಭ್ಯಾಸಕ್ಕಾಗಿ ವಿಶ್ವಾಮಿತ್ರ ಮುನಿಗಳ ಆಶ್ರಮದಲ್ಲಿ ವಾಸ ಮಾಡಿದ ವಿಷಯ ಕಂಡು ಬರುತ್ತಿದೆ.

ಆದರೆ ಆಗಿನ ಶಿಕ್ಷಣ ಪದ್ಧತಿಗಳ ಬಗ್ಗೆ ವಿಸ್ತಾರವಾದ ವಿವರಗಳು ದೊರೆಯುವದಿಲ್ಲ. ಆದರೂ ಕೆಲವು ಸಂಗತಿಗಳು ದೊರೆಯುತ್ತವೆ. ಆಗಿನ ವಿದ್ಯಾ ಸಂಸ್ಥೆಗಳೆಂದರೆ ಗುರುಕುಲ ಪದ್ಧತಿಯವು. ಅವುಗಳಿಗೆ ಆಶ್ರಮಗಳೆಂದು ಹೆಸರು. ಅಲ್ಲಿಯ ಋಷಿಗಳೇ ಗುರುಗಳು. ಗುರುಶಿಷ್ಯರು ವೇಷ ಭೂಷಣಗಳ ಆಡಂಬರದಿಂದ ದೂರ ಇರುತ್ತಿದ್ದರು. ಗುರುಕುಲಗಳು ನದೀ ದಂಡೆಯ ನಿಸರ್ಗರಮ್ಯ ಪ್ರದೇಶಗಳಲ್ಲಿರುತ್ತಿದ್ದವು. ವಿದ್ಯೆಯು ಪುಕ್ಕಟೆಯಾಗಿ ದೊರೆಯುತ್ತಿತ್ತು. ಗುರುಕುಲಕ್ಕೆ ರಾಜಾಶ್ರಯ ದೊರೆಯುತ್ತಿತ್ತು. ಅವರಿಗೆ ಯಾವದೇ ತರದ ತೊಂದರೆಯಾಗದಂತೆ ನಾಡಿನ ಅರಸರು ನೋಡಿಕೊಳ್ಳುತ್ತಿದ್ದರು. ಗುರುಗಳು ಪ್ರೇಮಭರಿತರೂ ಶಿಷ್ಯರು ಶ್ರದ್ಧಾಭಕ್ತಿಯುಕ್ತರೂ ಆಗಿ ಪರಸ್ಪರ ಹೊಂದಿಕೊಂಡು ಹೋಗುತ್ತಿದ್ದರು. ವಿದ್ಯಾರ್ಥಿಗಳು ತಾತ್ವಿಕ ಹಾಗೂ ಪ್ರಾಯೋಗಿಕ ವಿಷಯಗಳೆರಡರಲ್ಲೂ ಅಭ್ಯಾಸ ಮಾಡಬೇಕಾಗುತ್ತಿತ್ತು. ಆಶ್ರಮದಲ್ಲಿ ಕುಳಿತು ತಾತ್ವಿಕ ವಿಚಾರಗಳನ್ನು ಗುರುಗಳು ವಿವರಿಸಿದರೆ, ಬಿಲ್ಲುಗಾರಿಕೆ, ಬೇಟೆಯಾಡುವದು ಮುಂತಾದವುಗಳನ್ನು ಶಿಷ್ಯರು ಪ್ರಾಯೋಗಿಕವಾಗಿ ಸ್ವತಃ ಕಲಿಯಬೇಕಾಗುತ್ತಿತ್ತು. ಇಂಥ ಸಮಯದಲ್ಲಿ ಗುರುಗಳು ಶಿಷ್ಯರಿಗೆ ಸಹಾಯ ಮಾಡುತ್ತಿದ್ದರು. ಆಗಾಗ ಪರೀಕ್ಷೆಯನ್ನು ತೆಗೆದುಕೊಳ್ಳುವ ಪದ್ಧತಿಯೂ ಇತ್ತು. ಗುರುದಕ್ಷಿಣೆಯಂತೂ ಅವರ ಕೊನೆಯ ಪರೀಕ್ಷೆಯೇ ಆಗಿರುತ್ತಿತ್ತು. ಇಂಥ ಪರೀಕ್ಷೆಯಲ್ಲಿ ಯಶಸ್ವಿಯಾದವನು ವಿದ್ಯೆಯು ಸಂಪೂರ್ಣವಾಯಿತೆಂದು ಗುರುಗಳಿಂದ ಆಶೀರ್ವಾದ (ಸರ್ಟಿಫಿಕೇಟು) ಪಡೆದು ಹೋಗುತ್ತಿದ್ದನು. ತಮ್ಮ ಹಾಗೂ ಗುರುಗಳ ಆಹಾರಕ್ಕೆ ಅಡವಿಗೆ ಹೋಗಿ ಹಣ್ಣುಹಂಪಲುಗಳನ್ನು ತರುವದು, ಆಶ್ರಮದಲ್ಲಿ ಸ್ವಚ್ಛತೆಯನ್ನಿಡುವದು, ಆಶ್ರಮಕ್ಕೆ ಅವಶ್ಯವಿರುವ ಸಮಿತ್ತು, ಕಟ್ಟಿಗೆ ಮೊದಲಾದವುಗಳನ್ನು ತರುವದು, ಆಶ್ರಮದ ದನಕರುಗಳನ್ನು ಕಾದು ಮೇಯಿಸಿಕೊಂಡು ಬರುವದು, ಆಶ್ರಮಕ್ಕೆ ಬರುವ ಅತಿಥಿಗಳನ್ನು ಉಪಚರಿಸುವದು, ಹೂವಿನ, ಹಣ್ಣಿನ ತೋಟಗಳನ್ನು ಬೆಳೆಸುವದು, ಮೊದಲಾದ ಕೆಲಸಗಳನ್ನು ವಿದ್ಯಾರ್ಥಿಗಳು ಸ್ವತಃ ಮಾಡಬೇಕಾಗುತ್ತಿತ್ತು. ಹೀಗೆ ಅವರು ಜೀವನಕ್ಕೆ ಹೊಂದಿಕೊಂಡೇ ವಿದ್ಯಾಭ್ಯಾಸ ಮಾಡಬೇಕಾಗುತ್ತಿತ್ತು. ಶರೀರ ಶ್ರಮದ ಬಗ್ಗೆ ತಾತ್ಸಾರವಿರಲಿಲ್ಲ. ಅವರ ದಿನದ ಪ್ರಾರ್ಥನೆ, ಊಟ ಮುಂತಾದವುಗಳೆಲ್ಲ ಸಾಮೂಹಿಕವಾಗಿಯೇ ಸಾಗುತ್ತಿದ್ದವು. ಇದರ ಮೇಲಿಂದ ಭಾರತದಲ್ಲಿ ಪ್ರಾಚೀನ ಕಾಲದಲ್ಲಿ ಪುಸ್ತಕೀಯ ವಿದ್ಯಾಭ್ಯಾಸದೊಂದಿಗೆ ಕೃತಿಮೂಲ ಶಿಕ್ಷಣ ಪದ್ಧತಿಯೂ ಇತ್ತೆಂಬುದನ್ನು ಕಂಡುಕೊಳ್ಳಬಹುದು. ಅಲ್ಲದೆ ಕಲಿತ ವಿಷಯಗಳನ್ನು ಪರೀಕ್ಷೆಯ ರೂಪದಿಂದ ಗುರುಗಳಿಗೆ ತಿರುಗಿ ಒಪ್ಪಿಸಬೇಕಾಗುತ್ತಿತ್ತು. ಅಂತೆಯೇ ದ್ರೋಣನು ತನ್ನ ಹೇಳಿಕೆಯ ಮೇರೆಗೆ ದ್ರುಪದ ರಾಜನನ್ನು ಸೆರೆಹಿಡಿದು ತಂದು ತನಗೊಪ್ಪಿಸಿದ ಮೇಲೆಯೇ ಅರ್ಜುನನಿಗೆ ವಿದ್ಯೆಯು ಪೂರ್ಣವಾಯಿತೆಂದು ಆಶೀರ್ವಾದ (ಸರ್ಟಿಫಿಕೇಟು) ಕೊಟ್ಟನು. ವಿಶ್ವಾಮಿತ್ರನು ರಾಮಲಕ್ಷ್ಮಣರನ್ನು ಜನಕರಾಜನಿದ್ದಲ್ಲಿಗೆ ಕರೆದೊಯ್ದು ರಾಮನಿಂದ ಮತ್ಸ್ಯಯಂತ್ರವನ್ನು ಭೇದಿಸಿ ಅವನು ಬಿಲ್ಲುಗಾರಿಕೆಯಲ್ಲಿ ಪ್ರೌಢಿಮೆಯನ್ನು ಸಂಪಾದಿಸಿದ ಬಗ್ಗೆ ಸಾರ್ವಜನಿಕವಾಗಿ (ಮಾದರಿ ಪಾಠ) ತೋರಿಸಿದನು. ಕರ್ಣನು ಗುರುಕುಲದ ನಿಯಮಕ್ಕೆ ವಿರುದ್ಧವಾಗಿ ವರ್ತಿಸಿದ್ದರಿಂದ ಅಲ್ಲಿಂದ ಹೊರಹೋಗಬೇಕಾಯಿತು. ಈ ಕೆಲವು ವಿಷಯಗಳು ಪ್ರಾಚೀನ ಕಾಲದಲ್ಲಿ ಕೃತಿಮೂಲ ಶಿಕ್ಷಣವು ಇತ್ತೆಂಬುದನ್ನು ತೋರಿಸುವವು. ಅದರಂತೆ ಆಧುನಿಕ ಕಾಲದಲ್ಲಿ ಕೃತಿಮೂಲ ಶಿಕ್ಷಣವು ಇತ್ತೋ ಹೇಗೆಂಬುದನ್ನು ವಿಚಾರಿಸುವಾ.

ನಿಸರ್ಗ, ಸಮಾಜ, ಮನೆ, ಸಂಘ ಸಂಸ್ಥೆಗಳೆಲ್ಲ ಶಿಕ್ಷಣ ಸಂಸ್ಥೆಗಳೆಂದು ಹೊಸ ಶಿಕ್ಷಣವು ಹೇಳುತ್ತಿದೆ. ಹಸಿವೆಯಾಗಿ ಸಮೀಪ ಆಹಾರವು ದೊರೆಯದಾಗ ಹತ್ತರದ ಮರದ ಮೇಲಿನ ಹಣ್ಣು ಮರವೇರಲು ಕಲಿಸುತ್ತದೆ. ಮಗುವಿನ ಮೇಲಿನ ಪ್ರೇಮದಿಂದ ಕೈಹಿಡಿದು ನಡಿಸುತ್ತಿರುವಾಗ ಕೃತಿಮೂಲಕ ಶಿಕ್ಷಣ ಕೊಡುತ್ತಿದ್ದೇನೆಂಬ ಅರಿವು ತಾಯಿಗೆ ಆಗಲಿಕ್ಕಿಲ್ಲ. ಮಕ್ಕಳನ್ನು ಎತ್ತಿ ಮುದ್ದಿಸಿ ಕಳ್ಳೇಮುಳ್ಳೇ ಆಡಿಸಿ ಕೈ ಊರಿ, ಬೆನ್ನ ಮೇಲೆ ಕೂಡ್ರಿಸಿಕೊಂಡು ವಿವಿಧ ಪ್ರಾಣಿಗಳಂತೆ ನಟಿಸಿ, ಕೂಗಿ ಅಳುವನ್ನು ನಿಲ್ಲಿಸಲಿಕ್ಕೋ, ನಗಿಸಲಿಕ್ಕೋ ಪ್ರಯತ್ನಿಸುತ್ತಿರುವ

ತಂದೆಗೆ ಪ್ರಾಣಿವಿಜ್ಞಾನದ ವಿಷಯಗಳನ್ನು ಮಗುವಿಗೆ ಕೃತಿಮೂಲಕ ಕಲಿಸುತ್ತಿದ್ದೇನೆಂಬ ವಿಚಾರ ಹೊಳೆಯಲಿಕ್ಕಿಲ್ಲ. ಮನೆಯಂಗಳದಲ್ಲಿ ಸಾಲಾಗಿ ಒಲೆಗಳನ್ನು ಹೂಡಿ ಅಡಿಗೆಯ ಆಟ ಆಡುತ್ತಿರುವ ಹೆಣ್ಣುಮಕ್ಕಳಿಗೆ ತಾವು ಭಾವೀ ಜೀವನದ ತಯಾರಿಯ ಬಗ್ಗೆ ಕೃತಿಮೂಲಕ ಶಿಕ್ಷಣವನ್ನು ಹೊಂದುತ್ತಿದ್ದೇವೆಂಬುದೇ ಗೊತ್ತಿರಲಿಕ್ಕಿಲ್ಲ. ಆದರೆ ಈ ಶಿಕ್ಷಣವೆಲ್ಲ ಕೃತಿಮೂಲಕವಾಗಿಯೇ ನಡೆಯುತ್ತಿದೆಂಬುದು ಸ್ಪಷ್ಟ. ಇದು ತೀರ ಚಿಕ್ಕಮಕ್ಕಳ ವಿಚಾರವಾದರೆ ಇನ್ನುಳಿದವರ ಬಗ್ಗೆ ವಿಚಾರ ಮಾಡುವಾ.

ನಮ್ಮ ದೇಶದಲ್ಲಿ ಸಾವಿರಾರು ವರ್ಷಗಳಿಂದ ರಾಜಾಶ್ರಯವಿಲ್ಲದಿದ್ದರೂ ಕಲಾಕೌಶಲ್ಯಗಳು, ಕಮ್ಮಾರಿಕೆ, ಬಡಿಗತನ, ಕುಂಬಾರಿಕೆ, ಗುಡಿಗಾರಿಕೆ, ಮೊದಲಾದ ಹಳ್ಳಿಯ ಉದ್ಯೋಗಗಳು, ಒಕ್ಕಲತನದ ಹೋರೆಗಳು, ನೇಕಾರಿಕೆಗಳು, ಡಾಕಾಮಲ್ ಮಲ್, ಕಾಶ್ಮೀರ ಶಾಲುಗಳಂತಹ ಅಮೌಲ್ಯ ತಯಾರಿಕೆಗಳು, ಗ್ರಾಮೋದ್ಯೋಗ ಮೊದಲಾದವು ಇನ್ನೂ ಸಾಕಷ್ಟು ಉತ್ತಮ ರೀತಿಯಲ್ಲೇ ಉಳಿದುಕೊಂಡಿವೆ. ಬಲಾಢ್ಯ ಬ್ರಿಟಿಷ ಸರಕಾರದ ಕುಹಕ ನೀತಿಯನ್ನೂ ಯಂತ್ರ ಶಕ್ತಿಯನ್ನೂ ಎದುರಿಸಿ ಇನ್ನೂ ಬದುಕಿಕೊಂಡಿವೆ. ತಲೆ ತಲಾಂತರಗಳಿಂದ ನಡೆದು ಬಂದ ಈ ಕಲೆ ಕೈಗಾರಿಕೆಗಳು ಶಿಕ್ಷಣವಿಲ್ಲದೆ ಬದುಕಿ ಬರುವದು ಸಾಧ್ಯವೇ ? ಆದರೆ ಇವು ಹೆಚ್ಚಾಗಿ ವಂಶ ಪರಂಪರಾಗತವಾಗಿ ನಡೆದುಬಂದವು. ತಂದೆಯು ಮಗನಿಗೆ ಇವುಗಳ ತಾತ್ವಿಕ ಪ್ರಾಯೋಗಿಕ ವಿಷಯಗಳನ್ನೆಲ್ಲ ಕಲಿಸುತ್ತಿದ್ದನು. ಮಗನು ಪ್ರತ್ಯಕ್ಷ ಕೃತಿಯಮೂಲಕ ಕಲಿಯುತ್ತಿದ್ದನು. ಇತರ ಜನರು ಆಯಾಯ ಕಲೆ ಕೈಗಾರಿಕೆಗಳಲ್ಲಿ ತಜ್ಞರಾದವರಲ್ಲಿ ಹೋಗಿ ಕಲಿಯಬೇಕಾಗುತ್ತಿತ್ತು. ರೈತನು ತನ್ನ ಮಗನಿಗೆ ಹೇಗೆ ನೇಗಿಲು ಹೊಡೆಯಬೇಕೆಂಬುದನ್ನು ತಾನೂ ಹೂಡಿ ಮಗನಿಂದಲೂ ಹೂಡಿಸಿ ಕಲಿಸುತ್ತಿದ್ದನು. ಮಗಳು ತಾಯಿಗೆ ಅಡಿಗೆಯಲ್ಲಿ ನೆರವಾಗಿ ಅಡಿಗೆ ಮಾಡುವ ವಿಧಾನವನ್ನು ಕಲಿಯುತ್ತಿದ್ದಳು. ಇಂದಿನ ಶಿಕ್ಷಣದಲ್ಲಿ ಪ್ರವಾಸಕ್ಕೆ ಮಹತ್ವವಿದ್ದಂತೆ ನಮ್ಮ ಹಿರಿಯರೂ ಪ್ರವಾಸಕ್ಕೆ ಮಹತ್ವ ಕೊಟ್ಟು ಲಗ್ನವಾಗಿ ಸಂಸಾರ ಹೂಡುವ ಮೊದಲು ತೀರ್ಥಯಾತ್ರೆ ಮಾಡಿ ಬರಬೇಕೆಂಬ ನಿಯಮ ಇಟ್ಟುಕೊಂಡಿದ್ದರು. ಇದು ಇಂದಿಗೂ ಔಪಚಾರಿಕವಾಗಿ ನಡೆಯುತ್ತಿದೆ. ಇದರಿಂದ ನಮ್ಮ ದೇಶದಲ್ಲಿ ಕೃತಿಮೂಲ ಶಿಕ್ಷಣವು ರಾಜಾಶ್ರಯವಿಲ್ಲದಿದ್ದರೂ ನಡೆಯುತ್ತಬಂದಿದೆ. ಅದರಿಂದಲೇ ನಮ್ಮ ಸಂಸ್ಕೃತಿಯು ಬದುಕಿ ಉಳಿದಿದೆ. ಇಲ್ಲಿಯ ವರೆಗೆ ಕೃತಿಮೂಲ ಶಿಕ್ಷಣಕ್ಕೆ ರಾಜಾಶ್ರಯ ದೊರೆಯುತ್ತಿರಲಿಲ್ಲ. ನಾಡಿನ ಶೈಕ್ಷಣಿಕ ಯೋಜನೆಯಲ್ಲಿ ಅದಕ್ಕೆ ಸ್ಥಾನವಿರಲಿಲ್ಲ. ಇಂದಿಗೂ ಗೋವಾದ ಹಳ್ಳಿಯ ಜನರೇ ಶಾಲೆಗಳನ್ನು ಸ್ಥಾಪಿಸಿಕೊಂಡು ತಮ್ಮ ಮಕ್ಕಳಿಗೆ ಓದು ಬರಹ ಕಲಿಸುವದಿಲ್ಲವೇ? ಮಲೆನಾಡಿನ ನಾಲ್ಕೆಂಟು ಮನೆಗಳುಳ್ಳ ತೀರ ಸಣ್ಣ ಹಳ್ಳಿಗಳಲ್ಲಿ ಶಿಕ್ಷಣಕ್ಕೆ ಅಲ್ಲಿಯ ಜನರೇ ಖಾಸಗಿಯಿಂದ ವ್ಯವಸ್ಥೆ ಮಾಡಿಕೊಳ್ಳುವದಿಲ್ಲವೇ? ಹಾಗೆಂತ ಅಲ್ಲಿ ಶಿಕ್ಷಣವೇ ಇಲ್ಲವೆಂದು ಹೇಳಬಹುದೇ? ಆದರೆ ಅದಕ್ಕೆ ಯೋಜನಾಬದ್ಧವಾದ ಕಾರ್ಯಕ್ರಮವಿಲ್ಲದಂತೆ ನಮ್ಮಲ್ಲಿಯ ಕೃತಿಮೂಲ ಶಿಕ್ಷಣವೂ ಸರಿಯಾದ ಯೋಜನೆಯಿಲ್ಲದೆ ಕುರುಡನ ನಡಿಗೆಯಂತೆ ಸಾಗಿತ್ತು.

ಆದರೆ ಇಂದು ಕಾಲ ಬದಲಾಗಿದೆ. ಭಾರತವು ಸ್ವತಂತ್ರವಾಗಿದೆ. ಈ ವಿಶಾಲ ನಾಡು ಎರಡು ಸಾವಿರ ವರ್ಷಗಳ ನಂತರ ದೇಶೀಯರ ಆಡಳಿತೆಗೊಳಪಟ್ಟು ಒಂದೇ ಅಧಿಕಾರದಲ್ಲಿ ಬಂದಿದೆ. ನಮ್ಮದೇ ಆದ ಸರಕಾರವಿದೆ. ಅದು ನಾಡಿನ ಉನ್ನತಿಗಾಗಿ ಹೆಣಗುತ್ತಿದೆ. ಕೃತಿಮೂಲ ಶಿಕ್ಷಣವನ್ನು ತಂದು ಜನರಿಗೆ ಅವಶ್ಯ ಭಾರವನ್ನು ಕಡಿಮೆ ಮಾಡುವ ಹಾಗೂ ಅನುಕೂಲತೆಗಳನ್ನೊದಗಿಸಿಕೊಡುವ ಧ್ಯೇಯವನ್ನಿರಿಸಿಕೊಂಡಿದೆ.

ಪುರಾತನವಾದ ಈ ನಾಡು ಅಪೂರ್ವವಾಗಿ ಒದಗಿದ ಈ ಸಂದರ್ಭವನ್ನು ಉಪಯೋಗಿಸಿಕೊಂಡು ಚೈತನ್ಯಶಾಲಿಯಾಗಿ ಎದ್ದು ನಿಲ್ಲಲಿ. ಭಾರತೀಯ ಜನಾಂಗವು ಸ್ವಾಭಿಮಾನಿಯೂ, ಸ್ವಾವಲಂಬಿಯೂ ಕರ್ತೃತ್ವಶಾಲಿಯೂ ಆಗಿ ತಲೆ ಎತ್ತಲಿ. ನಾಡಿನಲ್ಲಿ ದುಃಖ ದಾರಿದ್ರ್ಯ ಕ್ಷೋಭೆ ಅಜ್ಞಾನಗಳೆಲ್ಲ ಅಳಿದು ಸುಖ ಶಾಂತಿಯು ನೆಲಸಲಿ ಎಂದು ಹಾರೈಸುವ. ಈ ನಾಡಿನ ಉನ್ನತಿಯ ಮಹಾಸಾಧನೆಯಲ್ಲಿ ನಮ್ಮ ಅಲ್ಪ ಶಕ್ತಿಗೆ ಅನುಸಾರವಾಗಿ ನಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಪ್ರಯತ್ನಿಸಿ ನಮ್ಮ ಅಳಿಲ ಸೇವೆಯನ್ನು ಸಲ್ಲಿಸುವಾ.

ಮಹಮ್ಮದೀಯ ಧರ್ಮದ ಉದಯ ಮತ್ತು ಬೆಳವಣಿಗೆ

(ಜಾರ್ಜ ಗೆಸ್ಟ್ ಎಂಬ ಗ್ರಂಥಕಾರರ ಗ್ರಂಥದಿಂದ ಅನುವಾದಿಸಿದ್ದು)

ಅನುವಾದಕರು : ಲೇಖನ ಕಲಾನಿಧಿ ಶ್ರೀ **ತಟ್ಟಿ ಶಾಮರಾಯರು, ಧಾರವಾಡ.**

೧. ಸಂಸ್ಥಾಪಕರು

ಪಾಶ್ಚಾತ್ಯ ದೇಶಗಳಿಗೆ ಕ್ರೈಸ್ತಮತದ ಪ್ರಕಾಶವು ರೋಮ್‌ದ ಮುಖಾಂತರ ಬಂದಿತೆಂದು ಹೇಳುತ್ತಾರೆ. ರೋಮನ್ ಸಾಮ್ರಾಜ್ಯದ ಪತನದ ನಂತರ ಅನೇಕ ಶತಮಾನಗಳ ವರೆಗೆ ಯುರೋಪದಲ್ಲಿ ಸುವ್ಯವಸ್ಥೆಯ ಅಭಾವವೇ ಇತ್ತು. ಅನಾಗರಿಕ ಜನರ ಕುಲಗಳು ರೋಮದ ಸಂಪತ್-ಸಮೃದ್ಧವಾದ ಪ್ರಾಂತಗಳಿಗಾಗಿ ತಮ್ಮ ತಮ್ಮೊಳಗೆ ಹೋರಾಡುತ್ತಿದ್ದರು. ಈ ಗೊಂದಲದ ಅವಧಿಯಲ್ಲಿ ಕ್ರೈಸ್ತಮತವು ಪಶ್ಚಿಮದ ಕಡೆಗೆ ಹಬ್ಬುವದನ್ನು ತಡೆಯಬಹುದೆಂಬ ಭೀತಿಯನ್ನು ಹುಟ್ಟಿಸುವ ಹೊಸಮತವೊಂದು ಅರಬಸ್ತಾನದಲ್ಲಿ ಉದಯವಾಯಿತು.

ಈ ಹೊಸ ಮತದ ಸಂಸ್ಥಾಪಕರಾದ ಮಹಮ್ಮದರು ಆರನೆಯ ಶತಮಾನದ ಕೊನೆಯ ಭಾಗಕ್ಕೆ ಮಕ್ಕಾದಲ್ಲಿ ಜನಿಸಿದರು. ಒಂಟೆ ಸಾರಿಗೆಯ ಆತನ ಉದ್ಯೋಗವು ಕ್ರಿಶ್ಚನ್ನರು, ಯಹೂದಿಯರು, ಉಭಯರೊಡನೆಯೂ ಸಂಪರ್ಕವನ್ನುಂಟು ಮಾಡಿತು ಆದರೆ ಆತನು ಅಬ್ರಹಮ್ ಮತ್ತು ಏಸುಕ್ರಿಸ್ತ ಇವರಿಬ್ಬರೂ ದೇವರ ಶ್ರೇಷ್ಠ ಪ್ರವಾದಿಗಳೆಂದು ಒಪ್ಪಿಕೊಂಡರೂ ಅವರಾವ ಧರ್ಮಕ್ಕೂ ಕೂಡಿಕೊಳ್ಳಲಿಲ್ಲ.

ಬಹುಕಾಲ ಪ್ರಾರ್ಥನೆಯಲ್ಲಿಯೂ ಏಕಾಂತದಲ್ಲಿಯೂ ಕಳೆದ ಬಳಿಕ ತನ್ನ ಪ್ರವಾದಿಗಳಲ್ಲಿ ಕೊನೆಯವನೆಂದೂ ಅತಿಶ್ರೇಷ್ಠನೆಂದೂ ತನ್ನನ್ನು ದೇವರು ಆರಿಸಿ ಕಳಿಸಿದ್ದಾನೆಂದೂ ಮಹಮ್ಮದ ಪೈಗಂಬರರು ಸಾರಿದರು. ಅನಂತರ 'ನಿಮ್ಮ ಮೂರ್ತಿಗಳನ್ನು ಆಚೆ ಸರಿಸಿಬಿಡಿ' ಎಂದೂ, ದೇವರು ಒಬ್ಬನೇ, ಅಲ್ಲಾಹ್, ಮತ್ತು ಮಹಮ್ಮದ್ ಆತನ ಪ್ರವಾದಿ ಎಂಬ ಹೊಸ ಧರ್ಮವನ್ನು ಸ್ವೀಕರಿಸಿರಿ ಎಂದೂ ಅರಬರಿಗೆ ಉಪದೇಶಿಸಿದರು.

ಆದರೆ ಮಕ್ಕಾದ ಜನರು ಆತನ ಮೇಲೆ ಸಿಟ್ಟಾದ್ದರಿಂದ ಆತನು ಮದೀನಾಕ್ಕೆ ಓಡಿ ಹೋಗಬೇಕಾಯಿತು.

ಈ ನಿರ್ಗಮನವು ೬೨೨ನೆಯ ಇಸವಿಯ ಜುಲೈ ೧೫ನೆಯ ದಿನಾಂಕ ಆಯಿತು; ಅದು 'ಹಿಜರಿ' ಎಂಬ ಹೆಸರಿನಿಂದ ಪ್ರಸಿದ್ಧಿಯಾಯಿತು. ಮುಂದೆ ಈ ೬೨೨ನೆಯ ಇಸವಿಯು ಮುಸಲ್ಮಾನರ ಅಥವಾ ಮಹಮ್ಮದೀಯರ ಪಂಚಾಂಗದಲ್ಲಿ ಮೊದಲನೆಯ ವರ್ಷವೆಂದು ತಿಳಿಯಲಾಯಿತು—ಕ್ರಿಸ್ತಶಕವು ಯೇಸುಕ್ರಿಸ್ತನ ಜನ್ಮದಿಂದ ಎಣಿಸಲಾದಂತೆ.

ಮಹಮ್ಮದ ಪೈಗಂಬರರಿಗೆ ಮದೀನಾದಲ್ಲಿ ಸಾವಿರಾರು ಜನರು ಅನುಯಾಯಿಗಳಾದರು. ಅಲ್ಲಿ ಮುಸ್ಲಿಮ ಧರ್ಮದ ಪ್ರತೀಕವಾದ 'ಅರ್ಧಚಂದ್ರ'ಕ್ಕಾಗಿ ಯುದ್ಧ ಮಾಡಿ ಮಡಿದವರೆಲ್ಲರೂ ನೇರವಾಗಿ ಸ್ವರ್ಗಕ್ಕೆ ಹೋಗುವರೆಂದು ಪೈಗಂಬರರು ತಿಳಿಸಿ ಹೇಳಿದರು. ಮುಂದೆ ಕೆಲವು ವರ್ಷಗಳ ನಂತರ ಮಕ್ಕಾವನ್ನು ಹಿಡಿದುಕೊಳ್ಳುವದಕ್ಕಾಗಿ ತಮ್ಮ ಸೈನ್ಯದ ಮುಂದಾಳಾಗಿ ಹೊರಟರು. ಯುದ್ಧವೂ ರಕ್ತಪಾತವೂ ಮೊದಲಿನಿಂದ ಮೆಚ್ಚುಗೆ ಇದ್ದ ಉಗ್ರ ಸ್ವಭಾವದ ಅರಬರು ಹೊಸ ಧರ್ಮವನ್ನು ಸ್ವೀಕರಿಸಲು ಒಪ್ಪದ ಎಲ್ಲರನ್ನೂ ಕೊಲ್ಲುವದು ತಮ್ಮ ಧರ್ಮವೆಂದು ತಿಳಿದಿದ್ದರು.

೬೩೨ನೆಯ ಇಸವಿಯಲ್ಲಿ ಸಂಭವಿಸಿದ ಸಂಸ್ಥಾಪಕರ ಮರಣದ ಪೂರ್ವದಲ್ಲಿ ಮಹಮ್ಮದೀಯ ಧರ್ಮವು ಅರಬಸ್ತಾನದಲ್ಲಿ ಸ್ಥಿರವಾಗಿ ಬೇರುಬಿಟ್ಟಿತ್ತು. ಅದಕ್ಕೆ ಹೆಚ್ಚಾಗಿ 'ಇಸ್ಲಾಮ್' ಎಂಬ ಹೆಸರಿದೆ.— ಅದರ ಅರ್ಥವು "ಅಲ್ಲಾಹ್‌ನ ಇಚ್ಛೆಗೆ ತಲೆಬಾಗುವದು" ಎಂದು.

ಮುಸಲ್ಮಾನ್ ಪ್ರಪಂಚದ ಪವಿತ್ರ ಗ್ರಂಥವಾದ ಕುರಾನ್‌ದಲ್ಲಿ ಪೈಗಂಬರರಿಗೆ ಅಲ್ಲಾಹ್‌ನಿಂದ ಸಾಕ್ಷಾತ್ತಾಗಿ ದೊರೆತವೆಂದು ಹೇಳಲಾದ ಸಂದೇಶಗಳು ಇರುವವು.

೨. ಅದರ ಬೆಳವಣಿಗೆ

ಮಹಮ್ಮದನ ಉತ್ತರಾಧಿಕಾರಿಗಳಿಗೆ ಮುಂದೆ ಖಲೀಫರೆಂದು ಹೆಸರು ಬಂದಿತು. ಅವರ ನೇತೃತ್ವದಲ್ಲಿ ಮುಸಲ್ಮಾನರ ಸೈನ್ಯಗಳು ಎಲ್ಲ ದಿಕ್ಕಿನಲ್ಲಿಯೂ ಜಯಶಾಲಿಗಳಾದವು. ಉತ್ತರದಲ್ಲಿ ಅವರು ಸಿರಿಯಾ ಮತ್ತು ಪಾಲಿಸ್ಟೈನಗಳ ಮೇಲೆ ದಾಳಿಮಾಡಿದರು; ಮತ್ತು ಇ.ಸ. ೬೩೮ರಲ್ಲಿ ಜರೂಸಲೆಮ್ ಅವರ ಕೈವಶವಾಯಿತು. ಅವರು ಬಾಸ್‌ಫರಸ್ ಸಂಧಿಯನ್ನು ದಾಟಿ ಕಾನ್‌ಸ್ಟಾಂಟಿನೋಪಲಕ್ಕೆ ಮುತ್ತಿಗೆ ಇಕ್ಕಿದರು; ಆದರೆ ಆದರ ಭದ್ರವಾದ ಕೋಟೆಗಳು ಅದನ್ನು ಉಳಿಸಿದವು. ಇ. ಸ. ೧೪೫೩ರ ವರೆಗೆ ಆ ಪಟ್ಟಣವು ಮುಸಲ್ಮಾನರ ಕೈಗೆ ಬರಲಿಲ್ಲ; ಆಗ ಅದು ತುರ್ಕರಿಂದ ವಶಮಾಡಿಕೊಳ್ಳಲ್ಪಟ್ಟಿತು.

ಮುಸಲ್ಮಾನರ ಸೈನ್ಯಗಳು ಪಶ್ಚಿಮಕ್ಕೆ ಸಾಗಿ ಇಜಿಪ್ತದಲ್ಲಿ ಹೊಕ್ಕವು. ಪ್ರಪಂಚದಲ್ಲಿಯೇ ಎಲ್ಲಕ್ಕೂ ದೊಡ್ಡದಾದ ಅಲೆಗ್ಝಾಂಡ್ರಿಯ ಎಂಬ ಅದರ ಬಂದರವು ಅವರ ವಶವಾಯಿತು (೬೪೧ ಇ.ಸ.). ಜಯಶಾಲಿಯಾದ ದಂಡು ಉತ್ತರ ಆಫ್ರಿಕೆಯನ್ನು ದಾಟಿತು; ದಾಟಿ ಎಂಟನೆಯ ಶತಮಾನದ ಆದಿಭಾಗದಲ್ಲಿ ಅದು ಸ್ಪೇನವನ್ನು ಪ್ರವೇಶಿಸಿತು. ಅಲ್ಲಿ ಅದು ಪಶ್ಚಿಮದ ಗಾಥರನ್ನು ಗೆದ್ದು ಪಿರಿನೀಜ್ ಪರ್ವತವನ್ನು ದಾಟಿ ಫ್ರಾನ್ಸದಲ್ಲಿಯೂ ದಾಳಿ ಮಾಡಿತು. ಆದರೆ 'ಟೂರ್' ಎಂಬ ಯುದ್ಧದಲ್ಲಿ (ಇ. ಸ. ೭೩೨) ಸೈನ್ಯವು ಪರಾಜಿತವಾಗಿ ಸ್ಪೇನಕ್ಕೆ ಹಿಂದೂಡಲ್ಪಟ್ಟಿತು. ಹೀಗಾಗಿ ಯುರೋಪವು ಮುಸಲ್ಮಾನರ ದಬ್ಬಾಳಿಕೆಯಿಂದ ಉಳಿದುಕೊಂಡಿತು. ಆದರೂ ಸ್ಪೇನದಲ್ಲಿನ ಅರಬರ ಮಿತ್ರರಾದ ಮೂರರು ಇ. ಸ. ೧೪೯೨ರ ವರೆಗೂ ಸ್ಪೇನದಿಂದ ಹೊರದೂಡಲ್ಪಡದೆ ಇದ್ದರು.

ಪೂರ್ವ ದಿಕ್ಕಿಗೆ ಮುಸ್ಲಿಮ್ ಸೈನ್ಯಗಳು ಇರಾಣವನ್ನು ಆಕ್ರಮಿಸಿದವು. ಮತ್ತು ಹನ್ನೊಂದನೆಯ ಶತಮಾನದ ಸುಮಾರಿಗೆ ಆಫ್‌ಗಾಣಿಸ್ತಾನದ ಮಹಮ್ಮದೀಯರಾದ ತುರ್ಕರು ಹಿಂದುಸ್ತಾನವನ್ನು ಜಯಿಸುವದನ್ನು ಕೈಕೊಂಡರು. ಈ ರೀತಿಯಾಗಿ ಮಹಮ್ಮದ ಪೈಗಂಬರರಿಂದ ಸ್ಥಾಪಿತವಾದ ಧರ್ಮವು ಜಗತ್ತಿನ ದೊಡ್ಡದಾದ ಭಾಗದಲ್ಲಿ ಹಬ್ಬಿತು. ಎಷ್ಟೋ ಶತಕಗಳ ವರೆಗೆ ಪೌರ್ವಾತ್ಯ ಮುಸಲ್ಮಾನರಾದ ಸಾರಾಸೆನ್ಸ್ ಎಂದು ಕರೆಯಿಸಿಕೊಳ್ಳುವವರು ಕ್ರಿಶ್ಚನ್ನರ ಭಯಂಕರರಾದ ಶತ್ರುಗಳಾಗಿದ್ದರು.

ಮಹಮ್ಮದ ಪೈಗಂಬರರು ಮರಣ ಹೊಂದಿ ೧೩ ಶತಮಾನಗಳ ಮೇಲೆ ಆಗಿದೆ; ಅವರು ಸ್ಥಾಪಿಸಿದ ಧರ್ಮವು ಇನ್ನೂ ಚೈತನ್ಯಯುಕ್ತವಾಗಿದೆ. ಭಾರತ, ಪಾಕಿಸ್ತಾನ್ ಮತ್ತು ಕಾಮನ್‌ವೆಲ್ಥದ ಇತರ ಭಾಗಗಳಲ್ಲಿ ಕೋಟಿಗಟ್ಟಲೆ ಮುಸಲ್ಮಾನರು ಬಾಳುತ್ತಿದ್ದಾರೆ; ಮಾನವ ಜನಾಂಗದ ಸುಮಾರು ಒಂದು ಹದಿನೈದನೆಯ ಭಾಗವು ಮಕ್ಕಾವನ್ನು ತಮ್ಮ 'ಪವಿತ್ರ ನಗರ' ವೆಂದು ತಿಳಿದುಕೊಳ್ಳುವದೆಂದು ಅಂದಾಜು ಮಾಡಲಾಗಿದೆ.

೩. ಮಹಮ್ಮದೀಯ ಸಂಸ್ಕೃತಿ

ಇಸ್ಲಾಮ್ ಮತಕ್ಕೆ ಹೋದ ಮೊದಲಿಗರು ಮಿತಿಮೀರಿ ಆವೇಶಪೂರಿತ ಯುದ್ಧ ಮಾಡುವವರಾಗಿದ್ದರೂ ಅವರು ಕೇವಲ ವಿನಾಶಕರಾಗಿರಲಿಲ್ಲ. ಪೈಗಂಬರರ ಉಪದೇಶದಲ್ಲಿ ಎಷ್ಟೋ ಉದಾತ್ತವಾದ ಅನುಕರಣೀಯವಾದ ತತ್ವಗಳಿದ್ದವು.

ಮುಸಲ್ಮಾನ ಸೈನ್ಯಗಳು ಒಂದಾದ ಮೇಲೆ ಒಂದು ದೇಶವನ್ನು ಗೆಲ್ಲುತ್ತ ಹೋದಹಾಗೆ ಆ ಜನರು ತಮಗೂ ಪ್ರಾಚೀನವಾದ ಸಂಸ್ಕೃತಿಗಳ ಪ್ರಭಾವಕ್ಕೆ ಕೆಲಮಟ್ಟಿಗೆ ಒಳಗಾದರು. ಮುಖ್ಯ ಕೇಂದ್ರಗಳಲ್ಲಿ ವಿಶ್ವವಿದ್ಯಾಲಯಗಳು ಬರಬರುತ್ತ ಸ್ಥಾಪಿಸಲ್ಪಟ್ಟವು. ವಿಜ್ಞಾನದ ಕ್ಷೇತ್ರದಲ್ಲಿ—ವಿಶೇಷತಃ ಗಣಿತ, ಜ್ಯೋತಿಷ, ವೈದ್ಯಕ ವಿಷಯಗಳಲ್ಲಿ—ಅವರು ಸ್ಪಷ್ಟವಾದ ಮುನ್ನಡೆಯನ್ನು ಸಾಧಿಸಿದರು. ಇಂದಿಗೂ ರೂಢಿಯಲ್ಲಿರುವ ಎಣಿಕೆಯ ಅಂಕಿಗಳು ಹಿಂದುಗಳಿಂದ ಅರಬರ ಮುಖಾಂತರ ಯುರೋಪಕ್ಕೆ ಮುಟ್ಟಿದವು. "ಅರೇಬಿಯನ್ ನಾಇಟ್ಸ್" ಎಂಬ ಕಥಾ ಸಂಗ್ರಹದ ಮುಖಾಂತರ ಅವರ ಸಾಹಿತ್ಯವು ಇಡಿಯ ಜಗತ್ತಿಗೆ ಗೊತ್ತಾಗಿದೆ—ಈ ಸಂಗ್ರಹವು ಅದರಲ್ಲಿ ಹೇಳಿದ ಮಾಯಲಾಂದರಿನ ಅಲ್ಲಾವುದ್ದೀನ ಮತ್ತು ಸಿಂದಬಾದ ನಾವಿಕ ಇವರ ಸಾಹಸದ ಕಥೆಗಳಿಂದ ಎಲ್ಲ ತರುಣ ವಯಸ್ಸಿನವರಿಗೂ ಪ್ರೀತಿಪಾತ್ರವಾಗಿದೆ.

ಮೂರ್ತಿಪೂಜೆಗೆ ಪ್ರೋತ್ಸಾಹಕವಾಗಿರುವದರಿಂದ ಮೂರ್ತಿಗಳನ್ನು ಮಾಡುವದನ್ನು ಮಹಮ್ಮದ ಪೈಗಂಬರರು ನಿಷೇಧಿಸಿದ್ದರು. ಆದರೂ ಅರಬರ ವಾಸ್ತುಶಿಲ್ಪವು ಅಲಂಕಾರ-ಭೂಷಿತ ಸೌಂದರ್ಯದಿಂದ ಸಮೃದ್ಧವಾಗಿದೆ. ಅದರ ವಿಶಿಷ್ಟ ಲಕ್ಷಣಗಳೆಂದರೆ ಗುಮಟ, ಅಶ್ವ

ಖುರದಾಕೃತಿಯ ಕಮಾನುಗಳು ಆಕರ್ಷಕವೂ ಸುಂದರವೂ ಆಗಿರುವ 'ಮಿನಾರ' (ಗೋಪುರಗಳು). ಸ್ಪೇನದಲ್ಲಿ ಗ್ರಸಾಡಾ ಎಂಬಲ್ಲಿರುವ ಅಲ್‌ಹಂಬ್ರಾ ಇಮಾರತು ಮತ್ತು ಅಸಂಖ್ಯಾತ ಮಸೀದೆಗಳು ಅರಬ ಶಿಲ್ಪಿಗಳ ಕೌಶಲ್ಯದ ಅತ್ಯುತ್ತಮ ಸಾಕ್ಷಿಗಳಾಗಿ ನಿಂತಿವೆ.

ವ್ಯಾಪಾರ, ಕೃಷಿ ಹಾಗು ಇತರ ಅನೇಕ ಕುಶಲ ಉದ್ಯೋಗಗಳಿಗೆ ಅರಬರು ಲಕ್ಷವನ್ನು ಪೂರಯಿಸಿದರು. ಇಂದಿಗೂ ಆ ಮಟ್ಟವನ್ನು ನಿಲುಕಲಾಗದ ಒಂದು ವೈಭವದ ಶಿಖರಕ್ಕೆ ಅರಬರು ಸ್ಪೇನ ದೇಶವನ್ನು ಮುಟ್ಟಿಸಿದರು. ರೋಮನ್ ಕಾಲದ ರಾಜಮಾರ್ಗಗಳನ್ನೂ ಪೂಲುಗಳನ್ನೂ ಕಾಲುವೆಗಳನ್ನೂ ಅವರು ಸುಸ್ಥಿತಿಯಲ್ಲಿಟ್ಟರು. ದೇಶದಾದ್ಯಂತ ಅವರು ಅರಮನೆಗಳನ್ನೂ, ಮಸೀದೆಗಳನ್ನೂ, ಆಸ್ಪತ್ರೆಗಳನ್ನೂ, ಪೂಲುಗಳನ್ನೂ ನಿರ್ಮಿಸಿದರು. ರೇಶಿಮೆ ಕೈಗಾರಿಕೆ, ಅರಳಿಯ ಮತ್ತು ಉಣ್ಣೆಯ ಬಟ್ಟೆಗಳು, ಲೋಹದ ಕೈಗಾರಿಕೆಗಳು, ನಕ್ಷೆ ಕಸೂತಿಗಳಿಂದ ಕೂಡಿದ ಸಾಮಾನುಗಳು, ಮಣ್ಣಿನ ಪಾತ್ರೆಗಳು, ಅಪಾರದರ್ಶಕ ಕಾಜಿನ ಸಾಮಾನು ಮುಂತಾದ್ದರಲ್ಲಿ ವಿಸ್ತೃತವಾದ ವ್ಯಾಪಾರವನ್ನು ಅವರು ಮಾಡುತ್ತಿದ್ದರು. ಅಂತೂ ಅನಾಗರಿಕಪ್ರಾಯರಾದ ಟ್ಯಾಯ್ಟಾನಿಕ್ ಕುಲದ ಜನರ ಹಿಡಿತದಲ್ಲಿ ಸಿಕ್ಕ ಪಾಶ್ಚಾತ್ಯ ಪ್ರಪಂಚಕ್ಕೆ ಪೌರ್ವಾತ್ಯದ ವಿದ್ಯೆ-ಕಲೆಗಳು ಇಸ್ಲಾಮದ ಪ್ರಸಾರದ ಮುಖಾಂತರ ಪರಿಚಿತವಾದವು.

ಶಿಕ್ಷಣದಿಂದ ಮಾನವ ಪ್ರಗತಿ

ಲೇಖಕರು : ಪಿಂಪಿ ಲಿಂಗಣ್ಣ, ಚಡಚಣ ಜಿ. ವಿಜಾಪೂರ.

ಮಾನವನೆಂದರೆ ಮನವನ್ನು ಆಧರಿಸಿದ ಪರಮಾತ್ಮ ಪ್ರಕಟನೆ. ಬುದ್ಧಿಯೇ ಮಾನವನ ಆಸ್ತಿ. ವಿಚಾರಶೀಲತೆಯೇ ಅವನ ಕುರುಹು. ವಿಚಾರಕ್ಕೆ ನೆಲೆಹತ್ತದ ವಸ್ತುವನ್ನು ಅವನು ಅದಕ್ಕೂ ಮೇಲೇರಿ ಪಡೆಯಬಲ್ಲನು. ಮ. ಗಾಂಧಿ ಅವರಿಗೆ ಮುಂದಿನ ದಾರಿ ತೋಚದಿದ್ದಾಗ ಉಪವಾಸ, ಮೌನ, ಏಕಾಂತ, ಧ್ಯಾನ, ಪ್ರಾರ್ಥನೆಗಳಿಂದ ಬುದ್ಧಿಗೂ ಸೂಕ್ಷ್ಮವಾದ ಅಂತರಂಗದ ವಾಣಿಯನ್ನು ಆಲಿಸುತ್ತಿದ್ದರೆಂಬೂ, ಅದು ಮಹಾನ ಬುದ್ಧಿವಂತನಿಗೂ ಅಗಾಧಗೊಳಿಸುವಂಥದಾಗುತ್ತಿತ್ತೆಂಬೂ ತಿಳಿದಿದ್ದೇವೆ. ಮ. ಗಾಂಧಿ ಅವರ ನಿಲುವೆಯೇ ಮಾನವನ ನಿಜವಾದ ನಿಲುವೆ ಬೌದ್ಧಿಕ ನೆಲೆಯಲ್ಲಿ ನಿಂತು ಅನ್ನೊಂದು ಹಿರಿಮೆಯನ್ನು ಪಡೆದ ಮಾನವನು ಇನ್ನಾರೂ ಇಲ್ಲವೆಂದು ತಿಳಿದವರು ಹೇಳುತ್ತಾರೆ. ಅವರ ನಿಲುವೆಯು ಕಾಲ್ಪನಿಕ ಆದರ್ಶವನ್ನು ಸಾಧಿಸುವದೇ ಮಾನವನ ಪ್ರಗತಿಯೆನಿಸುತ್ತದೆ.

ಬುದ್ಧಿಯ ನೆಲೆಯಲ್ಲಿ ಸ್ಥಿರವಾಗಿ ನಿಲ್ಲುವುದೇ ಮಾನವನ ಪ್ರಗತಿಯಾದರೆ ವಿಚಾರವಂತಿಕೆಯಿಂದ ಕೆಳಗಿಳಿದ ಮಾನವನು, ಪ್ರಾಣಿಮಾತ್ರನೆನಿಸಿ ಆಶೆ-ಆಕಾಂಕ್ಷೆಗಳನ್ನು ಪೂರೈಸಿಕೊಳ್ಳುವುದರಲ್ಲಿ ನಿರತನಾಗಿಬಿಡುವನು. ಬುದ್ಧಿವಂತನಾದ ಮಾನವನು, ತನ್ನ ವಿಚಾರಕ್ಕೆ ಕತ್ತಲೆ ಆವರಿಸಿದಾಗ ಅಂತರ್ವಾಣಿಯ ಬೆಳಕಿನಲ್ಲಿ ಮುಂದುವರಿಯುವಂತೆ, ಆಶೆ-ಆಕಾಂಕ್ಷೆಗಳ ಸಾಧನೆಗೆ ತಡೆಯುಂಟಾದಾಗ ಮನುಷ್ಯ ಪ್ರಾಣಿಯು ಬುದ್ಧಿಯ ಮಳುಕಿನಲ್ಲಿ ಹೆಜ್ಜೆಯಿಡುವನು. ಮನುಷ್ಯಪ್ರಾಣಿಯು ಅದಕ್ಕೂ ಕೆಳಗಿಳಿದು ಆಲಸ್ಯ—ತಮಸ್ಸುಗಳಿಗೆ ಒಳಗಾಗಿ ಜಡದೇಹಿಯಂತೆ ಬೀಳುವನು. ಆಶೆ-ಆಕಾಂಕ್ಷೆಗಳನ್ನು ಹುಟ್ಟಿಸುವ ಪ್ರಾಣದ ರಾಜಸ-ವೃತ್ತಿಯ ಮಿಣುಕಿನಲ್ಲಿ ಅವನು ಉತ್ಸಾಹಗೊಟ್ಟು ನಿಲ್ಲುವನು. ಜಡದೇಹದ ತಮಸ್ಸನ್ನು ಕಳೆದು, ಪ್ರಾಣಪ್ರಕೃತಿಯ ರಾಜಸಗುಣವನ್ನು ಸರಿದಾರಿಯಲ್ಲಿ ಬಳಸುತ್ತ ಬುದ್ಧಿವಂತಿಕೆಯಲ್ಲಿ ಸ್ಥಿರವಾಗಿ ನಿಲ್ಲುವಂತೆಯೂ, ಬಿಕ್ಕಟ್ಟಿನಲ್ಲಿ ಅಂತರ್ವಾಣಿಯ ಮಿಂಚಿನ ಬೆಳಕನ್ನು ಕಾಣುವಂತೆಯೂ ಸಾಧನ ನಡೆಸುವುದೇ ಮಾನವನನ್ನು ಪ್ರಗತಿಗೊಯ್ಯುವ ಶಿಕ್ಷಣವೆನಿಸುತ್ತದೆ.

ಬುದ್ಧಿಯ ಎಚ್ಚರವು ಸದಾ ಉಳಿದಿರಬೇಕಾದರೆ

ಮಾರ್ಪಡಿಸುವ ಘನೋದ್ದೇಶವನ್ನೇ ಶಿಕ್ಷಣವು ಇಟ್ಟುಕೊಳ್ಳಬೇಕಾಗುತ್ತದೆ. "ಯೋಗ್ಯವಾದ ಶಾರೀರಿಕ ಶಿಕ್ಷಣವನ್ನು ಪಡೆದರೆ, ಮುಂದೆ ಬಂದುನಿಂತ ಅದೆಂಥ ಕಠಿಣ ಕೆಲಸವನ್ನಾದರೂ ದೇಹವು ಆಲಸದೆ ಮಾಡಿ ತೀರಿಸುವುದಕ್ಕೆ ನಡುಗಟ್ಟುತ್ತದೆ'' ಎಂದು ಬಲ್ಲವರು ಹೇಳುತ್ತಾರೆ. ಪ್ರಾಣದ ಉತ್ಸಾಹವು ದೇಹದಲ್ಲಿ ಮೂಡಿದ್ದಕ್ಕೆ ಅದೇ ಹೆಗ್ಗುರುತು. ಪ್ರಾಣಕ್ಕೆ ಕೊಡುವ ನೈತಿಕ ಶಿಕ್ಷಣವೆಂದರೆ– "ಸುಳ್ಳನಾಡಲು ಬೇಡ, ಜನರೊಳು ಕಳ್ಳನೆನಿಸಲು ಬೇಡ'' ಎಂಬ ಕವಿತೆಯನ್ನು ಕಂಠಪಾಠ ಮಾಡಿದರಲ್ಲ. ಪರರ ಸುಖದುಃಖಗಳಲ್ಲಿ ಸಹೃದಯತೆಯನ್ನು ಪಡೆಯುವುದು. ಹೆರರ ಸುಖವನ್ನು ಕಂಡು ಅಸೂಯೆಪಡುವ ಹಾಗೂ ಪರರ ದುಃಖವನ್ನು ಕಂಡು ಸಮಾಧಾನಪಡುವ ಈಗಿನ ಕೀಳುಪ್ರವೃತ್ತಿಯನ್ನು ಪ್ರಾಣವು ಕಳೆಕೊಳ್ಳತಕ್ಕದ್ದು. ಅಡಿಗಡಿಗೂ ಆತ್ಮಸ್ತುತಿಯನ್ನು ಬಯಸುವ ಪ್ರಾಣವು ಹೊಗಳಿಕೆಯೆಂದರೆ ಹೊನ್ನಶೂಲವೆಂದು ಬಗೆಯುವಂತಾಗಬೇಕು. ಬಂದ ಪ್ರಸಂಗವು ಎಂಥದಿದ್ದರೂ ಅದಕ್ಕೆ ಗೊಣಗುಟ್ಟುತ್ತ ಬೇಸರದಿಂದ ನಡಕೊಳ್ಳುವ ನಿಲುಮೆಯಿಂದ ದೂರವಾಗಿ, ಬಂದ ಎಡರು – ಸಂಕಟಗಳನ್ನು ಸಮಾಧಾನದಿಂದ ಎದುರುಗೊಳ್ಳುವುದಕ್ಕೆ ಪ್ರಾಣವು ಅಣಿಗೊಳ್ಳಬೇಕು, ಅಂದ ಮಾತ್ರಕ್ಕೆ ದಾರಿಗೆ ಹೋಗುವ ಸಂಕಟಗಳನ್ನು ಕರೆದು ಮೈಮೇಲೆ ಹಾಕಿಕೊಳ್ಳುವುದಲ್ಲ. ತಾನು ತಪ್ಪು ಮಾಡಿದರೂ ಹೆರರ ಮೇಲೆ ತಪ್ಪು ಹೊರಿಸುವ ಪ್ರಾಣದ ರೀತಿ ಮಾರ್ಪಟ್ಟು, ಹೆರರ ತಪ್ಪಿಗಿಂತ ತನ್ನ ತಪ್ಪೇ ದೊಡ್ಡದಾಗಿ ಕಾಣಿಸತೊಡಗಿದರೆ, ಪ್ರಾಣವು ತಿಳಿಯಾಗಿದೆಯೆಂದು ಭಾವಿಸಬೇಕು. ಆಟದ ಬಯಲಲ್ಲಿ ಮಕ್ಕಳು ಈ ಗುಣಗಳನ್ನು ಪಡೆಯಬಹುದಾಗಿದೆ. ಸಹಜೀವನದ ರೂಢಿಯಿಂದ ಅಂಥ ಶಿಕ್ಷಣವು ಪ್ರಾಪ್ತವಾಗಬಹುದಾಗಿದೆ. ಇನ್ನು, ತಿಳುವಳಿಕೆಯು ಮೇಲಾದ ಸಾಧಕವಾಗಿದ್ದರೂ ಅದು ಒಮ್ಮೊಮ್ಮೆ ಕಲ್ಪನೆಯ ಲಹರಿಯಲ್ಲಿ ತೇಲಿಬಿದ್ದು ದಂಡೆಗಾಣದೆ ಹೋಗಬಹುದು. ತರ್ಕದ ತಿರುಗಣಿಯಲ್ಲಿ ಸಿಕ್ಕುಬಿದ್ದು ಮುಂದುಗಾಣದೆ ನಿಲ್ಲಬಹುದು. ಆಗ ತಿಳುವಳಿಕೆಯೇ ಬಾಧಕವೆನಿಸುತ್ತದೆ. "ತಿಳಕೊಳ್ಳುವುದು ತೀರುತ್ತಲೆ ತಿಳಿವು ಉಂಟಾಗುವದು" ಎಂಬ ಮಾತನ್ನು ಲಕ್ಷ್ಯದಲ್ಲಿರಿಸಿಕೊಳ್ಳಬೇಕಾಗುತ್ತದೆ. ಬುದ್ಧಿವಂತಿಕೆಯು ನಿಜವಾದ ತಿಳುವಳಿಕೆಯನ್ನು ತಲುಪಿಸದೆ ವಿಚಾರದ ನೂರು ಎಳೆಗಳಿಂದ ಜಾಲವನ್ನೇ ಹೆಣೆದು ನಮ್ಮನ್ನು ಬಿಗಿದು ನಿಲ್ಲಿಸಬಹುದು. ಅಂತೆಯೇ ಅದು ಈಗ "ತನ್ನನ್ನೂ ಅನ್ಯರನ್ನೂ ವಂಚನೆಗೀಡುಮಾಡುವ ಬುದ್ಧಿ" ಯೆಂದು ಹೆಸರಿಡಿಸಿಕೊಂಡಿದೆ. ಒಂದು ಲೆಕ್ಕಕ್ಕೆ ಸಾವಿರಾರು ಉತ್ತರಗಳನ್ನು ಹೇಳುತ್ತ ಗಲಭೆಯನ್ನೆಬ್ಬಿಸುವ ಬುದ್ಧಿಯನ್ನು ಸ್ತಬ್ಧಗೊಳಿಸಿದಾಗಲೇ ಅಂತರಂಗವು ನಿಜವಾದ ಒಂದೇ ಉತ್ತರವನ್ನು ನೇರವಾಗಿ ಕೊಡಬಲ್ಲದು.

ಈ ಬಗೆಯ ಶಿಕ್ಷಣಕ್ಕೆ ಆಟದ ಬಯಲು, ಸಾಹಿತ್ಯ ವಾಚನ, ನವಜೀವನ, ಧ್ಯಾನ–ಪ್ರಾರ್ಥನೆಗಳು ಆವಶ್ಯಕವಾದ ನೆರವು ನೀಡಬಲ್ಲವು. ಕಾಯಕದ ತಲ್ಲೀನತೆಯಾಗಲಿ, ಕವಾಯತಿನ ಆಜ್ಞಾಪಾಲನವಾಗಲಿ ಶಾಲೆ, ಕುಟುಂಬ, ಊರು, ನಾಡು ನಮ್ಮದು ಎಂಬ ಎಚ್ಚರಿಕೆಯಾಗಲಿ; ನಮ್ಮ ಘನೋದ್ದೇಶಕ್ಕೆ ಸಾಧನಗಳಾಗಬಲ್ಲವು.

ಹೊಟ್ಟೆಯ ಹಾದಿ ಹುಡುಕುವ ಉದ್ದೇಶವು ಶಿಕ್ಷಣಕ್ಕೆ ಅವಮಾನಕರವಾದದ್ದು. ವ್ಯಕ್ತಿಯ ವಿಕಾಸದಲ್ಲಿ ಹಿಟ್ಟಿನ ತೊಡಕು ನುಸುಳಬಾರದು. ಶರೀರ ಪ್ರಾಣ–ಮನ–ಅಂತರಂಗಗಳು ಪುರುಷಾರ್ಥ ಸಾಧನೆಗೆ ಉಪಕರಣಗಳಾಗುವಂತೆ ಶಿಕ್ಷಣದ ಉದ್ದೇಶವಾಗಿ ಸಲಕರಣೆ, ಮಾರ್ಗದರ್ಶನಗಳು ಕಾಲ ಕಾಲಕ್ಕೆ ಎಷ್ಟು ದೊರೆತರೂ ಕಡಿಮೆಯೇ. ದೊರೆತಷ್ಟೆ ಹೆಚ್ಚೂ ಆಹುದು. ಆ ಕೆಲಸ ಸರಕಾರದ್ದೇ ಅಲ್ಲ. ಉಳ್ಳವರೆಲ್ಲರೂ ಕೈಕೊಳ್ಳಬೇಕಾದ ಕೆಲಸ; ಸಲ್ಲಿಸಬೇಕಾದ ಸೇವೆ; ನೀಡಬೇಕಾದ ಸಹಾಯ.

ಕರುವಿನ ಹಸಿವೆ, ಆಕಳ ತೊರುವು, ಒಡೆಯನ ಮಮತಾಪೂರ್ಣ ಸಾಕಣೆ ಈ ಮೂರರ ಒಗೆತನ ಕೂಡಿದಾಗ ಹಯನು ಹದಗೊಳ್ಳುತ್ತದೆ. ಒಡೆಯ-ಹಸು-ಕರು ಇವರಲ್ಲಿ ಪರಸ್ಪರ ಪ್ರೇಮ ಸಂಬಂಧವು ಏರ್ಪಡದಿದ್ದರೆ ಹಯನು ಹಸಗೆಡುತ್ತದೆ. ಮಮತೆಯು ಕಾಣಿಸಿಕೊಳ್ಳದಿದ್ದರೆ ಉದ್ದೇಶವು ಹಳಿಸುತ್ತದೆ. ಒಡೆಯನ ಹೆದರಿಕೆಗೆ ಕಂಗಾಲಾಗಿ ನಿಂತ ಆಕಳು ಕರುವು ಕೆಚ್ಚಲಿಗೆ ಬಂದಾಗ ಸಿಡಿಮಿಡಿಗೊಳ್ಳುತ್ತದೆ. ಹಸುವಿನ ಹಾಲು ಕರುವಿಗೆ ಅನಿವಾರ್ಯವಾಗಿರುವಂತೆ, ಅದು ಕರುವಿಗಾಗಿಯೇ ಬಂದ ಸ್ವರ್ಗದ ಬುತ್ತಿಯೂ ಆಗಿದೆ. ಒಡೆಯನಿಗೂ ಆ ಬುತ್ತಿಯಲ್ಲಿ ನ್ಯಾಯವಾದ ಪಾಲು ಸಿಗಬೇಕು.- ಅದಕ್ಕೆ ಪ್ರತಿಯಾಗಿ ಒಡೆಯನು ಸರಿಯಾದ ಸಾಕಣೆಯನ್ನು ಸಾಗಿಸು

ತ್ರಕ್ಕೆಷ್ಟು. ಮಮತೆಯಿಂದ ಕರುವನ್ನು ಆರಯಿಸದ ಆವು ಕಟುಕರ ಪಾಲಾಗಬೇಕಾದೀತು. ಒಡೆಯ ನಮ್ಮವನೆಂದೂ ಕರು ನನ್ನದೆಂದೂ ಆಕಳು ಮೈತುಂಬ ಮನತುಂಬ ಭಾವಿಸಬೇಕು. ಇಲ್ಲಿ ವಿದ್ಯಾರ್ಥಿ–ಶಿಕ್ಷಕ–ಆಡಳಿತ ಸಂಸ್ಥೆ ಇವೇ ಕರು–ಆಕಳು–ಒಡೆಯರು. ಈ ಮೂವರಲ್ಲಿ ಮಮತೆ ಕರಗಿ ಬೆಸುಗೆ ಹಾಕಿದರೆ ಸತ್ಯಯುಗದ ಸಾಮಂಜಸ್ಯವು ತಲೆದೋರುತ್ತದೆ. ಅಧಿಕಾರ–ಹೆದರಿಕೆಗಳ ಕಟ್ಟುಬಿದ್ದರೆ, ಕಲಿಯುಗದ ಅಸ್ತವ್ಯಸ್ತತೆಯು ತಪ್ಪಿದ್ದಲ್ಲ.

"ಕೂಡಿ ಉಣ್ಣುವ, ಕೂಡಿ ದುಡಿಯುವ, ಕೂಡಿ ಬೆಳೆಯುವ" ಎಂದು ಮಂತ್ರೋಚ್ಚಾರಣೆ ಮಾಡಿ ಆರಂಭಿಸುವ ಶಿಕ್ಷಣವು ಅದನ್ನು ಸಾಧಿಸುವ ದಾರಿಯಲ್ಲಿ ಹೆಜ್ಜೆಯಿಡದಿದ್ದರೆ ಮಂತ್ರಾರ್ಥವು ಸರಿಯಾಗಿ ತಿಳಿಯದೆ ವಂಚನೆಗೀಡಾಗಿರುವೆವೆಂದು ಅರ್ಥಯಿಸಿಕೊಳ್ಳಬೇಕಾಗುತ್ತದೆ. ನಮ್ಮ ಹಿರಿಯರು ಪಾರಮಾರ್ಥಿಕಕ್ಕೆ ವಿದ್ಯೆಯೆಂದಿದ್ದಾರೆ. ಲೌಕಿಕಕ್ಕೆ ಅವಿದ್ಯೆಯೆಂದೇ ಹೇಳಿದ್ದಾರೆ. ಅವಿದ್ಯೆಯೆಂದ ಮಾತ್ರಕ್ಕೆ ಅದು ತ್ಯಾಜ್ಯವೇ ಅಲ್ಲ. ವಿದ್ಯೆಯೆಂದ ಮಾತ್ರಕ್ಕೆ ಅದು ಗ್ರಾಹ್ಯವೇ ಅಲ್ಲ. ಲೌಕಿಕವೊಂದನ್ನೇ ಆಶ್ರಯಿಸಿದರೆ ತಮಸ್ಸು ಪ್ರಾಪ್ತವಾಗುವದೆಂದು ಹೇಳಿಬಿಡದೆ, ಪರಮಾರ್ಥವೊಂದನ್ನೇ ಆಶ್ರಯಿಸಿದರೆ ಅದಕ್ಕೂ ಗಾಢವಾದ ತಮಸ್ಸು ಪ್ರಾಪ್ತವಾಗುವದೆಂದೂ ಹೇಳಿದ್ದಾರೆ. ಅವಿದ್ಯೆಯೆಂದರೆ ಲೌಕಿಕದಿಂದ ಮೃತ್ಯುವನ್ನು ಗೆಲ್ಲಬೇಕೆಂದೂ, ವಿದ್ಯೆಯೆಂದರೆ ಪರಮಾರ್ಥದಿಂದ ಅಮರತ್ವವನ್ನು ಪಡೆಯಬೇಕೆಂದೂ ಉಗ್ಗಡಿಸಿದ್ದಾರೆ. ಆವೆರಡೂ ಕೈಗೂಡಿದಾಗಲೇ ಪುರುಷಾರ್ಥಗಳು ನಾಲ್ಕು ಪ್ರಾಪ್ತವಾಗುತ್ತವೆ. ಅವುಗಳನ್ನು ತಂದು ಉಡಿಯಲ್ಲಿ ತುಂಬುವ ಶಿಕ್ಷಣವೇ ಮಾನವನ ನಿಜವಾದ ಪ್ರಗತಿಗೆ ಸಾಧನವಾಗುತ್ತದೆ. ಭಾರತವು ಕಂಡು ಹಿಡಿದ ಜೀವನ ಶಿಕ್ಷಣವು ಆ ದಾರಿಯಲ್ಲಿ ನಮ್ಮನ್ನು ಸಾಕಷ್ಟು ಮುಂದುವರಿಸಬಲ್ಲದೆಂದು ಭಾರತೀಯ ತಜ್ಞರಲ್ಲದೆ ಜಗತ್ತಿನ ತಜ್ಞರೂ ತಲೆದೂಗಿದ್ದಾರೆ. ಭಾರತದ ಆತ್ಮವೇ ಜಾಗ್ರತವಾಗಿರುವಾಗ ಅದು ರಾಜಕೀಯ ಸ್ವಾತಂತ್ರ್ಯವನ್ನು ಪಡೆಯುವಂತೆ, ಜೀವನದ ಸರ್ವಸಮಸ್ಯೆಗಳನ್ನು ಬಿಡಿಸಿಕೊಡಲು ಸಕಲ ವಿಧದಲ್ಲಿಯೂ ಪರಿಪೂರ್ಣದೆಶೆಗೆ ಬರುತ್ತಿರುವುದು ಆಶ್ಚರ್ಯದ ಸಂಗತಿಯೇನಲ್ಲ. ಅದಕ್ಕೆ ಮಾನವನನ್ನು ಪ್ರಗತಿಗೊಯ್ಯುವ ಶಿಕ್ಷಣವು ಸಹಜವಾಗಿ ಕಾಣಿಸಿಕೊಳ್ಳಬಲ್ಲದು.

ಸಾಲೆಗಳಲ್ಲಿ ಮೂಲೋದ್ಯೋಗದ ಸಂಘಟನೆ

(ನೂಲುವ ನೇಯುವ ಸಾಲೆಗಳಿಗಾಗಿ ಮಾತ್ರ)

ಲೇಖಕರು :– **ಹು. ಹ. ಸಿಗ್ಗಾಂವ,** ಮೂಲೋದ್ಯೋಗದ ಸಂಘಟಕರು ಧಾರವಾಡ ಭಾಗ, ಧಾರವಾಡ.

ಸದ್ಯಕ್ಕೆ ಮುಂಬೈ ಕರ್ನಾಟಕದ ನಾಲ್ಕೂ ಜಿಲ್ಲೆಗಳಲ್ಲಿ ೧೨೯ ಜೀವನ ಶಿಕ್ಷಣ ಶಾಲೆಗಳೂ ೪೩೦ ಮೂಲೋದ್ಯೋಗದ ಶಾಲೆಗಳೂ ಇದ್ದು ಈ ವರ್ಷದಿಂದ ಇನ್ನೂ ಎಷ್ಟೋ ಸಾದಾ ಶಾಲೆಗಳು ಮೂಲೋದ್ಯೋಗ ಶಾಲೆಗಳು, ಜೀವನ ಶಿಕ್ಷಣ ಶಾಲೆಗಳಾಗಲಿವೆ. ಈ ಶಾಲೆಗಳ ಕೆಲಸವು ಯಶಸ್ವಿಯಾಗಿ ಸಾಗಬೇಕಾದರೆ ಅವುಗಳಲ್ಲಿಯ ಮೂಲೋದ್ಯೋಗಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುವದು ಅತ್ಯವಶ್ಯ. ಅದನ್ನು ಸುಸಂಘಟಿತವಾಗಿಯೂ, ವ್ಯವಸ್ಥಿತವಾಗಿಯೂ ಸಾಗುವಂತೆ ಮಾಡುವದು ಅನಿವಾರ್ಯ. ಆದರೆ ಕೆಲವೊಂದು ಅಡಚಣಿಗಳ ಮೂಲಕ ಮೂಲೋದ್ಯೋಗವು ಸಾಗಬೇಕಾದ ರೀತಿಯಲ್ಲಿ ಸಾಗದೆ ಕುಂಠಿತವಾಗಿ ಸಾಗುತ್ತಿರವದನ್ನು ನೋಡುತ್ತೇವೆ. ಶಿಕ್ಷಕರ, ಉಪಕರಣಗಳ, ಇಲ್ಲವೇ ಸ್ಥಳದ ಅಭಾವವಿದ್ದದ್ದು ಕಂಡು ಬರುತ್ತದೆ ಇವೆಲ್ಲವುಗಳಿದ್ದಲ್ಲಿ ಶಿಕ್ಷಕರಲ್ಲಿ ಕೆಲಸ ಮಾಡುವ ಮನಸ್ಸಿನ ಕೊರತೆಯು ಸಹ ಕೆಲವು ಪ್ರಸಂಗಗಳಲ್ಲಿ ಗೋಚರವಾಗುತ್ತದೆ. ಪ್ರಾಮಾಣಿಕತನ, ದಕ್ಷತೆ, ಕೆಲಸದಲ್ಲಿ ಶ್ರದ್ಧೆ, ಆಸ್ಥೆ, ಹುರುಪು, ಹುಮ್ಮಸಗಳಲ್ಲಿದ್ದ ಶಿಕ್ಷಕರು ಎಷ್ಟೋ ಅಡೆತಡೆಗಳನ್ನು ನೀಗಿ ತಮ್ಮ ಕೆಲಸಗಳನ್ನು

ಮುಂದುವರಿಸುವದನ್ನು ಕಾಣಬಹುದು. ಅಂಥವರೇ ನಿಜವಾದ ಶಿಕ್ಷಕರು. ಕೆಲವರು ಪ್ರಾಮಾಣಿಕತನದಿಂದ ದುಡಿಯುವ ಮನಸ್ಸುಳ್ಳವರೂ ಎದುರುಬರುವ ಅಡಚಣೆಗಳನ್ನು ದಾಟಿ ಮುನ್ನಡೆಯುವ ಕುಶಲಮತಿಯುಳ್ಳವರೂ ಇದ್ದರೆ, ಮೂಲೋದ್ಯೋಗದಲ್ಲಿ ಉತ್ತಮ ಸಂಘಟನೆಯಿಂದ ಇಂಥ ಶಿಕ್ಷಕರ ಅಡಚಣೆಗಳು ದೂರಾಗಬಹುದು.

ಮೂಲೋದ್ಯೋಗದ ಶಾಲೆಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಅಡಚಣೆಗಳೆಂದರೆ :

೧) ತರಬೇತು ಪಡೆದ ಶಿಕ್ಷಕರ ಅಭಾವ

೨) ಸಾಕಷ್ಟು ಉಪಕರಣಗಳ ಅಭಾವ

೩) ಸ್ಥಳದ ಅಭಾವ

ಇವುಗಳನ್ನು ಹೇಗೆ ಎದುರಿಸಿ ಕೆಲಸವನ್ನು ಸಂಘಟಿಸಬೇಕೆನ್ನುವ ಬಗ್ಗೆ ಕೆಲವು ಉಪಯುಕ್ತ ಸೂಚನೆಗಳನ್ನು ಕೆಳಗೆ ಕೊಡಲಾಗಿದೆ :

(೧) ತರಬೇತು ಪಡೆದ ಶಿಕ್ಷಕರ ಅಭಾವವಿದ್ದಲ್ಲಿ

ಅ) ಶಾಲೆಯ ಕೆಲಸವನ್ನು ವಿಷಯವಾರ ಹಂಚಿಕೊಳ್ಳಬೇಕು. ಮೂಲೋದ್ಯೋಗದಲ್ಲಿ ತರಬೇತು ಹೊಂದಿದವರು ಮೂಲೋದ್ಯೋಗವನ್ನೇ ಕಲಿಸಲೇಬೇಕು. ಸಾಕಷ್ಟು ಶಿಕ್ಷಕರು ಸಿಕ್ಕನಂತರ ಈ ಸ್ಥಿತಿಯನ್ನು ಬದಲಿಸಬಹುದು. ತರಬೇತುಪಡೆದ ಶಿಕ್ಷಕರು ಶಾಲೆಯ ಹಿತಕ್ಕಾಗಿ ಈ ಸ್ಥಿತಿಯು ಅನಿವಾರ್ಯವೆಂದು ತಿಳಿಯಬೇಕು.

ಆ) ವರ್ಗದ ವಿದ್ಯಾರ್ಥಿಗಳಲ್ಲಿ ಮೂಲೋದ್ಯೋಗದ ನಾಯಕರನ್ನು ತಯಾರಿಸಬೇಕು. ಅಭಿರುಚಿಯುಳ್ಳ ವಿದ್ಯಾರ್ಥಿಗಳನ್ನು ಕಂಡುಹಿಡಿದು ಅವರಿಗೆ ವಿಶೇಷ ತರಬೇತಿ ಕೊಟ್ಟು ಅವರ ಮುಖಾಂತರ ಕಲಿಸುವದನ್ನೂ ಮೇಲ್ವಿಚಾರಣೆಯನ್ನೂ ಮಾಡಿಸಬಹುದು. ಈ ವ್ಯವಸ್ಥೆಯಿಂದ ಎಷ್ಟೋ ವಿದ್ಯಾರ್ಥಿ ನಾಯಕರು ಶಿಕ್ಷಕರಿಗೆ ನೆರವಾಗುವದರಿಂದ ಶಿಕ್ಷಕರ ಕೆಲಸವು ಹಗುರಾಗುವದರಲ್ಲಿ ಸಂದೇಹವಿಲ್ಲ.

ಇ) ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆಇದ್ದಲ್ಲಿ ಎರಡು, ಮೂರು, ವರ್ಗಗಳ ಮೂಲೋದ್ಯೋಗವನ್ನು ಒಂದೇಕಾಲಕ್ಕೆ ಇಟ್ಟುಕೊಳ್ಳುವದು ನೆಟ್ಟಗೆ. (ಈ ವ್ಯವಸ್ಥೆಯಲ್ಲಿ ಎಲ್ಲ ವರ್ಗಗಳ ವಿದ್ಯಾರ್ಥಿಗಳ ಸಂಖ್ಯೆಯು ೩೫, ೪೦ಕ್ಕೆ ಮಿಕ್ಕಬಾರದು.

ಈ) ತರಬೇತು ಪಡೆಯದೆ ಇದ್ದ ಶಿಕ್ಷಕರಿಗೆ ನೂಲುವದನ್ನೂ ನೇಯುವದನ್ನೂ ಕಲಿಸಬಹುದು. ಮನಸ್ಸು ಮಾಡಿದಲ್ಲಿ ಉಳಿದ ಶಿಕ್ಷಕರು ಈ ಉದ್ಯೋಗವನ್ನು ಕೆಲದಿನಗಳಲ್ಲಿಯೇ ಕಲಿತು ತಮ್ಮ ತಮ್ಮ ವರ್ಗಕ್ಕೆ ಕಲಿಸಲು ಸಮರ್ಥರಾಗುತ್ತಾರೆ. ಇಂಥ ಶಿಕ್ಷಕರನ್ನು ನಾವು ಎಷ್ಟೋ ಕಡೆಯಲ್ಲಿ ಕಂಡು ಆನಂದ ಪಡುತ್ತೇವೆ.

ಉ) ಕಲಿಸುವ ಭಾಗವನ್ನು ತರಬೇತು ಪಡೆದವರು ಇಟ್ಟುಕೊಂಡು ರೂಢಿ ಮಾಡಿಸುವದನ್ನು ಬೇರೆ ಶಿಕ್ಷಕರಾಗಲಿ ವಿದ್ಯಾರ್ಥಿ ನಾಯಕರಾಗಲಿ ಗುಂಪು ನಾಯಕರಾಗಲಿ ಸಾಗಿಸಬೇಕು.

ಉಪಕರಣಗಳ ಅಭಾವವಿದ್ದಲ್ಲಿ

ಅ) ವರ್ಗದಲ್ಲಿ ಗುಂಪುಗಳನ್ನು ರಚಿಸಿ ಒಂದೊಂದು ಗುಂಪಿಗೆ ಹತ್ತಿಯ ಸ್ವಚ್ಛತೆ, ಹಿಂಜುವದು, ಹಂಜಿ ಮಾಡುವದು, ನೂಲುವದು, ಸುತ್ತುವದು ಇತ್ಯಾದಿ, ನೂಲುವ ಕ್ರಿಯೆಗಳನ್ನು, ಹುರಿಹಾಕುವದು, ತೋಡುವದು, ಹಾಸುಹಾಕುವದು, ಭರಣಾ ಮಾಡುವದು, ನೇಯುವದು, ಇತ್ಯಾದಿ ನೇಯುವ ಕ್ರಿಯೆಗಳನ್ನು ಕೊಟ್ಟು ಕೆಲಸ ಸಾಗಿಸಬೇಕು. ಎರಡನೇ ದಿನ ಗುಂಪುಗಳಲ್ಲಿ ಈ ಕೆಲಸಗಳನ್ನು ಬದಲಿಸಬೇಕು.

ಆ) ವೇಳಾ ಪತ್ರಿಕೆಯಲ್ಲಿ ಬೇರೆ ಬೇರೆ ಕಾಲಕ್ಕೆ ಮೂಲೋದ್ಯೋಗವನ್ನಿಟ್ಟುಕೊಂಡು ಇದ್ದ ಉಪಕರಣಗಳನ್ನೇ ಎರಡು ಮೂರು ವರ್ಗಗಳ ಸಲುವಾಗಿ ಉಪಯೋಗಿಸಬಹುದು.

ಇ) ಶಾಲೆಯಲ್ಲಿ ಮೂಲೋದ್ಯೋಗದ ಕೋಣೆಯೆಂದು ಒಂದು ಪ್ರತ್ಯೇಕವಾದ ಕೋಣೆಯನ್ನು ಏರ್ಪಡಿಸಿ ಅಲ್ಲಿ ೩೦, ೪೦ ರಾಟೆಗಳನ್ನಿಟ್ಟು ಬೇರೆ ಬೇರೆ ವರ್ಗಗಳನ್ನು ಬೇರೆ ಬೇರೆ ವೇಳೆಗೆ ಕಳಿಸಬೇಕು. ಈ ಕೋಣೆಗೆ ಮುಂಜಾನೆ ಎರಡು ಸಂಜೆಗೆ ಎರಡು ಹೀಗೆ ೪ ವರ್ಗಗಳು ಹೋಗಿ ತಮ್ಮ ಕೆಲಸ ಮಾಡಿ ಬರಬಹುದು. ಈ ಪ್ರಕಾರ ೪೦ ರಾಟೆಗಳಿಂದ ೧೬೦ ವಿದ್ಯಾರ್ಥಿಗಳು ನೂಲುವದನ್ನು ಸಾಗಿಸಬಹುದು.

ಈ) ಒಂದು ವರ್ಗಕ್ಕೆ ತಾತ್ವಿಕ, ಬೇರೊಂದು ವರ್ಗಕ್ಕೆ ಪ್ರಾಯೋಗಿಕ, ಇಟ್ಟುಕೊಂಡಲ್ಲಿ ಇದ್ದ ಉಪಕರಣಗಳ ಉಪಯೋಗವು ಎರಡೂ ವರ್ಗಗಳಿಗೂ ಆಗುವದು.

ಉ) ಒಂದು ವರ್ಗಕ್ಕೆ ಮೂಲೋದ್ಯೋಗ ಇದ್ದಾಗ ಬೇರೊಂದು ವರ್ಗಕ್ಕೆ ಇತರ ಚಟುವಟಿಕೆಗಳನ್ನಿಟ್ಟುಕೊಳ್ಳಬೇಕು. ಪ್ರವಾಸ ನಿರೀಕ್ಷಣೆ, ಸಫಾಯಿ, ಬರಹ, ಆಟ, ಕೈಕೆಲಸ ಇತ್ಯಾದಿಗಳು ಈ ಕಾರ್ಯಕ್ಕೆ ನೆರವಾಗುವವು.

ಊ) ಮಗ್ಗಗಳ ಅಭಾವವಿದ್ದಲ್ಲಿ ನಿರಂತರ ನೇಯ್ಗೆಯ ಕೆಲಸ ಸಾಗಿಸಬೇಕು. ೩, ೪ ವಿದ್ಯಾರ್ಥಿಗಳ ಗುಂಪುಗಳನ್ನು ಮಾಡಿ ಯಾವಾಗಲೂ ಒಂದು ಗುಂಪು ಮಗ್ಗದ ಮೇಲೆ ಕೆಲಸ ಮಾಡುವಂತೆ ವ್ಯವಸ್ಥೆ ಇಟ್ಟುಕೊಳ್ಳಬೇಕು. ಒಂದು ಗುಂಪು ಒಂದು ಅಥವಾ ಒಂದೂವರೆ ತಾಸಿನ ವರೆಗೆ ಕೆಲಸ ಮಾಡಿದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯು ಪ್ರತಿದಿವಸ ಕೆಲಸ ಮಾಡದಿರಲಾರನು. ದಿನದ ಬಿಡುವಿನ ವೇಳೆ, ರವಿವಾರ, ಇತರ ಸೂಟಿಗಳನ್ನು ಈ ಪ್ರಕಾರ ಉಪಯೋಗಿಸಿಕೊಳ್ಳಬೇಕು. ಈ ಗುಂಪುಗಳಿಗೆ ಒಬ್ಬೊಬ್ಬ ಜಾಣ ವಿದ್ಯಾರ್ಥಿಯನ್ನು ನಾಯಕನನ್ನಾಗಿ ನೇಮಿಸುವದು ಉತ್ತಮ ಈ ಕೆಲಸದಲ್ಲಿ ಶಿಕ್ಷಕರ ಮೇಲ್ವಿಚಾರಣೆ ಅತ್ಯವಶ್ಯವೆಂಬುದನ್ನು ಮರೆಯಬಾರದು.

ಸ್ಥಳಾಭಾವವಿದ್ದಲ್ಲಿ

(ಅ) ವೇಳಾಪತ್ರಿಕೆಯಲ್ಲಿ ಬೇರೆ ಬೇರೆ ವರ್ಗಗಳಿಗೆ ಬೇರೆ ಬೇರೆ ವೇಳೆ ಕೊಡಬೇಕು. ಮೂಲೋದ್ಯೋಗವಿದ್ದ ವರ್ಗಕ್ಕೆ ಇದರಿಂದ ಹೆಚ್ಚು ಸ್ಥಳ ಕೊಡಲು ಅನುಕೂಲವಾಗುವದು.

ಆ) ಮೂಲೋದ್ಯೋಗವಿಲ್ಲದ ವರ್ಗಗಳು ಸಮೀಪವಿದ್ದ ಗುಡಿ, ಶಾಲೆಯ ಪಟಾಂಗಣ, ಗಿಡದ ನೆರಳು, ದೊಡ್ಡ ಕಟ್ಟೆ ಇತ್ಯಾದಿಗಳ ಲಾಭಪಡೆದು ಮೂಲೋದ್ಯೋಗವಿದ್ದ ವರ್ಗಕ್ಕೆ ಕೋಣೆ ಬಿಟ್ಟುಕೊಡಬೇಕು.

ಇ) ಮೇಲೆ ಹೇಳಿದಂತೆ ಒಂದು ಮೂಲೋದ್ಯೋಗದ ಕೋಣೆ ಎಂದು ವ್ಯವಸ್ಥೆ ಇಟ್ಟು ಬೇರೆ ಬೇರೆ ವರ್ಗಗಳು ಅಲ್ಲಿಗೆ ಹೋಗಬಹುದು.

ಈ) ಒಂದೇ ಕಾಲಕ್ಕೆ ಕೆಲವರು ತಕಲಿಯಿಂದ, ಕೆಲವರು ರಾಟೆಯಿಂದ ನೂತರೆ ರಾಟೆಯವರಿಗೆ ಅನುಕೂಲವಾಗುವದು. ಎರಡನೆಯ ದಿನ ಗುಂಪುಗಳಲ್ಲಿ ಉಪಕರಣಗಳನ್ನು ಬದಲಿಸಬೇಕು. (ಇದರಿಂದ ರಾಟೆಗಳ ಅಭಾವವನ್ನು ಎದುರಿಸಿದಂತಾಗುವದು.

ವಿಶೇಷವಾಗಿ ಬರಬಹುದಾದ ಅಡಚಣೆಗಳ ನಿವಾರಣೆಗಾಗಿ ಇಲ್ಲಿ ಕೆಲವು ಉಪಯುಕ್ತ ಸೂಚನೆಗಳನ್ನು ನಿವೇದಿಸಲಾಗಿದೆ ಉತ್ತಮ ಸಂಘಟನೆಯನ್ನು ಮಾಡಿಕೊಂಡು ಇವುಗಳ ಪ್ರಯೋಗಗಳನ್ನು ಮಾಡಬೇಕು. ಸಂಶೋಧನ ಬುದ್ಧಿಯುಳ್ಳ ಶಿಕ್ಷಕರು ಇತರ ಪ್ರಯೋಗಗಳನ್ನು ಮಾಡಿದಲ್ಲಿ ಅವನ್ನು ತಮ್ಮ ಸಹೋದ್ಯೋಗಿಗಳ ನಿದರ್ಶನಕ್ಕೆ ತರುವದು ಉತ್ತಮ. ಸದ್ಯಕ್ಕೆ ಇದ್ದ, ಮುಂದೆ ಬರಬಹುದಾದ ಅಡೆತಡೆಗಳನ್ನು ಶಿಕ್ಷಕರ ಶಕ್ತಿ ಸಾಮರ್ಥ್ಯಗಳಿಗೆ ಒಂದು ಆಹ್ವಾನವೆಂದೂ ತಮ್ಮ ಬುದ್ಧಿಮತ್ತೆಯ ಪರೀಕ್ಷೆಯ ಕಾಲವೆಂದೂ ತಿಳಿದು ಹೊಸ ಹೊಸ ನಿವಾರಣೋಪಾಯವನ್ನು ಶೋಧಿಸಬೇಕು. ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿ ಅಡೆತಡೆಗಳು ಬರುವದು ಸ್ವಾಭಾವಿಕ ಅಚಲವಾದ ಶ್ರದ್ಧೆಯಿಂದ ಅವನ್ನು ನೀಗಿ ಮುಂದೆ ಸಾಗುವದೇ ಮನುಷ್ಯಧರ್ಮ; ಅದೇ ಪ್ರಗತಿಯ ಚಿಹ್ನ; ಅಡೆತಡೆಗಳನ್ನು ಮುಂದೆ ಮಾಡಿ ಕೆಲಸ ಮಾಡದೆ ಕೊಡ್ರುವದು ಯಾರಿಗೂ ಶೋಭಿಸದು.

ಪುರೋಗಾಮಿ ಶಿಕ್ಷಕರು ಯಾವಾಗಲೂ ಹೊಸ ಹಾದಿಗಳನ್ನು ಹುಡುಕಿಕೊಂಡು ಮುಂದೆ ಸಾಗುತ್ತಾರೆ.

೧೯೫೬ನೆಯ ಇಸವಿಯಿಂದ ಪ್ರಾರಂಭವಾಗುವ
ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ
ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

ಶೇಲಾರ ಕೃತ

ಪ್ರಾಥಮಿಕ ಭೂಮಿತಿ

[ಕ್ಷೇತ್ರಫಲ ಘನಫಲ ಸಹಿತ]
೪ ರಿಂದ ೭ನೆಯ ವರ್ಗದ ವರೆಗಿನ
ವಿಷಯವನ್ನೆಲ್ಲ ಒಳಗೊಂಡಿದೆ.

ಬೆಲೆ: ೧ರೂ. ೮ಆಣೆ ಮಾತ್ರ

ದೊರೆಯುವ ಸ್ಥಳ:-
ಸಾಯಿ ಪಬ್ಲಿಶಿಂಗ್ ಹಾವುಸ್,
ವಿಜಯ ರೋಡ, ಧಾರವಾಡ.

೧೯೫೬ನೆಯ ಎಪ್ರಿಲ ತಿಂಗಳಲ್ಲಿ ಜರಗುವ ಜೀವನ ಶಿಕ್ಷಣ ಮತ್ತು ಇತರ ಶಾಲೆಗಳ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯ ತಿದ್ದುಪಡೆಯಾದ ಕಾರ್ಯಕ್ರಮ

ವಾರ ಮತ್ತು ದಿನಾಂಕ	ವೇಳೆ ಇಂದ	ವರೆಗೆ	ವಿಷಯ	ಗುಣಗಳು
ಸೋಮವಾರ	೧೦-೩೦	೧೧-೧೫	ಪರೀಕ್ಷೆಯ ಉಮೇದವಾರರ ಹಾಜರಿ.	
೯-೪-೧೯೫೬	೧೧-೩೦	೨-೦೦	೧ನೆಯ ಸದರ- ಪ್ರಾದೇಶಿಕ ಭಾಷೆ ಮತ್ತು ಸಾಹಿತ್ಯ. ೨ನೆಯ ಕಾಗದ- ನಿಬಂಧ ಮತ್ತು ಕೈಬರೆಹ.	೧೦೦
	೩-೦೦	೬-೦೦	೪ನೆಯ ಸದರ- ವಿಜ್ಞಾನ (ಸಾಯನ್ಸ)	
			i) ಶರೀರ ಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ, ಸಸ್ಯ ಮತ್ತು ಪ್ರಾಣಿಗಳ ಅಭ್ಯಾಸ ಮತ್ತು ಸಾಮಾನ್ಯ ಪ್ರಾಥಮಿಕ ವಿಜ್ಞಾನ (ಸಾಮಾನ್ಯ ಪ್ರಾಥಮಿಕ ಸಾಲೆಗಳ ವಿದ್ಯಾರ್ಥಿಗಳಿಗಾಗಿ)	೧೦೦
			ii) ಶರೀರ ಶಾಸ್ತ್ರ, ಆರೋಗ್ಯ ಶಾಸ್ತ್ರ ಮತ್ತು ಗೃಹ ವಿಜ್ಞಾನ (ಹೆಣ್ಣುಮಕ್ಕಳ ಸಾಲೆಗಳ ಹೆಣ್ಣುಮಕ್ಕಳಿಗಾಗಿ)	೧೦೦
			iii) ಶರೀರ ಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ, ಸಸ್ಯ ಹಾಗೂ ಪ್ರಾಣಿಗಳ ಅಭ್ಯಾಸ ಮತ್ತು ಮೂಲೋದ್ಯೋಗಕ್ಕೆ ಸಂಬಂಧಿಸಿದ ಸಾಮಾನ್ಯ ವಿಜ್ಞಾನ (ನೂಲುವ ಹಾಗೂ ನೇಯಿಗೆಯ ಸಾಲೆಗಳ ವಿದ್ಯಾರ್ಥಿಗಳಿಗಾಗಿ)	೧೦೦
			iv) ಶರೀರ ಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ ಸಸ್ಯ ಮತ್ತು ಪ್ರಾಣಿಗಳ ಅಭ್ಯಾಸ ಮತ್ತು ಕಟ್ಟಿಗೆಯ ಕೆಲಸಕ್ಕೆ ಸಂಬಂಧಿಸಿದ ಸಾಮಾನ್ಯ ವಿಜ್ಞಾನ. (ಕಟ್ಟಿಗೆಯ ಕೆಲಸದ ಸಾಲೆಗಳ ವಿದ್ಯಾರ್ಥಿಗಳಿಗಾಗಿ)	೧೦೦
	೩-೦೦	೬-೦೦	ಶರೀರ ಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ ಹಾಗೂ ಕೃಷಿ ವಿಜ್ಞಾನ (ಒಕ್ಕಲತನ ಶಾಲೆಗಳ ವಿದ್ಯಾರ್ಥಿಗಳಿಗಾಗಿ)	೧೦೦

ವಾರ ಮತ್ತು ದಿನಾಂಕ	ವೇಳೆ ಇಂದ	ವರೆಗೆ	ವಿಷಯ	ಗುಣಗಳು
ಮಂಗಳವಾರ ೧೦-೪-೧೯೫೬	೧೧-೦೦	೨-೦೦	೨ನೆಯ ಸದರ:- ಗಣಿತ (೧ನೆಯ ಕಾಗದ ಅಂಕಗಣಿತ)	೧೦೦
	೩-೦೦	೬-೦೦	೩ನೆಯ ಸದರ:- ಇತಿಹಾಸ (ಪೌರನೀತಿ ಸಹಿತ) ಮತ್ತು ಭೂಗೋಲ.	೧೦೦
ಬುಧವಾರ ೧೧-೪-೧೯೫೬	೧೧-೦೦	೨-೦೦	೧ನೆಯ ಸದರ:- ಪ್ರಾದೇಶಿಕ ಭಾಷೆ ಮತ್ತು ಸಾಹಿತ್ಯ (೧ನೆಯ ಕಾಗದ:- ಗದ್ಯ, ಪದ್ಯ ಮತ್ತು ವ್ಯಾಕರಣ.)	೧೦೦
	೩-೦೦	೬-೦೦	೨ನೆಯ ಸದರ:- ಗಣಿತ (೨ನೆಯ ಕಾಗದ - ಭೂಮಿತಿ ಮತ್ತು ಜಮಾಖರ್ಚು)	೧೦೦
ಶುಕ್ರವಾರ ೧೩-೪-೧೯೫೬	೧೧-೦೦	೨-೦೦	೬ನೆಯ ಸದರ:- (ಐಚ್ಛಿಕ) ಹಿಂದೀ ಭಾಷೆಯ ಕಾಗದ.	೧೦೦
	೩-೦೦	೬-೦೦	೫ನೆಯ ಸದರ:- i) ಸೂಜಿಗೆಲಸ * ii) ಚಿತ್ರಕಲೆ (ಡ್ರಾಯಿಂಗ) * iii) ಪ್ರಾಯೋಗಿಕ ಒಕ್ಕಲತನ * iv) ನೂಲುವದು ಹಾಗೂ ನೇಯುವದು * v) ಕಟ್ಟಿಗೆಯ ಕೆಲಸ * vi) ಹೊಲಿಗೆ ೭ನೆಯ ಸದರ:- (ಜೀವನ ಶಿಕ್ಷಣ ಸಾಲೆಗಳ ವಿದ್ಯಾರ್ಥಿಗಳಿಗಾಗಿ ಕಡ್ಡಾಯದ ಹೆಚ್ಚಿನ ವಿಷಯ.) *ಆರೋಗ್ಯ ಮತ್ತು ಸಾಂಘಿಕ ಜೀವನದಲ್ಲಿ ತರಬೇತಿ.	೧೦೦ ೧೦೦
ಶನಿವಾರ ೧೪-೪-೧೯೫೬	೧೧-೦೦	೨-೦೦	೬ನೆಯ ಸದರ:- (ಐಚ್ಛಿಕ ವಿಷಯಗಳು) i) ಸಂಗೀತ ii) ಕಾಗದ ಮತ್ತು ರಟ್ಟಿನ ಕೆಲಸ iii) ಚಿತ್ರದ ಕೆಲಸ iv) ಚರ್ಮದ ಕೆಲಸ	೧೦೦
	೩-೦೦	೫-೦೦	೧ನೆಯ ಸದರ:- ೩ನೆಯ ಕಾಗದ ಪ್ರಾದೇಶಿಕ ಭಾಷೆ ಮತ್ತು ಸಾಹಿತ್ಯ ಸ್ಥಾನಿಕ ಪ್ರಾದೇಶಿಕ ಭಾಷೆ (ಐಚ್ಛಿಕ)	೫೦

*ಜೀವನ ಶಿಕ್ಷಣ ಸಾಲೆಗಳಿಂದ ಪರೀಕ್ಷೆಗೆ ಕೂಡ್ರುವ ಉಮೇದವಾರರ ಮೂಲೋದ್ಯೋಗಗಳ ಮತ್ತು ಆರೋಗ್ಯ ಹಾಗೂ ಸಾಂಘಿಕ ಜೀವನದ ತರಬೇತಿ ಪ್ರಾಯೋಗಿಕ ಪರೀಕ್ಷೆಯನ್ನು ಬರೆಹ ಪರೀಕ್ಷೆಯು ಮೊದಲು ಅನುಕೂಲವಾದ ದಿನಾಂಕಗಳಂದು ಏರ್ಪಡಿಸಲಾಗುವದು.

ಸೂಚನೆ:— ಪರೀಕ್ಷೆಯ ಮೊದಲನೆಯ ದಿನ ಪರೀಕ್ಷೆ ಪ್ರಾರಂಭವಾಗುವದಕ್ಕಿಂತ ಒಂದು ತಾಸು ಮುಂಚಿತವಾಗಿ ಉಮೇದವಾರರು ಪರೀಕ್ಷಾ ಮಂದಿರಗಳಲ್ಲಿ ಹಾಜರ ಇರತಕ್ಕದ್ದು.

ಜಿಲ್ಲಾ ಶಿಕ್ಷಣಾಧಿಕಾರಿಗಳ ಕಚೇರಿ, ಧಾರವಾಡ.
೩೧—೧—೧೯೫೬

ಕೆ. ಬಿ. ತೇರಗಾಂವಕರ
ಜಿಲ್ಲಾ ಶಿಕ್ಷಣಾಧಿಕಾರಿ, ಧಾರವಾಡ.

ಪ್ರಾಥಮಿಕ ಶಿಕ್ಷಕರ ಪ್ರಮಾಣ ಪತ್ರ ಪರೀಕ್ಷೆ ೧೯೫೬

— ವೇಳಾಪತ್ರಿಕೆ —

ವಾರ ಮತ್ತು ದಿನಾಂಕ	ವೇಳೆ ಇಂದ	ವರೆಗೆ	ವಿಷಯ
ಮಂಗಳವಾರ ೨೪-೪-೧೯೫೬	೮-೦೦	೧೦-೦೦	ಶಿಕ್ಷಣ ೧ನೆಯ ಕಾಗದ
,,	೩-೦೦	೫-೦೦	ಸಾಯಿನ್ಸ
ಬುಧವಾರ ೨೫-೪-೧೯೫೬	೮-೦೦	೧೦-೦೦	ಗಣಿತ ೧ನೆಯ ಕಾಗದ
,,	೩-೦೦	೫-೦೦	ಭಾಷಾವಿಷಯ ೧ನೆಯ ಕಾಗದ
ಗುರುವಾರ ೨೬-೪-೧೯೫೬	೮-೦೦	೧೧-೦೦	ಮೂಲೋದ್ಯೋಗ ತಾತ್ವಿಕ
,,	೩-೦೦	೫-೦೦	ಭಾಷಾವಿಷಯ— ೨ನೆಯ ಕಾಗದ
ಶುಕ್ರವಾರ ೨೭-೪-೧೯೫೬	೮-೦೦	೧೦-೦೦	ಗಣಿತ- ೨ನೆಯ ಕಾಗದ
,,	೩-೦೦	೫-೦೦	ಶಿಕ್ಷಣ ೨ನೆಯ ಕಾಗದ
ಶನಿವಾರ ೨೮-೪-೧೯೫೬	೮-೦೦	೧೧-೦೦	ಇತಿಹಾಸ ಮತ್ತು ಭೂಗೋಲ
,,	೩-೦೦	೫-೦೦	ಹಿಂದಿ
ಸೋಮವಾರ ೩೦-೪-೧೯೫೬	೮-೦೦	೧೦-೦೦	ಪ್ರಾದೇಶಿಕ ಭಾಷೆ (ಉರ್ದು ಉಮೇದವಾರರಿಗಾಗಿ ಮಾತ್ರ)

(೪ ನೆಯ ಪುಟದಿಂದ ಬಂದದ್ದು)

ಗಳು ಸಹ ಉತ್ಪಾದಿಸಲ್ಪಡುತ್ತವೆ. ಸಾಲೆಯ ಮಕ್ಕಳಿಗೆ ಕೂಪ್ರಲು ಆಸನಗಳು ಹೆಚ್ಚು ಪ್ರಮಾಣದಿಂದ ಜೀವನ ಶಿಕ್ಷಣ ಸಾಲೆಗಳಲ್ಲಿ ತಯಾರಿಸಲ್ಪಡುತ್ತವೆ; ಮತ್ತು ಸ್ಕೂಲ ಬೋರ್ಡಗಳಿಂದ ಕೊಳ್ಳಲ್ಪಡುತ್ತವೆ. ಜೀವನ ಶಿಕ್ಷಣ ಸಾಲೆಗಳಲ್ಲಿಯ ಉತ್ಪಾದನೆಗೆ ಮತ್ತು ತರಗತಿಗೆ ಇದು ಹೆಚ್ಚು ಪ್ರೋತ್ಸಾಹನೆಯನ್ನೀಯುತ್ತದೆ.

೩. ಸ್ಥಳೀಯ ಎಲ್ಲ ಅಧಿಕಾರಿಗಳಿಗೆ ತಮ್ಮ ಬೇಡಿಕೆಯು ೧೦೦ಕ್ಕೆ ೨೦ರಷ್ಟು ವಸ್ತುಗಳನ್ನು ಜೀವನ ಶಿಕ್ಷಣ ಸಾಲೆಗಳಿಂದ ಕೊಳ್ಳಬೇಕೆಂಬ ಸಲಹೆಯನ್ನಿತ್ತು ಸರಕಾರವು ಒಂದು ಹೆಜ್ಜೆ ಮುಂದೆ ಇಟ್ಟಿದೆ. ಸರಕಾರದ ಪರಿಪತ್ರ ಅಭಿವೃದ್ಧಿ ಶಾಖೆಯ ೧೬ನೆಯ ನವ್ಹಂಬರ ೧೯೫೫ರ ನಂ. ಎಸ್. ಪಿ. ಓ. ೨೦೫೫ರಲ್ಲಿ ಈ ಆಜ್ಞೆಗಳನ್ನು ಕೊಡಲಾಗಿದೆ. ಈ ಪರಿಪತ್ರವು ಜೀವನ ಶಿಕ್ಷಣ ಸಾಲೆಗಳಿಂದ ೧೦ ಪ್ರಕಾರದ ವಸ್ತುಗಳನ್ನು ಕೊಳ್ಳಬಹುದೆಂದು ಹೇಳುತ್ತದೆ. ಇವುಗಳಲ್ಲಿ ಮೊದಲಿನ ನಾಲ್ಕು ಕಟ್ಟಿಗೆಯವು, ಮುಂದಿನ ಮೂರು ರಟ್ಟಿನವು, ಕೊನೆಯ ಮೂರು ಅರಿವೆಯವು. ಇವುಗಳಲ್ಲಿ ಬ್ಲಾಟರ್ಸ್, ತಟ್ಟಿಗಳು, ಕಟ್ಟಿಗೆಯ "ಗಜ"ಗಳು, ಫಾಯಿಲ್ ಕವ್ಹರುಗಳು, ಪೋರ್ಟಫೋಲಿಯೋಗಳು, ಒರಸುದಿಂಬುಗಳು, ಡಂಗ್ರಿಗಳು ಮತ್ತು ಖಾದಿ ಇವು ಸಮಾವೇಶವಾಗುತ್ತವೆ. ಸರಕಾರವು ಈ ಪರಿಪತ್ರದ ಜೊತೆಗೆ ಇದ್ದಂಥದರಲ್ಲಿ ಈ ವಸ್ತುಗಳ ಅಳತೆ, ತರಗತಿ ಮತ್ತು ಬೆಲೆಗಳನ್ನು ನಮೂದಿಸಿದೆ.

೪ ಸರಕಾರದಿಂದ ತೆಗೆದುಕೊಂಡ ಈ ಹೆಜ್ಜೆಯು ಜೀವನ ಶಿಕ್ಷಣ ಸಾಲೆಗಳ ಉತ್ಪಾದನೆಯನ್ನು ಹೆಚ್ಚು ಪ್ರಗತಿಗೊಳಿಸಿ ಮುಂದೆ ಒಯ್ಯುವವೆಂದು ಆಶಿಸಲಾಗಿದೆ. ತರಗತಿಯು ನಿಶ್ಚಿತವಾಗಿ ಸುಧಾರಿಸುವದು; ಮತ್ತು ವಿತರಣವು ತ್ವರಿತವಾಗುವದು. ಜೀವನ ಶಿಕ್ಷಣ ಸಾಲೆಗಳಿಗೆ ಮೂಲೋದ್ಯೋಗದಲ್ಲಿ ಅನುಸರಿಸಲು ನಿಶ್ಚಿತವಾದ ಉದ್ದೇಶಗಳಿವೆ; ಮತ್ತು ಸಾಧ್ಯವಿದ್ದಷ್ಟು ಉತ್ತಮವಾದ ವಸ್ತುಗಳು ಉತ್ಪಾದಿಸಲ್ಪಡುತ್ತವೆ. ಸರಕಾರದಿಂದ ಕೊಡಲ್ಪಟ್ಟ ಪ್ರೋತ್ಸಾಹನದ ಲಾಭವನ್ನು ಜೀವನ ಶಿಕ್ಷಣ ಸಾಲೆಗಳು ಪಡೆದು ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಪ್ರಯೋಜನವನ್ನು ಸ್ಥಿರಪಡಿಸುವವೆಂದು ಸಂಪೂರ್ಣ ಆಶಿಸಲಾಗಿದೆ.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಪ್ರೋ. ಎಸ್. ಕೆ. ಜೋಶಿ, ಮತ್ತು

ಪ್ರೋ. ಜಿ. ಡಿ. ಮಾಳಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. **ಬೆಲೆ ೧-೧೨-೦** ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ. ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟೆ, ಪುಣೆ.

ಪ್ರಾಥಮಿಕ ಶಿಕ್ಷಣ ಪ್ರಪಂಚ

ಶಾಲಾ ಕಟ್ಟಡಗಳು

ಪಾಳಾ— ಇಲ್ಲಿಯ ಶಾಲಾ ಹೊಸ ಕಟ್ಟಡದ ಉದ್ಘಾಟನೆಯು ೬-೧೨-೫೫ರಂದು ಮಾನ್ಯ ಕೆ. ಎಫ್. ಪಾಟೀಲರವರ ಹಸ್ತದಿಂದ ನಡೆಯಿತು.

ನಿಡಗುಂದಿ— ಇಲ್ಲಿಯ ಸಾಲೆಯ ಹೊಸ ಕಟ್ಟಡದ ಉದ್ಘಾಟನೆಯು ದಿನಾಂಕ ೭-೧೧-೫೫ರಂದು ಶ್ರೀ ಅಂದಾನೆಪ್ಪ ದೊಡ್ಡಮೇಟಿ ಅವರ ಅಧ್ಯಕ್ಷತೆಯಲ್ಲಿ ಧಾರವಾಡ ಜಿಲ್ಹೆಯ ಕಲೆಕ್ಟರ ಶ್ರೀ ಡಿ. ಡಿ. ಸಾಠೆಯವರಿಂದ ಸಾಂಗವಾಯಿತು.

x x x

ಬಾಗಲಕೋಟೆ— ಇಲ್ಲಿಯ ಸಂಸ್ಕಾರ ಕೇಂದ್ರಕ್ಕೆ ಶಿಕ್ಷಣ ಖಾತೆಯ ಡೈರೆಕ್ಟರರಾದ ಶ್ರೀ ಭಾಂಡಾರಕರ ಅವರು ಭೆಟ್ಟಿಕೊಟ್ಟು ಸಂತೋಷ ವ್ಯಕ್ತಪಡಿಸಿದರು.

ಜೀವನ ಶಿಕ್ಷಣ

|| ಪಲ್ಲ ||

ಶಿಕ್ಷಣ ಕಾರ್ಯವ ದಕ್ಷತೆಯಿಂದಲಿ ಮಾಡೇಳಿರಿ ನೀವು |
ಶಿಕ್ಷಕರೆಲ್ಲರು ದಕ್ಷತೆಯಿಂದಲಿ ಮಾಡೇಳಿರಿ ನೀವು

|| ೧ ||

ಹಳೆಯ ಶಿಕ್ಷಣ ಮುಸುಕಿನ
ಪರವೆಯಲುಸಿರನ್ನೆಳೆಯದಿರಿ |
ಹೊಸ ಜೀವನ ಶಿಕ್ಷಣ ಜೀವನದಲ್ಲಿ
ಜೀರ್ಣಿಸಿ ಹೆಜ್ಜೆಯಿಡಿ ||

|| ೨ ||

ಬಾಳಿನ ಬಳಲಿಕೆಗಂದಿನ ಶಿಕ್ಷಣ |
ಬಾಳಿನ ಬೆಳಕೆಗೆ ಇಂದಿನ ಶಿಕ್ಷಣ ||

|| ೩ ||

ಅಂದಿನ ಶಿಕ್ಷಣ ಬರಿ ಬಾಯಪಾಠ |
ಇಂದಿನ ಶಿಕ್ಷಣ ಕೃತಿಯಲಿ ಪಾಠ ||

|| ೪ ||

ಆಗಿನ ಶಿಕ್ಷಣ ಪರಾವಲಂಬನ |
ಈಗಿನ ಶಿಕ್ಷಣ ಸ್ವಾವಲಂಬನ ||

|| ೫ ||

ಹಿಂದಿನ ಶಿಕ್ಷಣ ಜೀವನ ಕೊರತೆಗೆ |
ಇಂದಿನ ಶಿಕ್ಷಣ ಜೀವನ ಭರತೆಗೆ ||

|| ೬ ||

ಅಂದಿನ ಶಿಕ್ಷಣ ಅರಕುಳಿ ಜೀವನ |
ಇಂದಿನ ಶಿಕ್ಷಣ ಪೂರ್ಣಜ್ಜೀವನ ||

|| ೭ ||

ಆಗಿನ ಶಿಕ್ಷಣ ಆತ್ಮಕೆ ಚಿಂತನ |
ಈಗಿನ ಶಿಕ್ಷಣ ಆತ್ಮಕೆ ಶಾಂತನ ||

|| ೮ ||

ಅಂದಿನ ಶಿಕ್ಷಣ ಅರ್ಧೇಂದು |
ಇಂದಿನ ಶಿಕ್ಷಣ ಪೂರ್ಣೇಂದು ||

|| ೯ ||

ಅಂದಿನ ಶಿಕ್ಷಣ ಸಂಪಿಗೆ ಹೂವು |
ಇಂದಿನ ಶಿಕ್ಷಣ ಮಲ್ಲಿಗೆ ಹೂವು ||

|| ೧೦ ||

ಬಾಳಿಗೆ ಬಣ್ಣವ ತುಂಬಲ್ಕೋಸುಗ |
ಬಾಪು ಮಾಡಿದ ಜೀವನ ಶಿಕ್ಷಣ ||

|| ೧೧ ||

ಭರದಲಿ ಬೆಳೆಸಲು ಏಳಿರಿ ಇಂದು |
ಭಾರತ ಕೊಳೆಯನು ತೊಳೆಯಿರಿ
ನಿಂದು ||

|| ೧೨ ||

ಹಳೆ ರಕ್ತದ ಉಸಿರನ್ನೊತ್ತಿರಿ ಹಿಂದೆ |
ಹೊಸ ರಕ್ತದ ಉಸಿರನ್ನೊತ್ತಿರಿ
ಮುಂದೆ ||

|| ೧೩ ||

ಆಲಸ್ಯದ ತಲೆ ಕಡಿದಿಡಿರಿಂದು |
ವೀರತ್ವದ ಮುಡಿ ಮುಡಿಯಿರಿ
ಯಿಂದು ||

|| ೧೪ ||

ಮಾತಿನ ಸುರಿಮಳೆ ನಿಲ್ಲಿಸಿರಿಂದು |
ಕೃತಿಯನು ಕೈಕೊಂಡೇಳಿರಿ
ಮುಂದು ||

|| ೧೫ ||

ದುಡಿಯುವ ಶಿಕ್ಷಕ-ಶಿಕ್ಷಕಿಯರಿಗೆ |
ಸದಾಕಾಲದಲಿ ವಂದನೆ ನಂದು ||

ಶ್ರೀ ಶಿ. ಈ. ಕಸ್ನೂರ
ಕನ್ನಡ ಗಂ. ಶಾಲೆ, ಗೊಳಸಂಗಿ

Regd. No. B. 5375

ಸಹಜ ಸಾಹಿತ್ಯ ! ★ **ಜ್ಞಾನರಸ ಸಾಹಿತ್ಯ** ★ ಶಾಶ್ವತ ಸಾಹಿತ್ಯ

ಮಾಸಿದ ತಲೆಯನ್ನು ಮಡಿಮಾಡುವ ಪವಿತ್ರ ಸಾಹಿತ್ಯ !!

ಪ್ರತಿಯೊಂದು ವಾಚನಾಲಯದ ಬೆಲೆಯನ್ನು ಹೆಚ್ಚಿಸುವ ಪ್ರಭಾವೀ ಗ್ರಂಥಗಳು.

೧.	ಪವಿತ್ರ ಜೀವನ (ಟಾಲಸ್ಟಾಯರ ಜಗದ್ವಿಖ್ಯಾತ ಕಥಾಸಂಗ್ರಹ)	೧-೨-೦
೨.	ಸುಂದರ ಕಥೆಗಳು (ಪಾಂಡಿಚೇರಿ ಆಶ್ರಮದ ಶ್ರೀ ತಾಯಿಯವರು ಹೇಳಿದವು)	೧-೪-೦
೩.	ಸಪ್ತಪದಿ (ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಏಕಾಂಕಗಳು)	೧-೪-೦
೪.	ದೀಪವರ್ತಿ (ಶ್ರೀ ಅರವಿಂದರ ೨ ಉಜ್ವಲ ಕಥೆಗಳು)	೦-೬-೦
೫.	ಶ್ರೀ ಅರವಿಂದರು (ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ)	೧-೮-೦
೬.	ಮುಗಿಲ ಜೇನು (ಉತ್ಸಾಹದಾಯಕವಾದ ಕವನ ಸಂಕಲನ)	೧-೮-೦
೭.	ಪೂಜಾ (ನಿತ್ಯ ಪಠನೀಯವಾದ ಗದ್ಯಗೀತೆಗಳು)	೦-೧೨-೦
೮.	ಭಾರತದ ಭವ್ಯಸಿದ್ಧತೆ (ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ)	೧-೦-೦
೯.	ಬೆಟ್ಟದ ಹೊಳೆ (ಪ್ರಗತಿಗಾಮಿಯಾದ ಕಾದಂಬರಿ)	೧-೪-[illegible]
೧೦.	ಸ್ವರ್ಗದೋಲೆಗಳು (ಕರ್ನಾಟಕ ಸಂಸ್ಕೃತಿಯ ಕನ್ನಡಿ)	೧-೮-[illegible]
೧೧.	ಕನ್ನಡ ಕುಲದೀಪ ಬಸವಣ್ಣ (ಉದಿತ ಜೀವನಕ್ಕೆ ಕೈಗೋಲು)	೧-೪-[illegible]
೧೨.	ಗರತಿಯ ಬಾಳು (ನಿತ್ಯ ಜೀವನದ ರಸಘಟ್ಟಿ)	೧-೪-[illegible]
೧೩.	ಆರ್ಯದೇಶಭಕ್ತಿ (ಧ್ಯೇಯ ಜೀವಿಗೆ ಊರುಗಂಬಳ)	೦-೩-[illegible]
೧೪.	ಜೀವನ ದೃಷ್ಟಿ (ವಿವಿಧ ಪ್ರಬಂಧಗಳು)	೧-೨-[illegible]
೧೫.	ದತ್ತ ಸಾಹಿತ್ಯ (ಶ್ರೀ ಬೇಂದ್ರೆ ಸಾಹಿತ್ಯ ಪರಿಚಯ)	೧-೮-[illegible]

ಇವಲ್ಲದೆ ಶ್ರೀ ಅರವಿಂದ ಮಹಾಯೋಗಿಗಳ ವಿವಿಧ ಸಾಹಿತ್ಯ ಗ್ರಂಥಗಳೂ ನಮ್ಮಲ್ಲಿ ಯೋಗ್ಯ ಬೆಲೆಗೆ ಸಿಗುತ್ತವೆ ಹತ್ತು ರೂ.ಗಿಂತ ಹೆಚ್ಚಿನ ಬೆಲೆಯ ಪುಸ್ತಕ ಕೊಂಡುಕೊಳ್ಳುವವರ ಅಂಚೆ ವೆಚ್ಚವನ್ನು ನಾವೇ ನೋಡಿಕೊಳ್ಳುವೆವು.

ಶ್ರೀ ಅರವಿಂದ ಗ್ರಂಥಾಲಯ ಪ್ರೋ:— **ಚಡಚಣ** ಜಿ. ವಿಜಾಪು

— ಬಾಲ ವಾಚನಾಲಯಗಳ ಬೆಲೆ ಹೆಚ್ಚಿಸುವ, ಕನ್ನಡ ಕಂದನು ಕಾದಿಡುವ ಅಮೌಲ್ಯ ಕೃತಿಗಳು —

ಪ್ರಾಥಮಿಕ ಶಿಕ್ಷಕರಿಂದ ನಡೆಸಲ್ಪಡುವ, ಒಂದೇ ಒಂದಾದ ಪ್ರಾಥಮಿಕ ಶಿಕ್ಷಕರ ಪ್ರೋತ್ಸಾಹನಾರ್ಥ ತೆರೆದ ಸಮಿತಿಯಿಂದ
ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗಾಗಿಯೇ ಹೆಣೆದ

ಪುಟಚೆಂಡು - ಕವಿತಾ ಸಂಕಲನ

ಭಾಗ-೧. ೧೨೪, ಭಾಗ-೨. ೧೦೪ ಜನರ ಕವಿತೆಗಳು

ಆಣೆಕಲ್ಲು - ಕಥಾ ಸಂಕಲನ

ಭಾಗ-೧. ೪೦, ಭಾಗ-೨. ೩೬ ಜನರ ಕಥೆಗಳ

ಭಾಗ ೧-೧ ರಿಂದ ೪, ೨-೫ ರಿಂದ ೭ ವರ್ಗಕ್ಕೆ. ಬೆಲೆ ೧೨ ಆಣೆಯಂತೆ ಉತ್ತರದ ಶ್ರೀ ಬೇಂದ್ರೆಯವರಿಂದ ದಕ್ಷಿಣ ಕುವೆಂಪು, ಪೂರ್ವದ ಶ್ರೀ ಕಾವ್ಯಾನಂದರಿಂದ ಪಶ್ಚಿಮದ ಗೋವಿಂದ ಪೈ ಅವರ ವರೆಗಿನ ೩೦೦ ಜನ ಲೇಖಕರ ವಿವಿ ಕೃತಿ, ವ ವ್ಯಕ್ತಿ ಪರಿಚಯಗಳನ್ನೂ ಒಂದೇ ಕಡೆಗೆ ಕಾಣಬೇಕೆಂದಿದ್ದರೆ, ಶಿಕ್ಷಕರಿಗೆ ಬೆಂಬಲ ನೀಡಲು ಇಂದೇ ಬರೆಯಿ
ವಿದ್ಯಾರ್ಥಿಗಳಿಗೆ ಅಂಚೆ ವೆಚ್ಚ ಉಚಿತ.

— ಶಿಕ್ಷಕರೆಲ್ಲ ಬೆಂಬಲನೀಡಿ ಸೇವೆ ತಕ್ಕೊಳ್ಳಬೇಕಾಗಿ ಬಿನ್ನಹ. —

ಭಾರತೀ ಸಾಹಿತ್ಯ ಭಂಡಾರ ಯರನಾ

ಅಂಚೆ :— ಮನಗೋಳಿ— **ಜಿ.** ವಿಜಾಪುರ

Printed by Shri S. F. Kattimani at Manohar Power Printing Press, Hubli. Edited an Published by Sjts S. P. Patil, B. M. Shintri, S. R. Tatti & Smti. P. A. Bhaskar at the Kannad Prathamik Shikshan Office, Govt. Training College for Men, Dharwar.

ಕನ್ನಡ

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು: ಶ್ರೀ ಎಸ್. ಹಿ. ಪಾಟೀಲ

ಕರ್ನಾಟಕದ ಸಂಚಾರವನ್ನು ಮುಗಿಸಿಕೊಂಡು ದಿಲ್ಲಿಗೆ ಮರಳಿದ

ಮಹಾಪ್ರಧಾನ ಭಾರತರತ್ನ ಶ್ರೀ ನೆಹರುರವರು

ಬಿಡಿ ಪತ್ರಿಕೆ
೦—೬—೦

ಏಪ್ರಿಲ ೧೯೫೭

ವಾ. ಚಂದಾ
೪—೦—೦

ಏಳೈ ಓ ! ಕಂದ !!

೧

ಮೂಡಲ ಬಾನಿನ ಅಂಚಲಿ ಅರಳಿದೆ
ಕೆಂಪಿನ ಕಮಲವು ನಗುನಗುತ !
ಬೀಡೇ ಬಿಟ್ಟಿದೆ ಕಿರಣ ಸಂಕೀರ್ತ್ರನೆ
ನಾಡಿಗೆ ಬೆಳಕನು ಬೀರುತಲಿ !!

೨

ಮೆಲ್ಲಗೆ ಮಾರುತ ಸೊಂಪನು ತೇಲಿಸಿ
ನಗಿಸುತ ಬರುವನು ಈ ಜಗವ !
ಏರುತ ಏರುತ ನೀಲ ವಿಶಾಲದ
ಸಾಗರದಂತಿಹ ಆಖಗವ !!

೩

ಹಕ್ಕಿಯು ನಾದದಿ ಜಾಗೃತಗೊಳಿಸಿದೆ
ಈಜಗ ಏಳೈ ಓ ! ಕಂದ !
ಗಡುಚುಕ್ಕಿರುವದು ಓಂಕಾರದ ಶ್ರುತಿ
ಆಲಿಸಿ ಸಡೆ ಬಾ ಆನಂದ !!

೪

ಜೀವನ ಶಾಲೆಯು ಸೇರುತ ಬಾಳಿನ
ಕಲಿಯನು ಕಲಿಯಿನ್ನು !
ಬಾಳಿನ ದಾರಿಯು ತೋರುವ ಗರುವಿನ
ನಾಮವ ನೆನೆಯಿನ್ನು !!

೫

ನಿನ್ನಯ ಕೀರುತಿ ಬಳ್ಳಿಯು ಚಿರುಗಲಿ
ಗುರುವಿನ ಹರಕೆಯು ನಿನಗಿರಲಿ !
ಏಳೈ ಕಂದಾ ! ಎನ್ನಾನಂದಾ !
ಎನ್ನಯ ಜೀವದ ಕುಡಿಬಳ್ಳಿ !!

೬

ಶಿಕ್ಷಣ ಸುಧೆಯನು ಸವಿಯುತೆ ಅಜ್ಞತೆ
ನಾಶವ ಗೊಳಿಸಲು ಓ ! ಕಂದ !
ಶಿಕ್ಷಣದಿಂದಲಿ ನಾಡಿನ ಕೀರ್ತಿಯು
ಬೆಳಗಲು ಬಾರೈ ಅರವಿಂದ !!

೭

ಪ್ರಾರ್ಥನೆ ಪಠಣದನಾದವು ಸುತ್ತಿದೆ
ಸರಸತಿ ಪುತ್ರರ ಮೊಗದಿಂದ !
ಜೀವನ ಶಾಲೆಯು ಬದುಕಿನ ದಾರಿಯು
ಅಲ್ಲದೆ ಜೀವಕೆ ಆನಂದ !!

೮

ನಾಡಿನ ಸಂಪದ ಬೆಳೆಸಲು ಶಿಕ್ಷಣ
ದಾರಿಯೆ ಯೋಗ್ಯವು ಬಾಳಿನಲಿ !
ಏಳೈ ಕಂದಾ ! ಎನ್ನಾನಂದಾ !
ಮಾತೆಯು ಋಣವನು ತೀರಿಸಲು !!

ಎಚ್. ಆರ್. ಬಂಡೀವಡ್ಡರ,
ಆಲದಗೇರಿ.

ಕನ್ನಡ ಪ್ರಾಥಮಿಕ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : ಶ್ರೀ ಕೆ. ಬಿ. **ತೇರಗಾಂವಕರ,** ಬಿ.ಎಸ್‌ಸಿ. (ಆನರ್ಸ), ಬಿ.ಟಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : ಶ್ರೀ ಎಸ್. ಪಿ. **ಪಾಟೀಲ,** ಬಿ.ಎ., ಬಿ.ಟಿ., ಡಿ.ಪಿ.ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ಹಾಗು ಗೌ. ಕಾರ್ಯದರ್ಶಿ
ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೧ | **ಎಪ್ರಿಲ್ ೧೯೫೬** | **ಸಂಚಿಕೆ ೧೧**

— ಪರಿವಿಡಿ —

೧. ಸಂಪಾದಕೀಯ ೨
೨. ಮೂಲ ಶಿಕ್ಷಣದ ಪ್ರಶ್ನೋತ್ತರಗಳು .... ಶ್ರೀ ತಟ್ಟಿ ಶಾಮರಾಯರು ೩
೩. ಶ್ರೀ ಮೊರಾರಜಿ ದೇಸಾಯಿಯವರು .... ಶ್ರೀ ಶಿಂತ್ರಿ ಬಸಪ್ಪನವರು ೫
೪. ಸುಗ್ಗಿಯ ಸಂಪ್ರದಾಯಗಳು (ಮುಂದೆ ಸಾಗಿದ್ದು) .... ಡಾ. ಬಿ. ಎಸ್. ಗದ್ದಗಿಮಠ ೧೦
೫. ಮೂಲ ಶಿಕ್ಷಣದ ಅರಿವು (ಮುಂದೆ ಸಾಗಿದ್ದು) .... ಶ್ರೀ ಶಿಂತ್ರಿ ಬಸಪ್ಪನವರು ೧೪
೬. ಹೋಳಿ .... ಡಾ. ಬಿ. ಎಸ್. ಗದ್ದಗಿಮಠ ೧೬
೭. ಪರಿಪತ್ರ ಹಾಗೂ ಮೂರ್ಲೋದ್ಯೋಗದ ಅಭ್ಯಾಸ ಪತ್ರಿಕೆ
(ಒಬ್ಬ ಶಿಕ್ಷಕ ಸಾಲೆಗಳಿಗಾಗಿ) ೨೧
೮. ಜೀವನ ಶಿಕ್ಷಣ ವಾರ್ತೆಗಳು .... ಶ್ರೀಮತಿ ಪಿ. ಎ. ಭಾಸ್ಕರ ೨೫
೯. ಮುಂಬಯಿ ವಿಭಾಗದ ಪ್ರಾಥಮಿಕ ಶಿಕ್ಷಕರ ಸಂತೋಷ
ಶಿಬಿರ ಮಹಾಬಳೇಶ್ವರ ವರದಿ ೨೬
ಏಳೈ ಓ! ಕಂದ!! (ಕವನ) .... ಶ್ರೀ ಎಚ್. ಆರ್. ಬಂಡೀವಡ್ಡರ ಹೊದಿಕೆ ಪುಟ ೨
ನಮ್ಮ ಸಮಸ್ಯೆಗಳು ....ಹೊದಿಕೆ ಪುಟ ೩

ಸಂಪಾದಕೀಯ

ನಮ್ಮ ರಾಷ್ಟ್ರವು ಸ್ವತಂತ್ರವಾದ ನಂತರ ಅನೇಕ ಪುನರ್ರಚನೆಯ ಕಾರ್ಯಕ್ರಮಗಳನ್ನು ಕೈಕೊಂಡಿದ್ದು, ಅವುಗಳ ಬಗೆಗೆ ಜನಸಾಮಾನ್ಯರ ಸಹಾಯ ಸಹಾನುಭೂತಿಗಳನ್ನು ಪಡೆಯುವ ದೃಷ್ಟಿಯಿಂದ ಹಲವಾರು ಸಪ್ತಾಹಗಳನ್ನೂ ಉತ್ಸವಗಳನ್ನೂ ಆಚರಿಸುತ್ತ ಬಂದಿದೆ. ಅವುಗಳಲ್ಲಿ ಗ್ರಾಮ ಸುಧಾರಣ ಸಪ್ತಾಹ, ವನಮಹೋತ್ಸವ, ರಾಷ್ಟ್ರೀಯ ಹಾಗೂ ಪಾನಪ್ರತಿಬಂಧ ಸಪ್ತಾಹಗಳೇ ಮುಖ್ಯವಾದುವು. ಕೊನೆಯವೆರಡು ಸಪ್ತಾಹಗಳು ಪ್ರತಿ ವರುಷ ಎಪ್ರಿಲ ತಿಂಗಳ ದಿನಾಂಕ ೭ರಿಂದ ೧೩ರ ವರೆಗೆ ನಡೆಯುವವು. ಇವುಗಳ ಜೊತೆಗೆ ಈ ವರುಷ ಪಂಚವಾರ್ಷಿಕ ಯೋಜನೆಗಳ ಪ್ರಚಾರ ಸಪ್ತಾಹವನ್ನು ಆಚರಿಸಬೇಕೆಂದು ನಮ್ಮ ಸರಕಾರದವರು ನಿರ್ಧರಿಸಿ, ಆ ಪ್ರಕಾರ ಈ ತಿಂಗಳ ದಿನಾಂಕ ೫ರಿಂದ ಅದನ್ನು ಪ್ರಾರಂಭ ಮಾಡಿದ್ದಾರೆ. ಈ ಸಪ್ತಾಹವು ದಿನಾಂಕ ೧೧ರ ವರೆಗೆ ನಡೆಯುವದಿದ್ದು ಅದರ ಬಗ್ಗೆ ಸುದೀರ್ಘವಾದ ಕಾರ್ಯಕ್ರಮವನ್ನು ಸಿದ್ಧಗೊಳಿಸಿ ಅದರಲ್ಲಿ ಪ್ರತಿಯೊಂದು ದಿನವೂ ಪ್ರಥಮ ಹಾಗೂ ದ್ವಿತೀಯ ಪಂಚವಾರ್ಷಿಕ ಯೋಜನೆಗಳಲ್ಲಿ ಸಮಾವೇಶಗೊಂಡ ವಿಷಯಗಳಿಗೆ ಮೀಸಲಾಗಿಡಲ್ಪಟ್ಟಿದೆ. ರಾಷ್ಟ್ರದ ಪುನರ್ರಚನೆಯ ಕಾರ್ಯದಲ್ಲಿ ಪ್ರಥಮ ಯೋಜನೆಯಿಂದ ಸಾಧಿಸಿದ ಹಾಗೂ ದ್ವಿತೀಯ ಯೋಜನೆಯಿಂದ ಸಾಧಿಸಬೇಕಾದ ಗುರಿಗಳ ಬಗೆಗೆ ಪರಿಣಾಮಕರವಾಕ ಪ್ರಚಾರವನ್ನು ನಡೆಸುವದೇ ಈ ಸಪ್ತಾಹದ ಮುಖ್ಯ ಧ್ಯೇಯವಾಗಿದೆ. ೭ನೆಯ ದಿನಾಂಕವು ಶಿಕ್ಷಣ ಖಾತೆಗೆ ಮೀಸಲಾಗಿರುವದರಿಂದ ಅಂದು ಶಿಕ್ಷಣ ಕ್ಷೇತ್ರದಲ್ಲಿರುವ ವಿವಿಧ ಸಂಸ್ಥೆಗಳಲ್ಲಿ ಈ ಪ್ರಚಾರೋತ್ಸವವು ಒಳ್ಳೇ ವಿಜೃಂಭಣೆಯಿಂದ ನಡೆದಿರಲು ಸಾಕು. ಈ ಸಪ್ತಾಹವು ಹೊಸದಾಗಿ ಆಚರಿಸಲ್ಪಡುವದರಿಂದ ಮತ್ತು ಅದು ರಾಷ್ಟ್ರೀಯ ಹಾಗು ಪಾನಪ್ರತಿಬಂಧ ಸಪ್ತಾಹಗಳ ಜೊತೆಗೆ ನಡೆಯುತ್ತಿರುವದರಿಂದ ಈ ವರುಷದ ಉತ್ಸವವು ವೈಶಿಷ್ಟ್ಯಪೂರ್ಣವಾಗಿದೆಯೆಂದು ಹೇಳಬಹುದು. ದಿನಾಂಕ ೭ರಂದು ಪ್ರಥಮ ಪಂಚವಾರ್ಷಿಕ ಯೋಜನೆಯಿಂದ ಜೀವನ ಹಾಗೂ ಒತ್ತಾಯ ಶಿಕ್ಷಣ ಕ್ಷೇತ್ರಗಳಲ್ಲಿ ಸಾಧಿಸಿದ ಪ್ರಗತಿ ಹಾಗು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಶಿಕ್ಷಣ ಪ್ರಸಾರದ ಬಗೆಗೆ ಮಾಡಿದ ಸೂಚನೆಗಳನ್ನು ಕುರಿತು ವಿಚಾರ ಸಂಕೀರ್ಣಗಳು ನಡೆದು, ಅವುಗಳಲ್ಲಿ ಶಿಕ್ಷಣ ತಜ್ಞರೂ ಮೇಲಧಿಕಾರಿಗಳೂ ಹಾಗೂ ಮುಂದಾಳುಗಳೂ ಭಾಗವಹಿಸಿದರು. ಪ್ರಥಮ ಪಂಚವಾರ್ಷಿಕ ಯೋಜನೆಯಿಂದ ನಾವು ಪ್ರಾಥಮಿಕ ಶಿಕ್ಷಣದಲ್ಲಿ ಸಾಧಿಸಿದುದೇನು ? ಅದರ ಮುನ್ನಡೆಗೆ ದ್ವಿತೀಯ ಯೋಜನೆಯಲ್ಲಿ ಸಮಾವೇಶಗೊಂಡ ಸೂಚನೆಗಳಾವವು ? ಇವು ನಮ್ಮ ವಾಚಕರಿಗೆ ಗೊತ್ತಿರಬೇಕು.

ಸ್ವಾತಂತ್ರ್ಯ ದೊರೆತ ನಂತರ ಒತ್ತಾಯ ಶಿಕ್ಷಣಕ್ಕೆ ಪ್ರಥಮ ಪ್ರಾಶಸ್ತ್ಯ ದೊರೆತು ೧೯೪೧ರ ಜನಗಣತಿಯ ಪ್ರಕಾರ ೧೦೦೦ಕ್ಕೆ ಮೀರಿದ ಜನಸಂಖ್ಯೆಯುಳ್ಳ ಹಳ್ಳಿಗಳಲ್ಲಿ ೧೯೪೭-೪೮ರಲ್ಲಿ ಒತ್ತಾಯ ಶಿಕ್ಷಣವು ಪ್ರಾರಂಭಿಸಲ್ಪಟ್ಟಿತು. ೧೯೫೧-೫೨ರ ಕೊನೆಗೆ ನಮ್ಮ ರಾಜ್ಯದಲ್ಲಿ ಒತ್ತಾಯ ಶಿಕ್ಷಣವನ್ನು ಪಡೆಯುವ ಮಕ್ಕಳ ಸಂಖ್ಯೆ ೧೭,೨೫,೩೦೭ಕ್ಕೆ ಮುಟ್ಟಿತು. ಹಾಗು ೫,೨೩೨ ಕ್ಷೇತ್ರಗಳಲ್ಲಿ ಅದು ಜಾರಿಯಲ್ಲಿತ್ತು. ಆ ವರುಷ ಒಟ್ಟಿನಲ್ಲಿ ೩೪,೭೮,೨೨೧ ವಿದ್ಯಾರ್ಥಿಗಳು ೨೮,೩೩೫ ಪ್ರಾಥಮಿಕ ಶಾಲೆಗಳಲ್ಲಿ ಓದುತ್ತಿದ್ದರು. ೧೯೫೩-೫೪ರ ಕೊನೆಗೆ ವಿದ್ಯಾರ್ಥಿಗಳ ಸಂಖ್ಯೆಯು ೩೫,೫೨,೭೫೦ಕ್ಕೆ ಮುಟ್ಟಿತು. ಸಾಲೆಗಳ ಸಂಖ್ಯೆ ೩೧,೧೩೦ಕ್ಕೆ ಏರಿತು. ಮರುವರುಷ (೧೯೫೪-೫೫) ಒತ್ತಾಯ ಶಿಕ್ಷಣದ ಯೋಜನೆಯು ೧೯೫೧ರ ಜನಗಣತಿಯ ಪ್ರಕಾರ ೧೦೦೦ಕ್ಕಿಂತಲೂ ಹೆಚ್ಚು ಜನಸಂಖ್ಯೆಯುಳ್ಳ ಹಳ್ಳಿಗಳಲ್ಲಿ ಪ್ರಾರಂಭವಾಯಿತು. ಆ ವರುಷಾಂತ್ಯಕ್ಕೆ ೩೩,೨೧೩ ಸಾಲೆಗಳಲ್ಲಿ ೩೮,೩೦,೦೦೦ ವಿದ್ಯಾರ್ಥಿಗಳು ಒತ್ತಾಯ ಶಿಕ್ಷಣಕ್ಕೆ ಒಳಪಟ್ಟಿದ್ದರು. ಇದೇ ತಿಂಗಳ ದಿನಾಂಕ ೧ರಿಂದ ಪ್ರಾರಂಭವಾದ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ೧೯೫೧ರ ಜನಗಣತಿಯ ಪ್ರಕಾರ ೫೦೦ರಿಂದ ೯೯೯ರ ವರೆಗೆ ಜನಸಂಖ್ಯೆಯುಳ್ಳ ಹಳ್ಳಿಗಳಲ್ಲಿ ಒತ್ತಾಯ ಶಿಕ್ಷಣವನ್ನು ಪ್ರಾರಂಭಿಸುವ ಏರ್ಪಾಡನ್ನು ಮಾಡಲಾಗಿದೆ. ನಾಲ್ಕು ವರುಷಗಳ ನಂತರ ೭—೧೧ ವಯಸ್ಸಿನಲ್ಲಿರುವ ಎಲ್ಲ

ಮಕ್ಕಳಿಗೂ ಪ್ರಾಥಮಿಕ ಶಿಕ್ಷಣವು ಕಡ್ಡಾಯವಾಗಿ ದೊರೆಯುವದು; ಇದಲ್ಲದೆ ಖಾಸಗಿ ಪ್ರಾಥಮಿಕ ಸಾಲೆಗಳ ಮುಖಾಂತರ ಶಿಕ್ಷಣ ಸೌಕರ್ಯಗಳು ದೊರೆಯುತ್ತಿದ್ದ ೫೦೦ಕ್ಕೆ ಕಡಿಮೆ ಜನಸಂಖ್ಯೆಯಿದ್ದ ಹಳ್ಳಿಗಳಲ್ಲಿಯೂ ಸಹ ಒತ್ತಾಯ ಶಿಕ್ಷಣವನ್ನು ಪ್ರಾರಂಭಿಸಲಾಗುವದು. ಒಟ್ಟಿನಲ್ಲಿ ದ್ವಿತೀಯ ಯೋಜನೆಯು ಕೊನೆಗೊಂಡಾಗ (೧೯೬೧) ೬ರಿಂದ ೧೪ರ ವರೆಗೆ ವಯಸ್ಸುಳ್ಳ ಮಕ್ಕಳಲ್ಲಿ ೧೦೦ಕ್ಕೆ ಸುಮಾರು ೬೫ಕ್ಕಿಂತಲೂ ಹೆಚ್ಚು ಮಕ್ಕಳು ಶಿಕ್ಷಣವನ್ನು ಪಡೆಯುವರು.

ಜೀವನ ಶಿಕ್ಷಣದ ತತ್ವಗಳನ್ನು ಅಂಗೀಕರಿಸಿ ೧೯೩೮ರಲ್ಲಿ ಪ್ರಾಯೋಗಿಕ ರೀತಿಯಿಂದ ನಾಲ್ಕು ಕ್ಷೇತ್ರಗಳಲ್ಲಿ ೫೫ ಸಾಲೆಗಳನ್ನು ಆರಿಸಿ ಅಲ್ಲಿ ಆ ಶಿಕ್ಷಣ ಕ್ರಮವನ್ನು ಪ್ರಾರಂಭಿಸಿದರು. ಸಾದಾ ಸಾಲೆಗಳನ್ನು ಜೀವನ ಶಿಕ್ಷಣ ಸಾಲೆಗಳನ್ನಾಗಿ ಪರಿವರ್ತಿಸುವ ದೃಷ್ಟಿಯಿಂದ ಅಂಥ ಸಾಲೆಗಳಲ್ಲಿ ಮೊದಲಿಗೆ ಮೂಲೋದ್ಯೋಗವನ್ನು ಕಲಿಸುವ ವ್ಯವಸ್ಥೆ ಮಾಡಲಾಯಿತು. ಟ್ರೇನಿಂಗ ಕಾಲೇಜುಗಳಲ್ಲಿ ಮೂಲೋದ್ಯೋಗವನ್ನೂ, ಸಾಂಘಿಕ ಜೀವನ ಹಾಗು ಆರೋಗ್ಯ ತರಬೇತಿಯನ್ನೂ ಪ್ರಾರಂಭಿಸಿ, ಕ್ರಮೇಣ ಅವನ್ನು ಪೂರ್ಣ ಜೀವನ ಶಿಕ್ಷಣ ಸಂಸ್ಥೆಗಳನ್ನಾಗಿ ಪರಿವರ್ತಿಸುವ ಧೋರಣೆಯನ್ನು ಕಾರ್ಯಗತ ಮಾಡಿದರು. ಇದಲ್ಲದೆ ೧೯೪೮ರಲ್ಲಿ ನಮ್ಮ ರಾಜ್ಯದಲ್ಲಿ ಪ್ರಾದೇಶಿಕ ತಳಹದಿಯ ಮೇಲೆ ಪದವೀಧರರ ತರಬೇತಿಗಾಗಿ ಮೂರು ಜೀವನ ಶಿಕ್ಷಣ ಕೇಂದ್ರಗಳನ್ನು ಪ್ರಾರಂಭಿಸಲಾಯಿತು. ಇವುಗಳ ಸಹಾಯದಿಂದ ಸರಕಾರಿ ಟ್ರೇನಿಂಗ ಕಾಲೇಜುಗಳಲ್ಲಿಯ ಶಿಕ್ಷಕ-ವಿದ್ಯಾರ್ಥಿಗಳನ್ನು ಜೀವನ ಶಿಕ್ಷಣ ಸಾಲೆಗಳ ಸಲುವಾಗಿ ತರಬೇತು ಮಾಡುವದು. ಸಾಧ್ಯವಾಯಿತು ಸರಕಾರೇತರ ಟ್ರೇನಿಂಗ ಕಾಲೇಜುಗಳಲ್ಲಿ ಮೂಲೋದ್ಯೋಗವನ್ನು ಕಲಿಸುವ ವ್ಯವಸ್ಥೆಯನ್ನು ಸಹ ಮಾಡಲಾಯಿತು. ದ್ವಿತೀಯ ಪಂಚವಾರ್ಷಿಕ ಯೋಜನೆಯ ಪ್ರಕಾರ ೧೦೦೦ರಷ್ಟು ಪೂರ್ಣ ಪ್ರಾಥಮಿಕ ಸಾಲೆಗಳನ್ನು ಜೀವನ ಶಿಕ್ಷಣ ಸಾಲೆಗಳನ್ನಾಗಿ ಪರಿವರ್ತಿಸುವ ನಿರ್ಧಾರವನ್ನು ಮಾಡಿದ್ದಾಗಿದೆ. ಮೊಪಲು ನೂಲುವ ಹಾಗು ನೇಯುವ, ಕಕ್ಕಿಗೆಯ ಕೆಲಸ, ಚಿತ್ರದ ಹಾಗೂ ಬಿದರಿನ ಕೆಲಸ ಇಲ್ಲವೆ ಒಕ್ಕಲುತನ ಇವೇ ಮೊದಲಾದ ಮೂಲೋದ್ಯೋಗಗಳನ್ನು ಪ್ರಾರಂಭಿಸಬೇಕೆಂದಿದ್ದಾರೆ. ದ್ವಿತೀಯ ಯೋಜನೆಯು ಕೊನೆಗೊಂಡಾಗ ೧೦೦ಕ್ಕೆ ಸುಮಾರು ೬೫ರಷ್ಟು ಶಿಕ್ಷಕರು ತರಬೇತುಹೊಂದುವ ನಿರೀಕ್ಷಣೆ ಇದೆ.

ಮೂಲಶಿಕ್ಷಣ - ಪ್ರಶ್ನೋತ್ತರಗಳು

(ನಮ್ಮ ಕೇಂದ್ರ ಸರಕಾರದ "ಪಬ್ಲಿಕೇಶನ್ಸ್ ಡಿವಿಜನ್" ದವರು ಪ್ರಕಟಿಸಿದ ಹಿಂದಿಯಲ್ಲಿದ್ದ "ಮೂಲಶಿಕ್ಷಣ-ಪ್ರಶ್ನೋತ್ತರಗಳು" ಎಂಬ ಸಂಪುಟದ ಆಧಾರದಿಂದ.)

ಅನುವಾದಕರು : **ಶ್ರೀ ತಟ್ಟಿ, ಶಾಮರಾಯರು**

ಪ್ರ ೧. ಮೂಲಶಿಕ್ಷಣವು ಮಗುವನ್ನು ತೀರ ವಯಸ್ಸಿನಲ್ಲಿಯೇ ಕೈಗಾರಿಕೆಯ ಉದ್ಯೋಗದ ಹಚ್ಚುತ್ತದೆ. ಇದರಿಂದ ಮಗುವನ್ನು ನಿಶ್ಚಿಂತ ಜೀವನದಿಂದ ದೂರಮಾಡಿ ಅದರ ಸಹಜವಿಕಾಸಕ್ಕೆ ಅಡ್ಡಿಯನ್ನು ತಂದಂತಾಗುವದಿಲ್ಲವೇ, ಸಹಜ ಗುಣಗಳ ವಿಕಾಸವು ಶಿಶುವಿನ ನಿಶ್ಚಿಂತ ಜೀವನದಿಂದಲೇ ಸಾಧ್ಯವಿರುವದಲ್ಲವೇ ?

ಉತ್ತರ:– ಈ ಆಕ್ಷೇಪವನ್ನು ಎತ್ತುವಾಗ ಕೈಗಾರಿಕೆಯ ಶಿಕ್ಷಣವು ಬುದ್ಧಿಯ ಸಂಬಂಧವಿಲ್ಲದ ಕೇವಲ ಯಾಂತ್ರಿಕ ರೀತಿಯಿಂದ ಕೊಡಲ್ಪಡುವದೆಂಬ ತಿಳುವಳಿಕೆಯಿದೆ; ಮತ್ತು ಹೀಗೆ ಮಾಡುವದರ ಮುಖ್ಯ ಉದ್ದೇಶವು ಮಗುವಿನ ಸರ್ವಾಂಗೀಣ ವಿಕಾಸವ ವಿಚಾರವನ್ನು ಬಿಟ್ಟು ಅದರ ಆರಂಭದ ಶಿಕ್ಷಣವು ಸಂಕುಚಿತವಾದ ಕೇವಲ ವ್ಯವಸಾಯ ಶಿಕ್ಷಣವಾಗಿರಬೇಕೆಂದು ತಿಳಿದಂತಾಗುವದು. ಕೆಲವೊಂದು ಅವಧಿಯ ವರೆಗೆ ಮಕ್ಕಳು ಶ್ರಮದಲ್ಲಿ ನಿರತರಾಗುವದರಲ್ಲಿ ಆಟ ಮತ್ತು ಕೆಲಸಗಳಲ್ಲಿನ ಪರಸ್ಪರ ವಿರೋಧವನ್ನು ದೂರಮಾಡುವದೇ ಮೂಲ ಶಿಕ್ಷಣದ ಮುಖ್ಯ ಉದ್ದೇಶವೂ ವೈಶಿಷ್ಟ್ಯವೂ ಆಗಿದೆ.

ಇವರಲ್ಲಿ ಕೇವಲ ಕೈಗಾರಿಕೆಗೇ ಮಹತ್ವವನ್ನು ಕೊಡಲಾಗುವದಿಲ್ಲ; ಆದರೆ ಮಕ್ಕಳ ಸಹಜ ಕುತೂಹಲಕ್ಕೆ ಅವಕಾಶವನ್ನು ಕೊಡುವಂತಹ ಮತ್ತು ನಿತ್ಯಜೀವನದ ವ್ಯವಹಾರದ ಕೆಲಸಗಳಲ್ಲಿ ಜಾಣತನವನ್ನು ತಂದುಕೊಡುವಂತಹ ಪದ್ಧತಿಗೆ ಮಹತ್ವ ಕೊಡಲಾಗುತ್ತದೆ. ಮೂಲಶಿಕ್ಷಣದಲ್ಲಿ ಈ ಕುತೂಹಲದ ಸದುಪಯೋಗ ಮಾಡಿಕೊಳ್ಳಲಾಗುತ್ತಿದೆ; ಮತ್ತು ಕೈಗಾರಿಕೆಯಲ್ಲಿನ ಯೋಗ್ಯ ಅಂಶಗಳೊಡನೆ ಸಮನ್ವಯ ಮಾಡಿ ಮಕ್ಕಳಿಗೆ ತಲೆಭಾರವಾಗದಂತಹ ಬೌದ್ಧಿಕ ಶಿಕ್ಷಣವೂ ಕೊಡಲ್ಪಡುವದು.

ಒಳ್ಳೇ ಮೂಲ ಶಿಕ್ಷಣ ಶಾಲೆಯಲ್ಲಿ ಮಗುವಿಗೆ ತಾನೊಂದು ಕೈಗಾರಿಕೆಯ ಉದ್ಯೋಗವನ್ನು ಕಲಿಯುತ್ತಿದ್ದೇನೆಂಬ ಭಾವನೆಯೇ ಬರುವದಿಲ್ಲ; ಅದೊಂದು ಪ್ರಕಾರದ ಆಟವೆಂದೇ ಅದಕ್ಕೆ ಭಾಸವಾಗುವದು. ಬಾಲಕನ ಉತ್ಪಾದಕ ಪ್ರವೃತ್ತಿಯನ್ನು ಜಾಗ್ರತಗೊಳಿಸುವದು ಸಹಜಪ್ರವೃತ್ತಿಗಳ ಆನಂದಾನುಭವಕ್ಕೆ ಪ್ರತಿಕೂಲವಾಗಿರದೆ ಅನುಕೂಲವಾಗಿರುವದು; ಮಕ್ಕಳ ವ್ಯಕ್ತಿತ್ವವಿಕಾಸಕ್ಕೆ ತಕ್ಕ ಸ್ವತಂತ್ರ ವಾತಾವರಣವು ಸಿದ್ಧವಿರುವದು. ಇದು ಅವರ ಮನೆತನದಲ್ಲಿಯ ಹಳೆ ಪದ್ಧತಿಯ ಶಿಕ್ಷಣದಲ್ಲಿ ಸಿಕ್ಕಲಾರದು. ಮಕ್ಕಳ ತಂದೆ ತಾಯಿಗಳೂ ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿರುವರು. ಅವರಿಗೆ ತಮ್ಮ ಮಕ್ಕಳ ಸರ್ವಾಂಗೀಣ ಬೆಳವಣಿಗೆಯ ಕಡೆಗೆ ಲಕ್ಷ್ಯ ಕೊಡುವದಾಗುವದಿಲ್ಲ; ಅದಕ್ಕೆ ಸಮಯವು ಸಿಗುವ ಭರವಸೆಯೂ ಇಲ್ಲ. ಸೂಕ್ಷ್ಮವಾದ ಜೋಣಿಗಾರಿಕೆಯ ಅರಿವಿನ ಯೋಗ್ಯ ವಿಕಾಸವು ನಿಶ್ಚಿಂತ ಬಾಲ್ಯ ಜೀವನಕ್ಕೆ ಪ್ರತಿಕೂಲವೆಂದು ಹೇಳಲಾಗದು.

ಪ್ರ ೨. ಮೂಲಶಿಕ್ಷಣದಿಂದ ಸಣ್ಣ ಮಕ್ಕಳನ್ನು ಕಾರ್ಮಿಕರೆಂದು ತೆಗೆದುಕೊಳ್ಳುವ ಪದ್ಧತಿಯು ಪುನಃ ಪ್ರಸ್ಥಾಪನೆಯಾಗಿ ಸರಕಾರದವರ್ರೆ ಮಕ್ಕಳ ಪೋಷಣೆಯ ಉಪಾಯವನ್ನು ಹುಡುಕಿ ತೆಗೆದಂತಾಗಲಾರದೇ ಮತ್ತು ಅದರಿಂದ ಅವರು ರಾಜ್ಯ ನೀತಿಯ ಶಾಸನಗಳ ಅನುಸಾರವಾಗಿ ಸಕ್ತಿಯಾದ ಪ್ರಾಥಮಿಕ ಶಿಕ್ಷಣ ಪಡೆಯುವ ಅಧಿಕಾರಕ್ಕೆ ಎರವಾದಂತಾಗುವದಿಲ್ಲವೇ ?

ಉತ್ತರ :- ಎಲ್ಲ ಕೆಲಸವೂ ಕ್ಲೇಶದಾಯಕ ಶ್ರಮವೆಂದು ತಿಳಿಯುವದು ತಪ್ಪು; ಹಾಗೆಯೇ ಮಕ್ಕಳು ಸ್ವಭಾವತಃ ಕೆಲಸಕ್ಕೆ ಬೇಸರಿಯುತ್ತಾರೆ ಎಂದು ತಿಳಿಯುವದೂ ತಪ್ಪು. ನಿಜವಾಗಿ ನೋಡಿದರೆ ಅವರ ಚಂಚಲ ಪ್ರವೃತ್ತಿಯು ಕೆಲಸ ಮಾಡುವದನ್ನೇ ಯಾವಾಗಲೂ ಬೇಡುತ್ತಿರುತ್ತದೆ. ಸುಮ್ಮನೆ ಕೂಡ್ರುವದು ಅವರಿಗೆ ಸರ್ವಥಾ ಆಗದ ಮಾತು. ಪುಸ್ತಕೀ ವಿದ್ಯೆ ಎಂಬ ಬೌದ್ಧಿಕ ವ್ಯಾಪಾರದಿಂದ ಬಾಲಕನ ಸ್ವಾಭಾವಿಕ ಅವಶ್ಯಕತೆಗಳ ಪೂರ್ತಿಯಾಗುವದಿಲ್ಲ. ನಿಜವಾಗಿ ಬಾಲಕರಿಗೆ ಯಾವಾಗ ಸಂತೋಷವಾಗುವದೆಂದರೆ ಹುರುಪಿನಿಂದ ಒಂದು ಕೆಲಸವನ್ನು ಅವರಿಗೆ ಮಾಡಲಿಕ್ಕೆ ಬಿಟ್ಟುಕೊಟ್ಟಾಗ, ಒತ್ತಾಯದಿಂದ ಅವರಿಂದ ಒಂದು ಕೆಲಸವನ್ನು ಮಾಡಿಸಿದರೆ ಅದು ಶ್ರಮವೆನಿಸಿಕೊಳ್ಳುವದು. ಪ್ರತಿಯೊಂದು ಒಳ್ಳೆಯ ಮೂಲಶಿಕ್ಷಣ ಸಾಲೆಯಲ್ಲಿ ಇರುವಂತೆ, ಸಂತೋಷಜನಕವಾದ ಕೆಲಸಮಾಡುವ ಪರಿಸ್ಥಿತಿ ಇದ್ದರೆ ಮತ್ತು ಬಲ ಹಾಗು ಶಿಕ್ಷೆಯ ಪ್ರಯೋಗ ಮಾಡಲ್ಪಡದಿದ್ದರೆ ಆಗ ಕೆಲಸವು ಆಟದ ರೂಪದಲ್ಲಿ ಪರ್ಯವಸಾನವಾಗಿ ಶಿಕ್ಷಣದ ಒಂದು ಪ್ರಭಾವಶಾಲಿಯಾದ ಸಾಧನವಾಗುವದು.

ಶಿಕ್ಷಣಕ್ಕಾಗಿ ಕೈಗಾರಿಕೆಯ ಅಥವಾ ಕುಶಲ ಕಲೆಯ ಉಪಯೋಗ ಮಾಡಿಕೊಳ್ಳುವದು ಶಿಕ್ಷಣಕ್ಷೇತ್ರದಲ್ಲಿ ಒಂದು ಹೊಸ ಕಲ್ಪನೆಯಾಗಿದೆ; ಈ ಕಾರಣದಿಂದ ಈ ವಿಷಯಕ್ಕೆ ಅನೇಕ ತಪ್ಪು ಅಭಿಪ್ರಾಯಗಳೂ ನಿರ್ಮೂಲವಾದ ಶಂಕೆಗಳೂ ಹರಡಿವೆ. ಮೂಲಶಿಕ್ಷಣ ಶಾಲೆಯನ್ನು ಚಿಕ್ಕಮಕ್ಕಳನ್ನು ಕಾರ್ಮಿಕರಂತೆ ದುಡಿಸಿಕೊಳ್ಳುವ, ಅನ್ಯಾಯಮೂಲವಾದ ಲಾಭ ಪ್ರಾಪ್ತಿಯ ಕಾರಖಾನೆಗೆ ಹೋಲಿಸುವದು ಸರ್ವಥಾ ತಪ್ಪು. ಒಳ್ಳೆಯ ಮೂಲ ಶಿಕ್ಷಣ ಶಾಲೆಯಲ್ಲಿ ಗಮನವೀಯಲಾಗುವ ಮೊದಲನೆಯ ಮಾತೆಂದರೆ ಮಕ್ಕಳ ಮೇಲೆ ಕೆಲಸದ ಭಾರವು ಹೆಚ್ಚಾಗಬಾರದು. ಆದರೆ ಯಾವನಾದರೊಬ್ಬ ಅತ್ಯುತ್ಸಾಹೀ ಶಿಕ್ಷಕನು ಮೂಲಶಿಕ್ಷಣದ ಉತ್ಪಾದನೆಯ ಅಂಗಕ್ಕೇ ಹೆಚ್ಚು ಪ್ರಾಶಸ್ತ್ಯ ಕೊಡುವ ತಪ್ಪು ಮಾಡಿದ್ದೇ ಆದರೆ ಈ ಪ್ರವೃತ್ತಿಗೆ ತಡೆಯೊಡ್ಡುವ ಕೆಲವು ಪರಿಸ್ಥಿತಿಗಳು ಸ್ವಯಮೇವ ನಿರ್ಮಾಣವಾಗುವವು. ಮೊದಲನೆಯದಾಗಿ ಮೇಲ್ವಿಚಾರಕರು ಆ ತಪ್ಪನ್ನು ಬೊಟ್ಟು ಮಾಡಿ ತೋರಿಸುವದರಲ್ಲಿ ಜಾಗ್ರತರಾಗಿರುವರು; ಕೈಗಾರಿಕೆಯ ಮೂಲಶಿಕ್ಷಣದಲ್ಲಿನ ಕುಂದುಕೊರತೆಗಳನ್ನು ತೃಪ್ತಿಕರವಾಗಿ ಪರಿಹರಿಸಲಾಗು

— ೨೭ನೇ ಪುಟಕ್ಕೆ ಮುಂದುವರೆದಿದೆ

ಶ್ರೀ ಮೊರಾರಜಿ ರಂಛೋಡಜಿ ದೇಸಾಯಿಯವರು

(ಮುಂಬಯಿ ರಾಜ್ಯದ ಮುಖ್ಯ ಮಂತ್ರಿಗಳು)

ಲೇ:– ಶ್ರೀ ಬ. ಮಂ. ಶಿಂತ್ರಿ, ಬಿ. ಎ., ಬಿ. ಟಿ. ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದಕ್ಷಿಣ ಭಾಗ ಧಾರವಾಡ ಹಾಗೂ ಗೌರವ ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್ ಸಾಹಿತ್ಯ ಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ಧಾರವಾಡ.

ಪ್ರಸ್ತಾವನೆ

ಇದೇ ವರುಷದ ಫೇಬ್ರುವರಿ ತಿಂಗಳ ೨೯ನೆಯ ದಿನಾಂಕದಂದು ಶ್ರೀ ಮೊರಾರಜಿಯವರ ಷಷ್ಟ್ಯಬ್ದಿ ಸಮಾರಂಭವು ಮುಂಬಯಿ ನಗರದಲ್ಲಿ ಮಲಬಾರ ಗುಡ್ಡದ ಮೇಲಿರುವ ಅವರ ನಿವಾಸಸ್ಥಾನದಲ್ಲಿ ಒಳ್ಳೇ ಉತ್ಸಾಹದಿಂದಲೂ ನಿರಾಡಂಬರದಿಂದಲೂ ನೆರವೇರಿದುದನ್ನು ಓದುಗರು ಮರೆತಿರಲಿಕ್ಕಿಲ್ಲವಷ್ಟೇ. ಆ ದಿನ ಅವರು ೬೧ನೆಯ ವರುಷದ ಹೊಸ್ತಿಲಲ್ಲಿ ಕಾಲಿಡುವವರಿದ್ದುದರಿಂದ ಮುಂಬಯಿ ಶಹರದ ಎಲ್ಲ ಜಾತಿ-ಧರ್ಮಗಳ ಹಾಗೂ ಎಲ್ಲ ಪಕ್ಷ-ಪಂಗಡಗಳ ಸದ್‌ಗೃಹಸ್ಥರೆಲ್ಲ ಒತ್ತಟ್ಟಿಗೆ ಕಲೆತು ಒಂದು ಸಮಿತಿಯನ್ನು ಮಾಡಿಕೊಂಡು ೬೧,೦೦೦ ರೂಪಾಯಿಗಳ ನಿಧಿಯೊಂದನ್ನು ಸಂಗ್ರಹಿಸಿ ಅವರಿಗೆ ಆ ದಿನ ಹಮ್ಮಿಣಿಯನ್ನರ್ಪಿಸಬೇಕೆಂಬ ಸಂಕಲ್ಪವೊಂದನ್ನು ಮಾಡಿಟ್ಟುಕೊಂಡಿದ್ದರು. ಆದರೆ, ನಿಧಿಯನ್ನು ಕೂಡಿಸಲು ಪ್ರಾರಂಭ ಮಾಡಿದ ನಂತರ ಆ ಸಮಿತಿಯವರು ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಹಣವು ಶೇಖರಿಸಲ್ಪಟ್ಟಿದುದು ಅವರಿಗೆ ಕಂಡುಬಂದಿತು. ಅದನ್ನು ಲೆಕ್ಕ ಮಾಡಿ ನೋಡಲು ಅದು ಒಂದು ಲಕ್ಷ ಒಂದು ಸಾವಿರದಷ್ಟಾಗಿತ್ತು. ಇದರ ಮೇಲಿಂದ ಅವರ ಲೋಕಪ್ರಿಯತೆಯು ಎಷ್ಟಿದೆಯೆಂಬುದು ವ್ಯಕ್ತವಾಗುತ್ತಿದೆಯಷ್ಟೇ. ಮುಂಬಯಿ ನಗರವು ರಾಜ್ಯಗಳ ಪುನರ್ಘಟನೆಯಲ್ಲಿ ಕೇಂದ್ರ ಸರಕಾರದ ಆಡಳಿತದಲ್ಲುಳಿಯಬೇಕೆಂಬ ನಿರ್ಣಯವು ಹೊರಬಿದ್ದ ಕೂಡಲೆ ಶಹರದಲ್ಲೆಲ್ಲ ಗಲಭೆಗಳೆದ್ದು ಹೇಳತೀರದಷ್ಟು ಕೊಲೆ-ಸುಲಿಗೆಗಳೂ ಅಬಲೆಯರ ಮಾನಭಂಗವೂ ಸಂಭವಿಸಿದವು! ಭಾರತದಲ್ಲಿ ಅಗ್ರಸ್ಥಾನವನ್ನು ಪಡೆದಿದ್ದ ಮುಂಬಯಿ ನಗರದ ಧವಲ ಕೀರ್ತಿಗೆ ಅವು ಕಲಂಕವನ್ನು ತಂದೊಡ್ಡಿದವು. ಆಗ ಮುಖ್ಯ ಮಂತ್ರಿಗಳು ಎಳ್ಳಷ್ಟೂ ವಿಹ್ವಲರಾಗದೆ ಸಾವಧಾನದಿಂದ ಗಲಭೆಗಳನ್ನೆದುರಿಸಿ ಗಲಭೆಗಾರರನ್ನೆಲ್ಲ ಯುಕ್ತಿಯಿಂದ ಬಗ್ಗು ಬಡಿದು ಸ್ವಲ್ಪೇ ದಿನಗಳಲ್ಲಿ ಪುನಃ ಶಾಂತಿಯನ್ನು ಪ್ರಸ್ಥಾಪಿಸಿ " ದಕ್ಷ ಆಡಳಿತಗಾರ " ರೆಂಬ ಬಿರುದಿಗೆ ತಮ್ಮ ಅರ್ಹತೆಯನ್ನು ಜನತೆಯ ನಿದರ್ಶನಕ್ಕೆ ತಂದು ಕೊಟ್ಟರು. ಅಂತಹ ಶ್ರೀ ದೇಸಾಯಿಯವರ ಆದರ್ಶ ಜೀವನದ ಅಲ್ಪ ಪರಿಚಯವನ್ನು ನಮ್ಮ ಓದುಗರಿಗೆ ಇಲ್ಲಿ ಮಾಡಿ ಕೊಡಲು ಪ್ರಯತ್ನಿಸಲಾಗಿದೆ.

ಮನೆತನ ಹಾಗೂ ಪರಂಪರೆ

ಅವರ ತಂದೆ ಶ್ರೀ ರಂಛೋಡಜಿ ನಗರಜಿ ದೇಸಾಯಿಯವರು ಭಾವನಗರ ಸಂಸ್ಥಾನದಲ್ಲಿಯ ಬುಲ್ಸಾರವೆಂಬಲ್ಲಿ ಶಿಕ್ಷಕರಾಗಿದ್ದರು. ಅವರಿಗೆ ತಿಂಗಳೊಂದಕ್ಕೆ ನಾಲ್ವತ್ತು ರೂಪಾಯಿಗಳ ವೇತನವು ಸಿಕ್ಕುತ್ತಿತ್ತು. ಅವರು ಸ್ವಧರ್ಮನಿಷ್ಠೆಯುಳ್ಳವರಾಗಿದ್ದುದರಿಂದ ದಿನಾಲು ತಪ್ಪದೆ ಎರಡು ಸಲ ಈಶ್ವರನ ಗುಡಿಗೆ ಹೋಗಿ ದೇವರ ದರ್ಶನವನ್ನು ಪಡೆದುಕೊಂಡು ಬರುವ ಪರಿಪಾಠವಿದ್ದಿತು. ಅವರ ಧಾರ್ಮಿಕ ಹಾಗೂ ನಿಷ್ಕಲಂಕ ವೃತ್ತಿಯನ್ನು ಮನದಂದು ಎಲ್ಲರು ಅವರಿಗೆ ಗೌರವಾದರಗಳನ್ನು ಸಲ್ಲಿಸುತ್ತಿದ್ದರು. ಅವರ ತಾಯಿ ಶ್ರೀಮತಿ ವಜಿಯಾಬಹೇನರವರು ದೃಢಸಂಕಲ್ಪವುಳ್ಳವರೂ, ಸತ್ಯನಿಷ್ಠರೂ, ಸ್ವಾಭಿಮಾನಿಗಳೂ ಆಗಿದ್ದರು. ಆ ಆದರ್ಶ ದಂಪತಿಗಳ ಹೊಟ್ಟೆಯಿಂದ ೧೮೯೬ನೆಯ ಇಸವಿ ಫೇಬ್ರುವರಿ ತಿಂಗಳ ೨೯ನೆಯ ದಿನಾಂಕದಂದು ಶ್ರೀ ಮೊರಾರಜಿಯವರು ಜನಿಸಿದರು. ಅವರಿಗೆ ಮೂರುಮಂದಿ ತಮ್ಮಂದಿರೂ ಓರ್ವ ತಂಗಿಯೂ ಇರುವರು. ಬುಲ್ಸಾರದಲ್ಲಿ ಅವರ ಮನೆತನವು ಹೇಳಿಕೊಳ್ಳುವಷ್ಟು ಶ್ರೀಮಂತವಿದ್ದಿಲ್ಲವಾದರೂ ಮಧ್ಯಮ ವರ್ಗಕ್ಕೆ

ಸೇರಿದ್ದಿತೆಂದನ್ನಲಡ್ಡಿಯಿಲ್ಲ. ಶ್ರೀ ಮೊರಾರಜಿಯವರಲ್ಲಿ ಮನೆ ಮಾಡಿಕೊಂಡಿರುವ ಸ್ವಾಭಿಮಾನ, ಸತ್ಯನಿಷ್ಠೆ, ದೃಢ ನಿರ್ಧಾರ ಈ ಗುಣಗಳು ಅವರ ತಾಯಿಯವರಿಂದಲೂ ಸ್ವಧರ್ಮನಿಷ್ಠೆಯು ಅವರ ತಂದೆಯವರಿಂದಲೂ ಆನುವಂಶಿಕವಾಗಿ ಬಂದಿವೆಯೆಂಬಂತೆ ತೋರುತ್ತಿದೆ.

ಬಾಲ್ಯ ಹಾಗೂ ಶಿಕ್ಷಣ

ಅವರ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವೆಲ್ಲ ಬುಲ್ಸಾರದಲ್ಲಿಯೇ ಜರುಗಿತು. ದಿನಾಲು ನಸುಕಿನಲ್ಲೆದ್ದು ಸಂಧ್ಯಾವಂದನೆಯನ್ನು ತೀರಿಸಿಕೊಂಡು ತಂದೆ ತಾಯಿಗಳಿಗೆ ನಮಸ್ಕಾರ ಮಾಡದೆ ಅಭ್ಯಾಸಕ್ಕೆ ಕೂಡ್ರುತ್ತಿದ್ದಿಲ್ಲ. ಧಾರ್ಮಿಕ ಸಂಸ್ಕೃತಿಯು ಅವರಲ್ಲಿ ಅಸಾಧಾರಣವಿದೆ. ಚಿಕ್ಕ ಮಗುವಿದ್ದಾಗಿನಿಂದಲೂ ಅವರು ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು. ಪ್ರತಿಯೊಂದು ಕ್ಲಾಸಿನಲ್ಲಿ ಮೊದಲನೆಯ ನಂಬರವನ್ನು ಎಂದೂ ಬಿಟ್ಟಿದ್ದಿಲ್ಲ. ಕೇವಲ ಹದಿನೈದು ವರುಷದ ಹುಡುಗನಾಗಿದ್ದಾಗ ಮ್ಯಾಟ್ರಿಕ್ ಕ್ಲಾಸಿನ ಅಭ್ಯಾಸವನ್ನು ಮುಗಿಸಿದ್ದರು. ಆಗಿನ ಕಾಲಕ್ಕೆ ಮ್ಯಾಟ್ರಿಕ್ ಪರೀಕ್ಷೆಗೆ ಕೂಡ್ರಲು ಹದಿನಾರು ವರ್ಷಗಳ ವಯಸ್ಸಿನ ನಿರ್ಬಂಧವಿದ್ದಿತಾದುದರಿಂದ ಅವರು ಒಂದು ವರ್ಷದ ಮಟ್ಟಿಗೆ ಕೈಕಟ್ಟಿಕೊಂಡು ಸುಮ್ಮನೆ ಕೂಡ್ರಬೇಕಾಯಿತು. ಅದೇ ಸಮಯಕ್ಕೆ ಅವರ ಲಗ್ನವು ಶ್ರೀಮತಿ ಗಜರಾಬಹೇನರವರೊಡನೆ ಜರುಗಿತು. ದುಃಖದ ಸಂಗತಿಯೆಂದರೆ, ಅವರ ತಂದೆಯವರಿಗೆ ತಮ್ಮ ಹಿರಿಯ ಮಗನ ಲಗ್ನವನ್ನು ನೋಡುವ ಭಾಗ್ಯವು ದೊರೆಯದೆ ಹೋಯಿತು ! ಅಷ್ಟರೊಳಗೆ ಅವರು ಪರಂಧಾಮವನ್ನೈದಿದ್ದರು ! ಅವರೇ ಜ್ಯೇಷ್ಠ ಪುತ್ರರಿದ್ದುದರಿಂದ ಇಡಿಯ ಮನೆತನದ ಭಾರವೆಲ್ಲ ಅವರ ಹೆಗಲ ಮೇಲೆಯೇ ಬಿತ್ತು. ಚಿಕ್ಕ ವಯಸ್ಸಿನಲ್ಲಿಯೇ ತಮ್ಮ ತಂದೆಯವರಿಂದ ಬಂದ ಗುರುತರವಾದ ಹೊಣೆಗಾರಿಕೆಯನ್ನು ಧೈರ್ಯದಿಂದ ಹೊತ್ತುಕೊಂಡು ತಮ್ಮ ಹಾಗೂ ತಮ್ಮ ತಮ್ಮಂದಿರ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಮರು ವರ್ಷ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಮೇಲ್ತರಗತಿಯಲ್ಲಿ ಪಾಸಾದರು. ಅವರ ವಿದ್ವತ್ತನ್ನು ಕಂಡು ಮುಂಬಯಿಯಲ್ಲಿಯ "ಜಿ. ಟಿ. ಬೋರ್ಡಿಂಗ" ಎಂಬ ಹೆಸರಿನ ಉಚಿತ ಪ್ರಸಾದನಿಲಯವು ಅವರನ್ನಾಯ್ದುಕೊಂಡು ತನ್ನಲ್ಲಿಟ್ಟುಕೊಂಡಿತು. ಇದರಿಂದ ವಿಲ್ಸನ್ ಕಾಲೇಜದಲ್ಲಿ ಉಚ್ಚ ಶಿಕ್ಷಣವನ್ನು ಹೊಂದಲು ಅವರಿಗೆ ಬಹಳಷ್ಟು ಸಹಾಯವಾಯಿತು. ಅಲ್ಲಿ ಪ್ರತಿಭಾವಂತ ವಿದ್ಯಾರ್ಥಿಯೆಂಬ ಹೆಸರನ್ನು ಪಡೆದುಕೊಂಡು ಕ್ರಿಕೆಟ್, ಟೆನಿಸ್ ಮುಂತಾದ ಆಟಗಳನ್ನು ಆಸ್ಥೆವಹಿಸಿ ಆಡುತ್ತಿದ್ದರು. ತಮ್ಮ ಶರೀರವನ್ನು ಬಲಪಡಿಸಿಕೊಳ್ಳಲು ವ್ಯಾಯಾಮವನ್ನು ತಪ್ಪದೆ ಮಾಡುತ್ತ ಕುಸ್ತಿಗಳನ್ನು ಸಹ ಆಡುತ್ತಿದ್ದರು. ಕಾಲೇಜದ ವಿದ್ಯಾರ್ಥಿ ವೃಂದಕ್ಕೂ ಪ್ರಾಧ್ಯಾಪಕ ವರ್ಗಕ್ಕೂ ಬೇಕಾದವರಾಗಿದ್ದರು. ೧೯೧೭ನೆಯ ಇಸವಿಯಲ್ಲಿ ಅವರು ಭೌತಿಕ ಶಾಸ್ತ್ರ (Physics)ದಲ್ಲಿ ಬಿ.ಎಸ್‌ಸಿ ಪರೀಕ್ಷೆಯನ್ನು ಉಚ್ಚ ಪ್ರಥಮ ಶ್ರೇಣಿ (First Class Honours) ಯಲ್ಲಿ ಪಾಸಾದರು. ಆಗ ಅವರು ವಿಶ್ವವಿದ್ಯಾನಿಲಯದ ತರಬೇತಿಯ ತಂಡ (University Training Corps)ಕ್ಕೆ ವ್ಹಾಯಿಸರಾಯರ ಕಮಿಶನ್ಡ ಆಫೀಸರ (Viceroy's Commissioned Officer) ಎಂದೂ ವಿಲ್ಸನ್ ಕಾಲೇಜದಲ್ಲಿ "ದಕ್ಷಿಣಾ ಫೆಲೋ" ಎಂದೂ ನೇಮಕವನ್ನು ಹೊಂದಿದ್ದರು. ವಿಲಾಯತಿಗೆ ಹೋಗಿ ಆಯ್.ಸಿ.ಎಸ್. ಪರೀಕ್ಷೆಯ ಅಭ್ಯಾಸವನ್ನು ಕೈಕೊಳ್ಳಲು ಅವರಿಗೆ ಸ್ಕಾಲರಶಿಪ್ಪೊಂದು ದೊರೆತಿತ್ತು. ಆದರೆ, ಅವರ ಅಮ್ಮನವರು ವಿಲಾಯತಿಗೆ ಹೋಗಲು ತಮ್ಮ ಸಮ್ಮತಿಯನ್ನೀಯಲಿಲ್ಲವಾದುದರಿಂದ ಆ ವಿಚಾರವನ್ನು ಅಷ್ಟಕ್ಕೇ ಬಿಡಬೇಕಾದ ಪ್ರಸಂಗವು ಒದಗಿಬಂದಿತು.

ಸರಕಾರಿ ನೌಕರಿ ಮತ್ತು ರಾಜೀನಾಮೆ

ಅವರು ವಿಲ್ಸನ್ ಕಾಲೇಜದಲ್ಲಿ 'ಫೆಲೋ' ಆಗಿದ್ದಾಗ ಸರಕಾರದವರು ಅವರ ಯೋಗ್ಯತೆಯನ್ನೂ ಪ್ರೌಢಿಮೆಯನ್ನೂ ಗಣನೆಗೆ ತಂದುಕೊಂಡು ಪ್ರಾಂತಿಕ ನಾಗರಿಕ ಆಡಳಿತ (Provincial Civil Service)ಕ್ಕೆ ಅವರನ್ನು ನೇರವಾಗಿ ಆಯ್ದುಕೊಂಡು ಡಿಸ್ಟ್ರಿಕ್ಟ ಡೆಪ್ಯೂಟಿ ಕಲೆಕ್ಟರರೆಂದು ನೇಮಿಸಿದರು. ಬ್ರಿಟಿಶ್ ಹುದ್ದೇದಾರರು ಅವರನ್ನು ಮುಂಬಯಿಗೆ ಸಂದರ್ಶನಕ್ಕೋಸ್ಕರ ಕರೆದಾಗ "ನಿಮ್ಮನ್ನಾರಿಸದಿದ್ದರೆ, ನೀವೇನು ಮಾಡುವಿರಿ ?" ಎಂದು ಪ್ರಶ್ನವನ್ನು ಕೇಳಲು, "ಚಿಂತೆ ಇಲ್ಲ, ಈ ಜಗತ್ತು ನನಗೋಸುಗ ವಿಶಾಲವಾದದ್ದಿದೆ" ಎಂದು ಚಟ್ಟನೆ ಮಾರುತ್ತರವು ಅವರಿಂದ

ಬಂದಿತು. ಹನ್ನೆರಡು ವರ್ಷಗಳ ವರೆಗೆ ಬೇಸರಿಕೆಯಿಲ್ಲದೆ ನೌಕರಿ ಮಾಡಿ ಆಡಳಿತ ಯಂತ್ರದ ಒಳ ಹೊರಗು ಗಳನ್ನೂ ಅವುಗಳಿಂದ ಜನರ ಮೇಲಾಗುವ ಆಘಾತ ಗಳನ್ನೂ ಸ್ವಂತ ಅನುಭವದಿಂದ ಕೂಲಂಕಷವಾಗಿ ಮನನ ಮಾಡಿಕೊಂಡರು. ಈ ಅನುಭವದ ಹಿನ್ನೆಲೆಯೇ ಅವರಿಗೆ "ದಕ್ಷ ಆಡಳಿತಗಾರ"ರೆಂಬ ಬಿರುದನ್ನು ತಂದು ಕೊಡಲು ಕಾರಣೀಭೂತವಾಗಿದೆ. ಪರಕೀಯ ಸರಕಾರದಲ್ಲಿ ನೌಕ ರಿಯನ್ನು ಮಾಡುತ್ತಿದ್ದಾಗ್ಯೂ ಜನತೆಯ ಸೇವೆಯನ್ನು ಮಾಡುವದೇ ಅವರ ಧ್ಯೇಯವಾಗಿತ್ತು. ಆಗಿನ ಕಾಲ ದಲ್ಲಿ ಸಹ ಸರಕಾರದ ನೌಕರಿಯೆಂದರೆ ಜನತೆಯ ಸೇವೆ ಯೆಂದೇ ಅವರು ಭಾವಿಸಿದ್ದರು. ಅವರು ನೌಕರಿ ಮಾಡಿದ ಜಿಲ್ಹೆಗಳಲ್ಲೆಲ್ಲ ಒಳ್ಳೇ ಜನಪ್ರಿಯರಾಗಿ ಕೆಲಸ ಮಾಡಿದರು. ಅವರು ಜನಪ್ರಿಯರಾದುದೇ ಅವರಿಗೆ ಮುಳುವಾಯಿತು. ಅವರ ಲೋಕಪ್ರಿಯತೆಯನ್ನು ಸಹಿಸಲಾರದವರಾದ ಅವರ ವರಿಷ್ಠರು ಅವರ ಮೇಲೆ ರೇಗಿಗೆದ್ದು ಅವರು ಮಾಡಿದ ಪ್ರತಿಯೊಂದು ಕಾರ್ಯಕ್ಕೆ ಏನಾದರೊಂದು ಹೆಸ ರಿಟ್ಟು ಅದಕ್ಕೆ ಅಲ್ಲದ ಸಲ್ಲದ ಬಣ್ಣ ಬಳೆಯುವದರಲ್ಲಿಯೇ ಮಗ್ನರಾಗಿದ್ದರು. ಆವುದಾದರೊಂದು ಕಠಿಣ ಪ್ರಸಂಗ ದಲ್ಲಿ ಅವರನ್ನು ಹಿಡಿದು ಮನೆಗೆ ಕಳಿಸುವ ಹಂಚಿಕೆಯಲ್ಲಿ ದ್ದರು. ದಾರೀ ಕಾಯುತ್ತಿದ್ದ ಆ ಪ್ರಸಂಗವು ೧೯೩೦ ರಲ್ಲಿ ಗೋಧ್ರಾದಲ್ಲಿ ನಡೆದ ಹಿಂದೂ-ಮುಸ್ಲಿಮ್ ಗಲಭೆಗಳ ಕಾಲಕ್ಕೆ ಬಂದೊದಗಿತು. ಜಾತಿ-ಜಾತಿಗಳಲ್ಲಿಯ ಅಂತಃ ಕಲಹಗಳು ಪುನಃ ಎಂದೂ ತಲೆಯೆತ್ತದಂತೆ ಮಾಡ ಬೇಕೆಂಬ ಸದುದ್ದೇಶದಿಂದ ಆ ಗಲಭೆಗಳನ್ನು ಒಳ್ಳೇ ನಿರ್ದಾಕ್ಷಿಣ್ಯವಾಗಿ ಅಡಗಿಸಿದರು. ಅವರು ಕೈಕೊಂಡ ಶಿಸ್ತಿನ ಕ್ರಮಗಳು ಮೇಲಿನ ಅಮಲದಾರರಿಗೆ ಎಳ್ಳಷ್ಟೂ ಸೇರಿಕೆ ಯಾಗಲಿಲ್ಲೆಂಬುದು ಸ್ಪಷ್ಟವೇ ಇದೆ. ಅವರ ವಿರುದ್ಧ ತಕರಾರುಗಳು ಮುಂಬಯಿ ಸರಕಾರದ ವರೆಗೆ ಹೋದವು. ಅವರ ಶಿಸ್ತಿನ ಕ್ರಮಗಳು ಮುಂಬಯಿ ಸರಕಾರಕ್ಕೂ ಸಹ ಮನಸಿಗೆ ಬರಲಿಲ್ಲ. ನೌಕರಿಯಲ್ಲಿರಬೇಕೋ ಅಥವಾ ಬಿಡಬೇಕೋ ಎಂಬ ಸಮಸ್ಯೆಯು ಅವರ ತಲೆಯನ್ನು ಬಹಳಷ್ಟು ತಿನ್ನಲಿಕ್ಕೆ ಹತ್ತಿತು. ಮಹಾತ್ಮರು ಅಷ್ಟ ರೊಳಗೆ ಸವಿನಯ ಕಾಯಿದೆಭಂಗ ಚಳವಳಿಯನ್ನು ಹೂಡಿ ದ್ದರು. ನೌಕರಿಯಲ್ಲಿದ್ದು ಜನತೆಯ ಸೇವೆಯನ್ನು ಮಾಡುವದು ಅಸಂಭವವೆಂದು ಅವರಿಗೆ ಮನದಟ್ಟಾಯಿತು. ನೌಕರಿಯನ್ನು ಬಿಟ್ಟುಗೊಟ್ಟರೆ ತಮ್ಮ ಮನೆತನದ ಸ್ಥಿತಿ ಗತಿಯು ಏನಾಗಬಹುದೆಂಬುದರತ್ತ ಗಮನವೀಯದೆ ರಾಜೀನಾಮೆಯನ್ನು ಸಲ್ಲಿಸುವದೇ ವಿಹಿತವೆಂದು ಮನಸ್ಪೂ ರ್ತಿಯಾಗಿ ನಿರ್ಧರಿಸಿ ೧೯೩೦ನೆಯ ಇಸವಿ ಮೇ ತಿಂಗಳ ದಿನಾಂಕ ೧೮ ರಂದು ಅಹಮ್ಮದಾಬಾದದಲ್ಲಿ ನೌಕರಿಗೆ ರಾಜೀನಾಮೆಯನ್ನು ಕೊಟ್ಟು ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿದರು.

ಸ್ವಾತಂತ್ರ್ಯ ಸಂಗ್ರಾಮ

ಮುಂದೇ ಕೆಲವೇ ದಿನಗಳಲ್ಲಿ ಗುಜರಾತ ಪ್ರಾಂತೀಯ ಕಾಂಗ್ರೆಸ ಕಮೀಟಿಯ ಜನರಲ್ ಸೆಕ್ರೆಟರಿ ಯೆಂದು ಆಯ್ಕೆಯನ್ನು ಹೊಂದಿದರು. ಆ ಕಾಂಗ್ರೆಸ ಕಮೀಟಿಯಲ್ಲಿ ಶಿಸ್ತನ್ನು ಚಿಗುರಿಸಿ ಬೆಳೆಯಿಸಿದ ಶ್ರೇಯವು ತುಂಬಾ ಅವರಿಗೇ ಸಲ್ಲುತ್ತಿದೆ. ಆಗ ಅವರು ಸರದಾರ ಪಟೇಲರ ಬಲಗೈಯಾಗಿ ಕೆಲಸ ಮಾಡಿದರಾದುದರಿಂದ ಮೂರು-ನಾಲ್ಕು ಸಲ ಜೇಲನ್ನು ಕಾಣಬೇಕಾಯಿತು. ಅವರು ಹೆಚ್ಚು ಕಾಲ ಸೆರೆಮನೆಯಲ್ಲಿದ್ದದ್ದೆಂದರೆ ಸುಮಾರು ಮೂರು ವರ್ಷಗಳು—೧೯೪೨ರ ಅಗಸ್ಟ ತಿಂಗ ಳಿಂದ ೧೯೪೫ರ ಮಧ್ಯದ ವರೆಗೆ. ತುರಂಗದಲ್ಲಿದ್ದಾಗ ಜೇಲಿನ ಅಧಿಕಾರಿಗಳು ಅವರನ್ನು ಗೌರವದಿಂದ ಕಾಣುತ್ತಿ ದ್ದರಲ್ಲದೆ ರಾಜ್ಯಕೀಯ ಕೈದಿಗಳನ್ನು ಹೇಗೆ ನಡೆಸಿಕೊಳ್ಳ ಬೇಕೆಂಬುದರ ಬಗೆಗೆ ಅವರ ಸಲಹೆ-ಸೂಚನೆಗಳನ್ನು ಆಗಾಗ ಕೇಳಿಕೊಳ್ಳುತ್ತಿದ್ದರು. ಅಲ್ಲಿಯ ಶಿಸ್ತಿಗೆ ಎಳ್ಳಷ್ಟೂ ಭಂಗ ಬರದಂತೆ ವರ್ತಿಸಿ ಉಳಿದ ಕೈದಿಗಳಿಗೆ ಅವರು ಮಾದರಿಯಾಗಿದ್ದರು. ಜೇಲಿನಲ್ಲಿ ಸಹ ಅವರು ಸತ್ಯಾ ಗ್ರಹಿಯಾಗಿಯೇ ಉಳಿದರು. ಪ್ರತಿಬಂಧಿಸಿದ್ದ ಪತ್ರಿಕೆಗ ಳನ್ನಾಗಲಿ ಇಲ್ಲವೆ ವರ್ತಮಾನಪತ್ರಗಳನ್ನಾಗಲಿ ಕ್ರಾಂತಿ ಕಾರಕರಾದ ರಾಜ್ಯಕೀಯ ಕೈದಿಗಳು ಕದ್ದು ಮುಚ್ಚಿ ತಂದು ಓದುತ್ತಿದ್ದರು. ಆದರೆ, ಶ್ರೀಯುತರು ಅವುಗಳ ನ್ನೆಂದೂ ಮುಟ್ಟುತ್ತಿದ್ದಿಲ್ಲ. ಒಟ್ಟಿನಲ್ಲಿ, ಜೇಲಿನ ಶಿಸ್ತಿಗೆ ಕಲಂಕ ತರುವಂತಹ ಕೃತಿಯನ್ನು ಅವರು ಒಂದನ್ನೂ ಸಹ ಮಾಡಲಿಲ್ಲ.

ಮಂತ್ರಿಮಂಡಲಗಳಲ್ಲಿ ಸೇವೆ

೧೯೩೭ರಲ್ಲಿ ಕಾಂಗ್ರೆಸ್ಸು ಚುನಾವಣೆಯ ರಂಗಕ್ಕಿಳಿ ಯಿತಷ್ಟೇ. ಆಗ ಶ್ರೀಯುತರು ತಮ್ಮ ಸ್ವಂತ ಮತಕ್ಷೇತ್ರ

ವಾದ ಬುಲ್ಸಾರ ಭಾಗದಿಂದ ಅತ್ಯಂತ ಬಹುಮತದಿಂದ ಚುನಾಯಿಸಲ್ಪಟ್ಟರು. ಖೇರ ಮಂತ್ರಿಮಂಡಲದಲ್ಲಿ ಕಂದಾಯ ಶಾಖೆಯ ಮಂತ್ರಿಪದವು ಅವರಿಗೆ ಕೊಡಲ್ಪಟ್ಟಿತು. ಬಾರ್ಡೋಲಿ ಸತ್ಯಾಗ್ರಹದಲ್ಲಿ ಜಮೀನುಗಳನ್ನು ಕಳಕೊಂಡಿದ್ದ ರೈತರಿಗೆಲ್ಲ ಅವರವರ ಜಮೀನುಗಳನ್ನು ಅವರವರಿಗೆ ತಿರುಗಿಕೊಡುವ ವ್ಯವಸ್ಥೆಯನ್ನು ಮಾಡಿದ್ದರ ಯಶಸ್ಸು ಸಂಪೂರ್ಣವಾಗಿ ಅವರಿಗೇ ಸಲ್ಲುತ್ತಿದೆ. ೧೯೪೬ ರಲ್ಲಿ ನಡೆದ ಚುನಾವಣೆಗಳಲ್ಲಿ ಬುಲ್ಸಾರ ಭಾಗದಿಂದ ಪುನಃ ಆಯ್ಕೆಯನ್ನು ಹೊಂದಿ ಪುನಃ ಖೇರ ಮಂತ್ರಿ ಮಂಡಲದಲ್ಲಿ ಕಂದಾಯ ಮತ್ತು ಗೃಹ ಶಾಖೆಗಳ ಮಂತ್ರಿಗಳಾದರು. ಅಂದಿನಿಂದ ಮುಂಬಯಿ ರಾಜ್ಯದ ಮಂತ್ರಿ ಮಂಡಲದಲ್ಲಿ ಅವರದೇ ಮೇಲುಗೈಯಾಗಿತ್ತು. ಅವರು ಯಾರ ಹಂಗಿಗೊಳಗಾಗದೆ ಯಾರ ಭಿಡೆ-ಭಾರಗಳಿಗೆ ಮನಸೋಲದೆ ಸ್ವತಂತ್ರ ರೀತಿಯಿಂದಲೂ ಖಂಡತುಂಡಾಗಿಯೂ ಕೆಲಸ ಮಾಡುತ್ತಿದ್ದರಾದುದರಿಂದ ಅವರ ಬಗೆಗೆ ಎಷ್ಟೋ ಜನರು ತಪ್ಪು ಕಲ್ಪನೆಗಳನ್ನು ಮಾಡಿಕೊಂಡಿದ್ದರಲ್ಲೇನಾಶ್ಚರ್ಯ? ಟೆನನ್ಸಿ ಕಾಯಿದೆ, ಜೇಲಿನ ಸುಧಾರಣೆಗಳು, ಕಾರ್ಯಾಂಗದಿಂದ ನ್ಯಾಯಾಂಗವನ್ನು ಬೇರ್ಪಡಿಸಿದುದು, ಪಾನಪ್ರತಿಬಂಧ, ಮುಂತಾದ ಎಷ್ಟೋ ಲೋಕಪ್ರಿಯ ಕಾಯಿದೆಗಳು ಅವರಿಂದಲೇ ಹೊರಬಿದ್ದವು. ಆ ಲೋಕೋಪಯೋಗಿ ಕಾಯಿದೆಗಳನ್ನು ಟೀಕಿಸುತ್ತಿದ್ದವರೆಲ್ಲ ಈಗ ತಮ್ಮ ತಪ್ಪನ್ನು ತಾವೇ ಅರಿತುಕೊಂಡು ತಮ್ಮ ಅಭಿಪ್ರಾಯಗಳನ್ನು ತಿದ್ದಿಕೊಳ್ಳಲು ಪ್ರಾರಂಭಿಸಿದ್ದಾರೆ. ಆದರೆ, ೧೯೫೨ರಲ್ಲಿ ಜರುಗಿದ ಸಾರ್ವತ್ರಿಕ ಚುನಾವಣೆಯಲ್ಲಿ ಬುಲ್ಸಾರ ಭಾಗದಲ್ಲಿ ಹುರಿಯಾಳಾಗಿ ನಿಂತಾಗ ಅವರಿಗೆ ಸೋಲು ಪ್ರಾಪ್ತವಾದದ್ದು ದುರ್ದೈವದ ಸಂಗತಿ! ಮಂತ್ರಿ ಮಂಡಲದ ಸದಸ್ಯರೆಲ್ಲ ಅವರೇ ಮುಖ್ಯ ಮಂತ್ರಿಗಳಾಗಬೇಕೆಂಬ ನಿರ್ಧಾರಕ್ಕೆ ಬಂದದ್ದರಿಂದ ಅವರು ಮುಖ್ಯ ಮಂತ್ರಿಯ ಪದವಿಯನ್ನು ವಹಿಸಬೇಕಾಯಿತು. ನಮ್ಮ ಘಟನೆಯ ನಿಯಮದಂತೆ ಮುಂದೆ ಆರು ತಿಂಗಳುಗಳಲ್ಲಿಯೇ ಅಹಮ್ಮದಾಬಾದ ಮತಕ್ಷೇತ್ರದಿಂದ ಆಯ್ಕೆಯನ್ನು ಹೊಂದಿದರು. ಮುಖ್ಯ ಮಂತ್ರಿಗಳಾದ ಮೇಲೆ ಮತ್ತೆಷ್ಟೋ ಸಾರ್ವಜನಿಕ ಹಿತದ ಕಾಯಿದೆಗಳನ್ನು ಪಾಸು ಮಾಡಿಸಿಕೊಂಡು ಅಮಲಿನಲ್ಲಿ ತರಹತ್ತಿದ್ದಾರೆ. ತಮ್ಮ ಮನಸಿಗೆ ಯೋಗ್ಯವೆಂದೂ ಸತ್ಯವೆಂದೂ ತೋರಿದ ಸಂಗತಿಯನ್ನು ಅವರು ಕಾರ್ಯರೂಪಕ್ಕೆ ತರದೆ ಬಿಡುವವರಲ್ಲ. ಇದರಿಂದ ಎಷ್ಟೋ ಜನರು ಅವರನ್ನು ಸರ್ವಾಧಿಕಾರಿಯೆಂದು ಕರೆಯುವದುಂಟು. ಅಂತಹವರಿಗೆ ಅವರ ಸರಳ ಉತ್ತರವು ಇಂತಿದೆ— "ನಾನು ಸರ್ವಾಧಿಕಾರಿಯಾಗಿದ್ದರೆ, ನನ್ನನ್ನು ಹಾಗೆ ಕರೆಯುವ ಧೈರ್ಯವು ನಿಮಗೆ ಬರುತ್ತಿದ್ದಿಲ್ಲ."

ಕಟ್ಟುನಿಟ್ಟಿನ ಜೀವನ

ಗಾಂಧೀಜಿಯವರ ತತ್ತ್ವಗಳನ್ನು ಪಾಲಿಸುವದರಲ್ಲಿ ಅವರದು ಎತ್ತಿದ ಕೈ. ಸಾದಾ ಜೀವನ, ಉನ್ನತ ವಿಚಾರ, ಇವು ಅವರ ಧ್ಯೇಯಗಳು. ಉಪ್ಪು ತಿನ್ನುವದನ್ನೇ ಬಿಟ್ಟುಗೊಟ್ಟು ಆದರಂತೆ ನಾಲ್ಕು ವರ್ಷಗಳ ವರೆಗೆ ಕಾಲಹರಣ ಮಾಡಿದರು. ಭಾರತಕ್ಕೆ ಸ್ವಾತಂತ್ರ್ಯವು ಪ್ರಾಪ್ತವಾಗುವ ವರೆಗೆ ಚಾಪೆಯ ಇಲ್ಲವೆ ತಟ್ಟಿನ ಮೇಲೆ ಮಲಗುವ ವ್ರತವನ್ನು ಕೈಕೊಂಡರು. ಸ್ವಾತಂತ್ರ್ಯವು ಪ್ರಾಪ್ತವಾದನಂತರ ಒಮ್ಮೆ ಗಾದಿಯ ಮೇಲೆ ಮಲಗಿ ಪ್ರಯೋಗ ಮಾಡಿ ನೋಡಿದರು. ಆದರಿಂದ ಅವರಿಗೆ ನಿತ್ಯದ ಗಾಢ ನಿದ್ರೆಯು ಹತ್ತಲಿಲ್ಲವಾದುದರಿಂದ ಅದನ್ನು ಸಂಪೂರ್ಣವಾಗಿ ಬಿಟ್ಟಿದ್ದಾರೆ. ವಾರದಲ್ಲಿ ಒಂದು ದಿವಸ ಉಪವಾಸ ಮಾಡುತ್ತಾರೆ. ಸತ್ಯಾಗ್ರಹದ ಪ್ರಚಾರದ ಕಾಲಕ್ಕೆ ಸಕ್ಕರೆ ಮತ್ತು ಸೀ ಪಕ್ವಾನ್ನಗಳನ್ನು ಊಟ ಮಾಡುವದನ್ನು ವರ್ಜಿಸಿದರು. ಗೋದಿಯು ಶ್ರೀಮಂತರ ಆಹಾರವಾದುದರಿಂದ ಅದನ್ನು ಸಹ ತೊರೆದು, ಸಾಮಾನ್ಯ ಜನರ ಆಹಾರವಾದ ಜೋಳ ಇಲ್ಲವೆ ಸಜ್ಜೆಯ ರೊಟ್ಟಿಯನ್ನು ತಿನ್ನುತ್ತ, ಗುಜರಾತ ಸೌರಾಷ್ಟ್ರಗಳಲ್ಲಿಯ ಹಳ್ಳಿಗಳನ್ನೆಲ್ಲ ಸುತ್ತಾಡುತ್ತ, ಗಾಂಧೀಜಿಯವರ ಉಪದೇಶಗಳನ್ನು ಹಳ್ಳಿಗರಿಗೆಲ್ಲ ಬೀರಿದರು. ಈ ವ್ರತವನ್ನು ಅವರು ರೇಶನ್ ಬರುವ ವರೆಗೆ ಸಾಗಿಸಿದರು. ರೇಶನ್ ಬಳಿಕೆಯಲ್ಲಿ ಬಂದ ನಂತರ ಅವರು ಅದನ್ನು ಬಿಡಲೇಬೇಕಾಯಿತು. ಒಟ್ಟಿನಲ್ಲಿ ಚಿಕ್ಕಾರಭ್ಯದಿಂದ ಅವರ ಜೀವನದಲ್ಲಿ ಶಿಸ್ತು ಇದೆ, ಅವರ ನರ-ನಾಡಿಗಳಲ್ಲಿ ಶಿಸ್ತು ಹರಿದಾಡುತ್ತಿದೆ. ತಮ್ಮ ತಮ್ಮಂದಿರಿಗೂ ತಂಗಿಗೂ ಸಹ ಶಿಸ್ತನ್ನು ಕಲಿಸಿರುವರು. ಭಗವದ್ಗೀತೆಯ ಮೇಲೆ ಅವರ ಭಕ್ತಿಯು ಬಹಳ. ಅದರ ಪ್ರಭಾವವು ಅವರ ಮೇಲೆ ಬೀರಿದುದು ಅಷ್ಟಿಷ್ಟಲ್ಲ. ಅದರ ಪ್ರಭಾವದಿಂದಲೇ ಅವರು ತಮ್ಮ

ಮೇಲೆ ಎಂತೆಂತಹ ಹೃದಯದ್ರಾವಕ ಪ್ರಸಂಗಗಳು ಬಂದರೂ ಸಹ ಎದೆಗೆಡದೆ ಶಾಂತ ಚಿತ್ತದಿಂದ ಅವುಗಳನ್ನೆಲ್ಲ ಎದುರಿಸಿದರು. ಅವರ ಮನೋದಾರ್ಢ್ಯ, ಎದೆಗಾರಿಕೆ, ಜಿಗಟುತನ ಇವು ನಿಜಕ್ಕೂ ಹೊಗಳತಕ್ಕಂತಹವುಗಳಿವೆ.

ಉಪಸಂಹಾರ

ಇಂತಪ್ಪ ಮುರಾರಜಿಯವರು ರಾಜ್ಯಗಳ ಪುನರ್ಘಟನೆಯ ಈ ಸಂಧಿಕಾಲದಲ್ಲಿ ಮುಖ್ಯಮಂತ್ರಿಗಳಾಗಿ ನಮ್ಮ ರಾಜ್ಯಕ್ಕೆ ದೊರೆತಿದ್ದುದು ಸುದೈವವೆಂದೇ ಭಾವಿಸಲಾಗಿದೆ. ಅವುದಾದರೊಂದು ನೆವಮಾಡಿಕೊಂಡು ಕೊಲೆ-ಸುಲಿಗೆಗಳನ್ನು ಕೈಕೊಳ್ಳುವ ಗುಂಡಾ ಜನರನ್ನು ನಿರ್ದಾಕ್ಷಿಣ್ಯವಾಗಿ ಬಗ್ಗು ಬಡಿಯಲಾಗುವದೆಂದು ಮೊನ್ನೆ ಮೊನ್ನೆ ಅಸೆಂಬ್ಲಿಯಲ್ಲಿ ಘಂಟಾಘೋಷವಾಗಿ ಸಾರಿದ್ದಾರೆ. ಆದರೆ, ಘಟನಾತ್ಮಕವಾದ ಚಳವಳಿಗೆ ಮಾತ್ರ ಮುಕ್ತದ್ವಾರವಿದೆಯೆಂದೂ ಅದೇ ಉಸುರಿನಲ್ಲಿ ಒತ್ತಿ ಹೇಳಿದ್ದಾರೆ. ಪಾನಪ್ರತಿಬಂಧಕ್ಕೋಸ್ಕರ ಬಡಬಗ್ಗರೂ ಕೂಲಿಕಾರರೂ ಜನಸಾಮಾನ್ಯರೂ ಅವರನ್ನು ಬಹಳಷ್ಟು ದಿನಾಲು ಹರಸುವದುಂಟು. ಬಡತನದಲ್ಲಿ ಮುಳುಗೇಳುತ್ತಿದ್ದ ಕುಡುಕರು ಕುಡಿಯುವದನ್ನು ಬಿಟ್ಟಿದ್ದರಿಂದ ಅವರಿಗೂ ಅವರ ಹೆಂಡರು ಮಕ್ಕಳಿಗೂ ಹೊಟ್ಟೆತುಂಬ ಅನ್ನ ಮೈತುಂಬ ಬಟ್ಟೆ ಈಗ ಸಿಗಲಿಕ್ಕೆ ಹತ್ತಿವೆಯಾದುದರಿಂದ ಆ ಕಾಯಿದೆಯ ಸುಪರಿಣಾಮವು ಈಗ ಜನತೆಗೆ ಮನದಟ್ಟಾಗುತ್ತ ನಡೆದಿದೆ. ಕುಡುಕತನಕ್ಕೆ ಮನಸೋತ ಹಲವರು ತಮ್ಮ ಕೈ ಸಾಗಿದಲ್ಲಿ ಕಳ್ಳ ಭಟ್ಟಿ ಸೆರೆಯನ್ನು ತಯಾರಿಸಿ ಕದ್ದು ಮುಚ್ಚಿ ಕುಡಿಯುವದು ಕಂಡು ಬರುತ್ತಿದ್ದರೂ ಈ ಕಾಯಿದೆಯ ಪ್ರಭಾವದಿಂದ ಅವರ ಮಕ್ಕಳು-ಮರಿಗಳು ಕುಡುಕರಾಗಲಾರರೆಂಬುದನ್ನು ಮಾತ್ರ ಧೈರ್ಯದಿಂದ ಹೇಳಬಲ್ಲೆವು. ಶ್ರೀಯುತರಿಂದೆಸಗಲ್ಪಟ್ಟ ಇದೊಂದು ಬಹು ದೊಡ್ಡ ಸಾಮಾಜಿಕ ಸುಧಾರಣೆಯೆಂದೇ ನಮ್ಮ ನಮ್ರ ಮತ. ಕಾಂಗ್ರೆಸ್ಸು ಇದಕ್ಕೋಸ್ಕರ ಜನತೆಗೆ ಎಂದಿನಿಂದಲೋ ವಚನಬದ್ಧವಾಗಿತ್ತು. ಶ್ರೀಯುತರು ಕಾಂಗ್ರೆಸ್ಸದ ವತಿಯಿಂದ ಅದನ್ನು ನಿರ್ವಹಿಸಿ ಕಾಂಗ್ರೆಸ್ಸನ್ನು ವಚನಮುಕ್ತವನ್ನಾಗಿ ಮಾಡಿದ್ದಲ್ಲದೆ ತಾವೂ ಸಹ ಕೃತಕೃತ್ಯರಾಗಿದ್ದಾರೆ. ಸಿನೇಮಾ-ನಾಟಕ ಗೃಹಗಳಲ್ಲಿ, ಸಾರ್ವಜನಿಕ ವಾಹನಗಳಲ್ಲಿ, ತಂಬಾಕವನ್ನು ಸೇದುವದು ಸಕ್ತಮನಾಯಿಯಿದೆ. ಚಹಾ-ಕಾಫಿ ಅಂಗಡಿಗಳು, ವಿಶ್ರಾಂತಿ ಗೃಹಗಳು, ಮನೋರಂಜನ ಗೃಹಗಳು, ರಾತ್ರಿಯಲ್ಲಿ ಇಂತಿಷ್ಟೇ ವೇಳೆಯ ವರೆಗೆ ತೆರೆದಿಡಬೇಕೆಂಬ ನಿಯಮವಾಗಿದೆ. ಅಂಗಡಿಕಾರರು ವಾರದಲ್ಲಿ ಒಂದು ದಿನ ಅಂಗಡಿಯನ್ನು ಮುಚ್ಚಬೇಕೆಂಬ ಕಾಯಿದೆಯಾಗಿದೆ. ಇವರು ಮುಖ್ಯ ಮಂತ್ರಿ ಪದವಿಯನ್ನು ವಹಿಸಿಕೊಂಡ ನಂತರ ಇಂತಹ ಎಷ್ಟೋ ಸಾರ್ವಜನಿಕ ಹಿತದ ಕಾಯಿದೆಗಳು ಜಾರಿಯಲ್ಲಿ ಬಂದಿವೆ. ಇನ್ನೂ ಹೆಚ್ಚಿಚ್ಚಾಗಿ ಲೋಕೋಪಯೋಗಿ ಕಾರ್ಯಗಳು ಅವರಿಂದ ನೆರವೇರಲೆಂದೂ ಹಾಗೆ ಆಗಲು ಅವರಿಗೆ ದೇಹಾರೋಗ್ಯವನ್ನು ದಯಪಾಲಿಸಲೆಂದೂ ಆ ದಯಾಘನನಾದ ಪರಮಾತ್ಮನನ್ನು ಪ್ರಾರ್ಥಿಸುತ್ತೇವೆ.

— ಜಯ ಹಿಂದ —

೧೯೫೭ನೆಯ ಇಸವಿಯಿಂದ ಪ್ರಾರಂಭವಾಗುವ
ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ
ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ
ಶೇಲಾರ ಕೃತ
ಪ್ರಾಥಮಿಕ ಭೂಮಿತಿ
[ಕ್ಷೇತ್ರಫಲ ಘನಫಲ ಸಹಿತ]
೪ ರಿಂದ ೭ನೆಯ ವರ್ಗದ ವರೆಗಿನ
ವಿಷಯವನ್ನೆಲ್ಲ ಒಳಗೊಂಡಿದೆ.
ಬೆಲೆ: ೧ರೂ. ೮ಆಣೆ ಮಾತ್ರ
ದೊರೆಯುವ ಸ್ಥಳ:-
ಸಾಯಿ ಪಬ್ಲಿಶಿಂಗ್ ಹಾವುಸ್,
ವಿಜಯ ರೋಡ, ಧಾರವಾಡ.

ಸುಗ್ಗಿಯ ಸಂಪ್ರದಾಯಗಳು

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಲೇಖಕರು : ಡಾ. **ಬಿ. ಎಸ್. ಗದ್ದಗಿಮಠ, ಎಮ್. ಎ., ಪಿಎಚ್. ಡಿ.**

ಕ್ರಿ. ಶ. ೧೨ ನೆಯ ಶತಮಾನವು ಲಿಂಗಾಯತ ಮತದ ಏಳಿಗೆಯ ಕಾಲವಾದರೂ ಕೊನೆಯು ಈ ಮತಕ್ಕೆ ಸಂಕಟ ಕಾಲವಾಗಿ ಸಂಭವಿಸಿತು. ರಾಜ್ಯದಲ್ಲಿ ಅನಾಚಾರವು ಹೆಚ್ಚಾಯಿತು. ಸಹೋದರ ಮತಗಳು ಅಸೂಯೆ ಪಟ್ಟು ಈ ಮತದ ಮೇಲೆ ಸೇಡು, ಕುಸುಸು ತೀರಿಸಲು ಪ್ರಾರಂಭ ಮಾಡಿದವು. ಲೋಕವು ಹದಗೆಟ್ಟು ಪಾಪವು ಹೆಚ್ಚಾಗಹತ್ತಿತು. ಭಕ್ತಿ ಭಂಡಾರಿ ಬಸವಣ್ಣನವರು ಇದನ್ನೆಲ್ಲ ನೋಡಲಾರದೆ ತನ್ನ ಗುರುವಿನ ಏಕಾಂತ ಸ್ಥಳವಾದ ಕಪ್ಪಡಿ ಸಂಗಮಕ್ಕೆ ತೆರಳಿದರು. ಮುಂದೆ ವಾತಾವರಣವೇ ಬದಲಾಯಿತು. ಭರದಿಂದ ಹಬ್ಬುವ ಲಿಂಗಾಯತ ಮತಕ್ಕೆ ಸಹೋದರ ಮತಗಳು ಕಂಟಕವಾದುವು. ಕಾಯಕವೇ ಹೆದ್ದಾರಿಯಾದ ಹೊಸ ಮತವು ಸಂಪತ್ತುಳ್ಳದ್ದಾಗಿ ಆಗ ಬೆಳಕಿಗೆ ಬಂದಿತ್ತು. ಧನ-ಧಾನ್ಯ ಸಂಪನ್ನರಾದ ಈ ಮತದ ಅನುಯಾಯಿಗಳನ್ನು ನೋಡಿ ಸಹೋದರ ಮತಗಳು ಅಸೂಯೆಪಟ್ಟು ಈ ಮತವನ್ನು ಬಗ್ಗುಬಡಿಯುವ ಸಮಯವನ್ನು ಕಾಯುಹತ್ತಿದುವು. ಈ ಪ್ರಸಂಗದಲ್ಲಿ ವೈದಿಕಮತವು ಹೂಡಿದ ಕುಟಿಲ ತಂತ್ರವು ಲಿಂಗಾಯತ ಮತದ ಇತಿಹಾಸದಲ್ಲಿ ಮಹಾಕಾರಸ್ಥಾನವೆಂದು ಹೇಳಬಹುದು. ಬ್ರಾಹ್ಮಣರು ಕೊಂಡೆಯರಾಗಿ ಬಿಜ್ಜಳರಾಯನಿಗೆ ದೂರು ಹೇಳಿದರು. ಜೈನರು ಕಿವಿಗೊಟ್ಟು ಅದಕ್ಕೆ ಬೆಂಬಲವಿತ್ತರು. ಹರಳಯ್ಯ ಮಧುವಯ್ಯರ ಬೀಗತನದ ಪ್ರಸಂಗವು ರಾಜ್ಯದಲ್ಲಿ ಗೊಂದಲವೆಬ್ಬಿಸಿತು. ರಾಜ್ಯ ಕ್ರಾಂತಿಯಾಗಿ ಬಿಜ್ಜಳನ ವಧೆಯಾಯಿತು.

> ಬಿಜ್ಜಳನ ವಧೆಯಾಯ್ತು ಹೆಜ್ಜೆ ಮೀರಿತು ನಾಡು
> ಕಜ್ಜ ಹದಗೆಟ್ಟು ಶಿವಶರಣ । ರೂಳಿಗವು
> ಸಜ್ಜುಗೇಡಾಗಿ ಊರ್ಬಿಟ್ಟು ‖ ನೇ. ಅ.

ಅನೇಕ ಜಂಗಮರು ಕಾದು ಮಡಿದರು. ಕೆಲವರು ತಂಡು ತಂಡಾಗಿ ಉಳಿವೆಯ ಕಾಡ ಸೇರಿದರು. ಬೇರೆ ಕೆಲವರು ಶ್ರೀಶೈಲ ಸೇರಿದರು. ಉಳಿದವರು ಕರ್ನಾಟಕ ಹಳ್ಳಿಗಳನ್ನು ಸೇರಿ ಗುಪ್ತವಾಗಿ ಇರ ಹತ್ತಿದರು. ಲಿಂಗಾಯತ ಮತಕ್ಕೆ ಎಲ್ಲ ಕಡೆಯಿಂದಲೂ ಸಹಾಯವು ತಪ್ಪಿತು. ಶಿವಶರಣರು ದಿಕ್ಕಾಪಾಲಾದರು. ಇಷ್ಟಾಗುವುದರೊಳಗೆ ಬ್ರಾಹ್ಮಣ ಧರ್ಮಾಧಿಕಾರಿಗಳು ರಾಜಾಶ್ರಯದಲ್ಲಿ ಹುದ್ದೆ ಹೊಂದಿದ್ದರು. ರಾಜ್ಯದಲ್ಲಿ ಒಕ್ಕಲಿಗನ ಸಂಪತ್ತನ್ನು ಕಂಡು ಈ ಜನರು ತಮ್ಮ ಉದರ ಪೋಷಣೆಗೆ ಅವನ ಗಳಿಕೆಯಲ್ಲಿ ಕೈಹಾಕಿದಂತೆ ಕಾಣುತ್ತದೆ. ರಾಜಬಲದಿಂದ ಒಕ್ಕಲಿಗನ ಉದ್ಯೋಗದಲ್ಲಿ ಅನೇಕ ಬದಲಾವಣೆಗಳನ್ನು ಮಾಡಿ ಅವುಗಳನ್ನು ಸ್ವೀಕರಿಸಲು ಇವರು ಜುಲುಮೆ-ಒತ್ತಾಯಗಳನ್ನು ಮಾಡಿದ್ದಾರೆ. ಅಸಹಾಯಕರಾದ ಅನೇಕ ಒಕ್ಕಲಿಗರು ಬ್ರಾಹ್ಮಣರು ಮಾಡಿದ ಅನೇಕ ಬದಲಾವಣೆಗಳಿಗೆ ಉಪಾಯವಿಲ್ಲದೆ ಶರಣು ಹೋಗಬೇಕಾಯಿತು. ಹೀಗಾದರು ಅವರು ತಮ್ಮ ಕಾಯಕ ಧರ್ಮವಾದ ವೀರಶೈವ ಧರ್ಮವನ್ನು ಕಡೆಯವರೆಗೂ ಬಿಡಲಿಲ್ಲ. ಬ್ರಾಹ್ಮಣರಿಗೆ ಬೇಕಾದದ್ದು ಒಕ್ಕಲಿಗನ ಧರ್ಮವಲ್ಲ; ತಮ್ಮ ಉದರ ಪೋಷಣೆ. ಅವನು ತಮ್ಮ ದಾಸನಾಗಿ ಬೇಡಿದ್ದನ್ನು ದುಡಿದು ಕೊಟ್ಟರೆ ಸಾಕಾಗಿತ್ತು. ಅದು ಅವರಿಗೆ ಒಕ್ಕಲಿಗನಿಂದ ಸಹಜವಾಗಿ ದೊರೆಯಲು ಬ್ರಾಹ್ಮಣರು ಅವನ ಧರ್ಮದಲ್ಲಿ ಕೈಹಾಕುವ ಹವ್ಯಾಸಕ್ಕೆ ಹೋದಂತೆ ಕಾಣುವುದಿಲ್ಲ. ಕಾರಣ ಕರ್ನಾಟಕದ ಯಾವ ಭಾಗದಲ್ಲಿಯೂ ಬ್ರಾಹ್ಮಣರು ಒಕ್ಕಲುತನವನ್ನು ಮಾಡುವುದು ಕಂಡು ಬರುವುದಿಲ್ಲ. ಅರಸರಿಂದ ದತ್ತಿ-ದೇಣಿಗೆಗಳನ್ನು ಪಡೆದು ಜಮೀನದಾರರಾಗಿ ಬಹಳ ಜನರಿರುವುದು ಎಲ್ಲರ ನಿದರ್ಶನಕ್ಕೆ ಬಂದರೆ ಸಾಕು. ಇವರು ತಮ್ಮ ಕೈ ನಡೆಯುವಾಗ ಮಾಡಿದ ಮುಖ್ಯ ಬದಲಾವಣೆಯೇ ಸುಗ್ಗಿಯ ಕಣದಲ್ಲಿ ಈಗ ನಮಗೆ ಕಂಡುಬರುವ 'ಬೂದ'.

ಶಿವಶರಣರ ನಂತರ ಬ್ರಾಹ್ಮಣರು ರಾಜಬಲದಿಂದ 'ಸುಗ್ಗಿಯು' ಒಕ್ಕಲಿಗನು ಮಾಡುವ ಯಜ್ಞವೆಂದು ಒಕ್ಕಲಿಗನ ಮೇಲೆ ಒತ್ತಾಯ ತಂದರು. ಸುಗ್ಗಿಯೇ 'ದಾಸೋಹ'ವೆಂದೂ ಅದರ ಆರಾಧನೆಗೆ ಗುರುವು (ಪ್ರಭುದೇವ) ಬುದ್ಧಿವಂತಲಿಂಗನೆಂದೂ ಒಕ್ಕಲಿಗನು ಶಿವಶರಣರ ಕಾಲದಿಂದ ಆಚರಿಸುತ್ತ ಬಂದ ಸಂಪ್ರದಾಯವನ್ನು ಕಿತ್ತೊಗೆದು ತಾವು ಮಾಡಿದ ಹೊಸ ಬದಲಾವಣೆಯನ್ನು ಪ್ರತಿಪಾದಿಸಹತ್ತಿದರು. 'ಬುದ್ಧಿವಂತಲಿಂಗ'ನನ್ನು ಬದಲು ಮಾಡಿ ಅದರ ಬದಲಾಗಿ ಅದನ್ನು 'ಬೂದ'ನೆಂದು ಕರೆದು ಈ ಬೂದಾಚಾರ್ಯನು ಸುಗ್ಗಿಯೆಂಬ ಯಜ್ಞ ಮಾಡುವ ಪುರೋಹಿತನೆಂದೂ ವೀರಶೈವ ವಿರಕ್ತ ಮಠಕ್ಕೆ ದಾಸೋಹದ ಸಲುವಾಗಿ ಸಲ್ಲತಕ್ಕ ಈ ಬುದ್ಧಿವಂತ ಲಿಂಗನ ರಾಶಿಯು ಈಗ ಬ್ರಾಹ್ಮಣರಿಗೆ ಸಲ್ಲತಕ್ಕದ್ದೆಂದೂ ಬಲಾತ್ಕಾರ ಮಾಡಿ ಅದನ್ನು ಕಸಿದುಕೊಂಡು ಕೆಲಕಾಲ ಭೋಗಿಸಿದಂತೆ ಕಂಡುಬರುವುದು. ಕರ್ನಾಟಕದಲ್ಲಿ ಈಗಲೂ ಕಂಡುಬರುವ ಈ ಸಂಪ್ರದಾಯಗಳ ನಿಜಸ್ಥಿತಿಗಳೇ ಇದಕ್ಕೆ ಬಲವಾದ ಸಾಕ್ಷಿ. ಎಲ್ಲರ ಆಶ್ರಯ ತಪ್ಪಿದ ಲಿಂಗವಂತ ಒಕ್ಕಲಿಗರು ಅರಸನ ಬಲದ ಮೂಲಕ ಬ್ರಾಹ್ಮಣರಿಗೆ ಅಂಜಿ 'ಬುದ್ಧಿವಂತ ಲಿಂಗ'ನ ರಾಶಿಯನ್ನು ಬೂದಾಚಾರ್ಯನ ರಾಶಿಯೆಂದು ಅವರಿಗೆ ಕೊಡಹತ್ತಿದರು. ಕೆಲಕಾಲ ಬುದ್ಧಿವಂತ ಲಿಂಗನ ರಾಶಿಯು ಹಳ್ಳಿಯ ದಾಸೋಹ ಮಠಕ್ಕೆ ತಪ್ಪಿತು. ವೀರಶೈವ ಮಠಗಳು ತಮ್ಮ ಕಾಲಮೇಲೆಯೇ ನಿಲ್ಲಬೇಕಾಯಿತು. ಇಷ್ಟಕ್ಕೆ ಬ್ರಾಹ್ಮಣರು ತೃಪ್ತರಾದಂತೆ ಕಾಣುವುದಿಲ್ಲ. ಶಿವಶರಣರ ನಂತರ ವೈಷ್ಣವ ಧರ್ಮವನ್ನು ಜನಪದದಲ್ಲಿ ಹಬ್ಬಿಸಬೇಕೆಂದು ಅವರ ಹೆಜ್ಜೆಯಲ್ಲಿಯೇ ಕಾಲಿಟ್ಟ ವೈಷ್ಣವದಾಸರು ದಾಸಕೂಟಗಳನ್ನು ಸ್ಥಾಪಿಸಿ ತಮ್ಮ ಸೇವೆಗೆ 'ದಾಸ'ರೆಂಬ ಜನರ ಪಂಗಡವನ್ನು ಏರ್ಪಡಿಸಿದ್ದು ದಾಸಕೂಟದ ಇತಿಹಾಸದಿಂದಲೂ ಜನಪದ ಜೀವನದಿಂದಲೂ ತಿಳಿದು ಬರುವುದು. ಈ ಪಂಗಡದ ಪೋಷಣೆಗೆ ತಾವು ಕೈಯಿಂದ ಸ್ವತಃ ಕೊಡದೆ ಬ್ರಾಹ್ಮಣರು ಒಕ್ಕಲಿಗನ ಕೈಯಿಂದ ಧನಧಾನ್ಯವನ್ನು ಕೊಡಿಸಿದ್ದು ಎಲ್ಲರಿಗೂ ಕಂಡುಬರುವುದು. **ಅಂದಿನಿಂದ ದಾಸರ ಗೋಪಾಳವು ಒಕ್ಕಲಿಗನ ಕಣದಲ್ಲಿ ಕಾಲಿಟ್ಟಿತು. ಬೂದನ ರಾಶಿಯಲ್ಲದೆ ಒಕ್ಕಲಿಗನು ತನ್ನ ಗಳಿಕೆಯಲ್ಲಿ ದಾಸರ ಗೋಪಾಳವನ್ನೂ ತುಂಬಬೇಕಾಯಿತು.** ಶಿವಶರಣರು ಬುದ್ಧಿವಂತ ಲಿಂಗನ ರಾಶಿಗೆ ಅರ್ಥಾತ್ ಬೂದನ ರಾಶಿಗೆ ಸಮಾಜ ಸೇವೆಯ ಸಂಬಂಧ ಪಾಲುಗಾರರಾದರೆ ಬ್ರಾಹ್ಮಣರು ಬೂದನ ರಾಶಿಯನ್ನೂ ಗೋಪಾಳವನ್ನೂ ಒಕ್ಕಲಿಗನ ಗಳಿಕೆಯಿಂದ ಎತ್ತಿದ್ದು ವಿಶದವಾದ ಸಂಗತಿಯಾಗಿದೆ.

ಈ ಸಂಪ್ರದಾಯಗಳನ್ನು ಯಾರು ಮಾಡಿದರು? ಇವು ಎಲ್ಲಿ ಕಂಡುಬರುವುವು? ಇವುಗಳನ್ನು ಪಾಲಿಸುವರಾರು? ಎಂಬೀ ಪ್ರಶ್ನೆಗಳನ್ನು ಚರ್ಚಿಸುವುದು ಅಗತ್ಯ. ಒಕ್ಕಲಿಗನು ಸುಗ್ಗಿಯಕಾಲದಲ್ಲಿ ಕಣದೊಳಗೆ ಪಾಲಿಸುವ ಸಂಪ್ರದಾಯಗಳು ಕರ್ನಾಟಕ ಬಿಟ್ಟು ಭರತ ಖಂಡದ ಉಳಿದ ಯಾವ ಭಾಗಗಳಲ್ಲಿಯೂ ಕಂಡು ಬರುವುದಿಲ್ಲ. ಕರ್ನಾಟಕದಲ್ಲಿಯೂ ಕೂಡ ಕನ್ನಡ ಮಾತಾಡುವ ಎಲ್ಲ ಭಾಗಗಳಲ್ಲಿ ಗೋಚರವಾಗದಿರುವುದು ಬಹಳ ಆಶ್ಚರ್ಯಕರವಾದ ಸಂಗತಿಯು. ಒಂದುವೇಳೆ ಮೇಲೆ ಹೇಳಿದ ಎಲ್ಲ ಸಂಪ್ರದಾಯಗಳು ಆರ್ಯ ಸಂಸ್ಕೃತಿಯ ಸಂಪ್ರದಾಯಗಳಾಗಿದ್ದರೆ ಭಾರತದ ತುಂಬೆಲ್ಲ ಕಂಡುಬರಬೇಕಾಗಿತ್ತು. ಆದರೆ ಈಗಿರುವ ನಿಜಸ್ಥಿತಿಯು ಇವು ಆರ್ಯ ಸಂಪ್ರದಾಯಗಳಲ್ಲವೆಂದು ಹೇಳಿಬಿಡುವುದು. ಹಾಗಾದರೆ ಇವು ದ್ರಾವಿಡ ಸಂಸ್ಕೃತಿಯ ಸಂಪ್ರದಾಯಗಳೇ? ಎಂಬ ಪ್ರಶ್ನೆ ಹೊರಡುವುದು. ಹಾಗಿದ್ದ ಪಕ್ಷದಲ್ಲಿ ಕರ್ನಾಟಕ ಹಾಗೂ ಉಳಿದ ದ್ರಾವಿಡ ಜನಾಂಗಗಳ ಎಲ್ಲ ಒಕ್ಕಲಿಗರು ಇವುಗಳನ್ನು ಆಚರಿಸಬೇಕಾಗಿತ್ತು. ಆದರೆ ವಸ್ತು ಸ್ಥಿತಿಯು ಹಾಗಿಲ್ಲ. ತಮಿಳು ನಾಡಿನಲ್ಲಿಯೂ ಮೈಸೂರ ದಕ್ಷಿಣ ಭಾಗಗಳಲ್ಲಿಯೂ ಕಾರವಾರ, ಬೆಳಗಾವಿ ಜಿಲ್ಲೆಗಳ ಬೆಟ್ಟದ ಭಾಗಗಳಲ್ಲಿಯೂ ಆಂಧ್ರದ ಪೂರ್ವೋತ್ತರ ಭಾಗಗಳಲ್ಲಿಯೂ ವೀರಶೈವ ರೈತರನ್ನು ಬಿಟ್ಟು ಉಳಿದ ಯಾವ ಒಕ್ಕಲಿಗರೂ ಈ ಸಂಪ್ರದಾಯಗಳನ್ನು ಪಾಲಿಸುವದಿಲ್ಲೆಂದು ತಿಳಿದು ಬರುವುದು. ೨೫೦೦ ವರುಷಗಳಿಂದ ಕರ್ನಾಟಕದಲ್ಲಿ ವಸಹಾತು ಮಾಡಿಕೊಂಡು ನಿಂತು ಕನ್ನಡಿಗರೆಂದು ಹೆಮ್ಮೆ ಪಡುವ ಜೈನ ಒಕ್ಕಲಿಗರೂ ಈ ಯಾವ ಸಂಪ್ರದಾಯಗಳನ್ನೂ ಸುಗ್ಗಿಯ ಕಣದಲ್ಲಿ ಪಾಲಿಸುವುದಿಲ್ಲ. ಕಾರಣ ಇವು ಇಡೀ ದ್ರಾವಿಡ ಜನಾಂಗದ ಸಂಪ್ರದಾಯಗಳಿರವೆ ಅ

ಜನಾಂಗದ ದೊಡ್ಡ ಪಂಗಡವಾದ ಲಿಂಗಾಯತ ಮತಕ್ಕೆ ನಿಶಿಷ್ಟವಾಗಿ ಸಂಬಂಧಿಸಿರುವುವೆಂದು ಸಾಧಾರವಾಗಿ ಹೇಳಬಹುದು. ಕರ್ನಾಟಕದಲ್ಲಿ ಎಲ್ಲ ಲಿಂಗಾಯತ ಒಕ್ಕಲಿಗರು ತಪ್ಪದೇ ಈ ಎಲ್ಲ ಸಂಪ್ರದಾಯಗಳನ್ನು ಪಾಲಿಸುವುದನ್ನು ನೋಡಿದರೆ **ಈ ಸಂಪ್ರದಾಯಗಳು ಕೇವಲ ವೀರಶೈವರಿಗಷ್ಟೇ ಸಂಬಂಧಿಸಿದ್ದು ಶಿವ ಶರಣರೇ ಇವುಗಳನ್ನು ಬಸವಾದಿ ಪ್ರಮಥರ ತರು ವಾಯ ಒಕ್ಕಲಿಗರಿಗೆ ಹಾಕಿಕೊಟ್ಟಿರಬಹುದೆಂದು ನಮ್ಮೆಲ್ಲರಿಗೆ ಅನಿಸದಿರದು.** ಇದಕ್ಕೆ ನಿದರ್ಶನವಾಗಿ ಬಸವಾದಿ ಪ್ರಮಥರ ಕಾಲದಲ್ಲಿಯೂ ಅವರ ನಂತರ ಬಂದ ಶಿವಶರಣರ ಕಾಲದಲ್ಲಿಯೂ ಅನೇಕ ಶಿವಶರಣರು ಒಕ್ಕಲಿಗರಿದ್ದು ಶಿವಾನುಭವಿಗಳಾಗಿದ್ದರೆಂದು ವೀರಶೈವರ ಇತಿಹಾಸವೇ ಕೂಗಿ ಹೇಳುವುದು. ಹೊಲಗೆಲಸವೇ ಅವರ ಕಾಯಕವಾಗಿತ್ತು. ಸುಗ್ಗಿಯೇ ದಾಸೋಹ. ಈ ಎರಡರ ಮುಖಾಂತರ ಅವರು ಶಿವಾನುಭವ ಗೋಷ್ಠಿಯನ್ನು ಮಾಡುತ್ತಿದ್ದರು. ಹಳ್ಳಿಗಳಲ್ಲಿ ವೀರಶೈವ ಸಮಾಜ ಘಟನೆಯನ್ನು ಮಾಡುವುದಕ್ಕೋಸ್ಕರ 'ಕಲ್ಯಾಣ ಮಂಟಪ'ದ ಅನುಕರಣ ಮಾಡಿ ಅದಕ್ಕೆ ಪಾವನತೆಯನ್ನಂಟಿಸಿ ಶಿವಶರಣರಾದ ಒಕ್ಕಲಿಗರು ಅದನ್ನು ಸುಗ್ಗಿಯ ಕಣದಲ್ಲಿ ಸ್ಥಾಪಿಸಿರಬಹುದು. ನೂರೊಂದು ಪುರಾತರ ಹಂತಿಯ ಹಾಡುಗಬ್ಬಗಳನ್ನು ಹಾಡಿ ಶಿವಾನುಭವ ಗೋಷ್ಠಿಯನ್ನು ಮಾಡುತ್ತಿರಬಹುದು. ಇವೇ ಮುಂದೆ ಹೆಚ್ಚಾಗಿ ಬಳಕೆಯಲ್ಲಿ ಬಂದು ಪರಿಪಾಠ ಬಿದ್ದು ಜನ ಸಾಮಾನ್ಯರಿಗೆ ಈಗ ಕೇವಲ ಸಂಪ್ರದಾಯಗಳಾಗಿ ಉಳಿದಿರಬಹುದೆಂದು ಹೇಳಬಹುದಾಗಿದೆ.

೧೨ ನೆಯ ಶತಮಾನದಿಂದ ಇಲ್ಲಿಯವರೆಗೂ ಕರ್ನಾಟಕದಲ್ಲಿ ಬಹುಸಂಖ್ಯಾಕರ ಮತನೆಂದರೆ ಲಿಂಗಾಯತ ಮತವು. ರಾಜಕೀಯ ಸಾಮಾಜಿಕ ಮೊದಲಾದ ಮಹತ್ವದ ಒಂದಿಲ್ಲೊಂದು ಭಾಗದಲ್ಲಿ ಈ ಮತದ ಕೈವಾಡು ಇದ್ದೇ ಇರಬೇಕೆಂದು ಸಂಶೋಧಕರಿಗೆ ಅನಿಸದಿರದು. ಆದರೆ ಸಹೋದರ ಮತಗಳ ಅಸೂಯೆಯ ಮೂಲಕವಾಗಲಿ ಅಥವಾ ಕಾಯಕವಾದಿಗಳಾದ ಲಿಂಗವಂತರ ಸೌಜನ್ಯದ ಮೂಲಕವಾಗಲಿ ನಿಜಸ್ಥಿತಿಯು ಬೆಳಕಿಗೆ ಬಂದಿಲ್ಲ. ಈ ಎಲ್ಲ ಸಂಪ್ರದಾಯಗಳು ಕಲ್ಯಾಣದ ಸುತ್ತುಮುತ್ತಲೂ ಕಲ್ಯಾಣದ ನೆರೆಯ ಆಂಧ್ರ ಪ್ರದೇಶದಲ್ಲಿಯೂ ಮೈಸೂರ ಉತ್ತರ ಭಾಗದಲ್ಲಿಯೂ ಕೊಡಗಿನ ಕೆಲವು ಭಾಗಗಳಲ್ಲಿಯೂ ವಿಜಾಪುರ, ಧಾರವಾಡ ಮತ್ತು ಬೆಳಗಾವಿ ಜಿಲ್ಹೆಯ ಬಹು ಭಾಗಗಳಲ್ಲಿಯೂ ಬಳಕೆಯಲ್ಲಿರುವುವು. ಇನ್ನುಳಿದ ದ್ರಾವಿಡ ನಾಡುಗಳಲ್ಲಿ ಈ ಸಂಪ್ರದಾಯಗಳನ್ನು ಗೊತ್ತುಳ್ಳ ಲಿಂಗಾಯತ ಒಕ್ಕಲಿಗರು ಇಂದಿನವರೆಗೆ ಸುಗ್ಗಿಯ ಕಾಲದಲ್ಲಿ ತಪ್ಪದೆ ಪಾಲಿಸುವರು. ಈ ಎಲ್ಲ ಕಾರಣಗಳ ಮೂಲಕ ಇವುಗಳನ್ನು ಬಸವಾದಿ ಪ್ರಮಥರ ನಂತರ ಬಂದ ಶಿವಶರಣರೇ ಹಾಕಿಕೊಟ್ಟಿರಬಹುದು. ಇವು ಕರ್ನಾಟಕದಲ್ಲಿ ಲಿಂಗಾಯತರಿದ್ದ ಎಲ್ಲ ಭಾಗಗಳಲ್ಲಿ ಬಳಕೆಯಲ್ಲಿವೆ.

೧೩ ನೆಯ ಹಾಗೂ ೧೪ ನೆಯ ಶತಮಾನಗಳಲ್ಲಿ ಬ್ರಾಹ್ಮಣರು ಮಾಡಿದ ಬದಲಾವಣೆಗಳು ಮುಂದೆ ಹಾಗೆಯೆ ಉಳಿಯಲಿಲ್ಲ. ಅವರ ಪ್ರಯತ್ನಗಳು ನಿಷ್ಫಲವಾದಂತೆ ಕಂಡುಬರುವುವು. ಲಿಂಗಾಯತ ಮತವು ೧೫ ನೆಯ ಶತಮಾನದಲ್ಲಿ ಮತ್ತೆ ವಿಜಯನಗರದ ಪ್ರೌಢರಾಯ (೧೪೧೯–೧೪೪೬) ನ ಆಳಿಕೆಯಲ್ಲಿ ಪ್ರಸಿದ್ಧಿಗೆ ಬಂತು. ಇವನ ಕಾಲದಲ್ಲಿ ಲಕ್ಕಣ ದಂಡೇಶ ಮತ್ತು ಜಕ್ಕಣಾಚಾರ್ಯರು ಲಿಂಗಾಯತ ಮತವನ್ನು ಹಬ್ಬಿಸಲು ಅನೇಕ ರೀತಿಯಿಂದ ಸಹಾಯ ನೀಡಿದರು. ಇವರ ಬಲದಿಂದ ಕುಮಾರ ಬಂಕನಾಥ, ಕಲ್ಲಮಠದ ಪ್ರಭುದೇವ ಮೊದಲಾದ ನೂರೊಂದು ವಿರಕ್ತರು ಬ್ರಾಹ್ಮಣರು ಕಿತ್ತೊಗೆದ ಬುದ್ಧಿವಂತ ಲಿಂಗದ ಸ್ಥಾಪನೆಯನ್ನು ಮತ್ತೆ ಬೆಳಕಿಗೆ ತರಲು ಪ್ರಯತ್ನ ಮಾಡಿದ್ದು ತಿಳಿದು ಬರುತ್ತದೆ. ವಿರೂಪಾಕ್ಷದೇವ (೧೪೬೭–೧೪೭೮) ನ ಆಳಿಕೆಯಲ್ಲಿ ತೋಂಟದ ಸಿದ್ಧಲಿಂಗಯತಿಯು ಮತ್ತೆ ದೊಡ್ಡ ಹೋರಾಟವನ್ನು ನಡೆಸಿದಂತೆ ಕಂಡುಬರುವುದು. ಈ ಯತಿಯ ಸಹಾಯದಿಂದ ಸಾರುವ ಅಯ್ಯಗಳು, ಕಾಯಕದಯ್ಯ ಮೊದಲಾದವರು ಸುಗ್ಗಿಯ ಕಣದಲ್ಲಿ ಬ್ರಾಹ್ಮಣರು ಮಾಡಿದ "ಬೂದ" ವೆಂಬ ಬದಲಾವಣೆಯನ್ನು ತೆಗೆದು ಮೊದಲಿದ್ದ ಬುದ್ಧಿವಂತ ಲಿಂಗವನ್ನು ಮತ್ತೆ ಸ್ಥಾಪಿಸಲು ಹೆಣಗಾಡಿದ್ದಾರೆ. ಆದರೆ ೨೦೦

ವರುಷಗಳ ರೂಢಿಯು ಬಲದಿಂದ ಬ್ರಾಹ್ಮಣರು ಮಾಡಿದ ಬದಲಾವಣೆಯಾದ ಬೂದನು (ಬುದ್ಧಿವಂತ ಲಿಂಗನು) ಮಾತ್ರ ಬೂದನೆಂದೇ ಉಳಿದನು. ಕೆಲವೊಂದು ಭಾಗಗಳಲ್ಲಿ ಮಾತ್ರ ಈ ಬೂದನು ಬದಲಾಗಿರಬಹುದೆಂದು ಕಂಡುಬರುವುದು. ಕೆಲವು ಭಾಗಗಳಲ್ಲಿ (ಬೆಳುವಲದಲ್ಲಿ) ಬೂದನಿಗೆ "ಸುಗ್ಗಿಯ ಲಿಂಗಯ್ಯ" ನೆಂದು ಕರೆಯುವ ಪರಿಪಾಠವು ಈಗಲೂ ಕಂಡುಬರುವುದು. ಮೇಲೆ ಹೇಳಿದ ಅಯ್ಯಗಳ ಹೋರಾಟದಿಂದ ಬುದ್ಧಿವಂತ ಲಿಂಗ (ಬೂದ) ನ ರಾಶಿಯು ಮಠದವರಿಗಾಗಲಿ, ಬ್ರಾಹ್ಮಣರಿಗಾಗಲಿ ಕೊಡುವುದು ನಿಂತುಹೋಯಿತು. ಸ್ತ್ರೀಯರ ಸರಿಸಮಾನ್ಯತೆಗೆ ಸಮಾಜದಲ್ಲಿ ಮನ್ನಣೆಯಿತ್ತ ಈ ಅಯ್ಯಗಳು ಮನೆಯ ಹೆಣ್ಣುಮಕ್ಕಳಾದ ಅಕ್ಕತಂಗಿಯರಿಗೆ ತಂದೆಯ ಗಳಿಕೆಯಲ್ಲಿ ಪಾಲುಂಟೆಂಬ ಸಂಪ್ರದಾಯವನ್ನು ಹಾಕಿ ಈ ಬುದ್ಧಿವಂತ ಲಿಂಗದ ರಾಶಿಯು ಹೆಣ್ಣುಮಕ್ಕಳಿಗೆ ಸಲ್ಲಬೇಕೆಂದು ಒಕ್ಕಲಿಗರಿಗೆ ತಿಳಿಹೇಳಿ ಕಟ್ಟುಮಾಡಿ ಅವರಿಗೆ ಅದನ್ನು ಕೊಡಿಸಿರಬಹುದು. ಕಾರಣ ಅಂದಿನಿಂದ ಇಂದಿನವರೆಗೂ ಬುದ್ಧಿವಂತ ಲಿಂಗ (ಬೂದ)ನ ರಾಶಿಯು ಮನೆಯ ಹೆಣ್ಣುಮಕ್ಕಳಿಗೆ ಎಡೆಯಾಗಿದೆ. ಇನ್ನೂ ಬೆಳುವಲದ ಹಲಕೆಲವು ಹಳ್ಳಿಗಳಲ್ಲಿ ಈ ರಾಶಿಯು ಊರ ದಾಸೋಹ ಮಠಕ್ಕೂ ಕ್ವಚಿತ್ತಾಗಿ ಹಳ್ಳಿಯ ಪುರೋಹಿತರಿಗೂ ಸಲ್ಲುತ್ತಿರುವುದು. ಕೆಲವು ಹಳ್ಳಿಗಳಲ್ಲಿ ಊರ ಮುಂದಿನ ಹನುಮನ ಹರಿಸೇವೆ (ಹರಿಶಾಂವಿ) ಗೆಂದು ಒಕ್ಕಲಿಗರು ಈ ಬೂದನ ರಾಶಿಯನ್ನು ಜೋಯಿಸರಿಗೆ ಕೊಡಲು ಅವರು ಅದನ್ನು ತಮ್ಮ ಮನೆಗೆ ಒಯ್ಯುತ್ತಾರೆ. ಇಷ್ಟೆಲ್ಲ ಬದಲಾವಣೆಗಳಾದರೂ 'ಗೋಪಾಳ' ವು ಮಾತ್ರ ಒಕ್ಕಲಿಗನ ಕಣದಲ್ಲಿ ಹಾಗೆಯೇ ಉಳಿಯಿತು. ಈ ಪ್ರಕಾರ ಅನೇಕ ಸಂಪ್ರದಾಯಗಳು ಸಂಶೋಧಕರ ನಿದರ್ಶನಕ್ಕೆ ಬರುವುವು. ಅಲ್ಲದೆ ಎಷ್ಟೋ ಸಂಪ್ರದಾಯಗಳು ಅವರ ದೃಷ್ಟಿಗೆ ಬೀಳದೆ ಹಾಗೆಯೇ ಉಳಿದಿರಬಹುದು; ಅಥವಾ ಅಳಿದು ಹೋಗಿರಬಹುದು. ಪಂಡಿತರೂ ತಜ್ಞ ಸಾಹಿತ್ಯಿಕರೂ ಸಂಶೋಧಕರೂ ಹಾಸುಹೊಕ್ಕಾದ ಜಾನಪದ ಸಾಹಿತ್ಯವನ್ನು ಕೂಲಂಕಷವಾಗಿ ಅಭ್ಯಸಿಸಿ ಸತ್ಯವನ್ನು ಬೆಳಕಿಗೆ ತಂದು ಅಜ್ಞಾನದಲ್ಲಿ ಬಳಲುವ ಕನ್ನಡ ಒಕ್ಕಲಿಗರಿಗೆ ಬೆಳಕು ನೀಡಲು ಮುಂದೆ ಬರಬೇಕಾಗಿದೆ. ಅಪಾರವಾದ ಜಾನಪದ ಸಾಹಿತ್ಯ ರಾಶಿಯನ್ನು ಪುಣ್ಣುಗೂಡಿಸದೆ ಬೆಳಕಿಗೆ ತರುವ ಸಾಹಸವನ್ನು ಎಲ್ಲರೂ ಮಾಡಬೇಕು. ಇದೊಂದು ತಲೆಮಾರು ದಾಟಿದರೆ ಇವನ್ನು ಹಾಡುವ, ಹೇಳುವ ಜನರು ಕಣ್ಮರೆಯಾಗುವರು. ಈ ಕೆಲಸವನ್ನು ಇನ್ನುಳಿದ ಸಹೋದರರಿಗೆ ಬಿಟ್ಟಿದ್ದೇನೆ.

ಮೇಲೆ ಹೇಳಿದ ಎಲ್ಲ ಸಂಪ್ರದಾಯಗಳನ್ನು ಒಕ್ಕಲಿಗರು ಪವಿತ್ರವಾದವುಗಳೆಂದು ಪಾಲಿಸುವರು. ಈ ಸಂಪ್ರದಾಯಗಳು ವೀರಶೈವ ಸಂಸ್ಕೃತಿಯ ಹೆಚ್ಚಳವನ್ನು ಹೇಳದಿರವು. ಈಗ ಮಾಡಲಾದ ಪ್ರಯತ್ನವು ನನ್ನ ಬಾಂಧವರಾದ ಕನ್ನಡನಾಡಿನ ಒಕ್ಕಲಿಗರಿಗೆ ತಿಳಿದು ಅರಿಕೆಯಾದರೆ ಸಾರ್ಥಕವಾಯಿತೆಂದು ಭಾವಿಸುವೆ.

— ಜಾನಪದಕೆ ಶುಭಂ ಮಂಗಳಂ —

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಪ್ರೊ. ಎಸ್. ಕೆ. ಜೋಶಿ, ಮತ್ತು

ಪ್ರೊ. ಜಿ. ಡಿ. ಮಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. **ಬೆಲೆ ೧-೧೨-೦** ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ. ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟೆ, ಪುಣೆ.

ಮೂಲ ಶಿಕ್ಷಣದ ಅರಿವು

(ಹಿಂದಿನಿಂದ ಸಾಗಿ ಬಂದದ್ದು)

ಅನುವಾದಕರು : ಶ್ರೀ ಶಿಂತ್ರಿ ಬಸಪ್ಪನವರು

ಮತ್ತೊಂದು ಪ್ರಸಂಗದಲ್ಲಿ ಗಾಂಧೀಜಿಯವರು ಅಂದದ್ದು "ಸಾಲೆಯಲ್ಲಿ ಅನುಸರಿಸುತ್ತಿರುವ ಅಭ್ಯಾಸ ಪತ್ರಿಕೆಯಲ್ಲಿ ಕೈಕೆಲಸವೊಂದನ್ನು ಸೇರಿಸಬೇಕೆಂಬ ಹಳೆ ವಿಚಾರವಿತ್ತು. ಅದು ಮರಣಪ್ರಾಯವಾದ ತಪ್ಪಾಗುವದೆಂದು ನನಗೆ ತೋರಿತು. ಶಿಕ್ಷಕರು ಕಾಯಕವೊಂದನ್ನು ಚನ್ನಾಗಿ ಕಲಿಯಬೇಕು ಮತ್ತು ತಾವು ಆಯ್ದುಕೊಂಡ ಕಾಯಕದ ಮುಖಾಂತರ ಎಲ್ಲ ಜ್ಞಾನವನ್ನು ಸಂಬಂಧೀಕರಣದಿಂದ ಮಕ್ಕಳಿಗೆ ಮಾಡಿಕೊಡಬೇಕು. ಉದಾಹರಣಾರ್ಥವಾಗಿ ನೂಲುವದನ್ನೇ ತಕ್ಕೊಳ್ಳಿರಿ. ನನಗೆ ಗಣಿತ ವಿಷಯವು ಗೊತ್ತಿರದಿದ್ದರೆ, ತಕಲಿಯಿಂದ ನಾನು ಎಷ್ಟು ಯಾರ್ಡು ನೂಲನ್ನು ನೂತೆನೆಂಬುದನ್ನೂ, ಲಪೇಟಾದ ಮೇಲೆ ಅದು ಎಷ್ಟು ಸುತ್ತುಗಳಾಗುವದೆಂಬುದನ್ನೂ, ನೂತ ನೂಲಿನ ನಂಬರು ಎಷ್ಟಿರುವದೆಂಬುದನ್ನೂ ಹೇಳಲಾರೆನು. ಹಾಗೆ ವರದಿ ಮಾಡಲು ನಾನು ಅಂಕಿಗಳನ್ನೂ ಬೇರೀಜು-ವಜಾಬಾಕಿ--ಗುಣಾಕಾರ-ಭಾಗಾಕಾರಗಳನ್ನೂ ಕಲಿಯಲೇಬೇಕು. ಗಡುಚಾದ ಲೆಕ್ಕಗಳನ್ನು ಮಾಡುವಾಗ ಸಂಜ್ಞೆಗಳನ್ನು ಪಯೋಗಿಸುತ್ತ ಬೀಜಗಣಿತವನ್ನು ಕಲಿಯಬೇಕಾಗುವದು.

"ಆ ಮೇಲೆ ಭೂಮಿತಿಯನ್ನು ತಕ್ಕೊಳ್ಳಿರಿ. ವರ್ತುಲದ ಕಲ್ಪನೆಯನ್ನು ಮಾಡಿಕೊಡಲು ತಕಲಿಯ ಬಿಲ್ಲಿಗಿಂತ ಹೆಚ್ಚಿನ ನಿದರ್ಶನವು ಯಾವುದಿದೆ? ಯುಕ್ಲಿಡನ ಹೆಸರನ್ನು ಸಹ ಎತ್ತದೆ ವರ್ತುಲದ ಬಗೆಗೆ ಎಲ್ಲ ಮಾಹಿತಿಯನ್ನು ಮಾಡಿಕೊಡಬಲ್ಲೆನು. ನೂಲುವದರ ಮೂಲಕ ಇತಿಹಾಸ-ಭೂಗೋಲವನ್ನು ನಾನು ಹೇಗೆ ಕಲಸಬಲ್ಲೆನೆಂಬುದನ್ನು ನೀವು ಕೇಳಬಹುದು. ಕೆಲವು ದಿನಗಳ ಹಿಂದೆ "ಹತ್ತಿ-ಮಾನವನ ಕಥೆ" ಎಂಬದೊಂದು ಹೊತ್ತಿಗೆಯು ನನ್ನ ಕೈಸೇರಿತು. ಅದು ನನ್ನನ್ನು ಪುಲಕಿಸಿತು. ಅದೊಂದು ಅಸಾಧಾರಣವಾದ ಕಾದಂಬರಿಯಂತೆ ತೋರಿತು. ಹತ್ತಿಯು ಮೊತ್ತ ಮೊದಲು ಯಾವಾಗ ಮತ್ತು ಹೇಗೆ ಬೆಳೆಸಲ್ಪಟ್ಟಿತೆಂಬುದರ ಪ್ರಾಚೀನ ಕಾಲದ ವರ್ಣನೆಯಿಂದ ಪ್ರಾರಂಭಿಸಿ, ಅದರಲ್ಲಿ ಸುಧಾರಣೆಯು ಒರಬರುತ್ತ ಹೇಗೆ ಆಗುತ್ತ ಬಂದಿತೆಂಬುದು, ಬೇರೆ ಬೇರೆ ದೇಶಗಳ ನಡುವೆ ವ್ಯಾಪಾರವು ಹೇಗೆ ಸಾಗಿತೆಂಬುದು, ಮೊದಲಾದ ಸಂಗತಿಗಳು ಅದರಲ್ಲಿ ವಿವರಿಸಲ್ಪಟ್ಟಿವೆ. ಬೇರೆ ಬೇರೆ ದೇಶಗಳ ಹೆಸರುಗಳನ್ನು ಮಗುವಿಗೆ ಹೇಳುವಾಗ, ಆಯಾ ದೇಶಗಳ ಇತಿಹಾಸ-ಭೂಗೋಲಗಳ ಬಗೆಗೆ ಅಲ್ಪಸ್ವಲ್ಪ ಹೇಳುವೆನು. ಬೇರೆ ಬೇರೆ ಕಾಲಗಳಲ್ಲಿ ವ್ಯಾಪಾರದ ಒಪ್ಪಂದಗಳು ಯಾರ ಯಾರ ಆಳಿಕೆಯಲ್ಲಿ ಜರುಗಿದವು, ಆವ ದೇಶಗಳಲ್ಲಿ ಹತ್ತಿಯು ಆಯಾತವಾಗುತ್ತಿದೆ, ಆವ ದೇಶಗಳಲ್ಲಿ ನೂಲಿನ ಬಟ್ಟೆಯ ಆಮದು ಆಗುತ್ತಿದೆ, ತನಗೆ ಹೆತ್ತುವಷ್ಟು ಹತ್ತಿಯನ್ನು ಪ್ರತಿಯೊಂದು ದೇಶವು ಏಕೆ ಬೆಳೆದುಕೊಳ್ಳುವದಿಲ್ಲ, ಮೊದಲಾದವುಗಳು ಅರ್ಥಶಾಸ್ತ್ರದ ಹಾಗೂ ಒಕ್ಕಲತನದ ಅಲ್ಪ ಪರಿಚಯವನ್ನು ಮಾಡಿಕೊಡುತ್ತಿವೆ. ಬೇರೆ ಬೇರೆ ಜಾತಿಗಳ ಹತ್ತಿಯನ್ನು ಹೇಗೆ ಗುರುತಿಸಬೇಕು, ಅವುಗಳಿಗೆ ಬೆಳೆಯಲು ಎಂಥ ಮಣ್ಣು ಬೇಕು, ಅವುಗಳನ್ನು ಹೇಗೆ ಬೆಳೆಯಬೇಕು, ಅವುಗಳನ್ನು ಎಲ್ಲಿಂದ ದೊರಕಿಸಬೇಕು, ಮೊದಲಾದ ಸಂಗತಿಗಳನ್ನು ಮಗುವಿಗೆ ನಾನು ಕಲಿಸುವೆನು. ತಕಲಿಯಿಂದ ನೂಲುವದು ಹೀಗೆಯೇ ನನ್ನನ್ನು ಈಸ್ಟ ಇಂಡಿಯಾ ಕಂಪನಿಯ ಇತಿಹಾಸದತ್ತ ಒಯ್ಯುತ್ತಿದೆ. ಆವ ಸಂಗತಿಯು ಅವರನ್ನು ಇಲ್ಲಿಗೆ ಬರಮಾಡಿತು, ಅವರು ನಮ್ಮ ನೂಲುವ ಕಾಯಕವನ್ನು ಹೇಗೆ ಹಾಳು ಮಾಡಿದರು, ಆರ್ಥಿಕ ದೃಷ್ಟಿಯನ್ನಿಟ್ಟುಕೊಂಡು ಹಿಂದುಸ್ತಾನಕ್ಕೆ ಬಂದಂಥವರು ಮುಂದೆ ರಾಜ್ಯಕೀಯ ಆಕಾಂಕ್ಷೆಗಳತ್ತ ಹೇಗೆ ಹೊರಳಿದರು, ಮೊಗಲರ ಹಾಗೂ ಮರಾಠರ ಅಳಿಗಾಲಕ್ಕೆ ಆ ಕಂಪನಿಯು ಕಾರಣೀಭೂತವಾಗಿ ಇಂಗ್ಲೀಷರ ರಾಜ್ಯವನ್ನು ಹೇಗೆ ಸ್ಥಾಪಿಸಿತು, ಮತ್ತು ಈಗ ನಮ್ಮ ಕಾಲದಲ್ಲಿ ಜನಜಾಗ್ರತೆಯನ್ನು ಹೇಗೆ ಉಂಟು ಮಾಡಿತು.

ಈ ಪ್ರಕಾರ ಈ ಹೊಸ ಶಿಕ್ಷಣದಲ್ಲಿ ಕಲಿಯಬೇಕಾದ ಸಂಗತಿಗಳಿಗೆ ಕೊನೆಯಿಲ್ಲದಾಗಿದೆ. ಮನಸಿನ ಮೇಲೆ ಅನವಶ್ಯಕವಾದ ಭಾರವು ಬೀಳದೆ ಮಗುವು ಎಷ್ಟು ತೀವ್ರವಾಗಿ ಅವುಗಳನ್ನೆಲ್ಲ ಗ್ರಹಿಸುತ್ತಿದೆ !

ಆ ವಿಚಾರವನ್ನು ಇನ್ನಷ್ಟು ವಿಸ್ತರಿಸೋಣ. ಪ್ರಾಣಿಶಾಸ್ತ್ರಜ್ಞನೊಬ್ಬನು ಉತ್ತಮ ತಜ್ಞನಾಗಲು ಪ್ರಾಣಿಶಾಸ್ತ್ರವನ್ನುಳಿದು ಬೇರೆ ಎಷ್ಟೋ ಶಾಸ್ತ್ರಗಳನ್ನು ಕಲಿಯಬೇಕಾಗುವಂತೆ, ಮೂಲ ಶಿಕ್ಷಣವು ಒಂದು ಶಾಸ್ತ್ರದಂತೆ ಕಲಿಸಲ್ಪಟ್ಟರೆ ಅದು ನಮ್ಮನ್ನು ಜ್ಞಾನದ ಅನಂತ ಪ್ರವಾಹಗಳತ್ತ ಒಯ್ಯುತ್ತಿದೆ. ತಕಲಿಯ ಉದಾಹರಣೆಯನ್ನೇ ಹಿಗ್ಗಿಸಿ ನೋಡೋಣ. ಒಬ್ಬ ಶಿಕ್ಷಕ-ವಿದ್ಯಾರ್ಥಿಯು ನೈಪುಣ್ಯವನ್ನು ಪಡೆಯಲು ಕ್ರಮಕ್ಕನುಸರಿಸಿ ನೂಲುವದನ್ನು ಮನಸುಗೊಟ್ಟು ಮಾಡುವದಲ್ಲದೆ ತಕಲಿಗೂ ಹಾಗೂ ಅದರಲ್ಲಿ ಹುದುಗಿದ್ದ ತಾತ್ತ್ವಿಕ ವಿಚಾರಗಳಿಗೂ ಲಕ್ಷ್ಯವನ್ನು ಪೂರೈಸಬೇಕು. ತಕಲಿಯ ಬಿಲ್ಲಿಯು ಹಿತ್ತಾಳಿಯದೇಕೆ, ಅದರ ಮೇಲಿನ ಕದಿರು ಉಕ್ಕಿನದೇಕೆ, ಎಂಬ ಪ್ರಶ್ನೆಗಳನ್ನು ತನ್ನ ಮನಸಿನಲ್ಲಿ ತನಗೇ ಕೇಳಿಕೊಳ್ಳಬೇಕು. ತಕಲಿಯು ಶಾಸ್ತ್ರಕ್ಕನುಸರಿಸಿ ಮಾಡಲ್ಪಟ್ಟಿದೆ. ಬಿಲ್ಲಿಯನ್ನು ಹಿತ್ತಾಳಿಯಿಂದ ಮಾಡಿದ್ದಕ್ಕೂ ಕದಿರನ್ನು ಉಕ್ಕಿನಿಂದ ಮಾಡಿದ್ದಕ್ಕೂ ಕಾರಣವಿದೆ. ಆ ಕಾರಣವನ್ನು ಹುಡುಕಿ ತೆಗೆಯಬೇಕು. ಬಿಲ್ಲಿಯು ಹೆಚ್ಚು ಮತ್ತು ಕಡಿಮೆ ಇರದೆ ಇಂತಿಷ್ಟೇ ವ್ಯಾಸವುಳ್ಳದ್ದೇಕಿರುತ್ತಿದೆಯೆಂದು ಆ ಶಿಕ್ಷಕ-ವಿದ್ಯಾರ್ಥಿಯು ತನ್ನನ್ನು ತಾನೇ ಪ್ರಶ್ನಿಸಬೇಕು. ಈ ಪ್ರಶ್ನೆಗಳನ್ನೆಲ್ಲ ಸಮಾಧಾನಕರವಾಗಿ ಬಿಡಿಸಿ ಅದರಲ್ಲಿ ಅಡಗಿದ್ದ ಗಣಿತ ವಿಷಯಗಳನ್ನೆಲ್ಲ ಮನನ ಮಾಡಿಕೊಂಡರೆ ಆತನು ಉತ್ತಮ ಎಂಜಿನೀಯರನಾಗುವನು. ತಕಲಿಯು ಆತನ ಕಾಮಧೇನುವಾಗುವದು. ಇದರ ಮೂಲಕ ಆತನಿಗೆ ತಿಳುಹಿಸಿಕೊಡುವ ಜ್ಞಾನವು ಎಣೆಯಿಲ್ಲದಷ್ಟಾಗುವದು.

ಮಗುವಿಗೆ ಕಲಿಸತಕ್ಕದ್ದನ್ನೆಲ್ಲ ಕಾಯಕದ ಮುಖಾಂತರವೇ ಕಲಿಸಬೇಕೋ ಹೇಗೆಂಬುದು ಮುಂದಿನ ಸಮಸ್ಯೆ. ಕಾಯಕವು ಮೂಲ ಶಿಕ್ಷಣದಲ್ಲೊಂದು ಮಹತ್ವವಾದ ಮಾಧ್ಯಮವು. ಇದಲ್ಲದೆ ಮಗುವಿನ ಬೇರೆ ಅನುಭವಗಳಿಗೂ ಇಲ್ಲಿ ಎಡೆ ಇದೆ. ಮೂಲ ಶಿಕ್ಷಣವು ಜೀವನಕ್ಕೋಸ್ಕರ ಶಿಕ್ಷಣವೆಂದು ಎಣಿಸಲ್ಪಟ್ಟಿದೆ. ಅದು ಮಗುವನ್ನು ಸಮಾಜದಲ್ಲಿ ಒಬ್ಬ ತಕ್ಕ ಮತ್ತು ಸಂಪೂರ್ಣವಾದ ವ್ಯಕ್ತಿಯನ್ನು ತಯಾರಿಸಲು ಹೆಣಗುವದಲ್ಲದೆ ಅದು ಜೀವನದುದ್ದಕ್ಕೂ ಸಾಗುವದು—ಆರೋಗ್ಯ, ಸ್ವಚ್ಛತೆ, ದಿನದ ಹೋರೆ, ಪೂಜೆ-ಪುನಸ್ಕಾರ, ನಮ್ಮ ಮನೆಯಲ್ಲಿಯ ಹಾಗೂ ಸುತ್ತುಮುತ್ತಲಿನ ನಿತ್ಯದ ಅನುಭವಗಳು, ನಾವು ಉಣ್ಣುವ ಆಹಾರ ಮತ್ತು ಆಡುವ ಆಟಗಳು, ನಮಗೆ ಬೇಕಾಗುವ ಸಾಮಾನುಗಳನ್ನು ಕೊಂಡುಕೊಳ್ಳುವ ಅಂಗಡಿಗಳು, ವಾರಕ್ಕೊಮ್ಮೆ ಹೋಗುವ ಸಂತೆ, ಪೂಜೆಗಾಗಿ ಹೋಗುವ ಗುಡಿ, ಮೊದಲಾದವುಗಳನ್ನೆಲ್ಲ ಅದು ಒಳಗೊಂಡಿದೆ. ಈ ವಿವರಗಳ ಮೇಲಿಂದ ಕಂಡುಬರುವದೇನಂದರೆ ಮೂಲ ಶಿಕ್ಷಣವು ಕಾಯಕವೊಂದರಿಂದಲೇ ಸಿಗುವ ಅನುಭವವನ್ನವಲಂಬಿಸದೆ. ಮಾನವನ ಜೀವನದಲ್ಲಿ ಲಭ್ಯವಾಗುವ ಅನುಭವಗಳನ್ನೆಲ್ಲ ಅದು ಅಳವಡಿಸಿಕೊಂಡಿದೆ. ನಿತ್ಯದ ಜೀವನದ ಸಮಸ್ಯೆಗಳನ್ನೆಲ್ಲ ಎದುರಿಸುವದರಿಂದ ಅದು ಉದ್ದೇಶಪೂರಿತವೂ ಪರಿಪೂರ್ಣವೂ ಆಗಿದೆ. ಸಾಮಾಜಿಕ ಗುಣಗಳು ವಿಕಾಸಗೊಳ್ಳಲು ಕ್ಲಾಸಿನಲ್ಲಿ ಕೇವಲ ಉಪದೇಶ ಹೇಳಿ ಕಲಿಸಲಾಗುವದಿಲ್ಲ. ಸಾಂಘಿಕ ಚಟುವಟಿಕೆಗಳ ಮುಖಾಂತರ ಸ್ವಚ್ಛತೆ ಮೊದಲಾದ ನಿತ್ಯದ ಹೋರೆಗಳನ್ನು ಮಕ್ಕಳಿಗೆ ಮಾಡಲಿಕ್ಕೆ ಹಚ್ಚಿ ಕಲಿಸಲಾಗುವದು. ಕೆಲಸಗಳನ್ನು ಮಾಡುವಾಗ ಮಕ್ಕಳು ಹೊಂದಿದ ಅನುಭವಗಳನ್ನು ಶಿಕ್ಷಕರು ಮಕ್ಕಳ ಶಿಕ್ಷಣಕ್ಕೋಸುಗ ಉಪಯೋಗಿಸಿಕೊಳ್ಳುವರು.

ಈಗಿನಂತಹ ಯಾಂತ್ರಿಕ ಯುಗದಲ್ಲಿ ನೂಲುವದು, ನೇಯುವದು ಇಲ್ಲವೆ ಬಡಿಗತನ ಮೊದಲಾದ ಕಾಯಕಗಳ ಮುಖಾಂತರ ಶಿಕ್ಷಣವು ಯೋಗ್ಯವೇ ಎಂಬ ಪ್ರಶ್ನೆವನ್ನು ಕೇಳಲಾಗುತ್ತಿದೆ. ಮೂಲ ಶಿಕ್ಷಣವನ್ನು ಶೋಧಿಸಿ ತೆಗೆದಂತಹ ಸೇವಾಗ್ರಾಮದ ಆ ಮುನಿವರ್ಯರು ಕೈಗಾರಿಕೆಗಳ ವಿಕೇಂದ್ರೀಕರಣಕ್ಕಂಟಿಕೊಂಡಿದ್ದರೆಂಬುದನ್ನು ಇಲ್ಲಿ ಮತ್ತೊಮ್ಮೆ ಹೇಳುವದನವಶ್ಯಕ. ನಮ್ಮ ದೇಶದಲ್ಲಿ ಜನಸಾಮಾನ್ಯರನ್ನು ಸಧನರನ್ನಾಗಿ ಮಾಡಲು ಗೃಹಕಾಯಕಗಳ ಪುನರುಜ್ಜೀವನವು ಒಂದೇ ಒಂದು ಉಪಾಯವೆಂದು ಅವರು ನಂಬಿದ್ದರು. ಅದು ಏನೇ ಇರಲಿ, ಕೇವಲ ಪುಸ್ತಕೀಯ ಶಿಕ್ಷಣಕ್ಕಿಂತ ಹೆಚ್ಚಿನದನ್ನು ಮೂಲ

ಶಿಕ್ಷಣವು ನಮ್ಮ ಮಕ್ಕಳಿಗೆ ಕೊಡಬೇಕು. ಮುಖ್ಯವಾಗಿ ಪುಸ್ತಕಗಳ ಮುಖಾಂತರ ಶಿಕ್ಷಣ ಕೊಡುವ ನಾನಾ ಸಾಲೆಗಳಲ್ಲಿ ಮಕ್ಕಳು ತಮ್ಮ ಕೈಕಾಲುಗಳನ್ನು ಉಪಯೋಗಿಸುವದಿಲ್ಲವಾದುದರಿಂದ ಅವುಗಳ ವಿಕಾಸವೇ ಆಗುವದಿಲ್ಲ. ಈ ತರಹದ ಶಿಕ್ಷಣವು ಮೇಲೆ ಹೇಳಿದ ಯಾಂತ್ರಿಕ ಯುಗಕ್ಕೆ ಯೋಗ್ಯವೆಂದು ಎಂದಿಗೂ ಗಣಿಸಲ್ಪಡಲಾರದು. ಮೂಲ ಶಿಕ್ಷಣ ಸಾಲೆಗಳಲ್ಲಿ ಕೈಕಾಲುನೊಡಲಾದ ಇಂದ್ರಿಯಗಳ ಚತುರತನದ ಉಪಯೋಗದಲ್ಲಿ ಮಕ್ಕಳು ತರಬೇತಿಯನ್ನು ಹೊಂದುತ್ತಿರುವದುಂಟು. ಆಯುಧಗಳನ್ನು ಬಳಸುವಲ್ಲಿಯೂ ಸಾಮಾಜಿಕ ಕಾರ್ಯಗಳಲ್ಲಿಯೂ ಕೈಗಳ ಉಪಯೋಗವನ್ನು ಜಾಣತನದಿಂದ ಮಾಡುವದರಿಂದ ಅವರು ಅದರಲ್ಲಿ ಪ್ರಗತಿಯನ್ನು ಪಡೆಯುತ್ತಾರೆ. ಆವುದೇ ತಳತೆಗೋಲಿನಿಂದ ಅಳೆದು ನೋಡಿದರೂ ಅವರು ಉಳಿದವರಿಗಿಂತ ಹೆಚ್ಚಿನ ಯೋಗ್ಯತೆಯುವರೆಂದು ಕಂಡುಬರದೆ ಇರದು; ಯಂತ್ರಗಳನ್ನು ಬಳಸುವಲ್ಲಿಯೂ ಅವರದು ಮೇಲುಗೈ.

ದೈಹಿಕ ಶ್ರಮಕ್ಕೆ ಶೈಕ್ಷಣಿಕ ಬೆಲೆಯಿದೆಯೆಂಬ ತತ್ತ್ವವನ್ನು ಮೂಲ ಶಿಕ್ಷಣವು ಅವಲಂಬಿಸಿದೆಯೆಂಬುದು ಕಂಡುಬರುತ್ತಿದೆ. ಚತುರತನದಿಂದ ಉಪಯೋಗಿಸಲ್ಪಟ್ಟ ಕಾಯಕಷ್ಟವು ಸಮತೋಲ ಬುದ್ಧಿಯನ್ನುಂಟುಮಾಡಬಲ್ಲದು. ಸಾಮಾಜಿಕ ಭಾವನೆಯನ್ನು ಹುಟ್ಟಿಸದಂತಹ ಬೌದ್ಧಿಕ ಶಿಕ್ಷಣವು ಸಮಾಜದಲ್ಲಿ ಎರಡನೆಯವರ ದುಡಿತವನ್ನು ಅಪಹರಣ ಮಾಡುವ ಸ್ವಾರ್ಥಿಗಳನ್ನು ನಿರ್ಮಿಸುತ್ತಿದೆ. ಶರೀರ, ಮನಸ್ಸು, ಆತ್ಮ. ಇವುಗಳ ಸರಾಗವಾದ ಬೆಳವಣಿಗೆಯಾದವನಲ್ಲಿ ಸಮತೋಲ ಬುದ್ಧಿಯು ತಲೆದೋರುತ್ತಿದೆ. ಅದುವೇ ಉತ್ತಮ ಸ್ವಭಾವದ ನೆಲಗಟ್ಟು. ಸಮಾಜಕ್ಕೆ ಉಪಯೋಗ ಬೀಳುವ ಶ್ರಮದಿಂದ ಬೆಳೆದ ಬುದ್ಧಿಮತ್ತೆಯು. ಸಮಾಜಸೇವೆಯ ಭಾವನೆಯನ್ನು ಸ್ವಾಭಾವಿಕವಾಗಿ ವಿಕಾಸಗೊಳಿಸುತ್ತಿದೆ. ಜಗತ್ತಿನ ಮುಂದರಿದ ದೇಶಗಳಲ್ಲೆಲ್ಲ ಈ ಉದಾತ್ತ ತತ್ತ್ವವು ಬಹಳಷ್ಟು ಮನ್ನಿಸಲ್ಪಟ್ಟಿದೆ ಆದುದರಿಂದ, ಉಳಿದ ಸಂಗತಿಗಳೊತ್ತಟ್ಟಿಗಿರಲಿ, ಮೂಲ ಶಿಕ್ಷಣವು ಸರಿಯಾಗಿ ಕಲಿಸಲ್ಪಟ್ಟರೆ ಅದೊಂದು ಅದ್ವಿತೀಯ ಶಿಕ್ಷಣಕ್ರಮವಾಗುವದು. ಸಾಮಾಜಿಕ ಮತ್ತು ಬೌದ್ಧಿಕ ದೃಷ್ಟಿಗಳಿಂದ ಮಗುವನ್ನು ಅತ್ಯುತ್ತಮವಾಗಿ ವಿಕಾಸಗೊಳಿಸಿ ಅದು ಆತನನ್ನು ಆತನು ಜೀವಿಸುವ ಸಮಾಜದಲ್ಲಿ ಉಪಯುಕ್ತ ವ್ಯಕ್ತಿಯನ್ನಾಗಿ ತಯಾರಿಸುವದು.

(ಮುಂದುವರಿಯುವದು)

ಹೋಳಿ

ಲೇಖಕರು : ಡಾ. ಬಿ. ಎಸ್. ಗದ್ದಗಿಮಠ, ಎಮ್. ಎ., ಪಿಎಚ್. ಡಿ.

(ಒಡೆತನವನ್ನು ಕಾದಿರಿಸಿದೆ)

ಭಾರತೀಯರಿಗೆ ಹೋಳಿಯು ಒಂದು ಸಂಪ್ರದಾಯ ದೊಡ್ಡ ಹಬ್ಬ. ಇದಕ್ಕೆ ಕಾಮನ ಹಬ್ಬವೆಂದೂ ಕರೆಯುತ್ತಾರೆ. ಭಾರತದ ಎಲ್ಲ ಭಾಗಗಳಲ್ಲಿಯೂ ಜನರು ಈ ಹಬ್ಬವನ್ನು ಬಲು ಹುಮ್ಮಸದಿಂದ ಆಚರಿಸುವರು. ಭಾರತದಲ್ಲಿ ಆಚರಿಸಲ್ಪಡುವ ಹಬ್ಬಗಳು ಹೆಚ್ಚಾಗಿ ಹೆಣ್ಣುಮಕ್ಕಳ ಹಬ್ಬಗಳಾಗಿವೆ. ಹೋಳಿಯು ಮಾತ್ರ ಗಂಡುಮಕ್ಕಳ ಕೇವಲ ಒಂದೇ ಒಂದು ದೊಡ್ಡ ಹಬ್ಬವೆಂದು ಎಣಿಸಲ್ಪಡುತ್ತದೆ. ಹಲಕೆಲವು ಭಾಗಗಳಲ್ಲಿ ಹೆಣ್ಣುಮಕ್ಕಳೂ ಈ ಹಬ್ಬದಲ್ಲಿ ಭಾಗವಹಿಸುವರು. ಹಬ್ಬ ಹುಣ್ಣಿಮೆಗಳಲ್ಲಿ ಹೆಣ್ಣು ಆನಂದ ಬಡುವುದನ್ನು ಕಂಡು ಗಂಡು ದುಡಿಯುವ ತನಗೆ ಹಬ್ಬವಿಲ್ಲೆಂದು ದೇವರ ಮುಂದೆ ದೂರಿಕೊಂಡನಂತೆ. ಆಗ ದೇವರು ಆ ದೂರನ್ನು ಕೇಳಿ ಗಂಡು ಒಮ್ಮೆಯಾದರೂ ವರುಷದಲ್ಲಿ ನಕ್ಕಾಡಿ ಪ್ರಪಂಚ ಭಾರವನ್ನು ಮರೆಯಲೆಂದು ಆಡಲು

ಹೋಳಿಯನ್ನು ನಿರ್ಮಿಸಿದನೆಂದು ಜನಪದದಲ್ಲಿ ಒಂದು ಕಥೆಯೂ ಬರುತ್ತದೆ. ನಮ್ಮ ಸಂಸ್ಕೃತಿಯಲ್ಲಿ ಈ ಹಬ್ಬಕ್ಕೆ ದೊಡ್ಡ ಪರಂಪರೆಯೂ ಪುರಾಣ ಕಥೆಯೂ ಇದೆ. ಕಾಮನ ವಿಚಾರವಾಗಿ ಋಗ್ವೇದ ಅಥರ್ವಣ ವೇದಗಳಲ್ಲಿಯೂ ಉಲ್ಲೇಖವಿದೆ. ಸ್ಕಂದ ಪುರಾಣ ದಲ್ಲಿಯೂ ಶಿವ ಪುರಾಣದಲ್ಲಿಯೂ ಕಾಮದಹನ ಬರುತ್ತದೆ. ಬುದ್ಧನು ಕಾಮನನ್ನು ಗೆದ್ದ ವರ್ಣನೆಗಳು ಬೌದ್ಧ ಸಾಹಿತ್ಯದಲ್ಲಿವೆ. ಜೈನರೂ ಬೌದ್ಧರೂ ಹೋಳಿಯನ್ನು ಆಚರಿಸುವರು. ಪ್ರಸಿದ್ಧ ಸಂಸ್ಕೃತ ನಾಟಕಕಾರರಾದ ಕಾಳಿದಾಸ ಮೊದಲಾದ ಕವಿಗಳು ತಮ್ಮ ಕಾವ್ಯಗಳಲ್ಲಿ ಹೋಳಿಯನ್ನು ಉಲ್ಲೇಖಿಸಿದ್ದಾರೆ. *'ಶಾಬರ ಭಾಷ್ಯ' ದಲ್ಲಿಯೂ ಈ ಹೋಲಿಕಾ ವ್ರತವು ಪ್ರಾಚ್ಯರಲ್ಲಿ ಮಾತ್ರ ವಾಡಿಕೆಯಲ್ಲಿದ್ದಿತ್ತು ಎಂದು ಹೇಳಿದೆ. ಹೀಗೆ ಹೋಳಿಯು ನಮಗೆ ಬುನಾದಿಯಿಂದ ಸಂಪ್ರದಾಯವಾಗಿ ಬಂದಿದೆ.

ಹೋಳಿಯು ಹದಿನೈದು ಅಥವಾ ಇಪ್ಪತ್ತು ದಿನಗಳ ವರೆಗೆ ಆಡುವ ಆಟವಾಗಿದೆ. ಇದರ ಉತ್ಸವವು ಹೋಳಿಯ ಹುಣ್ಣಿಮೆಯಿಂದ ಪ್ರಾರಂಭವಾಗಿ 'ರಂಗಪಂಚಮಿ'ಯ ವರೆಗೆ ನಡೆಯುವುದು. ಭರತಖಂಡದಲ್ಲಿ ಕಾಮನಕಟ್ಟೆಗಳಿಲ್ಲದ ಹಳ್ಳಿಗಳೇ ಇಲ್ಲ. ಕಾಮನು ಬಲು ಚೆಲುವನೆಂಬ ನಂಬಿಕೆಯೂ ನಮ್ಮಲ್ಲಿದೆ. ಗಂಡು ಮಕ್ಕಳ ಚೆಲುವಿಕೆಯನ್ನು ಕಾಮನಿಗೆ ಹೋಲಿಸುವುದುಂಟು. ಈ ಹಬ್ಬ ಬರುವುದು ಬೇಸಗೆಯಲ್ಲಿ. ಆಗ ಅದೇ ವಸಂತಾಗಮನ. ಬನ ಬನಗಳು ಚಿಗಿತು ಕೊನರಿಟ್ಟು ಹೂ ತುಂಬಿ ನಿಲ್ಲುವುವು. ಪಕ್ಷಿಗಳಿಗೆ ಹೊಸ ದುಪ್ಪಳ ಬಂದು ಅಂದವಾಗಿ ಕಾಣುವುವು. ನಿಸರ್ಗದೆಲ್ಲೆಡೆಗಳಲ್ಲಿಯೂ ನವ ಚೈತನ್ಯವು ಉಕ್ಕಿ ಬರುವುದು. ಈ ಚೈತನ್ಯವು ನಿಸರ್ಗದಿಂದ ಮಾನವ ಕುಲಕ್ಕೂ ಉಕ್ಕಿ ಬಾರದಿರುವುದೇ ? ಆಗ ಮಾನವನಿಗೆ ಇಲ್ಲದ ಹರೆಯುಕ್ಕಿ ಬರುವುದು. ಹೌಸು ಹವ್ಯಾಸಗಳ ರೆಕ್ಕೆಗಳನ್ನು ಬಿಗಿದುಕೊಂಡು ಮಾನವನ ಈ ಹರೆಯು ವಸಂತಮಾಸದಲ್ಲಿ ಮೋಜುಮಜಲಿನೊಡನೆ ಸುಳಿದಾಡಹತ್ತುವುದು. ಇದೇ ಹೋಳಿಯಾಗಿ ಜನತೆಯಲ್ಲಿ ಪರಿಣಮಿಸಿದೆ ಎಂದು ಹೇಳಬಹುದು. ನಡುಹರೆ ಕಳೆದುಕೊಂಡ ಮುದುಕರು ಸಹ ನವತರುಣರಾಗಿ ಬಲು ಹುರುಪಿನಿಂದ ಹೋಳಿಯನ್ನಾಡಲು ಮನೆಬಿಟ್ಟು ಹೊರಬೀಳುವರು. ಹೋಳಿ ಹುಣ್ಣಿಮೆಯ ದಿವಸ ಕಾಮನ ಸುಂದರವಾದ ಪ್ರತಿಮೆಯನ್ನು ಮಾಡಿಸಿ, ಶೃಂಗಾರಮಾಡಿ ಊರ ಕಾಮನ ಕಟ್ಟೆಯ ಚಾವಣಿಯ ಹಂದರದಲ್ಲಿ ಬಲು ಡೌಲಿನಿಂದ ಕಾಮನನ್ನಿಡುವ ವಾಡಿಕೆಯಿದೆ. ಹಲಕೆಲವು ಭಾಗಗಳಲ್ಲಿ ಕಾಮನ ಎಡಭಾಗಕ್ಕೆ ರತಿ ದೇವಿಯ ಹೆಣ್ಣು ಗೊಂಬೆಯನ್ನೂ ಇಡುವರು. ಕೆಲವು ಹಳ್ಳಿಗಳಲ್ಲಿ 'ಸರಕಾರ ಕಾಮ'ನೆಂತಲೂ, 'ದೈವದ ಕಾಮ' ನೆಂತಲೂ, 'ಓಣಿಯ ಕಾಮ'ನೆಂತಲೂ ಕಾಮಣ್ಣನನ್ನಿಡುತ್ತಾರೆ. ಮೊದಲು ರಾಜಾಂಗಣದಲ್ಲಿ ಕಾಮನನ್ನಿಟ್ಟು ಆಡುವ ವಾಡಿಕೆಯಿತ್ತು. ಆ ಕಾಲದಲ್ಲಿ ಭರತಖಂಡದ ರಾಜಮನೆತನಗಳು ಆಡಿದ ಹೋಳಿಯ ಹಬ್ಬದ ಚಿತ್ರಗಳನ್ನು ಸಂಸ್ಕೃತ ಕವಿಗಳ ನಾಟಕಗಳ 'ವಸಂತ ಮಹೋತ್ಸವ' ವರ್ಣನೆಗಳಲ್ಲಿ ಕಾಣಬಹುದಾಗಿದೆ. ಕರ್ನಾಟಕದಲ್ಲಿ ಆಗಿಹೋದ ರಾಜ ಮನೆತನಗಳಲ್ಲಿ ವಿಜಯನಗರದ ಅರಸರು ಇದನ್ನು ಪಾಲಿಸುತ್ತ ಬಂದಿದ್ದಾರೆ. ಈಗಲೂ ಹಳ್ಳಿಗಳಲ್ಲಿರುವ 'ಸರಕಾರ ಕಾಮ'ನಿಗೆ ಸರಕಾರದಿಂದ ಮಾನ ಮನ್ನಣೆಯು ಬರುತ್ತಿದೆ. 'ದೈವಕಾಮ'ನಿಗೆ ಊರ ದೈವದಿಂದ ಮಾನ ಮನ್ನಣೆಯು ದೊರೆಯುತ್ತಿದೆ. ಕಾಮನ ಮುಂದೆ ಮಂಗಲ ವಾದ್ಯಗಳನ್ನು ಬಾರಿಸುವ, ಊದುವ ಸನಾದಿ ಕೊರವರಿಗೆ 'ಕಾಮನ ಮಾನೆ'ಗಳೆಂಬ ಭೂಮಿಗಳೂ ಕೊಡಲ್ಪಟ್ಟದ್ದು ನಿದರ್ಶನಕ್ಕೆ ಬರುವುದು. ಹಲಕೆಲವು ಹಳ್ಳಿಗಳಲ್ಲಿ ಇತ್ತೀಚೆಗೆ ಹೋಳಿಯ ಆಟದಲ್ಲಿ ಪಕ್ಷ ಪಂಗಡಗಳಾಗಿ ಓಣಿ ಓಣಿಗೆ ಸಹ ಕಾಮನನ್ನಿಡುತ್ತ ಬಂದಿದ್ದಾರೆ. ಇವೇ 'ಓಣಿಯ ಕಾಮ' ಗಳಾಗಿವೆ. ಅಲ್ಲದೆ ಕರ್ನಾಟಕದಲ್ಲಿ ಕಾಮನಕಟ್ಟೆ, ಹೋಳಿಕಟ್ಟೆ, ಕಾಮಣ್ಣವರ ಎಂಬ ಹೆಸರಿನ ಮನೆತನಗಳೂ ಇರುವುವು.

ಕಾಮನಿಟ್ಟ ಹಂದರದಲ್ಲಿ ಜನರು ತಂಡಿಟ್ಟು ಕೂಡಿ, ಹಾಡಿ, ಬಾರಿಸಿ ಆಡುವುದುಂಟು. ಹೋಳಿಯ ಆಟವು ಇಂತಹದೇ ಇರಬೇಕೆಂಬ ನೇಮನಿತ್ಯವಿಲ್ಲ. ಅಶ್ಲೀಲ, ಅಸಹ್ಯವಾದ ಮಾತುಗಳನ್ನಾಡಿ ಜನರು ಕಾಡ ಸ್ಥಿತಿಯ ಪ್ರವೃತ್ತಿಗಿಳಿಯುವುದುಂಟು. ವಿಕಾರ ರೂಪ

* 'ಶಾಬರಭಾಷ್ಯ' ಆನಂದಾಶ್ರಮದ ಮುದ್ರಣ. ಪುಟ ೨೫೦

ತಾಳಿ ಒಬ್ಬರಿಗೊಬ್ಬರು ಬೈದಾಡುವುದೂ ಹೊಲಸು ಪದಾರ್ಥಗಳನ್ನು ಒಬ್ಬರಮೇಲೊಬ್ಬರು ಸೂರಾಡುವುದೂ ಅಣಕಿಸಿ ಗೇಲಿ ಮಾಡುವುದೂ ಕಂಡುಬರುವುದು.

ಹೋಳಿ ಹುಣ್ಣಿವೆ ಬಂತು ಹೊಯ್ಕೊಳ್ಳದು ಬಂತು
ಹೋಳ್ಗಿ ತುಪ್ಪುಣ್ಣುದು ಬಂತೊ ||

ಎಂದು ಹಾಡಿ ಮನೆಮನೆಯ ಮುಂದೆ ನಿಂತು ಹೊಯ್ಕೊಂಡು ಹೋಳಿಗೆ ಮೊದಲಾದುವುಗಳನ್ನು ಕದ್ದೂ ತಿನ್ನುವರು. "ಢುಂಢು ಅಥವಾ ಹೋಲಿಕಾ ಎಂಬ ರಾಕ್ಷಸಿಯ ತೃಪ್ತಿಗಾಗಿ ತುಚ್ಛ ಭಾಷಣಗಳನ್ನುಚ್ಚರಿಸ ಬೇಕು ಎಂದು ಪುರಾಣ ಕಥೆಯಿದೆ ! " * ಹೀಗೆ ಪುರಾಣ ದಿಂದ ಬಂದ ಈ ಹಕ್ಕೂ ಈಗ ಜನತೆಯಲ್ಲಿ ಸಂಪ್ರದಾಯ ವಾಗಿಬಿಟ್ಟಿದೆ.

ಕಾಮಣ್ಣ ಕಟ್ಟುತಲಿ ಗೊನೆಮುಳ್ಳ ಸುರಿಯುತಲಿ
ಸೀತಳ ಬಾವಿ ತಗೆಸುತಲಿ | ನಮಕಾಮ
ಜೀತ ಹೋಗ್ಯಾನ ಶಿವನಲ್ಲಿ |

ಎಂದು ಕಾಮನು ಶಿವನ ಸೇವೆಗೆ ಹೋದನೆಂದು ಹಾಡು ವರು. ಕೆಲವು ಭಾಗಗಳಲ್ಲಿ ಓಕಳಿಯಾಡಿ ಸೋಗುಗ ಳನ್ನು ಕಟ್ಟಿಕೊಂಡು ಹಗಲಿರುಳು ಜನರು ಹಾಡಿ ಕುಣಿ ಯುವುದು ಗೋಚರವಾಗುವುದು. ಈ ಹಬ್ಬದ ವಿಶೇಷ ಉತ್ಸವವನ್ನು ಉತ್ತರ ಕರ್ನಾಟಕದೊಳಗೆ ಬಾಗಲಕೋಟೆ ಯಲ್ಲಿ ಕಾಣಬಹುದಾಗಿದೆ.

ಹಳ್ಳಿಗಳೊಳಗೆ ಕಾಮನ ಸದರಿನಲ್ಲಿ ಸಭೆ ಕೂಡಿ ಜನರು ಹಾಡುತ್ತಾರೆ. ಹಳ್ಳಿಯ ಜೋಲತಿಯರು ಸುರಿತ ವರಾಗಿ ಹೋಳಿಯ ಹಾಡುಗಳನ್ನು ಊರ ಗಂಡಸರ ಕೂಡ ಹಾಡಲು ತೊಡಿಯ ಒಡ್ಡುವರು. ಹೋಳಿಯ ಹಾಡುಗಳು ಲಾವಣಿಗಳಿರಬಹುದು, ದುಂದುಮೆಗಳಿರ ಬಹುದು, ದುಂಡು ಮಲ್ಲಿಗೆಯ ಸೋಬಾನಗಳಿರಬಹುದು, ಕೇವಲ ತ್ರಿಪದಿಯ ಬಿಡಿ ಹಾಡುಗಳಿರಬಹುದು; ಹೆಜ್ಜೆಯ ಕುಣಿತಗಳಲ್ಲಿರುವುವಲ್ಲದೆ ಕೋಲಿನಲ್ಲಿಯೂ ಕಂಡು ಬರುವುವು. ಉತ್ತರ ಕರ್ನಾಟಕದಲ್ಲಿ ಜನರು ಕಾಮ ನನ್ನು ಬೇವಿನ ಹೂವಿನಿಂದ ಸಿಂಗಾರ ಮಾಡುವರಲ್ಲದೆ ತಾವೂ ಸಿಂಗಾರ ಮಾಡಿಕೊಳ್ಳುವರು. ಭರತಖಂಡ ದಲ್ಲಿಯ ಪ್ರಾಚೀನ ಋಷಿಗಳಿಗೆ ಕರ್ನಾಟಕದಲ್ಲಿ ಬೆಳೆ ಯುವ ಬೇವಿನ ಹೂ (ಕಾಮನ ಹೂ) ದೃಷ್ಟಿಗೆ ಬಿದ್ದಂತೆ ಕಂಡು ಬರುವುದಿಲ್ಲ. ಬಿದ್ದಿದ್ದರೆ ಪಂಚಪುಷ್ಪ ಬಾಣಗಳ ಕಾಮನು ಷಡ್ಪುಷ್ಪ ಬಾಣಗಳುಳ್ಳವನಾಗುತ್ತಿದ್ದನೇನೊ ? ಹೋಳಿಯಲ್ಲಿ ಸುಂದರ ಸುವಾಸಿಕವಾದ ಬೇವಿನ ಹೂವನ್ನು ಮುಡಿಯದ ಹಳ್ಳಿಗನಿಲ್ಲ. ಹೀಗೆ ಸಿಂಗಾ ರಾಗಿ ಹೋಳಿಯ ಹಾಡನ್ನು ಹಾಡಲು ನಿಂತ ಹಳ್ಳಿಯ ಹೊಲತಿಯರೂ ಗಂಡಸರೂ ತೊಡಿಯನ್ನು ಬೇಸರಾಗುವ ತನಕ ಹಾಡುತ್ತಾರೆ. ಹಾಡು ಮುಗಿಯಲು ಅವರಿಗೆ ಊರವರು ಕೂಡಿ ಉಡುಪು ಮೊದಲಾದುವುಗಳನ್ನು ಕೊಡುವ ಪದ್ಧತಿಯೂ ಉಂಟು.

ಮಜಲೀಗೆ ಬಂದೀವಿ ಮಾರಿಮಾರಿ ನೋಡ
ಬ್ಯಾಡ್ರಿ
ತೋಡೀಗೆ ತೋಡಿ ಹಾಡಬೇಕ್ರಿ | ಹುಡಗೇರ
ಓಡೋಡಿ ಮುಂದ ಹೋಗಬ್ಯಾಡ್ರಿ ||
ಮಲ್ಲೀಗೆ ದುಂಡ ಮಲ್ಲೀಗೆ ||ಪ||
ಹೋಳಿಯ ಹಬ್ಬಕ ಮೇಳಾಗಿ ಹಾಡೂನ
ವಾಳ್ಯಾಗ ಬ್ಯಾಡ ನನಗೆಣತಿ || ಮಲ್ಲೀಗೆ ||
ವಾಳ್ಯಾಗ ಬ್ಯಾಡ ನನಗೆಣತಿ | ಬಂದಾರ
ಕೇಳಾಕ ಮಂದಿ ನಮ್ಹಾಡ || ಮಲ್ಲೀಗೆ ||

ಹೀಗೆ ಮೊದಲು ಕೆಣಕೆಣಕಿ ಪಣ ಕಟ್ಟಿಕೊಳ್ಳುವರು. ಹಾಡನ್ನು ಆರಂಭ ಮಾಡುವ ಮುನ್ನ ಎರಡೂ ಪಂಗಡ ದವರು ಗಣಪತಿಯನ್ನು ಸ್ತೋತ್ರಮಾಡಿಯೇ ತಮ್ಮ ಹಾಡುಗಳನ್ನು ಆರಂಭಿಸುವರು. ಓದು ಬರಹವನ್ನರಿ ಯದ ಈ ಜನರ ಹಾಡುಗಳನ್ನು ಕೇಳಿದರೆ ವಾಗ್ದೇವಿಯು ಇವರ ಕವಿತ್ವಕ್ಕೆ ಮೆಚ್ಚಿ ನಾಲಿಗೆಯ ತುದಿಯಲ್ಲಿ ತನ್ನ ವೀಣೆಯನ್ನು ನುಡಿಸುವಳೇನೊ ಎಂಬಂತೆ ಭಾಸವಾಗು ವುದು. ಶೀಘ್ರ ಕವಿಗಳಾಗಿ ಬಾಯಿಯಲ್ಲಿ ಬಂದದ್ದನ್ನೇ ಹಾಡುವುದನ್ನು ನೋಡಿದರೆ ಕಲಿತವರೆಂದು ಹೆಮ್ಮೆ ಕೊಚ್ಚಿಕೊಳ್ಳುವ ಪಂಡಿತರೂ ತಲೆ ತಗ್ಗಿಸಬಹುದು.

ಗಣಪತಿ ನಾನಿನ್ನ ಚಣಚಣಕ ನೆನೆದೇನೊ
ಅಣ ಅಣಕ ಆಡು ಜನಕೆಲ್ಲ | ಬಾಯಾಗ
ತುಣ ತುಣಕ ಬೆಲ್ಲ ಒಗೆದ್ಹಾಂಗೊ||
ಅಕ್ಕ ಪಾರ್ವತಿ ಮಗನು ಚಿಕ್ಕವನು ಗಣಪತಿಯೊ
ನೆಪ್ಪಮಾಡಿ ನಿನ್ನ ನೆನದೇನೋ | ಗಣನಾಥ

* 'ಕರ್ನಾಟಕ ಸಂಸ್ಕೃತಿ' ಪು. ೪೪–by ದೇವುಡು.

ತಪ್ಪಿದಲ್ಲೆನಗ ಬೆಸನಾಗೊ ||
ಬುದ್ಧಿ ಗಣಪತಿ ಮುಂದ ಭೂಮೀಗೆ ಫಲಮುಂದ
ಗುಡ್ಡಕ ಮುಂದ ಹುಲಿಯಪ್ಪ | ಮುಂದಿರುವ
ಗುದ್ದಿಗೆ ಮುಂದ ನರಿಯಪ್ಪ ||
ಬೆನಕ ನಾಲಿಗೆ ಮ್ಯಾಲೆ ನೆನಿಬಾರೊ ಹಾಡುದಕ
ಕಣಕಟ್ಟಿ ಮಂದಿ ಕೂಡ್ಯೆತೊ | ಕೇಳುದಕ
ಮನಕ ಬೆಸನಾಗೊ ನುಡಿನುಡಿಗೊ ||
ಕೂತೀರು ಸಭದವರ ನಿಂತೀರು ಸಭದವರ
ಚಿತ್ತಿಟ್ಟು ಕೇಳ್ರಿ ನಮ್ಹಾಡ | ಸಭದವರ
ಕೈಮುಗಿದು ನಾವು ಹಾಡ್ತೀವ್ರಿ ||

ಎಂದು ಕೂಡಿದ ಜನದಲಿ ಗಣಪತಿಯನ್ನು ಹೊಗಳಿ ನಮಸ್ಕರಿಸಿ ಜನರಿಗೆ ತಮ್ಮ ಹಾಡನ್ನು ಚಿತ್ತಿಟ್ಟು ಕೇಳಲು ಬೇಡಿಕೊಳ್ಳುವರು. ಇಷ್ಟಾದಮೇಲೆ ಅವರು ಪ್ರಾರಂಭ ಮಾಡುವುದು ಹೋಳಿಯ ಹಾಡ.

ಆನಿಗಂಬಾರಿ ಚೆಂದ ಕುದುರೀಗೆ ಥಡಿ ಚೆಂದ
ಸದರೀಗೆ ಚೆಂದ ಕಾಮಣ್ಣ | ಬಗಲಾಗ
ರೂಪಕ ಚೆಂದ ರತಿದೇವಿ ||

ಹೀಗೆ ಕಾಮನ ಸದರನ್ನು ಹಾಡಿ ಹೋಳಿಯ ಸಂಪ್ರದಾಯವು ಜನಪದದಲ್ಲಿ ಹೇಗೆ ಬಂತೆಂಬುದನ್ನು ಬಲು ಮಾರ್ಮಿಕವಾಗಿ ಹಾಡುತ್ತಾರೆ. ಸ್ಕಂದ ಪುರಾಣದಲ್ಲಿಯೂ ಶಿವಪುರಾಣದಲ್ಲಿಯೂ ಕಾಮದಹನವು ಬರುತ್ತದೆ. ಬಹುತರವಾಗಿ ಸಂಸ್ಕೃತ ಕವಿಗಳಾಗಲಿ, ಕನ್ನಡ ಕವಿಗಳಾಗಲಿ ಈ ಪ್ರಸಂಗವನ್ನು ತಮ್ಮ ಕಾವ್ಯಗಳಲ್ಲಿ ಈ ಗ್ರಂಥಗಳಿಂದಲೇ ಆಯ್ದುಕೊಂಡಿದ್ದಾರೆ. ಕಾಳಿದಾಸನು ತನ್ನ ಕುಮಾರ ಸಂಭವದಲ್ಲಿ ಇದನ್ನು ಪ್ರಸಂಗಕ್ಕೆ ಒಪ್ಪುವ ಶೃಂಗಾರಮಯ ಶೈಲಿಯಲ್ಲಿ ಹೇಳಿದ್ದಾನೆ. ಹರಿಹರನು 'ಗಿರಿಜಾಕಲ್ಯಾಣ'ದಲ್ಲಿಯೂ ಈ ಪ್ರಸಂಗವನ್ನೇ ಬರೆದಿದ್ದಾನೆ. ಯಾರೇ ಹೇಳಲಿ ಪೌರಾಣಿಕ ಪರಂಪರೆಗೆ ಶರಣು ಹೋಗಿ ಈ ಪ್ರಸಂಗವನ್ನು ಹಾಡಿದ್ದಾರೆ. ಆದರೆ ಜನಪದವು ಈ ಸಂದರ್ಭದಲ್ಲಿ ಪೌರಾಣಿಕ ಪುರುಷರನ್ನೆತ್ತಿಕೊಂಡಿದ್ದರೂ ಅವರಿಗೆ ಲೌಕಿಕವನ್ನಂಟಿಸಿದೆ. ದೇವರಿದ್ದರೇನು? ದೇವತೆಗಳಿದ್ದರೇನು? ಮನೋಭಾವನೆಗಳ ತಾಕಲಾಟದಲ್ಲಿ ವ್ಯಾಪಾರಗಳನ್ನು ಅವರಲ್ಲಿ ಒಡಮೂಡಿಸಿ ಮಾನವರಂತೆ ಮಾತಾಡಲು ಹಚ್ಚಿದೆ.

ಪಾರೋತಿ ಮಾದೇವ ಏರಿಸಭದಾಗಿರಲು
ಪಾರೋತಿ ಹೇಳ ಚೆಲುವ್ಯಾರ| ಕೇಳುದುಕ
ತೀರ ಚೆಲುವಾನ ಕಾಮಣ್ಣ ||
ಸಿಟ್ಟಿಗೇಳುತ ಶಿವನು ಬಿಟ್ಟಾನೊ ಉರಿಗಣ್ಣ
ಸುಟ್ಟು ಬೂದ್ಯಾದೊ ಕಾಮಣ್ಣ | ರತಿದೇವಿ
ಹೊಟ್ಟೆ ಬಡಕೊಂಡು ಅಳತಾಳೊ ||

ಎಷ್ಟು ಪ್ರಪಂಚದ ಮಾತಾಗಿದೆ ಕಾಮದಹನವು ನಮ್ಮ ಜಾನಪದ ಸಾಹಿತ್ಯದಲ್ಲಿ! ಕೂಡಿದ ಸಭೆಯಲ್ಲಿ 'ನಾಚೆಲುವ' 'ನೀ ಚೆಲುವ' ನೆಂದು ವಾದವಿವಾದ ನಡೆಯಿತಂತೆ! ಶಿವನು ಜಗತ್ತಿನಲ್ಲಿ ಯಾರು ಚಲುವನೆಂದು ಪಾರ್ವತಿಯನ್ನು ಕೇಳಲು ಅವಳು ಏಕೋಭಾವದಿಂದ 'ಕಾಮ' ಚೆಲುವನೆಂದು ಅಂದಳಂತೆ! ಗಂಡಸಿಗೆ ಸಿಟ್ಟು ಬಾರದೇನು ಮಾಡೀತು? ಹೆಂಡತಿಯು ಕೂಡಿದ ಸಭೆಯಲ್ಲಿ ಮನೆಯ ಗಂಡನ ಚಲುವಿಕೆಯನ್ನೊಪ್ಪದೆ ಅನ್ಯ ಪುರುಷನು ಚೆಲುವನೆಂದರೆ ಗಂಡಸಿಗೆ ಹೇಗಾಗಬಹುದು? ಹಾಗೆ ಮಹಾದೇವನಿಗಾಗಿದೆ ಪಾರ್ವತಿ ಮಾತಿಗೆ! ಸಿಟ್ಟು ಬಾರದ ಶಿವನು ಮಡದಿ ಪಾರ್ವತಿಯ ಮಾತನ್ನು ಕೇಳಿ ಕೆರಳಿದ! ತನ್ನ ಉರಿಗಣ್ಣನ್ನೇ ಕಾಮನ ಮೇಲೆ ಬಿಟ್ಟು ಬಿಟ್ಟ! ಮುಂದೇನು? ಹಣೆಗಣ್ಣಿನ ವಳ್ಳುರಿಗಳು ನಾಲಿಗೆಯನ್ನು ಚಾಚಿ ಚಾಚಿ ಲೋಕ ಚೆಲುವ (ಕಾಮ) ನನ್ನು ಹಾ! ಅನ್ನುವುದರೊಳಗೆ ನುಂಗಿಯೇ ಬಿಟ್ಟುವು. ಕಾಮನು ಸುಟ್ಟು ಬೂದಿಯಾದ; ರತಿ ದೇವಿಯ ವಿಲಾಪವೇ ವಿಲಾಪ! ಜನರಲ್ಲಿ ಕಳವಳವೇ ಎದ್ದಿತು. ಇಷ್ಟೆಲ್ಲ ಅನಿಷ್ಟಕ್ಕೆ ತಾನೇ ಕಾರಣಳೆಂದು ಪಾರ್ವತಿಗನಿಸಲು ಅವಳೂ ಶೋಕಮಾಡಹತ್ತಿದಳು. ಶಿವನ ಕರಳೂ ಕರಗಿತು.

ಅಳುವ ಬಾಲಿಯ ಕಂಡು ಕಳವಳವೊ ಸಭದಾಗೊ
ಅಳಬ್ಯಾಡ ರತಿಯೆ ಮನಿಸೊಸಿಯೆ | ಕಾಮಣ್ಣ
ಮನದಾಗ ಮೂಡಿ ಬರತಾನ ||
ಹೊರಳಾಡಿ ಅಳಬ್ಯಾಡ ಎರವಾದ ಕಿಚ್ಚೀಗೆ
ಕರೆದಾಗ ಬರುವ ರತಿದೇವಿ | ಮನದಾಗ
ಚಿರವಂತ ಕಾಮ ನೆನದಾಗ ||

ಎಂದು ಮಹಾದೇವನು ರತಿಯನ್ನು ಸಮಾಧಾನ ಮಾಡುವನು. ಕಾಮದಹನದ ಪೌರಾಣಿಕ ಕಥೆಯು

ನಿಮಿತ್ತವು ಬಲು ದೊಡ್ಡದಾಗಿವೆ. ಅದಕ್ಕೆ ಲೌಕಿಕದ ಮಾತೇ ಇಲ್ಲ. ತಾರಕಾಸುರನ ವಧೆಯೇ ಮೂಲ ಮಾತಾಗಿವೆ. ಅದಾಗಬೇಕಾದರೆ ಶಿವ ಪಾರ್ವತಿಯರು ಕೂಡಿ ಷಣ್ಮುಖನನ್ನು ಹಡೆಯಬೇಕು. ಇದಾಗಬೇಕಾದರೆ ಹಿಮಾಲಯದಲ್ಲಿ ತಪಸ್ಸಿನಲ್ಲಿದ್ದ ಶಿವನನ್ನು ಕಾಮನು ತಡವಿ ಆವನ ತಪೋಭಂಗ ಮಾಡಬೇಕು. ಆಗ ಶಿವನು ಸಿಟ್ಟಿಗೆದ್ದು ಕಾಮನನ್ನು ಸುಡುತ್ತಾನೆ. ಜನಪದ ಕಥೆಯಲ್ಲಿರುವ ಸಹಜತೆಯು ಇಲ್ಲಿ ಕಂಡುಬರುವುದಿಲ್ಲ. ಮಾನವ ಭಾವನೆಗಳು ತೀವ್ರ ಒಡಮೂಡುವುದಿಲ್ಲ. ಕಾಮದಹನವು ಪುರಾಣದಲ್ಲಿ ಅಸಂಬದ್ಧ, ಅಸಮಂಜಸ ಕಾಣದಿದ್ದರೂ ಅದರಲ್ಲಿ ಮಾನವೀಯತೆ ಕಂಡುಬರುವುದಿಲ್ಲ. ಆದರೆ ಜಾನಪದ ಕಾಮದಹನವು ಮಾನವ ಮನೋವ್ಯಾಪಾರಗಳ ಪರಿಜ್ಞಾನದ ಪ್ರತಿಬಿಂಬವಾಗಿದೆ. ಅಂದಮೇಲೆ ಜನಸಾಮಾನ್ಯವು ಅದಕ್ಕೆ ತಲೆದೂಗದಿರುವುದೇ?

ಮಳಲ ಬಿಂದಿಗಿ ಮಾಡಿ ಜುಳಕ ಹಾವಿನ ಸಿಂಬಿ
ಹೊಳೆಯ ತೆರೆಹೊಡೆದು ತುಂಬ್ಯಾರೊ| ಎಳದೇರು
ತುಳಿ ತುಳಿದು ಹಾದಿ ಬರುವಾಗ ||
ಮಳಲ ಬಿಂದಿಗಿ ಕರಗಿ ಸುಳಿದು ಸಿಂಬಿಯ ಹಾವು
ಜಳ ತಾಕಿ ಕಾಮ ಸುಡುತಿರಲು | ಎಳದೇರು
ಅಳು ಅಳುಕಿ ಕಳಚಿ ಕೈಬಿಟ್ಟು ||

ಹೀಗೆ ಹಾಡಿದ ಈ ಜೆಡಗಿನ ಹಾಡಿನಲ್ಲಿ ಹರೆಯದ ಹುಡುಗಿಯರ ಕಾಮವು ತುಂಬಿದ ಮಳಲ ಬಿಂದಿಗೆಯಾಗಿದೆ. ಹಾದಿಯನ್ನು ತುಳಿದು ಬರುವಾಗ ಕಾಮದಹನದ ಜಳ ತಾಕಲು ಜುಳುಕು ಹಾವಿನ (ಕಾಮಲಾಲಸೆ) ಸಿಂಬಿ ಸುಳಿದು ಮಳಲ ಬಿಂದಿಗೆಯು ಕರಗಲು ಎಳದೆಯರ ತುಂಬಿದ ಕಾಮ ಕೊಡವು ಕಾಮ ಸುಳಿದಾಡಿ ಕಳಚಿರುವುದೇ? ಇಂತಹ ಕಾಮನ ಸ್ಮಾರಕವೇ ಇಂದು ಹೋಳಿಯಾಗಿದೆ; ಸಂಪ್ರದಾಯವಾಗಿ ಉಳಿದು ಬಂದಿದೆ.

ಹೋಳಿಯನ್ನು ಶಿವಶರಣರೂ ಹರಿದಾಸರೂ ಆಡಿ ಹಾಡಿದ್ದಾರೆ. ಬಸವಾದಿ ಪ್ರಮಥರು ಆಡಿದ 'ಕಲಿಕಾಲ ಹೋಳಿ' ಯೇ ಇದಕ್ಕೆ ಸಾಕ್ಷಿ. ಜೆಡಗನ್ನೊಳಗೊಂಡ ಶಿವಶರಣರ ಈ ಕಲಿಕಾಲ ಹೋಳಿಯ ಅರ್ಥವನ್ನು ಮಾಡುವುದೇ ಬಲು ಕಠಿಣವಾಗಿದೆ.

ದುಂದುಮೆಯೆಂತೆಂದು ಪಾಡೀರಿ ಜನರು
ದುಂದುಮೆ ಬಸವಂತನ ಹಬ್ಬ ದುಂದುಮೆ ||ಪ||
ಅಂಬರ ಪಂಡೀಗಿ ಆಟಾವ ತಗಿದಾರು
ಕುಂಬಾರ ತಿಗರೀಯ ಸುಟ್ಟಾರು ಮಾ ।
ಇಂಬು ಇಲ್ಲೆಂದೆಂಬೂತ ಕಾಮು ತನ್ನ
ಅಂಬು ಬಿಟ್ಟದನರಿಯರು ಹರಳ ||ದುಂ||

ಎಂದು ಬಸವಣ್ಣನವರು ಹರಳನಿಗೆ ಈ ಕಾಲಜ್ಞಾನದ ದುಂದುಮೆಯನ್ನು ಹೇಳಿದ್ದಾರೆ. ಇದನ್ನು ಕೇಳಿದ 'ಗುದ್ದಲಿ ಮಲ್ಲಪ್ಪನು' ಈ ಹಾಡನ್ನು ಸಾರಿದನೆಂದು ಆ ಚಿಕ್ಕ ಪುಸ್ತಕದಲ್ಲಿ ಬಂದಿದೆ. ಈ 'ಗುದ್ದಲಿ ಮಲ್ಲಪ್ಪನು' ಯಾರು ಎಂಬುದು ಇನ್ನೂ ಗೊತ್ತಾಗಿಲ್ಲ. ಶಿವ ಶರಣರಿಗೆ ಹೋಳಿಯ ಪರಿಶಿಯು ತಮ್ಮ ತತ್ವ ವಿಚಾರಗಳನ್ನು ತಿಳಿಸುವದಕ್ಕಾಗಲಿ, ಇಲ್ಲವೆ ಕಾಲಜ್ಞಾನ ವಚನಗಳನ್ನು ದುಂದುಮೆಯಲ್ಲಿ ಸಾರುವದಕ್ಕಾಗಲಿ ಅನುಕೂಲವಾಗಿರಬೇಕು. ಆದುದರಿಂದ ಶಿವಶರಣರು ಹೋಳಿಯಲ್ಲಿ ದುಂದುಮೆಗಳೊಡನೆ ಕಾಲಜ್ಞಾನವನ್ನು ಸಾರುವ ಸಾಹಸವನ್ನು ಮಾಡಿದಂತೆ ಕಂಡುಬರುವುದು. ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿಯ ಕರಸ್ಥಲದ ವೀರಣ್ಣೊಡೆಯರ ಶಿಷ್ಯನಾದ, ಕರಸ್ಥಲದ ನಾಗಲಿಂಗನು ಹೋಳಿಯಲ್ಲಿ ಕಾಲಜ್ಞಾನವನ್ನು ಹಾಡುತ್ತಿದ್ದನೆಂದು ಕಾಣುತ್ತದೆ.

ದಿಮ್ಮಿಸಲೆನ್ನಿರೊ ನಮ್ಮವರೆಲ್ಲ ದಿಮ್ಮಿಸಲೆನ್ನಿರೊ।
ದಿಮ್ಮಿಸಲೆಂದು ಬಿಡ್ವಾದೆ ಸತ್ಯವುಳ್ಳ
†ಶರಣರೆಲ್ಲ||ದಿ||ಪ||

ಎಂಬ ಹೋಳಿಯ ದುಂದುಮಿ ಪಲ್ಲವಿಯನ್ನು ತನ್ನ ಕಾಲಜ್ಞಾನದಲ್ಲಿ ಬಳಸಿದ್ದಾನೆ. ಹರಿದಾಸರಲ್ಲಿ ಪ್ರಸಿದ್ಧನಾದ ವಾದಿರಾಜನೂ ಈ ಹೋಳಿಯ ಪದಗಳನ್ನು ಹಾಡಿದ್ದಾನೆ.

ದಿಮ್ಮಿಸಲೆನ್ನಿ ಚಿಕ್ಕತಮ್ಮಗಳಿರ ಗೊಲ್ಲತೆರ ।
ಹಮ್ಮೈ ಸೊಕ್ಕು ಅವರ ಮುಡಿ ಸೆರೆಯಿಂದ
ಭಸ್ಮಪೂಸಿ ||

† 'ಕಾಲಜ್ಞಾನ ಸಂಗ್ರಹ' ಭಾಗ ೧ ಪು. ೭೫
ಸಂ. ಶ್ರೀ. ಶಿವಬಸವಸ್ವಾಮಿಗಳು.

ವಾದಿರಾಜಗೊಲಿದು ಒಂದು ಸೋದೆಯ
ಪುರದಲಿನಿಂದು |
ತೋದಿ ಹಯವದನ ಮೇಲಿ ಪರಿದು ಸೂಸಿ
ಭಸ್ಮವಾ ||

ಪಾಮರರನ್ನು ಪಾರಮಾರ್ಥಕಕ್ಕೆಳೆಯುವ ಸೂಕ್ಷ್ಮವಾದ ಬೆಡಗಿನೊಡನೆ ಕವಿಯು ಹೋಳಿಯನ್ನು ಹಾಡಿದ್ದಾನೆ. ಈ ಹಾಡುಗಳು ಬೆಡಗಿನ ಗಡುಚಾದ ಹಾಡುಗಳಾಗಿವೆ.

'ಕಾಮನ ಕರಿ' ಯಲ್ಲಿ ಒಕ್ಕಲಿಗನಿಗೆ ಬಲವಾದ ನಂಬಿಗೆಯಿದೆ. ಅವನು ಅದರಲ್ಲಿ ತನ್ನ ಭಾಗದ ವರುಷದ ಮಳೆಬೆಳೆಗಳನ್ನರಿತುಕೊಳ್ಳುವನು. ಕಾಮನ ಬೂದಿಯು ಸುಡುವ ಕಾಲಕ್ಕೆ ಯಾವ ದಿಕ್ಕಿಗೆ ಹಾರುವುದೊ ಆ ಭಾಗವು ಮಳೆಬೆಳೆಯಿಂದ ಸಮೃದ್ಧಿಯಾಗುವುದೆಂದು ನಂಬುವನು. ಕಾಮನ ಬೂದಿಯನ್ನು ತೂರಿದ ಮರು ದಿವಸ ಮಳೆಯಾಗಿ ಬೂದಿಯು ಭೂಮಿಯಲ್ಲಿ ಜಿರಿತರೆ ಲೋಕಕ್ಕೆ ರೋಗಾದಿಗಳ ಭಯವಿಲ್ಲೆಂಪೂ ಬೆಳಸು ಚನ್ನಾಗಿ ಬಂದು ಲೋಕವು ಸುಖದಿಂದ ಬಾಳುವು ದೆಂದೂ ತಿಳಿಯುವನು. ಅಲ್ಲದೆ ಕಾಮನ ಬೂದಿಯನ್ನು ತಂದು ಬಿತ್ತುವ ಬೀಜಗಳಲ್ಲಿಯೂ ಬೀಜಗೊಬ್ಬರವೆಂದು ಕೂಡಿಸಿ ಬಿತ್ತುವನು. ಹೀಗೆ ಮಾಡಿದರೆ ಬೀಜವು ಹುಸಿ ಹೋಗದೆ ನಾಟಿ ದೊಡ್ಡ ಬೆಳಸೂ ಬರುವುದೆಂಬ ನಂಬಿ ಗೆಯೂ ಅವನಿಗಿದೆ. ಕಾಮನಕರಿ (ಬೇವಿನ-ಹೂ-ಚಿಗಿರು) ಯನ್ನು ತಂದು ಕಣಜಗಳಲ್ಲಿಯೂ ಕಾಳು ತುಂಬುವ ಹಗೆಗಳಲ್ಲಿಯೂ ಚೀಲಗಳಲ್ಲಿಯೂ ಚಲ್ಲುವನು. ಅವನ ರಾಶಿ ಹುಲಸಾಗಿ ಈ ಭಂಡಾರಗಳು ತುಂಬಲೆಂದೇ ಅವನ ಮುಗ್ಧ ಭಾವನೆ. ಆವನು ಹೋಳಿಯನ್ನಾಡು ವನು. ಮೋಜುಮಜಲಿಗೆ ದುಡ್ಡು ಕೊಟ್ಟು ಹಾಡಿ ಕುಣಿಯುವನು.

ಹೋಳಿಯಾಡದ ನಾಡು ನಾಳೆನದೆಕಾಡಾತೊ
ಗೋಳಾತೊ ಜನಕ ಮೂಲಾತೊ | ಮಳೆಹೋಗಿ
ಹಾಳಾತೊ ಪಿಡಗೆದ್ದು ದಿನದಿನಕೊ ||.

ಎಂದು ಹಾಡಿದ್ದಾನೆ ರೈತ. ಇಷ್ಟೊಂದು ದೃಢವಾದ ನಂಬಿಗೆಯಿದೆ ಅವನಿಗೆ ಹೋಳಿಯಲ್ಲಿ. ಅಂತೆಯೇ ಅವನು ಹಾಡಿದ ಮೇಲಿನ ಪದ್ಯವು ಜನಪದಕ್ಕೆ ಹೋಳಿಯ ದಿವ್ಯ ಸಂದೇಶ. ಇದನ್ನು ಅವನು ಮರೆಯ ಬಹುದೇ ? ಪಟ್ಟಣಿಗರು ಈಗ ಹೋಳಿಯೆಂದರೆ ತಾತ್ಸಾರ ಭಾವ ತಾಳಹತ್ತಿದ್ದಾರೆ. ಇದಕ್ಕೆ ಪುಷ್ಟಿಯಾಗಿ ಇಂದಿನ ರಾಜಕಾರಣದ ಅಲ್ಲೋಲಕಲ್ಲೋಲವಾತಾವರಣ ಬಂದಿದೆ. ಸರಕಾರವು ಅದಕ್ಕಂಜಿ ಹೋಳಿಗೆ ನಿರ್ಬಂಧ ಹಾಕಹತ್ತಿದೆ. ಹಲಕೆಲವು ಭಾಗಗಳಲ್ಲಿ ತಡೆಯನ್ನೂ ಅಮಲಿನಲ್ಲಿ ತಂದಿದೆ. ಆದರೆ ಹಳ್ಳಿಗರು ಮಾತ್ರ ಈ ಸಂಪ್ರದಾಯವನ್ನು ಬಲು ಹುಮ್ಮಸದಿಂದಲೇ ಮಾಡುತ್ತ ಬಂದಿದ್ದಾರೆ. ಇದು ಕನ್ನಡಿಗರ ಸುದೈವವೆಂದೇ ಹೇಳ ಬಹುದಾಗಿದೆ. ಹೋಳಿಯು ಸಂಪ್ರದಾಯವಾದರೂ ನಮ್ಮ ಪೂರ್ವಜರು ಉಳಿಸಿ ತಂದು ಗಂಡಸಿಗೆ ಉಚಿತ ವಾಗಿ ಕೊಟ್ಟ ಜನ್ಮಸಿದ್ಧ ಹಕ್ಕು. ಅದನ್ನು ಗಂಡಸು ಕಳೆದುಕೊಳ್ಳಬಹುದೇ?

ಜಾನಪದಕ್ಕೆ ಶುಭಂ ಮಂಗಳಂ.

ಪರಿಪತ್ರ

ನಂ ಎಸ್. ೬೮/೧೮೪.೫ ಬೇಸಿಕ್)
ಪುಣೆ ೧, ೮-೩-೧೯೫೬

ವಿಷಯ :- **ಮೂಲೋದ್ಯೋಗದ ಅಭ್ಯಾಸ ಪತ್ರಿಕೆ ....**
ಜೀವನ ಶಿಕ್ಷಣ ಸಾಲೆಗಳಾಗಿ ಪರಿವರ್ತಿಸಲ್ಪಟ್ಟ ಕೆಳಗಿನ ಪ್ರಾಥಮಿಕ ಮತ್ತು ಒಬ್ಬ ಶಿಕ್ಷಕ ಸಾಲೆಗಳ ಸಲುವಾಗಿ

೧೯೫೫ನೆಯ ಜೂನ ತಿಂಗಳಿಂದ ಪೂರ್ಣ ಪ್ರಾಥ ಮಿಕ ಜೀವನ ಶಿಕ್ಷಣ ಸಾಲೆಗಳಲ್ಲಿ ೧ರಿಂದ ೭ನೆಯ ಇಯತ್ತೆಯ ವರೆಗೆ ಸೂಲುವ-ನೇಯುವ ಮೂಲೋ ದ್ಯೋಗದ ಹೊಸ ಅಭ್ಯಾಸ ಪತ್ರಿಕೆಯು ಬಳಕೆಯಲ್ಲಿ ಬಂದಿದೆ. (ಈ ಕಚೇರಿಯ ನಂ. ಎಸ್. ೬೮/೧೮೪ ಡ (ಬೇಸಿಕ್) ದಿನಾಂಕ ೧೮—೬—೧೯೫೫ನೆಯದನ್ನು

ನೋಡಿರಿ.) ಆದರೆ ತಯಾರಿಸಲ್ಪಡುವ ವಸ್ತುಗಳು ಸ್ವಯಂಪೂರ್ಣವಿರುವದಿಲ್ಲವಾದ್ದರಿಂದ ಈ ಅಭ್ಯಾಸ ಪತ್ರಿಕೆಯು ೧ರಿಂದ ೪ನೆಯ ಇಯತ್ತೆಯ ವರೆಗೆ ನೂಲುವದನ್ನು ಕಲಿಸುವ ಕಿರಿಯ ಅಥವಾ ಒಬ್ಬ ಶಿಕ್ಷಕನಿರುವ ಜೀವನ ಶಿಕ್ಷಣ ಸಾಲೆಗಳಲ್ಲಿ ಬಳಸಲ್ಪಡಲಿಕ್ಕೆ ಅಯೋಗ್ಯವೆಂದು ಕಂಡು ಬಂದಿದೆ. ಈ ಅಭ್ಯಾಸ ಪತ್ರಿಕೆಯಲ್ಲಿ ನೂಲುವದನ್ನು ಮಾತ್ರ ಒದಗಿಸಲಾಗಿದೆ; ಮೇಲಿನ ವರ್ಗಗಳು ಇಲ್ಲದ್ದರಿಂದ ೨ರಿಂದ ೪ನೆಯ ಇಯತ್ತೆಗಳಲ್ಲಿ ನೂತ ನೂಲನ್ನು ಉಪಯೋಗಿಸಲು ಅದರಲ್ಲಿ ಆಸ್ಪದವಿರುವದಿಲ್ಲ. ಹೀಗೆ ಸಂಗ್ರಹಿಸಲ್ಪಟ್ಟ ನೂಲನ್ನು ಬೇರೆ ಕಡೆಗೆ ಉಪಯೋಗಿಸುವದೊಂದು ಸಮಸ್ಯೆಯಾಗಿರುವದು. ಅಂತಿಮ ಪಕ್ವಾ ವಸ್ತುವು ಮಕ್ಕಳಿಂದ ತಯಾರಿಸಲ್ಪಡದ್ದರಿಂದ ನೂಲುವ ಮೂಲೋದ್ಯೋಗಕ್ಕೆ ಯೋಗ್ಯ ಪ್ರೇರಣೆಯಿಲ್ಲದಂತಾಗಿ ಅಭ್ಯಾಸ ಪತ್ರಿಕೆಯು ಕೊರತೆಯುಳ್ಳದ್ದಾಗುವದು. ಆದ್ದರಿಂದ ಒಬ್ಬ ಶಿಕ್ಷಕನಿರುವ ಸಾಲೆಗಳ ಮತ್ತು ೧ರಿಂದ ೪ನೆಯ ಇಯತ್ತೆಯವರೆಗೆ ಕಲಿಸುವ ಕಿರಿಯ ಜೀವನ ಶಿಕ್ಷಣ ಸಾಲೆಗಳ ಉಪಯೋಗಕ್ಕಾಗಿ ನೂಲುವ ಮತ್ತು ನೇಯುವ ಪ್ರತ್ಯೇಕ ಅಭ್ಯಾಸ ಪತ್ರಿಕೆಯನ್ನು ಇದರ ಜೊತೆಗೆ ಇಡಲಾಗಿದೆ. ಈ ಅಭ್ಯಾಸ ಪತ್ರಿಕೆಯು ಇದೇ ಜೂನ ತಿಂಗಳಿಂದ ಒಬ್ಬ ಶಿಕ್ಷಕನಿರುವ ಜೀವನ ಶಿಕ್ಷಣ ಸಾಲೆಗಳಲ್ಲಿಯೂ ಕಿರಿಯ ಜೀವನಶಿಕ್ಷಣ ಸಾಲೆಗಳಲ್ಲಿಯೂ ಹಾಗೂ ೧೯೫೭-೫೮ನೆಯ ಶಾಲಾವರ್ಷ ದಿಂದ ಜೀವನ ಶಿಕ್ಷಣ ಸಾಲೆಗಳೆಂದು ಪರಿವರ್ತಿಸಲಾಗುವ ಇಡೇತರದ ಸಾಲೆಗಳಲ್ಲಿಯೂ ಬಳಕೆಯಲ್ಲಿ ಬರುವದು.

೯. ಈ ಅಭ್ಯಾಸ ಪತ್ರಿಕೆಯು ಒಬ್ಬ ಶಿಕ್ಷಕನಿದ್ದ ಸಾಲೆಗಳಿಗೆ ಬೇಕಾಗುವ ಉಪಕರಣ ಹಾಗೂ ಅವುಗಳ ಬೆಲೆಯನ್ನು ತೋರಿಸುವ ಯಾದಿಯನ್ನು ಒಳಗೊಂಡಿದೆ. ಆಸನಗಳನ್ನು ನೇಯುವದಕ್ಕಾಗಿ ಸಾದಾತರದ ಚೌಕಟ್ಟಿನ ಮಗ್ಗಗಳ ಉಪಯೋಗವನ್ನು ಯೋಜಿಸಲಾಗಿದೆ. ಈ ಮಗ್ಗಗಳನ್ನು ಸಾಲೆಯ ಬಯಲು ಆವರಣ, ಕಟ್ಟೆ ಅಥವಾ ಯಾವದೇ ಅನುಕೂಲ ಸ್ಥಳದಲ್ಲಿ ಕೂಡ್ರಿಸಬಹುದಾದ್ದರಿಂದ ಮೂಲೋದ್ಯೋಗದ ಸಲುವಾಗಿಯೇ ಪ್ರತ್ಯೇಕ ಸ್ಥಳದ ಆವಶ್ಯಕತೆ ಬೀಳುವದಿಲ್ಲ. ಮುಂದಿನ ವರುಷದಿಂದ ಒಬ್ಬ ಶಿಕ್ಷಕನಿದ್ದ ಸಾಲೆಗಳನ್ನು ಸಹ ಜೀವನ ಶಿಕ್ಷಣ ಸಾಲೆಗಳೆಂದು ಪರಿವರ್ತಿಸುವ ಯೋಜನೆಯಿದ್ದು ಈ ಸಾಲೆಗಳಿಗೆ ಆವಶ್ಯವಿರುವ ಮೂಲೋದ್ಯೋಗದ ಉಪಕರಣಗಳನ್ನು ಗೊತ್ತುಪಡಿಸುವದಕ್ಕೆ ಈ ಯಾದಿಯನ್ನೇ ತಳಹದಿಯನ್ನಾಗಿ ಇಟ್ಟುಕೊಳ್ಳಬೇಕು.

ಸಹಿ:- ಡಿ. ವ್ಹಿ. ಚಿಕ್ಕರಮನೆ
ಶಿಕ್ಷಣಖಾತೆಯ ಡಾಯರೆಕ್ಟರರ ಪರವಾಗಿ

ನೂಲುವ-ನೇಯುವ ಮೂಲೋದ್ಯೋಗದ ಅಭ್ಯಾಸ ಪತ್ರಿಕೆ

ಒಬ್ಬ ಶಿಕ್ಷಕನಿರುವ ಸಾಲೆಗಳಿಗಾಗಿ (ಇಯತ್ತೆ ೧—೪)

೧ನೆಯ ಇಯತ್ತೆ

ಮೂಲೋದ್ಯೋಗ ಮತ್ತು ಜೀವನ ಶಿಕ್ಷಣ ಸಾಲೆಗಳ ಸಲುವಾಗಿ ಪ್ರಚಲಿತದಲ್ಲಿರುವ ಮೂಲೋದ್ಯೋಗದ ಅಭ್ಯಾಸ ಪತ್ರಿಕೆಯಲ್ಲಿ ಕೊಟ್ಟಂತೆ ಅಂದರೆ ಮಣ್ಣಿನ ಕೆಲಸ.

೨ನೆಯ ಇಯತ್ತೆ

೧. ಹತ್ತಿಯನ್ನು ಬಿಡಿಸುವದು (ಹತ್ತಿಯು ಬೆಳೆಯುವಲ್ಲಿ), ಹತ್ತಿಯನ್ನು ಸ್ವಚ್ಛ ಮಾಡುವದು ಮತ್ತು ಹಲಿಗೆ ಮತ್ತು ಕುಡದಿಂದ ಅರೆಯುವದು.

೨. ಬಿಲ್ಲಿನಿಂದ ಹಿಂಜುವದು ಮತ್ತು ನವತುನಾಯಿ

೩. ಹಂಜಿಗಳನ್ನು ತಯಾರಿಸುವದು.

೪. ತಕಲಿಯ ಮೇಲೆ ನೂಲುವದು.

೫. ಜೋಡಿಳಿ ಮಾಡುವದು.

೬. ಲಪೇಟಾದ (ಅಟೆರಾನ) ಮೇಲೆ ನೂಲನ್ನು ಸುತ್ತುವದು.

ಪಡೆಯಬೇಕಾದ ಮಟ್ಟ :-

ಮೂಲೋದ್ಯೋಗದ ಕೆಲಸದ ದಿನಗಳು :- ೨೦೦
ತಕಲಿಯ ಮೇಲೆ ನೂಲುವ ಪ್ರತಿ ತಾಸಿನ ಸರಾಸರಿ

ವೇಗ :- ೪೦ ಸುತ್ತುಗಳು.

ಒಟ್ಟು ಹುಟ್ಟುವಳಿ :- ತಕಲಿಯ ಮೇಲೆ ೬೪೦ ಸುತ್ತಿನ ಒಂಟೆಳೆಯ ೩ ಗುಂಡಿಗಳು.

ಸರಾಸರಿ ನಂಬರು :- ೮ರಿಂದ ೧೦

ಸರಾಸರಿ ಶಕ್ತಿ :- ೧೦೦ಕ್ಕೆ ೫೦ರಷ್ಟು

ಸರಾಸರಿ ಸಮಾನತೆ :- ೧೦೦ಕ್ಕೆ ೫೦ರಷ್ಟು

ಸೂಚನೆ :- ಆರಂಭದಿಂದ ಮಕ್ಕಳು ಪರಿಣಾಮಕ್ಕಿಂತ ಯೋಗ್ಯತೆಗೆ ಹೆಚ್ಚು ಲಕ್ಷ್ಯಕೊಡುವಂತೆ ಕಲಿಸಲ್ಪಡಬೇಕು. ಶಿಕ್ಷಕರು ವರ್ಗದ ಮೂಲೋದ್ಯೋಗದ ದೈನಿಕ ದಾಖಲೆಯನ್ನು ಇಡಬೇಕು.

ಸಮವಾಯ ಜ್ಞಾನ :-

(೧) ಹತ್ತಿ ಬೆಳೆಯುವದರಿಂದ ಆರಂಭಿಸಿ ಅರಿವೆ ತಯಾರಾಗುವ ವರೆಗೆ, ಅರಿವೆ ತಯಾರಿಕೆಗೆ ಸಂಬಂಧಿತವಾಗುವ ಎಲ್ಲ ಕ್ರಿಯೆಗಳ ಪರಿಚಯ.

(೨) ಉತ್ತಮ ತಕಲಿಯ ಲಕ್ಷಣಗಳನ್ನು ಕಂಡು ಹಿಡಿಯುವದು.

(೩) ಹಿಂಜುವಾಗ ಮತ್ತು ನೂಲುವಾಗ ಉಪಯೋಗಿಸಲ್ಪಡುವ ವಿವಿಧ ಉಪಕರಣಗಳ ಹೆಸರು ಮತ್ತು ಉಪಯೋಗದ ಬಗೆಗೆ ಪರಿಚಯ.

(೪) ಉತ್ತಮ ನೂಲನ್ನು ಗುರುತಿಸುವದು.

(೫) ಒಂದು ನಿರ್ದಿಷ್ಟ ದಿನದ ಕೆಲಸದ ಮೇಲಿಂದ ವಾರದ ನೂಲಿನ ಸುತ್ತುಗಳ ಸಂಖ್ಯೆಯನ್ನು ಕಂಡು ಹಿಡಿಯುವದು.

(೬) ಬಿಲ್ಲಿನಿಂದ ಹಿಂಜುವದರ ಅವಶ್ಯಕತೆ.

೩ನೆಯ ಇಯತ್ತೆ

ಈ ವರ್ಗದ ಕೆಲಸವು ಸಾಮಾನ್ಯವಾಗಿ ೨ನೆಯ ಇಯತ್ತೆಯಂತೆಯೇ ಇರಬೇಕು. ತಕಲಿಯನ್ನು ತಿರುಗಿಸುವದರಲ್ಲಿ ಮಕ್ಕಳು ತಮ್ಮ ಜಾಣ್ಮೆಯನ್ನು ಕಾಯ್ದುಕೊಳ್ಳಬೇಕು ಮತ್ತು ಬೆಳಿಸಬೇಕು. ಅವರು ಅಂಕಿಗಳಲ್ಲಿ ದಿನದ ದಾಖಲೆಯನ್ನು ಇಡಬೇಕು. ವರ್ಷದ ಕೊನೆಯ ಹೊತ್ತಿಗೆ ಅವರು ನೂತ ನೂಲಿನ ನಂಬರು ಕಂಡು ಹಿಡಿಯಲು ಸಮರ್ಥರಾಗಬೇಕು.

ಪಡೆಯಬೇಕಾದ ಮಟ್ಟ :-

ಪ್ರತಿತಾಸಿಗೆ ತಕಲಿಯ ಮೇಲೆ ನೂಲುವ ಸರಾಸರಿ ವೇಗ :- ೬೦ ಸುತ್ತುಗಳು.

ಒಟ್ಟು ಹುಟ್ಟುವಳಿ :- ತಕಲಿಯ ಮೇಲೆ ೬ ಗುಂಡಿಗಳು.

ಸರಾಸರಿ ನಂಬರು :- ೧೦ರಿಂದ ೧೨

ಸರಾಸರಿ ಶಕ್ತಿ :- ೧೦೦ಕ್ಕೆ ೬೦

ಸರಾಸರಿ ಸಮಾನತೆ :- ೧೦೦ಕ್ಕೆ ೬೦

ಸಮವಾಯ ಜ್ಞಾನ :-

(೧) ಸರಿಯಾಗಿ ಹಿಂಜಿದ ಅರಳೆಯನ್ನು ಗುರುತಿಸುವದು.

(೨) ನೂಲಿನ ಶಕ್ತಿ ಮತ್ತು ಸಮಾನತೆಗಳ ಮಹತ್ವವನ್ನು ಅರಿಯುವದು.

(೩) ನೂಲಿನ ನಂಬರು ತೆಗೆಯುವದು.

೪ನೆಯ ಇಯತ್ತೆ

ಈ ವರ್ಗದಲ್ಲಿ ರಾಟೆಯನ್ನು ಮುಖ್ಯವಾಗಿ ಉಪಯೋಗಿಸಬೇಕು. ಕೆಳಗಿನವುಗಳಲ್ಲಿಯ ಬೇಕಾದ ಒಂದು ನಮೂನೆಯ ರಾಟೆಯನ್ನು ಉಪಯೋಗಿಸ ಬಹುದು :-

(೧) ಕಿಸಾನ ಚರಖಾ (೨) ಯರವಡಾ ಚರಖಾ (೩) ಸ್ಥಾನಿಕ ನಮೂನೆಯ ಚರಖಾ.

ಈ ವರ್ಗದ ಮಕ್ಕಳು ಚರಖಾದ ಮೇಲೆ ನೂಲುವದರ ಜೊತೆಗೆ ಅವಶ್ಯವಿರುವ ಎಲ್ಲ ಕ್ರಿಯೆಗಳೊಂದಿಗೆ ಆಸನಗಳನ್ನು ಸಹ ನೇಯುವರು.

ಪಡೆಯಬೇಕಾದ ಮಟ್ಟ :-

ರಾಟೆಯ ಮೇಲೆ ಪ್ರತಿತಾಸಿಗೆ ನೂಲುವ ಸರಾಸರಿ ವೇಗ :- ೧೦೦ ಸುತ್ತುಗಳು.

ಒಟ್ಟು ಹುಟ್ಟುವಳಿ :- (i) ನೂಲಿನ ೬ ಗುಂಡಿಗಳು. (ii) ಪ್ರತಿಯೊಂದು ೧೮"×೧೮" ಇರುವ ೨—೪ ಆಸನಗಳು.

ಸರಾಸರಿ ನಂಬರು :- ೧೨ರಿಂದ ೧೪

ಸರಾಸರಿ ಶಕ್ತಿ :- ೧೦೦ಕ್ಕೆ ೬೦

ಸರಾಸರಿ ಸಮಾನತೆ :- ೧೦೦ಕ್ಕೆ ೬೦

ಆರಂಭದಲ್ಲಿ ಪ್ರತಿತಾಸಿನ ಪ್ರತ್ಯಕ್ಷ ನೇಯಿಗೆಯ ವೇಗವು ಅರ್ಧಘೂಟು ಇದ್ದು ವರ್ಷದ ಕೊನೆಯ ಹೊತ್ತಿಗೆ ೧ ಘೂಟಿಗೆ ಮುಟ್ಟಬೇಕು.

ಸಮವಾಯ ಜ್ಞಾನ :-

(೧) ಮಕ್ಕಳು ನೂಲಿನ ನಂಬರನ್ನು ತೆಗೆಯಲಿ.

(೨) ತಾವು ಮಾಡಿದ ಕೆಲಸದ ದೈನಂದಿನ ಹಾಗೂ ಮಾಸಿಕ ಲೆಕ್ಕ-ಪತ್ರಗಳನ್ನು ಅವರು ಇಡಲಿ.

(೩) ನೂತ ನೂಲಿನ ಸರಾಸರಿ ವೇಗ ಮತ್ತು ನಂಬರನ್ನು ಅವರು ಕಂಡು ಹಿಡಿಯಲಿ.

(೪) ವಿವಿಧ ಜಾತಿಗಳ ಹತ್ತಿಯನ್ನೂ ಮತ್ತು ನೂತ ನೂಲಿನ ಯೋಗ್ಯತೆಗೆ ಅವುಗಳೊಡನೆ ಇರುವ ಸಂಬಂಧವನ್ನೂ ಅವರು ಗುರುತಿಸಲಿ

ಉಪಕರಣಗಳ ಮತ್ತು ಬೆಲೆಯ ಯಾದಿ

ಒಬ್ಬ ಶಿಕಕ್ಷನಿರುವ ಸಾಲೆಯಲ್ಲಿ (ಇಯತ್ತೆ ೧-೪) ೧ನೆಯ, ೨ನೆಯ, ೩ನೆಯ ಮತ್ತು ೪ನೆಯ ಇಯತ್ತೆಯಲ್ಲಿ ಅನುಕ್ರಮವಾಗಿ ಸುಮಾರು ೧೫, ೧೨, ೮ ಮತ್ತು ೬ ವಿದ್ಯಾರ್ಥಿಗಳು ಇರುತ್ತಾರೆ. ಈ ವರ್ಗಗಳಲ್ಲಿ ಸರಾಸರಿ ಹಾಜರಿಯು ಅನುಕ್ರಮವಾಗಿ ೧೧,೮,೬ ಮತ್ತು ೪ರಂತೆ ಒಟ್ಟು ೧೦೦ಕ್ಕೆ ಸುಮಾರು ೭೦ರಷ್ಟು ಇರುತ್ತದೆ. ಆದ್ದರಿಂದ ೨ನೆಯ, ೩ನೆಯ ಮತ್ತು ೪ನೆಯ ಇಯತ್ತೆಗಳ ಸರಾಸರಿ ಹಾಜರಿಯನ್ನು ಉಪಕರಣಗಳು ಅವಲಂಬಿಸಿವೆ.

ಉಪಕರಣಗಳ ಯಾದಿ	ಸಂಖ್ಯೆ	ಒಟ್ಟುಬೆಲೆ ರೂ. ಆ. ಪೈ.
೧. ತಕಲಿಗಳು (ಪ್ರತಿ ಮಗುವಿಗೆ ೨ರಂತೆ)	೩೦	೬- ೧-೬
೨. ಲ್ಯಪೇಟಾಗಳು (ಅಟೆರಾನ)	೧೫	೩-೧೨-೦
೩. ತಕಲಿಯ ಪೆಟ್ಟಿಗೆಗಳು	೮	೫- ೦-೦
೪. ಅರೆಯುವ ಸಾಧನಗಳು	೬	೬- ೦-೦
೫. ತಕಲಿಯ ಜೋಡಿಸೆ ಸ್ಟ್ಯಾಂಡುಗಳು	೬	೨- ೪-೦
೬. ಕಿಸಾನ ಚರಖಾಗಳು (ಸಂಪೂರ್ಣ)	೩	೧೮-೧೨-೦
೭. ಚರಖಾ ಸುತ್ತಳಗಳು	೬	೪- ೮-೦
೮. ಡುರಸ್ತೀ ಸಾಧನಗಳು	೧	೧೦- ೦-೦
೯. ಸಣ್ಣ ತಕ್ಕಡಿ (೫ತೊಲೆಗಳಿಂದ ೧ಆಣೆಯ ವರೆಗಿನ ತೂಕದ ಕಲ್ಲುಗಳು.	೧	೧೦- ೦-೦
೧೦. ಕತ್ತರಿಗಳ ಜೋಡಿ	೧	೨- ೮-೦
೧೧. ಚಾಕು	೧	೧- ೮-೦
೧೨. ಆಸನದ ಮಗ್ಗಗಳು (ಸಂಪೂರ್ಣ)	೨	೨೦- ೦-೦
೧೩. ಹತ್ತಿಯನ್ನು ಸಂಗ್ರಹಿಸುವದಕ್ಕಾಗಿ ಮುಚ್ಚಳಗಳಿರುವ ಸತುವಿನ ಡಬ್ಬಿಗಳು.	೫	೫- ೦-೦
೧೪. ನೂಲಿನ ಸಂಗ್ರಹಕ್ಕಾಗಿ ಸತುವಿನ ಪೆಟ್ಟಿಗೆಗಳು	೩	೪- ೮-೦
		೯೯-೧೩-೬
ಅನಾವರ್ತ ಖರ್ಚು	ಅಂತೂ ರೂ.	೧೦೦- ೦-೦

ಕಚ್ಚಾ ಸಾಮಗ್ರಿಗಳು ಮತ್ತು ಸಾದಿಲವಾರ

ಹತ್ತಿ	ರೂ.	೧೫-೦-೦
ಸಾದಿಲವಾರ	ರೂ.	೫-೦-೦
ಆವರ್ತ ಖರ್ಚು	ರೂ.	೨೦-೦-೦
ಒಟ್ಟು	ರೂ.	೧೨೦-೦-೦

ಜೀವನ ಶಿಕ್ಷಣ ವಾರ್ತೆಗಳು

ಜೀವನ ಶಿಕ್ಷಣ ಸಾಲೆಗಳ ಮೂಲೋದ್ಯೋಗದ ವಾರ್ಷಿಕ ವರದಿ

ಅನುವಾದಿಕೆಯರು :- **ಶ್ರೀಮತಿ ಪಿ. ಎ. ಭಾಸ್ಕರ,** ಲೇಡಿ ಸುಪರಿಂಟೆಂಡೆಂಟ, ಹೆ. ಟ್ರೇ. ಕಾಲೇಜ, ಧಾರವಾಡ.

೩೧ನೆಯ ಮಾರ್ಚ ೧೯೫೬ರಂದು ಆರ್ಥಿಕ ವರುಷವು ಮುಗಿಯುವದು. ಈ ವರುಷದ ಕೊನೆಯೊಡನೆ ಜೀವನ ಶಿಕ್ಷಣ ಸಾಲೆಗಳು ಸಹ ತಮ್ಮ ವಾರ್ಷಿಕ ಜಮಾ ಖರ್ಚನ್ನು ಮುಗಿಸುತ್ತವೆ. ಎಲ್ಲ ಮೂಲೋದ್ಯೋಗ ಸಾಲೆಗಳು ೧೯೫೫—೫೬ರ ಜಮಾಖರ್ಚನ್ನು ತಯಾರಿಸುವದು ಅವಶ್ಯವೆನಿಸುವದು. ಇದು ಈ ವರುಷದ ಮೂಲೋದ್ಯೋಗದ ಪ್ರಮಾಣದ ವಿವರ ಮತ್ತು ಆರ್ಥಿಕ ಸ್ಥಿತಿಗಳನ್ನು ತೋರಿಸುವದು. ಮೂಲೋದ್ಯೋಗವು ಅತ್ಯುತ್ತಮ ರೀತಿಯಿಂದ ಮಾಡಲ್ಪಟ್ಟಾಗ ಮಾತ್ರ ಹೆಚ್ಚು ಶೈಕ್ಷಣಿಕ ಮಹತ್ವವನ್ನು ಪಡೆಯುವದೆಂದು ಈಗ ಗ್ರಹಿತವಾಗಿದೆ. ಮೂಲೋದ್ಯೋಗದಲ್ಲಿಯ ಹೀನತೆಯು ಶೈಕ್ಷಣಿಕ ಕಾರ್ಯದ ಹೀನತೆಯ ನಿದರ್ಶನವು. ಎಷ್ಟೋ ಸಲ ಜೀವನ ಶಿಕ್ಷಣ ಸಾಲೆಗಳಲ್ಲಿಯ ಮೂಲೋದ್ಯೋಗದ ಆಯವ್ಯಯವನ್ನು ತಿಳಿದುಕೊಳ್ಳಲು ಸಂದರ್ಶಕರು ಉತ್ಸುಕರಾಗಿರುತ್ತಾರೆ. ಆದುದರಿಂದ ಎಲ್ಲ ಮೂಲೋದ್ಯೋಗ ಸಾಲೆಗಳ ಮುಖ್ಯಾಧ್ಯಾಪಕರಿಗೆ ೧೯೫೫-೫೬ನೆಯ ಸಾಲಿನ ವಾರ್ಷಿಕ ಜಮಾಖರ್ಚಿನ ವಿವರವನ್ನು ತಯಾರಿಸಲು ಕೆಳಗಿನ ಸೂಚನೆಗಳನ್ನು ಕೊಡಲಾಗಿದೆ.

ವಾರ್ಷಿಕ ಜಮಾಖರ್ಚಿನ ವಿವರವನ್ನು ಎರಡು ಭಾಗಗಳಲ್ಲಿ ವಿಭಾಗಿಸಲಾಗುವದು. ಮೊದಲನೆಯ ಭಾಗವು ೧—೪—೫೫ ನೆಯ ದಿವಸದ ಆರಂಭದ ಶಿಲ್ಕು, ವರ್ಷದಲ್ಲಿ ಕೊಂಡ ಕಚ್ಚಾ ಮಾಲು, ಚಿಲ್ಲರೆ ಖರ್ಚು, ದುರಸ್ತಿ ಇತ್ಯಾದಿಗಳನ್ನು ತೋರಿಸುವದು. ಎರಡನೆಯ ಭಾಗವು ಅರಿವೆ, ಕಾಯಿಪಲ್ಲೆ ಇತ್ಯಾದಿ ಪಕ್ಕಾ ವಸ್ತುಗಳನ್ನು ಮಾರಿ ದೊರಕಿಸಿದ ಹಣ, ಅರಿವೆಯನ್ನು ಮಾರಿದ್ದಕ್ಕೆ ಕೇಂದ್ರ ಸರಕಾರದಿಂದ ಬಂದ ರಿಯಾಯತಿ ಹಣ ಮತ್ತು ೩೧—೩—೧೯೫೬ನೆಯ ದಿವಸವಿದ್ದ ಮಾಲಿನ ಕೊನೆಯ ಶಿಲ್ಕುಗಳನ್ನು ತೋರಿಸುವದು. ಮೊದಲನೆಯ ಭಾಗದ ಒಟ್ಟು ಮತ್ತು ಎರಡನೆಯ ಭಾಗದ ಒಟ್ಟು, ಇವುಗಳ ಅಂತರವು ಲಾಭ ಅಥವಾ ಹಾನಿಯನ್ನು ತೋರಿಸುವದು. ಮೊದಲನೆಯ ಭಾಗದ ಒಟ್ಟು, ಎರಡನೆಯ ಭಾಗದ ಒಟ್ಟಿಗಿಂತ ಹೆಚ್ಚಾದರೆ, ಸಂಸ್ಥೆಯು ಮೂಲೋದ್ಯೋಗವನ್ನು ಹಾನಿಯಲ್ಲಿಯೇ ನಡೆಸಿರುತ್ತದೆ. ಎರಡನೆಯ ಭಾಗದ ಒಟ್ಟು ಮೊದಲನೆಯ ಭಾಗದ ಒಟ್ಟಿಗಿಂತ ಹೆಚ್ಚಾದರೆ ನಕ್ಕಿ ಲಾಭವು.

(೨) ಈ ಜಮಾಖರ್ಚನ್ನು ಸರಿಯಾಗಿ ತೋರಿಸಬೇಕಾದರೆ ೩೧—೩—೫೬ ರಂದು ತೋರಿಸಬೇಕಾದ ಕೊನೆಯ ಶಿಲ್ಕಿಗೆ ಸರಿಯಾದ ಮೌಲ್ಯವನ್ನು ಕೊಡುವದು ಅವಶ್ಯವಾಗಿದೆ. ಜಮಾಖರ್ಚನ್ನು ನಿಜವಾದ ಶಿಲ್ಕನ್ನು ನೋಡಿ ಮಾಡಬೇಕು. ಕಚ್ಚಾ, ಪಕ್ಕಾ ಇತ್ಯಾದಿ ಸಾಮಾನುಗಳ ಲೆಕ್ಕಗಳನ್ನು ಪೇಟೆಯ ಧಾರಣೆಯಂತೆ ಬೆಲೆಯನ್ನು ಹಿಡಿದು ಮಾಡಬೇಕು. ಪೇಟೆಯ ಧಾರಣೆಗಿಂತ ಇವುಗಳ ಧಾರಣೆಯನ್ನು ಹೆಚ್ಚು ಹಿಡಿದು ಲಾಭವನ್ನು ತೋರಿಸಿದ್ದರೆ ಇದು ನಿಜವಾದ ಲಾಭವಲ್ಲ ಯಾಕಂದರೆ ಇದು ಶಿಲ್ಕಿನಲ್ಲಿದ್ದ ವಸ್ತುಗಳ ಹೆಚ್ಚಿಗೆ ಹಿಡಿದ ಬೆಲೆಯಿಂದ ಬಂದಿದೆ. ಆದ್ದರಿಂದ ಮೂಲೋದ್ಯೋಗ ಸಂಸ್ಥೆಗಳ ಎಲ್ಲ ಮುಖ್ಯಸ್ಥರು ೩೧—೩—೫೬ ನೆಯ ದಿವಸವಿದ್ದ ಶಿಲ್ಕಿನ ನಿಜವಾದ ವಿವರವನ್ನು ಕೊಡತಕ್ಕದ್ದು. ಅಲ್ಲದೇ ಪೇಟೆಯಲ್ಲಿದ್ದ ದರದಂತೆ ಸರಿಯಾಗಿ ಬೆಲೆಯನ್ನು ಕಟ್ಟತಕ್ಕದ್ದು.

(೩) ಗಮನಿಸಬೇಕಾದ ಮತ್ತೊಂದು ಸಂಗತಿ ಎಂದರೆ ತಯಾರಿಸಿದ ವಸ್ತುಗಳ ವಿತರಣದಲ್ಲಿ ತೀವ್ರತೆ ಪಕ್ಕಾ ವಸ್ತುಗಳು ಕೊನೆಯ ಶಿಲ್ಕಿನಲ್ಲಿ ಆದಷ್ಟು ಕಡಿಮೆ ಇರತಕ್ಕದ್ದು. ತಯಾರಿಸಿದ ವಸ್ತುಗಳನ್ನು ವಿತರಣಗೊಳಿಸುವದರಲ್ಲಿ ತೀವ್ರತೆಯನ್ನು ತೋರಿಸಿದರೆ ಮಾತ್ರ ಇದು ಸಾಧ್ಯ. ತಯಾರಿಸಿದ ವಸ್ತುಗಳ ವಿತರಣವನ್ನು ತೀವ್ರಗೊಳಿಸಲು ಸರಕಾರವು ಕೆಲವು ಅನುಕೂಲತೆಗಳನ್ನು ಕೊಟ್ಟಿದೆ. ಬಡಿಗತನವಿದ್ದ ಶಾಲೆಗಳಲ್ಲಿ ತಯಾರಿಸಿದ ಬ್ಲೋಟರ್ಸ, ರೂಲಕಟ್ಟಿಗೆಗಳು, ಟ್ರೇಗಳು, ಪೋರ್ಟಫೋಲಿಯೋಗಳು ಮೊದಲಾದ ಕೆಲವು ಸ್ಟೇಶನರಿ ಸಾಮಾನುಗಳನ್ನು ನಮೂದಿಸಿದ ದರಗಳಿಗೆ ಕೊಳ್ಳಲು, ಸರಕಾ

ರವು ನಿರ್ಧರಿಸಿದೆ. ಜೀವನ ಶಿಕ್ಷಣ ಶಾಲೆಗಳು ತಮ್ಮಲ್ಲಿದ್ದ ಅಥವಾ ಶಿಲ್ಕುಯಿರುವ ವಸ್ತುಗಳ ಯಾದಿಯನ್ನು ಆ್ಯಡ್ಮಿನಿಸ್ಟ್ರೇಟಿವ್ಹ ಆಫೀಸರರಿಗೆ ಪೂರೈಸಬೇಕು. ಅವರು ಅವೆಲ್ಲವುಗಳನ್ನು ಒಟ್ಟುಗೂಡಿಸಿ ಮೇಲಧಿಕಾರಿಗಳಿಗೆ ಕಳಿಸುವರು. ಸ್ಟೇಶನರಿ ಖಾತೆಗೆ ಈ ವಸ್ತುಗಳನ್ನು ಕಳಿಸಿ, ಅವುಗಳ ಬೆಲೆಗಳನ್ನು ದೊರಕಿಸುವ ಪ್ರಯತ್ನ ಮಾಡಲಾಗುವದು. ಅರಿವೆಯ ಬಗೆಗೆ ಇನ್ನೊಂದು ಸವಲತ್ತು ಎಂದರೆ ಜೀವನ ಶಿಕ್ಷಣಶಾಲೆಗಳ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ವಿಶೇಷ ರಿಯಾಯತಿಯನ್ನು ಕೊಡುವದು. ಖಾದಿಯ ಮಾರಾಟದ ಮೇಲೆ ಕೇಂದ್ರ ಸರಕಾರವು ಈಗಾಗಲೇ ೩ ಆಣೆಯ ರಿಯಾಯತಿಯನ್ನು ಕೊಟ್ಟಿದೆ. ಇದರ ಹೊರತಾಗಿ ಜೀವನ ಶಿಕ್ಷಣ ಶಾಲೆಗಳಲ್ಲಿ ತಯಾರಿಸಿದ ಅರಿವೆಯನ್ನು ಹಳೆಯ ಶಿಲ್ಕಿನಲ್ಲಿ ಉಳಿದುದಕ್ಕೆ ೧೦೦ಕ್ಕೆ ೨೫ರಂತೆ ಮತ್ತು ಶಿಲ್ಕಿನಲ್ಲಿ ಉಳಿದುದಕ್ಕೆ ೧೦೦ ಕ್ಕೆ ೧೫ ರಂತೆ ರಿಯಾಯತಿಯಿಂದ ಮಾರಬೇಕೆಂದು ನಿರ್ಧರಿಸಿದೆ. ಇದರ ಬಗೆಗೆ ಅಪ್ಪಣೆಗಳು ಆ್ಯಡ್ಮಿನಿಸ್ಟ್ರೇಟಿವ್ಹ ಆಫೀಸರರಿಗೆ ಈಗಾಗಲೇ ಕಳಿಸಲ್ಪಟ್ಟಿವೆ. ಈ ವಿಶೇಷ ರಿಯಾಯತಿ ೩೧—೩—೫೭ರ ವರೆಗೆ ಮಾತ್ರ ಕೊಡಲ್ಪಟ್ಟಿರುವದು ಈ ರಿಯಾಯತಿಗಳು ಪ್ರಯೋಜನಕಾರಿಯಾದರೆ ಜೀವನ ಶಿಕ್ಷಣ ಶಾಲೆಗಳಲ್ಲಿದ್ದ ಶಿಲ್ಕು ಅರಿವೆಯು ಜೀವನ ಶಿಕ್ಷಣ ಶಾಲೆಗಳ ಮಕ್ಕಳಿಗೆ ಅನುಕೂಲವಾದ ದರದಿಂದ ಕೊಡಲ್ಪಡುವದು. ಅವರು ಖಾದಿಯನ್ನು ಧರಿಸುವ ಮತ್ತು ಶಾಲೆಗಳಿಗೆ ಸಮವಸ್ತ್ರ ಧರಿಸಿಕೊಂಡು ಹೋಗುವ ರೂಢಿಗೆ ಅಂಟಿಕೊಳ್ಳುವರು. ಮುಂದಿನ ವರುಷವನ್ನು ಸಂಪೂರ್ಣ ಹೊಸದಾಗಿ ಪ್ರಾರಂಭಿಸಬೇಕೆಂದು ಸಧ್ಯದ ಆರ್ಥಿಕ ವರುಷದ ಕೊನೆಯೊಳಗಾಗಿ ತಮ್ಮಲ್ಲಿದ್ದ ಸಾಧ್ಯವಿದ್ದಷ್ಟು ಹೆಚ್ಚು ಪಕ್ಕಾ ಮಾಲನ್ನು ಶಾಲೆಗಳು ವಿಕ್ರಯಿಸಲು ಮನಃಪೂರ್ವಕ ಪ್ರಯತ್ನಿಸುವವೆಂದು ನಂಬಲಾಗಿದೆ.

ಮುಂಬಯಿ ವಿಭಾಗದ ಪ್ರಾಥಮಿಕ ಶಿಕ್ಷಕರ ಸಂತೋಷ ಶಿಬಿರ ಮಹಾಬಳೇಶ್ವರ

ವರದಿ

ಕರ್ನಾಟಕದ ಬೇರೆ ಬೇರೆ ಭಾಗಗಳ ಶಿಕ್ಷಕರು ದಿನಾಂಕ ೨೫ ರಂದು ರಾತ್ರಿ ಮಹಾಬಳೇಶ್ವರದ ಸಂತೋಷ ಶಿಬಿರಕ್ಕಾಗಿಯೇ ಮೀಸಲಾಗಿರಿಸಿದ ಸ್ಥಳದಲ್ಲಿ ಕೂಡಿದರು. ಜಿಲ್ಲಾ ಸ್ಕೂಲಬೋರ್ಡುಗಳ ಪರವಾಗಿ ಧಾರವಾಡ ಜಿಲ್ಲೆಯಿಂದ ೧೯, ವಿಜಾಪುರ ಜಿಲ್ಲೆಯಿಂದ ೯, ಬೆಳಗಾಂವಿ ಜಿಲ್ಲೆಯಿಂದ ೬, ಕಾರವಾರ ಜಿಲ್ಲೆಯಿಂದ ೧, ಮುನಸಿಪಲ್ ಸ್ಕೂಲಬೋರ್ಡುಗಳ ಪರವಾಗಿ ಧಾರವಾಡದಿಂದ ೨, ಹುಬ್ಬಳ್ಳಿಯಿಂದ ೪, ವಿಜಾಪುರದಿಂದ ೧, ಬೆಳಗಾಂವಿಯಿಂದ ೧— ಹೀಗೆ ೪೧ ಜನ ಶಿಕ್ಷಕರು ಈ ಶಿಬಿರದಲ್ಲಿ ಭಾಗವಹಿಸಿದರು. ಇವರಲ್ಲಿ ವಿಜಾಪುರ ಜಿಲಾ ಸ್ಕೂಲಬೋರ್ಡಿನ ಇಬ್ಬರು ಶಿಕ್ಷಿಕೆಯರು ಇದ್ದರು. ಶ್ರೀ ಆರ್. ವಿ. ಹಾವೇರಿ ಶಾರೀರಿಕ ಶಿಕ್ಷಣಾಧಿಕಾರಿಗಳು ಧಾರವಾಡ ಅವರು ಈ ಶಿಬಿರದ ಸಂಚಾಲಕರಾಗಿದ್ದರು. ಅವರು ದಿನಾಂಕ ೨೬—೨—೫೬ ರಂದು ಶಿಬಿರವನ್ನು ಉದ್ಘಾಟಿಸಿದರು. ಅಂದು ಮಧ್ಯಾಹ್ನ ಪ್ರತಾಪಗಡಕ್ಕೆ ಹೋಗಿ ಭವಾನಿದೇವಿ ಗುಡಿ, ಅಫಝುಲ್‌ಖಾನನ ಬುರುಜು ಹಾಗೂ ಗೋರಿಯನ್ನು ನೋಡಿದರು. ದಿನಾಂಕ ೨೭-೨-೫೬ರಂದು ಫಿಟರ್ಝುರಲ್ಡ ಘಟ್ಟದ ಮೇಲಿರುವ ಮುಂಬಯಿ ಪಾಯಿಂಟಿಗೆ ಹೋಗಿ ತಿರುಗಿ ಬರುವಾಗ ಸರಕಾರಿ ಭವನವನ್ನು ನೋಡಿದರು. ಇದಲ್ಲದೆ 'ಫೌಕಲಂಡ ಪಾಯಿಂಟ' ಹಾಗೂ 'ಕರ್ನಾಟಕ ಪಾಯಿಂಟ' ಮತ್ತು ಮಧುಸಾಗರಗಳನ್ನು ನೋಡಿದರು. ದಿನಾಂಕ ೨೮ರಂದು 'ಲಾಡ್‌ವಿಕ್' ಪಾಯಿಂಟಿಗೆ ಹೋಗಿ 'ಎಲಿಪಂಟಾ ಹೆಡ್' ನೋಡಲಾಯಿತು. "ವ್ಹಿಟ ರಸ್ಟ ಸ್ಟೇಶನ" ಕ್ಕೆ ಹೋಗಿ ಗೋದಿಗೆ ತಗಲುವ ರೋಗಗಳು ಹಾಗೂ ಅವುಗಳ ನಿವಾರಣೋಪಾಯಗಳನ್ನು ತಿಳಿದುಕೊಂಡರು. ದಿನಾಂಕ ೨೯ರಂದು ಯನ್ನಾ ಸರೋವರದ ಮಾರ್ಗವಾಗಿ ಕೇಟ್ಸ ಪಾಯಿಂಟಕ್ಕೆ ಹೋಗಿ ೬೦೦ ಫೂಟು ಎತ್ತರದ ಮೇಲಿಂದ ಬೀಳುವ ಲಿಂಗಮಾಲಾ ದಭದಭೆಯನ್ನು ನೋಡಿದರು. ಸಂಜೆಯ ಸಮಯಕ್ಕೆ ಮಹಾ

ಬಳೇಶ್ವರ ಭಾಗದ ಪ್ರಾಥಮಿಕ ಶಿಕ್ಷಕರ ಮಾಸಿಕ ಸಮ್ಮೇಲನದಲ್ಲಿ ಭಾಗವಹಿಸಿದರು. ದಿನಾಂಕ ೧-೩-೫೬ರಂದು ಅಲ್ಲಿಯ ಪ್ರಾಥಮಿಕ ಸಾಲೆಗಳಿಗೆ ಭೆಟ್ಟಿಯಿತ್ತರು. ದಿನಾಂಕ ೨-೩-೫೬ ರಂದು ವಿಂಡೋಪಾಯಿಂಟ ಮೊದಲಾದವುಗಳನ್ನು ನೋಡಿಕೊಂಡು ಹಿಂತಿರುಗಿ ಮಹಾಬಳೇಶ್ವರ ದೇವಸ್ಥಾನಕ್ಕೆ ಬಂದು ಸಪ್ತ ನದಿಗಳ ಉಗಮ ಸ್ಥಳವಾದ ಬ್ರಹ್ಮಕುಂಡದಲ್ಲಿ ಸ್ನಾನ ಮಾಡಿದರು.

ಈ ಸಂದರ್ಶನಗಳಲ್ಲದೆ "ಶಿಷ್ಟ ಪದ್ಧತಿ'' ಯ ಶಿಕ್ಷಣದಿಂದ ಆಗುವ ತೊಂದರೆಗಳು ಹಾಗೂ ಅವುಗಳ ನಿವಾರಣೆ ಮತ್ತು "ವಿದ್ಯಾರ್ಥಿಗಳ ಹಾಜರಿ ಹೆಚ್ಚಿಸುವದು" ಈ ವಿಷಯಗಳ ಬಗ್ಗೆ ಚರ್ಚೆಯನ್ನು ಏರ್ಪಡಿಸಲಾಗಿತ್ತು. ಮಧುಸಾಗರದ ಸಂದರ್ಶನದಲ್ಲಿ ಜೇನ್ನೊಣಗಳ ಜೀವನಕ್ರಮ ಹಾಗೂ ಅವುಗಳನ್ನು ಸಾಕುವದು, ಜೇನು ತಯಾರಿಕೆ ಈ ವಿಷಯಗಳ ಜ್ಞಾನ ಮಾಡಿಕೊಂಡರು.

ದಿನಾಂಕ ೩-೩-೧೯೫೬ರಂದು ಈ ಶಿಬಿರದ ಮುಕ್ತಾಯ ಸಮಾರಂಭವು ಅಲ್ಲಿಯ ಸರಕಾರೀ ಜೇನು ಸಾಕುವ ಕೇಂದ್ರದ ಮುಖ್ಯಾಧಿಕಾರಿಗಳಾದ ಶ್ರೀ ಸಿ. ಎಸ್. ಬಾಂಬುರೆ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಹೀಗೆ ಈ ಸಂತೋಷ ಶಿಬಿರವು ಯಶಸ್ವಿಯಾಗಿ ಮುಕ್ತಾಯಗೊಂಡಿತು.

ಮೂಲಶಿಕ್ಷಣದ ಪ್ರಶ್ನೋತ್ತರಗಳು

(೪ನೆಯ ಪುಟದಿಂದ ಬಂದದ್ದು)

ವದು; ಯಾಕೆಂದರೆ ಎರಡನೆಯದಾಗಿ ಶಾಲೆಯ ಬೌದ್ಧಿಕ ವಿಕಾಸದ ಪ್ರಗತಿಸೂಚಕ ತೃಪ್ತಿಕರವಾದ ದಾಖಲೆಗಳನ್ನು ತಾನೇ ಇಡಬೇಕಾಗುವದು. ಈ ಸಂಬಂಧದಲ್ಲಿ ಇನ್ನೊಂದು ಮಾತನ್ನು ನಾವು ಲಕ್ಷ್ಯದಲ್ಲಿಡಬೇಕು. ಮೂಲಶಿಕ್ಷಣದ ಸಂಬಂಧವು ಸಮಾಜದೊಡನೆ ಬರಬರುತ್ತ ಆತ್ಮೀಯತೆಯ ಸಂಬಂಧವಾಗಿ ಪರಿಣಮಿಸಿದಾಗ ಶಾಲೆಯಲ್ಲಿ ಮಕ್ಕಳ ಅನ್ಯಾಯದ ಶೋಷಣೆಯು ನಡೆಯುತ್ತದೆಂಬ ಮಾತು ಅವರ ಕಿವಿಗೆ ಮುಟ್ಟಿ ಅವರು ಅದರ ಬಗೆಗೆ ಸಣ್ಣಾಗಿ ತಕರಾರನ್ನು ಕೇಳಿಸಿಯೇ ಕೇಳಿಸುವರು.

ವರ್ಧಾ ಯೋಜನೆಯ ಮೂಲ ಪಾಠ್ಯಕ್ರಮದ ಅನುಸಾರಪ್ರತಿದಿನದ ಕಾರ್ಯಕ್ರಮದ ೫ ಗಂಟೆಗಳ ಅವಧಿಯಲ್ಲಿ ೩ ಗಂಟೆ ೨೦ ಮಿನಿಟಗಳು ಕೈಗಾರಿಕೆಗಾಗಿ ಇಟ್ಟಂಥವು ಈ ಸಮಯವು ಕೇವಲ ಶಾರೀರಿಕ ಕಾರ್ಯಕ್ಕೆಂದಿರದೆ ಅದರಲ್ಲಿ ಕೈಗಾರಿಕೆಗಳೊಡನೆ ಸಂಬಂಧವಿದ್ದ ಅನ್ಯ ವಿಷಯಗಳಿಗೂ ಅವಕಾಶವಿತ್ತು. ಉತ್ತಮ ಮೂಲ ಶಿಕ್ಷಣ ಶಾಲೆಯಲ್ಲಿ ಬರಿಯ ಶಾರೀರಿಕ ಪರಿಶ್ರಮವೊಂದೇ ಇರದೆ ಬೌದ್ಧಿಕ ಕಾರ್ಯಕ್ಕೂ ಅವಕಾಶವಿರುವದು.

ಮೂಲ ಶಿಕ್ಷಣ ವಿದ್ಯಾಲಯದ ಅಭಿಜ್ಞ ಅಧ್ಯಾಪಕನು ತನ್ನ ಮನಸ್ಸಿನಲ್ಲಿನ ಗುರಿಗೂ ಆಗುವ ಕಾರ್ಯಕ್ಕೂ ಸಮಂಜಸ ಸಂಬಂಧವನ್ನಿಟ್ಟುಕೊಳ್ಳುವನು. ಬಾಲಕರ ಮುಖಾಂತರ ಆಗುವ ಕಾರ್ಯದ ಭೌತಿಕ ಮೂಲ್ಯವೇ ಅಥವಾ ಅವರು ತಯಾರ ಮಾಡಿದ ವಸ್ತುಗಳೇ ಶಿಕ್ಷಣದ ವ್ಯವಸ್ಥೆಯಲ್ಲಿ ಅತ್ಯುಚ್ಚಸ್ಥಾನವನ್ನು ಆಕ್ರಮಿಸದಂತೆ ನೋಡಿಕೊಳ್ಳುವನು; ಗಾಂಧೀಜಿಯವರು ಅನ್ನುತ್ತಿದ್ದರು: ತಕಲಿಯು ಅತ್ಯಂತ ಸುಂದರವಾದ ಒಂದು ಆಟಿಗೆಗೆ ಉದಾಹರಣೆಯಂತಿದೆ. ಉತ್ಪಾದಕ ಫಲವನ್ನು ಕೊಟ್ಟರೂ ಅದರ ಆಟಿಕೆಯ ಸ್ವರೂಪಕ್ಕೆ ಬಟ್ಟಾ ಬರುವದಿಲ್ಲ.

ಮಕ್ಕಳು ರಾಜ್ಯದಿಂದ ಯಾವ ಲಾಭ ಪಡೆಯುವರೋ ಅದರ ಯತ್ಕಿಂಚಿತ್ ಅಂಶವನ್ನು ರಾಜ್ಯಕ್ಕೆ ತಿರುಗಿ ಕೊಟ್ಟರೆ ಅನ್ಯಾಯದಿಂದ ಅವರ ಶೋಷಣೆಯು ನಡೆಯುತ್ತಿದೆ ಎಂಬುದು ಇದರ ಅರ್ಥವಲ್ಲ. ಮೂಲ ಶಿಕ್ಷಣದಲ್ಲಿ ಕೆಲವೊಂದು ಸಂಗತಿಗಳಲ್ಲಿ ತಮ್ಮ ಕಾಲ ಮೇಲೆ ತಾವು ನಿಲ್ಲುವ ಶಕ್ತಿಯಿದೆ. ಇದರಿಂದಲೇ ಆ ಶಿಕ್ಷಣದ ಯೋಗ್ಯತೆಯು ದೊಡ್ಡದಾಗಲಿಲ್ಲ. ಆದರೆ ಈ ಸ್ವಾವಲಂಬನ ತರಬೇತಿಯು ಮುಂದಿನ ಜೀವನಕ್ಕೆ ಮಾರ್ಗದರ್ಶನ ಮಾಡಬಹುದು. ಇದರಿಂದ ಬಾಲಕನು ಶಿಕ್ಷಣದ ಪ್ರಯೋಜನಕ್ಕೆ ಎರವಾಗುವದಿಲ್ಲ. ಮೂಲ ಶಿಕ್ಷಣದ ಯೋಜನೆಯ ಅನುಸಾರವಾಗಿ ರಾಜ್ಯವು ಅನೇಕ ಸಹಾಯ ವಸ್ತುಗಳನ್ನು ಕೊಡುತ್ತದೆ:- ಭೂಮಿ, ಸಾಲೆಯ

ಮನೆ, ಸಲಕರಣೆಗಳು, ಪುಸ್ತಕ, ಮಾನಚಿತ್ರ (ನಕ್ಷೆಗಳು), ಕೈಗಾರಿಕೆಯ ಸಾಹಿತ್ಯ ಹಾಗು ಇತರ ಸಾಮುಗ್ರಿಗಳನ್ನು ಇದರ ಜೊತೆರ್ರ ರಾಜ್ಯವು ಮಕ್ಕಳಿಗೆ ಆಧುನಿಕ ನೂತನ ನ್ಯಾಯಸಮ್ಮತ ಸಾಮಾಜಿಕ ವ್ಯವಸ್ಥೆಗೆ ಹೊಂದಿಕೊಳ್ಳಲು ಕೆಲವಂಶದಿಂದ ಸಹಾಯಮಾಡುವದು. ಇದರಿಂದ ದೊಡ್ಡವರಾದ ಮೇಲೆ ಅವರಿಗೆ ಕ್ಷೇಮವಾಗುವದು.

ಪ್ರ. ೩. ಶಿಕ್ಷಣವು ಕೈಗಾರಿಕೆಯಲ್ಲಿ ಕೇಂದ್ರೀಕೃತವಾದರೆ ಸಾಹಿತ್ಯಿಕ ಹಾಗು ಶಾಸ್ತ್ರೀಯ ಶಿಕ್ಷಣವು ಇಳಿಮುಖವಾಗಬಹುದಲ್ಲವೇ ?

ಉತ್ತರ:– ಜನರು ಭ್ರಾಂತಿಯಿಂದ ಸಾಕ್ಷರತೆಯೇ ಶಿಕ್ಷಣವೆಂದು ತಿಳಿಯುವರು. ಆದರೆ ನಿಜವಾಗಿ ಅದು ಶಿಕ್ಷಣದ ಕೇವಲ ಒಂದು ಸಾಧನವಾಗಿದೆ. ಹೀಗಿದ್ದರೂ ಮೂಲ ಶಿಕ್ಷಣವು ಸಾಕ್ಷರತೆಯ ಕಡೆಗೆ ಉದಾಸೀನವಾಗಿಲ್ಲ. ವಿದ್ಯಾರ್ಥಿಯು ಮೊದಲು ಯಾವ ಕೈಗಾರಿಕೆಯ ಕಾರ್ಯವನ್ನು ಆರಂಭಿಸುವನೋ ಅದಕ್ಕೆ ಸಂಬಂಧಿಸಿದ ಸುಲಭವಾದ ಮಾತುಗಳನ್ನೇ ಓದಲು ಬರೆಯಲು ಕಲಿಯುವನು. ಮುಂದೆ ಅವನು ವಿದ್ಯಾಭ್ಯಾಸವನ್ನು ಬಿಟ್ಟ ಮೇಲೆ ಪುನಃ ನಿರಕ್ಷರನಾಗದಷ್ಟು ಗಟ್ಟಿಮುಟ್ಟಾಗಿ ಅವನು ಓದುಬರಹಗಳನ್ನು ಅಭ್ಯಾಸಿಸುವನು.

ಗಾಂಧಿಜಿಯವರ ಶಿಕ್ಷಣ ಯೋಜನೆಯಲ್ಲಿ ಸಾಕ್ಷರತೆಗೆ ಸ್ಥಾನವಿದ್ದೇ ಇತ್ತು. ಅವರು ಅನ್ನುತ್ತಿದ್ದರು: "ಬರೆಯುವದು ಚಿತ್ರ ತೆಗೆಯುವದಕ್ಕಿಂತ ಮೊದಲು ಮಕ್ಕಳು ಕೈಯಿಂದ ಉಪಕರಣಗಳನ್ನು ಎತ್ತಿ ಇಡುವದು; ಕಣ್ಣಿನಿಂದ ಇತರ ಜೀವನದಲ್ಲಿನ ವಸ್ತುಗಳನ್ನು ನೋಡಿ ಅವುಗಳ ಹೆಸರನ್ನು ಕಲಿಯುವಂತೆ ಅಕ್ಷರಗಳ ತುಂಡುಗಳನ್ನು ಕೈಯಿಂದ ಎತ್ತಿಟ್ಟು ಅವುಗಳ ಚಿತ್ರಗಳನ್ನು ಗುರ್ತುಹಿಡಿದು ಹೇಳಲಿಕ್ಕೂ ಕಲಿಯುವರು. ಕಿವಿಯಿಂದ ವಸ್ತುಗಳ ಹೆಸರುಗಳನ್ನು ವಾಕ್ಯಗಳ ಅರ್ಥವನ್ನು ಕೇಳುವರು. ಆದ್ದರಿಂದ ನನ್ನ ವಿದ್ಯಾಲಯದಲ್ಲಿ ಹುಡುಗರು ಬರೆಯುವದಕ್ಕಿಂತ ಬೇಗನೇ ಓದುವದನ್ನು ಕಲಿಯುವರು.

ಶಾಸ್ತ್ರೀಯ ಶಿಕ್ಷಣದಿಂದ ಅರ್ಥವಾಗದ ಮಾತುಗಳಿಂದ ಮಕ್ಕಳ ಸ್ಮರಣ ಶಕ್ತಿಯ ಮೇಲೆ ಭಾರ ಹೇರುವದೇ ಆದರೆ ಇಂತಹ ಶಾಸ್ತ್ರೀಯ ವಿಷಯ ಶಿಕ್ಷಣವನ್ನು ಮೂಲ ಶಿಕ್ಷಣವು ಅನುಕರಿಸುವದಿಲ್ಲ. ಆದರೆ ಶಾಸ್ತ್ರೀಯ ಶಿಕ್ಷಣದ ಅರ್ಥವನ್ನು ಸರಿಯಾಗಿ ಮಾಡಿದ್ದೇ ಆದರೆ ವ್ಯಾವಹಾರಿಕ ಕಾರ್ಯಾಸಕ್ತಿಗೂ ಇದಕ್ಕೂ ಅಂತರವೇನೂ ಇಲ್ಲ. ಮೂಲಶಿಕ್ಷಣಾಲಯಗಳಲ್ಲಿ ಕೈಗಾರಿಕೆಯು ಕೇವಲ ತಾಂತ್ರಿಕ ಕೆಲಸವಾಗಿರದೆ ಅದರೊಡನೆ ಬಾಯಿಮಾತಿನ ಶಿಕ್ಷಣ, ವಾಕ್ಯ ಶೈಲಿ ಮತ್ತು ಚಿತ್ರ ಲೇಖನಗಳೂ ಹೊಂದಿಕೊಂಡಿರುತ್ತವೆ. ತಕಲಿಯ ಸಹಾಯದಿಂದ ಯುಕ್ಲಿಡನ ಹೆಸರು ತೆಗೆದುಕೊಳ್ಳದೇ ವರ್ತುಳದ ಸಂಬಂಧಿ ಎಲ್ಲ ಸಂಗತಿಗಳನ್ನು ಸುಲಭವಾಗಿ ಕಲಿಸಬಹುದು ಎಂದು ಗಾಂಧೀಜಿ ಅನ್ನುತ್ತಿದ್ದರು. ನೂಲುವ ಉದ್ಯೋಗದ ಉದಾಹರಣೆಯನ್ನು ಕೊಟ್ಟು ಅವರು ಅದರೊಡನೆ ಗಣಿತ, ಇತಿಹಾಸ, ಭೂಗೋಲ, ಅರ್ಥಶಾಸ್ತ್ರಗಳನ್ನು ಹೇಗೆ ಹೊಂದಿಸಬಹುದು. ಮತ್ತು ಹೇಗೆ ಅವು ಮೊದಲಿಗಿಂತ ಸ್ವಾಭಾವಿಕ ಪ್ರೇರಣೆಗಳಿಗೆ ಹೆಚ್ಚು ಸಮಾಧಾನಕರವಾಗಿ ಕಲಿಸಲ್ಪಡಬಹುದು ಎಂಬುದನ್ನು ಸಿದ್ಧಮಾಡಿತೋರಿಸಿದ್ದಾರೆ. ಇದಕ್ಕೆ ಕ್ರಿಯಾತ್ಮಕ ಶಿಕ್ಷಣವೆನ್ನಬೇಕು. ಮೂಲಶಿಕ್ಷಣ ಶಾಲೆಯ ಸಮರ್ಥ ಶಿಕ್ಷಕನು, ವಿದ್ಯಾರ್ಥಿಗಳಲ್ಲಿ ಪ್ರತಿಯೊಂದು ಕಾರ್ಯಕ್ರಮವು ಯಾಕೆ ಮತ್ತು ಹೇಗೆ ಕೈಕೊಳ್ಳಲ್ಪಡುತ್ತದೆ ಎಂಬುದನ್ನು ತಿಳುಕೊಳ್ಳುವಂತೆ ಅವರ ಸ್ವಾಭಾವಿಕ ಪ್ರವೃತ್ತಿಯನ್ನು ಜಾಗ್ರುತಗೊಳಿಸುತ್ತಾನೆ. ಇದರಿಂದ ಅವರಲ್ಲಿ ವೈಜ್ಞಾನಿಕ ಕುತೂಹಲ ಮನೋವೃತ್ತಿಯು ಬೆಳೆದುಬಂದು ಸಮಯಾನುಸಾರ ಕಲಿಸಲಾದ ವಿಷಯಗಳನ್ನು ಗ್ರಹಿಸಲಿಕ್ಕೆ ಅವರು ಯೋಗ್ಯರಾಗುತ್ತಾರೆ. ಮೂಲಯೋಜನೆಯು ಪ್ರಕಟಿತವಾದ ಮೇಲೆ ಮೂಲಶಿಕ್ಷಣ ಶಿಕ್ಷಕರು ಪರಸ್ಪರ ಸಂಬದ್ಧ ಪಾಠಗಳನ್ನು ಉತ್ತಮ ರೀತಿಯಲ್ಲಿ ತಯಾರಿಸಿಕೊಂಡಿರುವದರಿಂದ ಕೈಗಾರಿಕೆ ಮತ್ತು ಬೌದ್ಧಿಕ ಶಾಸ್ತ್ರೀಯ ಶಿಕ್ಷಣಗಳಲ್ಲಿ ಯಾವ ಬಗೆಯ ವಿರೋಧವೂ ಕಾಣಿಸದೆ ಅವೆರಡರಲ್ಲಿಯೂ ಒಂದು ಸುಂದರ ಸಾಮಂಜಸ್ಯವು ನೆಲೆಗೊಳ್ಳುವದು.

ನಮ್ಮ ಸಮಸ್ಯೆಗಳು

ಶ್ರೀ ಶಾಂ. ಕ. ಅಕ್ಕಿ ಉಪಗುರೂಜಿ ಕ. ಗಂ. ಶಾಲೆ, ಹಾವನೂರ ಅವರ ಪ್ರಶ್ನೆಗಳಿಗೆ ಉತ್ತರಗಳು:—

ಪ್ರಶ್ನೆ ೧:— ಜೀವನ ಶಿಕ್ಷಣ ಸಾಲೆಗಳಲ್ಲಿ ಎರಡು ವರ್ಗಗಳಿರುವ ಒಬ್ಬ ಶಿಕ್ಷಕನಿಂದ ವರ್ಷದ ಅಭ್ಯಾಸ ಪತ್ರಿಕೆಯಂತೆ ವಿಷಯ ಮುಗಿಸುವದು ಸಾಧ್ಯವೇ?

ಉತ್ತರ:— ಇಂಥ ಶಿಕ್ಷಕರಿಗಾಗಿ ಅಥವಾ ಇಂಥ ಸಾಲೆಗಳಿಗಾಗಿ ಬೇರೆಯೊಂದು ಅಭ್ಯಾಸ ಪತ್ರಿಕೆಯ ಯೋಜನೆಯು ಮಾಡಲ್ಪಟ್ಟಿಲ್ಲವಾದ್ದರಿಂದ ಇದ್ದ ಅಭ್ಯಾಸ ಪತ್ರಿಕೆಯಲ್ಲಿಯೇ ಸಾಧ್ಯವಿದ್ದಷ್ಟು ವಿಷಯಗಳನ್ನು ಮುಗಿಸಬೇಕು. ಮೇಲ್ವಿಚಾರಕರು ಇಂಥ ಶಿಕ್ಷಕನ ಕಷ್ಟನಷ್ಟಗಳನ್ನು ಲಕ್ಷಕ್ಕೆ ತೆಗೆದುಕೊಳ್ಳುವರು.

ಪ್ರಶ್ನೆ ೨.— ಜೀವನ ಶಿಕ್ಷಣ ಸಾಲೆಗಳಲ್ಲಿ ಕಲಿತ ಉದ್ಯೋಗಗಳು ಮಕ್ಕಳ ಭಾವೀ ಜೀವನದ ಮಾರ್ಗದರ್ಶಕಗಳಾಗಬಹುದೇ?

ಉತ್ತರ:— ಜೀವನ ಶಿಕ್ಷಣ ಸಾಲೆಯಲ್ಲಿ ಕಲಿತ ವಿದ್ಯಾರ್ಥಿಯು ಹೆಚ್ಚಿನ ಶಿಕ್ಷಣವನ್ನು ಮುಂದೆ ಪಡೆಯಬಾರದೆಂಬ ನಿರ್ಬಂಧವೇನಾದರೂ ಉಂಟೋ? ಆರಂಭದಲ್ಲಿ ದೊರೆತ ಶಿಕ್ಷಣವು ಮುಂದೆ ವಿದ್ಯಾರ್ಥಿಯು ತಾಂತ್ರಿಕ ಸಾಲೆಯಲ್ಲಿ, ಶೇತಕಿ ಕಾಲೇಜದಲ್ಲಿ ಇಲ್ಲವೆ ಇಂಜನೀಯರಿಂಗ ಕಾಲೇಜದಲ್ಲಿ ಪ್ರೌಢ ವಿದ್ಯಾಭ್ಯಾಸವನ್ನು ಸಾಗಿಸಿದಾಗ ಅತ್ಯಂತ ಲಾಭದಾಯಕವಾಗುವದರಲ್ಲಿ ಸಂಶಯವಿಲ್ಲ. ಬಡತನ ಅಥವಾ ಇತರ ಕಾರಣಗಳಿಂದ ಒಂದು ವೇಳೆ ಮುಂದೆ ವಿದ್ಯಾಭ್ಯಾಸವನ್ನು ಸಾಗಿಸದೇ ಹೋದರೂ ಕೈಕಣ್ಮನಗಳಿಗೆ ಉದ್ಯೋಗದ ಒಲವಿನಿಂದಾದ ಸಂಸ್ಕಾರವು ಭಾವೀ ಜೀವನದಲ್ಲಿ ವ್ಯರ್ಥವಾಗಬಹುದೇ? ಹೆಚ್ಚು ಲಾಭದಾಯಕವಾದ ಉದ್ಯೋಗವು ದೊರೆಯದೆ ಹೋದರೆ ಕಾಯಕದ ಭಾವನೆಯಿಂದ ಕಲಿತ ತೋಟಗಾರಿಕೆ, ನೇಕಾರಿಕೆ ಇವು ಕೂಡ ಪವಿತ್ರ ಜೀವನಕ್ಕೆ "ಮಾರ್ಗದರ್ಶಕ"ವಾಗಿಯೇ ಆಗುವವು.

ಪ್ರಶ್ನೆ ೩:— ಜೀವನ ಶಿಕ್ಷಣ ಶಾಲೆಗಳಲ್ಲಿ ಶಿಕ್ಷಕರಿಡುವ ಕಾಗದ ಪತ್ರಗಳು ಪ್ರಾಮುಖ್ಯವೋ ಇಲ್ಲವೆ ಕೃತಿ ಪ್ರಾಧಾನ್ಯತೆಯಿಂದ ಮಕ್ಕಳು ಪಡೆದ ಶಿಕ್ಷಣವು ಮಹತ್ವವೋ?

ಉತ್ತರ:— ಪ್ರಶ್ನೆಯ ಅರ್ಥವು ಸರಿಯಾಗಿ ಆಗುವದಿಲ್ಲ. ಮಕ್ಕಳು ಎಂತಹ ಶಿಕ್ಷಣವನ್ನು ಪಡೆದಿದ್ದಾರೆ ಎಂಬುದನ್ನು ನೋಡುವದಕ್ಕಿಂತ ಶಿಕ್ಷಕರಿಟ್ಟ ಕಾಗದ ಪತ್ರಗಳ ವಿಮರ್ಶೆಯನ್ನೇ ಹೆಚ್ಚಾಗಿ ಮೇಲ್ವಿಚಾರಕರು ಮಾಡುವರೆಂಬ ಆಕ್ಷೇಪವು ಪ್ರಶ್ನೆಯ ಇಂಗಿತವೆಂದು ತೋರುವದು. ಅಂಕಿ ಸಂಖ್ಯೆಗಳು ಮಾಡಿದ ಕೆಲಸಕ್ಕೆ ಸಾಕ್ಷಿಯಾಗಿವೆ ಎಂಬ ದೃಷ್ಟಿಯಿಂದ ಕಾಗದ ಪತ್ರಗಳಿಗೂ ಒಂದು ಪ್ರಾಮುಖ್ಯವುಂಟು. ಆದರೆ ಪ್ರತ್ಯಕ್ಷ ಗಳಿಸಿದ ವಿದ್ಯೆಗಿಂತ ಇದಕ್ಕೆ ಪ್ರಾಮುಖ್ಯ ಕೊಡುವ ಮೇಲ್ವಿಚಾರಕರು ತಮ್ಮ ಕರ್ತವ್ಯವನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂದು ಹೇಳಬೇಕು.

ಇದೇ ಅಚ್ಚಾಗಿದೆ

ಮೂಲೋದ್ಯೋಗದ ಅಭ್ಯಾಸ ಪತ್ರಿಕೆ
ಒಬ್ಬ ಶಿಕ್ಷಕ ಸಾಲೆಗಳಿಗಾಗಿ

(ಇಯತ್ತೆ ೧ ರಿಂದ ೪)

ಬೆಲೆ:— ೧ ಆಣೆ, ಅಂಚೆ ವೆಚ್ಚ ಬೇರೆ

ಪ್ರತಿಗಳು ಸಿಗುವ ಸ್ಥಳ:—
ಪ್ರಧಾನ ಸಂಪಾದಕರು ಕನ್ನಡ ಪ್ರಾಥಮಿಕ ಶಿಕ್ಷಣ, ಧಾರವಾಡ

Regd. No. B. 5375

ಸಹಜ ಸಾಹಿತ್ಯ ! ★ # ಜ್ಞಾನರಸ ಸಾಹಿತ್ಯ ☆ ಶಾಶ್ವತ ಸಾಹಿತ್ಯ

ಮಾಸಿದ ತಲೆಯನ್ನು ಮಡಿಮಾಡುವ ಪವಿತ್ರ ಸಾಹಿತ್ಯ !!

ಪ್ರತಿಯೊಂದು ವಾಚನಾಲಯದ ಬೆಲೆಯನ್ನು ಹೆಚ್ಚಿಸುವ ಪ್ರಭಾವೀ ಗ್ರಂಥಗಳು.

೧.	ಪವಿತ್ರ ಜೀವನ (ಟಾಲಸ್ಟಾಯರ ಜಗದ್ವಿಖ್ಯಾತ ಕಥಾಸಂಗ್ರಹ)	....	೧-೨-೦
೨.	ಸುಂದರ ಕಥೆಗಳು (ಪಾಂಡಿಚೇರಿ ಆಶ್ರಮದ ಶ್ರೀ ತಾಯಿಯವರು ಹೇಳಿದವು)	....	೧-೪-೦
೩.	ಸಪ್ತಪದಿ (ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಏಕಾಂಕಗಳು)	....	೧-೪-೦
೪.	ದೀಪವರ್ತಿ (ಶ್ರೀ ಅರವಿಂದರ ೨ ಉಜ್ವಲ ಕಥೆಗಳು)	....	೦-೬-೦
೫.	ಶ್ರೀ ಅರವಿಂದರು (ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ)	....	೧-೮-೦
೬.	ಮುಗಿಲ ಜೇನು (ಉತ್ಸಾಹದಾಯಕವಾದ ಕವನ ಸಂಕಲನ)	....	೧-೮-೦
೭.	ಪೂಜಾ (ನಿತ್ಯ ಪಠನೀಯವಾದ ಗದ್ಯಗೀತೆಗಳು)	....	೧-೧೨-೦
೮.	ಭಾರತದ ಭವ್ಯಸಿದ್ಧತೆ (ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ)	....	೧-೦-೦
೯.	ಬೆಟ್ಟದ ಹೊಳೆ (ಪ್ರಗತಿಗಾಮಿಯಾದ ಕಾದಂಬರಿ)	....	೧-೪-೦
೧೦.	ಸ್ವರ್ಗದೋಲೆಗಳು (ಕರ್ನಾಟಕ ಸಂಸ್ಕೃತಿಯ ಕನ್ನಡಿ)	....	೧-೮-೦
೧೧.	ಕನ್ನಡ ಕುಲದೀಪ ಬಸವಣ್ಣ (ಉದಿತ ಜೀವನಕ್ಕೆ ಕೈಗೋಲು)	....	೧-೪-೦
೧೨.	ಗರತಿಯ ಬಾಳು (ನಿತ್ಯ ಜೀವನದ ರಸಘಟ್ಟಿ)	....	೧-೪-೦
೧೩.	ಆರ್ಯದೇಶಭಕ್ತಿ (ಧ್ಯೇಯ ಜೀವಿಗೆ ಈಸುಗುಂಬಳ)	....	೦-೩-೦
೧೪.	ಜೀವನ ದೃಷ್ಟಿ (ವಿವಿಧ ಪ್ರಬಂಧಗಳು)	....	೧-೨-೦
೧೫.	ದತ್ತ ಸಾಹಿತ್ಯ (ಶ್ರೀ ಬೇಂದ್ರೆ ಸಾಹಿತ್ಯ ಪರಿಚಯ)	....	೧-೩-೦

ಇವಲ್ಲದೆ ಶ್ರೀ ಅರವಿಂದ ಮಹಾಯೋಗಿಗಳ ವಿವಿಧ ಸಾಹಿತ್ಯ ಗ್ರಂಥಗಳೂ ನಮ್ಮಲ್ಲಿ ಯೋಗ್ಯ ಬೆಲೆಗೆ ಸಿಗುತ್ತವೆ. ಹತ್ತು ರೂ.ಗಿಂತ ಹೆಚ್ಚಿನ ಬೆಲೆಯ ಪುಸ್ತಕ ಕೊಂಡುಕೊಳ್ಳುವವರ ಅಂಚೆ ವೆಚ್ಚವನ್ನು ನಾವೇ ನೋಡಿಕೊಳ್ಳುವೆವು.

ಶ್ರೀ ಅರವಿಂದ ಗ್ರಂಥಾಲಯ ಪೋ:— **ಚಡಚಣ** ಜಿ. ವಿಜಾಪುರ

ಶ್ರೀ 'ಶಿವಕುಮಾರ' ಅವರ # ಹುಚ್ಚರ ರಾಜ್ಯ ಬೆಲೆ ಎಂಟಾಣೆ ಮಾತ್ರ

(ಶ್ಲೇಷರೂಪಕ ಕಥೆಗಳು)

★ ಕೇವಲ ೨-೮-೦ (ಅಂಚೆವೆಚ್ಚ ಸಹಿತ) ವಾರ್ಷಿಕ ಚಂದಾಹಣದಲ್ಲಿ ಮಾಲೆಯ ಮೊದಲ ಕುಸುಮವಾಗಿ ಪಡೆಯಿರಿ. ವರ್ಷಕ್ಕೆ ೪೦೦ ಪುಟಗಳ ಸಾಹಿತ್ಯ. ಪ್ರಾಥಮಿಕ ಶಿಕ್ಷಕರ ಕಥೆ, ಕವನ, ನಾಟಕ, ಕಾದಂಬರಿಗಳ ನಾಲ್ಕೈದು ಕೃತಿಗಳಲ್ಲಿ.

★ ಕನ್ನಡ ಶಾಲಾ ವಿದ್ಯಾರ್ಥಿಗಳ ಪಠ್ಯೇತರ ಕಥೆ-ಕವನಗಳ ಮೇರುಕೃತಿಗಳೆಂದು ಖ್ಯಾತಿವೆತ್ತ 'ಆನೆಕಲ್ಲು' 'ಪುಟಚೆಂಡು' ಪುಸ್ತಕಗಳನ್ನು ನೀಡಿದ ಪ್ರಾ. ಶಿ. ರ. ಪ್ರೋತ್ಸಾಹನಾರ್ಥ ರಚಿಸಿದ ಭಾರತೀ ಸಾಹಿತ್ಯಭಂಡಾರದ ಪ್ರಕಟನೆ ಎಂದ ಮೇಲೆ ಹೆಚ್ಚಿಗೆ ಹೇಳಬೇಕಾಗಿಲ್ಲ.

★ ಕೂಡಲೇ ತಾವೆಲ್ಲ ಚಂದಾದಾರರಾಗಿ ತಮ್ಮದೇ ಆದ ಶಿಕ್ಷಕರ ಸಂಸ್ಥೆಯು ಚಿರಸ್ಥಾಯಿಯಾಗಿ ನಿಲ್ಲಲು ನೆರವು ನೀಡಿರಿ. ಶ್ರೇಷ್ಠಸಾಹಿತಿಗಳ ಕೃತಿಗಳನ್ನೂ ಪಡೆಯಿರಿ.

★ ಶಿಕ್ಷಕರಿಗೆ ವಿಶೇಷ ಸವಲತ್ತುಗಳಿವೆ.

★ ಚಂದಾದಾರರಿಗೆ ಬಿಡಿ ಪ್ರಕಟಣೆಗಳು ½ ಬೆಲೆಯಲ್ಲಿ (ಅಂಚೆವೆಚ್ಚ ಬೇರೆ)

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

Printed by Shri S. F. Kattimani at Manohar Power Printing Press, Hubli. Edited and Published by Sjts S. P. Patil, B. M. Shintri, S. R. Tatti & Smti. P. A. Bhaskar at the Kannada Prathamik Shikshan Office, Govt. Training College for Men, Dharwar.

ಕನ್ನಡ

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು : **ಶ್ರೀ ಎಸ್. ಪಿ. ಪಾಟೀಲ**

" ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯ್ಯ
ಜ್ಯೋತಿಯ ಬಲದಿಂದ ತಮಂಧದ ಕೇಡ ನೋಡಯ್ಯ "

ಬಿಡಿ ಪತ್ರಿಕೆ
೦—೬—೦

ಮೇ ೧೯೫೭

ವಾ. ಚಂದಾ
೪—೦—೦

ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

೧೯೫೩ನೆಯ ಎಪ್ರಿಲ ದಿನಾಂಕ ೩ರಂದು ರಾಷ್ಟ್ರೀಯ ಪಂಚವಾರ್ಷಿಕ ಯೋಜನೆಯ ಪ್ರಚಾರೋತ್ಸವದ ಅಂಗವಾಗಿ ಕಾಲೇಜದಲ್ಲಿ ನಡೆದ ಶ್ರಮದಾನದ ವಿವರಗಳು.

ಶಿಕ್ಷಕ – ವಿದ್ಯಾರ್ಥಿಗಳು ಬಾವಿಯಿಂದ ತೆಗೆದ ಮಣ್ಣನ್ನು ಚಕ್ಕಡಿಯಲ್ಲಿ ತುಂಬುತ್ತಿರುವುದು

ಇನ್ನೊಂದು ಕಡೆ ಶಿಕ್ಷಕ - ವಿದ್ಯಾರ್ಥಿಗಳು ಟ್ರಕ್ಕಿನಲ್ಲಿ ಮಣ್ಣನ್ನು ತುಂಬುತ್ತಿರುವುದು.

ಬಾವಿಯಿಂದ ಕಾಲೇಜದ ಹೊಲಕ್ಕೆ ನೀರನ್ನು ಒಯ್ಯಲು ಸಿಮೆಂಟ ಪಾಯಿಪುಗಳನ್ನು ಜೋಡಿಸುತ್ತಿರುವುದು.

ಕನ್ನಡ ಪ್ರಾಥಮಿಕ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : **ಶ್ರೀ ಕೆ. ಬಿ. ತೇರಗಾಂವಕರ,** ಬಿ.ಎಸ್‌ಸಿ. (ಆನರ್ಸ), ಬಿ.ಟಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : **ಶ್ರೀ ಎಸ್. ಪಿ. ಪಾಟೀಲ,** ಬಿ.ಎ., ಬಿ.ಟಿ., ಡಿ.ಪಿ.ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ಹಾಗು ಗೌ. ಕಾರ್ಯದರ್ಶಿ
ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೧ | **ಮೇ ೧೯೫೬** | **ಸಂಚಿಕೆ ೧೨**

— ಪರಿವಿಡಿ —

೧)	ಸಂಪಾದಕೀಯ	....	೨
೨)	ಮೂಲ ಶಿಕ್ಷಣದ ಅರಿವು	ಶ್ರೀ ಶಿಂತ್ರಿ ಬಸಪ್ಪನವರು	೫
೩)	ಮೂಲ ಶಿಕ್ಷಣ ಪ್ರಶ್ನೋತ್ತರಗಳು	ಶ್ರೀ ತಟ್ಟಿ ಶಾಮರಾಯರು	೪,೬
೪)	ಟಾಟಾ ನಗರ	ಶ್ರೀ ಶಿಂತ್ರಿ ಬಸಪ್ಪನವರು	೧೧
೫)	ಮುಂಬಯಿ ರಾಜ್ಯದಲ್ಲಿ ಮೂಲ ಶಿಕ್ಷಣದ ಪ್ರಗತಿ	ಶ್ರೀ ಶ್ಯಾ. ಶ್ರೀ. ಹುಕ್ಕೇರಿ	೧೪
೬)	ಆಯಾ ಕಾಲದಲ್ಲಿಯ ಶಿಕ್ಷಣದ ಸ್ಥಾನಮಾನಗಳು	ಶ್ರೀ ಎಫ್. ಸಿ. ಉಣಕಲ್ಲ	೧೮
೭)	ಪ್ರಾಥಮಿಕ ಶಿಕ್ಷಣ ಪ್ರಪಂಚದಲ್ಲಿ	....	೨೨
೮)	ಜೀವನ ಶಿಕ್ಷಣ ವಾರ್ತೆಗಳು	ಶ್ರೀ ಆಯ್. ಎಸ್. ಬಿದರಿ	೨೫
೯)	ನೂರು ವರ್ಷಗಳ ಕ್ಯಾಲೆಂಡರ	ಶ್ರೀ ಎ. ಎಸ್. ಹೂಗಾರ	೨೬
೧೦).	ಗ್ರಂಥ ವಿಮರ್ಶೆ —	ಶ್ರೀ ಆಯ್. ಎಸ್. ಬಿದರಿ	ಕವರ ೩

— ಸಂಪಾದಕೀಯ —

ಕಳೆದ ತಿಂಗಳ ೨೩ನೆಯ ದಿನದಂದು ದೇಶದಲ್ಲಿ ಹಲವೆಡೆಗಳಲ್ಲಿ ಮಹಾವೀರಸ್ವಾಮಿ ವರ್ಧಮಾನರ ಹುಟ್ಟುಹಬ್ಬ (ಜಯಂತಿ) ವನ್ನು ಮಾಡಲಾಯಿತು. ಮಹಾವೀರಸ್ವಾಮಿಯೆಂಬ ಹೆಸರಿನ ಭೌತಿಕ ಕಾಯವು ಅಂದಿಗೆ ಅಳಿದು ಇಂದಿಗೆ ಇಲ್ಲವಾದರೂ ಅವರು ಸೂಕ್ಷ್ಮವಾಗಿ ಇಂದಿಗೂ ಇರುವರೆಂಬುದನ್ನು ಅವರ ತತ್ವ ನೆನಹಿಗಾಗಿ ಏರ್ಪಟ್ಟಿರುವ ಈ ಹಬ್ಬಗಳಿಂದ ಮಂದಿಯು ಅರಿತುಕೊಂಡಿದೆ. ವರ್ಧಮಾನರ ಅಹಿಂಸಾ ತತ್ವವು ಗಾಂಧೀಜಿಯವರ ಅಹಿಂಸಾ ಜೀವನದ ಅಡಿಗಲ್ಲಾಗಿತ್ತು. ಜಗದ ಹೆಚ್ಚಿನ ಭಾಗವು ಅದರಲ್ಲೂ ಹೆಚ್ಚಾಗಿ ಪೌರ್ವಾತ್ಯ ದೇಶಗಳು ಇಂದೀಗ ಅಹಿಂಸಾ ತತ್ವದ ಬೆನ್ನುಹತ್ತಿವೆ. ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಯಜ್ಞ-ಯಾಗಾದಿ ಹಿಂಸಾಚಾರಗಳನ್ನು ತರ್ಕಬದ್ಧವಾಗಿ ಖಂಡಿಸಿ ಜ್ಞಾನಮಾರ್ಗ ಸದಾಚಾರಗಳನ್ನು ಜನರ ಮುಂದಿಟ್ಟರು.

ಮಹಾನುಭಾವಿ ಬಸವಣ್ಣನವರ ಮಹಂತ ಜೀವನದ ನೆನಹಿನ ದಿನವೂ ಇದುವೆ ತಿಂಗಳಲ್ಲಿ ಬರಲಿದೆ. ವೈಶಾಖ ಶು॥ ೩ ರಂದು ರವಿವಾರ ದಿನ ಜೀವನ ಪ್ರಪಂಚದ ಆ ಮಹಾ ಹಿರಿಯರ ತುಂಬುಜೀವನವನ್ನು ಜನತೆ ಮರಳಿ ಮರಳಿ ಮಗುದೊಮ್ಮೆ ನೆನೆಯಲಿದೆ. ರಾಜಕಾರಣಿಗಳಿಗೆ, ಸಮಾಜ ಸುಧಾರಕರಿಗೆ ಬಸವಣ್ಣನವರ ಜೀವನವು ಮೂಲ ನೆಲವಾಗಿರುವಂತೆ ಶಿಕ್ಷಣ ತಜ್ಞರಿಗೂ ಅವರ ಬದುಕು ನೆಲೆಸೆಲೆಗಳ ಎಡೆಯಾಗಿದೆ. ಜೀವನವು ಗೋಚರ ಪ್ರಮಾಣ್ಯವಾಗುವದು ಜನದ ನಡೆ ನುಡಿ (ಸಂಸ್ಕೃತಿ) ಗಳ ಪರಿಷ್ಕಾರತೆಯಿಂದ ಎಂಬುದನ್ನು ಅಣ್ಣನವರು ಕಂಡು ಸಾಹಿತ್ಯ ರಚನೆಗೆ ಮತ್ತು ಶಿಕ್ಷಣಕ್ಕೆ ಕೈಹಾಕಿದರು. “ಆದ್ಯರ ವಚನ ಪರುಷ ಕಂಡಯ್ಯ”, “ನುಡಿದರೆ ಲಿಂಗ ಮೆಚ್ಚಿ ಅಹುದೆನಬೇಕಯ್ಯಾ”, “ನಾಯಕ ನರಕ ಪರಿಹಾರಕ್ಕೆ ಕೂಡಲ ಸಂಗನ” ಅರಿವೊಂದು ಸಾಲದೆ— ಎಂದಾದಿಯಾಗ ಹೇಳಿ ಜನ ಜಂಗುಳಿಯ ನೈತಿಕ ಕಟ್ಟುವಿಕೆಗೆ ಕೈಹಾಕಿದರು; ಭಾರತದ ತುಂಬ ನೈತಿಕ ರಾಜ್ಯವನ್ನು ಕಟ್ಟಿದರು. ಇಂದಿನ ಜೀವನದಲ್ಲಿ ನೈತಿಕ ಪತನವು ತುಂಬ ಕಾಣಿಸಿಕೊಳ್ಳುತ್ತಿದೆಯಾಗಿ ಹೊಣೆಹೊತ್ತವರಿ ಎತ್ತಿಹೇಳುತ್ತಿರುವಾಗ ಬಸವ ಮಹಾನುಭಾವರ ತತ್ವಾಚರಣೆಗಳನ್ನು ಕೈಗೆ ತೆಗೆದುಕೊಳ್ಳುವದು ರುಜು ಮಾರ್ಗವಲ್ಲವೇ ? ಜೀವನ ತಳಗಲ್ಲಾದ ನಡೆನುಡಿಗಳ ತಿದ್ದುವಿಕೆಯೇ ಶಿಕ್ಷಣದ ಮೊಟ್ಟಮೊದಲ ಮಾತಾದುದರಿಂದ ಶಿಕ್ಷಣ ಪ್ರಪಂಚದಲ್ಲಿ ದುಡಿಯುತ್ತಿರುವ ನಮಗೆಲ್ಲ ಅಣ್ಣನವರ ಜೀವನವೇ ಬೆಳಕನ್ನೀಯಲಿ.

ಮೂಲಶಿಕ್ಷಣವನ್ನು ಕುರಿತು ತಿಳಿದವರ ವಿಚಾರಗಳು

ಮೇ ತಿಂಗಳ ದಿನಾಂಕ ೨ ರಂದು ಕೇಂದ್ರ ಶಿಕ್ಷಣ ಮಂತ್ರಿ ಶಾಖೆಯು ಮೂಲ ಶಿಕ್ಷಣ ಪ್ರದರ್ಶನವೊಂದನ್ನು ಏರ್ಪಡಿಸಿದ್ದಿತು. ರಾಷ್ಟ್ರಪತಿ ಡಾ॥ ರಾಜೇಂದ್ರ ಪ್ರಸಾದರು ಆ ಪ್ರದರ್ಶನ ಮಂದಿರವನ್ನು ನೋಟಕರಿಗಾಗಿ ತೆರೆಯುತ್ತ ನುಡಿದ ನುಡಿಗಳು ಬೆಲೆಯುಳ್ಳವುಗಳಾಗಿವೆ. ಅವು :

ಶಿಕ್ಷಣ ಧೋರಣೆ ನಿರೂಪಿಸುವವರು ಹಾಗೂ ವಸ್ತುತಃ ಮಕ್ಕಳಿಗೆ ಶಿಕ್ಷಣ ಕೊಡುವವರು ಮೂಲಶಿಕ್ಷಣದ ಪರಿಪೂರ್ಣತೆಯ ಬಗ್ಗೆ ನಂಬಿಗೆಯುಳ್ಳವರಾಗಬೇಕು.

ಇದರಲ್ಲಿದ್ದ ನಂಬುಗೆಯು ಮೂಲಶಿಕ್ಷಣವನ್ನು ಅಡ್ಡಿ ಆತಂಕಗಳ ನಡುವೆಯೂ ಕೆಲಸಕ್ಕಿಳಿಸುವದು. ಸಾರ್ವತ್ರಿಕ ಶಿಕ್ಷಣದ ಗುರಿಯನ್ನು ಸಮಾಧಾನವಾಗಿ ಸಾಧಿಸುವದು ಕೆಲಸಗಾರರಲ್ಲಿ (ನೌಕರರಲ್ಲ) ಮೇಲಿನಿಂದ ಬಂದ ಆಜ್ಞೆಗಳನ್ನು ಮಾತ್ರ ಪಾಲಿಸುವ ಬುದ್ಧಿ (ಸಂಬಳಕ್ಕಾಗಿ ಕೆಲಸ) ಯೊಂದಷ್ಟೇ ಗುರಿ ಮುಟ್ಟುವದಕ್ಕೆ ನೆರವಾಗದು.

ಮೂಲಶಿಕ್ಷಣವನ್ನು ಕುರಿತು ಭಿನ್ನಾಭಿಪ್ರಾಯಕ್ಕೆ ಅವಕಾಶವಿದೆಯಾದರೂ ಶಿಕ್ಷಣದಂತಹ ಮೂಲಭೂತ ವಿಷಯದಲ್ಲಿ ಭಿನ್ನಾಭಿಪ್ರಾಯ ಸಲ್ಲದು.

ತೊಡಕು ತೊಂದರೆಗಳಿದ್ದಾಗ್ಯೂ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮೂಲಶಿಕ್ಷಣವನ್ನು ಕೆಲಸಕ್ಕಿಳಿಸಹತ್ತಿವೆ. ಆ ತೊಡಕು ತೊಂದರೆಗಳನ್ನು ಪೂರ್ಣ ನೀಗಿಸಿವೆಯಂದಾಗಲಿ ಮೂಲಶಿಕ್ಷಣವು ವಿವಾದಗ್ರಸ್ತ ಪರಿಸ್ಥಿತಿಯಿಂದ ದಾಟಿದೆಯಂದಾಗಲಿ ಸರಕಾರಗಳು ಹೇಳಲಾರವು.

ಮೂಲಶಿಕ್ಷಣವನ್ನು ಕುರಿತು ಶ್ರೀ ಶ್ರೀಮನ್ನಾರಾಯಣರ ವಿಚಾರಗಳು :

ಮೂಲಶಿಕ್ಷಣವು ಮಹಾತ್ಮಾ ಗಾಂಧೀಜಿಯವರಿಂದ ೧೯೩೭ರಲ್ಲಿ ನಾಡಿನ ಮುಂದೆ ಇಡಲ್ಪಟ್ಟಿತು.

ಕಸಬುಗಳ ಮುಖಾಂತರ ಸಾಮಾಜಿಕ ಹಾಗೂ ದೈಹಿಕ ಶಿಕ್ಷಣ ವಿಷಯವನ್ನು ಕೊಡುವ ಸ್ವಾವಲಂಬಿ ಶಿಕ್ಷಣವೇ ಮೂಲಶಿಕ್ಷಣ. ಜೀವನ ಮತ್ತು ಮೂಲಶಿಕ್ಷಣಗಳು ಪರಸ್ಪರ ಪೂರಕಗಳಾದುದರಿಂದ ವೈಜ್ಞಾನಿಕವಾಗಿ ಹೆಚ್ಚು ಪ್ರಾಯೋಗಿಕವಾಗಿವೆ. ಮಗುವಿನಲ್ಲಿ ಮರೆ-ಗೊಂಡಿರುವ ಮಾಡುವ ಹಾಗೂ ಹುಟ್ಟಿಸುವ ಚಟುವಟಿಕೆಗಳನ್ನು ಬಳಸಿಕೊಂಡೇ ಮೂಲಶಿಕ್ಷಣವು ಮೂರ್ತಗೊಂಡಿದೆ. ಶಿಕ್ಷಣ ಕಾರ್ಯಕ್ಕೆ ವೆಚ್ಚವಾಗುವ ಹಣವನ್ನುಳಿಸುವದಕ್ಕೂ ಅಷ್ಟೆ, ಇಲ್ಲವೆ, ಸರಕಾರವು ಕೈಕೊಂಡ ಇತರ ಯಾವುದೇ ಯೋಜನೆಯಿಂದ ತಲೆದೋರಬಹುದಾದ ಹಣದ ಕೊರತೆ ತುಂಬಿಕೊಳ್ಳುವದಕ್ಕಾಗಿ, ಅಷ್ಟೆ, ಮೂಲ ಶಿಕ್ಷಣವನ್ನು ಬಳಕೆಯಲ್ಲಿ ಬರಿಸಲಾಯಿತೆಂಬ ಲೆಕ್ಕ ಹಾಕುವದು ಮೂಲಶಿಕ್ಷಣದ ಮೂಲೋದ್ದೇಶಕ್ಕೆ ಹೊಂದಲಾರದ ಮಾತು. ಮೂಲಶಿಕ್ಷಣದಲ್ಲಿ ಉತ್ಪಾದನಾ ದೃಷ್ಟಿಯು ಮುಖ್ಯವಾಗಿದೆ. ಗಾಂಧೀಜಿಯವರು ಹೇಳುವಂತೆ ಉತ್ಪಾದನೆಯೇ ಶಿಕ್ಷಕನ ಬೋಧನಾ ಸಾಮರ್ಥ್ಯವನ್ನು ಅಳೆಯುವದಕ್ಕೆ ಉತ್ತಮ ಅಳತೆಗೋಲು. ಮೂಲಶಿಕ್ಷಣದ ಪುರಸ್ಕರ್ತರೆಲ್ಲ ನಂಬುಗೆಯಿಂದ ದುಡಿಯುವವರಾದರೆ ಇದು ಉತ್ತಮ ಶಿಕ್ಷಣವಷ್ಟೇ ಅಲ್ಲದೆ, ಕಡಿಮೆ ವೆಚ್ಚದ ಶಿಕ್ಷಣವೂ ಅಹುದು. ಆಚಾರ್ಯ ವಿನೋಬಾ ಭಾವೆಯವರು ಮೂಲಶಿಕ್ಷಣದ ಅಭ್ಯಾಸ ಕ್ರಮವನ್ನು ಕುರಿತು ಹಳ್ಳಿಗಾಡುಗಳಲ್ಲಿ ಬೇಸಾಯಕ್ಕೆ ಸಂಬಂಧಪಟ್ಟ ಕಸಬುಗಳನ್ನು ಕಲಿಸಿಕೊಡಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಈ ಅಭಿಪ್ರಾಯವನ್ನು ಅನುಸರಿಸಿದಲ್ಲಿ ಮೂಲ ಶಿಕ್ಷಣವು ಇನ್ನೂ ಕಡಿಮೆ ವೆಚ್ಚದಲ್ಲಿ ನಡೆಯುವದು.

ಮೂಲ ಶಿಕ್ಷಣವು ಕೆಲವೊಬ್ಬರ ಬದುಕಲ್ಲ. ಇದೀಗ ಅಭಿವೃದ್ಧಿ ಕಾರ್ಯಗಳನ್ನು ಕೈಕೊಂಡಿರುವ ನಮ್ಮ ದೇಶಕ್ಕೆ ಮೂಲ ಶಿಕ್ಷಣದಂತಹ ಅಗತ್ಯವಾದ ಬೇರೊಂದು ಶಿಕ್ಷಣ ಪದ್ಧತಿಯು ಇನ್ನಿಲ್ಲ. ಈ ಬಗೆಯ ಶಿಕ್ಷಣವು ದೇಶದಲ್ಲಿಯ ಎಲ್ಲ ಬಗೆಯ ನಿರುದ್ಯೋಗ ಸಮಸ್ಯೆಯನ್ನು ನಿರ್ಮೂಲ ಮಾಡಬಲ್ಲುದು. ಅಕ್ಷರಾಭ್ಯಾಸದೊಡನೆ ಕೈಕಸಬುಗಳನ್ನೂ ಕಲಿಸುವದು ಮೂಲ ಶಿಕ್ಷಣವೆಂಬ ತಿಳಿವು ಜನತೆಯಲ್ಲಿದ್ದಂತೆ ಕಾಣುತ್ತಿದೆ. ಅಕ್ಷರಾಭ್ಯಾಸವು ಕೈಕಸಬುಗಳ ಬೆಳವಣಿಗೆಗೆ ಪುಷ್ಟಿಯನ್ನೀಯುವದಾಗಿ ತನ್ಮುಖಾಂತರ ಜೀವನವನ್ನು ಬೆಳಗಿಸುವದಾಗಿ ನಾವು ತಿಳಿಯುವದಾದರೆ ಕೈಕಸಬುಗಳ ಮುಖಾಂತರವೇ ಇತರ ವಿಷಯಗಳ ಶಿಕ್ಷಣ ಕೊಡುವುದು ಮೂಲ ಶಿಕ್ಷಣವೆಂದು ಜನತೆಯು ತಿಳಿಯಬೇಕು. ಮೂಲ ಶಿಕ್ಷಣವು ನಮ್ಮ ನಾಡಿಗೆ ಹೊಸದಲ್ಲ. ನಮ್ಮ ಪೂರ್ವಜರು ಕಾಯಕ ಶಿಕ್ಷಣವನ್ನು ಜನತೆಯಲ್ಲಿ ಬಳಕೆಗೊಳಿಸಿದ್ದರು. ಪರಿಸ್ಥಿತಿಗೆ ತಕ್ಕ ಬದಲಾವಣೆಗಳನ್ನು ಅನುಲಕ್ಷಿಸಿದರೆ ಅಂದಿನ ಕಾಯಕ ಶಿಕ್ಷಣದ ರೂಪರೇಷೆಗಳ ಬಗ್ಗೆ ಸಂಶೋಧನ ನಡೆದಷ್ಟು ಇಂದಿನ ಮೂಲ ಶಿಕ್ಷಣಕ್ಕೆ ನೆರವು.

ಪ್ರಾಥಮಿಕ ಶಿಕ್ಷಕರ ಸಂಬಳದಲ್ಲಿ ಹೆಚ್ಚಳ

ಕೇಂದ್ರ ಸರಕಾರದ ಲೋಕ ಸಭೆಯ ಅಧಿವೇಶನದಲ್ಲಿ ಎಪ್ರೀಲ ೧೬ ರಂದು ಶಿಕ್ಷಣ ಶಾಖೆಯ ಉಪ ಮಂತ್ರಿಗಳಾದ ಡಾ|| ಕೆ. ಎಲ್. ಶ್ರೀಮಾಲಿಯವರು ಹೀಗೆ ತಿಳಿಯ ಪಡಿಸಿದರು :

ಪ್ರಾಥಮಿಕ ಸಾದಾಶಾಲೆಗಳನ್ನು ಹಾಗು ಟ್ರೇನಿಂಗ ಕಾಲೇಜುಗಳನ್ನು ಮೂಲ ಶಿಕ್ಷಣದ ಸಾಲೆ ಕಾಲೇಜುಗಳನ್ನಾಗಿ ಮಾರ್ಪಡಿಸುವದಕ್ಕಾಗಿ ತಗಲುವ ವೆಚ್ಚದಲ್ಲಿ ೧೦೦ಕ್ಕೆ ೩೦ರಷ್ಟು ಪಾಲನ್ನು ಕೇಂದ್ರ ಸರಕಾರವು ಕೊಡುವದಾಗಿ ತಿಳಿಸಿದರು. ಸಾಲೆ ಕಲಿಯುವ ಮಕ್ಕಳ ಎಣಿಕೆಯು ಇಂದಿಗೆ ೧೦೦ರಲ್ಲಿ ೩೬.೩ ದಿಂದ ೪೭ರ ವರೆಗೆ ಬೆಳೆದಿದೆ. ಪ್ರಾಸಂಗಿಕವಾಗಿ ಸಂಬಳ ವಿಷಯವನ್ನೆತ್ತಿ ಪ್ರಾಥಮಿಕ ಸಂಸ್ಥೆಗಳ ಶಿಕ್ಷಕರ ಸಂಬಳವನ್ನು ಹೆಚ್ಚಿಸಬೇಕಾಗುವದೆಂದೂ, ಅನ್‌ಟ್ರೇಂಡ ಶಿಕ್ಷಕರಿಗೆ ತಿಂಗಳಿಗೆ ಮೂಲ ಸಂಬಳವನ್ನು ೪೦ ರೂ.ಗಳಂತೆ, ಮ್ಯಾಟ್ರಿಕ್ಯೂಲೇಶನ್ ಪರೀಕ್ಷೆ ಪಾಸಾಗಿ ಟ್ರೇಂಡ ಆದವರಿಗೆ ತಿಂಗಳಿಗೆ ಮೂಲ ಸಂಬಳವನ್ನು ೫೦ ರೂ. ಗಳಂತೆ ಕೊಡಬೇಕೆಂಬ ಸಂಗತಿಯನ್ನು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಒಪ್ಪುವ ಆಶೆಯುದೆಯಾಗಿ ತಿಳಿಸಿದರು. ಸಂಬಳದಲ್ಲಿಯ ಈ ಬಗೆಯ ಹೆಚ್ಚಳವನ್ನು ಕುರಿತು ಕೇಂದ್ರ ಸರಕಾರವು ರಾಜ್ಯ ಸರಕಾರಗಳಿಗೆ ೧೦೦ರಲ್ಲಿ ೫೦ರಷ್ಟು ಪಾಲಿನ ಹಣವನ್ನು ನೆರವೀಯುವದಾಗಿ ತಿಳಿಸಿದರು. ಈ ಬಗ್ಗೆ ಈಗಾಗಲೇ ರಾಜ್ಯ ಸರಕಾರಗಳಿಗೆ ಸೂಚನೆಗಳು ಬಂದಿವೆಯೆಂದು ತಿಳಿಯುತ್ತದೆ. ಈ ಹೆಚ್ಚಳವು ಇಂದಿನ ಪರಿಸ್ಥಿತಿಯಲ್ಲಿ ಒಳ್ಳೇ ಸ್ವಾಗತವಾಗಿದ್ದರೂ ಭಾರತದ ಉಜ್ವಲ ಪರಂಪರೆಯನ್ನು ಎತ್ತಿ ತೋರಿಸುವ ಗುರುಕುಲ ಹಾಗೂ ಕಾಯಕ ಶಿಕ್ಷಣದಲ್ಲಿ ಸಂಬಳವು ಸಮಸ್ಯೆಯಾಗಿರಲಿಲ್ಲವೆಂದು ನಾವು ತಿಳಿಯಬೇಕು.

‘ಮೂಲ ಶಿಕ್ಷಣ—ಪ್ರಶ್ನೋತ್ತರಗಳು’ ಪುಟ ೧೧ ಪ್ರ. ೭ ರ ನಂತರ ಇದನ್ನು ಓದಿಕೊಳ್ಳಬೇಕು.

ಪ್ರಶ್ನೆ ೮. ಮೂಲ ಶಿಕ್ಷಣದಿಂದ ಯಾವದೊಂದು ಪರಿಸ್ಥಿತಿಯಲ್ಲಿ ಹುಟ್ಟಿ ಬೆಳೆದ ಬಾಲಕನು ಆ ಪರಿಸ್ಥಿತಿಯಲ್ಲಿಯೇ ಕಟ್ಟಿಬಿದ್ದು ವ್ಯವಸಾಯ ಸ್ವಾತಂತ್ರ್ಯಕ್ಕಾಗಲಿ ಸಮಾನ ಅವಕಾಶಕ್ಕಾಗಲಿ ಎರವಾಗಬೇಕಾಗುವದಿಲ್ಲವೇ ?

ಉತ್ತರ:— ಯಾವ ಶಿಕ್ಷಣವು ಬಾಲಕನ ವಿಶಿಷ್ಟ ಪರಿಸ್ಥಿತಿಯನ್ನೇ ಧ್ಯಾನದಲ್ಲಿಟ್ಟುಕೊಂಡು ನಡೆಯುವದೋ ಅದು ಏಕಾಂಗಿಯಾಗುವ ಸಂಭವವದೆ. ಮೂಲ ಶಿಕ್ಷಣವು ಬಾಲಕನನ್ನು ಅದೇ ಪರಿಸ್ಥಿತಿಗೆ ಕಟ್ಟಿಹಾಕುವದಿಲ್ಲ. ಆದರೆ ಅವನ ಸರ್ವಾಂಗೀಣ ಶಿಕ್ಷಣದ ಪ್ರಯೋಜನಕ್ಕಾಗಿಯೇ ಆ ಪರಿಸ್ಥಿತಿಯಲ್ಲಿಯ ಉದ್ಯೋಗವನ್ನು ಸಾಧನವನ್ನಾಗಿಟ್ಟುಕೊಂಡು ಬಾಲಕನು ಆ ಪರಿಸ್ಥಿತಿಯ ಹಿನ್ನೆಲೆಯ ಆಶ್ರಯದಿಂದ ಉತ್ತಮ ಶಿಕ್ಷಣವನ್ನು ಪಡೆಯುವಂತೆ ಮಾಡುವದು. ಬಾಲಕನ ಪರಿಸ್ಥಿತಿಯ ಅನುಭವದಿಂದ ಅವನ ಶಿಕ್ಷಣವು ಆರಂಭವಾಗುವದು ಯೋಗ್ಯವಾಗಿದೆ. ಎಲ್ಲಿ ಧನಿಕರ ಮತ್ತು ದರಿದ್ರರ ನಡುವಿನ ಅಸ್ವಾಭಾವಿಕ ಅಂತರವು ಮಾಯವಾಗಿ ಪ್ರತಿಯೊಬ್ಬನಿಗೂ ಜೀವನ ನಿರ್ವಾಹಕ್ಕಾಗಿ ದುಡಿತದ ಸ್ವಾತಂತ್ರ್ಯದ ಹಕ್ಕು ಸಿಕ್ಕುವದೋ ಅಂತಹ ನ್ಯಾಯನಿಯತ ಸಾಮಾಜಿಕ ವ್ಯವಸ್ಥೆಯು ನಿರ್ಮಾಣವಾಗಬೇಕೆಂದು ಗಾಂಧಿಜಿಯವರ ಅಭಿಪ್ರಾಯವಿತ್ತು. ಕ್ರಿಯಾಹೀನ ಶಿಕ್ಷಣದಿಂದ ಬಾಲಕನಲ್ಲಿ ಸಮಸ್ಯೆಗಳನ್ನು ವಿವೇಕದಿಂದ ಬಗೆಹರಿಸುವ ಯೋಗ್ಯತೆಯು ಬರುವದಿಲ್ಲ. ಯಾವ ಶಿಕ್ಷಣವು ಜೀವನದ ಖಚಿತವಾದ ವೈಯಕ್ತಿಕವಾದ ಸಮಸ್ಯೆಗಳನ್ನು ಎದುರಿಸುತ್ತಲೇ ಪ್ರಾಪ್ತವಾಗುವದೋ ಅಂಥ ಶಿಕ್ಷಣದಿಂದಲೇ ಆ ಯೋಗ್ಯತೆಯು ಬರಬಲ್ಲದು

ಶಾಲೆಯಲ್ಲಿಯ ಕೈಗಾರಿಕೆಯ ಕಲೆಗಳನ್ನು ಕಲಿಯುವ ಮಾತ್ರದಿಂದ ಹುಡುಗನು ನೂಲುವ ಅಥವಾ ನೇಯುವ ಉದ್ಯೋಗದಲ್ಲಿ ಶ್ರೇಷ್ಠನೆಂದೆನಿಸಲಾರ. ಈ ಕಸಬುಗಳು ಅವನಲ್ಲಿ ಒಂದು ವ್ಯವಹಾರ ದೃಷ್ಟಿಯನ್ನು ತಂದುಕೊಡುತ್ತವೆ. ಇದರಿಂದ ಅವನ ಮಿದುಳೊಂದೇ ಅಲ್ಲದೆ ಅವನ ಹಸ್ತಪಾಟವವೂ ಬೆಳೆಯುವದು; ಮತ್ತು ಮುಂದೆ ಅವನು ಬೇಕಾದ ಆರಿಸಿಕೊಂಡ ಉದ್ಯಮಕ್ಕೆ ಉತ್ಕೃಷ್ಟ ಸಿದ್ಧತೆಯನ್ನು ಮಾಡಿಕೊಂಡಂತಾಗುವದು.

ಶಿಕ್ಷಣದ ಮೊದಲಿನ ಪದ್ಧತಿಯಲ್ಲಿ ಇಂಗ್ರೇಜಿ ಮತ್ತು ಸಂಕುಚಿತವಾದ ಕೆಲವು ವಿಷಯಗಳ ಶಾಸ್ತ್ರೀಯ ಜ್ಞಾನಕ್ಕೆ ಹೆಚ್ಚು ಮಹತ್ವ ಕೊಡಲಾಗುತ್ತಿತ್ತು. ಇದರಿಂದಾಗಿ ಅಶಿಕ್ಷಿತ ಹಾಗು ಉಚ್ಚ ಶಿಕ್ಷಣ ಪಡೆದವರ ನಡುವೆ ಒಂದು ದೊಡ್ಡ ಅಂತರವು ನಿರ್ಮಾಣವಾಗಿದೆ. ಈ ಶಿಕ್ಷಣದಿಂದ ಶಾರೀರಿಕ ಶ್ರಮವನ್ನು ಹೇಯವೆಂದು ಬಗೆಯುವ ಜನರದೊಂದು ಗುಂಪು ನಿರ್ಮಾಣವಾಯಿತು. ಮೂಲ ಶಿಕ್ಷಣದಲ್ಲಿ ಸಾಮಾಜಿಕ ನ್ಯಾಯವು ಅಂತರ್ಭೂತವಾಗಿದೆ. ಯಾವ ದುಷ್ಟ ಸಂಪ್ರದಾಯಗಳು ಸಮಾಜಕ್ಕೆ ವಿಘಾತಕವಾಗಿರುವವೋ ಅಂಥವನ್ನು ನಿವಾರಿಸಿ ವಿಜಯ ಸಂಪಾದಿಸುವದು ಶಿಕ್ಷಣದ ಧ್ಯೇಯವಾಗಿದೆ.

ಎಲ್ಲಕ್ಕೂ ಮೊದಲು ಹಳ್ಳಿಗಳಿಗಾಗಿಯೇ ಮೂಲ ಶಿಕ್ಷಣವು ಯೋಜಿಸಲ್ಪಟ್ಟಿತ್ತೆಂಬ ಮಾತು ನಿಜವದೆ; ಆದರೆ ಭಾರತ ಸರಕಾರವು ಈ ಯೋಜನೆಯನ್ನು ಮನ್ನಿಸಿ ಸ್ವೀಕರಿಸಿದನಂತರ ಅವರ ಉದ್ದೇಶವು, ಹಳ್ಳಿಗಳಲ್ಲಿಯೂ ನಗರಗಳಲ್ಲಿಯೂ ಕೂಡಿಯೇ ಯೋಜನೆಯ ಪ್ರಚಾರವಾಗಬೇಕೆಂದಿತ್ತು. ಮೂಲ ಶಿಕ್ಷಣದ ಮುಖ್ಯ ಸಿದ್ಧಾಂತಗಳನ್ನು ಶಹರದ ವಿದ್ಯಾಲಯಗಳಲ್ಲಿಯೂ ಯಾವ ಅಭ್ಯಂತರವಿಲ್ಲದೆ ಪ್ರಯೋಗದಲ್ಲಿ ತರಬಹುದು. ಕೈಗಾರಿಕೆಯ ಕಾರ್ಯಕ್ರಮವು ಅಪ್ರಧಾನವಾಗಿ ಇಡಲ್ಪಟ್ಟಿದೆ. ಇಚ್ಛೆ ಇಲ್ಲದದ್ದಿದ್ದರೂ ಮುಂದೆ ಹುಡುಗನು ಇದೇ ಉದ್ಯೋಗವನ್ನು ಮಾಡಿಯೇ ಜೀವಿಸಬೇಕೆಂಬ ನಿರ್ಬಂಧಕ್ಕೊಳಗಾಗುವನೆಂದು ಇದರ ಅರ್ಥವಲ್ಲ; ಎಂದ ಮೇಲೆ ಶಹರದ ವಿದ್ಯಾರ್ಥಿಗಳು ಈ ಶಿಕ್ಷಣದ ಲಾಭಪಡೆಯಬಾರದು ಎಂಬದಕ್ಕೆ ಯಾವ ಕಾರಣವೂ ಇಲ್ಲ.

ಮೂಲ ಶಿಕ್ಷಣವನ್ನು ಯಾವದೇ ಒಂದು ವರ್ಗದ, ಒಂದು ಜಾತಿಯ ಶಿಕ್ಷಣವೆಂದು ಯಾವ ಬಗೆಯಿಂದಲೂ ಕರೆಯಲು ಬರುವದಿಲ್ಲ. ಇದು ಭೇದಭಾವವಿಲ್ಲದೆ ರಾಷ್ಟ್ರದ ಎಲ್ಲ ಮಕ್ಕಳಿಗಾಗಿಯೂ ರಚಿಸಲ್ಪಟ್ಟಿರುವದು. ಸಮಾಜ ಸೇವೆ ಮತ್ತು ಶಾರೀರಿಕ ಪರಿಶ್ರಮ ತತ್ವಗಳನ್ನು ಮಾನ್ಯಮಾಡಿ ಕೆಲವೇ ವರ್ಗಗಳ ವಿಶೇಷ ಅಧಿಕಾರವೆಂಬದರ ಮೂಲವನ್ನೇ ಕಿತ್ತು ಬಿಡಲಾಗಿರುವದರಿಂದ ಇದಕ್ಕೆ ಲೋಕತಂತ್ರದ ಸಾಮಾಜಿಕ ಶಿಕ್ಷಣವೆಂದು ಹೆಸರಿಡಬಹುದು.

(ಮುಂದುವರೆಯುವದು)

ಮೂಲ ಶಿಕ್ಷಣದ ಅರಿವು

೩. ಪ್ರಕರಣ

ಮನಃಶಾಸ್ತ್ರದ ಹಿನ್ನೆಲೆ

ಅನುವಾದಕರು:– **ಶ್ರೀ ಶಿಂತ್ರಿ ಬಸಪ್ಪನವರು** (ಕಳೆದ ಸಂಚಿಕೆಯಿಂದ ಮುಂದುವರಿದುದು)

ದಕ್ಷಿಣ ಭಾರತದಲ್ಲಿ ಹಳ್ಳಿಯಿಂದ ಹಳ್ಳಿಗೆ ಸಂಚಾರವನ್ನು ಕೈಕೊಂಡಾಗೊಮ್ಮೆ ನನಗೆ (ಕೈಪಿಡಿಯ ಗ್ರಂಥಕಾರರಿಗೆ) ಹಳ್ಳಿಯ ಸಾಲೆಯೊಂದು ಗೋಚರವಾಯಿತು. ಅದರಲ್ಲಿ ಬೇರೆ ಬೇರೆ ವಯಸ್ಸಿನ ಸುಮಾರು ೩೦–೪೦ ಮಕ್ಕಳಿದ್ದರು. ಸಾಲೆಯಿಂದ ಬಹಳಷ್ಟು ಗದ್ದಲ ಕೇಳಬಂದುದರಿಂದ ಅದನ್ನು ಹಣಿಕಿಕ್ಕಿ ನೋಡಬೇಕೆಂಬ ಕುತೂಹಲವು ನಮ್ಮಲ್ಲುಂಟಾಯಿತು. ಅಲ್ಲಿಗೆ ಹೋಗಿ ನೋಡಲು ವರ್ಗದ ಕೋಣೆಯ ಇಕ್ಕೆಲಗಳಲ್ಲಿ ಇರ್ವರು ತರುಣರು ಕೈಯಲ್ಲಿ ಬಡಿಗೆಯನ್ನು ಹಿಡಿದುಕೊಂಡು ಚಿಟ್ಟನೆ ಚೀರುತ್ತಿದ್ದುದು ಕಂಡುಬಂದಿತು. ಏನು ನಡೆದಿದೆಯೆಂಬುದನ್ನು ತಿಳಿಯಲು ನಾವು ಉತ್ಕಂಠಿತರಾದೆವು. ಆವರೀರ್ವರು ಶಿಕ್ಷಕರೆಂದೂ ವರ್ಗದಲ್ಲಿ ಶಿಸ್ತನ್ನು ಕಾಯಲು ಅಷ್ಟೊಂದು ದೊಡ್ಡ ಧ್ವನಿಯಿಂದ ಚೀರುತ್ತಿರುವರೆಂದೂ ಗೊತ್ತಾಯಿತು. ಬಡಿಗೆಗಳ ಉಪಯೋಗವೇನೆಂದು ನಾವು ಕೇಳಿದೆವು. ಹುಡುಗರಲ್ಲಿ ಶಿಸ್ತನ್ನು ಕಾಯಲು ಅವು ಸಹಾಯಕವಾಗಿವೆಯೆಂದು ಉತ್ತರವು ಬಂದಿತು. ಶಿಸ್ತನ್ನು ಕಾಯಲು ಬಡಿಗೆಯ ಅವಶ್ಯಕತೆಯು ಇದೆಯೇನೆಂದು ಕೇಳಿದೆವು. ಆಗಾಗ ಏಟು ಕೊಡದಿದ್ದರೆ ಶಿಸ್ತನ್ನು ಕಾಯುವ ಬಗೆ ಹೇಗೆಂದು ಉತ್ತರ ಕೊಟ್ಟರು. ಹಾಯಸ್ಕೂಲ-ಕಾಲೇಜುಗಳಲ್ಲಿ ಆಡಳಿತೆಯ ಅನುಭವವುಳ್ಳವರಿಗೆ ಅಲ್ಲಿ ಎದುರಿಸಬೇಕಾದ ಶಿಸ್ತಿನ ಸಮಸ್ಯೆಗಳು ಗೊತ್ತಿವೆ. ಬೇರೆ ಬೇರೆ ಜನರು ಅವುಗಳಿಗೆ ಬೇರೆ ಬೇರೆ ಕಾರಣಗಳನ್ನು ಕೊಡುವದುಂಟು. ಸಾಲೆಯಲ್ಲಿರತಕ್ಕದಕ್ಕಿಂತ ಅತಿ ಹೆಚ್ಚು ಹುಡುಗರಿರುವರೆಂದು ಹಲವರ ಮತ. ಇದು ಕೆಲಮಟ್ಟಿಗೆ ನಿಜವಿರಬಹುದು. ಆದರೆ ಕಡಿಮೆ ಸಂಖ್ಯೆಯುಳ್ಳ ಎಷ್ಟೋ ಸಾಲೆಗಳಲ್ಲಿ ಸಹ ಈ ಸಮಸ್ಯೆಗಳಿದ್ದುದು ಕಂಡುಬರುತ್ತಿದೆ. ಕಾರ್ಯದಕ್ಷ ಶಿಕ್ಷಕರ ಅಭಾವವೆಂದು ಹಲವರು, ಕೆಟ್ಟ ಮತ್ತು ಅನನುಕೂಲವುಳ್ಳ ಇಮಾರತಿಗಳೆಂದು ಹಲವರು, ಶಿಕ್ಷಕರಲ್ಲಿರತಕ್ಕ ಒಕ್ಕಟ್ಟು-ಸಹಕಾರಗಳ ಅಭಾವವೆಂದು ಹಲವರು, ಇಲ್ಲವೆ ಶಿಕ್ಷಕ ಪಾಲಕರಲ್ಲಿರತಕ್ಕ ಪರಸ್ಪರ ಸಂಬಂಧವು ಇಲ್ಲದಿರೋಣವೆಂದು ಹಲವರು, ಅಭಿಪ್ರಾಯ ಪಡುವದುಂಟು. ನಮ್ಮ ಸಾಲೆಗಳಲ್ಲಿ ಈಗ ಕಂಡುಬರುವ ಅಸಂತುಷ್ಟತೆ ಹಾಗೂ ಶಿಸ್ತಿನ ಅಭಾವ ಇವುಗಳಿಗೆ ಮೇಲೆ ಹೇಳಿದವುಗಳು ಅಂಶತಃ ಕಾರಣಗಳಿರಬಹುದಾದರೂ ಹಲವು ದೊಡ್ಡ ಕಾರಣಗಳಿರುವವೆಂಬ ಮಾತನ್ನು ನಾವು ಗಮನಿಸುವದು ಲೇಸು. ಆ ಕಾರಣಗಳನ್ನು ಗೊತ್ತು ಹಚ್ಚಿ ಅವುಗಳ ನಿವಾರಣೋಪಾಯಗಳನ್ನು ಕೈಕೊಳ್ಳಬೇಕು.

ಇತ್ತೀಚೆಗೆ ಮೂಲ ಶಿಕ್ಷಣ ಸಾಲೆಯೊಂದನ್ನು ಸಂದರ್ಶಿಸಲಾಗಿತ್ತು. ಅದು ತನ್ನ ನಿತ್ಯದ ಕೆಲಸವನ್ನು ಸಾಗಿಸಿದ್ದಿತು. ಸಾಲೆಗಳ ಸುತ್ತು ಮುತ್ತಲು ವಾಡಿಕೆಯಾಗಿ ಕೇಳ ಬರುವ ಗದ್ದಲವೂ ಸಪ್ಪಳವೂ ಅಲ್ಲಿ ಕೇಳಬರಲಿಲ್ಲ. ಸಾಲೆಯು ನಿಜವಾಗಿ ನಡೆದಿದೆಯೋ ಇಲ್ಲವೋ, ಮಕ್ಕಳು ಹಾಜರ ಇರುವರೋ ಇಲ್ಲವೋ ಎಂಬುದರ ಬಗೆಗೆ ನಮಗೆ ಕೌತುಕವೆನಿಸಿತು. ಒಳಗೆ ಕಾಲಿಟ್ಟೊಡನೆ ಆಶ್ಚರ್ಯಕರವಾದ ನೋಟವೊಂದು ನಮ್ಮ ಕಂಣಿಗೆ ಬಿತ್ತು. ಅರವತ್ತನ್ನು ಮಿಕ್ಕಿ ಇದ್ದ ಮಕ್ಕಳು ಸೂತ್ರಯಜ್ಞದಲ್ಲಿ ತೊಡಗಿದ್ದರು. ಅಲ್ಲಿದ್ದ ಪ್ರತಿಯೊಂದು ಮಗುವೂ ಪ್ರತಿಯೊಬ್ಬ ಶಿಕ್ಷಕನೂ ತನ್ನ ತನ್ನ ಕೆಲಸದಲ್ಲಿ ಮಗ್ನನಾಗಿದ್ದನು. ಒಂದು ಕೈಯಲ್ಲಿ ಹಂಜಿಯನ್ನು ಹಿಡಿದುಕೊಂಡು ಮತ್ತೊಂದು ಕೈಯಿಂದ ತಕಲಿಯನ್ನು ತಿರುಗಿಸುತ್ತ ಎಳೆಯನ್ನು ಹೊರಡಿಸುತ್ತಿದ್ದರು. ಪ್ರತಿಯೊಬ್ಬನು ಕೆಲಸ ಮಾಡುತ್ತ ಅದರಲ್ಲಿಯೇ ತಲ್ಲೀನನಾಗಿದ್ದನು. ಶಾಂತ ವಾತಾವರಣವು ಪಸರಿಸಿತ್ತು. ಸಾದಾ ಸಾಲೆಗಿಂತ ಅದು ತೀರ ಭಿನ್ನವಾದುದು ನಮ್ಮ ನಿದರ್ಶನಕ್ಕೆ ಬಂದಿತು. ಸಾದಾ ಸಾಲೆಯಲ್ಲಿ ಶಿಕ್ಷೆ, ಭಯ ಮೊದ

ಲಾದವುಗಳ ಪ್ರಯೋಗದಿಂದ ಶಿಸ್ತನ್ನು ಮಕ್ಕಳ ಮೇಲೆ ಹೇರಲಾಗಿತ್ತು. ಮೂಲ ಶಿಕ್ಷಣ ಸಾಲೆಯಲ್ಲಿ ಶಿಸ್ತು ಏನೂ ಪರಿಶ್ರಮವಿಲ್ಲದೆ ತನ್ನಷ್ಟಕ್ಕೆ ತಾನೇ ತಲೆದೋರಿತ್ತು. ಹೀಗಾಗಲು ಕಾರಣವೇನು?

ಮಕ್ಕಳಿಗೂ ತರುಣ-ತರುಣಿಯರಿಗೂ ನಿಸರ್ಗವು ಅಪಾರವಾದ ಅಂತಃಶಕ್ತಿಯನ್ನು ದಯಪಾಲಿಸಿದೆ. ಅವರಲ್ಲಿ ಹುದುಗಿದ್ದ ಆನಂದ–ಸ್ಫೂರ್ತಿಗಳ ಸೆಲೆಗಳು ಹೊರ ಚಿಮ್ಮುತ್ತಿರುತ್ತವೆ. ವಸ್ತುಗಳ ಪರಿಚಯವನ್ನು ತಮ್ಮಷ್ಟಕ್ಕೆ ತಾವೇ ಮಾಡಿಕೊಳ್ಳಬೇಕೆಂಬ ಕುತೂಹಲವು ಅವರಲ್ಲಿ ದೇವದತ್ತವಾಗಿದೆ. ಇವುಗಳ ಸದುಪಯೋಗವನ್ನು ಮಾಡಿಕೊಳ್ಳದೆ, ಶಿಸ್ತಿನ ಹೆಸರಿನಿಂದ ನಾವು ಇವುಗಳನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದ್ದೇವೆ. ಜೀವನದ ಪ್ರವಾಹವು ಗಂಗಾ ನದಿಯಂತೆ ಮುಂದಕ್ಕೆ ಗಾಂಭೀರ್ಯವಾಗಿ ಹರಿಯುತ್ತಿದೆ. ಆ ಪ್ರವಾಹಕ್ಕೆ ಮುಂದಕ್ಕೆ ಸಾಗಲು ಅನುಕೂಲತೆಯನ್ನು ಮಾಡಿ ಕೊಡದೆ ಅದನ್ನು ಪ್ರತಿಬಂಧಿಸಲು ಅಣೆಕಟ್ಟನ್ನು ಕಟ್ಟಿದರೆ ಅದು ಅಣೆಕಟ್ಟನ್ನು ಒಡೆದು ಪಾರಾಗುತ್ತಿದೆ. ಪ್ರವಾಹದ ದಿಶೆಯನ್ನು ಬದಲಿಸಬಹುದು, ಆದರೆ ಅದನ್ನು ನಿರಂತರವಾಗಿ ಪ್ರತಿಬಂಧಿಸಿ ಅಂಕಿತದಲ್ಲಿಟ್ಟುಕೊಳ್ಳುವದು ಶಕ್ಯವಿಲ್ಲ. ಅಶಕ್ಯವಾದುದನ್ನು ಶಕ್ಯ ಮಾಡಲೆಳಸಿದರೆ, ಅದು ಒಮ್ಮಿಲ್ಲೊಮ್ಮೆ ಒಡ್ಡನ್ನೇ ಒಡೆಯುತ್ತಿದೆ. ಈ ಮಾತು ನಮ್ಮ ಮಕ್ಕಳಿಗೂ ಅನ್ವಯಿಸುತ್ತಿದೆ. ಮಕ್ಕಳಲ್ಲಿಯ ಸ್ಫೂರ್ತಿಗೆ ನಿರ್ದಿಷ್ಟ ಚಾಲನೆಯನ್ನು ಕೊಡದೆ ಅದನ್ನು ಕೊನೆಯವರೆಗೆ ತಡೆ ಹಿಡಿಯಲು ಶಕ್ಯವಿಲ್ಲ. ಆ ಸ್ಫೂರ್ತಿಯನ್ನು ದಯಪಾಲಿಸಿದ್ದಕ್ಕಾಗಿ ದೇವರು ನಿಜವಾಗಿ ಸ್ತುತ್ಯನು. ಯಾಕೆಂದರೆ, ಆ ಸ್ಫೂರ್ತಿಯಲ್ಲಿಯೇ ಮಾನವನ ಅಮಿತ ಶಕ್ತಿಯಡಗಿದೆ. ಸಾದಾ ಸಾಲೆಗಳಲ್ಲಿ ಶಿಕ್ಷಕನು ವರ್ಗದ ಕೋಣೆಯಲ್ಲಿ ಕುಳಿತು ಪುಸ್ತಕೀಯ ಮಾಹಿತಿಯನ್ನು ಕಲಿಸುತ್ತಾನೆ, ಮಕ್ಕಳು ಕುಳಿತಲ್ಲಿಯೇ ಕುಳಿತು ಸುಮ್ಮನೆ ಕೇಳುತ್ತಿರುತ್ತಾರೆ. ಅವರಲ್ಲಿಯ ಅಂತಃಶಕ್ತಿಯು ಶಿಕ್ಷೆಯಿಂದಲೋ ಅಂಜಿಕೆಯಿಂದಲೋ ಬೇರಾವ ಸಾಧನದಿಂದಲೋ ನಿರೋಧಿಸಲ್ಪಡುತ್ತಿದೆ. ಇದು ಅಸ್ವಾಭಾವಿಕವಾದುದರಿಂದ ಶಿಸ್ತಿನ ವಿರುದ್ಧ ದಂಗೆಗಳಾಗುವದನ್ನು ನಾವು ಕಾಣುತ್ತೇವೆ. ಮಕ್ಕಳು ತಮ್ಮಷ್ಟಕ್ಕೆ ತಾವೇ ಮಾಡುವಂತಹ ಚಟುವಟಿಕೆಗಳನ್ನು ಪೂರೈಸಿದರೆ ಶಿಸ್ತು ಸ್ವಾಭಾವಿಕವಾಗಿಯೇ ನೆಲೆಸುತ್ತದೆ. ಮಕ್ಕಳ ಮನವನ್ನು ಸೆಳೆಯುವಂತಹ ನಾನಾ ತರಹದ ಚಟುವಟಿಕೆಗಳನ್ನು ಮಾಡಲು ಅವರಿಗೆ ಪೂರೈಸಿದರೆ, ತಮ್ಮ ಕೈಗಳಿಂದಲೇ ಕೆಲಸ ಮಾಡಿ ನಿರೀಕ್ಷಣೆಯನ್ನು ಹೊಂದುವ ಪ್ರಸಂಗಗಳನ್ನು ಒದಗಿಸಿ ಕೊಟ್ಟಂತಾಗಿ ಅವರು ಸಮಾಧಾನವನ್ನು ಪಡೆಯುವರು. ಆ ಸಮಾಧಾನವು ಬೇರೆ ಯಾತರಿಂದಲೂ ಉಂಟಾಗಲಾರದು. ಈ ತತ್ತ್ವವು ಪ್ರಗತಿಪರ ರಾಷ್ಟ್ರಗಳಲ್ಲೆಲ್ಲ ಅಂಗೀಕರಿಸಲ್ಪಟ್ಟಿದೆ. ವಿಶೇಷ ಖರ್ಚಿನ ಸಾಧನಗಳುಳ್ಳ ಇಂತಹ ಚಟುವಟಿಕೆಗಳನ್ನು ತಮ್ಮ ಸಾಲೆಗಳಲ್ಲಿ ತರಲು ಹೆಣಗಾಡುತ್ತಿದ್ದಾರೆ. ಯೋಜನಾ ಪದ್ಧತಿಯು ಈ ತಳಹದಿಯಿಂದಲೇ ಸಾಗುತ್ತಿದೆ ಮೊಂಟೆಸೋರಿ ಪದ್ಧತಿಯು ಈ ತತ್ತ್ವಗಳನ್ನೇ ಅನುಕರಿಸುತ್ತಿದೆ. ಚಿಕ್ಕ ಮಕ್ಕಳ ಕೈಬೆರಗಳುಗಳಿಗೆ ತರಬೇತಿಯನ್ನು ಕೊಡಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಮಕ್ಕಳು ಮುಟ್ಟಿ ನೋಡಲು, ಕೈಯಲ್ಲಿ ಹಿಡಿದು ನೋಡಲು, ಉಪಯೋಗಿಸಿ ನೋಡಲು, ಆ ಪದ್ಧತಿಯು ಅವರಿಗೆ ಆಟದ ಸಾಮಾನುಗಳನ್ನೆಲ್ಲ ಒದಗಿಸಿ ಕೊಡುತ್ತದೆ. ಮಗುವು ತನ್ನ ಇಂದ್ರಿಯಗಳ ಉಪಯೋಗದಿಂದ ಹೊಂದುವ ಪ್ರಗತಿಯು ಅದರ ಮನದಲ್ಲಿ ಆನಂದವನ್ನೂ ಸಮಾಧಾನವನ್ನೂ ಉಂಟು ಮಾಡುತ್ತಿದೆ. ಮಗುವಿನ ಬೆಳವಣಿಗೆಗೆ ಈ ಭಾವನೆಯು ಅವಶ್ಯವಾಗಿ ಬೇಕು. ಆದರೆ, ಇಂತಹ ಪ್ರಸಂಗಗಳನ್ನು ಮಗುವಿಗೆ ಒದಗಿಸಿ ಕೊಡದೆ, ಕುಳಿತಲ್ಲಿಯೇ ಕುಳಿತು ಸುಮ್ಮನೆ ಕೇಳುವ ಒತ್ತಾಯವನ್ನು ಹೇರಿದರೆ ಶಿಸ್ತಿನ ವಿರುದ್ಧ ದಂಗೆಯೇಳುವದು ನಿಶ್ಚಿತ. ತನಗೆ ಅನಿಸಿದ್ದನ್ನು ಆಡಿ ತೋರಿಸುವ ಸ್ವಾತಂತ್ರ್ಯವು ಇಲ್ಲದೆ ಹೋದಲ್ಲಿ ಮಗುವು ತನ್ನ ಆತ್ಮಪ್ರೌಢಿಮೆಯನ್ನು ತೋರಿಸುವ ಕ್ರಮವು ಇದಾಗಿದೆ.

ಚಟುವಟಿಕೆಯು ಶಿಕ್ಷಣದ ಮಹತ್ವವಾದ ಹಾಗೂ ಅವಶ್ಯವಾದ ಸಾಧನವೆಂಬುದನ್ನು ನಾಮಾಂಕಿತ ಶಿಕ್ಷಣ ತಜ್ಞರೆಲ್ಲರು ಕಂಡು ಹಿಡಿದಿದ್ದಾರೆ. ರೂಸೋನ ಅಭಿಪ್ರಾಯವು ಇಂತಿದೆ:– "ಚಿಕ್ಕ ಮಕ್ಕಳು ಮೊದಲು ಚಂಚಲ ಸ್ವಭಾವದವರಾಗಿ ಆ ಮೇಲೆ ಕುತೂಹಲವುಳ್ಳವರಾಗಿರುತ್ತಾರೆ. ಮಗುವಿಗೆ ಓದಲಿಕ್ಕೆ ಹಚ್ಚದೆ ಅದನ್ನು ಕೆಲಸದ ಮನೆಯಲ್ಲಿ ಕೆಲಸ ಮಾಡುವದರಲ್ಲಿ ತೊಡಗಿಸುತ್ತೇನೆ. ಅಲ್ಲಿ ಅದರ ಮನಸಿನ ವಿಕಾಸಕ್ಕೋಸ್ಕರ ಅದರ

ಕೈಗಳು ದುಡಿಯುತ್ತಿವೆ. ತನ್ನ ಶಕ್ತಿಯಿದ್ದಷ್ಟು ಅದು ಪ್ರಗತಿಯನ್ನು ಹೊಂದುತ್ತಿದೆ. ತನ್ನ ಶರೀರ-ಮನಸುಗಳಿಗೆ ಒಗ್ಗುವಷ್ಟನ್ನೇ ಅದು ಗ್ರಹಿಸುತ್ತಿದೆ. ತಾನು ಅರಗಿಸಿಕೊಳ್ಳುವಷ್ಟನ್ನೇ ಗ್ರಹಿಸುತ್ತ ಗ್ರಹಿಸುತ್ತ ಅದು ತನ್ನ ಸ್ಮರಣಶಕ್ತಿಯನ್ನು ಬಲಪಡಿಸಿಕೊಳ್ಳುತ್ತಿದೆ. ಅರಗಿಸಿಕೊಳ್ಳದ ಜ್ಞಾನದಿಂದ ಅದಕ್ಕೆ ಆವ ಬಗೆಯ ಉಪಯೋಗವಾಗುವದಿಲ್ಲವಲ್ಲದೆ ಹೊಸ ಜ್ಞಾನದ ಗ್ರಹಣವು ಸಹ ಎಂದೂ ಸರಿಯಾಗಿ ಆಗಲಾರದೆಂಬ ಭಯವಿದೆ. "ರೂಸೋನೊಬ್ಬನದೇ ಮತವು ಹೀಗಿದೆಯೆಂದಲ್ಲ. ಪೆಸ್ಟಾಲಝಿ-ಫ್ರೋಬೆಲ್ಲರವರ ಕಾಲದಿಂದ ಈಗಿನ ಕಾಲದ ಜಾನ್‌ಡ್ಯೂಯಿಯ ವರೆಗಿನ ಶಿಕ್ಷಣ ತಜ್ಞರೆಲ್ಲರು 'ಮಗುವಿಗೆ ಒಗ್ಗುವ ರಚನಾತ್ಮಕ ಚಟುವಟಿಕೆಗಳಿಂದಲೇ ಶಿಕ್ಷಣ'ವೆಂಬ ತತ್ತ್ವವನ್ನು ಎತ್ತಿ ಹಿಡಿದಿದ್ದಾರೆ. ಶಿಕ್ಷಣದ ಬಗೆಗಿನ ಈ ಹೊಸ ವಿಚಾರಗಳು ನಮ್ಮ ಮಕ್ಕಳಿಗೆ ಹೊಸದೊಂದು ಆಶಾದಾಯಕವಾದ ಸಂದೇಶವನ್ನು ಬೀರಿವೆ. ಇವು ಶಿಕ್ಷಣಕ್ಕೆ ಮನೋವಿಜ್ಞಾನದ ತರ್ಕಬದ್ಧವಾದ ಹಾಗೂ ಯೋಗ್ಯ-ಹಿನ್ನೆಲೆಯನ್ನು ಪೂರೈಸುವವಲ್ಲದೆ ಇಲ್ಲಿಯ ವರೆಗೆ ಶಿಕ್ಷಣ ಕೊಡಲು ಸಾಧ್ಯವಿಲ್ಲೆಂದೂ ಸಮಾಜಕ್ಕೆ ನಿರುಪಯುಕ್ತವೆಂದೂ ಗಣಿಸಲ್ಪಟ್ಟ ಕುರುಡ, ಕಿವುಡ, ಮೂಕ ಮೊದಲಾದ ನಿರ್ಗತಿಕರಾದ ಅಂಗಹೀನರಲ್ಲಿ ಸಹ ಆಶಾಂಕುರವನ್ನು ಹುಟ್ಟಿಸಿವೆ. ಅವರಿಗೆ ತಕ್ಕಂತೆ ಚಟುವಟಿಕೆಗಳನ್ನೂ ತರಬೇತಿಯನ್ನೂ ಕೊಟ್ಟರೆ, ಅವರನ್ನೂ ಸಹ ಜ್ಞಾನಿಗಳನ್ನಾಗಿಯೂ ಸಮಾಜಕ್ಕೆ ಉಪಯೋಗವಾಗುವ ಸುಖಪುರುಷರನ್ನಾಗಿಯೂ ಮಾರ್ಪಡಿಸಲು ಶಕ್ಯವಿದೆಯೆಂಬ ತತ್ತ್ವವು ಈಗ ಹೆಚ್ಚು ಹೆಚ್ಚು ಮನ್ನಿಸಲ್ಪಡುತ್ತಲಿದೆ.

(ಮುಂದುವರಿಯುವದು)

ಮೂಲ ಶಿಕ್ಷಣ—ಪ್ರಶ್ನೋತ್ತರಗಳು

(ಕಳೆದ ಸಂಚಿಕೆಯಿಂದ ಮುಂದೆ ಸಾಗಿದ್ದು)

ಅನುವಾದಕರು: **ಶ್ರೀ ತಟ್ಟಿ ಶಾಮರಾಯರು**

ಪ್ರಶ್ನೆ ೪. ಕೈಗಾರಿಕೆಗೆ ಸಮನ್ವಯವಾಗುವ ರೂಪದಲ್ಲಿ ಇತಿಹಾಸ, ವಿಜ್ಞಾನ, ಗಣಿತ ಇತ್ಯಾದಿ ವಿಷಯಗಳು ಹೇಗೆ ಕಲಿಸಲ್ಪಡುವವು ?

ಉತ್ತರ:– ಪರಸ್ಪರ ಸಂಬಂಧವನ್ನು ಸ್ಥಾಪಿಸುವ ಸಿದ್ಧಾಂತಕ್ಕೆ ವ್ಯಾವಹಾರಿಕ ರೂಪವನ್ನು ಕೊಟ್ಟ ಹೊರತು ಮೂಲ ಶಿಕ್ಷಣವು ಸಫಲವಾಗುವದಿಲ್ಲ. ಶಿಲ್ಪ ಇಲ್ಲವೆ ಕೈಗಾರಿಕೆಯಲ್ಲಿ ಪ್ರಾಕೃತಿಕ ಹಾಗು ಸಾಮಾಜಿಕ ಪರಿಸ್ಥಿತಿಗಳ ಸಹಜವಾದ ಸಮ್ಮಿಶ್ರಣವಾಗಬಲ್ಲದು. ಮನುಷ್ಯನು ಕೈಗಾರಿಕೆಯಿಂದಲೇ ಪ್ರಕೃತಿಯ ಕಚ್ಚಾ ಸಾಮಗ್ರಿಯಿಂದ ಸಮಾಜಕ್ಕಾಗಿ ಉಪಯುಕ್ತ ವಸ್ತುಗಳನ್ನು ತಯಾರಿಸುತ್ತಾನೆ. ಮನುಷ್ಯನು ಪ್ರಕೃತಿಯನ್ನು ಗೆಲ್ಲುವ ಸಂತತ ಪ್ರಯತ್ನದಲ್ಲಿ ಸಂಪಾದಿಸಿದ ಜ್ಞಾನದ ಶಾಖೆಗಳೇ ಬೇರೆ ಬೇರೆ ವಿಷಯಗಳ ಹೆಸರಿನಿಂದ ಕರೆಯಲ್ಪಡುತ್ತವೆ. ಆದ್ದರಿಂದ ಕತಾಯಿಯ ಮುಖಾಂತರ ಇತಿಹಾಸ ಭೂಗೋಲಗಳ ಜೋಡಣೆಯು ಮೊದಮೊದಲಿಗೆ ಅಸ್ವಾಭಾವಿಕವೆಂದು ತೋರಿದರೂ ನಿಜವಾಗಿ ಸಹಜವಾದದ್ದೇ. ಹತ್ತಿಯು ಎಲ್ಲಿ ಬೆಳೆಯುತ್ತದೆ, ಹತ್ತಿಯ ಜಾತಿಗಳೆಷ್ಟಿವೆ, ಮನುಷ್ಯನ ವೇಷಭೂಷಣದ ಉನ್ನತಿಯು ಯಾವ ರೀತಿ ಆಯಿತು, ಈ ವೇಷಭೂಷಣದ ಮೇಲೆ ಐತಿಹಾಸಿಕ ಹಾಗು ರಾಜಕೀಯ ಬದಲಾವಣೆಗಳ ಪ್ರಭಾವವು ಹೇಗೆ ಉಂಟಾಯಿತು ಇತ್ಯಾದಿ ಸಂಗತಿಗಳ ಸಂಬಂಧವನ್ನು ಕತಾಯಿಯೊಡನೆ ಸ್ಥಾಪಿಸಿದರೆ ಪಠ್ಯಪುಸ್ತಕಗಳ ಶುಷ್ಕ ಜ್ಞಾನದಿಂದ ಸಾಧಿಸದ ಜ್ಞಾನದ ಸಾಕ್ಷಾತ್ ಸಂಬಂಧವು ಬಾಲಕರಿಗೆ ಆಗುವದು. ಮಕ್ಕಳು ತಮ್ಮ ಹತ್ತರ ಇದ್ದ ಹಂಜಿಗಳನ್ನು ಎಣಿಸಲಿಕ್ಕೆ ಕಲಿತಾಗ, ತಾವು ನೂತ ನೂಲಿನ ಅಳತೆಯನ್ನು ಮಾಡಲು ಕಲಿತಾಗ ಮತ್ತು ನಿನ್ನೆ ತಯಾರಿಸಿದ ವಸ್ತುವಿಗೆ ಇಂದು ತಯಾರಿಸಿದ ವಸ್ತುವನ್ನು ಸರಿಹೆಚ್ಚಿ ನೋಡಿದಾಗ ಅವರು ಅಂಕಗಣಿತದ ಮೂಲ ತತ್ವಗಳನ್ನು, ತಂತಿಯಲ್ಲಿ ಪೋಣಿಸಿದ ಬಣ್ಣದ ಗುಂಡುಗಳನ್ನು ಎಣಿಸಿ ಕಲಿತುಕೊಳ್ಳುವದಕ್ಕಿಂತ ಹೆಚ್ಚು ಉತ್ತಮ ರೀತಿಯಿಂದ ಕಲಿತುಕೊಳ್ಳುವರು. ಕೆಲವು ಜಾಣತನದ ಕಸಬುಗಳು ಇತರ ವಿದ್ಯಾ

ಲಯಗಳಿಗಿಂತ ಮೂಲ ಶಿಕ್ಷಣ ಶಾಲೆಗಳಿಗೆ ಹೆಚ್ಚು ಉಪಯುಕ್ತವಿರುವವು; ಆದ್ದರಿಂದ ಅಂಥ ಕಸಬುಗಳ ಶೈಕ್ಷಣಿಕ ಮೂಲ್ಯಗಳನ್ನು ಲಕ್ಷದಲ್ಲಿಟ್ಟು ಶಿಕ್ಷಣದ ಮಾಧ್ಯಮವೆಂದು ಅವುಗಳನ್ನು ಆರಿಸಿಕೊಳ್ಳಲಾಗುವದು.

ಯಾವದೇ ಕೈಗಾರಿಕೆಯಲ್ಲಿ ಮಾತೃಭಾಷೆಯ ಶಿಕ್ಷಣದ ಸಂಬಂಧವನ್ನು ಸಹಜವಾಗಿ ಕೂಡಿಸಲಿಕ್ಕೆ ಬರುವದು. ಯಾವದೇ ಭಾಷೆಯನ್ನು ಕಲಿಯಬೇಕಾದರೂ ವಿದ್ಯಾರ್ಥಿಯು ಮೊದಲು ವಸ್ತುಗಳನ್ನೂ ಕ್ರಿಯೆಗಳನ್ನೂ ಹೇಳುವ ಶಬ್ದಗಳಿಂದ ಆರಂಭಿಸುವನು. ಕೈಗಾರಿಕೆಯಲ್ಲಾದರೂ ಶಬ್ದ ಭಾಂಡಾರವೆಲ್ಲ ವಸ್ತುಗಳಿಗೆ ಕ್ರಿಯೆಗಳಿಗೆ ಸಂಬದ್ಧವಾಗಿದೆ ತಮ್ಮ ಕೆಲಸಗಳಲ್ಲಿ ಉಪಯೋಗಿಸುತ್ತಿರುವಂತಹ ಅಥವಾ ಕೆಲಸ ಮಾಡುತ್ತಿರುವಂತಹ ವಸ್ತು ಕ್ರಿಯಾತ್ಮಕ ಶಬ್ದಗಳ ಸ್ವರೂಪವೂ ಉಚ್ಚಾರಣೆಯೂ ಮಕ್ಕಳಿಗೆ ಹೆಚ್ಚು ಮಹತ್ವದ್ದಾಗಿದೆ.

ಪರಸ್ಪರ ಸಂಬಂಧದ ತತ್ವದಿಂದ ನಮಗೆ ನಮ್ಮ ಸುತ್ತಲಿನ ಸನ್ನಿವೇಶದ ಜ್ಞಾನವು ಸಹಜವಾದ ರೀತಿಯಲ್ಲಿ ಆಗುವದು. ವ್ಯಾವಹಾರಿಕ ಜ್ಞಾನದೊಡನೆ ಶಿಕ್ಷಣ ಕ್ರಮದ ಸಂಬಂಧ ನೆಲೆಗೊಳ್ಳುವದರಿಂದ ಕಲಿಯುವ ಉತ್ಸಾಹ ಹಾಗು ಆಕರ್ಷಕತೆಯ ದೆಶೆಯಲ್ಲಿ ಪ್ರಗತಿಯಾಗುವದು. ಇಂತಹ ಶಿಕ್ಷಣವು ಮಕ್ಕಳಿಗೆ ವಿಶೇಷ ಮಹತ್ವವುಳ್ಳದ್ದಾಗಿದೆ.

ಈ ಸಂಬಂಧದಲ್ಲಿ ಇನ್ನೊಂದು ಮಾತನ್ನು ನೆನಪಿಡಬೇಕು—ಅದಾವದೆಂದರೆ ಮೂಲ ಶಿಕ್ಷಣದಲ್ಲಿ ಕೈಗಾರಿಕೆ ಜೊತೆಯಲ್ಲಿಯೇ ಇನ್ನೆರಡು—ಪ್ರಾಕೃತಿಕ ಸಾಮಾಜಿಕ ಪರಿಸ್ಥಿತಿಗಳೆಂಬ--ಧಾರೆಗಳಿವೆ; ಇವುಗಳ ಸಹಾಯದಿಂದ ಸಮನ್ವಯ ಸಿದ್ಧಾಂತವನ್ನು ಕಾರ್ಯಗತ ಮಾಡಬಹುದು. ಮೂಲಶಿಕ್ಷಣ ಶಾಲೆಯ ಶಿಕ್ಷಕನು ತನ್ನ ವಿದ್ಯಾರ್ಥಿಗಳಲ್ಲಿ ಮಳೆ, ಗುಡುಗು, ಮಿಂಚು, ಸಿಡಿಲು ಹಾಗು ಗ್ರಹನಕ್ಷತ್ರಗಳ ಬರಹೋಗುಗಳ ವಿಷಯದಲ್ಲಿ ಸರಳವಾಗಿ ಒಂದು ಜಿಜ್ಞಾಸೆಯನ್ನೂ ನಿರೀಕ್ಷಣ ಶಕ್ತಿಯನ್ನೂ ಬೆಳಿಸಬಲ್ಲನು. ಇವುಗಳಿಗೆ ಸಂಬಂಧಿಸಿ ಖಗೋಲ ಹಾಗು ವಿಜ್ಞಾನದ ಶಿಕ್ಷಣವು ಸುಲಭವಾಗಿ ಆಗುವದು. ಸ್ಥಳೀಯ ಇತಿಹಾಸದ ಜ್ಞಾನಕ್ಕಾಗಿ, ಮಕ್ಕಳು ಪ್ರತಿದಿನವೂ ನೋಡುತ್ತಿರುವ ಪ್ರಾಚೀನ ಅವಶೇಷಗಳನ್ನು ಗುಡಿಗೋಪುರಗಳನ್ನು ಮಾಧ್ಯಮವಾಗಿ ಇಟ್ಟುಕೊಂಡು ಆ ಜ್ಞಾನವನ್ನು ಮಾಡಿಸಬಹುದು.

ಬಾಲಕರ ಸಾಮಾಜಿಕ ಸನ್ನಿವೇಶದಲ್ಲಿ ಅನೇಕ ಉತ್ಸವಗಳು, ಹಬ್ಬ ಹುಣ್ಣಿವೆಗಳು, ಸಂಪ್ರದಾಯಗಳು ಬರುತ್ತವೆ ಈ ಸಾಮಾಜಿಕ ಅನುಭವಗಳ ಮುಖಾಂತರ ಶಿಕ್ಷಣಕೊಡುವದೊಂದು ಮೂಲ ಶಿಕ್ಷಣ ಶಾಲೆಗಳ ವೈಶಿಷ್ಟ್ಯವಾಗಿದೆ. ಸಾಮಾಜಿಕ ಸನ್ನಿವೇಶದೊಡನೆ ಸಂಬಂಧವನ್ನು ಜೋಡಿಸಿದಾಗ ವಿಷಯಗಳ ಕ್ಷೇತ್ರವು ಅಗಣಿತವಾಗಿ ಬೆಳೆಯಬಹುದೆಂಬ ಮಾತು ಜಾಣನಾದ ಶಿಕ್ಷಕನಿಗೆ ಥಟ್ಟನೆ ಹೊಳೆಯದಿರದು.

ಕಾವ್ಯ ಹಾಗು ಸೌಂದರ್ಯ ಶಾಸ್ತ್ರಗಳ ವಿಷಯದಲ್ಲಿ ಹೇಳಬೇಕೆಂದರೆ ಕೈಗಾರಿಕೆಯ ಮುಖಾಂತರ ಈ ಅನುಭವವೂ ಬಂದೇ ಬರುವದೆಂದು ಹೇಳದಿದ್ದರೂ ಮೇಲೆ ಉಲ್ಲೇಖಿಸಿದ ಎರಡೂ ಧಾರೆಗಳ ಕೂಡ ಸಂಬಂಧವನ್ನು ಸ್ಥಾಪಿಸಿ ಒಂದಿಷ್ಟು ಕಲ್ಪನಾಶಕ್ತಿಯ ನೆರವು ಪಡೆದರೆ ಸೌಂದರ್ಯ-ಸಾಮರಸ್ಯಗಳ ಬಗೆಗೆ ಅಭಿರುಚಿಯನ್ನು ಹುಟ್ಟಿಸಬಹುದು. ಮೂಲ ಶಿಕ್ಷಣದಲ್ಲಿ ಸಾಹಿತ್ಯದ ಶಿಕ್ಷಣದ ಯೋಜನೆಯೂ ಇದೆ.

ಹೀಗೆ ಈ ಪದ್ಧತಿಯಲ್ಲಿ ಸಮನ್ವಿತ ಕಾರ್ಯಗಳ ಸಮ್ಮಿಶ್ರಣವಿದ್ದರೂ ಯೋಗ್ಯ ಪ್ರಸಂಗಗಳಲ್ಲಿ, ಅಗತ್ಯವಿದ್ದಾಗ ಇತರ ಪದ್ಧತಿಗಳನ್ನು ಅದು ಉಪಯೋಗ ಮಾಡಿಕೊಳ್ಳದೆ ಇರದು ಎಂಬ ಮಾತನ್ನು ಮರೆಯಬಾರದು.

ಪ್ರಶ್ನ ೫. ಮೂಲ ಶಿಕ್ಷಣದ ಆದರ್ಶವು ಬಾಲಕನ ವ್ಯಕ್ತಿತ್ವದ ಸರ್ವಾಂಗಪೂರ್ಣ ವಿಕಾಸವೆಂದು ಒಪ್ಪಿಕೊಳ್ಳಬಹುದು; ಆದರೆ ಈ ಆದರ್ಶದ ಅನುಷ್ಠಾನಕ್ಕೆ ಬಾಲಕನ ಉನ್ನತಿ, ಅವನ ವಿಶೇಷ ಯೋಗ್ಯತೆ, ಇವುಗಳ ಆವಿಷ್ಕಾರಕ್ಕೆ ಅವನ ಅಗತ್ಯಗಳ ಪೂರ್ತಿಗೆ ಶಿಕ್ಷಕನ ಬಳಿ ಯಾವ ಸಾಧನಗಳು ಇರುವವು?

ಉತ್ತರ— ಬಾಲಕನ ಕಣ್ಣು ಕೈಗಳು ಸೂಕ್ಷ್ಮವಾದ ತರಬೇತಿಯನ್ನು ಪಡೆಯುತ್ತ ಹೋದಂತೆ ಅವನ ಏಕಾಗ್ರತೆಯೂ ನೂತನ ನಿರ್ಮಾಣ ಮಾಡಬಲ್ಲ ಸೃಜನಾತ್ಮಕ ಶಕ್ತಿಯೂ ಪ್ರತ್ಯಕ್ಷ ಹಾಗು ಪರೋಕ್ಷ ವಿಷಯಗಳಲ್ಲಿ ಹೆಚ್ಚಾಗುತ್ತ ಹೋಗುವವು; ಅದರಂತೆ ಅವನ ನಿರ್ಣಾಯಕ ಶಕ್ತಿಯೂ ಬಲಿಯುವದು.

ಬಾಲಕನ ಸರ್ವಾಂಗಪೂರ್ಣ ವಿಕಾಸವು ಧ್ಯೇಯವಾಗಿರುವ ಯಾವ ಪದ್ಧತಿಯ ಪ್ರಯೋಗದಲ್ಲಿಯೂ ಮಕ್ಕಳು ಅದನ್ನು ಸಾಧ್ಯವಿದ್ದಷ್ಟು ಅಳವಡಿಸಿ

ಕೊಳ್ಳುವ ಫಲದಿಂದ ಅವರಿಗೆ ಎಷ್ಟರಮಟ್ಟಿಗೆ ಅದರ ಪ್ರಯೋಜನವಾಯಿತು ಎಂಬುದನ್ನು ನಿರ್ಣಯಿಸುವದು ಕಠಿಣವೇ. ಈಗ ರೂಢಿಯಲ್ಲಿದ್ದ ಪರೀಕ್ಷಾ ಪದ್ಧತಿಯೂ ಅದರ ಮೂಲ್ಯಾಂಕನದಲ್ಲಿ ಸಹಾಯಕವಾಗಲಾರದು.

ಮೂಲ ಶಿಕ್ಷಣ ಸಾಲೆಯ ಅನೇಕ ಕಾರ್ಯಗಳ ಮುಖಾಂತರ ಬುದ್ಧಿವಂತನಾದ ಶಿಕ್ಷಕನಿಗೆ ತನ್ನ ವಿದ್ಯಾರ್ಥಿಗಳ ಮೂಲ್ಯ ಮಾಪನಕ್ಕಾಗಿ ಅನೇಕ ಸಂದರ್ಭಗಳು ದೊರೆಯುವವು. ಮಕ್ಕಳಲ್ಲಿ ಸಹಕಾರದ ಅಭ್ಯಾಸವು ಬೆಳೆಯಲಿ ಮತ್ತು ಅವರಿಗೆ ಮುಂದಾಳುಗಳಾಗುವ ಪ್ರಾರಂಭದ ಶಿಕ್ಷಣವು ದೊರೆಯಲಿ ಎಂಬ ಆಸೆಯೇ ಶಿಕ್ಷಕನು ಕಾರ್ಯಕ್ರಮಗಳನ್ನು ಯೋಜಿಸುವದರಲ್ಲಿಯೂ ಅವುಗಳ ಅನುಷ್ಠಾನದಲ್ಲಿಯೂ ಭಾಗವಹಿಸುವ ಕಾರಣವಾಗಿದೆ. ಈ ಶಿಕ್ಷಣ ಪದ್ಧತಿಯಿಂದ ಬಾಲಕರ ಬಗೆಗೆ ಅವರು ಪ್ರತಿಯೊಂದು ಜೀವನ ಕ್ಷೇತ್ರದಲ್ಲಿ ತಮ್ಮ ಸ್ವಂತ ಕಾಲಮೇಲೆ ನಿಲ್ಲಲು ಸಮರ್ಥರಾಗಬೇಕೆಂದೂ, ಸ್ವಚ್ಛ ಸ್ವಸ್ಥ ಸಾಂಸ್ಕೃತಿಕ ಜೀವನವನ್ನು ಕಳೆಯಬೇಕೆಂದೂ ಬಾಳುವೆಯ ನೈತಿಕ ಹಾಗು ಸಾಮಾಜಿಕ ಸಮಸ್ಯೆಗಳನ್ನು ತಿಳಿದುಕೊಳ್ಳಲು ಸಮರ್ಥರಾಗಬೇಕೆಂದೂ ಆಶಿಸಲಾಗುತ್ತಿದೆ.

ಆದ್ದರಿಂದ ಪುಸ್ತಕೀ ಸಾಹಿತ್ಯದ ಶಿಕ್ಷಣ ಪದ್ಧತಿಯಲ್ಲಿರುವದಕ್ಕಿಂತ, ಮಕ್ಕಳ ವ್ಯಕ್ತಿತ್ವವಿಕಾಸದ ಮೂಲ್ಯಮಾಪನಕ್ಕಾಗಿ ಹೆಚ್ಚು ಆಳವಾಗಿ ನಿರೀಕ್ಷಿಸಬೇಕಾಗುವದು. ಹೆಚ್ಚು ಕಲ್ಪಕತೆಗೆ ಶರಣು ಹೋಗಿ ಕೆಲಸಮಾಡಿಸಿಕೊಳ್ಳಬೇಕಾಗುವದು. ಬಾಲಕರ ಉನ್ನತಿಯ ಮೂಲ್ಯಾಂಕನದಲ್ಲಿ ಶಿಕ್ಷಕನು ಕೆಳಗಿನ ಸಂಗತಿಗಳತ್ತ ಗಮನವೀಯಬೇಕು. ವೈಯಕ್ತಿಕ ರಿಕಾರ್ಡುಗಳು, ನೋಟಬುಕ್ಕುಗಳು, ತಾನೇ ಕಾರ್ಯಕ್ರಮವನ್ನು ಯೋಜಿಸಿ ಅದನ್ನು ಕಾರ್ಯಗತಮಾಡುವ ಶಕ್ತಿ, ಬೌದ್ಧಿಕ ವಿಕಾಸ, ಉಡುಗೆತೊಡಿಗೆ, ರೂಢಿಗಳು, ಕಲಾ-ನೈಪುಣ್ಯ ಮತ್ತು ಸಾಮಾಜಿಕ ಸನ್ನಿವೇಶದೊಡನೆ ಹೊಂದಿಕೆ ಇವಲ್ಲದೆ ವಿದ್ಯಾರ್ಥಿಯು ವೇಳೆಗೆ ಸರಿಯಾಗಿ ಉಪಸ್ಥಿತನಾಗಿರೋಣ, ಕಾರ್ಯಕುಶಲತೆ, ಆತ್ಮ ವಿಶ್ವಾಸ ಮತ್ತು ವೈಜ್ಞಾನಿಕ ಮನೋವೃತ್ತಿ ಇವುಗಳ ವಿಕಾಸಕ್ಕೂ ಗಮನನೀಯಬೇಕು ಮತ್ತು ವಿದ್ಯಾರ್ಥಿಯಲ್ಲಿದ್ದ ಅಳವಟ್ಟ ನಾಗರಿಕ ಗುಣಗಳ ಹಾಗು ಸಮಾಜ ಸೇವೆಯ ಬುದ್ಧಿಯ ಪರೀಕ್ಷೆಯನ್ನು ತೆಗೆದುಕೊಳ್ಳಬೇಕು. ಎಲ್ಲಕ್ಕೂ ಕಡೆಯಲ್ಲಿ ಆಗಬೇಕಾದ ಪರೀಕ್ಷೆಯೆಂದರೆ ವಿದ್ಯಾರ್ಥಿಯು ತನ್ನ ಬಾಳಿನಲ್ಲಿ ತನ್ನ ಲೋಪದೋಷಗಳನ್ನು ತಿಳಿದುಕೊಂಡು ಯಾವ ಪ್ರಕಾರ ನಡೆಯುತ್ತಿದ್ದಾನೆ ಎಂಬುದನ್ನು ನೋಡಬೇಕು; ಸಾತ್ವಿಕ ಜೀವನಕ್ಕೆ ಸ್ಫೂರ್ತಿಯನ್ನೀಯಬಲ್ಲ ಶಿಕ್ಷಕನು ಆ ಜೀವನಕ್ಕೆ ವಿದ್ಯಾರ್ಥಿಯು ಬರಬರುತ್ತಾ ಯೋಗ್ಯನಾಗಬೇಕೆಂಬುದರ ಕಡೆಗೆ ಗಮನವೀಯಬೇಕು.

ಪ್ರಶ್ನೆ ೬. ಆರ್ಥಿಕ ಸ್ವಯಂಪೂರ್ಣತೆಗೆ ವಿಶೇಷ ಮಹತ್ವವನ್ನು ಕೊಡುವದರಿಂದ, ಆ ಸ್ವಯಂಪೂರ್ಣತೆಯಿಂದ ಬಾಲಕನಿಗೆ ಲಾಭವಾಗಬೇಕೆಂಬೇ ಮೂಲ ಶಿಕ್ಷಣದ ಪ್ರಕಟಿಸಿದ ಧ್ಯೇಯವಿದ್ದರೂ, ಬಾಲಕನು ಶಿಕ್ಷಣದಿಂದಾಗುವ ಪೂರ್ಣ ಪ್ರಯೋಜನಕ್ಕೆ ಎರವಾಗುವದಿಲ್ಲವೇ?

ಉತ್ತರ:— ಗಾಂಧಿಜಿಯವರು ಮೂಲ ಶಿಕ್ಷಣದ ಮಹತ್ವವನ್ನು ಒತ್ತಿ ಹೇಳಹತ್ತಿದಾಗಿನಿಂದ ಈ ವಿಷಯದ ಮೇಲೆ ವಾದವಿವಾದವು ನಡೆದಿದೆ. ಅವರು ಅನ್ನುತ್ತಿದ್ದದ್ದೇನೆಂದರೆ ಸ್ವಾವಲಂಬನವು ಈ ಶಿಕ್ಷಣದ ವ್ಯಾವಹಾರಿಕತೆಯ ಅಗ್ನಿಪರೀಕ್ಷೆಯಾಗಿದೆ ಎಂದು. ಅವರ ತಾತ್ಪರ್ಯವೇನಿತ್ತೆಂದರೆ ಸ್ವಾವಲಂಬನ ತತ್ವದ ಒಂದು ನ್ಯಾಯವಾದ ಉಪಸಿದ್ಧಾಂತವೆಂದರೆ ವಿದ್ಯಾರ್ಥಿಯು ತನ್ನ ಎಲ್ಲ ಸಹಜ ಪ್ರವೃತ್ತಿಗಳನ್ನು ಸರಿಯಾದ ಕಾರ್ಯಾನುಷ್ಠಾನದಲ್ಲಿ ಇಳಿಸಿದ್ದಾನೆ – ಎಂದರೆ ಬರಿಯ ಆರ್ಥಿಕ ಕ್ಷೇತ್ರದಲ್ಲಿ ಮಾತ್ರವಲ್ಲ ಆದರೆ ನೈತಿಕ ಮತ್ತು ಸಾಮಾಜಿಕ ವಿಷಯಗಳಲ್ಲಿ ಕೂಡ ಆತ್ಮವಿಶ್ವಾಸವನ್ನು ಸಂಪಾದಿಸಿದ್ದಾನೆಂದು.

ಮೂಲ ಶಿಕ್ಷಣವು ಆರಂಭವಾದ ಮೇಲೆ ಗಾಂಧಿಜಿಯವರಿಗೆ ಅನುಭವ ಬಂದದ್ದೇನೆಂದರೆ ಎಲ್ಲಿಯ ವರೆಗೆ ಈ ಶಿಕ್ಷಣದಿಂದ ಅಂಶತಃ ಆದರೂ ಸ್ವಯಂಸಂಪೂರ್ಣತೆಯು ಬರುವದಿಲ್ಲವೋ ಅಲ್ಲಿಯ ವರೆಗೆ ಜನಸಾಮಾನ್ಯರಲ್ಲಿ ನಮ್ಮ ದೇಶದಂತಹ ಬಡ ದೇಶದಲ್ಲಿ, ಆ ಶಿಕ್ಷಣದ ಪ್ರಚಾರವಾಗದು ಎಂದು. ಕೇಂದ್ರ ಸರಕಾರದ ಸಲಹಾ ಮಂಡಲವು ತಮ್ಮ ವರದಿಯಲ್ಲಿ ಮೂಲ ಶಿಕ್ಷಣದ ಆರ್ಥಿಕ ಆಗತ್ಯಗಳ ಬಗೆಗೆ ವ್ಯಾಪಕವಾಗಿ ವಿಚಾರ ಮಾಡಿ ಗಾಂಧಿಜಿಯವರ ಆಸೆಯು ನಿರಾಧಾರವಾದುದಲ್ಲವೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ಎಲ್ಲಿಯ ವರೆಗೆ ತೀವ್ರ ಔದ್ಯೋಗೀಕರಣದಿಂದ ದೇಶದ ಸಮ್ಯ

ದ್ದಿಯು (ಗಾಂಧಿಜಿಯವರಿಗೆ ಇದು ಮನಸ್ಸಿಗೆ ಬರುತ್ತಿದ್ದಿಲ್ಲ) ಕೆಲವೊಂದುಪಟ್ಟು ಬೆಳೆಯದೆ ಉಳಿಯುವದೋ ಅಲ್ಲಿಯ ವರೆಗೆ ಸಾರ್ವತ್ರಿಕವಾಗಿ ರಾಷ್ಟ್ರೀಯ ಮೂಲ ಶಿಕ್ಷಣವನ್ನು ಪ್ರಚಾರ ಮಾಡುವ ಸಾಧನವನ್ನು ಪಡೆಯುವದು ಅಸಂಭಾವ್ಯವೇ.

ಭಾರತ ಸರಕಾರವು ವರ್ಧಾ ಯೋಜನೆಯನ್ನು ಅಕ್ಷರಶಃ ಸ್ವೀಕರಿಸಲಿಲ್ಲ. ಆದರೆ ಕೇಂದ್ರ ಸಲಹಾಮಂಡಲದ ಸಿಫಾರಸುಗಳನ್ನು ಬಹುತರವಾಗಿ ಸ್ವೀಕರಿಸಿತು. ಈ ಸಮಿತಿಯು ಆರ್ಥಿಕ ಸ್ವಯಂಪೂರ್ಣತೆಯ ಮೇಲೆ ಬಹಳ ಭಾರಹಾಕಿದ್ದಿಲ್ಲ. ಏನೇ ಆಗಲಿ ಸ್ವಯಂಪೂರ್ತಿಯ ಸಿದ್ಧಾಂತವು ವಿದ್ಯಾರ್ಥಿಗಳಲ್ಲಿ ಉತ್ತರದಾಯಿತ್ವದ ಭಾವನೆಯನ್ನು ಹುಟ್ಟಿಸುವದಲ್ಲದೆ ಅವರ ಶಿಕ್ಷಣದ ಹಿತಕ್ಕೆ ಅಡ್ಡಿಯನ್ನೊಡ್ಡಲಾರದು. ಈ ಸ್ವಯಂಪೂರ್ಣತೆಯ ತತ್ವವನ್ನು ಸ್ವಾಗತಿಸುವ ಒಂದು ಪ್ರಧಾನ ಕಾರಣವೇನೆಂದರೆ ಅದರ ಅನುಷ್ಠಾನದಿಂದ ವಿದ್ಯಾರ್ಥಿಗಳ ಹಾಗು ಶಿಕ್ಷಕರ ಕೆಲಸದಲ್ಲಿ ಪೂರ್ಣತೆಯೂ ನೈಪುಣ್ಯವೂ ಕ್ರಮಶಃ ಬರುವವು; ಮತ್ತು ಸಮಯ ಸಾಧನಗಳ ಸದುಪಯೋಗವಾಗಲಿಕ್ಕೆ ಅದರಿಂದ ಸಹಾಯವಾಗುವದು.

ಪ್ರಶ್ನೆ ೭. ಮೂಲ ಶಿಕ್ಷಣ ಶಾಲೆಗಳಲ್ಲಿ ತಯಾರಾದ ಅನೇಕ ವಸ್ತುಗಳು ಪೇಟೆಯಲ್ಲಿ ಮಾರಾಟವಾಗುವದಿಲ್ಲವೆಂದು ಪ್ರಾಯಃ ಅನುಭವವಿದೆ. ಮೂಲ ಶಿಕ್ಷಣದಲ್ಲಿ ಅಪವ್ಯಯದಿಂದಾಗಿ ಆರ್ಥಿಕ ದೃಷ್ಟಿಯಿಂದ ದೋಷವಿದೆ ಎಂದು ಹೇಳಬಹುದಲ್ಲವೇ ?

ಉತ್ತರ:— ತಾತ್ಕಾಲಿಕ ತೀವ್ರ ಆರ್ಥಿಕ ಲಾಭದ ದೃಷ್ಟಿಯಿಂದ ನೋಡಿದರೆ, ಮೂಲ ಶಿಕ್ಷಣದ ಪ್ರಾರಂಭದಲ್ಲಿ ಅವಶ್ಯವಿದ್ದ ವ್ಯಯದ ಕಡೆ ನೋಡಿದರೆ ಸ್ವಲ್ಪ ಹಾನಿಯಾದೀತು; ಆದರೆ ಅನುಭವಿಕ ಶಿಕ್ಷಕನು, ಆದಷ್ಟು ಕಡಿಮೆ ಅಪವ್ಯಯವಾಗಿ ವಿದ್ಯಾರ್ಥಿಗೆ ಶಿಕ್ಷಣವು ದೊರೆಯಬೇಕೆಂಬ ಮಾತಿನ ಕಡೆಗೆ ಲಕ್ಷ್ಯವನ್ನು ಪೂರೈಸಬೇಕು. ಯಂತ್ರಗಳ ಸಹಾಯದಿಂದ ಆದ ವಸ್ತುಗಳಿಗಿಂತ ಮೂಲ ಶಿಕ್ಷಣ ಶಾಲೆಗಳಲ್ಲಿ ತಯಾರಾದ ವಸ್ತುಗಳು ಇತರ ಕೈಗಾರಿಕೆಯ ವಸ್ತುಗಳಂತೆಯೇ ಹೆಚ್ಚು ತುಟ್ಟಿಯಾಗಿ ಅನಿಸಬಹುದು. ಆದರೆ ಅವುಗಳ ಮಾರಾಟವು ಈಗ ಅಷ್ಟು ಕಠಿಣವೆನಿಸಬಾರದು, ಯಾಕೆಂದರೆ ಸರಕಾರದ ನೀತಿಯು ಕೈಗಾರಿಕೆಯ ವಸ್ತುಗಳ ಮಾರಾಟಕ್ಕೆ ಪ್ರೋತ್ಸಾಹವನ್ನು ಕೊಡಹತ್ತಿದೆ. ಆದ್ದರಿಂದ ಈ ವಿದ್ಯಾಲಯಗಳ ಮುಖಾಂತರ ಉತ್ಪಾದಿತವಾದ ಅನೇಕ ವಸ್ತುಗಳನ್ನು ಅಧ್ಯಾಪಕರೂ, ಛಾತ್ರರೂ ಮತ್ತು ಸ್ಥಳೀಯ ಜನರೂ ಯೋಗ್ಯ ಧಾರಣೆಗೆ ಕೊಂಡುಕೊಳ್ಳುವರೆಂದು ಆಶಿಸುವದರಲ್ಲಿ ಸತ್ಯಾಂಶವಿಲ್ಲವೇ ?

ಪಾಠ್ಯಕ್ರಮದ ಮೊದಲಿನ ಎರಡು ಮೂರು ವರ್ಷಗಳಲ್ಲಿ ಆದ ಹಾನಿಯನ್ನು ಮುಂದಿನ ಎರಡು ಮೂರು ವರ್ಷಗಳಲ್ಲಿ ತುಂಬಿಕೊಳ್ಳುವದು ಸಾಧ್ಯವಿದೆ ಎಂದು ಕಂಡುಬಂದಿದೆ. ಮೂಲ ಶಿಕ್ಷಣಾಲಯಗಳಲ್ಲಿ ಆದ ಬಟ್ಟೆಯ ಮಾರಾಟದ ಪ್ರಶ್ನೆಯೇ ಉದ್ಭವಿಸುವದಿಲ್ಲ. ಇರಬಹುದು, ಆರಂಭದಲ್ಲಿ ನೆಯ್ದ ಒಳ್ಳೆಯವಾದರೂ ಕೆಲವು ದಪ್ಪ ಬಟ್ಟೆಗಳು ಮಾರಾಟವಾಗದೆ ಹೋಗಿರಬಹುದು. ಕೆಲವು ವಿದ್ಯಾಲಯುಗಳ ಅಧಿಕಾರಿ ಮಂಡಲದವರು ವಿದ್ಯಾಲಯದಲ್ಲಿ ಸಿದ್ಧವಾದ ವಸ್ತುಗಳನ್ನು ತಮ್ಮ ಕೆಲಸದಲ್ಲಿ ಬೇಕೆಂದು ಖರೀದಿ ಮಾಡಿದ ಉದಾಹರಣೆಗಳಿವೆ. ಎಷ್ಟೋ ರಾಜ್ಯಗಳಲ್ಲಿ ರಾಜ್ಯ ಸರಕಾರಗಳೇ ಕೆಲವು ನಿರ್ದಿಷ್ಟ ವಸ್ತುಗಳನ್ನು ತಯಾರು ಮಾಡಿಸುವ ಪ್ರಯತ್ನವನ್ನು ಮಾಡಿವೆ. ವಿಶಾಲದೃಷ್ಟಿಕೋನದಿಂದ ನೋಡಿದರೆ ಮೂಲ ಶಿಕ್ಷಣವು ಅಲಾಭದಾಯಕವೆಂದೆನಿಸದೆ ಹಾನಿಯಿಂದ ಸಮಾಜವನ್ನು ಉಳಿಸುವದೆಂದು ಕಂಡುಬರದೇ ಇರದು.

"ಪ್ರಾರಂಭದ (ಪ್ರಾಥಮಿಕ) ಶಿಕ್ಷಣಕ್ಕಾಗಿ ಖರ್ಚಾಗುವ ಹಣವು ಎಲ್ಲವೂ ನಷ್ಟವೇ ಆಗುವದು, ಯಾಕೆಂದರೆ ಹುಡುಗರು ಅಲ್ಪಸ್ವಲ್ಪ ಕಲಿತದ್ದನ್ನು ತುಸು ದಿವಸಗಳಲ್ಲಿಯೇ ಮರೆತು ಬಿಡುವರು; ಹಳ್ಳಿಯ ಅಥವಾ ನಗರದ ಜೀವನಕ್ಕೆ ಅದರ ಯಾವ ಪ್ರಯೋಜನವೂ ಉಳಿಯುವದಿಲ್ಲ" ಎಂದು ಗಾಂಧಿಜಿಯವರು ಅನ್ನುತ್ತಿದ್ದರು. ಹಳೆಯ ಶಿಕ್ಷಣ ಪದ್ಧತಿಯಲ್ಲಿ ಹುಡುಗನು ಕಲಿತ ಸಂಗತಿಗಳಿಂದ ಅವನ ಹಳ್ಳಿಯ ಊರಿಗೆ ಯಾವ ಲಾಭವೂ ಆಗುವದಿಲ್ಲ; ಯಾಕೆಂದರೆ ಹಳ್ಳಿಯ ಹುಡುಗರು ಕಲಿತ ಮೇಲೆ ಹಳ್ಳಿಯಿಂದ ದೂರ ಉಳಿಯಬಯಸುವರು. ಅವರ ಓದಿನ ಉಪಯೋಗವು ಅವರ ನಿತ್ಯದ ಕೆಲಸಗಳಲ್ಲಿ ಪ್ರಾಯಃ ಆಗುವದೇ ಇಲ್ಲ. ಅವರು ಶಹರಗಳಿಗೆ ಹೋಗಿ ನಿಲ್ಲುವರು ಮತ್ತು ಸಮಾಜಕ್ಕೆ ಹೊರೆಯಾಗಿಬಿಡುವರು. ಆದಕಾರಣ, ಓದಿನ ಜೊತೆಗೆ ಹುಡುಗರ ಉತ್ಪಾದಕ

ಜಾಣತನವೂ ಬೆಳೆಯುತ್ತಾ ಹೋದರೆ, ಇಂಥ ಶಿಕ್ಷಣದಲ್ಲಿ ಹಣವನ್ನು ಖರ್ಚು ಮಾಡುವದು ನಿಃಸಂದೇಹವಾಗಿ ಲಾಭದಾಯಕವೆಂದೇ ಹೇಳಬೇಕು. ಆದ್ದರಿಂದ ಮೂಲ ಶಿಕ್ಷಣದಲ್ಲಿ ದುಡ್ಡಿನ ಅಪವ್ಯಯ ಹಾಗು ಅದಕ್ಕಿಂತ ಹೆಚ್ಚಾಗಿ ಮನುಷ್ಯನ ವ್ಯಕ್ತಿತ್ವದ ಭಯಂಕರ ಅಪವ್ಯಯ-ಇವೆರಡೂ ಆಗುವದಿಲ್ಲ.

ಮೂಲಶಿಕ್ಷಣದ ಯೋಜನೆಯು ಶಿಕ್ಷಣದ ಯೋಜನೆಯಾಗಿದೆಯಲ್ಲದೆ ಉತ್ಪಾದನೆಯ ಯೋಜನೆಯಾಗಿಲ್ಲವೆಂಬ ಮಾತನ್ನು ಮರೆಯಬಾರದು. ಇದಕ್ಕಾಗಿ ಪ್ರತಿಯೊಬ್ಬ ವಿವೇಕಶೀಲನಾದ ವ್ಯಕ್ತಿಯು ಮೇಲೆ ಕೇಳಿದ ಪ್ರಶ್ನವು ಅಪ್ರಾಸಂಗಿಕವೆಂದು ಭಾವಿಸುವನು. ನಿಜವಾಗಿಯೂ ಜನತಾಸಾಮಾನ್ಯರ ಶಿಕ್ಷಣದ ಯಾವ ಯೋಜನೆಗೇ ಆಗಲಿ ಧನವನ್ನು ಪ್ರಾಪ್ತಮಾಡಿಕೊಳ್ಳುವದರಲ್ಲಿ ವ್ಯಾವಹಾರಿಕ ಅಡಚಣಿಗಳು ಅನೇಕ ಉತ್ಪನ್ನವಾಗಿಯೇ ಆಗುವವು. ಈ ಅಡಚಣಿಗಳಿರುವವೆಂದು ನಾವು ಮತ್ತೊಂದು ಮಾತನ್ನು ಮರೆಯಬಾರದು--ನಾವು ಭಾರತ ವರ್ಷದಲ್ಲಿ ಮೊದಲಿಗಿಂತಲೂ ಉಚ್ಚ ಮತ್ತು ಶ್ರೇಷ್ಠರಾದ ಸ್ತ್ರೀ ಪುರುಷರನ್ನು ತಯಾರು ಮಾಡಬೇಕಾಗಿದ್ದರೆ ಅದಕ್ಕಾಗಿ ದೂರದರ್ಶಿಯಾದ ಒಂದು ದೃಷ್ಟಿಯಿಂದ ಹಣವನ್ನು ವಿನಿಯೋಗಿಸಬೇಕಾದೀತೆಂಬ ಮಾತನ್ನು ಮರೆಯಬಾರದು.

(ಮುಂದುವರಿಯುವದು)

ಟಾಟಾ ನಗರ

ಲೇಖಕರು:– ಶ್ರೀ ಶಿಂತ್ರಿ ಬಸಪ್ಪನವರು
ರಿಟಾಯರ್ಡ ಅಸಿ. ಎಜುಕೇಶನಲ್ ಇನಸ್ಪೆಕ್ಟರ, ಧಾರವಾಡ

ಪ್ರಾಕೃತಿಕ ಸ್ವರೂಪ

ಟಾಟಾನಗರವು ಭಾರತದ, ಅದೇಕೆ, ಆಗ್ನೇಯೇಶಿಯದ ಪ್ರಪ್ರಥಮ ಉಕ್ಕಿನ ಪಟ್ಟಣವು. ಅದು ಕಲಕತ್ತೆಯಿಂದ ಸುಮಾರು ೧೫೬ ಮೈಲು ದೂರದಲ್ಲಿ ಬಿಹಾರ ರಾಜ್ಯದೊಳಗಿನ ಸಿಂಗಭೂಮ ಜಿಲ್ಹೆಯಲ್ಲಿದೆ. ಚಳಿಗಾಲದಲ್ಲಿಯ ಎರಡು ಬಹಳವಾದರೆ ಮೂರು ತಿಂಗಳುಗಳನ್ನಷ್ಟು ಬಿಟ್ಟರೆ ಉಳಿದಾವ ಕಾಲದಲ್ಲಿಯೂ ಅಲ್ಲಿಯ ಹವೆಯು ಉಷ್ಣವಿರುತ್ತದೆ. ಅಲ್ಲಿಯ ಹವಾಮಾನವು ಹೆಚ್ಚು-ಕಡಿಮೆ ಕಲಕತ್ತೆಯ ಹವಾಮಾನದಂತೆಯೆ. ಕಾರಖಾನೆಗಳಲ್ಲಿಯ ಎಂಜಿನ್ನುಗಳು ಇಡಿಯ ಹಗಲು ಹಾಗೂ ಇಡಿಯ ರಾತ್ರಿ ಕೆಲಸ ಮಾಡುತ್ತಿರುವದರಿಂದ ಬೇಸಿಗೆಯಲ್ಲಿ ಶಕೆಯು ವಿಪರೀತವಾಗಿರುವದುಂಟು. ಸುತ್ತಲು ಎತ್ತರವಾದ ಗುಡ್ಡಗಳಿಂದ ಆವರಿಸಲ್ಪಟ್ಟ ವಿಸ್ತೀರ್ಣವಾದೊಂದು ಬಯಲು ಪ್ರದೇಶದಲ್ಲಿ ಅದು ಮನೋಹರವಾಗಿ ಕಂಗೊಳಿಸುತ್ತಿದೆ. ಸಪಾಟಾದ ಬಯಲು ಪ್ರದೇಶವಿರುವದರಿಂದ ಅಲ್ಲಿಯ ರಹದಾರಿಗಳು ಏರಿಳಿತಗಳಿಲ್ಲದೆ ಸಮಪಾತಳಿಯಲ್ಲಿವೆ. ಸುಧಾರಿಸಿದ ಪದ್ಧತಿಯಂತೆ ಆ ನಗರವು ಕಟ್ಟಲ್ಪಟ್ಟಿದೆ. ಮಾರ್ಗಗಳ ಎರಡೂ ಬದಿಗಿರುವ ಸುಂದರವಾದ ಇಮಾರತುಗಳೂ ಶ್ರಮಜೀವಿಗಳ ಸಾಲುಮನೆಗಳೂ ನೋಡುವವರ ಕಂಣಿಗೆ ಆನಂದವನ್ನುಂಟು ಮಾಡುತ್ತಿವೆ. ಅಲ್ಲಿಯ ಸ್ವಚ್ಛತೆ ಮತ್ತು ಅಚ್ಚುಕಟ್ಟುತನ ಹೊಗಳತಕ್ಕಂತಹವಿವೆ. ಕತ್ತಲೆಯಾದ ಕೂಡಲೆ ಬೆಳದಿಂಗಳಂತೆ ಝಗಝಗಿಸುವ ವಿದ್ಯುತ್ತಿನ ದೀಪಗಳ ವ್ಯವಸ್ಥೆಯಿದೆ. ರಾಂಚಿ ಪಟ್ಟಣದ ಪಕ್ಕದಲ್ಲಿದ್ದ ಹುಡ್ರು ಎಂಬ ಹೆಸರಿನ ಧಬಧಬೆಯಲ್ಲಿ ಉಗಮ ಹೊಂದಿದ ಸುಬರನರೇಖಾ ಎಂಬ ನದಿಯು ಈ ನಗರದೊಳಗಿಂದ ಹರಿದು ಹೋಗುತ್ತಿದೆ ಯಾದುದರಿಂದ ನೀರಿನ ಪುರವಠೆಯು ಚನ್ನಾಗಿದೆ. ಜನಸಂಖ್ಯೆಯು ಎರಡು ಲಕ್ಷವನ್ನು ಮಿಕ್ಕಿ ಮೂರು ಲಕ್ಷವನ್ನು ಮುಟ್ಟುವದರಲ್ಲಿದೆ.

ಐತಿಹ್ಯ

ಆ ನಗರದ ಐತಿಹ್ಯವೆಂದರೆ ಭಾರತದಲ್ಲಿ ಕಬ್ಬಿಣ-ಉಕ್ಕುಗಳ ಉದ್ಯಮವು ಬೆಳವಣಿಗೆ ಹೊಂದಿದ ವೃತ್ತಾಂತವು. ಮೀನುಗಾರರದೊಂದು ಹಳ್ಳಿಯಿಂದ ಮುಂಬೈ

ಪಟ್ಟಣವು ಬೆಳೆದು ಬಂದಂತೆ ಸಾಕಚಿ ಎಂಬದೊಂದು ಚಿಕ್ಕ ಹಳ್ಳಿಯಿಂದ ಆ ನಗರವು ಬೆಳೆದು ಬಂದಿದೆ. ಆ ಹಳ್ಳಿಯು ಈಗಲೂ ಟಾಟಾನಗರದೊಂದು ಉಪನಗರ ವಾಗಿದೆ. ಭಾರತದ ನವಕೋಟಿ ನಾರಾಯಣರ ಹಲವೇ ಮನೆತನಗಳಲ್ಲಿ ಟಾಟಾರವರ ಮನೆತನವೊಂದಾಗಿದೆ. ಆ ಮನೆತನದ ಹೆಸರನ್ನು ಕೇಳದವರು ಅಪರೂಪ. ಉಜ್ವಲ ಸ್ವದೇಶಾಭಿಮಾನಿಗಳೂ ಚಾಣಾಕ್ಷ ಉದ್ದಿಮೆದಾರರೂ ಎಂದು ಕೀರ್ತಿ ಪೆತ್ತ ಶ್ರೀ ಜಮಶೇಡಜಿ ಟಾಟಾರವರು ಹಲವು ಭೂಗರ್ಭಶಾಸ್ತ್ರಜ್ಞರೊಂದಿಗೆ ಮೇಲೆ ಹೇಳಿದ ಸಾಕಚಿ ಎಂಬ ಹಳ್ಳಿಗೆ ೧೯೦೨ ರಲ್ಲಿ ಸಂದರ್ಶನವಿತ್ತು ಅದರ ಸುತ್ತು ಮುತ್ತಲಿನ ಗುವಾ, ನಯಮುಂದಿ ಮತ್ತು ರಾಖಾ ಎಂಬ ಸ್ಥಳಗಳಲ್ಲಿ ಕಬ್ಬಿಣದ ಅದುರುಗಳು ವಿಪುಲ ವಾಗಿ ಸಿಗುವವೆಂಬುದನ್ನು ಗೊತ್ತು ಹಚ್ಚಿದರು. ಉಕ್ಕಿನ ಕಾರಖಾನೆಗಳನ್ನು ತೆರೆಯಲು ಪಕ್ಕದಲ್ಲಿಯೇ ಸುಣ್ಣದ ಕಲ್ಲುಗಳ ಹಾಗೂ ಕಲ್ಲಿದ್ದಲಿಯ ಕಣಿಗಳು ಬೇಕು. ಮತ್ತು ನೀರಿನ ಪುರವಠೆಯು ಯಥೇಚ್ಛವಾಗಿರಬೇಕು. ಇವೆಲ್ಲವುಗಳನ್ನು ಅಲ್ಲಿಯ ನಿಸರ್ಗವು ಹೆಗ್ಗಳವಾಗಿ ದಯ ಪಾಲಿಸಿದ್ದನ್ನು ಕಂಡುಕೊಂಡು ಆ ಹಳ್ಳಿಯ ನೆರೆಯಲ್ಲಿ ಉಕ್ಕಿನ ಕಾರಖಾನೆಯೊಂದನ್ನು ಕೊನೆಗೊಮ್ಮೆ ಧೈರ್ಯ ದಿಂದ ೧೯೦೮ರಲ್ಲಿ ಪ್ರಾರಂಭಿಸಿದರು. ಜಯಲಕ್ಷ್ಮಿಯು ಧೈರ್ಯಶಾಲಿಗಳನ್ನೇ ಒಲಿಯುವಳಲ್ಲವೆ? ಅದುವೇ ಟಾಟಾ ನಗರದ ಉಗಮವು. ೧೯೧೨ರ ವರೆಗೆ ಅದು ಬಂಗಾಲ ಪ್ರಾಂತದಲ್ಲಿಯೇ ಇತ್ತು. ಆದರೆ, ೧೯೧೨ರಲ್ಲಿ ಬಿಹಾರವು ಪ್ರತ್ಯೇಕ ಪ್ರಾಂತವಾದೊಡನೆ ಅದು ಬಂಗಾಲದಿಂದ ಬಿಹಾರಕ್ಕೆ ವರ್ಗಾಯಿಸಲ್ಪಟ್ಟಿತು. ಅಂದಿನಿಂದ ಅದು ಬಿಹಾರ ರಾಜ್ಯದಲ್ಲಿದೆ. ೧೯೧೯ರಲ್ಲಿ ಹಿಂದುಸ್ತಾನದ ಆಗಿನ ವ್ಹಾಯಿಸರಾಯರು ಅದಕ್ಕೆ ಸಂದರ್ಶನವಿತ್ತು ಅದರ ಮೂಲ ಸ್ಥಾಪಕರಾದ ಶ್ರೀ ಜಮಶೇದಜಿಯವರ ಹೆಸರನ್ನು ಸ್ಮಾರಕಗೊಳಿಸಲು ಅದಕ್ಕೆ 'ಜಮಶೇದಪುರ' ಎಂಬ ಹೆಸರನ್ನಿಟ್ಟರು. ಶ್ರೀ ಜಮಶೇದಜಿಯವರ ನಂತರ ಸರ್ ದೊರಾಬಜಿ ಸರ್, ರತನಜಿಯವರಂತಹ ಪ್ರತಿಭಾ ವಂತ ಉದ್ದಿಮೆದಾರರು ಆ ಮನೆತದಲ್ಲಿ ಹುಟ್ಟಿ ಬೆಳೆಗಿರು ವದರಿಂದ ಆ ಮನೆತನದ ಹೆಸರನ್ನೇ ಶಾಶ್ವತಗೊಳಿಸ ಬೇಕೆಂಬ ಸುವಿಚಾರವು ಹುಟ್ಟಿ ಬೆಳೆದಂತೆ ತೋರುತ್ತದೆ. ಆದುದರಿಂದ, ಜಮಶೇಡಪುರಕ್ಕೆ ಇತ್ತೀಚೆಗೆ 'ಟಾಟಾ ನಗರ'ವೆಂದು ನಾಮಕರಣವಾಗಿದೆ.

ಕಾರಖಾನೆಗಳು

ಟಾಟಾ ಮನೆತನದವರೇ ಆ ಕಾರಖಾನೆಗಳನ್ನು ನಡೆಸುತ್ತಿರುವದರಿಂದ 'ಟಿಸ್ಕೊ (Tisco) ಎಂಬ ಹೆಸರಿ ನಿಂದ ಆ ಕಂಪನಿಯು ಪ್ರಸಿದ್ಧಿಯನ್ನು ಪಡೆದಿದೆ. 'ಟಿಸ್ಕೋ' ಇದು 'ಟಾಟಾ ಅಯರ್ನ್ ಆ್ಯಂಡ ಸ್ಟೀಲ ಕಂಪನಿ' (Tata Iron and Steel Company) ಎಂಬ ಹೆಸರಿನ ಸಂಕ್ಷಿಪ್ತ ರೂಪವು. ಮುಖ್ಯ ಶಬ್ದಗಳ ಮೊದಲಕ್ಷರಗಳಿಂದ ಈ ಸಂಕ್ಷಿಪ್ತರೂಪವು ತಯಾರಾಗಿದೆ. ಕಾರಖಾನೆಗಳಲ್ಲಿ ಪೂರ್ವದ ಗಿರಣಿ ಮತ್ತು ಪಶ್ಚಿಮದ ಗಿರಣಿ ಎಂಬೆರಡು ಭಾಗಗಳಿವೆ. ಕಬ್ಬಿಣದ ಅದುರುಗಳನ್ನು ಕರಗಿಸಿ ಕಬ್ಬಿಣದ ರಸವನ್ನು ಬೇರ್ಪಡಿಸಲು ಬೇಕಾಗುವ ರಾಕ್ಷಸನಂತಹ ಐದು ದೊಡ್ಡ ದೊಡ್ಡ ಆಚ್ಛಾದಿತವಾದ ಕೊಪ್ಪರಿಗೆಗಳಿವೆ. ಜೋಡು ಎಂಜಿನ್ನುಗಳ 'ಡೂಪ್ಲೆ' ಎಂಬ ಹೆಸರಿನದೊಂದು ಯಂತ್ರವಿದೆ. ಇವಲ್ಲದೆ ಕಬ್ಬಿಣವನ್ನು ಕರಗಿಸುವ ಅಸಂಖ್ಯ ಸಣ್ಣ ಕೊಪ್ಪರಿಗೆಗಳೂ ಕಬ್ಬಿಣದ ತುಂಡುಗಳನ್ನು ಕಾಸುವ ಒಲೆಗಳೂ ಇವೆ. ಇವೆಲ್ಲ ಯಂತ್ರಗಳು ಇಡಿಯ ಹಗಲು ಹಾಗೂ ಇಡಿಯ ರಾತ್ರಿ ಕೆಲಸ ಮಾಡುತ್ತಿರುತ್ತಿವೆ. ಹಗಲು ಪಾಳಿಯಲ್ಲಿ ದುಡಿಯುವ ಕಾರ್ಮಿಕರು ಬೇರೆ, ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಕಾರ್ಮಿಕರು ಬೇರೆ. ಅವರೆಲ್ಲರು ತಮ್ಮ ಸರತಿಯಂತೆ ದುಡಿಯುತ್ತಾರೆ. 'ಟಿಸ್ಕೊ' ಕಂಪನಿಯ ಹೊರತಾಗಿ 'ಟೆಲ್ಕೊ' Tata Engineering and Locomotive Company) ಎಂಬ ಕಂಪನಿಯೂ, ಭಾರತದ ಉಕ್ಕಿನ ತಂತಿಯ ಕಂಪನಿಯೂ, ತಗಡಿನ ಕಂಪನಿಯೂ, ತತ್ಸಂಬಂಧಿತ ಇತರ ಎಷ್ಟೋ ಕಂಪನಿಗಳೂ ಅಲ್ಲಿ ಕೆಲಸ ಮಾಡುತ್ತಿವೆ. ಆ ಪ್ರದೇಶವು ಲೋಹಗಳ ನೆಲೆವೀಡಾಗಿ ರುವದರಿಂದ ಇನ್ನೂ ಎಷ್ಟೋ ಹೊಸ ಹೊಸ ಉದ್ದಿಮೆ ಗಳು ಆ ಕಾರಖಾನೆಗಳಲ್ಲಿ ತಲೆದೋರುವ ಸಂಭವವಿದೆ. ೧೯೫೪ನೆಯ ಇಸವಿ ಅಗಸ್ಟ ತಿಂಗಳಿಂದ ದಾಮೋದರ ಕೊಳ್ಳದಿಂದ ವಿದ್ಯುತ್ತಿನ ಪೂರೈಕೆಯು ಪ್ರಾರಂಭವಾಗಿದೆ. ಇನ್ನು ಮೇಲೆ ಕಡಿಮೆ ಬೆಲೆಗೆ ವಿದ್ಯುತ್ತಿನ ಪೂರೈಕೆಯಾ

ಗುವದರಿಂದ ಕಾರಖಾನೆಗಳ ಉತ್ಪಾದನ ಶಕ್ತಿಯು ಹೆಚ್ಚೆಚ್ಚು ಬೆಳೆಯುವದರಲ್ಲಿ ಸಂದೇಹವಿಲ್ಲ.

ಸೌಕರ್ಯಗಳು

ಶ್ರಮಜೀವಿಗಳಿಗೆ ವಾಸಿಸಲು ಹೊಸ ಪದ್ಧತಿಯ ಆರೋಗ್ಯಕರವಾದ ಚಾಳುಗಳು ಕಟ್ಟಲ್ಪಟ್ಟಿವೆ. ನಳಗಳು ಸ್ವಚ್ಛ ಮತ್ತು ಶುದ್ಧ ನೀರನ್ನು ಪೂರೈಸುತ್ತಿವೆ. ಊರ ತುಂಬೆಲ್ಲ ಪಕ್ಕಾ ಗಟಾರುಗಳಿವೆ. ಪಟ್ಟಣದ ಆರೋಗ್ಯವನ್ನೂ ಸ್ವಚ್ಛತೆಯನ್ನೂ ಕಾಪಾಡುವ ಹೊಣೆಯನ್ನು ಟಾಟಾ ಕಂಪನಿಯವರೇ ಹೊತ್ತುಕೊಂಡು ತಮ್ಮ ಹೊಣೆಗಾರಿಕೆಯನ್ನು ಅತ್ಯಂತ ದಕ್ಷತೆಯಿಂದ ನಿರ್ವಹಿಸುತ್ತಿದ್ದಾರೆ. ಕೂಲಿಕಾರರಿಗೋಸ್ಕರ, ಆರು ದವಾಖಾನೆಗಳನ್ನಿಟ್ಟಿದ್ದಾರೆ. ಯಾರಿಗೂ ಅನನುಕೂಲವಾಗದ ಹಾಗೆ ಪಟ್ಟಣದ ಬೇರೆ ಬೇರೆ ಭಾಗಗಳಲ್ಲಿ ಅವುಗಳನ್ನು ತೆರೆದಿದ್ದಾರೆ. ಸುಮಾರು ೫೦೦ ರೋಗಿಗಳಿಗೆ ಏಕಕಾಲಕ್ಕೆ ಆರೈಕೆ ಮಾಡುವಷ್ಟು ದೊಡ್ಡದಾದೊಂದು ಆಸ್ಪತ್ರೆಯಿದೆ. ಅಲ್ಲಿ ಸುಮಾರು ಐವತ್ತು ಡಾಕ್ಟರರೂ ನೂರಾರು ನರ್ಸುಗಳೂ ಅಸಂಖ್ಯ ದಾಯಿಗಳೂ ಕೆಲಸ ಮಾಡುತ್ತಾರೆ. ಶಿಕ್ಷಣಕ್ಕೋಸುಗವೂ ಕಂಪನಿಯವರು ಹೆಚ್ಚಿನ ಕಾಳಜಿಯನ್ನು ತಕ್ಕೊಂಡಿದ್ದಾರೆ. ನಾಲ್ವತ್ತು ಸಾಲೆಗಳನ್ನು ಅಲ್ಲಲ್ಲಿ ತೆರೆದು ಮಜದೂರರ ಮಕ್ಕಳಿಗೆ ಎಲ್ಲ ತರಹದ ಶಿಕ್ಷಣವನ್ನು ಪೂರೈಸುತ್ತಿದ್ದಾರೆ. ಇವಲ್ಲದೆ ಖಾಸಗಿ ಸಂಸ್ಥೆಗಳು ಮೂವತ್ತೈದು ಸಾಲೆಗಳನ್ನು ನಡೆಸುತ್ತಿವೆ. ಆ ಸಂಸ್ಥೆಗಳಿಗೆ ಕಂಪನಿಯವರು ಸಾಕಷ್ಟು ಸಹಾಯ ನಿಧಿಯನ್ನೀಯುತ್ತಿದ್ದಾರೆ. ಊರ ಒಳಗೂ ಹೊರಗೂ ಆಧುನಿಕ ಪದ್ಧತಿಯ ಅಗಲವಾದ ರಸ್ತೆಗಳನ್ನು ರಚಿಸಿದ್ದಾರೆ. ಒಟ್ಟಿನಲ್ಲಿ, ಶಹರಗಳಲ್ಲಿಯ ಮುನಿಸಿಪಾಲಿಟಿಯು ಮಾಡತಕ್ಕ ಕೆಲಸಗಳ ಜವಾಬದಾರಿಯನ್ನೆಲ್ಲ ಕಂಪನಿಯವರು ವಹಿಸಿಕೊಂಡು ತಮ್ಮ ಸ್ವಂತ ಖರ್ಚಿನಿಂದ ಸಾಗಿಸುತ್ತಿದ್ದಾರೆ. ಒಟ್ಟು ಖರ್ಚಿನಲ್ಲಿ ಸುಮಾರು ನೂರಕ್ಕೆ ನಾಲ್ವತ್ತರಷ್ಟು ಭಾಗವು ಎತ್ತುವ ಕರಗಳಿಂದ ತೇಲುತ್ತಿದೆ. ಉಳಿದ ಖರ್ಚನ್ನೆಲ್ಲ ಕಂಪನಿಯವರೇ ವಹಿಸುತ್ತಾರೆ. ಪ್ರತಿಯೊಬ್ಬ ಶ್ರಮಜೀವಿಗೆ ಮೂಲ ಸಂಬಳವಲ್ಲದೆ ಮುಂದೆ ವಿವರಿಸಿದ ಹಲವು ಹೆಚ್ಚಿನ ಶುಲ್ಕಗಳು ಸಿಗುವದುಂಟು—ವೈಶಿಷ್ಟ್ಯಪೂರ್ಣವಾದ ಕೆಲಸವನ್ನು ಮಾಡಿದ್ದಕ್ಕೆ ಬೋನಸ್ಸು; ಪ್ರಗತಿಯನ್ನು ತೋರಿಸಿದ್ದಕ್ಕೆ ಹೆಚ್ಚಿನ ವೇತನ; ತುಟ್ಟಿಭತ್ತೆ; ವಿಶಿಷ್ಟ ಪ್ರಸಂಗಗಳಿಗೋಸ್ಕರ ಪರಿಹಾರ ಧನ; ಆಹಾರ ಪದಾರ್ಥಗಳಿಗೋಸುಗ ಕೊಡತಕ್ಕ ಭತ್ತೆ; ನಿಯಮಿತತನದಿಂದ ಕೆಲಸ ಮಾಡಿದ್ದಕ್ಕೆ ಬೋನಸ್ಸು, ಲಾಭದಲ್ಲಿಯ ಪಾಲು; ಪ್ರಾವ್ಹಿಡೆಂಟ ಫಂಡು; ನಿವೃತ್ತಿ ಹೊಂದಿದ ನಂತರ ಸಲ್ಲತಕ್ಕ ನಿಧಿ (ಏನಿಲ್ಲೆಂದರೂ ಕೊನೆಯ ಹದಿನೈದು ತಿಂಗಳುಗಳ ಸಂಬಳದಷ್ಟಕ್ಕಿಂತ ಕಡಿಮೆಯಲ್ಲದಷ್ಟು). ಮೊನ್ನೆ ಮೊನ್ನೆಯಂತೂ ಕಂಪನಿಯವರು ಒಂದು ಹೆಜ್ಜೆ ಮುಂದೆ ಹೋಗಿ ತಮ್ಮ ವ್ಯವಸ್ಥಾಪಕ ಮಂಡಲದಲ್ಲಿ ಕೂಲಿಕಾರರಿಗೆ ಪ್ರಾತಿನಿಧ್ಯವನ್ನು ಕೊಟ್ಟು ಉಳಿದವರಿಗೆ ಉತ್ತಮೋತ್ತಮವಾದೊಂದು ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದಾರೆ. ಇವುಗಳ ಮೇಲಿಂದ ಆ ಕಂಪನಿಯವರು ತಮ್ಮ ಕೆಲಸಗಾರರ ಹಿತರಕ್ಷಣೆಗೋಸ್ಕರ ಹೇಗೆ ಹೆಣಗಾಡುತ್ತಲಿದ್ದಾರೆಂಬುದು ಸುಸ್ಪಷ್ಟವೇ ಇದೆ. ಇವಲ್ಲದೆ, ಇತರ ನಾಗರಿಕ ಅನುಕೂಲತೆಗಳೂ ಸಾಕಷ್ಟಿವೆ. ಕ್ಲಬ್ಬುಗಳು, ಲಾಯಬ್ರರಿಗಳು, ವಿಶ್ರಾಂತಿಗೃಹಗಳು, ಮನೋರಂಜನ ಗೃಹಗಳು, ಖಾನಾವಳಿಗಳು, ಚಹಾ–ಕಾಫಿ ಅಂಗಡಿಗಳು, ವಾಹನಗಳು, ಮುಂತಾದವುಗಳ ಕೊರತೆಯಿಲ್ಲ.

ಕೊನೆಯ ಮಾತು

'ಮಾಡರ್ನ ರಿವ್ಯೂ' ಎಂಬ ಹೆಸರಿನ ಮಾಸಿಕದಲ್ಲಿ ನಮಗೆ ಸಿಕ್ಕ ವಿವರಗಳನ್ನೂ ಬೇರೆಡೆಗೆ ಸಿಕ್ಕ ವಿವರಗಳನ್ನೂ ಶೇಖರಿಸಿ ಅವುಗಳನ್ನು ಚಂದ ಕಾಣುವಂತೆ ಅಚ್ಚುಕಟ್ಟಾಗಿ ಹೊಂದಿಸಿ ಈ ಲೇಖವನ್ನು ನಮ್ಮ ಓದುಗರಿಗೋಸ್ಕರ ಬರೆಯಲಾಗಿದೆ. ಭದ್ರಾವತಿಯು ಕರ್ನಾಟಕದ ಪ್ರಪ್ರಥಮ ಉಕ್ಕಿನ ಪಟ್ಟಣವು. ಭಾರತದಲ್ಲಿ ಮಾತ್ರ ಅದಕ್ಕೆ ದ್ವಿತೀಯ ಸ್ಥಾನವಿದೆ. ಅಲ್ಲಿ ಸಿಗುವ ಕಬ್ಬಿಣದ ಅದುರುಗಳು ಶ್ರೇಷ್ಠ ತರಗತಿಯವಿವೆ. ಅಲ್ಲಿ ತಯಾರಾಗುವ ಕಬ್ಬಿಣ—ಉಕ್ಕುಗಳ ಸರಕುಗಳು ಎಲ್ಲರ ಮೆಚ್ಚುಗೆಯನ್ನು ಪಡೆದಿವೆ. ಮಧ್ಯಪ್ರದೇಶ ರಾಜ್ಯದಲ್ಲಿ ಭಿಲಾಯಿಯೆಂಬಲ್ಲಿ ಕಬ್ಬಿಣ–ಉಕ್ಕುಗಳ ಹೊಸದೊಂದು ಕಾರಖಾನೆಯು ಶೀಘ್ರದಲ್ಲಿಯೇ ಹೊರಡುವದರಲ್ಲಿದೆ. ಭಾರತ ಸರಕಾರವು ತನ್ನ ದ್ವಿತೀಯ ಪಂಚವಾರ್ಷಿಕ ಯೋಜನೆಯ ಅಂಗವಾಗಿ ಅದನ್ನು ಕೈಕೊಳ್ಳಬೇಕೆಂದು ಆಲೋಚಿಸಿದೆ. ಸೋವ್ಹಿಯಟ್ ರಶಿಯವು ಅದಕ್ಕೆ ಬೇಕಾಗುವ ಯಂತ್ರೋಪಕರಣಗಳನ್ನೂ ಅನುಭವಿಕ ಕಾರ್ಮಿಕರನ್ನೂ ಪಾರಂಗತರಾದ ಶಾಸ್ತ್ರಜ್ಞರನ್ನೂ ಪೂರೈಸಲು ಒಪ್ಪಿಕೊಂಡಿದೆಯೆಂದು ಈಗಾಗಲೆ ಪತ್ರಿಕೆಗಳಲ್ಲಿ ಪ್ರಕಟವಾ

ಗಿದೆ ಆದರಂತೆಯೇ ಪಶ್ಚಿಮ ಬಂಗಾಲದಲ್ಲಿಯ ದುರ್ಗಾಪುರವೆಂಬಲ್ಲಿ ಮತ್ತೊಂದು ಉಕ್ಕು—ಕಬ್ಬಿಣಗಳ ಕಾರಖಾನೆಯು ಬೇಗನೆ ನೈಗೊಳ್ಳುವದರಲ್ಲಿದೆ. ಅದನ್ನು ರಚಿಸಲು ಬ್ರಿಟಿಶ್ ಸಂಯುಕ್ತ ಕಂಪನಿಯೊಂದಕ್ಕೆ ೮೦ ದಶಲಕ್ಷ ಪೌಂಡುಗಳಿಗೆ ಗುತ್ತಿಗೆಯನ್ನು ನಮ್ಮ ಸರಕಾರವು ಕೊಟ್ಟಿವೆಯೆಂದು ೫—೮—೧೯೫೭ ರಂದು ಪತ್ರಿಕೆಗಳಲ್ಲಿ ಪ್ರಸಿದ್ಧಿಸಲ್ಪಟ್ಟಿದೆ. ಆ ಸಂಯುಕ್ತ ಕಂಪನಿಯು ಸಹ ಕ್ಷಿಪ್ರದಲ್ಲಿಯೇ ತನ್ನ ಕಾರ್ಯವನ್ನು ಕೈಕೊಳ್ಳುವದರಲ್ಲಿದೆಯೆಂದು ಸಾರಲಾಗಿದೆ. ಈ ನಾಲ್ಕೂ ಕಂಪನಿಗಳು ನಮ್ಮ ರಾಷ್ಟ್ರದ ಉಕ್ಕು—ಕಬ್ಬಿಣಗಳ ಬೇಡಿಕೆಗಳನ್ನು ಪೂರೈಸುವ ಶಕ್ತಿಯನ್ನು ಬೇಗನೆ ಪಡೆದು ಪರದೇಶಗಳಿಗೆ ಹರಿದುಹೋಗುವ ದುಡ್ಡಿನ ಹೊಳೆಯನ್ನು ತಡೆಗಟ್ಟಬೇಕೆಂಬುದು ನಮ್ಮ ರಾಷ್ಟ್ರದ ಹೆಬ್ಬಯಕೆಯಾಗಿದೆ. ಮಾತ್ರವಲ್ಲದೆ, ಇದಕ್ಕೂ ಒಂದು ಹೆಜ್ಜೆ ಮುಂದೆ ಹೋಗಿ ಅವು ತಮ್ಮ ತಮ್ಮ ಉತ್ಪಾದನ ಶಕ್ತಿಯನ್ನು ದಿನಗಳೆದಂತೆ ವಿಕಾಸಗೊಳಿಸಿಕೊಂಡು ಪರದೇಶಗಳಿಗೆ ರಫ್ತು ಮಾಡುವ ಯೋಗ್ಯತೆಯನ್ನು ಸಹ ಅನತಿಕಾಲದಲ್ಲಿ ಪಡೆಯಬೇಕೆಂದು ನಾವು ಹಾರೈಸುತ್ತೇವೆ.

ಮುಂಬಯಿ ರಾಜ್ಯದಲ್ಲಿ ಮೂಲಶಿಕ್ಷಣದ ಪ್ರಗತಿ

ಅನುವಾದಕರು:— **ಶ್ಯಾ. ಶ್ರೀ ಹುಕ್ಕೇರಿ**

(ಧಾರವಾಡ ಆಕಾಶವಾಣಿಯ ಕೃಪೆಯಿಂದ)

ಮೂಲ ಶಿಕ್ಷಣದಲ್ಲಿ ಆಸ್ಥೆ ವಹಿಸಿದ ವ್ಯಕ್ತಿಗಳು ಮುಂಬಯಿ ರಾಜ್ಯ ಶಾಸಕರಲ್ಲಿ ಮೊದಲಿನಿಂದಲೂ ಇದ್ದುದರಿಂದ ಮುಂಬಯಿ ರಾಜ್ಯವು ಯಾವಾಗಲೂ ಮೂಲ ಶಿಕ್ಷಣದ ಮುಂಚೂಣಿಯಲ್ಲಿಯೇ ಸ್ಥಾನ ಪಡೆದಿದೆ ಎಂದು ನಿಶ್ಚಯಾತ್ಮಕವಾಗಿ ಹೇಳಬಹುದು.

ಜುಲೈ ೧೯೩೭ ರ ಹರಿಜನ ಪತ್ರಿಕೆಯಲ್ಲಿ ಮಹಾತ್ಮಾ ಗಾಂಧಿಯವರು "ಮಾನವನ ಶರೀರ, ಮನಸ್ಸು ಮತ್ತು ಆತ್ಮ ಇವುಗಳಿಂದ ಉತ್ಕೃಷ್ಟವಾದ ಸತ್ವವನ್ನು ಎಲ್ಲ ಬಗೆಗಳಿಂದಲೂ ಹೊರಡಿಸುವದೇ ಶಿಕ್ಷಣವೆಂದು ನಾನು ತಿಳಿಯುತ್ತೇನೆ. ಸಾಕ್ಷರತೆಯೊಂದೇ ಶಿಕ್ಷಣವಾಗಲಾರದು. ಆದುದರಿಂದ ನಾನು ಮಗುವಿಗೆ ಒಂದು ಉಪಯುಕ್ತವಾದ ಕೈಗಾರಿಕೆಯನ್ನು ಕಲಿಸಿ ಅದರ ಶಿಕ್ಷಣ ಪ್ರಾರಂಭವನ್ನು ಮಾಡಬಯಸುತ್ತೇನೆ. ಆ ತರಬೇತಿ ಪ್ರಾರಂಭವಾದಂದಿನಿಂದ ಮಗುವಿಗೆ ಹೊಸ ಉತ್ಪಾದನೆ ಮಾಡುವ ಶಕ್ತಿ ಬರುತ್ತದೆ. ಹೀಗೆ ಪ್ರತಿಯೊಂದು ಶಾಲೆಯೂ ಸ್ವಾವಲಂಬಿಯಾಗಬಹುದು. ಆದರೆ ಇದಕ್ಕೆ ಒಂದು ಕರಾರೆಂದರೆ ಸರಕಾರವು ಈ ಶಾಲೆಗಳ ಹುಟ್ಟುವಳಿಯನ್ನು ತಾನೇ ತೆಗೆದುಕೊಳ್ಳಬೇಕು.'' ಹೀಗೆ ಬರೆದರು. ಈ ವಾಕ್ಯಗಳಲ್ಲಿ ನಾವು ಮೂಲ ಶಿಕ್ಷಣದ ಮೂಲವನ್ನು ಕಾಣಬಹುದು.

ಮುಂದೆ ಅಕ್ಟೋಬರ ೧೯೩೭ ರಲ್ಲಿ ಗಾಂಧಿಜಿಯವರ ನೇತೃತ್ವದಲ್ಲಿ ಭಾರತದ ರಾಷ್ಟ್ರೀಯ ಶಿಕ್ಷಣಕಾರ್ಯಕರ್ತರ ಒಂದು ಪರಿಷತ್ತು ವರ್ಧೆಯಲ್ಲಿ ಕರೆಯಲ್ಪಟ್ಟು ಅಲ್ಲಿ ಗಾಂಧಿಜಿಯವರ ಮೂಲಶಿಕ್ಷಣ ಕಲ್ಪನೆಯನ್ನು ಭಾರತದಲ್ಲಿ ಪ್ರಯೋಗಿಸಬೇಕೆಂಬ ಗೊತ್ತುವಳಿ ಸ್ವೀಕೃತವಾಯಿತು ಇದಕ್ಕನುಸಾರವಾಗಿ ಒಂದು ವಿವರಯುಕ್ತ ಅಭ್ಯಾಸಪತ್ರಿಕೆಯನ್ನು ತಯಾರಿಸಲು ಶಿಕ್ಷಣ ತಜ್ಞರ ಒಂದು ಸಮಿತಿಯು ಡಾ. ಝಾಕಿರ ಹುಸೇನರ ಅಧ್ಯಕ್ಷತೆಯಲ್ಲಿ ನಿಯಮಿಸಲ್ಪಟ್ಟಿತು. ಈ ಸಮಿತಿಯ ವರದಿಯೇ ವರ್ಧಾ ಶಿಕ್ಷಣ ಯೋಜನೆ. ರಾಷ್ಟ್ರೀಯ ಮಹಾಸಭೆಯು ಹರಿಪುರ ಅಧಿವೇಶನದಲ್ಲಿ ಇದನ್ನು ಸ್ವೀಕರಿಸಿತು. ಈ ಯೋಜನೆಯನ್ನು ಕಾರ್ಯಗತ ಮಾಡಲು ಏಪ್ರಿಲ್ ೧೯೩೮ ರಲ್ಲಿ ಹಿಂದುಸ್ತಾನೀ ತಾಲಿಮೀ ಸಂಘವು ವರ್ಧೆಯಲ್ಲಿ ಜನ್ಮ ತಾಳಿತು. ಈ ರಾಷ್ಟ್ರೀಯ ಶಿಕ್ಷಣ ವಾತಾವರಣದಲ್ಲಿ ಮೂಲ ಶಿಕ್ಷಣ ಯೋಜನೆಯನ್ನು ಕಾರ್ಯರೂಪಕ್ಕಿಳಿಸಲು ಭಾರತದ ಭಿನ್ನ ರಾಜ್ಯಗಳು ಮುಂದೆ ಬಂದವು. ಮುಂಬಯಿ ರಾಜ್ಯವೂ ಇದೇ ಸಮಯದಲ್ಲಿ ಮೂಲ ಶಿಕ್ಷಣ ಕ್ಷೇತ್ರದಲ್ಲಿ ಅಡಿಯಿಟ್ಟಿತು. ಆಗ ಮುಂಬಯಿ ರಾಜ್ಯದಲ್ಲಿ ಕಾಂಗ್ರೆಸ್ ಮಂತ್ರಿಮಂಡಲವು ಅಧಿಕಾರದಲ್ಲಿದ್ದು ಶ್ರೀ ಬಾಲ ಗಂಗಾಧರ ಖೇರರು ಮುಖ್ಯಮಂತ್ರಿ

ಗಳೂ ಶಿಕ್ಷಣ ಮಂತ್ರಿಗಳೂ ಆಗಿದ್ದರೆಂದು ಹೇಳಿದರೆ ಈ ಹೊಸ ಪ್ರಯೋಗದ ಸ್ಫೂರ್ತಿ ಯಾವುದೆಂಬುದು ಸಹಜವಾಗಿ ತಿಳಿಯಬಹುದು.

೧೯೩೮ ರಲ್ಲಿ ಮುಂಬಯಿ ರಾಜ್ಯವು ಈ ಪ್ರಯೋಗವನ್ನು ಮಾಡಲು ನಿರ್ಧರಿಸಿ ಅದಕ್ಕಾಗಿ ನವೆಂಬರದಲ್ಲಿ ಒಬ್ಬ ವಿಶೇಷಾಧಿಕಾರಿಯನ್ನು ನಿಯಮಿಸಿತು. ಹಿಂದುಸ್ತಾನೀ ತಾಲಿಮೀ ಸಂಘದ ಸದಸ್ಯರ ಸಲಹೆ ಪಡೆದು ಒಂದು ಯೋಜನೆಯನ್ನು ತಯಾರಿಸಲಾಯಿತು. ಇದರ ಪ್ರಕಾರ ಗುಜರಾತ, ಮಹಾರಾಷ್ಟ್ರ ಮತ್ತು ಕರ್ನಾಟಕ ಪ್ರದೇಶಗಳಲ್ಲಿ ಕೆಲವು ಸಾಂದ್ರ ಕ್ಷೇತ್ರಗಳನ್ನು ಆರಿಸಿ ಅಲ್ಲಿ ಮೊದಲನೆಯ ವರ್ಷ ಒಂದು–ಎರಡು ಇಯತ್ತೆಗಳಿಂದ ಪ್ರಾರಂಭಿಸಿ ಆರೇಳು ವರ್ಷಗಳಲ್ಲಿ ಏಳೂ ಇಯತ್ತೆಗಳಲ್ಲಿ ನೂಲುವ–ನೇಯುವ ಮೂಲೋದ್ಯೋಗವನ್ನು ಕೇಂದ್ರವಾಗಿಟ್ಟುಕೊಂಡು ಮೂಲ ಶಿಕ್ಷಣವನ್ನು ಪೂರ್ತಿಗೊಳಿಸಬೇಕೆಂದು ಗೊತ್ತಾಯಿತು. ಆದರೆ ಈ ಹೊಸ ಶಿಕ್ಷಣವನ್ನು ಪ್ರಾರಂಭಿಸಲು ಪ್ರಾಥಮಿಕ ಶಿಕ್ಷಕರು ಬೇಕು. 'ಅವರನ್ನು ತರಬೇತಿಗೊಳಿಸಲು ಯೋಗ್ಯ ಸ್ಥಾನದಲ್ಲಿ ಪ್ರಶಿಕ್ಷಣ ಪಡೆದ ಮಾಧ್ಯಮಿಕ ಶಿಕ್ಷಕರು ಬೇಕು' ಎಂಬ ವಿಚಾರದಿಂದ ದಿಲ್ಲಿಯ ಜಾಮಿಯಾ ಮಿಲಿಯಾಕ್ಕೂ ವರ್ಧೆಗೂ ಕೆಲವು ಮಾಧ್ಯಮಿಕ ಶಿಕ್ಷಕರನ್ನು ತರಬೇತಿಗಾಗಿ ಕಳಿಸಲಾಯಿತು. ಅವರು ಮರಳಿ ಬಂದು ಪ್ರಾಥಮಿಕ ಶಿಕ್ಷಕರಿಗಾಗಿ ಮುಂಬಯಿ ರಾಜ್ಯದ ಮೂರೂ ಭಾಷಾ ಪ್ರದೇಶಗಳಲ್ಲಿ ಒಂದೊಂದು ತ್ರೈಮಾಸಿಕ ವರ್ಗ ಪ್ರಾರಂಭಿಸಿ ಒಟ್ಟಿಗೆ ೧೩೦ ಶಿಕ್ಷಕರನ್ನು ತರಬೇತಿಗೊಳಿಸಿದರು. ಈ ವರ್ಗದಲ್ಲಿ ಕಲಿಸಿದ ಮುಖ್ಯ ವಿಷಯಗಳೆಂದರೆ ಮೂಲೋದ್ಯೋಗ, ರಾಷ್ಟ್ರೀಯ ಜಾಗೃತಿಯ ಇತಿಹಾಸ, ಮೂಲ ಶಿಕ್ಷಣದ ತತ್ತ್ವಗಳು ಮತ್ತು ಸಮವಾಯ ಪದ್ಧತಿಯ ವಿಧಾನಗಳು. ಈ ಪ್ರಾಥಮಿಕ ಶಿಕ್ಷಕರು ಕರ್ನಾಟಕದಲ್ಲಿ ಧಾರವಾಡ ಜಿಲ್ಲೆಯ ೧೬ ಶಾಲೆಗಳಲ್ಲಿಯೂ ಮಹಾರಾಷ್ಟ್ರದಲ್ಲಿ ಪೂರ್ವಖಾನದೇಶ ಮತ್ತು ಸಾತಾರಾ ಜಿಲ್ಲೆಗಳ ೨೦ ಶಾಲೆಗಳಲ್ಲಿಯೂ ಮತ್ತು ಗುಜರಾತದಲ್ಲಿ ಸುರತ ಜಿಲ್ಲೆಯ ೧೩ ಶಾಲೆಗಳಲ್ಲಿಯೂ ಅದರಂತೆ ೬ ಉರ್ದು ಶಾಲೆಗಳಲ್ಲಿಯೂ ಹೀಗೆ ಒಟ್ಟಿಗೆ ೫೫ ಪ್ರಾಥಮಿಕ ಶಾಲೆಗಳಲ್ಲಿ ಜೂನ್ ೧೯೩೯ ರಿಂದ ತಮ್ಮ ಹೊಸ ಶಿಕ್ಷಣದ ಪ್ರಯೋಗವನ್ನು ಪ್ರಾರಂಭಿಸಿದರು.

ಈ ಶಾಲೆಗಳಿಗೆ ಟ್ರೇಂಡ್ ಶಿಕ್ಷಕರನ್ನು ಪೂರೈಸುವದಕ್ಕಾಗಿ ಮುಂಬಯಿ ರಾಜ್ಯದ ಮೂರೂ ಭಾಷಾ ಪ್ರದೇಶಗಳಲ್ಲಿ ಒಂದೊಂದು ತರಬೇತಿ ಕೇಂದ್ರವನ್ನು ತೆರೆದು ಅದಕ್ಕೆ ಒಂದು ತರಬೇತಿ ಶಾಲೆಯನ್ನು ಜೋಡಿಸಲಾಯಿತು. ಈ ಕೇಂದ್ರಗಳಲ್ಲಿ ತರಬೇತಿಗಾಗಿ ಮ್ಯಾಟ್ರಿಕ್ ಇಲ್ಲವೆ ಮೊದಲನೆಯ ವರ್ಷದಲ್ಲಿ ಉತ್ತೀರ್ಣರಾದ ಶಿಕ್ಷಕರನ್ನು ಆರಿಸಿ ಅವರಿಗೆ ಮೂಲೋದ್ಯೋಗ, ಮಾತೃಭಾಷೆ, ಹಿಂದುಸ್ತಾನಿ, ಇತಿಹಾಸ, ಭೂಗೋಲ ವಿಜ್ಞಾನ, ಗ್ರಾಮ ಸುಧಾರಣೆ, ಚಿತ್ರಕಲೆ, ಮೂಲ ಶಿಕ್ಷಣ ತತ್ತ್ವಗಳು ಮನೋವಿಜ್ಞಾನ ಮತ್ತು ಸಮವಾಯ ಪಾಠಪದ್ಧತಿ ಇವುಗಳಲ್ಲಿ ತರಬೇತಿಯನ್ನು ಕೊಡುವ ಯೋಜನೆಯು ಜೂನ್ ೧೯೩೯ ರಿಂದಲೇ ಜಾರಿಯಲ್ಲಿ ಬಂದಿತು. ಈ ಮೂಲ ಶಿಕ್ಷಣ ಕೇಂದ್ರಗಳು ಕರ್ನಾಟಕದಲ್ಲಿ ಧಾರವಾಡ, ಮಹಾರಾಷ್ಟ್ರದಲ್ಲಿ ಲೋಣಿ, ಗುಜರಾತದಲ್ಲಿ ಕಾತರಗಾಂವ ಹಾಗು ಉರ್ದು ಶಿಕ್ಷಕರಿಗಾಗಿ ಜಳಗಾವದಲ್ಲಿ ತೆರೆಯಲ್ಪಟ್ಟವು. ಮೂಲ ಶಿಕ್ಷಣ ಶಾಲೆಗಳ ಮಾರ್ಗದರ್ಶನ ಮತ್ತು ಪರ್ಯವೇಕ್ಷಣಕ್ಕಾಗಿ ಒಬ್ಬ ಬೇಸಿಕ್ ಸುಪರವಾಯಿಜರ್ ಮತ್ತು ಒಬ್ಬ ಕ್ರಾಫ್ಟ್ ಸುಪರವಾಯಿಜರ್ ಎಂಬ ಇಬ್ಬರು ಅಧಿಕಾರಿಗಳನ್ನು ಮೂರೂ ಪ್ರದೇಶಗಳಲ್ಲಿ ನಿಯಮಿಸಲಾಯಿತು. ಇಷ್ಟಾಗಿ ಮುಂಬಯಿ ಸರಕಾರಕ್ಕೆ ಮೂಲ ಶಿಕ್ಷಣ ವಿಷಯದಲ್ಲಿ ಸಲಹೆ ಕೊಡಲು ಶ್ರೀ ನರಹರಭಾಯಿ ಪಾರಿಖರ ನೇತೃತ್ವದಲ್ಲಿ ಒಂದು ಮಹಾ ಸಮಿತಿಯನ್ನು ಸರಕಾರವು ನಿಯಮಿಸಿತು. ಈ ಸಮಿತಿಯೂ ಮೂಲ ಶಿಕ್ಷಣ ಶಾಲೆಗಳಿಗೆ ಸಂದರ್ಶನವಿತ್ತು ಮಾರ್ಗದರ್ಶನ ಮಾಡುತ್ತಿತ್ತು.

ಈ ಸರಕಾರಪ್ರೇರಿತ ಪ್ರಯೋಗದ ಹೊರತಾಗಿ ಎರಡು ಖಾಸಗಿ ಸಂಸ್ಥೆಗಳು, ಪುಣೆಯ ಟಿಳಕ ಮಹಾರಾಷ್ಟ್ರ ವಿದ್ಯಾಪೀಠ ಮತ್ತು ಸಲಹಾ ಸಮಿತಿಯ ಅಧ್ಯಕ್ಷರಾದ ಶ್ರೀ ಪಾರಿಖ ಇವರೂ ಮೂಲಶಿಕ್ಷಣದ ಪ್ರಯೋಗವನ್ನು ಕೆಲವು ಶಾಲೆಗಳಲ್ಲಿ ಪ್ರಾರಂಭಿಸಿದರು. ಆದರೆ ಸರಕಾರೀ ಪ್ರಯೋಗ ಮತ್ತು ಖಾಸಗೀ ಪ್ರಯೋಗ ಎರಡೂ ಅಪೇಕ್ಷಿತ ಯಶಸ್ಸನ್ನು ಸಂಪಾದಿಸಿದವೆಂದು ಹೇಳುವದು ಸಾಧ್ಯವಿಲ್ಲ. ಈ ಪರಿಸ್ಥಿತಿಗೆ ಒಂದು ಮುಖ್ಯ ಕಾರಣವನ್ನು ನಾವು ನೆನಪಿನಲ್ಲಿಡಬೇಕು. ಹೊಸ ಪ್ರಯೋಗ ಪ್ರಾರಂಭಿಸಿದ ಕಾಂಗ್ರೆಸ್ ಮಂತ್ರಿಮಂಡಲವು ಅಧಿಕಾರ ತ್ಯಾಗ ಮಾಡಿದ್ದರಿಂದ ಬ್ರಿಟಿಶ್ ಸರಕಾರೀ

ಸಲಹೆಗಾರರ ರಾಜ್ಯವು ಆಗ ಪ್ರಾರಂಭವಾಗಿತ್ತು.

ಈ ಪ್ರಯೋಗದ ಪಂಚವಾರ್ಷಿಕ ಫಲಿತಾಂಶವನ್ನು ಪರಿಶೀಲಿಸಲು ಒಂದು ಸಮಿತಿಯನ್ನು ನಿಯಮಿಸಬೇಕೆಂದು ಮುಂಬಯಿ ಸರಕಾರವು ಮಾಧ್ಯವರ್ತಿ ಶಿಕ್ಷಣ ಸಲಹೆಗಾರರ ಮಂಡಲವನ್ನು ಕೇಳಿಕೊಂಡಿತು. ಈ ಸಮಿತಿಯು ೧೯೪೩ರಲ್ಲಿ ತನ್ನ ವರದಿಯನ್ನು ಒಪ್ಪಿಸಿದ ಮೇಲೆ ಮುಂಬಯಿ ಸರಕಾರವು ಅದನ್ನು ಅಂಶತಃ ಸ್ವೀಕರಿಸಿ ಮೂಲಶಿಕ್ಷಣ ಪ್ರಯೋಗವನ್ನು ಮತ್ತೈದು ವರ್ಷ ಮುಂದುವರಿಸಬೇಕೆಂದು ನಿರ್ಧರಿಸಿತು. ಜೂನ್ ೧೯೪೪ರಿಂದ ಮೂಲಶಿಕ್ಷಣಕ್ಕಾಗಿ ಪ್ರಥಮ ವರ್ಗದ ಒಬ್ಬ ವಿಶೇಷಾಧಿಕಾರಿಯ ನೇಮಕವಾಯಿತು. ೧೯೪೩-೪೪ರ ಕೊನೆಗೆ ೫ನೆಯ ಇಯತ್ತೆಯ ವರೆಗೆ ಬಂದ ಪ್ರಯೋಗವನ್ನು ಏಳನೆಯ ಇಯತ್ತೆಯ ವರೆಗೆ ಮುಂದುವರಿಸಬೇಕೆಂದು ಗೊತ್ತಾಯಿತು. ಈ ಹೊಸ ಪ್ರಯೋಗದ ವಿದ್ಯಾರ್ಥಿಗಳು ೧೯೪೭ರಲ್ಲಿ ಪ್ರಾಥಮಿಕ ಶಿಕ್ಷಣ ಪ್ರಮಾಣಪತ್ರ ಪರೀಕ್ಷೆಗೆ ಕುಳಿತು ಪಾಸಾದರು. ಹೀಗೆ ೧೯೩೮ರಿಂದ ೧೯೪೬ರ ವರೆಗೆ ಮೂಲಶಿಕ್ಷಣ ಪ್ರಯೋಗದ ಮೊದಲನೆಯ ಅವಧಿಯು ಮುಗಿಯಿತೆಂದು ಹೇಳಬಹುದು.

೧೯೪೬ರಲ್ಲಿ ಮತ್ತೆ ಜನತಾ ಸರಕಾರವು ಅಧಿಕಾರಾರೂಢವಾದೊಡನೆ ಮೂಲಶಿಕ್ಷಣದ ಎರಡನೆಯ ಅವಧಿಯು ಪ್ರಾರಂಭವಾಯಿತೆನ್ನಲು ಅಡ್ಡಿಯಿಲ್ಲ. ಮೂಲ ಶಿಕ್ಷಣದ ಪ್ರಯೋಗಕಾಲವು ಮುಗಿದು ಅದನ್ನು ರಾಜ್ಯದ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿ ಕ್ರಮೇಣ ಪ್ರಾರಂಭಿಸುವ ಕಾಲಬಂದಿತೆಂದು ಸರಕಾರವು ನಿರ್ಧರಿಸಿತು. ಈ ನಿರ್ಧಾರವನ್ನು ಕಾರ್ಯಗತಮಾಡಲು ತ್ರಿವಿಧ ಕಾರ್ಯಕ್ರಮವು ಸ್ವೀಕರಿಸಲ್ಪಟ್ಟಿತು.

೧) ಎಲ್ಲ ಪ್ರಾಥಮಿಕ ಶಾಲೆಗಳನ್ನು ಮೂಲಶಿಕ್ಷಣ ಶಾಲೆಗಳೆಂದು ಪರಿವರ್ತಿಸುವ ಉದ್ದೇಶದಿಂದ ಮೊದಲನೆಯ ಮೆಟ್ಟಲೆಂದು ಮೂಲೋದ್ಯೋಗ, ಸ್ವಚ್ಛತೆ ಮತ್ತು ಸಂಘಜೀವನ ಇವುಗಳ ಚಟುವಟಿಕೆಗಳನ್ನು ಪ್ರಾರಂಭಿಸುವದು.

೨) ಹಿಂದಿನ ಪೂರ್ಣ ಬೇಸಿಕ್ ಶಾಲೆಗಳನ್ನು ಮುಂದೆ ನಡೆಸಿ ಇಂದಿನ ಕ್ರಾಫ್ಟ ಶಾಲೆಗಳನ್ನು ಕ್ರಮೇಣ ಪೂರ್ಣ ಬೇಸಿಕ್ ಶಾಲೆಗಳನ್ನಾಗಿ ಪರಿವರ್ತಿಸುವದು.

೩) ಬೇಸಿಕ್ ಶಾಲೆಗಳಲ್ಲಿ ಕೆಲಸ ಮಾಡಲು ಅರ್ಹಗೊಳಿಸುವದಕ್ಕಾಗಿ ಪ್ರಾಥಮಿಕ ಶಿಕ್ಷಕರ ತರಬೇತಿ.

ಪ್ರಾಥಮಿಕ ಶಿಕ್ಷಕರ ತರಬೇತಿ ಕಾರ್ಯವನ್ನು ಸಾಂಗಗೊಳಿಸುವದಕ್ಕಾಗಿ ಕೆಲವು ಪದವೀಧರ ಮಾಧ್ಯಮಿಕ ಶಿಕ್ಷಕರನ್ನು ವರ್ಧೆಯಲ್ಲಿ ಒಂದು ವರ್ಷದ ಪೂರ್ಣ ತರಬೇತಿ ಪಡೆಯಲು ೧೯೪೬-೪೭ ಮತ್ತು ೧೯೪೭-೪೮ರಲ್ಲಿ ಕಳುಹಿಸಲಾಯಿತು. ಇವರ ಸಾಹಾಯ್ಯದಿಂದ ೧೯೫೨ರ ಕೊನೆಯ ವರೆಗೆ ೨೪೩ ಅಲ್ಪಾವಧಿ ವರ್ಗಗಳು ನಡೆಸಲ್ಪಟ್ಟು ಅವುಗಳಲ್ಲಿ ಒಟ್ಟಿಗೆ ೮೭೨೧ ಪ್ರಾಥಮಿಕ ಶಿಕ್ಷಕರು ತರಬೇತಿ ಹೊಂದಿದರು. ಇದಲ್ಲದೆ ಬೇಸಿಕಕ್ಕೆ ಪರಿವರ್ತಿಸಲ್ಪಟ್ಟ ೬೮ ಪ್ರಾಥಮಿಕ ಟ್ರೇನಿಂಗ ಕಾಲೇಜುಗಳಲ್ಲಿ ೩೬೫೦ ಶಿಕ್ಷಕರು ಪೂರ್ಣ ತರಬೇತಿ ಪಡೆದರು. ರಾಜ್ಯದಲ್ಲಿಯ ಒಟ್ಟು ೨೮೭೮೦ ಪ್ರಾ. ಶಾಲೆಗಳಲ್ಲಿ ೨೮೦೧ ಕ್ರಾಫ್ಟ ಶಾಲೆಗಳಾದವು. ೧೪೯ ಬೇಸಿಕ್ ಶಾಲೆಗಳಾದವು. ೧೯೫೪ರ ಪ್ರಾರಂಭಕ್ಕೆ ಮುಂಬಯಿ ರಾಜ್ಯದಲ್ಲಿ ಒಟ್ಟಿಗೆ ೧೬೮ ಬೇಸಿಕ್ ಶಾಲೆಗಳಿದ್ದು ಅವುಗಳಲ್ಲಿ ೩೦೧೮೨ ಮಕ್ಕಳು ಕಲಿಯುತ್ತಿದ್ದರು. ಕ್ರಾಫ್ಟ ಶಾಲೆಗಳು ೨೯೦೨ ಇದ್ದು ಅವುಗಳಲ್ಲಿ ೨,೬೬,೬೭೩ ಮಕ್ಕಳು ಕಲಿಯುತ್ತಿದ್ದರು.

ಈ ಪ್ರಾಥಮಿಕ ಶಾಲೆಗಳ ಇನ್‌ಸ್ಪೆಕ್ಶನ್ ಮಾಡುವ ಅಸಿಸ್ಟಂಟ ಡೆಪ್ಯುಟಿ ಇನ್‌ಸ್ಪೆಕ್ಟರರಿಗಾಗಿ ತ್ರೈಮಾಸಿಕ ಅಲ್ಪಾವಧಿ ವರ್ಗಗಳು ನಡೆಸಲ್ಪಟ್ಟವು. ಶಿಕ್ಷಕರಿಗೆ ಮಾರ್ಗದರ್ಶನ ಮಾಡುವ ಈ ಅಧಿಕಾರಿಗಳಿಗೆ ಹೊಸ ಶಿಕ್ಷಣದ ತತ್ವಗಳ ಮತ್ತು ಪದ್ಧತಿಯ ಪರಿಚಯ ಅತ್ಯಂತ ಅವಶ್ಯಕವಷ್ಟೆ? ಇಂತಹ ಅಧಿಕಾರಿಗಳನ್ನು ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜಗಳ ಅಧ್ಯಾಪಕರನ್ನು ತಯಾರಿಸುವ ದೀರ್ಘಾವಧಿ ಯೋಜನೆಯೊಂದು ಅವಶ್ಯಕವೆನಿಸಿದ್ದರಿಂದ ಮುಂಬಯಿ ರಾಜ್ಯದ ಮೂರೂ ಭಾಷಾ ಪ್ರದೇಶಗಳಲ್ಲಿ ಒಂದೊಂದು ಪದವೀಧರರ ಮೂಲ ಶಿಕ್ಷಣ ಕೇಂದ್ರವನ್ನು ತೆರೆಯಲಾಯಿತು. ೧೯೪೮ರಿಂದ ೧೯೫೨ರ ವರೆಗೆ ಈ ಕೇಂದ್ರಗಳಲ್ಲಿ ೩೬೧ ಮಾಧ್ಯಮಿಕ ಶಿಕ್ಷಕರು ತರಬೇತಿ ಹೊಂದಿದರು. ೧೯೫೩ ರಿಂದ ಈ ಕೇಂದ್ರಗಳನ್ನು ಮಾರ್ಪಡಿಸಿ ಅವುಗಳಲ್ಲಿ ಮಾಧ್ಯಮಿಕ ಶಿಕ್ಷಕರ ಸಾಮಾನ್ಯ ತರಬೇತಿಯೂ ಬೇಸಿಕ್ ಶಿಕ್ಷಣದ ವಿಶೇಷ ತರಬೇತಿಯೂ ಏಕಕಾಲಕ್ಕೆ ಲಭಿಸುವಂತೆ ಏರ್ಪಾಡು ಮಾಡಲಾಗಿದೆ. ಈ ಸಂಸ್ಥೆಗಳಲ್ಲಿ

ಕಳೆದೆರಡು ವರ್ಷಗಳಲ್ಲಿ ಸುಮಾರು ೨೫೦ ಮಾಧ್ಯಮಿಕ ಶಿಕ್ಷಕರು ತರಬೇತಿ ಪಡೆದು ಹೊಸ ಶಿಕ್ಷಣದ ಕ್ಷೇತ್ರದಲ್ಲಿ ಪದಾರ್ಪಣ ಮಾಡಿದ್ದಾರೆ. ಪದವೀಧರರ ಮೂಲ ಶಿಕ್ಷಣ ಕೇಂದ್ರಗಳಲ್ಲಿ ತರಬೇತಿ ಪಡೆದ ಮಾಧ್ಯಮಿಕ ಶಿಕ್ಷಕರ ನೇಮುಕ ಮಾಡಿ ೧೭ ಸರಕಾರೀ ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜಗಳನ್ನು ಏಪ್ರಿಲ್ ೧೯೫೨ರ ವರೆಗೆ ಸಂಪೂರ್ಣ ಬೇಸಿಕ್ ಪದ್ಧತಿಗೆ ಪರಿವರ್ತಿಸಲಾಯಿತು.

ಈಗ ಮುಂಬಯಿ ರಾಜ್ಯದಲ್ಲಿ ಒಟ್ಟಿಗೆ ೧೦೦ ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜಗಳಿದ್ದು ಅವುಗಳಲ್ಲಿ ಪ್ರತಿ ವರ್ಷ ೬೦೦೦ ಶಿಕ್ಷಕರು ತರಬೇತಿ ಪಡೆದು ಬೇಸಿಕ್ ಶಾಲೆಗಳಿಗೆ ಹೋಗಲು ಸಿದ್ಧರಾಗುತ್ತಾರೆ. ಇವರ ಸಾಹಾಯ್ಯದಿಂದಲೇ ಬೇಸಿಕ್ ಪ್ರಾಥಮಿಕ ಶಾಲೆಗಳ ಸಂಖ್ಯೆಯನ್ನು ಬೆಳಿಸುವ ಯೋಜನೆಯಿದೆ.

ಹೋದ ವರ್ಷದಲ್ಲಿಯೇ ಬೇಸಿಕ್ ಶಿಕ್ಷಣವು ಮುಂಬಯಿ ರಾಜ್ಯದಲ್ಲಿ ಮತ್ತೊಂದಡಿ ಮುಂದಿಟ್ಟಿದೆ. ಪ್ರತಿಯೊಂದು ಪದವೀಧರರ ಮೂಲಶಿಕ್ಷಣ ಕೇಂದ್ರದ ಸುತ್ತಲೂ ಸುಮಾರು ೧೦೦ ಪ್ರಾಥಮಿಕ ಶಾಲೆಗಳನ್ನು ಮಾದರಿಯ ಶಾಲೆಗಳನ್ನಾಗಿ ಮಾಡುವ ಉದ್ದೇಶದಿಂದ ಈಗಾಗಲೇ ಕ್ರಮಗಳು ಕೈಕೊಳ್ಳಲ್ಪಟ್ಟಿವೆ. ಈ ಯೋಜನೆಯಲ್ಲಿ ೮೦ ಕ್ರಾಫ್ಟ ಶಾಲೆಗಳು ಬೇಸಿಕ್ ಶಾಲೆಗಳಾಗಿ ೨೦ ಸಾದಾ ಶಾಲೆಗಳು ಕ್ರಾಫ್ಟ ಶಾಲೆಗಳಾಗಿ ಪರಿವರ್ತನ ಹೊಂದಲಿವೆ.

ಆದರೆ ಮುಂಬಯಿ ರಾಜ್ಯದಲ್ಲಿ ಒಟ್ಟಿಗೆ ಸುಮಾರು ೩೦,೦೦೦ ಪ್ರಾಥಮಿಕ ಶಾಲೆಗಳಿದ್ದು ಅವುಗಳಲ್ಲಿ ಸುಮಾರು ೯೬೦೦೦ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಇವುಗಳಲ್ಲಿ ಈಗ ಕೇವಲ ೧೬೮ ಶಾಲೆಗಳು ಪೂರ್ಣ ಬೇಸಿಕ್ ಎಂದೂ ೨೯೦೨ ಕ್ರಾಫ್ಟ ಶಾಲೆಗಳೆಂದೂ ಪರಿವರ್ತಿಸಲ್ಪಟ್ಟಿವೆ. ಈ ಸಂಖ್ಯೆಗಳನ್ನು ನೋಡಿದರೆ ಎಲ್ಲ ಪ್ರಾಥಮಿಕ ಶಾಲೆಗಳನ್ನು ಮೂಲ ಶಿಕ್ಷಣ ಪದ್ಧತಿಗೆ ಮಾರ್ಪಡಿಸುವ ಕಾರ್ಯವು ಎಷ್ಟು ಅಪಾರವಾಗಿದೆ ಎಂಬ ಸಂಗತಿ ಲಕ್ಷದಲ್ಲಿ ಬರದಿರಲಾರದು. ಆಗಬೇಕಾದ ಕಾರ್ಯವನ್ನು ಕಲ್ಪಿಸಿದರೆ ಆದ ಕಾರ್ಯವು ಕೇವಲ ಶಿಲಮಾತ್ರನೆಂದು ಸಕೃದ್ದರ್ಶನಕ್ಕೆ ಕಾಣಬಹುದು.

ಈ ಪರಿಸ್ಥಿತಿಯಲ್ಲಿ ನಾವು ಹತಾಶರಾಗುವ ಕಾರಣವಿಲ್ಲ. ಬೇಸಿಕ್ ಶಿಕ್ಷಣಕ್ಕೆ ಕೇಂದ್ರ ಸರಕಾರವು ಬದ್ಧಕಂಕಣವಾಗಿದೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕಾಗಿ ಹಣವು ಮೀಸಲಾಗಿ ಇಡಲ್ಪಟ್ಟಿದೆ. ಆದರೆ ಮೂಲಶಿಕ್ಷಣ ಪ್ರಸಾರಕ್ಕೆ ಇವೆಲ್ಲ ಕಾರಣಗಳಿಗಿಂತ ಮೂಲಶಿಕ್ಷಣ ಶಾಸ್ತ್ರದೃಷ್ಟಿಯಿಂದ ಪುರೋಗಾಮಿ ಶಿಕ್ಷಣವೆಂಬ ಕಾರಣವೇ ಹೆಚ್ಚು ಬಲವತ್ತರವಾಗಿದೆ. ಬಾಲಕರ ಜೀವನಕ್ಕೆ ಸಂಬಂಧವಿಲ್ಲದಂಥ ಜ್ಞಾನದ ತುಣುಕುಗಳನ್ನು ಬಾಲಕರ ತಲೆಯಲ್ಲಿ ಬಲವಂತವಾಗಿ ಸೇರಿಸುವ ಹಳೆಯ ಪದ್ಧತಿಯು ಹಳೆಮಾತಾಯಿತು. ಮಕ್ಕಳು ಸ್ವಾಭಾವಿಕವಾಗಿಯೇ ಕೈಕೆಲಸದಲ್ಲಿ ಆಸಕ್ತರಾಗಿರುತ್ತಾರೆ. ಸುತ್ತುಮುತ್ತಲಿನ ಸಾಮಾಜಿಕ ಜೀವನದಲ್ಲಿ ಆಸಕ್ತರಾಗಿರುತ್ತಾರೆ. ಸುತ್ತುಮುತ್ತಲಿನ ನಿಸರ್ಗದಲ್ಲಿಯೂ ಅವರ ಮನಸ್ಸು ಕುತೂಹಲವುಳ್ಳದ್ದಾಗಿರುತ್ತದೆ. ಮನಸ್ಸಿನ ಆಳದಲ್ಲಿ ಹುದುಗಿದ ಈ ಮೂರು ಮೂಲ ಪ್ರೇರಕಗಳ ಮೇಲೆ ಮೂಲಶಿಕ್ಷಣವು ಆಧಾರಿತವಾಗಿದೆ. ಕೈಕೆಲಸದಲ್ಲಿ ಬಾಲಕರ ಆಸಕ್ತಿ ಇರುವದರಿಂದ ಸುತ್ತುಮುತ್ತಲಿನ ಪರಿಸ್ಥಿತಿಯಲ್ಲಿ ಉಪಯುಕ್ತವಾಗುವ ಒಂದು ಉದ್ಯೋಗವನ್ನು ಆರಿಸಿ ಅದರಲ್ಲಿ ಅವರು ಕೆಲ ಮಟ್ಟಿಗಾದರೂ ಪ್ರಾವೀಣ್ಯ ಪಡೆಯುವಂತೆ ಮೂಲಶಿಕ್ಷಣ ಯೋಜನೆಯಲ್ಲಿ ವ್ಯವಸ್ಥೆಯಿದೆ. ಬಾಲಕರು ತಯಾರಿಸಿದ ವಸ್ತುಗಳನ್ನು ಸರಕಾರವೂ ಜನತೆಯೂ ಕೊಳ್ಳುತ್ತವೆ. ಆದರೆ ಈ ಉದ್ಯೋಗ ಕೇವಲ ಆರ್ಥಿಕ ದೃಷ್ಟಿಯಿಂದ ಪ್ರೇರಿತವಾದುದಲ್ಲ. ಅದು ಜ್ಞಾನದ ಸಾಧನ. ಭಾಷೆ, ಗಣಿತ, ಭೂಗೋಲ, ವಿಜ್ಞಾನ ಇವುಗಳ ಜ್ಞಾನವನ್ನು ಸಹಜವಾಗಿ ಕೊಡಲು ಇದೊಂದು ಸಾಧನ. ಬಾಲಕರ ಜೀವನದಲ್ಲಿ ಎರಡನೆಯ ಮುಖ್ಯ ಪ್ರೇರಕವೆಂದರೆ ಸುತ್ತುಮುತ್ತಲಿನ ಸಾಮಾಜಿಕ ಜೀವನ. ಇದರಿಂದ ಶಿಕ್ಷಣ ದೊರೆಯುವಂತೆ ಬಾಲಕರನ್ನು ಸಾಮಾಜಿಕ ಜೀವನದ ಕೆಲವು ಚಟುವಟಿಕೆಗಳಲ್ಲಿ ತೊಡಗಿಸುವದು ಸಾಧ್ಯವಿದೆ. ಶಾಲೆಯ ಸ್ವಚ್ಛತೆ, ಆಹಾರದ ಸ್ವಚ್ಛತೆ, ಹಳ್ಳಿಯ ಹಬ್ಬ ಹುಣ್ಣಿವೆ, ಆಟ–ನೋಟ, ಜಾತ್ರೆ, ಉತ್ಸವ ಇತ್ಯಾದಿ ಕಾರ್ಯಕ್ರಮಗಳಲ್ಲಿ ಬಾಲಕರು ಶಿಸ್ತಿನಿಂದ ಭಾಗವಹಿಸುವಂತೆ ಮಾಡಿ ಅವುಗಳ ಮುಖಾಂತರ ಆರೋಗ್ಯ, ಇತಿಹಾಸ, ಪೌರನೀತಿ ಇತ್ಯಾದಿ ವಿಷಯಗಳ ಸಕ್ರಿಯ ಜ್ಞಾನ ಮಾಡಿಕೊಡುವದು ಸಾಧ್ಯ. ಇನ್ನು ಬಾಲಕರ ಜೀವನದ ಮೂರನೆಯ ಪ್ರೇರಕವೆಂದರೆ ಸೃಷ್ಟಿನಿರೀಕ್ಷಣ. ನದಿ, ಗುಡ್ಡ, ಕೊಳ್ಳ,

ಕೆರೆ, ಕಾಲುವೆ, ತಪಸಲು, ಗಿಡ, ಹೊಲ, ತೋಟ, ಮುಗಿಲು, ಸೂರ್ಯ, ಚಂದ್ರ ಇತ್ಯಾದಿ ಸೃಷ್ಟ ವಸ್ತುಗಳ ಪ್ರತ್ಯಕ್ಷ ಅನುಭವವಾಗುವಂತೆ ಬಾಲಕರನ್ನು ಯೋಗ್ಯ ಚಟುವಟಿಕೆಗಳಲ್ಲಿ ತೊಡಗಿಸಿ ಅವುಗಳ ಮುಖಾಂತರ ಭೂಗೋಲ ವಿಜ್ಞಾನಗಳ ಜ್ಞಾನ ಮಾಡಿಕೊಡುವದು ಜ್ಞಾನ ಸಂಪಾದನದ ಸ್ವಾಭಾವಿಕ ಪದ್ಧತಿ. ಜ್ಞಾನವು ಜೀವನದ ಕಾರ್ಯಗಳಲ್ಲಿ ಅಡಕವಾಗಿದೆ. ಆ ಕಾರ್ಯಗಳನ್ನು ಬಾಲಕರಿಂದ ಸರಿಯಾಗಿ ಮಾಡಿಸಿ ಅವುಗಳಲ್ಲಿ ಸಮವೇತವಾದ ಜ್ಞಾನವನ್ನು ಆಮೇಲೆ ಚರ್ಚೆಯಿಂದ ವಿಂಗಡಿಸಿ ಸ್ಥಿರೀಕರಿಸುವದೇ ಮೂಲಶಿಕ್ಷಣದ ಸಮವಾಯ ಪದ್ಧತಿ. ಜೀವನದಲ್ಲಿ ಕಾರ್ಯಕ್ಕೆ ಮಹತ್ವವಿರುವದರಿಂದ ಮೂಲಶಿಕ್ಷಣವು ಕಾರ್ಯಕ್ಕೇ ಪ್ರಾಧಾನ್ಯ ಕೊಡುತ್ತದೆ. ಆದರೆ ಈ ಕಾರ್ಯ ಕೇವಲ ಯಾಂತ್ರಿಕವಲ್ಲ, ಅಜ್ಞಾನಜನ್ಯವಲ್ಲ. ಇದು ಜ್ಞಾನಯುಕ್ತ. ಇಷ್ಟೇ ಅಲ್ಲ, ಸದ್ಭಾವನಾಯುಕ್ತ. ಜ್ಞಾನಯುಕ್ತ, ಸದ್ಭಾವನಾಯುಕ್ತ ಕರ್ಮಾಚರಣೆಯೇ ಮೂಲಶಿಕ್ಷಣದ ತಿರುಳು. ಇದನ್ನು ಶಿಕ್ಷಣದಲ್ಲಿಯ ಕರ್ಮಯೋಗ ಪದ್ಧತಿ ಎಂದು ಕರೆದರೆ ಏನೂ ತಪ್ಪಾಗಲಾರದು. ಈ ತತ್ವಗಳನ್ನು ಲಕ್ಷಿಸಿದರೆ ಈ ಶಿಕ್ಷಣ ಪದ್ಧತಿಯು ಪುರೋಗಾಮಿಯಷ್ಟೇ ಅಲ್ಲ, ಜಗತ್ತಿನಲ್ಲಿ ಶಿಕ್ಷಣವು ಸಾಗಬೇಕಾದ ಒಂದೇ ಒಂದಾದ ಸ್ವಾಭಾವಿಕ, ನಿರ್ದೋಷ ಪದ್ಧತಿಎಂದು ನಿರ್ಭಯವಾಗಿ ಹೇಳಬಹುದು. ಭಾರತಕ್ಕೆ ಮಹಾತ್ಮರು ನೀಡಿದ ಅನೇಕ ಅಮೂಲ್ಯ ಕೊಡುಗೆಗಳಲ್ಲಿ ಇದೂ ಒಂದು. ಅಜ್ಞಾನದಿಂದಾಗಲಿ, ಮೋಹದಿಂದಾಗಲಿ ನಾವದನ್ನು ಉಪೇಕ್ಷಿಸಿದರೆ ತಪ್ಪು ಯಾರದು ?

ಆಯಾ ಕಾಲದಲ್ಲಿಯ ಶಿಕ್ಷಣದ ಸ್ಥಾನಮಾನಗಳು

ವಿಮುಕ್ತಿ--ವಿಲಾಸ--ವಿಕಾಸ

ಲೇಖಕರು:– **ಎಫ್. ಸಿ. ಉಣಕಲ್ಲ**

ಶಿಕ್ಷಣದ ಸ್ಥಾನಮಾನಗಳ ದೃಷ್ಟಿಯಿಂದ ಪ್ರಾಚೀನ ಕಾಲ (ವೇದಕಾಲ) ವನ್ನು ವಿಮುಕ್ತಿ ಕಾಲವೆಂದು ಬ್ರಿಟಿಶರ ಆಡಳಿತೆಯ ಕಾಲವನ್ನು ವಿಲಾಸಕಾಲವೆಂದು ಹಾಗು ಅರ್ವಾಚೀನ (ಈಗಿನ) ಕಾಲವನ್ನು ವಿಕಾಸ ಕಾಲವೆಂದು ಸ್ಥೂಲವಾಗಿ ವಿಂಗಡಿಸಬಹುದು; ಈ ವಿಚಾರ ಪ್ರಣಾಲಿಯ ಸತ್ಯಾಸತ್ಯತೆಯ ಬಗೆಗೆ ವಿಚಾರ-ನಾಹಿಸಿಯನ್ನು ಈ ರೀತಿಯಾಗಿ ಮುಂದರಿಸಬಹುದು; ಅದು ಹೀಗೆ :—

ವಿಮುಕ್ತಿಕಾಲ:– ವೇದಕಾಲದಲ್ಲಿ (ಕ್ರಿ. ಪೂ. ೬,೦೦೦ ವರ್ಷಗಳ ಹಿಂದಿನ ಕಾಲ) ಬ್ರಾಹ್ಮಣನ ಮಗ ಬ್ರಾಹ್ಮಣ, ವೈಶ್ಯನ ಮಗ ವೈಶ್ಯ ಎಂಬ ಭೇದಭಾವಗಳಿರಲಿಲ್ಲ. " ಚಾತುರ್ವರ್ಣ್ಯಂ ಗುಣಕರ್ಮ ವಿಭಾಗಶಃ " ಎಂಬಂತೆ ಅವರವರ ಕರ್ಮ (ಉದ್ಯೋಗ) ಕ್ಕೆ ತಕ್ಕಂತೆ ವರ್ಣವನ್ನು ಕಲ್ಪಿಸಲಾಗುತ್ತಿತ್ತು. ವೇದಮಂತ್ರಗಳನ್ನು ರಚಿಸುವವನು ಬ್ರಾಹ್ಮಣ, ಯುದ್ಧ ಮಾಡುವವನು ಕ್ಷತ್ರಿಯನು, ಉದ್ಯೋಗ ಮಾಡುವವನು ವೈಶ್ಯನೆಂದು ಕರೆಯಲಾಗುತ್ತಿತ್ತು. ಒಂದೇ ಕುಟುಂಬದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ– ಹೀಗೆ ಮೂವರೂ ಇರುವ ಸಂಭವವಿತ್ತು. ಇವರೆಲ್ಲರ ಶಿಕ್ಷಣದ ಧ್ಯೇಯವು ಮುಕ್ತಿ ಪಡೆಯುವದು ಅರ್ಥಾತ್ ಆಧ್ಯಾತ್ಮ ಬೆಳವಣಿಗೆಯೇ ಆಗಿತ್ತು. ಗುರುಕುಲ ಶಿಕ್ಷಣವು ಆಗ ಪ್ರಚಲಿತವಾಗಿತ್ತು. ಗುರುಗಳು ತಮ್ಮ ಶಿಷ್ಯರನ್ನು ಹೊಟ್ಟೆಯ ಮಕ್ಕಳಂತೆ ಕಾಣುತ್ತಿದ್ದರು; ಶಿಷ್ಯರಾದರೂ ಗುರುಗಳಲ್ಲಿ ಪಿತೃಭಕ್ತಿಯನ್ನಿಟ್ಟು ಹೇಳಿದ ಕೆಲಸವನ್ನೆಲ್ಲ ನಿಷ್ಠೆಯಿಂದ ಮಾಡುತ್ತಿದ್ದರು. ನಿಸರ್ಗದೇವತೆಯ ಸೌಂದರ್ಯದ ಮಡಿಲಿನಲ್ಲಿ ಅಂದರೆ ನದೀತೀರದ ಪರ್ಣಕುಟೀರದಲ್ಲಿ ವಿದ್ಯಾರ್ಜನೆ ನಡೆಯುತ್ತಿತ್ತು. ಶಿಷ್ಯರು ಆಗ ರೂಢಿಯಲ್ಲಿದ್ದ ಸಂಸ್ಕೃತದಲ್ಲಿ ವೇದ ಪಠನ ಮಾಡುತ್ತಿದ್ದರು. ಹತ್ತಿರದ ಹೊಲಗಳಲ್ಲಿ ಗುರು–ಶಿಷ್ಯರು ಕೂಡಿಯೇ ಕೆಲಸ ಮಾಡುವದರಲ್ಲಿ ತನ್ಮಯರಾಗುತ್ತಿದ್ದರು. ಸ್ತ್ರೀಯರಿಗೂ ಪುರುಷರಿಗೂ ಸಮಾನವಾದ ವಿದ್ಯೆ ದೊರೆಯುತ್ತಿತ್ತು. ಸ್ತ್ರೀಯರು ವಿದ್ವತ್‌ಸಭೆಗಳಲ್ಲಿ ಭಾಗವಹಿಸುತ್ತಿದ್ದರಲ್ಲದೆ ವೇದ ಸೂಕ್ತಗಳನ್ನು ಸಹ ರಚಿಸಿದ್ದಾರೆ. ಇದಲ್ಲದೆ ಗುರುಗಳು ಸಂಚಾರಕ್ಕೆ ಹೋದಾಗ ಬ್ರಾಹ್ಮಣ ಸ್ತ್ರೀಯರು ಶಿಷ್ಯರಿಗೆ ಪಾಠ ಹೇಳು

ವಷ್ಟು ಪಂಡಿತರಾಗಿದ್ದರು. ಮಕ್ಕಳು ದೃಢಕಾಯರೂ, ಸುಸಂಸ್ಕೃತರೂ, ಸತ್‌ಶೀಲರೂ ಆಗಿದ್ದರು. ಒಟ್ಟಿನಲ್ಲಿ ಲೌಕಿಕ ವ್ಯವಹಾರಕ್ಕಿಂತ ಪಾರಮಾರ್ಥದ ಕಡೆಗೆ ಅಂದಿನವರ ಒಲವು ಹೆಚ್ಚಾಗಿತ್ತು. ಸತ್ಯ, ಅಹಿಂಸೆ, ಆದರ್ಶಗಳ ತಳಹದಿಯ ಮೇಲೆ ಭದ್ರವಾದ, ಸುಸಂಘಟಿತವಾದ ಸುವ್ಯವಸ್ಥಿತವಾದ ಸಮಾಜವು ರಚಿತವಾಗಿತ್ತು.

ಬ್ರಿಟಿಶರು ಹಿಂದುಸ್ತಾನಕ್ಕೆ ಬಂದಾಗ ಇದ್ದ ಸಾಮಾಜಿಕ ಪರಿಸ್ಥಿತಿ ಹಾಗು ಶಿಕ್ಷಣದ ವ್ಯವಸ್ಥೆ :–

ಬ್ರಿಟಿಶರು ಹಿಂದುಸ್ತಾನಕ್ಕೆ ಬಂದಾಗ ಹಳ್ಳಿಯ ಆಡಳತೆಯ ಘಟಕಗಳಾದ ಗ್ರಾಮಪಂಚಾಯ್ತಿಗಳು ರೂಢಿಯಲ್ಲಿದ್ದವು. ಈ ಪಂಚಾಯ್ತಿಗಳ ಕೆಳಗೆ ಹಳ್ಳಿಯ ಆಡಳತೆಯು (ನ್ಯಾಯ ನಿರ್ಣಯ ಸಹಿತ) ಯಶಸ್ವಿಯಾಗಿ ನಡೆಯುತ್ತಿತ್ತು. ಆಗಿನ ಮುಂಬಯಿ ಗವ್ಹರ್ನರರಾದ ಮೌಂಟ ಸ್ಟುಅರ್ಟ ಎಲ್‌ಫಿನ್‌ಸ್ಟನ್‌ರವರು ಕ್ರಿ. ಶ. ೧೮೧೯ರ ತಮ್ಮದೊಂದು ವರದಿಯಲ್ಲಿ "ಹಳ್ಳಿಗಳ ಆಡಳತೆಯ ಸೂತ್ರವು ಗ್ರಾಮಪಂಚಾಯ್ತಿಗಳ ಕೈಯಲ್ಲಿದ್ದು ನಮ್ಮ ಸರಕಾರದ ಸೂತ್ರ ನಿಂತರೂ ಅವು ತಮ್ಮ ಕೆಲಸವನ್ನು ನಿರ್ವಿಘ್ನವಾಗಿ ಯಶಸ್ವಿಯಾಗಿ ಸಾಗಿಸಬಲ್ಲವು" ಎಂದು ಕಾಣಿಸಿದ್ದಾರೆ. ಇಂತಹ ಆಗಿನ ಪದ್ಧತಿಯಿಂದ ಹಿಂದು ಸಂಸ್ಕೃತಿಯು ಅಚ್ಚಳಿಯದೆ ಉಳಿಯಿತು. ಈ ಹಳ್ಳಿಯ ಘಟಕಗಳ ನೇತೃತ್ವದಲ್ಲಿ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳು ನಡೆಯುತ್ತಿದ್ದವು. ಸಾರ್ವಜನಿಕ ಮಂದಿರದಲ್ಲಿ, ಗುಡಿ, ಮಠ, ಮಸೀದೆ, ಬೌದ್ಧ ಅಗ್ರಹಾರ, ವೈದ್ಯಶಾಲೆಗಳಲ್ಲಿ ಶಿಕ್ಷಣ ನಡೆಯುತ್ತಿತ್ತು. ಶಿಕ್ಷಕನು ಹಳ್ಳಿಯ ನಾಯಕನಿಂದ ಹಿಡಿದು ಕಾವಲುಗಾರನವರೆಗೆ ಎಲ್ಲರಿಗೂ ಬೇಕಾಗಿದ್ದನು. ಎಲ್ಲ ಚಟುವಟಿಕೆಗಳಲ್ಲಿ ಶಿಕ್ಷಕನದೇ ಅಗ್ರಸ್ಥಾನ. ಬ್ರಾಹ್ಮಣ ವರ್ಗದವರು ಅದರಲ್ಲಿ ಗುರುವರ್ಗದವರು (ಆಚಾರ್ಯರು) ವಿದ್ಯಾದಾನ ಮಾಡುವದೇ ತಮ್ಮ ಪವಿತ್ರ ಕರ್ತವ್ಯವೆಂದು ತಿಳಿದು ಕರೆದವರ ಮನೆಗೆ ಹೋಗಿ ಪುಕ್ಕಟೆಯಾಗಿ ಶಿಕ್ಷಣ ಕೊಡುತ್ತಿದ್ದರು. ಗಿಡದ ಕೆಳಗೆ, ಗುಡಿಸಲಿನಲ್ಲಿ ವ್ಹರಾಂಡಾದ ಉಸುಕಿನಲ್ಲಿ ವಿದ್ಯಾರ್ಥಿಗಳು ಅಕ್ಷರಗಳನ್ನು ತೀಡುತ್ತಿದ್ದರು. ಓದು, ಬರಹ, ಗಣಿತ ಕಲಿಸಲಾಗುತ್ತಿತ್ತು. ಕೆಲವು ಶ್ರೀಮಂತ ವ್ಯಾಪಾರಸ್ಥರ, ಒಕ್ಕಲಿಗರ ಮಕ್ಕಳಿಗೆ ಈ ಶಿಕ್ಷಣ ಕೊಡಲ್ಪಡುತ್ತಿತ್ತು. ಹಳ್ಳಿಗರು ಆಚಾರ್ಯರಿಗೆ ಪ್ರೀತಿಯಿಂದ ಭೂಮಿಗಳನ್ನಾಗಲಿ, ಅಥವಾ ಸುಗ್ಗಿಯ ಕಾಲದಲ್ಲಿ ಕಾಳುಕಡಿಗಳನ್ನಾಗಲಿ ಕೊಡುತ್ತಿದ್ದರು. ಕ್ರಮೇಣ ಬ್ರಿಟಿಶರು ಈ ಗ್ರಾಮಪಂಚಾಯ್ತಿಯ ಆಡಳತೆಯನ್ನೇ ನಾಶಮಾಡಿದರು. ಈ ಸಂದರ್ಭದಲ್ಲಿ ಪಂಡಿತ ಜವಾಹರರು "ಬ್ರಿಟಿಶರ ಆಡಳತೆಯ ಹಳ್ಳಿಯ ಘಟಕಗಳಾದ ಗ್ರಾಮಪಂಚಾಯ್ತಿಗಳ ವಿನಾಶಕ್ಕೆ ಕಾರಣವಾದುದು ನಮ್ಮ ದುರ್ದೈವವೇ ಸರಿ" ಎಂದು ತಮ್ಮ "Discovery of India" P. P. 26–27 ಎಂಬ ಹೊತ್ತಿಗೆಯಲ್ಲಿ ಉಲ್ಲೇಖಿಸಿದ್ದಾರೆ. ಗಾಂಧೀಜಿಯವರು ಸಹ ೧೯೩೧ ರಲ್ಲಿ ಅಂತರ ರಾಷ್ಟ್ರೀಯ ರಾಯಲ್ ಇನ್‌ಸ್ಟಿಟ್ಯೂಟದಲ್ಲಿ ಮಾತನಾಡುತ್ತ "ನಮ್ಮ ದೇಶವು ೫೦ ಅಥವಾ ೧೦೦ ವರ್ಷಗಳಿಗಿಂತ ಹಿಂದೆ ಇದ್ದುದಕ್ಕಿಂತಲೂ ಬ್ರಿಟಿಶರ ಆಡಳತೆಯಲ್ಲಿ ನಿರಕ್ಷರಿಗಳ ಸಂಖ್ಯೆ ಹೆಚ್ಚಾಗಿದೆ" ಎಂದಿದ್ದಾರೆ.

ವಿಲಾಸಕಾಲ :— ಕ್ರಿ. ಶ. ೧೮೩೫ನೆಯ ಇಸವಿಯಲ್ಲಿ ಶಿಕ್ಷಣ ಪದ್ಧತಿಯ ದಿಶೆಯೇ ಬದಲಾಯಿತು. ಲಾರ್ಡ ಮೆಕಾಲೆಯು (ಗವ್ಹರ್ನರ ಜನರಲ್ಲರ ಕೌನ್ಸಿಲಿನಲ್ಲಿ ಕಾಯಿದೆ ಸದಸ್ಯ) ೧೮೩೫ ರಲ್ಲಿ ತನ್ನ ಮಿನಿಟಿನಲ್ಲಿ ಆಗ ಹಿಂದೂ ದೇಶದಲ್ಲಿ ರೂಢವಾಗಿದ್ದ ಶಿಕ್ಷಣ ಪದ್ಧತಿಯಲ್ಲಿ ತನಗೆ ಬೇಕಾದಂತೆ ಮಾರ್ಪಾಟು ಮಾಡಿಕೊಂಡನು. ಕೆಲವೊಂದು ಜನ ಭಾಷಾಂತರಕಾರರು ಆಡಳತೆ ನಡೆಸಲು ಸಾಕೆಂದೆಣಿಸಿ ಇಂಗ್ಲಿಷ ಶಿಕ್ಷಣ ಕೊಡಲು ಸೂಚನೆ ತಂದನು. ಮುಂದೆ ಬಂದ ಗವ್ಹರ್ನರನಾದ ಲಾರ್ಡ ವುಲಿಯಂ ಬೆಂಟಿಂಕನು ಮೆಕಾಲೇನ ಅಭಿಪ್ರಾಯವನ್ನೇ ಎತ್ತಿಹಿಡಿದು ಅಮಲಿನಲ್ಲಿ ತಂದನು. ಯುರೋಪದ ಸಾಹಿತ್ಯ ಹಾಗು ವಿಜ್ಞಾನಗಳಿಗೆ ಬೆಲೆ ಕೊಡಲು ಅನುವಾಯಿತು. ಅದಕ್ಕಾಗಿ ಸರಕಾರವು ಫಂಡು ಕೊಡಮಾಡಿತು. ಆಂಗ್ಲ ಭಾಷೆಯ ಮುಖಾಂತರ ಶಿಕ್ಷಣ ಕೊಡುವದು ಜಾರಿಯಲ್ಲಿ ಬಂದಿತು. ರಾಜಾರಾಮ ಮೋಹನರಾಯರಂಥ ಮುಂದಾಳುಗಳಿಂದ ಇಂಗ್ಲಿಷ ಶಿಕ್ಷಣಕ್ಕೆ ಉತ್ತೇಜನ ದೊರೆಯಿತು.

ಪರಿಣಾಮ :— ಇದರಿಂದ ಕುರುಡ ನಂಬಿಕೆ, ಭಾವಿಕತನಗಳೆಲ್ಲ ಮಾಯವಾಗಿ ಹೊಸ ಬೆಳಕು ಉಂಟಾಯಿತೇನೊ ನಿಜ; ಆದರೆ, ಶಿಕ್ಷಣವೆಂದರೆ ಕೇವಲ ಜ್ಞಾನ ಕೊಡುವದಲ್ಲ! ಅದೊಂದು ಸಂಸ್ಕೃತಿ; ಅದು ತನ್ನ ವಾತಾವರಣದಲ್ಲಿ ಬಾಳಿ ಬೆಳೆಯಬೇಕು. ಪಾಶ್ಚಿಮಾತ್ಯ

ಸಂಸ್ಕೃತಿಯನ್ನು ತಂದು ಆರ್ಯ ಸಂಸ್ಕೃತಿಯನ್ನು ಅಳಿಯುವದು ಒಳಿತಾಗಲಿಲ್ಲ; ಏಕೆಂದರೆ ಮಾನವನ ಮನಸ್ಸು ಬಿಳಿಯ ಕಾಗದವಲ್ಲ ಏನಾದರೂ ಬರೆಯಲು. ಮನಸ್ಸು ಪೌರ್ವಾತ್ಯ ದೇಶದ್ದು, ಸಂಸ್ಕೃತಿ ಪಾಶ್ಚಿಮಾತ್ಯರದು; ಆದ್ದರಿಂದ ಗೋಕುಲಷ್ಟಮಿಗೂ ಇಮಾಮ ಸಾಹೇಬರಿಗೂ ಗಂಟು ಹಾಕಿದಂತೆ ಅಸಂಬದ್ಧವಾಗಿ ಪರಿಣಮಿಸಿತು. ಮನೆಯಲ್ಲಿ ಮಾತನಾಡುವ ಭಾಷೆಯೊಂದು; ಸಾಲೆಯಲ್ಲಿ ಕಲಿಯುವ ಭಾಷೆ ಇನ್ನೊಂದು. ಪರದೇಶದ ಪ್ರಾಣಿಗಳ ವರ್ಣನೆ, ಪರದೇಶದ ಸಂಸ್ಕೃತಿ, ಇತಿಹಾಸ, ಕಲಿಸುವ ಪದ್ಧತಿ, ಅಭ್ಯಾಸ ಪತ್ರಿಕೆಯಲ್ಲಿ ಬದಲಾವಣೆ– ಈ ಕಾರಣಗಳಿಂದ ಶಿಕ್ಷಕರಿಗೆ ತಿಳಿದುಕೊಳ್ಳಲು, ಕಲಿಸಲು ತೊಂದರೆಯಾಯಿತಲ್ಲದೆ ವಿದ್ಯಾರ್ಥಿಯು ಸಮಾಜ ವಾತಾವರಣದಿಂದ ಬೇರ್ಪಡಿಸಿದಂತಾಗಿ ಕೃತ್ರಿಮ ವಾತಾವರಣದಲ್ಲಿ ಇರಬೇಕಾಗಿ ಬಂದದ್ದು ದುಃಖಪರ್ಯವಸಾನ! ಇದರಿಂದ ಸಮಾಜದಲ್ಲಿ ಇಂಗ್ಲಿಷ ಬಲ್ಲವರು, ಇಂಗ್ಲಿಷ ಬಾರದಿದ್ದವರು ಎಂಬ ಎರಡು ಪಂಗಡಗಳನ್ನು ಹುಟ್ಟಿಸಿದಂತಾಯಿತು. ಮೊದಲಿದ್ದ ಗುರು–ಶಿಷ್ಯರ ಭಾವನೆ ದೂರಾಯಿತು. ಸರಕಾರಿ ನೌಕರಿ ದೊರಕಿಸುವದು ಶಿಕ್ಷಣದ ಗುರಿಯಾಯಿತು. ವಿಜ್ಞಾನ, ಯಾಂತ್ರಿಕ ಶಿಕ್ಷಣ ಹಾಗು ವ್ಯವಹಾರಕ್ಕೆ ಸಂಬಂಧಿಸಿದ ಶಿಕ್ಷಣ ನಿಂತಿತು. ಆಂಗ್ಲ ಶಿಕ್ಷಣದಿಂದ ನಾಗರಿಕತೆಯ ಹಾಗು ಸಮಾಜದ ಮಟ್ಟ ಎತ್ತರಿಸುವದು ಸಾಧ್ಯವಾಗದಾಯಿತು. ಕೇವಲ ಪುಸ್ತಕ ಜ್ಞಾನವು ಕೊಡಲ್ಪಟ್ಟ ವ್ಯಕ್ತಿಯು ಪರಾವಲಂಬಿಯಾದನು; ಸಮಾಜದ ಹಾಗು ನಾಡಿನ ಸೇವೆ ಮರೆತನು. ಅಂತೂ ಶಿಕ್ಷಣದ ಧ್ಯೇಯವು ವಿಲಾಸದ ಮಟ್ಟಕ್ಕೆ ಇಳಿಯಿತು.

ವಿಕಾಸ ಕಾಲ:— ಬ್ರಿಟಿಶರ ಆಡಳಿತೆಯಲ್ಲಿ ಮೇಲ್ಕಾಣಿಸಿದಂತೆ ಶಿಕ್ಷಣ ಪದ್ಧತಿಯು ಸದೋಷವಾಗಿದ್ದುದರಿಂದ ಅದರಲ್ಲಿ ಆಮೂಲಾಗ್ರ ಬದಲಾವಣೆಯು ನಾಡಿನ ಹಿತದ ದೃಷ್ಟಿಯಿಂದ ಅನಿವಾರ್ಯವೆಂದೆನಿಸಿತು. ಆದುದರಿಂದಲೇ ಅಂತಹ ಸದೋಷ ಪದ್ಧತಿಯನ್ನು ಬಿಟ್ಟು ಅದರ ಸ್ಥಳದಲ್ಲಿ ಗಾಂಧೀಜಿಯವರು ಹಾಕಿಕೊಟ್ಟ ಜೀವನ ಶಿಕ್ಷಣವು ನಮ್ಮ ದೇಶದ ಪರಿಸ್ಥಿತಿಗೆ ಒಗ್ಗುವಂತಹದಿದೆ; ಸತ್ಯ, ಅಹಿಂಸೆ, ಸಹಕಾರಗಳ ತಳಹದಿಯ ಮೇಲೆ ಭದ್ರವಾಗಿ ನಿಲ್ಲುವ ಸಮಾಜದ ರಚನೆಗೆ ಪೋಷಕವಾಗಿ ಮಗುವಿನ ಬುದ್ಧಿಯ ಬಾಗಿಲನ್ನು ತೆರೆದು ಮನಸ್ಸನ್ನು ಅರಳಿಸುತ್ತದೆ. ಡಾಕ್ಟರ ಝಾಕೀರ ಹುಸೇನರ ಅಭಿಪ್ರಾಯದ ಮೇರೆಗೆ ರಾಷ್ಟ್ರೀಯ ಶಾಲೆಗಳ ಹುಡುಗರ ವಯೋಮಾನದ ಅವಧಿ ಏಳು ವರುಷಗಳಿಂದ ಹದಿನಾಲ್ಕು ವರುಷಗಳ ವರೆಗೆ; ಈ ಅವಧಿಯಲ್ಲಿ ಬಾಲಕನು ನೂಲುವದು, ನೇಯುವದು, ಬಡಿಗತನ, ಒಕ್ಕಲತನ–ಇವುಗಳಲ್ಲಿ ಯಾವದಾದರೊಂದು ಉದ್ಯೋಗ (ಕಾಯಕ) ವನ್ನು ಕೈಕೊಳ್ಳಬೇಕಾಗುವದು; ಆಲಸ್ಯತನ, ಜಾತಿಭೇದಗಳಿಗೆ ಅಲ್ಲಿ ಎಡೆ ಇಲ್ಲ; ಕಟುಕನೂ ಕೂಡ ಉಚ್ಚನೀಚ ಭಾವನೆಗಳೆಂಬ ಕವಚಗಳನ್ನು ಕಳಚಿ–ಕಲೆಗಾರನಾಗಬಲ್ಲನು. ಕಾಯಕವೇ ಆತನ ಕೈಲಾಸ; ಅಂದರೆ ಕರ್ಮವೇ ಆತನ ಧರ್ಮ. ಇಂತಹ ಶಾಲೆಗಳಲ್ಲಿಯ ಬಾಲಕನು ೭ ವರುಷಗಳ ವರೆಗೆ ತರಬೇತಿಯನ್ನು ಪಡೆದು ಕೈಗಾರಿಕೆಯಲ್ಲಿ ನಿಪುಣನಾಗಿ ಸ್ವಾವಲಂಬಿಯಾಗಿ ಅದರಿಂದ ಬಂದ ಉತ್ಪನ್ನದಿಂದ ಸುಖಜೀವಿಯಾಗಿ ಬಾಳಬಲ್ಲನು.

ಜೀವನ ಶಿಕ್ಷಣ ಸಾಲೆಗಳಲ್ಲಿ, ಮೂಲೋದ್ಯೋಗದ ಮುಖಾಂತರವಾಗಿ ಅಭ್ಯಾಸಪತ್ರಿಕೆಯಲ್ಲಿಯ ವಿಷಯಗಳನ್ನು ಸಾಧ್ಯವಿದ್ದಲ್ಲೆಲ್ಲ ನೈಜವಾಗಿ ಅನುಬಂಧೀಕರಿಸಲಾಗುವದು. ಅಂದರೆ ಜ್ಞಾನವು ವ್ಯಾವಹಾರಿಕವಾಗಿ ಪ್ರತ್ಯಕ್ಷವಾಗಿ ಅನುಭವಗಳಿಂದ ಹೊರ–ಹೊಮ್ಮುವದು. ಸಫಾಯಿ ಮುಂತಾದ ಕಾರ್ಯಕ್ರಮಗಳಿಂದ ಕೆಲಸವು ಕೀಳೆಂದು ತೆಗಳದೆ ಮಗುವು ಸೇವಾತತ್ಪರನಾಗುವನು; ಇಂತಹ ಸಾಲೆಗಳಲ್ಲಿ ಪ್ರಚಲಿತವಿರುವ ಕೌಟುಂಬಿಕ ಜೀವನದಿಂದ ಸಹಜೀವನತತ್ವ ಅರಿತುಕೊಳ್ಳುವನು. ಮಂತ್ರಿಮಂಡಳದ ರಚನೆ, ಹಾಗು ಅದರ ಕಾರ್ಯಕಲಾಪಗಳ ಯೋಜನೆಯು ಪ್ರಜಾಪ್ರಭುತ್ವದ ತಳಹದಿ ಹಾಕಿಕೊಡುವದು. ಈ ಶಿಕ್ಷಣ ಪದ್ಧತಿಯಿಂದ ಪ್ರತಿಯೊಬ್ಬನು ಶ್ರಮಜೀವಿಯಾಗುವದರಿಂದ ಶೋಷಣರಹಿತ ಸಮಾಜದ ರಚನೆಯಾಗುತ್ತದೆ; ಸಮಾಜದಲ್ಲಿಯ ದ್ವಂದ್ವಗಳನ್ನು ಅಂದರೆ, ಇಂಗ್ಲಿಷ ಬಲ್ಲವರು ಇಂಗ್ಲಿಷ ಬಾರದಿದ್ದವರು, ಬಡವರು–ಬಲ್ಲಿದರು, ಪಂಡಿತರು–ಪಾಮರರು ಇತ್ಯಾದಿಗಳನ್ನು ನಿರ್ಮೂಲನಗೊಳಿಸುತ್ತದೆ. ರಾಷ್ಟ್ರೀಯ ಹಬ್ಬಗಳ ಆಚರಣೆಯಿಂದ ಮಕ್ಕಳಲ್ಲಿ ರಾಷ್ಟ್ರೀಯತೆಯು ಜಾಗೃತವಾಗುತ್ತದೆ. ಎಲ್ಲ ಮಕ್ಕಳೂ ಒಂದೆಡೆ ಸೇರುವದು, ಆಟ, ಚರ್ಚಾಕೂಟ, ಪ್ರದರ್ಶನ, ಹಬ್ಬಗಳ ಹಾಗು ಮಕ್ಕಳ ಮತ್ತು ಪಾಲಕರ ದಿನಾಚರಣೆಗಳು, ಪ್ರವಾಸ–ಇತ್ಯಾದಿ ಚಟುವಟಿಕೆಗಳಲ್ಲಿ ಒಂದೇ ಮನೆಯ

ಮಕ್ಕಳಂತೆ ಭೇದಭಾವಗಳಿಲ್ಲದೆ ಸಹಕಾರ ಪ್ರೇಮಗಳಿಂದ ಭಾಗವಹಿಸುವದರಿಂದ ಸಾಂಘಿಕ ಜೀವನ ತರಬೇತು ಅವರಿಗೆ ಸ್ವಾಭಾವಿಕವಾಗಿಯೇ ಲಭಿಸುವದು. ಜೀವನ ಶಿಕ್ಷಣವು ಮಕ್ಕಳ ಜೀವನದ ಉಸಿರಾಗಿ, ಅವರು ಸ್ವಾವಲಂಬಿಗಳಾಗಿ, ಸಹಜೀವನ ಸಮಾಜದ ಸೇವಕರಾಗಿ, ಸತ್‌ಶೀಲರಾಗಿ, ಸುಸಂಸ್ಕೃತ ನಾಗರಿಕರಾಗಿ ನಾಡಿನ ಸಂಪತ್ತಿನ ದ್ಯೋತಕಗಳಾದ ಮುದು ಮಕ್ಕಳಿಗೆ ತಕ್ಕ ಸಂಸ್ಕಾರಕೊಡುವದೇ ಅದರ ಅಂತಿಮ ಗುರಿಯಾಗಿದೆ. ದೈಹಿಕ-ಬೌದ್ಧಿಕ-ಆಧ್ಯಾತ್ಮಿಕ ವಿಕಾಸವೆಂಬ ತ್ರಿವೇಣಿ ಸಂಗಮದಲ್ಲಿ ಮಕ್ಕಳು ಮಿಂದು ಪವಿತ್ರ ಜೀವನವನ್ನು ಸುಗಮವಾಗಿ ಸಾಗಿಸಲು ಸಮರ್ಥರಾಗುವಂತೆ ನೋಡಿಕೊಳ್ಳುವದೇ ಇಂದಿನ ಜೀವನ ಶಿಕ್ಷಣ ಮಂದಿರಗಳ ಧ್ಯೇಯವಾಗಿದೆ. ವಿಕಾಸವು ಈ ಶಿಕ್ಷಣದ ಗುರಿಯಿದ್ದರೂ ಮುಕ್ತಿ ಪಡೆಯಲು ಇದೊಂದು ಸಾಧನವಾಗುವಂತಿದೆ.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋಶಿ, ಮತ್ತು

ಶ್ರೀ. ಜಿ. ಡಿ. ಮಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. **ಬೆಲೆ ೧-೧೨-೦** ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ. ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟೆ, ಪುಣೆ.

೧೯೫೭ನೆಯ ಇಸವಿಯಿಂದ ಪ್ರಾರಂಭವಾಗುವ ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

ಶೇಲಾರ ಕೃತ

ಪ್ರಾಥಮಿಕ ಭೂಮಿತಿ

[ಕ್ಷೇತ್ರಫಲ ಘನಫಲ ಸಹಿತ]

೪ ರಿಂದ ೭ನೆಯ ವರ್ಗದ ವರೆಗಿನ ವಿಷಯವನ್ನೆಲ್ಲ ಒಳಗೊಂಡಿದೆ.

ಬೆಲೆ: ೧ರೂ. ೮ಆಣೆ ಮಾತ್ರ

ದೊರೆಯುವ ಸ್ಥಳ:-

ಸಾಯಿ ಪಬ್ಲಿಶಿಂಗ್ ಹಾವುಸ್,

ವಿಜಯ ರೋಡ, ಧಾರವಾಡ.

ಇದೇ ಅಚ್ಚಾಗಿದೆ

ಮೂಲೋದ್ಯೋಗದ ಅಭ್ಯಾಸ ಪತ್ರಿಕೆ

ಒಬ್ಬ ಶಿಕ್ಷಕ ಶಾಲೆಗಳಿಗಾಗಿ

(ಇಯತ್ತೆ ೧ ರಿಂದ ೪)

ಬೆಲೆ:— ೧ ಆಣೆ, ಅಂಚೆ ವೆಚ್ಚ ಬೇರೆ

ಪ್ರತಿಗಳು ಸಿಗುವ ಸ್ಥಳ:—

ಪ್ರಧಾನ ಸಂಪಾದಕರು ಕನ್ನಡ ಪ್ರಾಥಮಿಕ ಶಿಕ್ಷಣ, ಧಾರವಾಡ

ಪ್ರಾಥಮಿಕ ಶಿಕ್ಷಣ ಪ್ರಪಂಚದಲ್ಲಿ

ಸಾಂವಶಿ— ದಿನಾಂಕ ೨೯—೧—೫೬ರಂದು ಶ್ರೀ ಎಸ್. ಆರ್. ಜೋಶಿ ಅವರ ಅಧ್ಯಕ್ಷತೆಯಲ್ಲಿ ಗ್ರುಪ್ ಶಿಕ್ಷಕರ ಸಮ್ಮೇಲನ ನಡೆಯಿತು.

ಹಳಗುಣಕಿ— ಶ್ರೀ ಗಾಜರೆಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದಾಗ ಊರಲ್ಲಿಯ ಮೂವರು ಪ್ರಮುಖರು ೯೦೦ ರೂಪಾಯಿ ಕೊಡಲು ಒಪ್ಪಿದರು. ಇದು ಶಾಲೆಯ ಇಮಾರತಿಯ ಸಲುವಾಗಿ. ಶಾಲೆಗೆ ಬೇಕಾದ ಖುರ್ಚಿ ಮೊದಲಾದವುಗಳಿಗೆ ೧೦೦ ರೂಪಾಯಿ ಊರವರು ಕೂಡಿಸಿದರು.

ಧಾರವಾಡ- ಶ್ರೀ ಗಣೇಶ ದೀಕ್ಷಿತರ ಸ್ಮರಣಾರ್ಥವಾಗಿ ದಿನಾಂಕ ೬-೨-೫೬ರಂದು ಚಿಕ್ಕಮಕ್ಕಳ ಮಾದರಿ ಶಾಲೆಯಲ್ಲಿ ನಿಬಂಧ ಸ್ಪರ್ಧೆಯ ಪಾರಿತೋಷಕ ವಿತರಣ ಸಮಾರಂಭವು ಶ್ರೀ ಎಸ್. ಎಸ್. ಮಾಳವಾಡ ಅವರ ಅಧ್ಯಕ್ಷತೆಯಲ್ಲಿ ನಡೆಯಿತು; ಶ್ರೀಮತಿ ಮಾಳವಾಡರು ಪಾರಿತೋಷಕಗಳನ್ನು ಹಂಚಿದರು. ಶ್ರೀ ಡಿ.ಎಲ್. ಪಾಟೀಲರು ಅತಿಥಿದ್ವಯರ ಪರಿಚಯ ಮಾಡಿದರು.

ಮದನಹಳ್ಳಿ- ಪ್ರಜಾರಾಜ್ಯ ದಿನೋತ್ಸವದ ಕಾಲಕ್ಕೆ ಸ್ಕೂಲ ಪಂಚರಾದ ಶ್ರೀ ಶಿವನಪ್ಪ ಗಳಗಿ ಅವರು ಶಾಲೆಗಾಗಿ ಒಂದು ಖುರ್ಚಿ ಕೊಟ್ಟರು.

ಹಳ್ಳಿ (**ಜತ್ತ**)- ದಿನಾಂಕ ೨೬-೧-೫೬ರಂದು ನಾಗರಿಕರು ಸ್ವಶ್ರಮದಿಂದ ಕಟ್ಟಿದ ಸಾಲೆಯ ಮಧ್ಯದ ಉತ್ತರದ, ದಕ್ಷಿಣದ ಕೋಣೆಗಳ ಉದ್ಘಾಟನೆಯು ಅನುಕ್ರಮವಾಗಿ ಶ್ರೀ ವ್ಹಿ. ಜಿ. ತಾಗಡಿ, ಶ್ರೀ ಲಕ್ಷ್ಮಣರಾವ ನಾಯಿಕ, ಶ್ರೀ ಹೆ. ರಾ. ಪಾಟೀಲ ಇವರಿಂದ ನಡೆಯಿತು. ಶ್ರೀ ಕೇಶವರಾವ ನಾಯಿಕ ಅವರು ಇಲ್ಲಿಯ ವಾಚನಾಲಯಕ್ಕೆ ೧೫೦ ರೂಪಾಯಿ ದೇಣಿಗೆ ಕೊಡುವ ವಾಗ್ದಾನ ಮಾಡಿದರು.

ಭಗತವಾಡಾ- ಇಲ್ಲಿಯ ಶಾಲಾ ಕಟ್ಟಡದ ಉದ್ಘಾಟನೆಯು ದಿನಾಂಕ ೬—೧—೫೬ ರಂದು ಶ್ರೀ ವ್ಹಿ. ಬಿ. ದೇಸಾಯಿ ಎಜ್ಯುಕೇಶನಲ್ ಇನ್ಸ್ಪೆಕ್ಟರ, ಕಾರವಾರ ಅವರಿಂದ ನಡೆಯಿತು.

ಹೆಬ್ಬಾಳ- ಕ. ಗಂ. ಶಾಲೆಯಲ್ಲಿ ಮಹಾದೇವ ಮೈಲಾರ ವಾಚನಾಲಯದ ಉದ್ಘಾಟನೆಯು ಶ್ರೀ ಬಿ. ಎಸ್. ಯಲಿ ಅವರಿಂದ ನಡೆಯಿತು. ಶ್ರೀ ಕಲಿವಾಳ ಅವರ ಅಧ್ಯಕ್ಷತೆಯಲ್ಲಿ ಗ್ರುಪ್ ಶಿಕ್ಷಕರ ಸಮ್ಮೇಲನವು ಆಯಿತು. ಕೆಲವು ದಾನಿಗಳು ವಾಚನಾಲಯಕ್ಕೆ ಸಹಾಯ ಮಾಡಲು ಸ್ವಸಂತೋಷದಿಂದ ಮುಂದೆ ಬಂದರು.

ರಡ್ಡೇರ ತಿಮ್ಮಾಪುರ- ಮೇಲಿನ ವರ್ಗದ ಬಾಲಕರು ಹಾಗೂ ಶಿಕ್ಷಕರು ಬದಾಮಿ, ಶಿವಯೋಗಮಂದಿರಗಳನ್ನು ನೋಡಿಬಂದರು.

ಐನಾಪುರ- ೧೦-೨-೫೬ರಂದು ಜಿಲ್ಹಾ ಶಿಕ್ಷಣಾಧಿಕಾರಿಗಳ ಹಿರಿತನದಲ್ಲಿ ಗ್ರುಪ್ ಶಿಕ್ಷಕರ ಸಮ್ಮೇಲನವು ಜರುಗಿತು.

ಕಾಕೋಳ- ಡೆ. ಎ. ಇ. ಅವರ ಅಧ್ಯಕ್ಷತೆಯಲ್ಲಿ ಗ್ರುಪ್ ಸಮ್ಮೇಲನವು ಆಯಿತು.

ಚಿಂಚಲಿ- ಪ್ರಜಾರಾಜ್ಯ ದಿನೋತ್ಸವದ ಕಾಲಕ್ಕೆ ಊರ ಮಹನೀಯರು ೮೩ ರೂಪಾಯಿಗಳ ಒಂದು ಗಡಿಯಾರ, ೨೦ ರೂಪಾಯಿಗಳ ಝೂಂಗಟಿ ಕೊಡಿಸಿದರು. ಕುಡಿಯುವ ನೀರಿನ ಟಾಕಿ ಕೊಡಿಸಲು ವಾಗ್ದಾನ ಮಾಡಿದರು.

ಬೆಳಧಡಿ- ಗ್ರುಪ್ ಶಿಕ್ಷಕರ ಸಮ್ಮೇಲನವು ದಿನಾಂಕ ೧೧-೨-೫೬ರಂದು ಶ್ರೀ ಆರ್. ಎನ್. ಜೋಶಿ ಅವರ ಹಿರಿತನದಲ್ಲಿ ನಡೆಯಿತು.

ಇಲಕಲ್ಲ- ೧ನೆಯ ನಂ. ಸಾಲೆಯ ಕೆಲ ವಿದ್ಯಾರ್ಥಿಗಳು ಕೆಲ ಶಿಕ್ಷಕರ ನೇತೃತ್ವದಲ್ಲಿ ಐಹೊಳ್ಳಿ ಪ್ರವಾಸ ಕೈಕೊಂಡರು.

ನವಿಲಗುಂದ- ಶಿಕ್ಷಣ ಸಮ್ಮೇಲನವು ಇಲ್ಲಿ ಶ್ರೀ ಯ. ಭೀ. ಯರಗಲ್ಲ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಉಚ್ಚಾಣ- ಟ್ರೇ. ಕಾ. ದಲ್ಲಿ ಶ್ರೀ ಶಿಗ್ಗಾಂವ ಸಿ. ಓ. ಡಿ. ಡಿ. ಅವರ ಹಸ್ತದಿಂದ ಆದರ್ಶ ಶಿಕ್ಷಕ ವಿದ್ಯಾರ್ಥಿಗಳೆಂದು ಖ್ಯಾತಿ ಪಡೆದವರಿಗೆ ಪ್ರಶಸ್ತಿ ಪತ್ರಗಳನ್ನು ಕೊಡಿಸಲಾಯಿತು.

ತೆವರಮೆಳ್ಳಿಹಳ್ಳಿ- ಈ ವಿಭಾಗದ ಪ್ರಾ. ಶಿ. ಶಿ. ಸ್ನೇಹ ಸಮ್ಮೇಲನವು ಕ್ರಾಷ್ಟ ಆರ್ಗನಾಯಿಝರ

ಶ್ರೀ ಶಿಗ್ಗಾಂವ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕುಂದ್ರಹಳ್ಳಿ– ಇಲ್ಲಿ ೧೯–೨–೫೭ರಂದು ಗ್ರುಪ್ ಶಿಕ್ಷಕರ ಸಮ್ಮೇನಲವು ಶ್ರೀ ಟಿ. ಎಫ್. ದೇಸಾಯಿ ಅವರ ಹಿರಿತನದಲ್ಲಿ ಸಾಗಿತು.

ಬನಹಟ್ಟಿ– ೬ನೆಯ ವರ್ಗದ ಬಾಲಕರೂ ಗುರುಗಳೂ ಓಗಲೇವಾಡಿ, ಕಿರ್ಲೋಸ್ಕರವಾಡಿ ಮೊದಲಾದವುಗಳನ್ನು ಸಂದರ್ಶಿಸಿದರು.

ನೆಗಳೂರ– ಮಕ್ಕಳಲ್ಲಿ ಸಾಲಿಗೆ ಬರುವ ಒಲವಿನ ಅಭಿವೃದ್ಧಿಗಾಗಿ ಶ್ರೀ ಮೂರ್ತೆಪ್ಪನವರ ಅವರು ೬ರೂಪಾಯಿಗಳನ್ನು ಬಹುಮಾನವಾಗಿ ಕೊಟ್ಟರು.

ಇಲಕಲ್ಲ– ಊರಲ್ಲಿಯ ಕೆಲವರು ದಾನಿಗಳು ಒಟ್ಟಾಗಿ ೮೫ ರೂಪಾಯಿಗಳನ್ನು ಸಾಲೆಗೆ ಬೇಕಾಗಿರುವ ಡ್ರಮ್, ಸಾಯಿಡ ಡ್ರಮ್ ಮೊದಲಾದವುಗಳಿಗಾಗಿ ಉದಾರ ದೇಣಿಗೆ ಕೊಟ್ಟಿರುವರು.

ಹದಲಿ– ದಿವಂಗತ ಬ. ರು. ಹಿರೇಮಠರ ಸ್ಮರಣಾರ್ಥವಾಗಿ ಅವರ ಕುಟುಂಬದವರು ಕ. ಗಂ. ಸಾಲೆಗೆ ಒಂದು ದೊಡ್ಡ ಗಡಿಯಾರವನ್ನು ಕೊಟ್ಟರು; ಶಾಲೆಯ ಎಲ್ಲ ಮಕ್ಕಳು ಮತ್ತು ಶಿಕ್ಷಕರು ಶ್ರಮದಾನದಿಂದ ಶಾಲೆಯ ನೆಲಗಟ್ಟನ್ನು ದುರಸ್ತಿ ಮಾಡಿದರು.

ಬಬಲೇಶ್ವರ– ೧೮, ೧೯–೨–೫೭ರಂದು ಕ. ಗಂ. ಶಾಲೆಯ ಬಾಲಕರು ೧೯ಳಾದ ಒಂದು ಕೋಣೆಯ ದುರಸ್ತಿಯನ್ನು ಶ್ರಮದಾನ ರೂಪದಿಂದ ಮಾಡಿದರು.

ಬಳಗಾನೂರ (ಮುದ್ದೇಬಿಹಾಳ)– ಶ್ರೀ ವಾಯ್. ಡಿ. ಉಣಕಲ್ಲ ಅವರ ಹಿರಿತನದಲ್ಲಿ ಗ್ರುಪ್ ಶಿಕ್ಷಕರ ಸಮ್ಮೇಲನವು ಜರುಗಿತು.

ಧಾರವಾಡ– ದಿನಾಂಕ ೨೯–೧–೫೭ರಂದು ಮುನಿಸಿಪಲ್ ಸ್ಕೂಲ್‌ಬೋರ್ಡ ಪ್ರಾಥಮಿಕ ಶಾಲೆಗಳ ವಾರ್ಷಿಕ ಪಂದ್ಯಾಟ, ಕಲಾವಸ್ತು ಪ್ರದರ್ಶನ, ಮನರಂಜನೆಯ ಕಾರ್ಯಕ್ರಮ ಹಾಗೂ ಶಿಕ್ಷಕ–ಶಿಕ್ಷಿಕೆಯರ ಸ್ನೇಹ ಸಮ್ಮೇಲನಗಳು ಅತ್ಯಂತ ವಿಜೃಂಭಣೆಯಿಂದ ನಡೆದವು.

ತಬಕದ ಹೊನ್ನಿಹಳ್ಳಿ– ಶ್ರೀ ವ್ಹಿ. ಎ. ಉಮರಾಣಿಯವರ ಅಧ್ಯಕ್ಷತೆಯಲ್ಲಿ ದಿನಾಂಕ ೧೯–೨–೫೭ರಂದು ಗ್ರುಪ್ ಶಿಕ್ಷಕರ ಸಮ್ಮೇಲನವು ನಡೆಯಿತು.

ಕುಸನೂರ– ಶ್ರೀ ಮಣ್ಣೂರ ಅವರ ಹಿರಿತನದಲ್ಲಿ ಗ್ರುಪ್ ಸಮ್ಮೇಲನವು ನಡೆಯಿತು.

ಛಬ್ಬಿ– ಧಾರವಾಡ ಜಿಲ್ಹಾ ಡಿ. ಎ. ಇ. ರಾದ ಶ್ರೀ ಯರಗಲ್ಲ ಅವರ ಅಧ್ಯಕ್ಷತೆಯಲ್ಲಿ ಗ್ರುಪ್ ಸಮ್ಮೇಲನವು ಜರುಗಿತು.

ಭಂಡಿವಾಡ– ಬೀಟ ಆಫೀಸರ ಶ್ರೀ ಹಳಕಟ್ಟಿ ಎಸ್. ಬಿ. ಅವರ ಹಿರಿತನದಲ್ಲಿ ಗ್ರುಪ್ ಶಿಕ್ಷಕರ ಸಮ್ಮೇಲನವು ಆಯಿತು.

ರಾಮದುರ್ಗ– ಬೆಳಗಾವ ಜಿಲ್ಹಾ ಶಿಕ್ಷಣಾಧಿಕಾರಿಗಳಾದ ಶ್ರೀ ಸುರೇಬಾನಕರ ಅವರ ಹಿರಿತನದಲ್ಲಿ ತಾಲೂಕಾ ಶಿಕ್ಷಕರ ಸಮ್ಮೇಲನವು ನಡೆಯಿತು.

ನರೇಗಲ್ಲ– ಫೆಬ್ರುವರಿ ತಿಂಗಳಲ್ಲಿ ಇಲ್ಲಿಯ ಕ. ಗಂ. ಸಾಲೆಯಲ್ಲಿ ಮನರಂಜನೆಯ ಕಾರ್ಯಕ್ರಮ, ವಾಕ್ ಸ್ಪರ್ಧೆ, ಸಹಕಾರಿ ಸಂಘದ ಸ್ಥಾಪನೆ ಮೊದಲಾದವು ನಡೆದವು.

ಹಿರೇಬಾಗೇವಾಡಿ– ಉರ್ದು ಶಾಲೆಯ ಮೇಲಿನ ವರ್ಗದ ಮಕ್ಕಳು ಸಾಂಬ್ರಾ ವಿಮಾನ ನಿಲ್ದಾಣವನ್ನು ಸಂದರ್ಶಿಸಿದರು.

ಗಣಿಹಾರ (ಸಿಂದಗಿ)– ಕ. ಗಂ. ಸಾಲೆಯಲ್ಲಿ ಪಾಲಕರ ದಿನಾಚರಣೆಯು ಶ್ರೀ ಎಸ್. ಎಚ್. ಪಾಟೀಲ ಅವರ ಹಿರಿತನದಲ್ಲಿ ನಡೆದು ಆ ಕಾಲಕ್ಕೆ "ವಿಚಿತ್ರ ಮದುವೆ" ಎಂಬ ನಾಟಕವನ್ನು ಆಡಲಾಯಿತು. ನಾಟಕ ನೋಡಲಿಕ್ಕೆ ಬಂದ ಜನರು ಮೆಚ್ಚಿ ಸಾಲೆಗಾಗಿ ೧೭೫ ರೂಪಾಯಿಗಳನ್ನು ಕೊಟ್ಟರು.

ಮಾರುಕೇರಿ– ಗ್ರುಪ್ ಶಿಕ್ಷಕ ಪಾಲಕರ ಸ್ನೇಹ ಸಮ್ಮೇಲನವು ಶ್ರೀ ಸಿ. ವ್ಹಿ. ಕಾಮತ ಅವರ ಅಧ್ಯಕ್ಷತೆಯಲ್ಲಿ ಕೋಟಖಾಂಡ ಸಾಲೆಯಲ್ಲಿ ನಡೆಯಿತು.

ಕಾದರವಳ್ಳಿ– ದಿನಾಂಕ ೧–೩–೧೯೫೭ ಇಲ್ಲಿಯ ಕ. ಗಂ. ಸಾಲೆಗೆ ಝೂಂಗಟೆ ಮತ್ತು ಕೆಲ ಫರ್ನಿಚರ ಸಾಮಾನುಗಳನ್ನು ಶ್ರೀ ಅದೃಶ್ಯಾನಂದಮಠ ಸ್ವಾಮಿಗಳು ಮತ್ತು ಕೆಲ . ಪುರ ಪ್ರಮುಖರು ಸಹಾಯಾರ್ಥವಾಗಿ ಕೊಟ್ಟರು.

ಶಲವಡಿ:— ಕನ್ಯಾ ಸಾಲೆಯಲ್ಲಿ ದಿನಾಂಕ ೨೨–೨–೫೭ರಂದು ೧೨ ಪ್ರಾಥಮಿಕ ಸಾಲೆಗಳ ಸಮ್ಮೇಲನವು ಶ್ರೀ ಶಿರಹಟ್ಟಿ ಅವರ ಹಿರಿತನದಲ್ಲಿ ನಡೆಯಿತು.

ಕಾಖಂಡಕಿ:— ಕ. ಗಂ. ಸಾಲೆಯ ೬ನೆಯ ವರ್ಗದ ಬಾಲಕರು ತಮ್ಮ ಗುರುಗಳೊಂದಿಗೆ ಶ್ರೀ ಕೊಗಟನೂರ ಇವರ ಹಿರಿತನದಲ್ಲಿ ಶ್ರಮದಾನದಿಂದ ಒಂದು ಮಾರ್ಗವನ್ನು ಸುಗಮಗೊಳಿಸಿದರು.

ಮನಗೋಳಿ:— ಕ. ಗಂ. ಸಾಲೆಯ "ಸೌಭಾಗ್ಯ ಲಕ್ಷ್ಮಿ" ನಾಟಕವು ಜಿಲ್ಲಾ ಮಟ್ಟದಲ್ಲಿ ಮೊದಲನೆಯ ನಂ. ಪಡೆಯಿತು.

ಮಸೂತಿ:— ೧೮ ೨-೫೬ ರಂದು ಶಿಕ್ಷಕ-ಶಿಕ್ಷಿಕೆಯರ ಸಮ್ಮೇಲನವು ಶ್ರೀ ಸಿ. ಸಿ. ಕಂಬಿಮಠ ಅವರ ಹಿರಿತನದಲ್ಲಿ ನಡೆಯಿತು.

ಕುರಹಟ್ಟಿ:— ಹೊಸ ಶಾಲಾ ಕಟ್ಟಡದ ಅಡಿಗಲ್ಲನ್ನಿಡುವ ಸಮಾರಂಭವು ಪ್ರಾಂತ ಆಫೀಸರ ಶ್ರೀ ಕೆ. ಆರ್. ಶೆಟ್ಟಿ ಅವರಿಂದ ನಡೆಯಿತು. ಆ ಕಾಲಕ್ಕೆ ಇಮಾರತಿಯ ಸಲುವಾಗಿ ಊರ ಪ್ರಮುಖರಾದ ಶ್ರೀ ಶಿವಲಿಂಗಪ್ಪ ದೇಸಾಯಿ ಅವರು ೧೨೦೧ ರೂಪಾಯಿಗಳನ್ನು ಸಲ್ಲಿಸಿದರು. ಬೊಮ್ಮನಹಳ್ಳಿ, ಮತ್ತು ನವಲೂರಗಳಲ್ಲಿ ಶಿಕ್ಷಕರ ಸಮ್ಮೇಲನವು ನಡೆಯಿತು.

ಚಿಕ್ಕಬೇವನೂರ:— ಶ್ರೀ ಧೂ ಪ. ಬಿರಾದಾರ ಅವರು ಶಾಲೆಯ ಉಪಕರಣಗಳಿಗಾಗಿ ೧೦ ರೂಪಾಯಿಗಳನ್ನು ಉದಾರ ದೇಣಿಗೆ ಕೊಟ್ಟರು.

ಸಿವಣಗಿ:— ಪಾಲಕರ ದಿನಾಚರಣೆಯು ಶ್ರೀ ಆರ್. ಜಿ. ಮುಚೆ ಅವರ ಹಿರಿಯತನದಲ್ಲಿ ನಡೆಯಿತು; ಊರಲ್ಲಿಯ ಕೆಲವರು ದಾನಿಗಳು ಸಾಲೆಗಾಗಿ ಒಟ್ಟು ೧೫೭ ರೂಪಾಯಿ ಬೆಲೆಯ ಕೆಲವು ಸಾಮಾನು ಕೊಟ್ಟರು.

ಅಗರಖೇಡ:— ದಿನಾಂಕ ೧೧-೩-೫೬ ರಂದು ಲಚ್ಯಾಣ ಟ್ರೇ. ಕಾ. ದ ೧ನೆಯ ವರ್ಷ 'ಅ' ವರ್ಗದ ಶಿಕ್ಷಕ-ವಿದ್ಯಾರ್ಥಿಗಳ ಶಿಬಿರದ ಮುಕ್ತಾಯ ಸಮಾರಂಭವು ಶ್ರೀ ಮೇಗೂರ ಅವರ ಹಿರಿತನದಲ್ಲಿ ನಡೆಯಿತು.

ಮಿರಗಿ:— ಪುರ ಪ್ರಮುಖರು ಊರ ವರ್ಗಣಿ ೧೨೫ ರೂಪಾಯಿ ಮಾಡಿ, ಸ. ವಿ. ಯೋಜನೆಯಿಂದ ಬರತಕ್ಕ ೬೫೦ ರೂಪಾಯಿ ಕೂಡಿಸಿ ಸಾಲೆಯ ಉಪಯೋಗಕ್ಕಾಗಿ ಕೆಲ ಸಾಮಾನು ಕೊಟ್ಟರು.

ಬಂಥನಾಳ:— ದಿನಾಂಕ ೧೧-೩-೫೬ ರಂದು ವಿಜಾಪುರ ಜಿಲ್ಲಾ ಶಿಕ್ಷಣಾಧಿಕಾರಿಗಳಾದ ಶ್ರೀ ರೋಹಿಡೇಕರ ಅವರ ಅಧ್ಯಕ್ಷತೆಯಲ್ಲಿ ಶಿಕ್ಷಕ ಸಮ್ಮೇಲನವು ಯಶಸ್ವಿಯಾಗಿ ಜರುಗಿತು.

ಕೊಬಿಹಾಳ:— ದಿನಾಂಕ ೧೨-೩-೫೬ ರಂದು ಶ್ರೀ ನಿಂಗಪ್ಪ ಕುನೂಗಲ್ಲ ಅವರ ಹಿರಿತನದಲ್ಲಿ ಶ್ರೀ ಜಕಾತಿ ಅವರ ಸಲಹೆಯ ಮೇರೆಗೆ ಗ್ರುಪ್ ಶಿಕ್ಷಕರ ಸಮ್ಮೇಲನವು ನಡೆಯಿತು.

ಇಲಕಲ್ಲ:— ೧೮-೩-೫೬ ನೇ ದಿನ ಹುನಗುಂದ ತಾಲೂಕ ಪ್ರಾ. ಶಿ. ಸಮ್ಮೇಲನವು ಶ್ರೀ ರೋಹಿಡೇಕರ ಜಿಲ್ಲಾ ಶಿಕ್ಷಣಾಧಿಕಾರಿಗಳು ಅವರ ಹಿರಿತನದಲ್ಲಿ ನಡೆಯಿತು.

ಸಂಗೂರ:— ದಿನಾಂಕ ೨೧-೩-೫೬ ರಂದು ಗ್ರುಪ್ ಶಿಕ್ಷಕರ ಸಮ್ಮೇಲನವು ಶ್ರೀ ಸಿ. ಕೆ. ಕುಲಕರ್ಣಿ ಅವರ ಅಧ್ಯಕ್ಷತೆಯಲ್ಲಿ ಜರುಗಿತು.

ನಾಸಪಳ್ಳಿ:— ದಿನಾಂಕ ೨೨-೩-೫೬ ರಂದು ಇಲ್ಲಿಯ ಸಾಲೆಗೆ ಸೇವೆ ಸಲ್ಲಿಸಿದ ಮಹನೀಯರನ್ನು ಸಭೆಗೂಡಿ ಅಭಿನಂದಿಸಲಾಯಿತು.

ಕೊಣ್ಣೂರ (ವಿಜಾಪುರ):— ಶ್ರೀ ವಾಯ್. ಡಿ. ಉಣಕಲ್ಲ ಅವರ ಹಿರಿತನದಲ್ಲಿ ಸಭೆ ಸೇರಿ ೩೧-೩-೫೬ ರೊಳಗಾಗಿ ಸಾಲೆಗೆ ೭ ಖೋಲಿಗಳನ್ನು ಕಟ್ಟಿಸಲು ಬೇಕಾಗುವ ಖರ್ಚಿನ ಬಾಬತ ೫೨೦೦ ರೂಪಾಯಿಗಳನ್ನು ಕೂಡಿಸಿಕೊಡಲು ಊರವರು ಒಪ್ಪಿಕೊಂಡದ್ದಲ್ಲದೆ ಅದಕ್ಕೆ ಬೇಕಾಗುವ ೨ ಎಕರೆ ಭೂಮಿಯನ್ನು ಕೊಡಲು ಒಪ್ಪಿರುವರು.

ಸಮ್ಮಸಗಿ:— ಇಲ್ಲಿಯ ಕೆಲವು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಬನವಾಸಿಯ ಮಧುಕೇಶ್ವರ ದೇವಸ್ಥಾನದ ದರ್ಶನ ಪಡೆದರು.

ಮಿರಗಿ:— ಶ್ರೀ ಜಿ. ಬ. ಪಾವಟೆ ಅವರ ಅಧ್ಯಕ್ಷತೆಯಲ್ಲಿ ಗ್ರುಪ್ ಶಿಕ್ಷಕರ ಸಮ್ಮೇಲನವು ನಡೆಯಿತು.

ಖಾನಾಪುರ (ಬದಾಮಿ):— ಗ್ರುಪ್ ಸಮ್ಮೇಲನವು ಶ್ರೀ ವಡಕನ್ನವರ ಅವರ ಹಿರಿತನದಲ್ಲಿ ನಡೆಯಿತು.

ಬಿಳೀಚಾಳ:— ಗ್ರುಪ್ ಸಮ್ಮೇಲನವು ಶ್ರೀ ಆರ್. ಎನ್. ಜಕಾತಿ ಅವರ ಹಿರಿತನದಲ್ಲಿ ನಡೆಯಿತು.

ಹೂವಿನಶಿಗ್ಲಿ:— ಡಾ. ಗದ್ದಗಿಮಠ ಅವರ ಹಿರಿತನದಲ್ಲಿ ಗ್ರುಪ್ ಸಮ್ಮೇಲನವು ನಡೆಯಿತು.

ಧಾರವಾಡ:— ದಿನಾಂಕ ೧-೪-೫೬ ರಂದು ಎ. ರಹಿಮಾನ ಬೀಡಿ ಕಾರಖಾನೆಯಲ್ಲಿ ಸ. ಶಿ. ಪ್ರಾಯೋಗಿಕ ವರ್ಗದ ಮುಕ್ತಾಯ ಸಮಾರಂಭವು ಶ್ರೀ ಬಿ. ಎಮ್. ಶಿಂತ್ರಿ ಅವರ ಹಿರಿತನದಲ್ಲಿ ನಡೆಯಿತು.

ನಲವಡಿ:— ಗ್ರುಪ್ ಶಿಕ್ಷಕರ ಸಮ್ಮೇಲನವು ಶ್ರೀ ಶಿರಹಟ್ಟಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಜೀವನ ಶಿಕ್ಷಣ ವಾರ್ತೆಗಳು

ಶೈಕ್ಷಣಿಕ ಸುದ್ದಿಗಳು ಮತ್ತು ಟಿಪ್ಪಣಿಗಳು

ಅನುವಾದಕರು : **ಆಯ್. ಎಸ್. ಬಿದರಿ**

ಶಿಕ್ಷಣ ಕ್ಷೇತ್ರದಲ್ಲಿಯ ಇತ್ತೀಚೆಗಿನ ಬದಲಾವಣೆಗಳ ಬಗೆಗೆ ನಮ್ಮ ಓದುಗರಿಗೆ ಗೊತ್ತಿರುವದು ಅವಶ್ಯವಿರುವದರಿಂದ ಕೆಲವನ್ನು ಮಾತ್ರ ಇಲ್ಲಿ ಕೊಡಲಾಗಿದೆ.

(೧) ಸರಕಾರದವರು ಈಗಿರುವ ಪ್ರಾಥಮಿಕ ಶಿಕ್ಷಕರ ಪ್ರಮಾಣಪತ್ರದ ತರಬೇತಿಯನ್ನು ಪುನರ್ವಿಮರ್ಶಿಸುತ್ತಿದ್ದು ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ ಪಾಸಾದ ಇಲ್ಲವೆ ಮಾಧ್ಯಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ ಪಾಸಾದ ಶಿಕ್ಷಕರ ತರಬೇತಿಯು ಇನ್ನು ಮುಂದೆ ಎರಡು ವರ್ಷದ್ದಾಗುವದೆಂದು ಅಪ್ಪಣೆಗಳನ್ನು ಹೊರಡಿಸಿದ್ದಾರೆ. ೧೯೫೬ನೇ ಜೂನ ತಿಂಗಳಿಂದ ಎಸ್. ಎಸ್. ಸಿ. ಪಾಸಾದ ಶಿಕ್ಷಕರಿಗೆ ಟ್ರೇನಿಂಗ ಕಾಲೇಜುಗಳಲ್ಲಿ ಪ್ರತ್ಯೇಕ ವರ್ಗಗಳನ್ನು ತೆರೆಯಲಾಗುವದು. ಪಿ. ಎಸ್. ಸಿ. ಪಾಸಾದ ಮತ್ತು ಎಸ್. ಎಸ್. ಸಿ. ಪಾಸಾದ ಶಿಕ್ಷಕರಿಗಿರುವ ಸದ್ಯದ ಅಭ್ಯಾಸ ಪತ್ರಿಕೆಯನ್ನು ಪುನರ್ವಿಮರ್ಶಿಸಲಾಗುವದು.

(೨) ಸರಕಾರದವರು ಪ್ರಾಥಮಿಕ ಶಾಲಾ ಪ್ರಮಾಣಪತ್ರದ ಪರೀಕ್ಷೆಯ ಅಭ್ಯಾಸದಲ್ಲಿ ಸಹ ಮುಂದಿನ ವರ್ಷದಿಂದ ಕೆಲವು ಬದಲಾವಣೆಗಳನ್ನು ಮಾಡಿದ್ದಾರೆ. ಸದ್ಯಕ್ಕೆ ೪ನೆಯ ಸದರಿನ ಕೆಳಗೆ ಸಾದಾ ಸಾಲೆಗಳಿಗಾಗಿ ಸಾಮಾನ್ಯವಿಜ್ಞಾನ, ಹೆಣ್ಣುಮಕ್ಕಳ ಸಾಲೆಗಳಿಗಾಗಿ ಗೃಹವಿಜ್ಞಾನ, ಒಕ್ಕಲುತನ ಮೂಲೋದ್ಯೋಗವಿರುವ ಜೀವನ ಶಿಕ್ಷಣ ಸಾಲೆಗಳಿಗೆ ಕೃಷಿವಿಜ್ಞಾನ, ನೇಯಿಗೆಯ ಮೂಲೊದ್ಯೋಗವಿರುವ ಜೀವನ ಶಿಕ್ಷಣ ಸಾಲೆಗಳಿಗಾಗಿ ನೇಯಿಗೆಯ ವಿಜ್ಞಾನ ಮತ್ತು ಬಡಿಗತನ ಮೂಲೋದ್ಯೋಗವಿರುವ ಜೀವನ ಶಿಕ್ಷಣ ಸಾಲೆಗಳಿಗಾಗಿ ಕಟ್ಟಿಗೆಯ ಕೆಲಸ— ಹೀಗೆ ವಿಜ್ಞಾನದಲ್ಲಿ ಐದು ಪ್ರಕಾರದ ವಿಷಯಗಳು ಅಡಕವಾಗಿವೆ. ಆದರೆ ೧೯೫೬ರಿಂದ ಗಂಡುಮಕ್ಕಳ ಸಾಲೆಗಳಿಗೆ ಸಾಮಾನ್ಯ-ವಿಜ್ಞಾನ, ಹೆಣ್ಣುಮಕ್ಕಳ ಸಾಲೆಗಳಿಗೆ ಗೃಹವಿಜ್ಞಾನ ಈ ಪ್ರಕಾರ ವಿಜ್ಞಾನ ವಿಷಯವು ಕಲಿಸಲ್ಪಡುವದು. ಈ ವಿಷಯವನ್ನು ಎಲ್ಲ ಸಾಲೆಗಳಲ್ಲಿ— ಜೀವನ ಶಿಕ್ಷಣ ಇಲ್ಲವೆ ಸಾದಾ— ಕಲಿಸಲಾಗುವದು. ಶಿಕ್ಷಣ ಖಾತೆಯವರು ಪ್ರಸಿದ್ಧಿಸಿದ ೧ರಿಂದ ೭ನೇ ಇಯತ್ತೆಯವರೆಗಿರುವ ಅಭ್ಯಾಸ ಪತ್ರಿಕೆಯಲ್ಲಿ ನಮೂದಿಸಲ್ಪಟ್ಟಂತೆ ಗಂಡುಮಕ್ಕಳ ಸಾಲೆಗಳಿಗೆ ಸಾಮಾನ್ಯವಿಜ್ಞಾನವು ಮತ್ತು ಹೆಣ್ಣುಮಕ್ಕಳ ಸಾಲೆಗಳಿಗೆ ಗೃಹವಿಜ್ಞಾನವು ಕಲಿಸಲ್ಪಡುವದು. ಹೀಗಿದ್ದರೂ ಮೂರು ಮೂಲೋದ್ಯೋಗಗಳ— ಒಕ್ಕಲುತನ, ನೇಯಿಗೆ ಮತ್ತು ಕಟ್ಟಿಗೆಯ ಕೆಲಸ— ತಾತ್ವಿಕ ಭಾಗವನ್ನು ಪ್ರಾಯೋಗಿಕ ಪರೀಕ್ಷೆಯ ಜೊತೆಗೆ ತೆಗೆದುಕೊಳ್ಳಲಾಗುವದು. ಪ್ರಾಯೋಗಿಕ ಪರೀಕ್ಷೆಗೆ ಮೀಸಲಾಗಿರುವ ೧೦೦ ಗುಣಗಳನ್ನು ಕೆಳಗಿನಂತೆ ಹಂಚಲಾಗಿದೆ :—

(ಅ) ವರ್ಷದ ಕೆಲಸಕ್ಕೆ ೪೦ ಗುಣಗಳು.

(ಬ) ಪ್ರಾಯೋಗಿಕ ಪರೀಕ್ಷೆಗೆ ೪೦ ಗುಣಗಳು.

(ಕ) ಪ್ರಾಯೋಗಿಕ ಪರೀಕ್ಷೆಯ ಕಾಲಕ್ಕೆ ತೆಗೆದುಕೊಳ್ಳುವ ಮೂಲೋದ್ಯೋಗದ ತಾತ್ವಿಕ ಮೌಖಿಕ ಪರೀಕ್ಷೆಗೆ ೨೦ ಗುಣಗಳು.

ಈ ಮೂರು ಮೂಲೋದ್ಯೋಗಗಳ ಪ್ರಾಯೋಗಿಕ ಪರಿಕ್ಷೇಯು ವಾಡಿಕೆಯಂತೆ ಮೂಲೋದ್ಯೋಗವನ್ನು ಕಲಿಸುವ ಸಾಲೆಗಳಲ್ಲಿಯೇ ನಡೆಯುವದು. ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುತ್ತಿರುವ ಪ್ರಾಥಮಿಕ ಸಾಲೆಗಳು ಈ ಬದಲಾವಣೆಗಳನ್ನು ಲಕ್ಷ್ಯದಲ್ಲಿಡುವದು ಒಳ್ಳೇದು.

(ಪುಟ ೨೮ಕ್ಕೆ)

ನೂರು ವರ್ಷಗ

೧೯೫೬ ರಿ

ಲೇಖಕ :— ಶ್ರೀ ಎ. ಎಸ್. ಹೂಗಾರ, ಶಿಕ್ಷಕ ವಿದ್ಯಾ

ತಿಂಗಳುಗಳ ಹೆಸರುಗಳು	ಮೇ	ಫೇಬ್ರುವರಿ ಅಗಸ್ಟ	* ಫೇಬ್ರುವರಿ ಮಾರ್ಚ, ನವ್ಹಂಬರ	ಜೂನ	ಸಪ್ಟಂಬರ ಡಿಶೆಂಬರ	* ಜಾನೇ ಎಪ್ರೇಲ,
	ಜಾನೇವಾರಿ ಅಕ್ಟೋಬರ	ಮೇ	* ಫೇಬ್ರುವರಿ ಅಗಸ್ಟ	ಫೇಬ್ರುವರಿ ಮಾರ್ಚ, ನವ್ಹಂಬರ	ಜೂನ	ಸಪ್ಟಂಬ ಡಿಶೆಂಬ
	* ಜಾನೇವಾರಿ ಎಪ್ರಿಲ, ಜುಲೈ	ಜಾನೇವಾರಿ ಅಕ್ಟೋಬರ	ಮೇ	* ಫೇಬ್ರುವರಿ ಅಗಸ್ಟ	ಫೇಬ್ರುವರಿ ಮಾರ್ಚ, ನವ್ಹಂಬರ	ಜೂನ
	ಜೂನ	ಸಪ್ಟಂಬರ ಡಿಶೆಂಬರ	* ಜಾನೇವಾರಿ ಎಪ್ರೇಲ, ಜುಲೈ	ಜಾನೇವಾರಿ ಅಕ್ಟೋಬರ	ಮೇ	* ಫೇಬ್ರು ಅಗಸ್ಟ
	ಫೇಬ್ರುವರಿ ಮಾರ್ಚ, ನವ್ಹಂಬರ	ಜೂನ	ಸಪ್ಟಂಬರ ಡಿಶೆಂಬರ	* ಜಾನೇವಾರಿ ಎಪ್ರೇಲ, ಜುಲೈ	ಜಾನೇವಾರಿ ಅಕ್ಟೋಬರ	ಮೇ
	* ಫೇಬ್ರುವರಿ ಅಗಸ್ಟ	ಫೇಬ್ರುವರಿ ಮಾರ್ಚ, ನವ್ಹಂಬರ	ಜೂನ	ಸಪ್ಟಂಬರ ಡಿಶೆಂಬರ	* ಜಾನೇವಾರಿ ಎಪ್ರೇಲ, ಜುಲೈ	ಜಾನೇವಾ ಅಕ್ಟೋಬ
	ಸಪ್ಟಂಬರ ಡಿಶೆಂಬರ	* ಜಾನೇವಾರಿ ಎಪ್ರೇಲ, ಜುಲೈ	ಜಾನೇವಾರಿ ಅಕ್ಟೋಬರ	ಮೇ	* ಫೆಬ್ರುವರಿ ಅಗಸ್ಟ	ಫೇಬ್ರುವ ಮಾರ್ಚ, ನ
ವಾರಗಳು	ರವಿವಾರ	ಸೋಮವಾರ	ಮಂಗಳವಾರ	ಬುಧವಾರ	ಗುರುವಾರ	ಶುಕ್ರವಾರ
	ಸೋಮವಾರ	ಮಂಗಳವಾರ	ಬುಧವಾರ	ಗುರುವಾರ	ಶುಕ್ರವಾರ	ಶನಿವಾರ
	ಮಂಗಳವಾರ	ಬುಧವಾರ	ಗುರುವಾರ	ಶುಕ್ರವಾರ	ಶನಿವಾರ	ರವಿವಾರ
	ಬುಧವಾರ	ಗುರುವಾರ	ಶುಕ್ರವಾರ	ಶನಿವಾರ	ರವಿವಾರ	ಸೋಮವಾರ
	ಗುರುವಾರ	ಶುಕ್ರವಾರ	ಶನಿವಾರ	ರವಿವಾರ	ಸೋಮವಾರ	ಮಂಗಳವಾ
	ಶುಕ್ರವಾರ	ಶನಿವಾರ	ರವಿವಾರ	ಸೋಮವಾರ	ಮಂಗಳವಾರ	ಬುಧವಾರ
	ಶನಿವಾರ	ರವಿವಾರ	ಸೋಮವಾರ	ಮಂಗಳವಾರ	ಬುಧವಾರ	ಗುರುವಾರ

ತಿಳಿದುಕೊಳ್ಳುವ ಕ್ರಮ :— ಒಂದು ಇಸ್ವಿಯ ವಿಶಿಷ್ಟ ತಿಂಗಳಿನ ವಿಶಿಷ್ಟ ತಾರೀಖು ಯಾವವಾರ ಆಗುವದೆಂಬದನ್ನು ನೋಡಿಕೊಳ್ಳುವದೆಂದು ತಿಳಿಯಿರಿ— ಮೊದಲು ಆ ಇಸ್ವಿಯನ್ನು ಹುಡುಕಿ ಅದರ ಎಡಗಡೆಗೆ ಇಚ್ಛಿತ ತಿಂಗಳನ್ನು ಹುಡುಕಬೇಕು. ತರುವಾ ಂಗಳದ ಕೋಷ್ಟಕವನ್ನು ಹಿಡಿದು ಕೆಳಗೆ ವಾರಗಳಕಡೆಗೆ ಸಾಗಬೇಕು. ಮತ್ತು ವಿಶಿಷ್ಟ ತಾರೀಖನ್ನು ಹುಡುಕಿ ಅದರ ಎಡಗಡೆ ಸಾಗಬೇಕು. ೋಷ್ಟಕ ಕೂಡುವಲ್ಲಿ ಇರುವ ವಾರವೇ ಆ ತಾರೀಖು ಆಗುವದು.

ಉದಾ :— ೧೯೫೬ ನೇ ಜಾನೇವಾರಿ ತಿಂಗಳ ೨೬ ನೇ ತಾರೀಖು ಯಾವವಾರವಾಗುವದೆಂಬದನ್ನು ನೋಡುವಾ— ೧೯೫೬ ಇದು ಇ ಮೂರನೇ ಕೋಷ್ಟಕದಲ್ಲಿದೆ. ಈ ಇಸವಿಯು ಲೀಪ ವರ್ಷ ಇರುವದು. ಮೂರನೇ ಕೋಷ್ಟಕದಿಂದ ಎಡಗಡೆ * ಈ ಚಿನ್ಹವಿರುವ * ಜಾ.

ಕ್ಯಾಲೆಂಡರ,

೨೦೫೭ರ ವರೆಗೆ,

S. S. T. C. M. **ಲಚ್ಯಾಣ.**

ಜಾನೇವಾರಿ	೧೯೬೦,	೧೯೬೬,	೧೯೭೭,	೧೯೮೩,	೧೯೮೮,	೧೯೯೪,	೨೦೦೫,	
ಅಕ್ಟೋಬರ	೨೦೧೧,	೨೦೧೬,	೨೦೨೨,	೨೦೩೩,	೨೦೩೯,	೨೦೪೪,	೨೦೫೦,	
* ಜಾನೇವಾರಿ	೧೯೬೧,	೧೯೬೭,	೧೯೭೨,	೧೯೭೮,	೧೯೮೯,	೧೯೯೫,	೨೦೦೦,	
ಎಪ್ರೀಲ, ಜುಲೈ	೨೦೦೬,	೨೦೧೭,	೨೦೨೩,	೨೦೨೮,	೨೦೩೪,	೨೦೪೫,	೨೦೫೧.	೨೦೫೬,
ಸಪ್ಟಂಬರ	**೧೯೫೬,**	೧೯೬೨,	೧೯೭೩,	೧೯೭೯,	೧೯೮೪,	೧೯೯೦,	೨೦೦೧,	
ಡಿಶೆಂಬರ	೨೦೦೭,	೨೦೧೨,	೨೦೧೮,	೨೦೨೯,	೨೦೩೫,	೨೦೪೦,	೨೦೪೬,	
ಫೇಬ್ರುವರಿ	೧೯೫೮,	೧೯೬೯,	೧೯೭೫,	೧೯೮೦,	೧೯೮೬,	೧೯೯೭,	೨೦೦೩,	
ಮಾರ್ಚ, ನವ್ಹಂಬರ	೨೦೦೮,	೨೦೧೪,	೨೦೨೫,	೨೦೩೧,	೨೦೩೬,	೨೦೪೨,	೨೦೫೩,	
* ಫೇಬ್ರುವರಿ	೧೯೫೯,	೧೯೬೪,	೧೯೭೦,	೧೯೮೧,	೧೯೮೭,	೧೯೯೨,	೧೯೯೮,	
ಅಗಷ್ಟ.	೨೦೦೯,	೨೦೧೫,	೨೦೨೦,	೨೦೨೬,	೨೦೩೭,	೨೦೪೩,	೨೦೪೮,	೨೦೫೪,
ಮೇ	೧೯೬೫,	೧೯೭೧,	೧೯೭೬,	೧೯೮೨,	೧೯೯೩,	೧೯೯೯,	೨೦೦೪,	
	೨೦೧೦,	೨೦೨೧,	೨೦೨೭,	೨೦೩೨,	೨೦೩೮,	೨೦೪೯,	೨೦೫೫,	
ಜೂನ	೧೯೫೭,	೧೯೬೩,	೧೯೬೮,	೧೯೭೪,	೧೯೮೫,	೧೯೯೧,	೧೯೯೬,	
	೨೦೦೨,	೨೦೧೩,	೨೦೧೯,	೨೦೨೪,	೨೦೩೦,	೨೦೪೧,	೨೦೫೨,	೨೦೫೭

	ತಾರೀಖು				
ಶನಿವಾರ	೧	೮	೧೫	೨೨	೨೯
ರವಿವಾರ	೨	೯	೧೬	೨೩	೩೦
ಸೋಮವಾರ	೩	೧೦	೧೭	೨೪	೩೧
ಮಂಗಳವಾರ	೪	೧೧	೧೮	೨೫	....
ಬುಧವಾರ	೫	೧೨	೧೯	೨೬	....
ಗುರುವಾರ	೬	೧೩	೨೦	೨೭	....
ಶುಕ್ರವಾರ	೭	೧೪	೨೧	೨೮	....

ತಿಂಗಳವರೆಗೆ ಸಾಗಬೇಕು. ಆದು ತಿಂಗಳ ಕೋಷ್ಟಕದ ಕಡೆಯ ಕೋಷ್ಟಕದಲ್ಲಿ ಸಿಕ್ಕಿತು. ಹಾಗೆಯೇ ಕೆಳಕ್ಕೆ ವಾರಗಳ ಕಡೆಗೆ ಸಾಗಬೇಕು ಮತ್ತು ೨೬ ನೇ ತಾರೀಖು ಇರುವ ಕೋಷ್ಟಕಿನ ಗುಂಟ ಎಡಕ್ಕೆ ಸಾಗಬೇಕು. ಇವೆರಡೂ ಕೋಷ್ಟಕ ಕೂಡುವಲ್ಲಿ ಗುರುವಾರ ಇರುವದು. ಇದೆ ೧೯೫೬ನೇ ಜಾನೇವಾರಿ ೨೬ ನೇ ತಾರೀಖು ಗುರುವಾರ ಆಗುವದು.

ಟೀಪು :— ಜಾನೇವಾರಿ ಫೇಬ್ರುವರಿ ತಿಂಗಳಗಳ ಮೇಲೆ * ಈ ಚಿನ್ಹವಿದ್ದರೆ ಆವು ಲೀಪ ವರ್ಷ (ಇಸ್ವಿಯು ನಾಲ್ಕರಿಂದ ಭಾಗಿಸಿ ಕೊಂಡರೆ) ವೆಂದೂ ಮೇಲೆ ಹೇಳ್ಕೊಂಡ ಚಿನ್ಹವು ಇರದಿದ್ದರೆ ಆವು ಸಾಧಾರಣವರ್ಷದವೆಂದೂ ತಿಳಿಯಬೇಕು. ಆದ್ದರಿಂದ ೧೯೫೬ ಇದು ಲೀಪ ವರ್ಷ, ಆದಕ್ಕಾಗಿ * ಈ ಚಿನ್ಹವು * ಜಾನೇವಾರಿಯನ್ನು ಹಿಡಿಯಲಾಯಿತು.

(೩) ಸರಕಾರದವರು ಒಬ್ಬ ಶಿಕ್ಷಕ ಸಾಲೆಗಳಿಗೆ ಮತ್ತು ೧ರಿಂದ ೪ನೆಯ ಇಯತ್ತೆಯ ಸಾಲೆಗಳಿಗೆ ಮೂಲೋದ್ಯೋಗದ ಸುಲಭ ಅಭ್ಯಾಸ ಪತ್ರಿಕೆಯನ್ನು ತಯಾರಿಸಿದ್ದಾರೆ. ಅದು ನೂಲುವದನ್ನು ಮತ್ತು ನೂತ ನೂಲಿನಿಂದ ಆಸನಗಳನ್ನು ನೇಯುವದನ್ನು ಒಳಗೊಂಡಿರುವದರಿಂದ ಸ್ವಯಂಪೂರ್ಣವಿದೆ. ಒಬ್ಬ ಶಿಕ್ಷಕನಿರುವ ಮತ್ತು ಕಿರಿಯ ಪ್ರಾಥಮಿಕ ಸಾಲೆಗಳಿಗಾಗಿ ಇರುವ ಮೂಲೋದ್ಯೋಗದ ಈ ಅಭ್ಯಾಸ ಪತ್ರಿಕೆಯು ೧೯೫೬ನೆಯ ಜೂನ ತಿಂಗಳಿಂದ ಬಳಕೆಯಲ್ಲಿ ಬರುವದು. ಉಪಕರಣಗಳ ಬೇಡಿಕೆಗಳನ್ನು ಸಹ ಸುಲಭಗೊಳಿಸಲಾಗಿದೆ. ಮತ್ತು ಒಬ್ಬ ಶಿಕ್ಷಕನಿರುವ ಸಾಲೆಯ ಉಪಕರಣಗಳ ಬೆಲೆಯು ಸುಮಾರು ೧೦೦/— ರೂಪಾಯಿಗಳಾಗಬಹುದೆಂದು ತಿಳಿಯಲಾಗಿದೆ. ಕಚ್ಚಾ ಸಾಮಗ್ರಿಯ ಬೆಲೆಯು ಸುಮಾರು ೨೦/— ರೂಪಾಯಿ ಆಗಬಹುದು. ಈ ಸುಲಭತೆಯು ಒಬ್ಬ ಶಿಕ್ಷಕ ಸಾಲೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಜೀವನ ಶಿಕ್ಷಣ ಸಾಲೆಗಳಾಗಿ ಪರಿವರ್ತಿಸಲಿಕ್ಕೆ ಸಹಾಯಕಾರಿಯಾಗುವದು. ಜೀವನ ಶಿಕ್ಷಣ ತತ್ವವು ಒಬ್ಬ ಶಿಕ್ಷಕ ಸಾಲೆಗಳಿಗೆ ಹೆಚ್ಚು ಹೊಂದಿಕೆಯಾಗುವದೆಂದು ತಿಳಿಯಲಾಗಿದೆ. ಯಾಕಂದರೆ ಒಬ್ಬ ಶಿಕ್ಷಕ ಸಾಲೆಗಳಲ್ಲಿ (೧–೪ ಇಯತ್ತೆಗಳನ್ನು ಕಲಿಸುವ) ಒಂದು ವರ್ಗವು ಶಿಕ್ಷಕನ ⅓ ವೇಳೆಯನ್ನು ಮಾತ್ರ ತೆಗೆದುಕೊಳ್ಳುವದು. ಉಳಿದ ⅔ ವೇಳೆಯಲ್ಲಿ ಆ ವರ್ಗವು ಸ್ವಯಂ ಶಿಕ್ಷಣದಲ್ಲಿ ಇಲ್ಲವೆ ವೈಯಕ್ತಿಕವಾಗಿ ಕೆಲಸದಲ್ಲಿ ತೊಡಗಬೇಕಾಗುವದು. ಯೋಗ್ಯ ಪ್ರೇರಣೆಯಿಂದ ಕೂಡಿದ ಮೂಲೋದ್ಯೋಗವು, ಶಿಕ್ಷಕನು ಉಳಿದ ವರ್ಗಗಳನ್ನು ತೆಗೆದುಕೊಳ್ಳುತ್ತಿರುವಾಗ ಸ್ವಯಂ-ಶಿಕ್ಷಣದ ಮತ್ತು ವ್ಯಕ್ತಿಗತ ಕೆಲಸದ ಸಮಸ್ಯೆಯನ್ನು ಬಿಡಿಸುವದು.

(೪) ಸರಕಾರದವರು ಶಹರಗಳಲ್ಲಿಯ ದೊಡ್ಡ ಸಾಲೆಗಳನ್ನು ಜೀವನ ಶಿಕ್ಷಣ ಸಾಲೆಗಳನ್ನಾಗಿ ಪರಿವರ್ತಿಸಲು ನಿರ್ಧರಿಸಿದ್ದಾರೆ. ಇದಕ್ಕಾಗಿ ಅಧಿಕೃತ ನಗರಸಭೆಯ ಆಡಳಿತದಲ್ಲಿರುವ ೧೩ ಮೂಲೋದ್ಯೋಗ ಸಾಲೆಗಳನ್ನು ಆರಿಸಿದ್ದಾರೆ. ಪ್ರತಿಯೊಂದು ಸಾಲೆಗೆ ೧೦,೦೦೦/— ರೂಪಾಯಿಗಳ ಸಹಾಯ ಧನವನ್ನು— ಮೂಲೋದ್ಯೋಗದ ಮನೆಯನ್ನು(Shed) ಕಟ್ಟಿಸುವದಕ್ಕಾಗಿ ೬,೦೦೦/- ರೂಪಾಯಿ, ಮೂಲೋದ್ಯೋಗದ ಉಪಕರಣಗಳಿಗಾಗಿ ೨,೦೦೦/— ರೂಪಾಯಿ ಮತ್ತು ಇತರ ವೆಚ್ಚಕ್ಕೆಂದು ೧,೦೦೦/— ರೂಪಾಯಿ— ಕೊಡಲಾಗಿದೆ.

ಈ ಹದಿಮೂರು ಸಾಲೆಗಳು ಕೆಳಗಿನ ಶಹರಗಳಲ್ಲಿ ಇವೆ:—

೧) ಬಡೋದೆ. ೨) ಬ್ರೋಚ. ೩) ಸುರತ. ೪) ನದಿಯಾದ. ೫) ಗೋದ್ರಾ. ೬) ಜಳಗಾಂವ. ೭) ಮಳೆಗಾಂವ. ೮) ಅಮಳನೇರ. ೯) ಪುಣೆ. ೧೦) ಅಹಮದನಗರ. ೧೧) ಕೊಲ್ಹಾಪುರ. ೧೨) ಬೆಳಗಾಂವ. ೧೩) ವಿಜಾಪುರ.

(೫) ಸರಕಾರೇತರ ಟ್ರೇನಿಂಗ ಕಾಲೇಜುಗಳಿಗಾಗಿ ನೇಮಿಸಿದ ಸಮಿತಿಯ ಶಿಫಾರಸುಗಳನ್ನು ವಿಚಾರಿಸಿ ಈ ಕಾಲೇಜುಗಳಿಗೆ ಸಹಾಯ ಧನ ಕೊಡುವದನ್ನು ಪುನರ್ವಿಮರ್ಶಿಸಿದ್ದಾರೆ. ಗಂಡು ಮಕ್ಕಳ ಟ್ರೇನಿಂಗ ಕಾಲೇಜುಗಳಿಗೆ ೧೦೦ಕ್ಕೆ ೫೦ರಷ್ಟು ಇದ್ದ ಈ ಸಹಾಯ ಧನವನ್ನು ಒಂದೇ ರೀತಿಯಾಗಿ ಎಲ್ಲ ಟ್ರೇನಿಂಗ ಕಾಲೇಜುಗಳಿಗೆ ೧೦೦ಕ್ಕೆ ೬೬⅔ಕ್ಕೆ ಏರಿಸಲಾಗಿದೆ. ಅದರಂತೆ ಪ್ರತಿಯೊಬ್ಬ ವಿದ್ಯಾರ್ಥಿಗೆ ೧೨೦/- ರೂಪಾಯಿ ಇದ್ದ ಸಹಾಯ ಧನವನ್ನು ವಸತಿಗೃಹದ ಸಹಾಯ ಧನವನ್ನು ಬಿಟ್ಟು ೨೦೦/- ರೂಪಾಯಿಗಳಿಗೆ ಏರಿಸಲಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಗೆ ೬೦/- ರೂಪಾಯಿ ಇದ್ದ ಅಭ್ಯಾಸದ ಶುಲ್ಕದ ಮೇಲಿನ ಸಹಾಯ ಧನವನ್ನು ಪ್ರತಿ ವಿದ್ಯಾರ್ಥಿಗೆ ೭೨/- ರೂ ಗೆ ಹೆಚ್ಚಿಸಲಾಗಿದೆ. ಈ ಹೆಚ್ಚಿಗೆಗಳಿಂದ ಟ್ರೇನಿಂಗ ಕಾಲೇಜುಗಳು ಯೋಗ್ಯ ರೀತಿಯಾಗಿ ಉಪಕರಣಗಳನ್ನು ಪೂರೈಸಿಕೊಳ್ಳಲು ಮತ್ತು ಶ್ರೇಷ್ಠ ರೀತಿಯಲ್ಲಿ ಕಾರ್ಯ ಸಾಗಿಸಲು ಶಕ್ಯವಾಗುವದೆಂದು ಯೋಜಿಸಲಾಗಿದೆ.

(೬) ನಮ್ಮ ಪ್ರಾಥಮಿಕ ಸಾಲೆಗಳಲ್ಲಿ ಮತ್ತು ಟ್ರೇನಿಂಗ ಕಾಲೇಜುಗಳಲ್ಲಿ ಹಿಂದಿ ವಿಷಯವು ಈಗ ಹೆಚ್ಚಿನ ಪ್ರಮಾಣದಲ್ಲಿ ಕಲಿಸಲ್ಪಡುವದು. ಆದರೆ ಟ್ರೇನಿಂಗ ಕಾಲೇಜುಗಳಲ್ಲಿಯ ಇಲ್ಲವೆ ಪ್ರಾಥಮಿಕ ಸಾಲೆಗಳಲ್ಲಿಯ ಪುಸ್ತಕಾಲಯಗಳಲ್ಲಿ ಹಿಂದೀ ಕಲಿಸುವ ವಿಷಯದಲ್ಲಿ ತೀರ ಕಡಿಮೆ ಪುಸ್ತಕಗಳು ಇವೆ. ಆದುದರಿಂದ ಸರಕಾರದವರು ಈಗ ಪ್ರಾಥಮಿಕ ಟ್ರೇನಿಂಗ ಕಾಲೇಜು

(ಕವರ ೩ ಕ್ಕೆ)

ಗಳಿಗೆ ಹಿಂದೀ ವಿಷಯದಲ್ಲಿ ಪುಸ್ತಕಗಳನ್ನು ಕೊಂಡ ಬಗ್ಗೆ ಸಹಾಯ ಧನವನ್ನು ಕೊಡುವದಕ್ಕಾಗಿ ನಿಧಿಯ ಏರ್ಪಾಡನ್ನು ಮಾಡಿದ್ದಾರೆ. ಪ್ರತಿಯೊಂದು ಪ್ರಾಥಮಿಕ ಟ್ರೇನಿಂಗ ಕಾಲೇಜಕ್ಕೆ ಯೋಗ್ಯ ಹಿಂದೀ ಪುಸ್ತಕಗಳನ್ನು ಕೊಳ್ಳುವದಕ್ಕೆಂದು ೧೫೦ ರೂಪಾಯಿಗಳನ್ನು ಕೊಟ್ಟಿದೆ. ಅದರಂತೆ ರಾಜ್ಯದಲ್ಲಿಯ ಪೂರ್ಣ ಪ್ರಾಥಮಿಕ ಸಾಲೆಗಳಿಗೆ ಸಸ್ಥ ಸಾಹಿತ್ಯ ಮಂಡಳ, ದಿಲ್ಲಿ ಅವರು ಪ್ರಸಿದ್ಧಿಸಿದ ೨೬ ಪುಸ್ತಕಗಳನ್ನು ಪೂರೈಸಲಾಗುತ್ತಿದೆ. ಹೀಗೆ ಸಾಲೆಗಳಲ್ಲಿಯ ಹುಡುಗರು ಮತ್ತು ತರಬೇತಿಯಲ್ಲಿರುವ ಶಿಕ್ಷಕರು ಹಿಂದಿಯನ್ನು ಓದುವದಕ್ಕೆ ಮತ್ತು ಹಿಂದೀ ಜ್ಞಾನವನ್ನು ಹೆಚ್ಚಿಸಿಕೊಳ್ಳುವದಕ್ಕೆ ಉಪಯುಕ್ತ ಸಾಹಿತ್ಯವನ್ನು ಪಡೆಯುವರು.

ಪುಸ್ತಕ ವಿಮರ್ಶೆ

ಪದವೀಧರರ ಜೀವನ ಶಿಕ್ಷಣ ಕೇಂದ್ರದ ಆಶ್ರಯದಲ್ಲಿ ಸರಕಾರದವರು ಇತ್ತೀಚೆಗೆ ಜೀವನ ಶಿಕ್ಷಣ ಸಾಲೆಗಳ ಸಲುವಾಗಿ ಚಟುವಟಿಕೆಯ ಯೋಜನೆಯನ್ನು ಪ್ರಕಟಿಸಿದ್ದಾರೆ. ರಾಜ್ಯದ ಕೈಪಿಡಿ ಸಮಿತಿಯ ಮಾರ್ಗದರ್ಶನದಲ್ಲಿ ಈ ಯೋಜನೆಗಳು ತಯಾರಿಸಲ್ಪಟ್ಟಿವೆ. ೧ರಿಂದ ೪ನೆಯ ಇಯತ್ತೆಗಳಿಗಾಗಿ ಅನ್ವಯಿಸುವ ಒಂದನೆಯ ಭಾಗವನ್ನು ಮಾತ್ರ ಪ್ರಕಟಿಸಲಾಗಿದೆ. ಸಾಲೆಗಳಲ್ಲಿ ಸಂಘಟಿಸಲ್ಪಡುವ ಮೂಲೋದ್ಯೋಗಕ್ಕೆ, ಸಾಮಾಜಿಕ ಮತ್ತು ನೈಸರ್ಗಿಕ ಪರಿಸ್ಥಿತಿಗಳು, ದೈನಂದಿನ ಕೆಲಸಕ್ಕೆ, ಆಟಗಳು ಇತ್ಯಾದಿ ವಿಷಯಗಳಿಗೆ ಸಂಬಂಧಿತವಾಗುವ ಚಟುವಟಿಕೆಯ ಕಾರ್ಯಕ್ರಮಗಳೊಂದಿಗೆ ಅಭ್ಯಾಸ ಪತ್ರಿಕೆಯ ವಿಷಯಗಳನ್ನು ಸಮನ್ವಯ ಗೊಳಿಸುವಲ್ಲಿ ಜೀವನ ಶಿಕ್ಷಣ ಸಾಲೆಗಳಲ್ಲಿಯ ಶಿಕ್ಷಕರು ಸಾಕಷ್ಟು ತೊಂದರೆಯನ್ನು ಅನುಭವಿಸಿದ್ದು ತಿಳಿದ ಸಂಗತಿಯಾಗಿದೆ. ಈ ದಿಶೆಯಲ್ಲಿ ಕೆಲವೊಂದು ಮಾರ್ಗದರ್ಶನವು ಅವಶ್ಯವಿತ್ತು. ಈ ತರದ ಯೋಜನೆಯು ಮೊದಲೇ ತಯಾರಿಸಲ್ಪಟ್ಟಿತ್ತು. ಆದರೆ ಅದು ತೀರ ಹಳೆಯದಾದ್ದರಿಂದ ಪುನರ್ಪರಿಶೀಲನೆಯು ಅವಶ್ಯವಿದ್ದಿತು. ಈಗ ಪ್ರಕಟಿಸಿದ ಪುಸ್ತಕವು ಜೀವನ ಶಿಕ್ಷಣ ಸಾಲೆಗಳ ಅವಶ್ಯಕ ಬೇಡಿಕೆಗಳನ್ನು ಪೂರೈಸುತ್ತದೆ.

೨/. ಈ ಪುಸ್ತಕವು ಸಮವಾಯದ ಯೋಜನೆ ಮತ್ತು ಅದರ ತಂತ್ರದ ಬಗೆಗೆ ಇರುವ ಪ್ರಸ್ತಾವನೆಯಿಂದ ಪ್ರಾರಂಭವಾಗುತ್ತದೆ. ಚಟುವಟಿಕೆಯು ಕೇಂದ್ರವಾಗಿರುವ ಸಮವಾಯ ಪಾಠಗಳ ಒಂದು ಗುಂಪು ಚಿತ್ರಿತವಾಗಿದೆ; ಮತ್ತು ಶಾಲೆಯ ವೇಳೆಯನ್ನು ಹಂಚಿದ ಯೋಜನೆಯನ್ನು ಸಹ ಅದರಲ್ಲಿ ಕೊಡಲಾಗಿದೆ. ಈ ಪುಸ್ತಕವು ಬೇರೆ ಬೇರೆ ತಿಂಗಳುಗಳಲ್ಲಿ ಸಂಘಟಿಸಲ್ಪಡುವ-ಚಟುವಟಿಕೆಗಳನ್ನೂ ಮತ್ತು ಚಟುವಟಿಕೆಯ ಮುಖಾಂತರ ಕೊಡಬಹುದಾದ ಸಮವಾಯ ಜ್ಞಾನವನ್ನೂ (ಸಮವಾಯ ಪಾಠಗಳ ರೂಪದಲ್ಲಿ) ವಿವರಿಸುತ್ತದೆ.

೩/. ಈ ಪುಸ್ತಕದ ಪ್ರತಿಗಳನ್ನು ಎಲ್ಲ ಜೀವನ ಶಿಕ್ಷಣ ಸಾಲೆಗಳಿಗೂ ಆಫೀಸರರಿಗೂ ಪೂರೈಸುವ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಜೀವನ ಶಿಕ್ಷಣ ಸಾಲೆಗಳಲ್ಲಿಯ ಮುಂದಿನ ವರ್ಷದ ಕೆಲಸದ ಯೋಜನೆಗೆ ಈ ಪುಸ್ತಕದಲ್ಲಿ ಕೊಟ್ಟಿರುವ ಚಟುವಟಿಕೆಯ ಯೋಜನೆಯನ್ನು ತಳಹದಿಯನ್ನಾಗಿ ಇಟ್ಟುಕೊಳ್ಳಬೇಕೆಂದು ಆಶಿಸಲಾಗಿದೆ. ಈ ಪುಸ್ತಕದ ಹೆಚ್ಚಿನ ಪ್ರತಿಗಳು ಬೇಕಾದವರು ಸಂಬಂಧಿಸಿದ ಪ್ರದೇಶಗಳಲ್ಲಿರುವ ಪದವೀಧರರ ಜೀವನ ಶಿಕ್ಷಣ ಕೇಂದ್ರಗಳ ಪ್ರಿನ್ಸಿಪಾಲರಿಗೆ ಪತ್ರ ವ್ಯವಹಾರ ಮಾಡಬೇಕಾಗುವದು. ಸುರತದ ಸಲುವಾಗಿ ರಾಜಪಿಪಲಾದಲ್ಲಿ, ಮಹಾರಾಷ್ಟ್ರದ ಸಲುವಾಗಿ ಧುಳಿಯಾದಲ್ಲಿ ಒಂದು, ಕರ್ನಾಟಕದ ಸಲುವಾಗಿ ಧಾರವಾಡದಲ್ಲಿ ಹೀಗೆ ಪದವೀಧರರ ಜೀವನ ಶಿಕ್ಷಣ ಕೇಂದ್ರಗಳು ಇರುತ್ತವೆ.

ಆಯ್. ಎಸ್. ಬಿದರಿ

Regd. No. B. 5375

ಸಹಜ ಸಾಹಿತ್ಯ ! ★ **ಜ್ಞಾನರಸ ಸಾಹಿತ್ಯ** ★ **ಶಾಶ್ವತ ಸಾಹಿತ್ಯ !**

ಮಾಸಿದ ತಲೆಯನ್ನು ಮುಡಿಮಾಡುವ ಪವಿತ್ರ ಸಾಹಿತ್ಯ !!

ಪ್ರತಿಯೊಂದು ವಾಚನಾಲಯದ ಬೆಲೆಯನ್ನು ಹೆಚ್ಚಿಸುವ ಪ್ರಭಾವೀ ಗ್ರಂಥಗಳು.

೧.	ಪವಿತ್ರ ಜೀವನ (ಟಾಲಸ್ಟಾಯರ ಜಗದ್ವಿಖ್ಯಾತ ಕಥಾಸಂಗ್ರಹ)	೧– ೨– ೦
೨.	ಸುಂದರ ಕಥೆಗಳು (ಪಾಂಡಿಚೇರಿ ಆಶ್ರಮದ ಶ್ರೀ ತಾಯಿಯವರು ಹೇಳಿದವು)	೧– ೪– ೦
೩.	ಸಪ್ತಪದಿ (ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಏಕಾಂಕಗಳು)	೧– ೪– ೦
೪.	ದೀಪವರ್ತಿ (ಶ್ರೀ ಅರವಿಂದರ ೨ ಉಜ್ವಲ ಕಥೆಗಳು)	೦– ೬– ೦
೫.	ಶ್ರೀ ಅರವಿಂದರು (ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ)	೧– ೮– ೦
೬.	ಮುಗಿಲ ಜೇನು (ಉತ್ಸಾಹದಾಯಕವಾದ ಕವನ ಸಂಕಲನ)	೧– ೮– ೦
೭.	ಪೂಜಾ (ನಿತ್ಯ ಪಠನೀಯವಾದ ಗದ್ಯಗೀತೆಗಳು)	೧–೧೨– ೦
೮.	ಭಾರತದ ಭವ್ಯಸಿದ್ಧತೆ (ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ)	೧– ೦– ೦
೯.	ಬೆಟ್ಟದ ಹೊಳೆ (ಪ್ರಗತಿಗಾಮಿಯಾದ ಕಾದಂಬರಿ)	೧– ೪– ೦
೧೦.	ಸ್ವರ್ಗದೋಲೆಗಳು (ಕರ್ನಾಟಕ ಸಂಸ್ಕೃತಿಯ ಕನ್ನಡಿ)	೧– ೮– ೦
೧೧.	ಕನ್ನಡ ಕುಲದೀಪ ಬಸವಣ್ಣ (ಉದಿತ ಜೀವನಕ್ಕೆ ಕೈಗೋಲು)	೧– ೪– ೦
೧೨.	ಗರತಿಯ ಬಾಳು (ನಿತ್ಯ ಜೀವನದ ರಸಘಟ್ಟಿ)	೧– ೪– ೦
೧೩.	ಆರ್ಯದೇಶಭಕ್ತಿ (ಧ್ಯೇಯ ಜೀವಿಗೆ ಈಸುಗುಂಬಳ)	೦– ೩– [illegible]
೧೪.	ಜೀವನ ದೃಷ್ಟಿ (ವಿವಿಧ ಪ್ರಬಂಧಗಳು)	೧– ೨–
೧೫.	ದತ್ತ ಸಾಹಿತ್ಯ (ಶ್ರೀ ಬೇಂದ್ರೆ ಸಾಹಿತ್ಯ ಪರಿಚಯ)	೧– ೮-

ಇವಲ್ಲದೆ ಶ್ರೀ ಅರವಿಂದ ಮಹಾಯೋಗಿಗಳ ವಿವಿಧ ಸಾಹಿತ್ಯ ಗ್ರಂಥಗಳೂ ನಮ್ಮಲ್ಲಿ ಯೋಗ್ಯ ಬೆಲೆಗೆ ಸಿಗುತ್ತ ಹತ್ತು ರೂ.ಗಿಂತ ಹೆಚ್ಚಿನ ಬೆಲೆಯ ಪುಸ್ತಕ ಕೊಂಡುಕೊಳ್ಳುವವರ ಅಂಚೆ ವೆಚ್ಚವನ್ನು ನಾವೇ ನೋಡಿಕೊಳ್ಳುವೆವು.

ಶ್ರೀ ಅರವಿಂದ ಗ್ರಂಥಾಲಯ ಪೋ:— **ಚಡಚಣ** ಜಿ. ವಿಜಾಪುರ

ಶ್ರೀ 'ಶಿವಕುಮಾರ' ಅವರ **ಹುಚ್ಚರ ರಾಜ್ಯ** ಬೆಲೆ ಎಂಟಾಣೆ ಮಾತ್ರ

(ಶ್ಲೇಷರೂಪಕ ಕಥೆಗಳು)

★ ಕೇವಲ ೨–೮–೦ (ಅಂಚೆವೆಚ್ಚ ಸಹಿತ) ವಾರ್ಷಿಕ **ಚಂದಾಹಣದಲ್ಲಿ** ಮಾಲೆಯ ಮೊದಲ ಕುಸುಮವಾಗಿ ಪಡೆಯಿರಿ. ವರ್ಷಕ್ಕೆ ೪೦೦ ಪುಟಗಳ ಸಾಹಿತ್ಯ. ಪ್ರಾಥಮಿಕ ಶಿಕ್ಷಕರ ಕಥೆ, ಕವನ, ನಾಟಕ, ಕಾದಂಬರಿಗಳ ನಾಲ್ಕೈದು ಕೃತಿಗಳಲ್ಲಿ.

★ ಕನ್ನಡ ಶಾಲಾ ವಿದ್ಯಾರ್ಥಿಗಳ ಪಠ್ಯೇತರ ಕಥೆ-ಕವನಗಳ ಮೇರುಕೃತಿಗಳೆಂದು ಖ್ಯಾತಿವೆತ್ತ 'ಆಣಿಕಲ್ಲು' 'ಪುಟಚೆಂಡು' ಪುಸ್ತಕಗಳನ್ನು ನೀಡಿದ ಪ್ರಾ. ಶಿ. ರ. ಪ್ರೋತ್ಸಾಹನಾರ್ಥ ತೆರೆದ ಭಾರತೀ ಸಾಹಿತ್ಯಭಂಡಾರದ ಪ್ರಕ ಎಂದ ಮೇಲೆ ಹೆಚ್ಚಿಗೆ ಹೇಳಬೇಕಾಗಿಲ್ಲ.

★ **ಕೂಡಲೇ** ತಾವೆಲ್ಲ ಚಂದಾದಾರರಾಗಿ ತಮ್ಮದೇ ಆದ ಶಿಕ್ಷಕರ ಸಂಸ್ಥೆಯು ಚಿರಸ್ಥಾಯಿಯಾಗಿ ನಿಲ್ಲಲು **ನೆರವು ನೀಡಿರಿ.** ಶ್ರೇಷ್ಠಸಾಹಿತಿಗಳ ಕೃತಿಗಳನ್ನೂ ಪಡೆಯಿರಿ.

★ ಶಿಕ್ಷಕರಿಗೆ ವಿಶೇಷ ಸವಲತ್ತುಗಳಿವೆ.

★ ಚಂದಾದಾರರಿಗೆ ಬಿಡಿ ಪ್ರಕಟಣೆಗಳು ½ ಬೆಲೆಯಲ್ಲಿ (ಅಂಚೆವೆಚ್ಚ ಬೇರೆ)

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

Printed by Shri S. F. Kattimani at Manohar Power Printing Press, Hubli. Edited a Published by Sjts S. P. Patil, B. M. Shintri, S. R. Tatti & Smti. P. A. Bhaskar at the Kanna Prathamik Shikshan Office, Govt. Training College for Men, Dharwar.

1957-58

ಸ್ಥಾಪನೆ : ೧೮೬೫

ಸಂಸ್ಥಾಪಕರು

ಜೀವನ ಶಿಕ್ಷಣ ಪತ್ರಿಕೆಯ

ಶತಮಾನೋತ್ತರ ಬೆಳ್ಳಿ ಹಬ್ಬದ

ಪುಸ್ತಕ ಪ್ರದರ್ಶನ ೧೯೮೯

1957-58

ಶತಮಾನೋತ್ತರ ಬೆಳ್ಳಿ ಹಬ್ಬ
(ಏಪ್ರಿಲ್ ೧೯೬೫ ರಿಂದ)
ವರ್ಷ 1957

ಡೆ. ಚನ್ನಬಸಪ್ಪನವರು,
೧೮೩೩-೧೮೮೧,
ನೇಮ ಸಂಪಾದಕ

ಜೀವನ ಶಿಕ್ಷಣ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯೂಟಿ ಚನ್ನಬಸಪ್ಪ ಸ್ಮೃತ್ರ. ರೊಡ್ಡರಸ್ತೆ, ಧಾರವಾಡ ೧

ಲೇಖಗಳು

ತಿಂಗಳು	ಲೇಖ	ಪುಟ
ಜೂನ ೧೯೭೭	ಶ್ರೀ ಸಿದ್ಧ[illegible] ನಿಜಲಿಂಗಪ್ಪನವರು (ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು)	೫-೭
	ಮೂಲ ಶಕ್ತಿಯಿಂದ [illegible] ಲೇಖಾಂಕ-(೧೭)	೮-೧[illegible]
ಜುಲೈ ೧೯೭೭	[illegible] ಶ್ರೀ [illegible] ಬಸಪ್ಪನವರ [illegible] (ಸಂಪಾದಕೀಯ)	೧-೨
	ಮೂಲ ಶಕ್ತಿಯಿಂದ [illegible] ಲೇಖಾಂಕ-(೧೮)	೧೯-೨
ಆಗಸ್ಟ ೧೯೭೭	[illegible] ಪ್ರಕಟನೆಗಳು (ಸಂಪಾದಕೀಯ).	[illegible]
	ಮೂಲ ಶಕ್ತಿಯಿಂದ [illegible] ಲೇಖಾಂಕ-(೧೯)	೧೨-೧
ಸಪ್ಟೆಂಬರ ೧೯೭೭	ಶತಾಬ್ದಿ ಸಮಾರಂಭ (ಪ್ರಕಟನೆಗಳು)	೪-೫
	ಜೀವನ ಶಕ್ತಿ ಪ್ರತಿಪಾದನೆಯ ಸೂತ್ರಗಳು ([illegible])	೧೦
	ಮೂಲ ಶಕ್ತಿಯಿಂದ [illegible] ಲೇಖಾಂಕ-(೨೦)	೧೬-೧೭
ಅಕ್ಟೋಬರ ೧೯೭೭	ವಿಧಿ ಸಂಗ್ರಹ	೮
	ಮೂಲ ಶಕ್ತಿಯಿಂದ [illegible] ಲೇಖಾಂಕ-(೨೧)	೧೭-೧೯
ನವಂಬರ ಡಿಸೆಂಬರ ೧೯೭೭ ೧೯೭೭ ಜನವರಿ ೧೯೭೮ [illegible] ([illegible])	ನಮ್ಮ ಮಾಸಿಕವು (ಹುಟ್ಟು ದಾರಿ ಬೆಳವಣಿಗೆ)	೨೦-೨[illegible]
	[illegible] ಬಸಪ್ಪನವರು (ಶ್ರೀ [illegible] ಪ್ರತಿಷ್ಠಾಪಕರು [illegible])	೨೪-೨[illegible]

ಲೇಖಗಳು

ತಿಂಗಳು	ಲೇಖ	ಪುಟ
ಜುಲೈ ಡಿಸೆಂಬರ್ [illegible] ಜನವರಿ [illegible]	ಶತಾಬ್ದಿ ಸಮಾರಂಭದ ಕಾರ್ಯಕಾರಿ ಮಂಡಲಿ	೮೮
[illegible]	ಜೀವನ ಕಾರ್ಯಾಲಯದ ಸಂಪಾದಕ ಮಂಡಲಿ	೮೮
ಫೆಬ್ರುವರಿ [illegible]	ಕಾರ್ಯಾಲಯ [illegible] ವರದಿ	೨-೧೦
ಮಾರ್ಚ್ [illegible]	[illegible] ಸಂಪುಟದ ಪ್ರಕಟಣಾ ಸಮಾರಂಭದ ಸ್ವಾಗತ ಭಾಷಣ	[illegible]
ಏಪ್ರಿಲ್ [illegible]	[illegible] ([illegible])	೧೧-೧೩
ಮೇ [illegible]	[illegible]	೧
	ನಿಧಿ ಸಂಗ್ರಹದ ವಿವರಗಳು	೧
	[illegible] ವಿವರಗಳು	೧-೨
	ಮೂಲ [illegible] [illegible] (೨)	[illegible]
[illegible]	[illegible]	[illegible]

ಜೀವನ ಶಿಕ್ಷಣ

ಪ್ರಧಾನ ಸಂಪಾದಕರು:
ಶ್ರೀ ಎಸ್. ಪಿ. ಪಾಟೀಲ

ನಮ್ಮ ಮೈಸೂರ ರಾಜ್ಯದ ಪ್ರಧಾನ ಮಂತ್ರಿ ಎಸ್. ನಿಜಲಿಂಗಪ್ಪನವರು

ಬಿಡಿ ಪ್ರತಿ ೬ ಆಣೆ | ೧೯೫೭ ಜೂನ | ವಾ. ಚಂ. ೪ ರೂ.

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : ಶ್ರೀ ಜಿ. ಕೆ. ಕೊಪ್ಪಿಕರ, ಬಿ.ಎ.(ಆನರ್ಸ), ಬಿ.ಎಸ್‌ಸಿ., ಎಮ್.ಇಡಿ.
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : ಶ್ರೀ ಎಸ್. ಪಿ. ಪಾಟೀಲ, ಬಿ.ಎ., ಬಿ.ಟಿ., ಡಿ.ಪಿ.ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗದ (ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೩ ಜೂನ ೧೯೫೭ ಸಂಚಿಕೆ ೧

— ಪರಿವಿಡಿ —

	ವಿಷಯ		ಪುಟ
೧.	ಸಂಪಾದಕೀಯ	....	೧
೨.	ಶ್ರೀ ಸಿದ್ದಪ್ಪನಹಳ್ಳಿ ನಿಜಲಿಂಗಪ್ಪನವರು	ಶ್ರೀ ಶಿಂತ್ರಿ ಬಸಪ್ಪನವರು	೫
೩.	ಒತ್ತಾಯ ಶಿಕ್ಷಣದ ಸಾಧನೋಪಾಯಗಳು	ಶ್ರೀ ಖ. ದೊ. ಯಲಬುರ್ಗಿ	೭
೪.	ಮೂಲಶಿಕ್ಷಣದ ಅರಿವು	ಶ್ರೀ ಶಿಂತ್ರಿ ಬಸಪ್ಪನವರು	೮
೫.	ಜೀವನ ಶಿಕ್ಷಣವು ಹೇಗೆ ಯಶಸ್ವಿಯಾದೀತು ?	ಶ್ರೀ ಅನ್ನದಾನೀಶ್ವರ ವಿರಕ್ತಮಠ	೧೧
೬.	ಜೀವನ ಶಿಕ್ಷಣ ಶಾಲೆಯು ಸಮಾಜ ಶಿಕ್ಷಣ ಹಾಗು ಸೇವೆಯ ಕೇಂದ್ರ	ಶ್ರೀಮತಿ ಪಿ. ಎ. ಭಾಸ್ಕರ	೧೩
೭.	ಹತ್ತಿಯ ಕೆಲಸದ ಮೂಲಕ ಸಮನ್ವಯ ಪಾಠದ ಟಿಪ್ಪಣೆ	ಶ್ರೀ ಎಮ್. ರಾಮಚಂದ್ರ ಚಾಯಾರಿ	೧೮
೮.	ಶ್ರೀ ವಿನೋಬಾ ಭಾವೆಯವರು ಸೂಚಿಸಿದ ಸ್ಥೂಲಮಾನದಿಂದ ವರ್ಗಮೂಲವನ್ನು ಹೇಳುವ ಪದ್ಧತಿ	ಶ್ರೀ ತಟ್ಟಿ ಶಾಮರಾಯರು	೨೪
೯.	ಗುರು–ಶಿಷ್ಯರಿಗೆ ಬಹುಮಾನ ವಿತರಣ ಸಮಾರಂಭ	....	೨೭
೧೦.	೧೯೫೭ನೇ ಎಪ್ರಿಲ್ ತಿಂಗಳಲ್ಲಿ ಜರುಗಿದ ಪ್ರಾ. ಶಾ. ಪ. ಪ. ಪರೀಕ್ಷೆಯಲಿ ಯಶಸು ಪಡೆದ ಶಾಲೆಗಳು	....	೨೮

17/6/57

ಸಂಪಾದಕೀಯ

"ಜೀವನ ಶಿಕ್ಷಣ"ದ ಹೊಸ ವರುಷ

ಇಂದಿಗೆ "ಜೀವನ ಶಿಕ್ಷಣ" ತನ್ನ ದೀರ್ಘಾಯುಷ್ಯದ ೨೪ ವರುಷಗಳನ್ನು ದಾಟಿ ೨೫ ನೆಯ ವರುಷದಲ್ಲಿ ಕಾಲಿಡುತ್ತದೆ. ಇಂಥ ಸಮಯದಲ್ಲಿ ಹೊಸ ವರುಷವನ್ನು ಪ್ರಾರಂಭಿಸುವಾಗ ಹಿಂದಿನ ದಿನಗಳು ತಾವಾಗಿಯೇ ನೆನಪಿಗೆ ಬರುತ್ತವೆ. ನಮ್ಮ ಸಂಸ್ಥೆಯು ಬೆಳಗಾಂವಿಯಲ್ಲಿದ್ದಾಗ ೧೯೩೩ ನೆಯ ಮೇ ತಿಂಗಳಲ್ಲಿ "ಮಾಸ ಪತ್ರಿಕೆ" ಎಂಬ ಹೆಸರಿನಿಂದ ಈ ಪತ್ರಿಕೆಯು ಬೆಳಕನ್ನು ಕಂಡಿತು. ಮುಂದೆ ೪ ವರುಷಗಳ ನಂತರ ಹೆಸರಿನಲ್ಲಿ ಬದಲಾವಣೆಯಾಗಿ "ಕನ್ನಡ ಶಾಲಾ ಪತ್ರಿಕೆ" ಎಂದು ಕರೆಯಲ್ಪಡಹತ್ತಿತು. ಈ ಹೆಸರಿನಿಂದ ನಮ್ಮ ಪತ್ರಿಕೆಯು ೧೯೪೯ರ ವರೆಗೆ ಶಿಕ್ಷಕರಿಗೆ ಮಾರ್ಗದರ್ಶನ ಮಾಡಿತು. ಆ ವರುಷ ಹೆಸರಿನಲ್ಲಿ ಪುನಃ ಬದಲಾವಣೆಯಾಯಿತು. ಅಂದಿನಿಂದ "ಕನ್ನಡ ಪ್ರಾಥಮಿಕ ಶಿಕ್ಷಣ"ಎಂದು ಹೆಸರು ಕೊಡಲ್ಪಟ್ಟಿತು. ಕಳೆದ ವರುಷ ರಾಜ್ಯಗಳ ಪುನರ್ಘಟನೆಯೊಂದಿಗೆ ಈ ಪತ್ರಿಕೆಯ ಹೆಸರಿನಲ್ಲಿ ಮತ್ತೊಮ್ಮೆ ಬದಲಾವಣೆಯಾಯಿತು. ೧-೧೧-೫೬ರಿಂದ ನಮ್ಮ ಪತ್ರಿಕೆಗೆ "ಜೀವನ ಶಿಕ್ಷಣ"ವೆಂದು ಕರೆಯುತ್ತಿದ್ದೇವೆ. ಈ ಹೊಸ ಹೆಸರಿನ ಔಚಿತ್ಯದ ಬಗೆಗೆ ನಾವೇನೂ ಶಿಕ್ಷಕರಿಗೆ ತಿಳಿಸಬೇಕಾಗಿಲ್ಲ. ಯಾಕಂದರೆ ಜೀವನ ಶಿಕ್ಷಣವೇ ರಾಷ್ಟ್ರೀಯ ಶಿಕ್ಷಣದ ಧೋರಣೆಯಾಗಿರುವದರಿಂದ ಅದಕ್ಕನುಸರಿಸಿ ನಮ್ಮ ಪತ್ರಿಕೆಯ ಹೆಸರಿನಲ್ಲಿ ಬದಲಾವಣೆ ಮಾಡುವದು ಅನಿವಾರ್ಯವಾಯಿತು.

ಮೊದಲಿನ ೬ ವರುಷಗಳ ವರೆಗೆ ಈ ಪತ್ರಿಕೆಯು ಸೈಕ್ಲೊ ಪದ್ಧತಿಯಿಂದ ಕೈಯಿಂದಲೇ ಬರೆಯಲ್ಪಟ್ಟು ಮುದ್ರಿತವಾಗಿತ್ತು. ೧೯೩೯ ರ ಅಕ್ಟೋಬರದಿಂದ ಈಗಿನಂತೆ ಛಾಪಿಸಲ್ಪಡಹತ್ತಿ ನಮ್ಮ ಸಂಸ್ಥೆಯು ಬೆಳಗಾಂವಿಯಿಂದ ಇಲ್ಲಿಗೆ ಬಂದ ಒಂದೆರಡು ವರುಷಗಳ ನಂತರ ಈ ಪತ್ರಿಕೆಯು ಧಾರವಾಡದಲ್ಲಿ ಪ್ರಸಿದ್ಧವಾಗಹತ್ತಿತು. ಈ ರೀತಿಯಿಂದ ನಮ್ಮ ಪತ್ರಿಕೆಯು ನಮ್ಮ ಸಂಸ್ಥೆಯ ಮುಖ್ಯ ಘಟಕವಾಗಿ ಶಿಕ್ಷಣ ಖಾತೆಯ ಆಶ್ರಯದಲ್ಲಿ ಕಳೆದ ೨೪ ವರುಷಗಳ ವರೆಗೆ ಕನ್ನಡ ನಾಡು ನುಡಿಗಳ ಸೇವೆಯನ್ನೂ ಪ್ರಾಥಮಿಕ ಶಿಕ್ಷಕರಿಗೆ ಮಾರ್ಗ ದರ್ಶನವನ್ನು ಮಾಡುತ್ತ ಬಂದಿದೆ. ಹಿಂದಿನ ಹಿರಿಯರು ತೋರಿಸಿಕೊಟ್ಟ ದಾರಿಯನ್ನೇ ನಾವು ತುಳಿಯುವೆವು. ಈ ಪತ್ರಿಕೆಯ ಮುಖ್ಯ ಹೊಣೆಯು ನಮ್ಮ ಕಡೆಗೆ ಬಂದು ೫ ವರುಷಗಳಾದವು. ಮೊದಲಿನ ವರುಷದಲ್ಲಿ ನಾವು ಇಟ್ಟುಕೊಂಡ ಉದ್ದೇಶಗಳು ಸಫಲವಾಗಿವೆ ಎಂದು ಓದುಗರಿಗೆ ತಿಳಿಸಲು ನಮಗೆ ಸಂತೋಷ. ಇದೆಲ್ಲವೂ ಸಾಧ್ಯವಾಗುವಂತೆ ನೆರವಾಗಲು ಶಿಕ್ಷಕರು ಹಾಗೂ ಶಿಕ್ಷಣಾಧಿಕಾರಿಗಳು ಸಹಕರಿಸಬೇಕು. ಯಾಕಂದರೆ ಪತ್ರಿಕೆಯ ಆಗು ಹೋಗುಗಳು ಆರ್ಥಿಕ ಪರಿಸ್ಥಿತಿಯನ್ನು ಹಾಗೂ ಲೇಖಕರ ಸಹಕಾರವನ್ನು ಅವಲಂಬಿಸಿದೆ. ಈ ಎರಡೂ ದೃಷ್ಟಿಯಿಂದ ಕಳೆದ ೫ ವರುಷಗಳಲ್ಲಿ ನಮಗೆ ಯೋಗ್ಯ ಸಹಾಯ ಸಹಕಾರ ದೊರೆತುದು ನಮ್ಮ ಭಾಗ್ಯ. ನಮ್ಮ ಪತ್ರಿಕೆಯ ಆರ್ಥಿಕ ದೃಷ್ಟಿಯನ್ನು ಸುಧಾರಿಸುವದರ ದೆಸೆಯಿಂದ ಮುನಸಿಪಲ್ ಹಾಗೂ ಜಿಲ್ಹಾ ಸಮಿತಿಗಳ ಸಂಚಾಲಕರಿಗೆ ಬಿನ್ನಹ ಮಾಡಿದ ಪ್ರಕಾರ ಸಹೃದಯರಾದ ಅಧಿಕಾರಿಗಳೂ, ಸಂಚಾಲಕರೂ ನಮ್ಮ ವಿನಂತಿಯನ್ನು ಮನ್ನಿಸಿ ಹೆಚ್ಚು ಪ್ರತಿಗಳನ್ನು ತರಿಸಲು ಒಪ್ಪಿದ್ದರಿಂದ ನಮ್ಮ ಪತ್ರಿಕೆಯ ಆರ್ಥಿಕ ಪರಿಸ್ಥಿತಿಯು ಬಹುಮಟ್ಟಿಗೆ ಸುಧಾರಿಸಿತು. ಈಗಿನ ಪರಿಸ್ಥಿತಿಯ ದೃಷ್ಟಿಯಿಂದ ನೋಡಿದರೆ ನಮಗೆ ಹಿಂದೆ ಆಗಾಗ ಒದಗುತ್ತಿದ್ದ ಆರ್ಥಿಕ ಮುಗ್ಗಟ್ಟು ಇನ್ನೆಂದಿಗೂ ಬರದು. ಆರ್ಥಿಕ ಪರಿಸ್ಥಿತಿ ಸುಧಾರಿಸಿದಂತೆ ಹೊದಿಕೆಯ ಹಾಗೂ ಒಳಗಿನ ಪುಟಗಳ ಬಗೆಗೆ ಹೆಚ್ಚು ಹಣವನ್ನು ಖರ್ಚುಮಾಡಲು ಸಾಧ್ಯವಾಯಿತು. ಅದರ ಪರಿಣಾಮವಾಗಿ ಪತ್ರಿಕೆಯು ಹೆಚ್ಚು ಆಕರ್ಷಣೀಯವಾಗಿ ಕಾಣಹತ್ತಿತು. ಇದಲ್ಲದೆ ಲೇಖಕರಿಗೆ ತಕ್ಕಮಟ್ಟಿಗೆ ವೇತನವನ್ನು ಕೊಡಲೂ ಸಾಧ್ಯವಾಯಿತು. ಪುಟಗಳನ್ನು ಹೆಚ್ಚಿಸಲು ಮನಸ್ಸು ಮಾಡಿದ್ದೇವೆ. ಹೆಚ್ಚಿನ ಪುಟಗಳ ಉಪಯುಕ್ತತೆ ನಿಜವಾಗಿ ಆಗಬೇಕಾದರೆ ನುರಿತ ಲೇಖಕರೂ ಶಿಕ್ಷಕರೂ ಮುಂದೆ ಬರುವದು ಅತ್ಯವಶ್ಯ.

ಈ ವರುಷ ಆ ದಿಸೆಯಲ್ಲಿ ನಾವು ಪ್ರಯತ್ನಿಸುವದೂ ಪತ್ರಿಕೆಯು ಸಲುವಾಗಿ ಶಿಕ್ಷಕ, ಶಿಕ್ಷಕಿಯರು ಒಳ್ಳೇ ಆತುರತೆಯಿಂದ ದಾರಿ ಕಾಯುವಂತೆ ಅದರ ಉಪಯುಕ್ತತೆಯನ್ನು ಹೆಚ್ಚಿಸುವದೂ ನಮ್ಮ ಆಶೆಯಾಗಿದೆ. ಅದು ಸಾಧ್ಯವಾಗಬೇಕಾದರೆ ಲೇಖಕರ ಪರಿಶ್ರಮವು ಇಗ

ಬೇಕಾಗುವದು. ನಾವು ಹಿಂದೊಮ್ಮೆ ಸೂಚಿಸಿದಂತೆ ಈಗ ಸಹ ಉತ್ತಮ ಲೇಖಗಳು ಹೆಚ್ಚಾಗಿ ಬರುವದಿಲ್ಲ. ವಿಶಾಲವಾದ ರಾಜ್ಯದಲ್ಲಿ ಸಹಸ್ರಾರು ಶಿಕ್ಷಕರು ಹೊಸ ಹೊಸ ಅನುಭವಗಳನ್ನು ಪಡೆಯುತ್ತಲಿದ್ದಾರೆ. ಶಿಕ್ಷಣ ತಜ್ಞರು ಹೊಸ ಹೊಸ ಪ್ರಯೋಗಗಳನ್ನು ನಡಿಸುತ್ತಿದ್ದಾರೆ. ಅಂಥವರೆಲ್ಲರೂ ತಮ್ಮ ಅನುಭವಗಳನ್ನೂ, ಪ್ರಯೋಗಗಳ ರೂಪ-ರೇಷೆಗಳನ್ನೂ ಮತ್ತು ಅವುಗಳ ಪರಿಣಾಮವನ್ನೂ ಲೇಖನಗಳ ಮೂಲಕ ನಮಗೆ ತಿಳಿಸಿದರೆ ಅವುಗಳನ್ನೇ ನಾವು ಈ ಪತ್ರಿಕೆಯ ಮುಖಾಂತರ ಉಳಿದ ಶಿಕ್ಷಕ, ಶಿಕ್ಷಕಿಯರ ದೃಷ್ಟಿಗೆ ತರುತ್ತೇವೆ. ಇದೇ ನಮ್ಮ ಪತ್ರಿಕೆಯ ನಿಜವಾದ ಸೇವೆ ಎಂದು ನೆರೆಸಂಬಿದ್ದೇವೆ. ಕಳೆದ ೩ ವರುಷಗಳಲ್ಲಿ ನಮಗೆ ಸಹಾಯ-ಸಹಕಾರಗಳನ್ನು ನೀಡಿದ ಶಿಕ್ಷಣ ಸಮಿತಿಗಳಿಗೂ, ಸಂಚಾಲಕರಿಗೂ ಹಾಗೂ ಲೇಖಕರಿಗೂ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ. ಪ್ರಧಾನ ಸಂಪಾದಕರಾಗಿ ಮಾಡುವ ಕೆಲಸವು ಅಡೆ-ತಡೆಗಳಿಲ್ಲದೇ ನಡೆಯುವಂತೆ ಸೂಕ್ತ-ಸಲಹೆಗಳನ್ನೂ, ನೆರವನ್ನೂ ನೀಡಿದ ಸಂಪಾದಕ ಮಂಡಲಕ್ಕೆ ನಾವು ಋಣಿಯಾಗಿದ್ದೇವೆ. ಕೊನೆಯದಾಗಿ ನಮ್ಮ ಪತ್ರಿಕೆಯ ಮಟ್ಟವನ್ನು ಸುಧಾರಿಸಿ ಅದರ ಉಪಯುಕ್ತತೆಯನ್ನು ಹೆಚ್ಚಿಸಲು ಓದುಗರಿಂದ ಬರುವ ಸೂಚನೆಗಳನ್ನು ನಾವು ಸ್ವಾಗತಿಸುತ್ತೇವೆ.

ಕರ್ನಾಟಕ ರಾಜ್ಯದ ಪ್ರಾಥಮಿಕ ಶಿಕ್ಷಣದ ಹೊಸ ಅಭ್ಯಾಸ ಪತ್ರಿಕೆ

ಕರ್ನಾಟಕ ರಾಜ್ಯವು ಉದಯವಾದ ಕೆಲವು ದಿನಗಳಲ್ಲಿಯೇ ಸರಕಾರದವರು ಇಡೀ ರಾಜ್ಯಕ್ಕೆ ಅನ್ವಯಿಸುವಂತೆ ಶಿಕ್ಷಣದ ಪುನರ್ಘಟನೆಯನ್ನು ಸೂಚಿಸಲು ಒಂದು ಉನ್ನತಾಧಿಕಾರದ ಸಮಿತಿಯನ್ನು ನೇಮಿಸಿದರು. ಆ ಸಮಿತಿಯವರು ಶಿಕ್ಷಣದ ಎಲ್ಲ ಹಂತಗಳನ್ನು ವಿವೇಚಿಸುತ್ತಾ ಪ್ರಾಥಮಿಕ ಶಿಕ್ಷಣದ ಬಗೆಗೆ ಕೆಲವು ಮಹತ್ವದ ತೀರ್ಮಾನಗಳನ್ನು ಕೈಕೊಂಡರು. ಈ ರೀತಿ ಸಮಿತಿಯವರು ಪ್ರಾಥಮಿಕ ಶಿಕ್ಷಣಕ್ಕೆ ಪ್ರಾಶಸ್ತ್ಯವನ್ನು ಕೊಟ್ಟಿರುವದು ಸ್ವಾಗತಾರ್ಹವೂ ಸ್ತುತ್ಯವೂ ಆಗಿದೆ. ಕನ್ನಡ ರಾಜ್ಯವು ಒಂದುಗೂಡಿದ ಮೇಲೆ ಇಂಥ ತೀರ್ಮಾನಗಳು ಅತ್ಯವಶ್ಯವಾಗಿದ್ದವೆಂದು ಬೇರೆ ಹೇಳಬೇಕಾಗಿಲ್ಲ. ಯಾಕಂದರೆ ಐದು ಬೇರೆ ಬೇರೆ ರಾಜ್ಯಗಳಲ್ಲಿದ್ದ ಕ್ಷೇತ್ರಗಳು ಒಂದುಗೂಡಿ ಕನ್ನಡ ರಾಜ್ಯವಾಗಿದೆ. ರಾಜ್ಯ ಪುನರ್ಘಟನೆಯ ಮೊದಲು ಮುಂಬಯಿ ಕರ್ನಾಟಕ, ಮೈಸೂರು, ಹೈದರಾಬಾದ, ದಕ್ಷಿಣ ಕನ್ನಡ ಜಿಲ್ಹೆ ಹಾಗೂ ಕೊಡಗು ಇಲ್ಲಿದ್ದ ಪ್ರಾಥಮಿಕ ಶಿಕ್ಷಣಕ್ರಮದ ಉದ್ದೇಶವು ಸಾಮಾನ್ಯವಾಗಿ ಒಂದೇ ತೆರನಾಗಿದ್ದರೂ ಆರೂ ಭಾಗಗಳಲ್ಲಿಯ ಪ್ರಾಥಮಿಕ ಶಿಕ್ಷಣದ ಸಂಘಟನೆ ಮಾತ್ರ ಬೇರೆ ಬೇರೆಯಾಗಿದೆ. ಒಂದು ಕಡೆಗೆ ೭ ವರುಷದ ಅಭ್ಯಾಸ ಪತ್ರಿಕೆಯಿದ್ದರೆ ಇತರ ಕಡೆಗೆ ೮ ವರುಷದ ಅಭ್ಯಾಸ ಪತ್ರಿಕೆಯು ರೂಢಿಯಲ್ಲಿದೆ. ಕೆಲವು ಭಾಗಗಳಲ್ಲಿ ಇಂಗ್ಲೀಷ ಭಾಷೆ ಕಡ್ಡಾಯವಾದ ವಿಷಯವಾಗಿದೆ. ಹಳೇ ಮೈಸೂರ ಸಂಸ್ಥಾನದಲ್ಲಿ ಪ್ರಾಥಮಿಕ ಶಿಕ್ಷಣ ಪ್ರಮಾಣ ಪತ್ರ ಪರೀಕ್ಷೆಯೇ ಇರಲಿಲ್ಲ. ಇದರಂತೆ ಇನ್ನುಳಿದ ರೂಪರೇಷೆಗಳಲ್ಲಿಯೂ ಅಂತರಗಳು ಕಂಡು ಬರುವವು. ಇವೆಲ್ಲವನ್ನೂ ಸಮಗ್ರವಾಗಿ ಸಂಯೋಜಿಸಿ ಇಡೀ ರಾಜ್ಯಕ್ಕೆ ಅನ್ವಯಿಸುವಂತೆ ಒಂದು ಹೊಸ ಅಭ್ಯಾಸ ಪತ್ರಿಕೆಯನ್ನು ತಯಾರಿಸುವದು ಅನಿವಾರ್ಯವಾಯಿತು. ಶಿಕ್ಷಣ ಪುನರ್ಘಟನೆ ಸಮಿತಿಯವರು ಈ ದಿಸೆಯಲ್ಲಿಯೇ ಸೂಕ್ತ-ಸಲಹೆಗಳನ್ನು ಮಾಡಿರುವರು. ಅವುಗಳಲ್ಲಿ ೭ ವರುಷದ ಅಭ್ಯಾಸ ಪತ್ರಿಕೆ, ೫ ನೆಯ ವರ್ಗದಲ್ಲಿ ಇಂಗ್ಲೀಷ ಹಾಗೂ ೬ ನೆಯ ವರ್ಗದಲ್ಲಿ ಹಿಂದಿ ವಿಷಯಗಳ ಪ್ರಾರಂಭ ಇವೇ ಮುಖ್ಯ ಸೂಚನೆಗಳಾಗಿವೆ. ಇವನ್ನೇ ಮುಂದಿಟ್ಟುಕೊಂಡು ಒಂದು ಹೊಸ ಅಭ್ಯಾಸ ಪತ್ರಿಕೆಯನ್ನು ತಯಾರಿಸಲು ಈ ಸಮಿತಿಯವರು ಮತ್ತೊಂದು ಉಪಸಮಿತಿಯನ್ನು ನೇಮಿಸಿದರು. ಈ ಉಪಸಮಿತಿಯವರು ಕಳೆದ ತಿಂಗಳ ದಿನಾಂಕ ೩ ಹಾಗೂ ೪ ರಂದು ಬೆಂಗಳೂರಿನಲ್ಲಿ ಸಭೆ ಸೇರಿ ಹಲವು ಮಹತ್ವದ ಸೂಚನೆಗಳನ್ನು ಮಾಡಿ ಅಭ್ಯಾಸ ಪತ್ರಿಕೆಯ ಪ್ರತಿಯೊಂದು ವಿಷಯದಲ್ಲಿ ವಿವರಗಳನ್ನು ತಯಾರಿಸಲು ಆಯಾ ವಿಷಯಗಳ ಬಗೆಗೆ ಒಂದೊಂದು ಸಮಿತಿಯನ್ನು ನೇಮಿಸುವ ಅವಶ್ಯಕತೆಯನ್ನು ಸೂಚಿಸಿದರು. ಶಿಕ್ಷಣ ಪುನರ್ಘಟನೆಯ ಉನ್ನತಾಧಿಕಾರದ ಸಮಿತಿಯವರು ಕೈಕೊಂಡ ತೀರ್ಮಾನಗಳನ್ವಯ ಪ್ರಾಥಮಿಕ ಶಿಕ್ಷಣದ ಅಭ್ಯಾಸ ಪತ್ರಿಕೆಯ ಉಪಸಮಿತಿಯವರು ಈ ಕೆಳಗಿನ ಸೂಚನೆಗಳನ್ನು ಮಾಡಿದರು. ಮೊದಲು ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ರ್‍ಯಾಂಗ್ಲರ ಶ್ರೀ ಪಾವಟೆಯವರಿಂದ ಬಂದ ಪತ್ರವನ್ನು ವಿಚಾರಿಸಿ

ಅವರು ಸೂಚಿಸಿದಂತೆ, ಯಾವದೊಂದು ಭಾಗದ ಅಭ್ಯಾಸ ಪತ್ರಿಕೆಯನ್ನು ಸಮಗ್ರವಾಗಿ ತಗೆದುಕೊಳ್ಳದೆ ಪ್ರತಿಯೊಂದು ಭಾಗದಲ್ಲಿ ರೂಢಿಯಲ್ಲಿರುವ ಅಭ್ಯಾಸ ಪತ್ರಿಕೆಯೊಳಗಿಂದ ಉತ್ತಮವಾದ ಅಂಶಗಳನ್ನು ಆರಿಸಿ ಎಲ್ಲ ಭಾಗಗಳಿಗೂ ಸಾಮಾನ್ಯವಾದ ಒಂದು ಹೊಸ ಅಭ್ಯಾಸ ಪತ್ರಿಕೆಯನ್ನು ತಯಾರಿಸಬೇಕೆಂದು ನಿರ್ಣಯಿಸಿ ಆ ದಿಸೆಯಲ್ಲಿ ಕಾರ್ಯೋನ್ಮುಖರಾದರು. ಮೊದಲಿನ ಎರಡು ವರ್ಗಗಳು ವಾರದಲ್ಲಿ ೨೭ ತಾಸು ೩೦ ಮಿನಿಟು, ಉಳಿದ ೫ ವರ್ಗಗಳು ೩೦ ತಾಸುಗಳಂತೆ ಕೆಲಸ ಮಾಡಬೇಕೆಂದು ಗೊತ್ತು ಮಾಡಿದರು. ವರ್ಷದಲ್ಲಿ ಶಾಲೆಗಳು ೨೨೦ ದಿವಸಗಳವರೆಗೆ ಕೆಲಸ ಮಾಡಬೇಕೆಂದು ಸೂಚಿಸಿದರು. ಮೊದಲಿನ ೨ ವರ್ಗಗಳಲ್ಲಿ ಪ್ರತಿಯೊಂದು ಅವಧಿಗೆ ೩೦ ಮಿನಿಟುಗಳಿರಬೇಕೆಂದೂ, ಉಳಿದ ವರ್ಗಗಳ ಪ್ರತಿಯೊಂದು ಅವಧಿಗೆ ೪೫ ಮಿನಿಟು ಇರಬೇಕೆಂದೂ ಗೊತ್ತಾಯಿತು. ಹೀಗೆ ಮಾಡಿದಾಗ ವಾರದಲ್ಲಿ ಮೊದಲಿನ ಎರಡು ವರ್ಗಗಳಿಗೆ ೫೫ ಅವಧಿಗಳು ಉಳಿದ ವರ್ಗಗಳಿಗೆ ೪೫ ಅವಧಿಗಳು ಆಗುವವು. ಈ ಪ್ರಕಾರ ಅಭ್ಯಾಸ ಪತ್ರಿಕೆಯ ಉಪಸಮಿತಿಯವರು ಹೊಸ ಅಭ್ಯಾಸ ಪತ್ರಿಕೆಯ ರೂಪ-ರೇಷೆಗಳನ್ನು ನಿರ್ಣಯಿಸಿ ಪ್ರತಿಯೊಂದು ವಿಷಯದಲ್ಲಿ ವಿವರಗಳನ್ನು ಸೂಚಿಸಲು, ಪ್ರತಿಯೊಂದು ವಿಷಯದ ಬಗೆಗೆ ನೇಮಿಸಲ್ಪಡುವ ಸಮಿತಿಗೆ ಬಿಟ್ಟರು.

ಈ ವಿಷಯವಾರ ಸಮಿತಿಗಳು ಕಳೆದ ತಿಂಗಳು ಬೆಂಗಳೂರಿನಲ್ಲಿ ದಿನಾಂಕ ೧೪ ರಿಂದ ೧೮ ರ ವರೆಗೆ ಸಭೆ ಸೇರಿದವು. ಬೇರೆ ಬೇರೆ ಭಾಗಗಳ ಅಭ್ಯಾಸ ಪತ್ರಿಕೆಯಲ್ಲಿಯ ಉತ್ತಮವಾದ ಅಂಶಗಳನ್ನು ಆರಿಸಿಕೊಂಡು ಪ್ರತಿಯೊಂದು ವಿಷಯದ ವಿವರಗಳನ್ನು ಸಿದ್ಧಗೊಳಿಸಿದರು. ಹೊಸ ಅಭ್ಯಾಸ ಪತ್ರಿಕೆಯನ್ನು ತಯಾರಿಸುವ ಕಾರ್ಯದಲ್ಲಿ ಇಷ್ಟು ಪ್ರಗತಿಯಾಗಿದೆ. ಇನ್ನು ಮುಂದೆ ಸರಕಾರದ ಸಮ್ಮತಿಯನ್ನು ಪಡೆದು ಈ ಹೊಸ ಅಭ್ಯಾಸ ಪತ್ರಿಕೆಯನ್ನು ಮುದ್ರಿಸಿ ಪ್ರತಿಗಳನ್ನು ಎಲ್ಲಕಡೆಗೂ ಹಂಚಿ ಶಿಕ್ಷಕರ, ಶಿಕ್ಷಣ ತಜ್ಞರ ಹಾಗೂ ಜನಸಾಮಾನ್ಯರ ಅಭಿಪ್ರಾಯವನ್ನು ನೋಡಬಹುದಾಗಿದೆ. ಅದಾದ ನಂತರ ಹೊಸ ಅಭ್ಯಾಸ ಪತ್ರಿಕೆಯ ಕೊನೆಯ ಸ್ವರೂಪವು ನಿಶ್ಚಿತವಾಗುವದು. ಈ ಹೊಸ ಅಭ್ಯಾಸ ಪತ್ರಿಕೆಯು ಮುಂದಿನ ವರುಷ ಜೂನ ತಿಂಗಳಿಂದ ಪ್ರಾರಂಭವಾಗಬಹುದೆಂದು ನಿರೀಕ್ಷಿಸಲಾಗಿದೆ. ಇದರ ಜೊತೆಗೆ ಇನ್ನೂ ಹಲವಾರು ಸಮಸ್ಯೆಗಳನ್ನು ಸರಕಾರವು ಬಿಡಿಸಬೇಕಾಗುವದು. ಅವುಗಳಲ್ಲಿ ಪಠ್ಯ-ಪುಸ್ತಕಗಳ ರಚನೆ, ಆಡಳಿತೆಯ ಸಾಮಾನ್ಯ ಸ್ವರೂಪಗಳೇ ಮುಖ್ಯವಾಗಿವೆ. ಅವೇನೂ ಬಗೆಹರಿಯಲಾಗದ ಸಮಸ್ಯೆಗಳಾಗುವದಿಲ್ಲ. ಯಾಕಂದರೆ ಇಡೀ ರಾಜ್ಯಕ್ಕೆ ಒಂದೇ ತರದ ಶಿಕ್ಷಣ ಕ್ರಮವಿರುವದು ಅತ್ಯವಶ್ಯವಾಗಿದೆಯೆಂದು ಎಲ್ಲರ ಅಭಿಪ್ರಾಯವಾಗಿದೆ. ಹಾಗೂ ಅದನ್ನು ಸಾಧಿಸಲು ಎಲ್ಲ ಕಡೆಗೂ ಆಸ್ಥೆ ಒಡೆದು ಕಾಣುತ್ತದೆ.

ಜೀವನ ಶಿಕ್ಷಣದ ಉದ್ದೇಶಗಳು :

ಪಾಳಯಂ ಕೊಟ್ಟಾಯದಲ್ಲಿ ಕ್ರಿಸ್ತೀಯಯುವಕರ ಸಂಸ್ಥೆಯ ಆಶ್ರಯದ ಕೆಳಗೆ ನಡೆದ ಒಂದು ಸಾರ್ವಜನಿಕ ಸಭೆಯಲ್ಲಿ ಶ್ರೀ ಆರ್ಯನಾಯಕಂ ಅವರು ಭಾಷಣ ಮಾಡುತ್ತಾ ೧೯೩೭ ರಲ್ಲಿ ಮಹಾತ್ಮಾಜಿಯವರ ಆಶೀರ್ವಾದಪಡೆದ ಜೀವನ ಶಿಕ್ಷಣದ ಮೂರು ಮುಖ್ಯ ಉದ್ದೇಶಗಳನ್ನು ವಿವರಿಸಿದರು. ಮಾತೃ ಭಾಷೆಯು ಶಿಕ್ಷಣದ ಮಾಧ್ಯಮವಾಗಬೇಕು. ಯಾವದಾದರೊಂದು ಮೂಲೋದ್ಯೋಗವು ಶಿಕ್ಷಣದ ಕೇಂದ್ರವಾಗಬೇಕು. ಮತ್ತು ಸ್ವಾರ್ಥ ಸಾಧನೆ ಇಲ್ಲದ ಸಮತೆ ಸಮಗೌರವದಿಂದ ತುಂಬಿದ ಹೊಸ ರಚನೆ ಆಗಬೇಕು. ಅವರು ಮುಂದುವರಿಯುತ್ತಾ ಹೀಗೆ ಹೇಳಿದರು. ಮಾತೃಭಾಷೆಯು ಶಿಕ್ಷಣ ಮಾಧ್ಯಮವಾಗಿದ್ದರೂ ಶಿಕ್ಷಣದ **ಮಟ್ಟವು** ಸಾಕಷ್ಟು ಏರಿರುವದಿಲ್ಲ. ಮತ್ತು ಶಿಕ್ಷಣ ಕೇಂದ್ರವಾದ ಮೂಲೋದ್ಯೋಗದ ಬಗೆಗೆ ಸಾಕಷ್ಟು ತಪ್ಪು ತಿಳುವಳಿಕೆ ಕಂಡು ಬರುವದು. ಮನಸ್ಸು ಹಾಗೂ ಬುದ್ಧಿಗಳ ಜೊತೆಗೆ ದೈಹಿಕ ದುಡಿಮೆ ಹಾಗೂ ಶಾರೀರಿಕ ಜಾಣ್ಮೆಗಳ ತರಬೇತು ಇಲ್ಲದಿದ್ದರೆ ಬೌದ್ಧಿಕ ಹಾಗೂ ಮಾನಸಿಕ ಬೆಳವಣಿಗೆ ಕುಂಠಿತವಾಗುವದು.



ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ಸುವರ್ಣ ಸಂಧಿ! **ಸಚಿತ್ರ ಗ್ರಂಥ!!** **ಸುಂದರ ಮುದ್ರಣ!!**

"ಶಿಕ್ಷಣ-ಶಿಕ್ಷಕ-ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-ವ ತಣಿಸುವಂಥ, ಶಿಕ್ಷಣ ತಜ್ಞರಿಂದ **ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂ ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪಂಶಂಸೆಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್‍ಯಾಂಗ್ಲರ್ ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆದಂ ಅಮೋಘ** ಗ್ರಂಥ.

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿಯ ಬಣ್ಣ ಬಣ್ಣಗಳಲ್ಲಿ ೪೧ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ ಅಮರ ಸಾಹಿತ್ಯ ಗ್ರಂ **ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.**

ದಿ. ೧೫ ಅಗಸ್ಟ ೫೬ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ ಅಧ್ಯ ಯಲ್ಲಿ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ.

ವಿವರಗಳಿಗೆ ಇಂದೇ ಈಗಲೇ ಬರೆಯಿರಿ. ಪ್ರೋತ್ಸಾಹನೆ ಕೊಡಿರಿ.

ಸಾದಾ ಪ್ರತಿ ೩ ರೂ.] **ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್.** **[ಸುಂದರ ಪ್ರತಿ ೪ ರ**

ವಿಳಾಸ :- ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಿಕೋಟಾ, ಜಿಲ್ಹಾ :— ವಿಜಾಪುರ.

ಸುಬೋಧ ಹಿಂದೀ ಕನ್ನಡ ವ್ಯಾಕರಣ

● ★ ●

ಇದನ್ನು ಬರೆದವರು ಹಿಂದೀ ಕ್ಷೇತ್ರದಲ್ಲಿ ಹೆಸರು ಪಡೆದ **ಶ್ರೀ ಗುರುನಾಥ ಜೋಶಿ** ಅವರು. ತಮ್ಮ ಅನುಭವದಿಂದ ಅಲ್ಲಲ್ಲಿ ಕನ್ನಡ ವ್ಯಾಕರಣಕ್ಕೆ ಹೋಲಿಸಿ ಸುಲಭ ಭಾಷೆಯಲ್ಲಿ ಸರ್ವರಿಗೂ ತಿಳಿಯುವಂತೆ ಬರೆದಿದ್ದಾ ಇದರಲ್ಲಿ ಕೇವಲ ವ್ಯಾಕರಣದ ನಿಯಮಗಳು ಇರದೆ ಹಿಂದೀಯಿಂದ ಕನ್ನಡಕ್ಕೂ ಕನ್ನಡದಿಂದ ಹಿಂದೀ ಭಾಷಾಂತರ ಮಾಡುವದಕ್ಕೆ ವಾಕ್ಯಗಳೂ ಕೊಡಲ್ಪಟ್ಟಿವೆ. ಇದರಿಂದ ಕಲಿಯಬಯಸುವವರೆಲ್ಲರೂ ಸುಲಭ ಹಿಂದೀಯನ್ನು ಕಲಿಯಬಹುದಾಗಿದೆ. ಈ ಪುಸ್ತಕವನ್ನು ಕನ್ನಡದ ಸುಪ್ರಸಿದ್ಧ ಸಾಹಿತಿಗಳಾದ, ಪ್ರಿನ್ಸಿಪ ವ್ಹಿ. ಕೆ. ಗೋಕಾಕ ಅವರು ಸ್ವಾಗತಿಸಿದ್ದಾರೆ. ಇಂದೇ ಇದನ್ನು ತರಿಸಿಕೊಂಡು ಹಿಂದೀಯನ್ನು ಕಲಿ ಒಂದುನೂರಾ ಹನ್ನೆರಡು ಪುಟಗಳು! ಬೆಲೆ ಕೇವಲ ೧೪ ಆಣೆ. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ನು!

ಕೆಳಗಿನ ಪತ್ತೆಗೆ ಬರೆಯಿರಿ.

ಕನ್ನಡ ಸಾಹಿತ್ಯ ಪ್ರಕಾಶನ, ಧಾರವಾಡ.

ಶ್ರೀ ಸಿದ್ಧವ್ವನಹಳ್ಳಿ ನಿಜಲಿಂಗಪ್ಪನವರು

(ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು)

ಲೇಖಕರು : **ಶ್ರೀ ಬ. ಮ. ಶಿಂತ್ರಿ,** ಬಿ.ಎ.,ಬಿ.ಟಿ. ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್ಸ್ಪೆಕ್ಟರ ದಕ್ಷಿಣ ಭಾಗ (ಮುಂಬಯಿ ಕರ್ನಾಟಕ) ಧಾರವಾಡ.

ಮೊದಲ ಮಾತು

ಹೋದ ತಿಂಗಳು ೭,೮ ಮತ್ತು ೯ನೆಯ ದಿನಾಂಕಗಳಲ್ಲಿ ಧಾರವಾಡದ ಲಿಂಗಾಯತ ನಗರ ಭವನದ ಹಿಂಬದಿಯ ವಿಸ್ತಾರವಾದ ಪಟಾಂಗಣದಲ್ಲಿ ಮನಮೆಚ್ಚುವಂತೆ ಶೃಂಗರಿಸಲ್ಪಟ್ಟಿದ್ದ ಭವ್ಯವಾದ 'ಬಸವನಾಳ ಮಂಟಪ'ದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ೩೯ನೆಯ ಅಧಿವೇಶನವು ಅತ್ಯಂತ ವಿಜೃಂಭಣೆಯಿಂದ ಜರುಗಿದ್ದುದನ್ನು ಓದುಗರು ಇಷ್ಟರಲ್ಲಿಯೇ ಮರೆತಿರಲಿಕ್ಕಿಲ್ಲವಷ್ಟೇ. ಸುವರ್ಣಾಕ್ಷರಗಳಲ್ಲಿ ಬರೆದಿಡಲರ್ಹವಾದ ಆ ಐತಿಹಾಸಿಕ ಅಧಿನಿವೇಶನಕ್ಕೆ ಕರ್ನಾಟಕದ ಮೂಲೆಮೂಲೆಗಳಿಂದ ಸಾಹಿತಿಗಳೂ ಪ್ರತಿನಿಧಿಗಳೂ ಪ್ರೇಕ್ಷಕರೂ ಗುಂಪು ಗುಂಪಾಗಿ ಬಂದು ಸೇರಿದ್ದರು. ಮೊದಲನೆಯ ದಿನ ಆ ವಿಸ್ತಾರವಾದ ಮಂಟಪದ ಒಳಗೂ ಹೊರಗೂ ಕಿಕ್ಕಿರಿದು ನೆರೆದಿದ್ದ ಜನಸ್ತೋಮವು ಐವತ್ತು ಸಾವಿರಕ್ಕೂ ಮಿಕ್ಕಿತ್ತು. ಕವಿವರ್ಯ 'ಕುವೆಂಪು'ರವರು ಅದರ ನಿಯೋಜಿತಾಧ್ಯಕ್ಷರಾಗಿದ್ದರು. ಅದರ ಪ್ರಾರಂಭೋತ್ಸವವು ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀ ಎಸ್. ನಿಜಲಿಂಗಪ್ಪನವರ ಅಮೃತ ಹಸ್ತದಿಂದ ನೆರವೇರಿತು. ಆಗ ಅವರು ಅಸ್ಖಲಿತ ವಾಣಿಯಿಂದ ತಮ್ಮ ಹನ್ನೆರಡು ಪುಟಗಳ ಭಾಷಣವನ್ನು ತಿಳಿಗನ್ನಡದಲ್ಲಿ ಮಾಡಿದುದನ್ನು ಮಂಟಪದ ಒಳಗೂ ಹೊರಗೂ ಕಲೆತಿದ್ದ ಜನಸಮುದಾಯವು ಶಾಂತ ಚಿತ್ತದಿಂದ ಕಿವಿಗೊಟ್ಟು ಕೇಳಿತು. ತಮ್ಮ ಭಾಷಣದ ಕೊನೆಯ ಹಂತದಲ್ಲಿ ಸಾಹಿತ್ಯದ ಬೆಳವಣಿಗೆಗೋಸ್ಕರ ಅವರು ಮಾಡಿದ ಅಮೌಲ್ಯವಾದ ನಾಲ್ಕು ಸೂಚನೆಗಳು ಓದುಗರ ನೆನಪಿನಲ್ಲಿರಲು ಸಾಕು. ಸ್ವಾಗತಾಧ್ಯಕ್ಷರಾಗಿದ್ದ ಡಾ. ಎಸ್. ಸಿ. ನಂದೀಮಠರವರು ಅವರ ಯೋಗ್ಯತೆಯನ್ನು ಕುರಿತು ಒಂದೇ ಒಂದು ವಾಕ್ಯದಲ್ಲಿ ಸಾರವತ್ತಾಗಿ ಹೇಳಿದುದು ಗಮನಾರ್ಹವಾಗಿದೆ—"ಎಂತಹ ಭಾರವನ್ನು ಅವರ (ಶ್ರೀ ನಿಜಲಿಂಗಪ್ಪನವರ) ಮೇಲೆ ಹೊರಿಸಿದರೂ ಹಿಂಜರಿಯದವರು ಅವರು." ಈಗಿನಂತಹ ಸಂಧಿಕಾಲದಲ್ಲಿ ಅವರಂತಹ ಯೋಗ್ಯ ಧುರೀಣರು ನಮ್ಮ ರಾಜ್ಯಕ್ಕೆ ದೊರೆತಿದುದು ಯೋಗಾಯೋಗವೆಂದೇ ನಮ್ಮ ಪ್ರಾಂಜಲ ಮತ. ಅಂತಪ್ಪ ಶ್ರೀ ಎಸ್. ನಿಜಲಿಂಗಪ್ಪನವರ ಜೀವನ ಚರಿತ್ರದ ಬಗೆಗೆ ಅಲ್ಪ ಪರಿಚಯವನ್ನು ಮಾಡಿಕೊಡಲು ಪ್ರಯತ್ನಿಸಲಾಗಿದೆ.

ಬಾಲ್ಯ ಹಾಗು ಶಿಕ್ಷಣ

೧೯೦೨ನೆಯ ಇಸವಿ ಡಿಸೆಂಬರ ತಿಂಗಳ ೧೦ನೆಯ ದಿನಾಂಕ ಅವರು ಜನ್ಮ ತಾಳಿದರು. ಅವರ ಪ್ರಾಥಮಿಕ ಶಿಕ್ಷಣವು ಚಿತ್ರಕಲ್ಲದುರ್ಗದಲ್ಲಾಯಿತೆಂಬಂತೆ ತೋರುತ್ತಿದೆ. ಮಾಧ್ಯಮಿಕ ಶಿಕ್ಷಣಕ್ಕೋಸ್ಕರ ಅವರು ದಾವಣಗೆರೆಗೆ ಹೋಗಬೇಕಾಯಿತು. ಅಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿಕೊಂಡು ಉಚ್ಚ ಶಿಕ್ಷಣಕ್ಕೋಸುಗ ಬೆಂಗಳೂರಲ್ಲಿಯ ಸೆಂಟ್ರಲ್ ಕಾಲೇಜವನ್ನು ಸೇರಿದರು. ಅಲ್ಲಿ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಕಾಯಿದೆಯ ಅಭ್ಯಾಸವನ್ನು ಕೈಕೊಳ್ಳಲು ಪುಣೆ ಪಟ್ಟಣಕ್ಕೆ ಪ್ರಯಾಣ ಬೆಳೆಸಿದರು. ಅಲ್ಲಿ ಎರಡು ವರ್ಷ ಅಭ್ಯಾಸಮಾಡಿ ಎಲ್‌ಎಲ್.ಬಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ೧೯೨೬ರಲ್ಲಿ ಮೈ.ಹಾಯಕೋರ್ಟಿನ ಅಡ್ವೋಕೇಟ (advocate) ರಾದರು. ಅಲ್ಲಿಗೆ ಅವರ ವಿದ್ಯಾರ್ಜನೆಯು ಮುಗಿದಂತಾಯಿತು. ಹಾಯಸ್ಕೂಲ-ಕಾಲೇಜುಗಳಲ್ಲಿ ಅವರು ಪ್ರತಿಭಾವಂತ ವಿದ್ಯಾರ್ಥಿಯಾಗಿ ಎಲ್ಲರಿಗೆ ಬೆಲ್ಲದಂತೆ ಬೇಕಾದವರಾಗಿದ್ದರು. ಹೋದಲ್ಲೆಲ್ಲ ಅವರು ಲೋಕಾನುರಾಗವನ್ನು ಪಡೆದವರಾಗಿದ್ದಾರೆ. ಅವರಲ್ಲಿ ಹುದುಗಿದ್ದ ಜನಪ್ರಿಯತೆಯು ಚಿಕ್ಕಂದಿನಿಂದ ವಿಕಾಸಗೊಳ್ಳುತ್ತ ನಡೆದಿದೆ.

ಸ್ವಾತಂತ್ರ್ಯ ಸಂಗ್ರಾಮ

೧೯೩೬ರ ವರೆಗೆ ಅವರು ವಕೀಲಿಯನ್ನು ಚಿತ್ರಕಲ್ಲದುರ್ಗದಲ್ಲಿದ್ದುಕೊಂಡೇ ಮಾಡಿದರೆಂಬಂತೆ ತೋರುತ್ತಿದೆ. ೧೯೩೬ ರಲ್ಲಿ ರಾಷ್ಟ್ರಪಿತನ ಕರೆಗೆ ಓಗೊಟ್ಟು ಅಸಹಕಾರ

ಚಳವಳಿಯಲ್ಲಿ ಧುಮುಕಿ ಸೆರೆಮನೆಯನ್ನು ಕಂಡರು. ೧೯೪೦ ರಲ್ಲಿ ಸರಕಾರದವರು ಅವರ ವಕೀಲಿಯ ಸನದನ್ನು ಕಸಿದುಕೊಂಡರು. ಅದನ್ನು ಲೆಕ್ಕಿಸದೆ ಅವರು ರಾಷ್ಟ್ರ ಕಾರ್ಯದಲ್ಲಿ ನಿರತರಾದರು. ೧೯೩೯ ರಿಂದ ಅವರು ಮೈಸೂರು ಕಾಂಗ್ರೆಸ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದು ಕೊಂಡು ೧೯೪೫-೪೬ ರಲ್ಲಿ ಅದರ ಅಧ್ಯಕ್ಷರಾಗಿದ್ದರು. ೧೯೩೯ ರಿಂದ ೧೯೪೬ ರ ವರೆಗೆ ಅವರು ಸೋಸಿದ ಕಷ್ಟ-ನಷ್ಟಗಳು ಅಷ್ಟಿಷ್ಟಲ್ಲ. ಉದರ ಪೋಷಣೆಗೆ ಅವಶ್ಯವಾಗಿ ಬೇಕಾಗಿದ್ದ ವಕೀಲಿಯ ಸನದು ಅವರ ಕೈಬಿಟ್ಟು ಹೋಗಿತ್ತು. ಮನೆತನವನ್ನು ಸಾಗಿಸಿಕೊಂಡು ಹೋಗುವದು ಬಹಳ ದುಸ್ತರವಾಯಿತು. ದೇವರು ಸತ್ವಪರೀಕ್ಷೆಗಾಗಿ ಅಂತಹ ಕಠಿಣ ಪ್ರಸಂಗಗಳನ್ನು ತಂದೊಡ್ಡುವನೆಂಬಂತೆ ತೋರುತ್ತಿದೆ. ಆ ಏಳು ವರ್ಷಗಳ ಸುದೀರ್ಘಾವಧಿಯು ನಿಜಕ್ಕೂ ಅವರ ಸತ್ವಪರೀಕ್ಷೆಯ ಕಾಲವಾಗಿತ್ತು. ಎಂತಹ ಕಠಿಣ ಪ್ರಸಂಗಗಳು ಬಂದೊದಗಿದರೂ ಸಹ, ತಮ್ಮಲ್ಲಿ ಮನೆಮಾಡಿಕೊಂಡಿದ್ದ ಸರಳ ಸ್ವಭಾವವನ್ನೂ ಸತ್ಯಸಂಧತೆಯನ್ನೂ ತ್ಯಾಗಬುದ್ಧಿಯನ್ನೂ ಅವರು ಎಂದೂ ಬಿಡಲಿಲ್ಲವೆಂಬುದು ನಮ್ಮ ಕೇಳಿಕೆಯಲ್ಲಿದೆ. ಆ ಗುಣಗಳೇ ಈಗಲೂ ಸಹ ಅವರನ್ನು ಎತ್ತಿ ಹಿಡಿದಿವೆ, ಮುಂದಾದರೂ ಎತ್ತಿ ಹಿಡಿಯುವದರಲ್ಲಿ ಸಂದೇಹವಿಲ್ಲ.

ಸ್ವಾತಂತ್ರ್ಯಾನಂತರ

ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಅವರು ಕರ್ನಾಟಕ ಪ್ರದೇಶ ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾಗಿಯೂ ಅಖಿಲ ಭಾರತ ಕಾಂಗ್ರೆಸ ವರ್ಕಿಂಗ ಕಮೀಟಿಯ ಸದಸ್ಯರಾಗಿಯೂ ಇದ್ದರು. ಅಧಿಕಾರಲಾಲಸೆಯು ಅವರಲ್ಲಿಲ್ಲವೆಂಬಂತೆ ತೋರುತ್ತಿದೆ. ಕಾರಣವೆಂದರೆ, ಈ ಅವಧಿಯಲ್ಲಿ ಅವರು ಮನಸು ಮಾಡಿದ್ದರೆ, ಅವರಿಗೆ ಮಂತ್ರಿಯಂತಹ ಅಧಿಕಾರಸ್ಥಾನವು ಸಿಗಬಹುದಾಗಿತ್ತು. ಅಧಿಕಾರದ ಮೋಹಜಾಲದಲ್ಲಿ ಸಿಲುಕಿಕೊಳ್ಳದೆ ಸಿಡಿದು ನಿಂತದ್ದರ ಪ್ರಭಾವದಿಂದಲೋ ಏನೋ ಈಗ ಮುಖ್ಯ ಮಂತ್ರಿಯಂತಹ ಅತ್ಯಂತ ಹೊಣೆಗಾರಿಕೆಯ ಅಧಿಕಾರದ ಸ್ಥಾನವು ಅವರನ್ನು ಬೆನ್ನಟ್ಟಿ ಬಂದಿದೆ.

ಕೊನೆಯ ಮಾತು

ಅವರು ಮುಖ್ಯ ಮಂತ್ರಿಗಳಾದದ್ದರಿಂದ ಎಲ್ಲ ಪಕ್ಷ-ಪಂಗಡಗಳೂ, ಎಲ್ಲ ಜಾತಿ-ಮತಗಳೂ, ಎಲ್ಲ ಸರಕಾರಿ ನೋಕರರ ವರ್ಗಗಳೂ, ಎಲ್ಲ ಸಂಘ-ಸಂಸ್ಥೆಗಳೂ ಸಮಾಧಾನವನ್ನು ತಳೆದಿವೆ. ಯಾಕೆಂದರೆ, ಅವರ ಆಡಳಿತೆಯಲ್ಲಿ ಆವ ಅನ್ಯಾಯದ ಕಾರ್ಯಗಳು ಸಂಭವಿಸದೆ, ಎಲ್ಲರಿಗೂ ನ್ಯಾಯ ದೊರೆಯುವದೆಂಬ ಭರವಸೆಯು ಅವರೆಲ್ಲರಿಗಿದೆ. ಜಾತೀಯತೆ, ಪ್ರಾಂತಾಂಧತೆ, ಪಕ್ಷಾಂಧತೆ, ಮುಂತಾದ ಕ್ಷುದ್ರ ಮನೋಭಾವನೆಗಳಿಗೆ ಅವರು ಎಡೆಗೊಡುವವರಲ್ಲ. ನಮ್ಮ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಅಂದರೆ ಮುಂಬಯಿ ಕರ್ನಾಟಕ, ಮದ್ರಾಸ ಕರ್ನಾಟಕ, ಹೈದರಾಬಾದ ಕರ್ನಾಟಕ, ಮೈಸೂರು, ಕೊಡಗು, ಇವುಗಳಲ್ಲಿ ಬೇರೆ ಬೇರೆ ಕಾಯಿದೆಗಳು ಜಾರಿಯಲ್ಲಿವೆ. ಆ ಭಾಗಗಳನ್ನೆಲ್ಲ ಒಂದೇ ಕಾಯಿದೆಯ ಕಕ್ಷೆಯಲ್ಲಿ ಅದಷ್ಟು ಬೇಗನೆ ತರುವ ಹೆಗ್ಗುರಿಯನ್ನಿಟ್ಟುಕೊಂಡಿದ್ದಾರೆ. ಟೆನನ್ಸಿ ಕಾಯಿದೆಯು ಆಯಾ ಭಾಗಗಳಲ್ಲಿ ಬೇರೆ ಬೇರೆ ತೆರನಾಗಿದೆ. ಅದರಲ್ಲಿ ಏಕರೂಪತೆಯನ್ನು ತೀವ್ರವೇ ಉಂಟುಮಾಡಬೇಕೆಂಬ ಸದುದ್ದೇಶದಿಂದ ಶ್ರೀ ಬಿ. ಡಿ. ಜತ್ತಿಯವರ ಹಿರಿತನದಲ್ಲಿ ತಜ್ಞರ ಸಮಿತಿಯೊಂದನ್ನು ಈಗಾಗಲೇ ನೇಮಿಸಿದ್ದಾರೆ. ಸರಕಾರಿ ನೋಕರರ ನಿಯಮಾವಳಿಗಳು ಆಯಾ ಭಾಗಗಳಲ್ಲಿ ಭಿನ್ನ ಭಿನ್ನವಾಗಿವೆ. ಅವುಗಳಲ್ಲಿ ಕಂಡುಬರುವ ಹೆಚ್ಚು ಕಡಿಮೆಗಳನ್ನೆಲ್ಲ ತೊಡೆದು ಹಾಕಿ ನಮ್ಮ ರಾಜ್ಯದ ನೋಕರರಿಗೆಲ್ಲ ಒಂದೇ ನಿಯಮಾವಳಿಯನ್ನು ರಚಿಸಲು ಪ್ರಾರಂಭಿಸಿದ್ದಾರೆ. ಅದಕ್ಕನುಗುಣವಾಗುವಂತೆ ಬೇರೆ ಬೇರೆ ಖಾತೆಗಳಲ್ಲಿಯ ನೋಕರರ ಸೀನಿಯಾರಿಟಿ ಪಟ್ಟಿ (civil list) ಯೊಂದನ್ನು ಶೀಘ್ರದಲ್ಲಿ ತಯಾರಿಸಲು ಸೂಕ್ತ ಕ್ರಮಗಳನ್ನು ಕೈಕೊಂಡಿದ್ದಾರೆ. ಆರ್ಥಿಕ ಕ್ಷೇತ್ರದಲ್ಲಿ ಕೆಲವು ಪ್ರದೇಶಗಳು ಮುಂದರಿದಿವೆ. ಮತ್ತು ಕೆಲವು ಹಿಂದುಳಿದಿವೆ. ಹಿಂದುಳಿದ ಪ್ರದೇಶಗಳಿಗೆ ವಿಶೇಷ ಗಮನವನ್ನೀಯುವ ಭರವಸೆಯನ್ನು ಕೊಟ್ಟಿದ್ದಾರೆ. ಶೈಕ್ಷಣಿಕ ಕ್ಷೇತ್ರದಲ್ಲಿ ಕಂಡು ಬಂದ ಅಸಮಾನತೆಗಳನ್ನು ಅಂದರೆ ಅಭ್ಯಾಸಪತ್ರಿಕೆ, ಪಠ್ಯಪುಸ್ತಕ. ಹಿಂದೀಯ ಸ್ಥಾನ, ಇಂಗ್ಲೀಷಿನ ಸ್ಥಾನ, ಶಿಕ್ಷಣ ಮಾಧ್ಯಮ, ಮುಂತಾದವುಗಳಲ್ಲಿ ಕಂಡು ಬಂದ ವಿಷಮತೆಗಳನ್ನು ಸರಿಪಡಿಸಲು ವಿದ್ಯಾ ಇಲಾಖೆಯು ಈಗಾಗಲೇ ಕಾರ್ಯಪ್ರವೃತ್ತವಾಗಿದೆಯೆಂದು ಕೇಳುತ್ತೇವೆ. ಇಂತಹ ಇನ್ನೂ ಹಲವಾರು ಸಮಸ್ಯೆಗಳು ಮಂತ್ರಿಮಂಡಲದ ತಲೆಯನ್ನು ಈಗ ತಿನ್ನುತ್ತಿವೆ. ಇಂತಹ ಬಿಕ್ಕಟ್ಟಿನ ಸಮಯದಲ್ಲಿ ಅವುಗಳನ್ನೆಲ್ಲ ಸಮದೃಷ್ಟಿ

ಯಿಂದಲೂ ಸಮ ತೂಕದಿಂದಲೂ ಧೈರ್ಯದಿಂದಲೂ ಸಾಗಿಸಿಕೊಂಡು ಹೋಗುವ ಸಮರ್ಥ ಆಡಳಿತಗಾರನೊರ್ವನು ಮುಖ್ಯಮಂತ್ರಿಯ ಸ್ಥಾನಕ್ಕೆ ಅವಶ್ಯವಾಗಿ ಬೇಕಾಗಿದ್ದನು. ಆ ಸ್ಥಾನದಲ್ಲಿ ಶ್ರೀ ನಿಜಲಿಂಗಪ್ಪನವರ ಘನ ಸೇವೆಯು ಈಗ ಪ್ರಾಪ್ತವಾದುದು ನಮ್ಮ ರಾಜ್ಯದ ಸುದೈವವು. ಆ ಗುರುತರವಾದ ಹೊಣೆಯನ್ನು ನಿರ್ವಹಿಸಲು ದೇವರು ಅವರಿಗೆ ಹೆಚ್ಚಿನ ಸಾಮರ್ಥ್ಯವನ್ನೂ ಆಯುರಾರೋಗ್ಯವನ್ನೂ ದಯಪಾಲಿಸಲೆಂದು ಹಾರೈಸುತ್ತೇನೆ.

— ಜಯ ಹಿಂದ —

ಒತ್ತಾಯ ಶಿಕ್ಷಣದ ಸಾಧನೋಪಾಯಗಳು

ಬರೆಹಗಾರ : **ಬ. ದೊ. ಯಲಬುರ್ಗಿ,** ಗುಳೇದಗುಡ್ಡ

(ಹಿಂದಿನ ಸಂಚಿಕೆಯಿಂದ ಬಂದದ್ದು)

೧೭ ಶಿಕ್ಷಣ ಸಮ್ಮೇಲನ, ಸಪ್ತಾಹ, ಶೈಕ್ಷಣಿಕ ಪ್ರದರ್ಶನ, ಪಾಲಕ ಬಾಲಕರ ದಿನಾಚರಣೆ, ಶಾಲಾ ವಾರ್ಷಿಕೋತ್ಸವ ಮೊದಲಾದವುಗಳನ್ನಿಟ್ಟುಕೊಂಡು ಊರವರೊಡನೆ ಸಂಬಂಧ ಬೆಳೆಯಿಸಿಕೊಳ್ಳಬೇಕು. ಮಕ್ಕಳ ವಿವಿಧ ಚಟುವಟಿಕೆ, ಮನರಂಜನೆಗಳನ್ನು ಮಾಡಿಸಿ, ಏಕಾಂಕಗಳನ್ನಾಡಿಸಿ ಊರವರು ಶಾಲೆಯ ಬಗೆಗೆ ಅಭಿಮಾನ ತಾಳುವಂತೆ ಮಾಡಬೇಕು. ಇಂತಹ ಸಮಯಗಳಲ್ಲಿ ಜನರ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ಶಿಕ್ಷಣ ತಜ್ಞರಿಂದ ಮಾರ್ಮಿಕವಾದ ಮಾತುಗಳನ್ನು ಹೇಳಿಸಬೇಕು. ಅಂದರೆ ಊರವರ ಮೇಲೆ ಒಳ್ಳೇ ಪರಿಣಾಮವಾಗುವದು.

೧೮ ಎಲ್ಲ ಕೆಲಸಗಳಿಗೂ ಮುಹೂರ್ತ ಕೇಳುವ ಸಾಂಪ್ರದಾಯವೊಂದು ನಮ್ಮಲ್ಲಿ ಬಹಳ ದಿವಸಗಳಿಂದ ಬಂದು ಬಿಟ್ಟಿದೆ. ಬಿತ್ತುವಾಗ, ಬೆಳೆಕೊಯ್ಯುವಾಗ, ರಾಶಿ ಮಾಡುವಾಗ, ಮುಂತಾದವುಗಳಿಗೆಲ್ಲ ಹಳ್ಳಿಗರಿಗೆ ಮುಹೂರ್ತವೇ ಮುಖ್ಯ. ಹಳ್ಳಿಗಳಲ್ಲಿ ಮುಹೂರ್ತ ಹೇಳಲು ಶಾಲಾ ಗುರುಗಳ ಹೊರತು ಅವರಿಗೆ ಇನ್ನಾರಿಲ್ಲ. ಆದುದರಿಂದ ಗುರುಗಳಿಗೆ ಪಂಚಾಂಗದ ಪರಿಪೂರ್ಣ ಜ್ಞಾನವಿರಬೇಕು. ಅಂದರೆ ಗುರುಗಳಿಗೆ ಅಲ್ಲಿ ಇನ್ನಿಲ್ಲದ ಗೌರವಾದರಗಳು ದೊರೆಯುವವು. ಮತ್ತು ಅಪ್ರತ್ಯಕ್ಷವಾಗಿ ಗುರುಗಳ ಪ್ರಭಾವವು ಹಳ್ಳಿಗರ ಮೇಲಾಗುವದು. ಶಾಲೆಗೆ ಬಾರದ ಬಾಲಕರ ಬಗ್ಗೆ ಆಯಾ ಪಾಲಕರು ಭೆಟ್ಟಿಯಾದಾಗ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಲು ಹೇಳಿದರೆ ಅವರು ತಪ್ಪಿಸರು. ಒಂದುವೇಳೆ ಅಲಕ್ಷ್ಯಮಾಡಿದರೂ ಮತ್ತೊಮ್ಮೆ ಭೆಟ್ಟಿಯಾದಾಗ ಈ ಮಾತೆತ್ತಿದರಂತೂ ಅವರಿಗೆ ಸಾಕು ಸಾಕಾಗಿ ಹೋಗುವದು. ಹೀಗೆ ಒಂದೆರಡು ಸಲ ಹೇಳಿದಾಗ ಮಾತುಮೀರಿದವರು ಅಕಸ್ಮಾತ ಗುರುಗಳನ್ನು ಕಂಡರೆ ಮುಖಮುರಿಮಾಡಿಕೊಂಡು ಹೋಗಿ ಮಾರನೆಯ ದಿನ ಮಕ್ಕಳನ್ನು ಶಾಲೆಗೆ ಮುದ್ದಾಂ ತಂದು ಕಳಿಸಿ ಹೋಗುವರು.

೧೯ ಜನರ ಅಜ್ಞಾನ ತಿಳಿಯಲೆಂದು ಸರಕಾರವು ಅಲ್ಲಲ್ಲಿ ಸಮಾಜ ಶಿಕ್ಷಣ ವರ್ಗಗಳನ್ನು ತೆರೆಯಲು ಒತ್ತಾಯ ಮಾಡುತ್ತಿದೆ. ಸರಕಾರದ ಈ ಆದೇಶದಂತೆ ನಾವಿರುವ ಹಳ್ಳಿಗಳಲ್ಲೆಲ್ಲ ಲೋಕ ಶಿಕ್ಷಣ ಶಾಲೆಗಳನ್ನು ತೆರೆದು ಪಾಲಕರ ಸಂಪರ್ಕ ಬೆಳೆಯಿಸಿಕೊಳ್ಳಬೇಕು. ಅಂದರೆ ಊರವರ ಸಹಾಯ ಸಹಕಾರಗಳು ನಮಗೆ ದೊರೆಯುವವು. ಮತ್ತು ಶಾಲೆಗೆ ಬರದ ಬಾಲಕರನ್ನು ಬರಮಾಡಿಕೊಳ್ಳಲು ಅವರ ನೆರವೂ ಸಿಗುವದು. ಹಾಗೂ ಸ. ಶಿ. ವರ್ಗವನ್ನು ಸಾಗಿಸಿದ್ದಕ್ಕಾಗಿ ಸರಕಾರದಿಂದ ಸಹಾಯ ಧನವೂ ಸಿಗುವದು.

೨೦ ಶಾಲೆಗಳಿರುವ ಹಳ್ಳಿಗಳಲ್ಲೆಲ್ಲ ಒಂದೊಂದು ಸ್ಥಳಿಕ ಶಾಲಾ ಸಮಿತಿಗಳಿರುವುದುಂಟು. ಆ ಸಮಿತಿಯ ಸದಸ್ಯರ ಸಹಾಯಕೋರಿ, ಶಾಲೆಗೆ ಬಾರದ ಮಕ್ಕಳ ಯಾದಿಯನ್ನು ಆಯಾ ಓಣಿ (ವಾರ್ಡು)ಗಳಲ್ಲಿಯ ಸದಸ್ಯರಿಗೆ ಮುಟ್ಟಿಸಿ ಮಕ್ಕಳು ಶಾಲೆಗೆ ಬರುವಂತೆ ಮಾಡಲು ವಿನಂತಿಸಬೇಕು.

೨೧ ಇವಾವ ಉಪಾಯಗಳಿಗೂ ಬಗ್ಗದ ಬಾಲಕರ ಪಾಲಕರಿಗೆ ಅನಿವಾರ್ಯವಾಗಿ ಕಡ್ಡಾಯ ಶಿಕ್ಷಣ ಕಾಯ್ದೆಯನ್ವಯ ದಂಡ, ಶಿಕ್ಷೆಗಳಾಗಲೇಬೇಕು.

ಸರಕಾರದ ಉದ್ದೇಶವು ಈಡೇರಿ ಫಲದಾಯಕವಾಗಬೇಕಾದರೆ ಈ ಉಪಾಯಗಳು ಹೆಚ್ಚು ಸಹಾಯ ಮಾಡಬಲ್ಲುವೆಂದು ನನ್ನ ನಂಬುಗೆ.

ಜಯ-ಹಿಂದ

ಮೂಲ ಶಿಕ್ಷಣದ ಅರಿವು

ಅನುವಾದಕರು : **ಶ್ರೀ ಶಿಂತ್ರಿ ಬಸಪ್ಪನವರು,** ಬಿ.ಎ.,ಬಿ.ಟಿ.

೮. ಪ್ರಕರಣ

(ಹಿಂದಿನ ಸಂಚಿಕೆಯಿಂದ ಬಂದದ್ದು)

ಆಹಾರವೂ ಮೂಲ ಶಿಕ್ಷಣವೂ

ನಿತ್ಯದ ಅನುಭವಗಳ ಮುಖಾಂತರ ಹೊಂದುವ ಶಿಕ್ಷಣವು ಮೂಲ ಶಿಕ್ಷಣವು. ನಾವು ದಿನಾಲು ತಿನ್ನುಂಣುವ ಪ್ರಸಾದದಷ್ಟು ಅತ್ಯಾವಶ್ಯಕವಾದ ಹಾಗೂ ಅವ್ಯಾಹತವಾದ ಅನುಭವವು ಬೇರೊಂದಿಲ್ಲ. ಪ್ರಸಾದವು ನಿತ್ಯದ ಬೇಡಿಕೆಯು. ನಮ್ಮ ಶಿಕ್ಷಣಕ್ಕೆ ಈ ಅನುಭವವು ತಳಹದಿಯಾಗಿರುವದು ಹೆಚ್ಚು ಸ್ವಾಭಾವಿಕವು. ಇಲ್ಲಿಯ ವರೆಗೆ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಈ ಅತಿ ಮುಖ್ಯವಾದ ಚಟುವಟಿಕೆಯನ್ನು ಉಪಯೋಗ ಮಾಡಿಕೊಳ್ಳದೆ ಇದ್ದುದು ಅಚ್ಚರಿಯಲ್ಲವೇ? "ಶಿಕ್ಷಣಕ್ಕೋಸ್ಕರ ಈ ಚಟುವಟಿಕೆಯ ಉಪಯೋಗವು ಆಗಬಹುದೇ ?" ಎಂಬ ಪ್ರಶ್ನವನ್ನು ಆರಾದರೂ ಕೇಳಬಹುದು. ಅದಕ್ಕೆ ಉತ್ತರವು ಸುಲಭವಿದೆ. ಅದು ಮಗುವಿನ ಶಿಕ್ಷಣಕ್ಕೆ ಆಸ್ಪದವನ್ನು ಕೊಡುತ್ತಿದೆಯಲ್ಲದೆ ಶರೀರಶಾಸ್ತ್ರ, ಜೀವಿಗಳ ರಸಾಯನಶಾಸ್ತ್ರ, ಪೋಷಣೆ, ವೈಯಕ್ತಿಕ ಆರೋಗ್ಯ, ಸಾಮೂಹಿಕ ಆರೋಗ್ಯ ಮುಂತಾದ ಮುಖ್ಯವಾದ ಶಾಸ್ತ್ರಗಳನ್ನು ಕಲಿಸಲು ಬಹಳಷ್ಟು ಶಕ್ಯವಿದೆ. ಮೇಲಾಗಿ, ಅದರಿಂದ ಮತ್ತೊಂದು ಪ್ರಯೋಜನವಿದೆ. ಶಿಕ್ಷಣವು ತಾತ್ತ್ವಿಕವಾಗಿರದೆ ಪ್ರಾಯೋಗಿಕವಾಗಿರಬೇಕು. ಆರೋಗ್ಯವನ್ನು ಕಲಿಸುವಾಗ ಅದರ ತತ್ವಗಳನ್ನಷ್ಟೇ ಹೇಳಿದರೆ ಸಾಲದು, ಆದರೆ ಅವುಗಳ ಪ್ರಯೋಗದ ಚಟಗಳು ಮಕ್ಕಳಲ್ಲಿ ಹುಟ್ಟಿ ಬೆಳೆಯುವದು ಅತ್ಯಾವಶ್ಯಕವಿದೆ; ಕೇವಲ ತಾತ್ತ್ವಿಕ ಜ್ಞಾನದಿಂದ ನಿತ್ಯದ ವ್ಯವಹಾರದಲ್ಲಿ ಆವ ಪ್ರಯೋಜನವೂ ಆಗಲಾರದು. ಅದರಂತೆ, ಆಹಾರದ ಸಾಮಗ್ರಿಗಳ ಬಗೆಗೆ ಕಲಿಸುವಾಗ ದಾರ್ಶನಿಕ ಜ್ಞಾನವನ್ನು ಮಾಡಿ ಕೊಡುವದಲ್ಲದೆ ಪಚನ ಕ್ರಿಯೆಗೆ ಸುಲಭವಾಗುವಂತೆ ಸ್ವಚ್ಛವಾಗಿ ಅಡಿಗೆ ಮಾಡುವದರಲ್ಲಿಯೂ ಬಡಿಸುವದರಲ್ಲಿಯೂ ಊಟ ಮಾಡುವದರಲ್ಲಿಯೂ ಚಲೋ ಚಟಗಳನ್ನು ಕಲಿಸಬೇಕು.

ಈ ವಿಷಯವನ್ನು ಬೇಕಾದ ಕ್ಲಾಸಿನಲ್ಲಿ ಪ್ರಸ್ತಾಪಿಸಲು ಅತಿ ಸುಲಭವಿದೆ. "ಈ ಹೊತ್ತು ಆವ ಪ್ರಸಾದವನ್ನು ಊಟ ಮಾಡದಿರಿ?" ಎಂಬ ಪ್ರಶ್ನವನ್ನು ಮಕ್ಕಳಿಗೆ ಕೇಳಿರಿ. ಈ ಪ್ರಶ್ನವು ಆ ಪ್ರದೇಶದಲ್ಲಿ ಲಭ್ಯವಿರುವ ಆಹಾರಗಳನ್ನೆಲ್ಲ ಹೊರಡಿಸುವದು. ಬೇರೆ ಬೇರೆ ಮಕ್ಕಳಿಂದ ಬಂದ ಉತ್ತರಗಳನ್ನು ಶೇಖರಿಸಿ ವಿಂಗಡಿಸಿ ವರ್ಗೀಕರಿಸಬೇಕು. ಹಲವರು ಅಕ್ಕಿಯ ಅನ್ನವನ್ನುಂಡಿರಬಹುದು, ಹಲವರು ಜೋಳದ ರೊಟ್ಟಿಯನ್ನು ತಿಂದಿರಬಹುದು, ಮತ್ತು ಅವುಗಳ ಗೂಡ ಅವರು ಊಟ ಮಾಡಿದ ಬೇರೆ ಬೇರೆ ಕಾಯಿಪಲ್ಯಗಳ ಪಟ್ಟಿಯೊಂದನ್ನು ತಯಾರಿಸಬೇಕು; ಹಂಣುಗಳನ್ನೂ ಹೈನದ ಪದಾರ್ಥಗಳನ್ನೂ ಉಂಡಿದ್ದರೆ, ಅವುಗಳ ಯಾದಿಯನ್ನು ಮಾಡಿಟ್ಟುಕೊಳ್ಳಬೇಕು. ಈ ಪಟ್ಟಿಯು ಆ ಸುತ್ತುಮುತ್ತಲಿನ ಪ್ರದೇಶದಲ್ಲಿ ಬೇರೆ ಬೇರೆ ಋತುಮಾನಗಳಲ್ಲಿ ಸಿಗುವ ಆಹಾರದ ಪದಾರ್ಥಗಳನ್ನೆಲ್ಲ ಅರಿತುಕೊಳ್ಳಲು ಸಹಾಯವಾಗುತ್ತಿದೆ.

"ನಾವು ಹೇಗೆ ಊಟ ಮಾಡುತ್ತೇವೆ?" ಎಂಬುದು ಆ ಮೇಲೆ ಕೇಳತಕ್ಕ ಪ್ರಶ್ನವು. ಈ ಸಂದರ್ಭದಲ್ಲಿ ನಮ್ಮ ಊಟ ಮಾಡುವ ಚಟಗಳನ್ನು ಚರ್ಚಿಸಬಹುದು. ಉಂಣುವ ಮೊದಲು ಹಾಗೂ ನಂತರ ಕೈಗಳನ್ನು ತೊಳೆದುಕೊಳ್ಳುವದು, ಬಾಯಲ್ಲಿ ನೀರನ್ನು ಹಿಡಿದು ಗುಚುಗುಚು ಮಾಡಿ ಉಗುಳುವದು, ಭಾಂಡೆಗಳನ್ನು ಇಲ್ಲವೆ ಗಡಿಗೆ-ಮಡಿಕೆಗಳನ್ನು ಸ್ವಚ್ಛವಾಗಿ ತಿಕ್ಕುವದು, ಮುಸುರಿಯನ್ನು ನಿರ್ದಿಷ್ಟ ಸ್ಥಳದಲ್ಲಿರಿಸುವದು, ನೊಣಗಳು ಬರದಂತೆ ಮನೆಯನ್ನು ಜಳಜಳ ಇಡುವದು, ಕುಡಿಯುವ ನೀರನ್ನು ಕುದಿಸಿ ಒಂದು ಸ್ವಚ್ಛವಾದ ಹರಿವೆಯಲ್ಲಿ ಹಾಕಿಡುವದು, ಇವುಗಳನ್ನೆಲ್ಲ ಚರ್ಚೆಯಲ್ಲಿ ಒತ್ತಿಹೇಳಬೇಕು. ಈ ಆರೋಗ್ಯಕರವಾದ ಚಟಗಳಿಂದುಂಟಾಗುವ ಸುಪರಿಣಾಮಗಳನ್ನೂ, ವಿಷಮ ಜ್ವರ ಮಾರಿಕಾ ಮುಂತಾದ

ರೋಗಗಳು ಆಹಾರ ಮತ್ತು ಕುಡಿಯುವ ನೀರಿನ ಮೂಲಕ ಹಬ್ಬುವ ಕಾರಣಗಳನ್ನೂ, ರೋಗದ ಜಂತುಗಳಿಂದ ಆಹಾರವು ವಿಷಯುಕ್ತವಾಗುವದನ್ನೂ ಈ ಸಂದರ್ಭದಲ್ಲಿ ಮನದಟ್ಟಾಗುವಂತೆ ಬಿಂಬಿಸಬೇಕು,

ಇನ್ನು ಮುಂದಿನ ಪ್ರಶ್ನವೆಂದರೆ— "ನಾವು ಏಕೆ ಉಣ್ಣುತ್ತೇವೆ ? " "ಹಸಿವೆಯನ್ನು ಹಿಂಗಿಸಲು ಮತ್ತು ಬದುಕಿರಲು" ಎಂದು ಮಕ್ಕಳು ಅನ್ನಬಹುದು. ನಮ್ಮ ಶಕ್ತಿಯನ್ನು ಕಳಕೊಂಡಿದ್ದರ ಗುರುತೆಂದರೆ ಹಸಿವೆಯು; ಕಳಕೊಂಡಿದ್ದ ಆ ಸಾಮರ್ಥ್ಯವನ್ನು ಪುನಃ ಸಂಪಾದಿಸಲು ಊಟವು ಅವಶ್ಯವಿದೆಯೆಂಬುದನ್ನು ತಿಳಿಸಿ ಹೇಳಬೇಕು. ಆಹಾರದಿಂದಾಗುವ ಬೇರೆ ಬೇರೆ ಪರಿಣಾಮಗಳನ್ನು ತಿಳಿಸಿ ಕೊಡಲು ಶಕ್ಯವಿದೆ— ಶಕ್ತಿಯನ್ನು ಹುಟ್ಟಿಸುವದು, ಅವಯವಗಳನ್ನು ಬಲಪಡಿಸುವದು, ದೇಹದ ಸವಕಳಿಯನ್ನು ಪೂರೈಸುವದು, ರೋಗದ ಜಂತುಗಳನ್ನು ನಿಗ್ರಹಿಸುವ ಸೂಕ್ಷ್ಮ ಅಂಗಾಂಶಗಳನ್ನು ನಿರ್ಮಿಸಿ ಶರೀರವನ್ನು ಕಾಪಾಡುವದು, ಜೀವಕ್ಕೆ ಕಳೆ ತಂದು ಕೊಡುವದು ಮತ್ತು ಚುರುಕುತನ–ହುರುಪು–ಹುಮ್ಮಸಗಳನ್ನುಂಟು ಮಾಡುವದು. ಆ ಮೇಲೆ ಬಾಕತಕ್ಕ ಪ್ರಶ್ನವೆಂದರೆ– "ಈ ಬೇಡಿಕೆಗಳು ಹೇಗೆ ಪೂರೈಸಲ್ಪಡುವವು ?" ನಮ್ಮ ಆಹಾರದ ಸಾಮಗ್ರಿಗಳೆಂದರೆ ಅಕ್ಕಿ, ಜೋಳ, ರಾಗಿ, ಮುಂತಾದ ಧಾನ್ಯಗಳು, ಬೇಳೆಯ ಕಾಳುಗಳು, ಎಣ್ಣೆಯ ಕಾಳುಗಳು, ಕಾಯಿಪಲ್ಯಗಳು, ಹಣ್ಣುಗಳು, ಹಾಲು ಹಾಗೂ ಹೈನದ ಪದಾರ್ಥಗಳು, ಮಾಂಸ, ಸಂಬಾರ–ಮಸಾಲೆಗಳು. ಅವುಗಳಲ್ಲಿ ಪ್ರೋಟೀನು (ಸನಾರಜನಕ-ಪದಾರ್ಥಗಳು), ಕೊಬ್ಬುಗಳು, ಕಾರ್ಬೋ ಹಾಯಡ್ರೇಟು (ಶರ್ಕರ ಪಿಷ್ಟಗಳು) ಗಳು, ವ್ಹಿಟಾಮಿನ್ನು (ಜೀವಸತ್ವ) ಗಳು, ರಘೇಜ (ಕರುಳಿನ ಚಲನೆಗೆ ಉತ್ತೇಜನ ಕೊಡುವ ಧಾನ್ಯದ ತವಡು ಹಾಗೂ ಕಾಯಿಪಲ್ಯದ ನಾರು) ಮತ್ತು ಲವಣಗಳು ಇರುತ್ತವೆ. ಸನಾರಜನಕ ಪದಾರ್ಥಗಳು, ಕೊಬ್ಬುಗಳು ಮತ್ತು ಶರ್ಕರ-ಪಿಷ್ಟಗಳು ಶರೀರಕ್ಕೆ ಶಕ್ತಿಯನ್ನು ತಂದು ಕೊಡತಕ್ಕವುಗಳು. ಜೀವಸತ್ವಗಳು ಹಾಗೂ ಲವಣಗಳು ಶಕ್ತಿಯನ್ನು ಪೂರೈಸದಿದ್ದರೂ ಶರೀರದ ಬೆಳವಣಿಗೆಯಲ್ಲಿ ಅತಿ ಮುಖ್ಯವಾದ ಪಾತ್ರವನ್ನು ವಹಿಸುತ್ತಿವೆ. ನೀರು ಮತ್ತು ಕಾಯಪಲ್ಯದ ನಾರು ಇವೂ ಸಹ ಅಗತ್ಯವಾಗಿ ಬೇಕು. ನಾರು ಕರುಳಿನ ಸ್ನಾಯುಸರಗಳ ಚಲನೆಗಳಿಗೆ ಉತ್ತೇಜನ ಕೊಟ್ಟು ಬೇಡಾದ ಹೊಲಸನ್ನು ಹೊರಗೆ ದಬ್ಬಲು ಪ್ರೇರೇಪಿಸುತ್ತಿದೆ. ನೀರು ಶರೀರದಲ್ಲಿ ಉಷ್ಣತೆಯನ್ನು ಇಲ್ಲವೆ ಜೀವನಸತ್ವಗಳನ್ನುಂಟು ಮಾಡದಿದ್ದರೂ ನಮ್ಮ ಆಹಾರವೊಂದು ಮುಖ್ಯವಾದ ಭಾಗವಿದೆ. ಅದು ನಮ್ಮ ಶರೀರದ ಪ್ರತಿಯೊಂದು ಅವಯವಕ್ಕೆ ಪೋಷಕ ದ್ರವ್ಯವನ್ನು ಪೂರೈಸುತ್ತಿದೆ. ನಮ್ಮ ಶರೀರದ ಪ್ರತಿಯೊಂದು ಅಂಗಾಂಶ (tissue) ದ ಬೆಳವಣಿಗೆಗೆ ಅದು ಅವಶ್ಯವಾಗಿ ಬೇಕು. ನಮ್ಮ ಹರಿದಾಡುವ ರಕ್ತದಂತಹ ಎಲ್ಲ ದ್ರವಗಳಲ್ಲಿ ನೀರಿನ ಪ್ರಮಾಣವೇ ಹೆಚ್ಚು. ಶರೀರದ ಉಷ್ಣತೆಯಲ್ಲಿ ಏರಿಳಿತಗಳಾಗದಂತೆ ನೋಡಿಕೊಳ್ಳುತ್ತಿದೆ. ಮೇಲಾಗಿ, ಅದು ಲವಣಗಳನ್ನು ಪೂರೈಸುತ್ತಿದೆ, ಉದಾಹರಣಾರ್ಥವಾಗಿ ಕ್ಷಾರಗಳಿಂದ ಕೂಡಿದ ನೀರು ಶರೀರಕ್ಕೆ ಸಾಕಷ್ಟು ಕ್ಯಾಲ್ಸಿಯಮ್ (ಸುಣ್ಣ) ವನ್ನೀಯುತ್ತಿದೆ. ಮಲಬದ್ಧತೆಯ ಕಾರಣ–ಪರಿಣಾಮಗಳನ್ನು ವಿವರಿಸಿ ಅದು ಬರದಂತೆ ಆವ ಕ್ರಮಗಳನ್ನು ಕೈಕೊಳ್ಳಬೇಕೆಂಬುದನ್ನು ಈ ಸಂದರ್ಭದಲ್ಲಿ ತಿಳಿಸಿ ಹೇಳಲು ತಕ್ಕ ಸಮಯವು.

ಪ್ರಾಥಮಿಕ ಶಾಲಾ ಪ್ರಮಾಣಪತ್ರ, ಪರೀಕ್ಷೆ, ಟ್ರೇನಿಂಗ
ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿ
ಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—
ಜನಪ್ರಿಯವಾದ ಮತ್ತು ಸರಕಾರದಿಂದ
ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋಶಿ, ಮತ್ತು
ಶ್ರೀ. ಜಿ. ಡಿ. ಮಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ
ದೊರೆಯುವದು. **ಬೆಲೆ ೧-೧೨-೦** ಅಂಚೆವೆಚ್ಚ
ಪ್ರತ್ಯೇಕ. ಐದು ಮತ್ತು ಐಯ್ದಕ್ಕಿಂತ ಹೆಚ್ಚು
ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.
ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ನಾಯ್. ರಾಣೆ
ಪ್ರಕಾಶಕರು, ೩೪೩, ಕಸಬಾ ಪೇಟೆ, ಪುಣೆ.

"ನಾವು ಎಷ್ಟು ಉಂಣಬೇಕು" ಎಂಬುದು ನಮ್ಮ ಮುಂದಿರುವ ಮತ್ತೊಂದು ಪ್ರಶ್ನವು. ಈ ಪ್ರಶ್ನವನ್ನು ಬಿಡಿಸುವ ಮೊದಲು ನಮ್ಮ ಶರೀರಕ್ಕೆ ಬೇಕಾಗುವ ಶಕ್ತಿಯೆಷ್ಟು ಅದರ ಲೆಕ್ಕವೆಷ್ಟೆಂಬುದನ್ನು ನಾವರಿತು ಕೊಳ್ಳುವದವಶ್ಯವಿದೆ. ಈ ಸಂದರ್ಭದಲ್ಲಿ ಗಣಿತ ವಿಷಯದ ಸಮಾವೇಶವೂ ಆಗುವದುಂಟು. ಭಾರತೀಯ ಸಂಶೋಧನ ನಿಧಿ ಸಂಸ್ಥೆ (Indian Research Fund Association) ಯವರಿಂದ ಶರೀರ-ಪೋಷಣೆಯ ಬಗೆಗೆ ನಿಯಮಿಸಲ್ಪಟ್ಟ ಉಪದೇಶಕ ಸಮಿತಿ (Nutrition Advisory Committee) ಯವರು ಪರಿಶ್ರಮಬಟ್ಟು ಸಂಶೋಧನ ಮಾಡಿ ಪ್ರತಿಯೊಬ್ಬನಿಗೆ ದಿನಾಲು ಬೇಕಾಗುವ ಶಕ್ತಿಯನ್ನು ಕ್ಯಾಲರಿಗಳ ಮಾನದಿಂದ ಲೆಕ್ಕ ಮಾಡಿ ಗೊತ್ತು ಪಡಿಸಿದ್ದನ್ನು ಈ ಕೆಳಗೆ ಕೊಟ್ಟಿದೆ (ಭಾರತ ಸರಕಾರವು ೧೯೫೧ ರಲ್ಲಿ ಪ್ರಕಟಿಸಿದ ೨೩ ನೆಯ ನಂಬರಿನ "ಆರೋಗ್ಯದ ಚಿಕ್ಕವರದಿ"- Health Bulletion No. 23- ಯಲ್ಲಿಯ ೧೫ ನೆಯ ಪುಟವನ್ನು ನೋಡಿರಿ):—

ದಿನಾಲು ಬೇಕಾಗುವ ಕ್ಯಾಲರಿಗಳು

ವ್ಯಕ್ತಿ	ಚಟುವಟಿಕೆ	ನಿವ್ವಳ ಕ್ಯಾಲರಿಗಳು
ಗಂಡಸು (ಪ್ರಬುದ್ಧ) ೧೨೦ ಪೌಂಡು ತೂಕದವನು.	ಕುಳಿತಲ್ಲಿಯೇ ಕುಳಿತು ಕೆಲಸ ಮಾಡುವವ	೨೪೦೦
	ತಕ್ಕಮಟ್ಟಿಗೆ ,, ,,	೩೦೦೦
	ಮೈಮುರಿದು ,, ,,	೩೬೦೦
ಹೆಂಗಸು (ಪ್ರಬುದ್ಧಳು) ೧೦೦ ಪೌಂಡು ತೂಕದವಳು	ಕುಳಿತಲ್ಲಿಯೇ ಕುಳಿತು ಕೆಲಸ ಮಾಡುವವಳು	೨೧೦೦
	ತಕ್ಕಮಟ್ಟಿಗೆ ,, ,,	೨೫೦೦
	ಮೈಮುರಿದು ,, ,,	೩೦೦೦
	ಗರ್ಭಿಣಿ	೨೧೦೦
	ಕೂಸಿದ್ದವಳು	೨೭೦೦
ಮಗುಗಳು		
ಒಂದು ವರ್ಷದ ಒಳಗಿನವರು		೧೦೦
೧ ರಿಂದ ೩ ವರ್ಷಗಳು		೯೦೦
೩ ,, ೫ ,,		೧೨೦೦
೫ ,, ೭ ,,		೧೪೦೦
೭ ,, ೯ ,,		೧೭೦೦
೯ ,, ೧೨ ,,		೨೦೦೦
ತರುಣರು		
೧೨ ರಿಂದ ೧೫ ವರ್ಷಗಳು		೨೪೦೦
೧೫ ,, ೨೧ ,,		೨೪೦೦

ಒಂದು ಕ್ಯಾಲರಿ ಅಂದರೆ ಒಂದು ಕಿಲೊಗ್ರ್ಯಾಮ್ (ಒಂದು ಸಾವಿರ ಗ್ರ್ಯಾಮ್) ತೂಕದ ನೀರನ್ನು ೧ ಡಿಗ್ರೀ ಸೆಂಟಿಗ್ರೇಡ ಶಾಖವೇರುವಂತೆ ಕಾಯಿಸುವದಕ್ಕೆ ಬೇಕಾಗುವ ಉಷ್ಣತೆ. ನಿವ್ವಳ ಕ್ಯಾಲರಿಗಳೆಂದರೆ ಶರೀರವು ತನಗೆ ದಿನಾಲು ಬೇಕಾಗುವ ಶಕ್ತಿಯನ್ನು ಪಡೆಯಲೋಸುಗ ಆಹಾರಗಳಿಂದ ಹೀರಿಕೊಳ್ಳುವ ಕ್ಯಾಲರಿಗಳು.

(ಮುಂದುವರಿಯುವದು)

"ಜೀವನ ಶಿಕ್ಷಣವು ಹೇಗೆ ಯಶಸ್ವಿಯಾದೀತು ?"

ಬರೆದವರು : **ಶ್ರೀ ಅನ್ನದಾನೀಶ್ವರ ವಿರಕ್ತಮಠ,** ಬಿ.ಎ.(ಆನರ್ಸ್),ಬಿ.ಟಿ.

(ಲೇಖಾಂಕ ೩)

ಮಹಾತ್ಮಾ ಗಾಂಧಿಯವರು ಜೀವನ ಶಿಕ್ಷಣವನ್ನು ಕುರಿತು ಹರಿಜನ ಪತ್ರಿಕೆಯಲ್ಲಿ ವಿಚಾರ ಪೂರ್ಣ ಲೇಖನಗಳನ್ನು ಬರೆದಿರುವರು. ಸದ್ಯದ ಶಿಕ್ಷಣ ಪದ್ಧತಿಯು ಅರಾಷ್ಟ್ರೀಯ ಮತ್ತು ಅನೈತಿಕವಾಗಿದ್ದು ಭಾರತದ ಉಜ್ವಲ ಭವಿತವ್ಯಕ್ಕೆ ವಿರೋಧಿಯಾಗಿದೆಯೆಂದು ಅವರು ಸ್ಪಷ್ಟಪಡಿಸಿರುವರು. ರಾಷ್ಟ್ರೀಯ ಮತ್ತು ನೈತಿಕ ತತ್ವಗಳು ಜೀವನ ಶಿಕ್ಷಣದಲ್ಲಿಳಿಯಲ್ಲಿಕ್ಕೇಬೇಕೆಂದು ಅವರ ಸ್ಪಷ್ಟವಾದ ಮತವಾಗಿದೆ. ಮಹಾತ್ಮರು ನೀತಿ ಧರ್ಮ ಎಂಬ ಪುಸ್ತಕ ಬರೆದಿರುವರು. ಅವರ ನೀತಿ–ಧರ್ಮದಲ್ಲಿ ಹತ್ತು (೧೦) ತತ್ವಗಳು ಅಡಕವಾಗಿವೆ. ಅವು ಯಾವವೆಂದರೆ— (೧) ಸತ್ಯ, (೨) ಅಹಿಂಸೆ, (೩) ಬ್ರಹ್ಮಚರ್ಯ, (೪) ಅಸ್ವಾದ, (೫) ಅಸ್ತೇಯ, (೬) ಅಪರಿಗ್ರಹ, (೭) ಅಸ್ಪೃಶ್ಯತಾನಿವಾರಣೆ, (೮) ಸರ್ವ ಧರ್ಮ ಸಮಭಾವ, (೯) ಖಾದಿ, (೧೦) ಅಭಯ ಮತ್ತು ನಮ್ರತಾ. ಈ ಹತ್ತು ತತ್ವಗಳು ಮಹಾತ್ಮರ ಜೀವನದಲ್ಲಿಳಿದಿದ್ದವು. ಈ ಹತ್ತು ತತ್ವಗಳಿಗನುಸರಿಸಿ ಜೀವನ ಶಿಕ್ಷಣವು ಸಾಗಬೇಕೆಂದು ಮಹಾತ್ಮರ ಮನೋರಂಗದ ನಿರ್ಧಾರವಾಗಿತ್ತು. ಮಹಾತ್ಮರ ರಾಷ್ಟ್ರೀಯತೆಯಲ್ಲಿಯೂ ಈ ಹತ್ತು ತತ್ವಗಳ ಆಚರಣೆಗೆ ಒಳ್ಳೇ ಮಹತ್ವವಿತ್ತು. ನೈತಿಕತೆ ಇಲ್ಲದ ರಾಷ್ಟ್ರೀಯತೆಯನ್ನು ಮಹಾತ್ಮರು ಎಲ್ಲಿಯೂ ಪುಷ್ಟೀಕರಿಸಿಲ್ಲ. ಆದ ಕಾರಣ ರಾಷ್ಟ್ರೀಯವಾದಿಗಳು ಇತ್ತ ಚನ್ನಾಗಿ ಲಕ್ಷ್ಯಗೊಡಬೇಕು. ಸೂಕ್ಷ್ಮವಾಗಿ ವಿಚಾರ ಮಾಡಿ ನೋಡಿದರೆ ಈ ಹತ್ತು ತತ್ವಗಳು ವಿಶ್ವಧರ್ಮದ ತತ್ವಗಳಾಗಿವೆಯೆಂದು ತಿಳಿಯುವದು. ಮಹಾತ್ಮರ ರಾಷ್ಟ್ರೀಯತೆಯಲ್ಲಿ ಸಂಕುಚಿತ ಭಾವನೆ ಇರಬಾರದು. ಅಂತರರಾಷ್ಟ್ರೀಯ ತತ್ವಗಳೂ ಮಹಾತ್ಮರ ರಾಷ್ಟ್ರೀಯತೆಯಲ್ಲಿ ಅಡಕವಾಗಿವೆ. ಕಾರಣ ಮಹಾತ್ಮರ ಜೀವನ ಶಿಕ್ಷಣದಲ್ಲಿ ನೈತಿಕ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಹೀಗೆ ಮೂರು ತತ್ವಗಳ ತ್ರಿವೇಣಿಸಂಗಮವಿದೆಯೆಂದು ಸಿದ್ಧವಾಗುತ್ತದೆ. ಜೀವನ ಶಿಕ್ಷಣವು ನೈತಿಕ, ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ತತ್ವಗಳ ಕೂಡಲಸಂಗಮವಾಗಲಿಕ್ಕೆಬೇಕು. ಆಗ ಅದು ಯಶಸ್ವಿಯಾಗುವದರಲ್ಲಿ ಸಂದೇಹವೇ ಇರಲಾರದು.

ಮಹಾತ್ಮರು ೧೯೩೭ ನೆಯ ಇಸ್ವಿಯಲ್ಲಿ ಪ್ರಸಿದ್ಧ ಶಿಕ್ಷಣ ತಜ್ಞರ ಒಂದು ಸಮ್ಮೇಲನವನ್ನು ಕರೆದಿದ್ದರು. ಅಲ್ಲಿ ಡಾಕ್ಟರ ಝಾಕೀರ ಹುಸೇನರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯು ರಚಿತವಾಯಿತು. ಆ ಸಮಿತಿಯು ಮಹಾತ್ಮರ ತತ್ವಗಳ ಪ್ರಕಾರ ಒಂದು ಯೋಜನೆಯನ್ನು ತಯಾರಿಸಿತು. ಆ ಯೋಜನೆಗೆ ವರ್ಧಾ ಯೋಜನೆ ಅಥವಾ ಮೂಲ ಶಿಕ್ಷಣ ಯೋಜನೆ ಎಂಬ ಹೆಸರು ಬಂತು. ಆ ಮೂಲ ಶಿಕ್ಷಣ ಯೋಜನೆಯ ಮುಖ್ಯ ತತ್ವಗಳು ಇಂತಿವೆ—

(೧) ಏಳು ವರ್ಷಗಳ ವರೆಗೆ ಮಕ್ಕಳಿಗೆ ಉಚಿತ ಮತ್ತು ಒತ್ತಾಯದ ಪ್ರಾಥಮಿಕ ಶಿಕ್ಷಣವು ರಾಷ್ಟ್ರವ್ಯಾದ್ಯಂತ ಕೊಡಲ್ಪಡಲಿಕ್ಕೆಬೇಕು.

(೨) ಶಿಕ್ಷಣದ ಮಾಧ್ಯಮವು ಮಾತೃ ಭಾಷೆಯೇ ಆಗಿರತಕ್ಕದ್ದು.

(೩) ದೈಹಿಕ ಮತ್ತು ಉತ್ಪಾದಕ ಉದ್ಯೋಗವು ಮೂಲೋದ್ಯೋಗವಾಗಿರಬೇಕು. ಅದು ಕಲಿಸುವ ವಿಷಯಗಳ ಕೇಂದ್ರವಾಗಿರತಕ್ಕದ್ದು. ಈ ಉದ್ಯೋಗದ ಸುತ್ತಲೂ ವಿಷಯಗಳು ಸಂಬಂಧೀಕರಿಸಲ್ಪಡಬೇಕು.

(೪) ಉತ್ಪಾದಕ ಉದ್ಯೋಗವು ಸ್ವಾವಲಂಬೀ ಮತ್ತು ಶಿಕ್ಷಣದ ಖರ್ಚು–ವೆಚ್ಚಗಳನ್ನು ತೂಗಿಸುವಂಥದೂ ಆಗಿರಬೇಕು.

ಈ ಶಿಕ್ಷಣ ಯೋಜನೆಯು ಶಿಕ್ಷಣ ರಂಗವನ್ನು ಪ್ರವೇಶಿಸಿದೆ. ಇದು ಮಹಾತ್ಮರ ಸ್ಫೂರ್ತಿದಾಯಕ ದೈವೀಶಕ್ತಿಯ ಪರಿಣಾಮವಾಗಿ ಬೆಳಕು ಕಂಡಿದೆ. ಮಹಾತ್ಮರಂತೆ ಉದಾತ್ತ ಗುಣಗಳುಳ್ಳ ಶಿಕ್ಷಣಾಧಿಕಾರಿಗಳಿಂದಲೂ, ಶಿಕ್ಷಕರಿಂದಲೂ, ಮತ್ತು ರಾಷ್ಟ್ರೀಯ ಮತ್ತು ಸಮಾಜ ಸೇವಕರಿಂದಲೂ ಈ ಶಿಕ್ಷಣವು ಯಶಸ್ವಿಯಾಗುವದರಲ್ಲಿ ತಿಲಮಾತ್ರವೂ ಸಂಶಯವಿಲ್ಲ. ಆದರೆ

ಕೆಲವು ಶಿಕ್ಷಣ ಸಂಸ್ಥೆಗಳು ಪ್ರಾಥಮಿಕ ಶಿಕ್ಷಣದಲ್ಲಿ ಫೀ ತೆಗೆದುಕೊಳ್ಳುವ ರೂಢಿಯನ್ನು ಹಾಕಿವೆ. ಇದು ಮಹಾತ್ಮರ ತತ್ವಕ್ಕೆ ಬಹಳ ಘಾತುಕವಾದ ರೂಢಿಯಾಗಿದೆ. ಇದನ್ನು ಆದಷ್ಟು ಕೂಡಲೇ ರಾಜ್ಯ ಸರಕಾರಗಳು ತೆಗೆದು ಹಾಕಲಿಕ್ಕೆಬೇಕು. ಜೀವನ ಶಿಕ್ಷಣವನ್ನು ಸಾರ್ವತ್ರಿಕವಾಗಿ ಮಾಡಬಯಸುವ ಪೂರ್ವದಲ್ಲಿ ಶಿಕ್ಷಣ ತಜ್ಞರು ಶೈಕ್ಷಣಿಕ ಮನಶ್ಶಾಸ್ತ್ರದ, ಸಮಾಜ ಶಾಸ್ತ್ರದ, ಮತ್ತು ಅರ್ಥ ಶಾಸ್ತ್ರದ ತತ್ವಗಳ ಮತ್ತು ಆಚರಣೆಗಳ ಬಗೆಗೆ ಪೂರ್ವಾಪರ ವಿಚಾರಿಸಲಿಕ್ಕೆಬೇಕು. ಸಾಧಕ ಬಾಧಕಗಳನ್ನು ಗುರುತಿಸಲಿಕ್ಕೇಬೇಕು. ಮೂಲ ಶಿಕ್ಷಣ ಅಥವಾ ಜೀವನ ಶಿಕ್ಷಣವನ್ನು ಬಹಿರಂಗದಲ್ಲಿ ಪ್ರತಿಪಾದಿಸುವ ಎಷ್ಟೋ ಶಿಕ್ಷಣಾಧಿಕಾರಿಗಳೂ ಸರಕಾರೀ ನೌಕರರೂ ತಮ್ಮ ಮಕ್ಕಳನ್ನು ಜೀವನ ಶಿಕ್ಷಣ ಶಾಲೆಗಳಿಗೆ ಕಳಿಸುವದೇ ಇಲ್ಲ. ಅಂತರಂಗದಲ್ಲಿ ಎಷ್ಟೋ ಶಿಕ್ಷಣ ತಜ್ಞರಿಗೆ ಜೀವನ ಶಿಕ್ಷಣದಲ್ಲಿ ನಂಬುಗೆ ಇದ್ದಂತೆ ತೋರುವದಿಲ್ಲ. ಅದಕ್ಕೆ ಈ ಕೆಳಗಿನ ಕಾರಣಗಳನ್ನು ಕೊಡಬಹುದು—

(೧) ವ್ಯಾಪಕವಾದ ಮತ್ತು ಎಲ್ಲವನ್ನು ಒಳಗೊಳ್ಳುವ ಮೂಲೋದ್ಯೋಗವು ಇರಲಾರದು. ಎಲ್ಲ ವಿಷಯಗಳನ್ನು ಅದಕ್ಕೆ ಸಂಬಂಧೀಕರಿಸಿ ಕಲಿಸಲಿಕ್ಕೆ ಬರಲಾರದು. ಈ ಕಾರಣವು ಸಮಂಜಸವಿದೆ. ಆದುದರಿಂದಲೇ ಈಗ ಸಮವಾಯಪಾಠ ಕೊಡುವಾಗ ಅದಕ್ಕೆ ನೇರವಾಗಿ ಸ್ವಾಭಾವಿಕವಾಗಿ ಸಂಬಂಧಪಡತಕ್ಕ ವಿಷಯಗಳನ್ನಷ್ಟೇ ಕಲಿಸಬೇಕೆಂದು ಸುಧಾರಣೆ ಮಾಡಿರುವರು. ಉಳಿದ ವಿಷಯಗಳನ್ನು ಬೇರೆ ಕಾಲಕ್ಕೆ ಕಲಿಸಲಿಕ್ಕೇಬೇಕಾಗುವದು.

(೨) ಎಲ್ಲ ವಿಷಯಗಳನ್ನು ಕಲಿಸಬಲ್ಲ, ಪರಿಣಾಮಕಾರಕವಾಗಿ ಕಲಿಸಬಲ್ಲ, ಶಿಕ್ಷಕರು ದೊರೆಯುವದು ಕಷ್ಟ. ಮೂಲೋದ್ಯೋಗದ ಸಂಪೂರ್ಣ ಜ್ಞಾನವುಳ್ಳ ಶಿಕ್ಷಕರು ದೊರೆಯುವದೂ ಕಷ್ಟ. ಮೂಲೋದ್ಯೋಗದ ತಜ್ಞರೂ ಮತ್ತು ಸಕಲ ವಿಷಯಗಳ ತಜ್ಞರೂ ಆಗಿರುವ ಆದರ್ಶ ಶಿಕ್ಷಕರು ಸಿಗುವದಂತೂ ಅಸಾಧ್ಯವೇ ಸರಿ. ಇಂಥ ಆದರ್ಶ ಶಿಕ್ಷಕರನ್ನು ಸರಕಾರವು ಸಿದ್ಧಪಡಿಸದ ವಿನಃ ಜೀವನ ಶಿಕ್ಷಣವು ಯಶಸ್ವಿಯಾಗಲಾರದು.

(೩) ಮೂಲೋದ್ಯೋಗಕ್ಕೆ ಅತಿ ಪ್ರಾಮುಖ್ಯತೆಯನ್ನು ಕೊಟ್ಟರೆ ಆಧುನಿಕ ಶಿಕ್ಷಣದ ಪ್ರಗತಿ ಸುಧಾರಣೆಗಳು ಕುಂಠಿತವಾಗುತ್ತವೆ. ತಕ್ಕಷ್ಟು ಮಹತ್ವ ಕೊಟ್ಟರೆ ಬಾಧಕಕ್ಕಿಂತ ಸಾಧಕವೇ ಹೆಚ್ಚೆಂದು ಹೇಳಬಹುದು. ಈಗಿನ ಶಿಕ್ಷಣವು ಶಿಶುಪ್ರಧಾನ ಶಿಕ್ಷಣವು. ಶಿಶುವಿನ ಅಥವಾ ಬಾಲಕನ, ಬುದ್ಧಿಮಟ್ಟ, ವಯಸ್ಸು, ಸಹಜ ಪ್ರವೃತ್ತಿಗಳಿಗೆ ಒಳ್ಳೇ ಮಹತ್ವವಿದೆ. ಬಾಲಕರ ಒಲವುಗಳಿಗೆ ಅನುಸರಿಸಿ ಮೂಲೋದ್ಯೋಗ ಕಲಿಸಬೇಕಾಗುವದು. ಒತ್ತಾಯದಿಂದ ಯಾವದೇ ಉದ್ಯೋಗವನ್ನು ಬಾಲಕರ ಮೇಲೆ ಹೇರಿದರೆ ಅದು ಕೈಗಾರಿಕೆಯ ಶಿಕ್ಷಣವೆನಿಸಿಕೊಳ್ಳುವದು. ಅದು ಜೀವನ ಶಿಕ್ಷಣವೆನಿಸಲಾರದು. ಆದಕಾರಣ ಒಂದೊಂದು ಕ್ಷೇತ್ರದಲ್ಲಿ ಅನೇಕ ಉದ್ಯೋಗಗಳನ್ನು ಪ್ರಾರಂಭಿಸಬೇಕಾಗುವದು. ಅದಕ್ಕೆ ಕ್ಷೇತ್ರ ದೊಡ್ಡದು ಬೇಕು. ಹಣ ಬಹಳ ಬೇಕು. ಸರಕಾರದ ಸದ್ಯದ ಆರ್ಥಿಕ ಅನವಸ್ಥೆಯ ಕಾಲಕ್ಕೆ ಜೀವನ ಶಿಕ್ಷಣವು ಸಾವಕಾಶವಾಗಿ ಪ್ರಗತಿ ಹೊಂದಬೇಕಾದದ್ದು ಅನಿವಾರ್ಯ.

(೪) ಉತ್ಪಾದಕ ಉದ್ಯೋಗವು ಸ್ವಯಂ ಪೂರ್ಣವಾಗಿಯೂ ಶಿಕ್ಷಕರ ಖರ್ಚು ವೆಚ್ಚಗಳನ್ನು ತೂಗಿಸುವಂಥದ್ದೂ ಆಗಲಾರದು. ಈ ಬಗ್ಗೆ ಸರಕಾರವೂ ಶಿಕ್ಷಣ ಶಾಖೆಯೂ ಚನ್ನಾಗಿ ವಿಚಾರ ಮಾಡಬೇಕಾಗುವದು.

(೫) ಜೀವನ ಶಿಕ್ಷಣ ಶಾಲೆಗಳು ಹಳ್ಳಿಯ ಉದ್ಯೋಗಗಳ ಕೇಂದ್ರಗಳಂತೆ ಆಗಬಾರದು. ಬಾಲಕರ ಶಾರೀರಿಕ, ಬೌದ್ಧಿಕ ಮತ್ತು ಆತ್ಮಿಕ ವಿಕಾಸವು ಸಮನ್ವಯವಾಗಿ ಆಗಲಿಕ್ಕೇಬೇಕು.

(೬) ಜೀವನ ಶಿಕ್ಷಣ ಶಾಲೆಗಳಲ್ಲಿ ಶಾರೀರಿಕ ಮತ್ತು ಬೌದ್ಧಿಕ ಶಿಕ್ಷಣಕ್ಕೆ ಉತ್ಸಾಹ ಪೂರ್ಣ, ಗೌರವದ, ಶಿಸ್ತಿನ ಸ್ಥಾನವಿರಲಿಕ್ಕೆಬೇಕು.

ಈ ಮೇಲಿನ ಕಾರಣಗಳನ್ನು ಸರಕಾರವೂ, ಶಿಕ್ಷಣ ತಜ್ಞರೂ, ಶಿಕ್ಷಣ ಶಾಖಾಧಿಕಾರಿಗಳೂ, ಮತ್ತು ರಾಷ್ಟ್ರಭಕ್ತರೂ ಮುಖ್ಯವಾಗಿ ವಿಚಾರಿಸಲಿಕ್ಕೇಬೇಕು. ಅಂದರೇನೇ ಜೀವನ ಶಿಕ್ಷಣವು ಯಶಸ್ವಿಯಾಗಬಲ್ಲುದು.

ಜೀವನ ಶಿಕ್ಷಣ ಶಾಲೆಯು ಸಮಾಜ ಶಿಕ್ಷಣ ಹಾಗು ಸೇವೆಯ ಕೇಂದ್ರ

ಅನುವಾದಕರು : **ಶ್ರೀಮತಿ ಪಿ. ಎ. ಭಾಸ್ಕರ,** ಲೇಡಿ ಸುಪರಿಂಟೆಂಡೆಂಟ ಹೆ. ಟ್ರೇ. ಕಾ. ಧಾರವಾಡ

೧೯೩೭ ನೆಯ ಜುಲೈ ೩೧ ನೇ ದಿನಾಂಕದ 'ಹರಿಜನ'ದಲ್ಲಿ ಗಾಂಧೀಜಿಯವರು ಜೀವನ ಶಿಕ್ಷಣದ ವ್ಯಾಖ್ಯೆಯನ್ನು ಹೀಗೆ ಮಾಡಿರುವರು. "ಮಗುವಿನಲ್ಲಿ ಮತ್ತು ಮನುಷ್ಯನಲ್ಲಿ ಇರುವ ಶಾರೀರಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಸಂಪತ್ತಿಯನ್ನು ಸಂಪೂರ್ಣವಾಗಿ ಹೊರಗೆ ತೆಗೆಯುವದೇ ಶಿಕ್ಷಣವು ಎಂದು ನಾನು ಹೇಳುತ್ತೇನೆ. ಸಾಕ್ಷರತೆಯು ಶಿಕ್ಷಣದ ಅಂತ್ಯವಲ್ಲ, ಪ್ರಾರಂಭವಂತು ಮೊದಲೇ ಅಲ್ಲ, ಗಂಡಸರೂ, ಹೆಂಗಸರೂ ಸುಶಿಕ್ಷಿತರಾಗುವ ಸಾಧನಗಳಲ್ಲಿ ಸಾಕ್ಷರತೆಯೂ ಒಂದಾಗಿದೆ. ಅಷ್ಟೇ ಹೊರತು ಸಾಕ್ಷರತೆಯೊಂದೇ ಶಿಕ್ಷಣವಲ್ಲ." ಶಿಕ್ಷಣದ ಈ ತತ್ವಕ್ಕೆ ಅನುಸರಿಸಿ ವಿದ್ಯಾರ್ಥಿಯ ವ್ಯಕ್ತಿತ್ವವೇ ಮುಖ್ಯವಾಗಿ ಮಹತ್ವದ್ದಾಗಿದೆ. ಸಾಧನ–ಸಾಮುಗ್ರಿಗಳು ಮತ್ತು ವಿಷಯಗಳು ಮಹತ್ವದವಲ್ಲ. ಸಾಕ್ಷರತೆಯು ಈ ಸಾಧನ–ಸಾಮುಗ್ರಿಗಳಲ್ಲಿ ಒಂದು. ನೆನಸಿಡತಕ್ಕ ಮತ್ತೊಂದು ಸಂಗತಿಯೆಂದರೆ ಸಾಮಾನ್ಯವಾಗಿ ರೂಢಿಯಲ್ಲಿ ಶಿಕ್ಷಣವಿಲ್ಲದೆಯೇ ವ್ಯಕ್ತಿತ್ವವು ಬೆಳೆಯುತ್ತದೆ. ವ್ಯಕ್ತಿತ್ವವು ವಾತಾವರಣ ಸನ್ನಿವೇಶಗಳಲ್ಲಿ ಸಿಗುವ ಅನುಭವಗಳಿಂದ ಬೆಳೆಯುತ್ತದೆ. ಮತ್ತು ಅದು ಹೀಗೆಯೇ ಆಗುತ್ತದೆ. ಕ್ರಮಬದ್ಧವಲ್ಲದ ಕೆಲವು ಶೈಕ್ಷಣಿಕ ಸಂಸ್ಥೆಗಳು ಇವೆ. ಇವು ಅವ್ಯಕ್ತವಾಗಿ ಕೆಲಸ ಮಾಡುವುದರಿಂದ ಇವು ಬಹು ಪರಿಣಾಮಕಾರಿಯಾಗಿರುವವು. ಉತ್ತಮವಾದ ಶಾಲೆಯಲ್ಲಿ ಇಂತಹ ಅನೇಕ ಪಠ್ಯೇತರ ಸಂಗತಿಗಳು ಶಿಕ್ಷಣದಲ್ಲಿ ಸೇರಿಸಲ್ಪಡುವಂತೆ ನೋಡಿಕೊಳ್ಳಬೇಕು. ಮಗುವಿನಲ್ಲಿರುವ ಸಾಮಾಜಿಕ ವ್ಯಕ್ತಿತ್ವವನ್ನು ಬೆಳಕಿಗೆ ತರುವಂತಹ ಸಾಮಾಜಿಕ ಸಂಗತಿಗಳು, ಮಗುವಿನ ವ್ಯಕ್ತಿತ್ವದ ಮೇಲೆ ಪ್ರತಿಕ್ರಿಯೆ ಮಾಡುವಂತಹ ಸಂಗತಿಗಳು ಶಿಕ್ಷಣದಲ್ಲಿ ಸೇರಿಸಲ್ಪಡಬೇಕು. "ಶಾಲೆಯು ಒಂದು ಚಿಕ್ಕ ಸಮಾಜ"ವಾಗುವಂತೆ ಮಾಡಬೇಕಾದರೆ ಪ್ರಗತಿಪರ ಮತ್ತು ಪ್ರಾಯೋಗಿಕ ಶಾಲೆಗಳಿಗೆ ಇಂತಹ ಸಂಗತಿಗಳು ಅನುಕೂಲವಾಗುತ್ತವೆ. ಶಾಲೆಯನ್ನು ಸಮಾಜವೆಂದು ತಿಳಿದುದರಿಂದ ಗಾಂಧೀಜಿಯವರು ಬೇರೆ ಶಿಕ್ಷಣ ತಜ್ಞರಿಗಿಂತ ಬಹಳ ಮುಂದುವರಿದಿದ್ದರು. ಶಾಲೆಯು ಸಮಾಜವೆಂದೇ ತಿಳಿದುದರಿಂದ ಶಾಲೆ ಮತ್ತು ಸಮಾಜಗಳ ನಡುವಿನ ಕೃತ್ರಿಮ ಮೇರೆಯನ್ನು ಒಂದೇ ಹೊಡೆತದಿಂದ ಮುರಿದರು. ಇದರಿಂದ ಮಗುವಿನ ವ್ಯಕ್ತಿ ವಿಕಾಸಕ್ಕೆ ಯೋಗ್ಯವಾಗುವ ಮತ್ತು ಪರಿಣಾಮಕಾರಿಯಾಗುವ ಶಿಕ್ಷಣವನ್ನು ಕಂಡುಹಿಡಿದರು. ಮತ್ತೊಂದು ಸಂಗತಿಯಲ್ಲಿಯೂ ಗಾಂಧೀಜಿಯವರು ಪ್ರಗತಿಪರವಾಗಿ ಇದ್ದರು. ಸಂಪೂರ್ಣ ಸುಸಂಬದ್ಧವಾದ ವ್ಯಕ್ತಿ ವಿಕಾಸಕ್ಕೆ ಅನುಕೂಲವಾಗುವಂತೆ ಮತ್ತು ಜೀವನದ ಬೇರೆ ಬೇರೆ ರಂಗಗಳಲ್ಲಿ ಸಹಜ ಸಮತೋಲವು ಉಳಿಯುವಂತೆ ಇದೇ ಚಟುವಟಿಕೆಯು ಶಕ್ಯವಿದ್ದಷ್ಟು ಬೆಳೆಯಬೇಕೆಂಬು ಹೇಳಿದರು. ಈ ಪದ್ಧತಿಯಲ್ಲಿ ವ್ಯಕ್ತಿಯಲ್ಲಡಗಿರುವ ಎಲ್ಲ ಶಕ್ತಿಗಳೂ ಪರಿಪೂರ್ಣವಾಗಿ ಬೆಳೆಯುವ ಅನುಕೂಲತೆ ಇವೆ. ಮತ್ತು ಸಮಾಜವು ತನ್ನಿಂದ ಏನನ್ನು ನಿರೀಕ್ಷಿಸುತ್ತದೆ ಮತ್ತು ಸಮಾಜವು ತನಗಾಗಿ ಏನು ಮಾಡಬಲ್ಲದು ಎಂಬುದರ ಅರಿವು ಮಗುವಿಗೆ ಚೆನ್ನಾಗಿ ಆಗುತ್ತದೆ.

ಜೀವನ ಶಿಕ್ಷಣದ ಮತ್ತೊಂದು ಮಹತ್ವದ ಕೆಲಸವೆಂದರೆ ಸಾಮಾಜಿಕ ಕ್ರಾಂತಿ. ಸಾದಾ ಶಾಲೆಗಳು ಮುಂದಾಳುತನ ಧೈರ್ಯ ಮತ್ತು ಸ್ವಾವಲಂಬನ ಇಲ್ಲದ ಕುಂಠಿತ ವ್ಯಕ್ತಿತ್ವವುಳ್ಳ ವಿದ್ಯಾರ್ಥಿಗಳನ್ನು ತಯಾರು ಮಾಡುತ್ತಿದ್ದವು. ಇಂತಹವರು ಸಮಾಜದಲ್ಲಿ ಏನೂ ಮಾಡಲಾರರು. ಇಷ್ಟೇ ಅಲ್ಲ. ಇಂತಹ ಶಿಕ್ಷಣಕ್ಕೆ ಅಂಟಿಕೊಂಡಿರುವ ಎಲ್ಲಾ ದುಷ್ಪರಿಣಾಮಗಳ ಮೂಲಕ ಅಜ್ಞಾನ, ಅಂಜಿಕೆ ಮತ್ತು ನಿರಕ್ಷರತೆಯು ದೇಶದ ತುಂಬೆಲ್ಲ ಹರಡಿತ್ತು. ಗಾಂಧೀಜಿಯವರು ಸಮಾಜವನ್ನು ಪರಿವರ್ತಿಸುವ ಸ್ವಪ್ನವನ್ನು ಕಂಡರು. ಮತ್ತು ಜೀವನ ಶಿಕ್ಷಣ ಶಾಲೆಯನ್ನು ಈ ಕಾರ್ಯದಲ್ಲಿ ಒಂದು ಸಜೀವ ಸಂಗತಿಯನ್ನಾಗಿ ಮಾಡಲು ಇಚ್ಛಿಸಿದರು. ಮಕ್ಕಳ ಮುಖಾಂತರ ದೊಡ್ಡವರ ಮನಸ್ಸಿನಲ್ಲಿ ಕಲ್ಪನೆಗಳೂ ವಿಚಾರಗಳೂ ಹೇಗೆ ಒಳ ಹೊಗಬಲ್ಲವು ಎಂಬ ಸಂಗತಿಯು

ಮೊದಲು ಕಠಿಣವೆನಿಸುತ್ತದೆ. ಆದರೆ ನಿಜವಾಗಿಯೂ ಹೀಗೆ ಆಗುತ್ತದೆ. ಆದುದರಿಂದ ಜೀವನ ಶಿಕ್ಷಣ ಶಾಲೆಯನ್ನು ಸಾಂಘಿಕ ಜೀವನದ, ಸಮಾಜ ಶಿಕ್ಷಣದ ಮತ್ತು ಸಮಾಜದ ಸುಧಾರಣೆ ಮತ್ತು ಪ್ರಗತಿಯ ಕೇಂದ್ರವಾಗಿ ಮಾಡುವ ಯೋಜನೆ ಮಾಡಲ್ಪಟ್ಟಿತು.

ಪಂಚವಾರ್ಷಿಕ ಯೋಜನೆಯ ಪರಿಶೀಲನೆಯಲ್ಲಿ ಕೇಂದ್ರ ಶಿಕ್ಷಣ ಮಂತ್ರಿ ಮಂಡಲವು ಇದೇ ಅಂಶವನ್ನು ಒತ್ತಿ ಹೇಳಿರುವದು. "ಸರಿಯಾದ ಪದ್ಧತಿಯಲ್ಲಿ ಜೀವನ ಶಿಕ್ಷಣವನ್ನು ಕಲಿಸುವುದನ್ನು ಸಾಗಿಸುವುದಲ್ಲದೆ ಶಾಲೆಯು ಸಮಾಜದ ಜೀವನದೊಂದಿಗೆ ನೇರವಾಗಿ ಹೊಂದಿಸಲ್ಪಡಬೇಕು. ಶಾಲೆಯು ಕೊಡತಕ್ಕ ಶಿಕ್ಷಣವು ನೈಜವಾದುದಿರಬೇಕು. ಸಮಾಜಕ್ಕೆ ಯಾವ ಸಂಬಂಧವೂ ಇಲ್ಲದೆ ಶಾಲೆಯು ಏಕಾಕಿಯಾಗಿ ಕೆಲಸ ಮಾಡುವುದನ್ನು ಜೀವನ ಶಿಕ್ಷಣವು ನಿಲ್ಲಿಸಿರುವುದು. ಮತ್ತು ಇದು ಜೀವನ ಶಿಕ್ಷಣವು ಶಿಕ್ಷಣಕ್ಕೆ ಕೊಟ್ಟಿರುವ ರಚನಾತ್ಮಕ, ಫಲಕಾರಿ ಮತ್ತು ಕ್ರಾಂತಿಕಾರಕ ಕಾಣಿಕೆಯಾಗಿದೆ. ಆದುದರಿಂದಲೇ ಜೀವನ ಶಿಕ್ಷಣ ಶಾಲೆಗಳು ತಮ್ಮ ಚಟುವಟಿಕೆಗಳನ್ನು ಸಾಂಘಿಕ ಜೀವನಕ್ಕೆ ಹೊಂದಿಸಿವೆ. ಮತ್ತು ಮಕ್ಕಳ ಪ್ರಜ್ಞಾಪೂರ್ವಕ ಸಂಬಂಧವು ಸ್ಥಳೀಯ ವಾತಾವರಣದೊಂದಿಗೆ ಬರುವುದಷ್ಟೇ ಅಲ್ಲದೆ ಅವರು ಆ ಸಮಾಜಕ್ಕೆ ಒಂದಿಲ್ಲೊಂದು ರೀತಿಯಲ್ಲಿ ಸೇವೆ ಸಲ್ಲಿಸುವ ಸುಸಂಧಿಯನ್ನು ಒದಗಿಸಿಕೊಡುತ್ತವೆ. ಇದರಿಂದ ಜೀವನ ಶಿಕ್ಷಣ ಮತ್ತು ಪ್ರೌಢರ ಶಿಕ್ಷಣದ ನಡುವೆ ಇದ್ದ ಅಂತರವನ್ನು ಕಡಿದಂತಾಗಿದೆ. ಮತ್ತು ಈ ಶಾಲೆಯು ಸಂಜೆಯಲ್ಲಿ ಸಮಾಜದ ಕೇಂದ್ರವಾಗಿದೆ.

ಜೀವನ ಶಿಕ್ಷಣ ಪರೀಕ್ಷಕರ ಸಮಿತಿಯು (The Basic Education Assessment Committee) ಸಹ ಶಾಲೆಯು ಕೆಳಗೆ ತೋರಿಸಿರುವ ಈ ಸಂಗತಿಗಳನ್ನು ಹೊಂದಿದ ಹೊರತು ಅದನ್ನು ಜೀವನ ಶಿಕ್ಷಣ ಶಾಲೆಯೆಂದು ಪರಿಗಣಿಸುವುದಿಲ್ಲವೆಂದು ಹೇಳುವಾಗ ಮೇಲೆ ಹೇಳಿದ ಸಂಗತಿಯನ್ನು ಒತ್ತಿ ಹೇಳಿದೆ. ಆ ಸಂಗತಿಗಳು ಯಾವುವೆಂದರೆ—

(ಅ) ಸಮಾಜಕ್ಕೆ ಹೊಂದಿಕೊಳ್ಳುವ ವ್ಯಾಪ್ತಿಯುಳ್ಳ ವಿಸ್ತರಣಾ ಕೆಲಸ (ಬ) ಪುಸ್ತಕ ಭಾಂಡಾರ ಮತ್ತು (ಕ) ಪ್ರೌಢರಿಗೆ ಸರಿಹೊಂದಿಸಿಕೊಳ್ಳತಕ್ಕ ಸಾಂಸ್ಕೃತಿಕ ಮತ್ತು ಮನರಂಜಕ ಚಟುವಟಿಕೆಗಳು.

"ಸರಕಾರವು ನಡೆಸುತ್ತಿರುವ ಸಮಾಜ ವಿಕಾಸ ಕೇಂದ್ರ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆ ಮತ್ತು ಇನ್ನಿತರ ಖಾಸಗೀ ಸಂಸ್ಥೆಗಳು ದೇಶದ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯ ಸುಧಾರಣೆಗಾಗಿ ಇಷ್ಟೊಂದು ದುಡಿಯುತ್ತಿರುವಾಗ ಜೀವನ ಶಿಕ್ಷಣ ಶಾಲೆಯು ಸಾಂಘಿಕ ಸೇವೆಯ ಮತ್ತು ಸಮಾಜ ಶಿಕ್ಷಣದ ಕೇಂದ್ರವಾಗುವುದರಲ್ಲಿ ಏನು ಲಾಭವಿದೆ?" ಎಂದು ಕೇಳಬಹುದು. ಮೊದಲನೆಯದಾಗಿ ಈ ಯೋಜನೆಗಳ ಕೆಲಸವು ಬಹಳ ದೊಡ್ಡದೂ, ವಿಸ್ತಾರವೂ ಇದ್ದರೂ ಸಹ ಅದು ಸಧ್ಯದಲ್ಲಿ ಎಲ್ಲಾ ಹಳ್ಳಿಗಳನ್ನು ಮುಟ್ಟುವುದು ಸಾಧ್ಯವಿಲ್ಲ. ಸಮಾಜ ವಿಕಾಸ ಯೋಜನೆ (Community Project)ಯಲ್ಲಿಯೂ ಪ್ರತಿಯೊಬ್ಬ ಗ್ರಾಮ ಸೇವಕನಿಗೆ ವಾರಕ್ಕೊಮ್ಮೆ ಹೋಗಿ ಬರಲು ಅನುಕೂಲವಾಗುವಷ್ಟೇ ಹಳ್ಳಿಗಳನ್ನು ತೆಗೆದುಕೊಳ್ಳಲಾಗಿದೆ. ಅವರಿಗೆ ಮಾಡಲು ಸಾಧ್ಯವಾಗುವ ಪರಮಾವಧಿ ಕೆಲಸವು ಇಷ್ಟೇ ಇರುತ್ತದೆ. ಆದರೆ ಶಾಲೆಗಳು ಯಾವಾಗಲೂ ಸಾಮಾಜಿಕ ಕೆಲಸ ಮಾಡುತ್ತಿದ್ದರೆ ಸಮಾಜ ಕಾರ್ಯಕರ್ತನು ಸಿಗುವುದು ಸಾಧ್ಯವಿಲ್ಲದಾಗಲೂ ಹಳ್ಳಿಗರು ಶಾಲೆಯಿಂದ ಉತ್ತಮವಾದ ಸಲಹೆ ಸೂಚನೆಗಳನ್ನು ಪಡೆಯಬಹುದು. ಇದರಿಂದ ಆ ಶಾಲೆಯಲ್ಲಿಯ ಕೈಕೆಲಸವು ಉತ್ತಮವಾಗುವುದು. ಯಾಕೆಂದರೆ ಶಾಲೆಗೆ ಉತ್ತಮ ಮತ್ತು ಹೊಸ ಹೊಸ ತಾಂತ್ರಿಕ ಸಲಹೆಗಳು ಸಿಗುತ್ತವೆ. ಇಂತಹ ಕೆಲಸವು ಪ್ರಾರಂಭವಾಗದೇ ಇರುವ ಕಡೆಗಳಲ್ಲಿ ಜೀವನ ಶಿಕ್ಷಣ ಶಾಲೆಗಳಿಗೆ ಹೆಚ್ಚಿನ ಸುಸಂಧಿ ಸಿಗುತ್ತದೆ.

ಎರಡನೆಯದಾಗಿ, ಇಂತಹ ಕೆಲಸದಿಂದ ಶಿಕ್ಷಕ ಮತ್ತು ವಿದ್ಯಾರ್ಥಿಗಳಿಬ್ಬರಿಗೂ ಶೈಕ್ಷಣಿಕ ಅನುಕೂಲತೆಯಾಗುತ್ತದೆ. ಶಾಲೆಯು ಸಂಘ (Community) ಮತ್ತು ಸುತ್ತುಮುತ್ತಲಿನ ಸಮಾಜ ಅವೇ ಸಮಸ್ಯೆಗಳನ್ನು ಬಿಡಿಸಲು ಪ್ರಯತ್ನಿಸುವವು. ಇದರಿಂದ ಶೀಘ್ರದಲ್ಲಿಯೇ ಪ್ರಗತಿಯಾಗುವುದಲ್ಲದೆ ಭಾವೀ ನಾಗರಿಕರು ತಮ್ಮೆದುರು ಉದ್ಭವಿಸುವ ಸಮಸ್ಯೆಗಳ ರೀತಿ ಮತ್ತು ವೈವಿಧ್ಯಗಳ ಮತ್ತು ಈ ಸಮಸ್ಯೆಗಳನ್ನು ಬಗೆಹರಿಸುವ ರೀತಿಯ ಬಗೆಗೆ ಎಚ್ಚರಿಸಲ್ಪಡುವರು. ಹೀಗೆ ಶಿಕ್ಷಣವು ನೈಜತೆಯುಳ್ಳದ್ದೂ ಸಹಜವೂ ಆಗುವುದು. ಇಂತಹ ಪದ್ಧತಿಯಲ್ಲಿ ನೆರೆಹೊರೆಯ ಸಮಾಜದಲ್ಲಿ ಬಳಕೆಯಲ್ಲಿ

ರುವ ಕೈಗಾರಿಕೆಯೇ ಶಾಲೆಯ ಕೈಕೆಲಸವಾಗುತ್ತದೆ. ಹೀಗೆ ಸ್ಥಳೀಯ ಕೈಗಾರಿಕೆಯ ಸಮಸ್ಯೆಯು ಶಾಸ್ತ್ರೀಯ ಪದ್ಧತಿಯಿಂದ ಅಭ್ಯಸಿಸಲ್ಪಡುವುದು ಮತ್ತು ಬಿಡಿಸಲ್ಪಡುವುದು. ಮತ್ತು ಶಾಲೆಯಲ್ಲಿ ಉತ್ಪಾದಿತವಾದ ವಸ್ತುಗಳು ಸುಲಭವಾಗಿ ಅದೇ ಸ್ಥಳದಲ್ಲಿ ಮಾರಲ್ಪಡುವವು. ಶಾಲೆಯು ತನ್ನ ಸಮಾಜದಲ್ಲಿರುವ ಜಾಣರ ಬುದ್ಧಿಕುಶಲತೆಯ ಉಪಯೋಗವನ್ನು ಮಾಡಿಕೊಳ್ಳಬಹುದು.

ಇಂತಹ ಪದ್ಧತಿಯಲ್ಲಿ ಸಮಾಜವು ಶಾಲೆಯು ತನ್ನದೆಂಬ ಭಾವನೆಯನ್ನು ತಳೆಯುವದು ಮತ್ತು ಅದಕ್ಕಾಗಿ ತ್ಯಾಗಮಾಡಲು ಸಿದ್ಧವಾಗುವುದು. ಶಾಲೆಯು ಸೇವೆಯು ಹೊಸ ದಿಲ್ಲಿಯಲ್ಲಿ ಅಥವಾ ಒಂದು ರಾಜ್ಯದ ಮುಖ್ಯ ಪಟ್ಟಣದಲ್ಲಿ ಇರುವ ದೂರದ ಸೇವೆಯೆಂದು ತಿಳಿಯಲ್ಪಡುವುದಿಲ್ಲ. ಆದರೆ ಸಮಾಜ ಸೇವೆಯೆಂದು ಪರಿಗಣಿಸಲ್ಪಡುವುದು. ಮತ್ತು ಇಂತಹ ಶಾಲೆಯನ್ನು ನಡೆಸುವುದು ಮತ್ತು ಅದು ಜಯಶೀಲವಾಗುವಂತೆ ಕೆಲಸ ಮಾಡುವುದು ಪ್ರತಿಯೊಬ್ಬನಿಗೆ ಸಂಬಂಧಿಸಿದ ವಿಷಯವಾಗಿದೆ. ಆದುದರಿಂದ ಸಾಧನ ಸಾಮಗ್ರಿ ಆಯುಧಗಳ, ಭೂಮಿಯು, ಕಟ್ಟಡಗಳ ಮತ್ತು ತರಬೇತಿ ಹೊಂದಿದ ಕೆಲಸಗಾರರ ಸೇವೆಯ ರೂಪದಲ್ಲಿ ಸ್ವಯಂ ಸ್ಫೂರ್ತಿಯಿಂದ ಬರುವ ಕಾಣಿಕೆಗಳು ಸಿಗುವವು.

ಸಮುದಾಯದ ಸೇವೆ ಮತ್ತು ಸಮಾಜ ಶಿಕ್ಷಣವು ಜೀವನ ಶಿಕ್ಷಣ ಶಾಲೆಯ ಒಂದು ಅಖಂಡ ಅಂಗವಾಗಿದೆ. ಭವಿಷ್ಯತ್ತಿನಲ್ಲಿ ಅಂತಹ ಕೆಲಸ ಮಾಡುವ ಸೇವಕರ ಪೂರೈಕೆಯು ಖಾತ್ರಿಯದಾಗುತ್ತದೆ. ಬೇರೆ ಶಾಲೆಯ ವಿದ್ಯಾರ್ಥಿಗಳಿಗೆ ತರಬೇತಿಯ ಅವಶ್ಯಕತೆಯು ಎಷ್ಟು ಇರುವುದೋ ಅಷ್ಟು ಈ ವಿದ್ಯಾರ್ಥಿಗಳಿಗೆ ಬೇಕಾಗುವುದಿಲ್ಲ. ಬೇರೆ ಮಾತಿನಲ್ಲಿ ಹೇಳುವುದೆಂದರೆ ಇದು ಭವಿಷ್ಯಕ್ಕಾಗಿ ತೊಡಗಿಸಿದ ಬಂಡವಾಳವಾಗಿರುತ್ತದೆ.

ಶಾಲೆಯ ಕಟ್ಟಡ, ಸಾಧನ ಸಾಮಗ್ರಿ, ವಾಚನಾಲಯ ಮುಂತಾದ ಶಾಲೆಯ ಸಾಮಾನುಗಳು ದಿನದಲ್ಲಿ ಆರು-ಏಳು ಗಂಟೆಗಳ ವರೆಗೆ ಮಾತ್ರ ಶಾಲೆಯಲ್ಲಿ ಬಳಸಲ್ಪಡುತ್ತವೆ. ಉಳಿದ ವೇಳೆಯಲ್ಲಿ ನಿರುಪಯೋಗವಾಗಿ ಬಿದ್ದಿರುತ್ತವೆ. ಶಾಲೆಯು ಸಮಾಜ ಶಿಕ್ಷಣದ ಮತ್ತು ಸಮುದಾಯ ಸೇವೆಯ ಕೇಂದ್ರವಾದಾಗ ಉಪಯೋಗವಿಲ್ಲದೆ ಬಿದ್ದಿರುವ ಈ ಸಾಮಾನುಗಳು ಉಪಯೋಗಿಸಲ್ಪಡುವವು. ಮೂಲೋದ್ಯೋಗ ಹೊಲಿಗೆ ಮತ್ತು ಕೈಕೆಲಸವು ಶಾಲೆಯಲ್ಲಿ ಅನುಸರಿಸಲ್ಪಡುತ್ತಿದ್ದರೆ ಅಲ್ಲಿನ ಸಾಮಾನುಗಳ ಸವಕಳಿ ಪೂರೈಕೆಗೆ ಬೇಕಾಗುವಷ್ಟು ಖರ್ಚನ್ನು ಆ ಸಮಾಜವು ಅಲ್ಲಿನ ಯಂತ್ರ ಸಾಮಗ್ರಿ ಮತ್ತು ಮಗ್ಗಗಳನ್ನು ಉಪಯೋಗಿಸಿಕೊಳ್ಳಬಹುದು. ಶಾಲೆಯಮಕ್ಕಳೂ ಸಹ ಶಾಲೆಯ ಅವಧಿ ಮುಗಿದ ನಂತರ ತಮಗೆ ಬೇಕೆನಿಸಿದಾಗ ಈ ಸಾಧನ ಸಾಮಗ್ರಿಗಳನ್ನು ಉಪಯೋಗಿಸಿಕೊಳ್ಳಬಹುದು.

ತಮ್ಮ ಬಿಡುವಿನ ವೇಳೆಯ ಸದುಪಯೋಗ ಮಾಡಿಕೊಳ್ಳುವ ಮತ್ತು ಹೊಸ ಕುಶಲತೆಗಳನ್ನು ಕಲಿಯುವ ಸುಸಂಧಿಯು ಸಮಾಜಕ್ಕೆ ಸಿಗುತ್ತದೆ. ಇದರಿಂದ ಶೈಕ್ಷಣಿಕ ಮತ್ತು ಆರ್ಥಿಕ ಲಾಭವಾಗುವುದಲ್ಲದೆ ಇಂತಹ ಅನುಕೂಲತೆ ಇದ್ದರೆ ಸಮಾಜದ ಜನರು ಕುಡಿತ, ಹರಟೆ ಮತ್ತು ಇವುಗಳಿಂದ ಉದ್ಭವಿಸುವ ಜಗಳಗಳಿಂದ ರಕ್ಷಿಸಲ್ಪಡುವರು.

ಈ ಪದ್ಧತಿಯ ಬಗೆಗೆ ಸಾರ್ವಜನಿಕರ ಅಭಿಪ್ರಾಯವು ಒಳ್ಳೆಯದಿರುವುದರಿಂದ ಆ ಸಮಾಜದಲ್ಲಿ ಇಂತಹ ಶಾಲೆಗಳು ಸುರಳಿತವಾಗಿ ಕೆಲಸ ಮಾಡಬಲ್ಲುವು.

ಇಂತಹ ಸಂಬಂಧದಿಂದ ಶಾಲೆಗೂ ಶಾಲೆಯ ಮಕ್ಕಳಿಗೂ ಲಾಭವಾಗುವುದು. ಪಾಲಕ ಶಿಕ್ಷಕರ ನಿಕಟ ಸಂಬಂಧ ಬರುವುದರಿಂದ ಕಡಿಮೆ ಹಾಜರಿಯ ಸಮಸ್ಯೆಯು ಸುಲಭವಾಗಿ ಬಗೆಹರಿಸಲ್ಪಡುವುದು. ಪಾಲಕರು ಶಾಲೆಯ ಕೆಲಸದ ಬಗೆಗೆ ಎಲ್ಲಾ ಸಂಗತಿಗಳನ್ನು ಚೆನ್ನಾಗಿ ತಿಳಿದುಕೊಳ್ಳುವುದರಿಂದ ಮಕ್ಕಳನ್ನು ಸರಿಯಾಗಿ ಶಾಲೆಗೆ ಕಳುಹಿಸುವುದರಲ್ಲಿ ಶಿಕ್ಷಕರೊಂದಿಗೆ ಸಹಕರಿಸುವರು. ಇಂತಹ ಪ್ರಸಂಗದಲ್ಲಿ ತನ್ನ ಮಗನನ್ನು ಶಾಲೆಗೆ ಕಳುಹಿಸದೇ ಇದ್ದ ಒಬ್ಬ ಪಾಲಕನ ನೆನಪು ಬರುತ್ತದೆ. ಕೇಳಿ ನೋಡಲು ಅವನು ಹಿಂದಿನ ಕಾಲದಲ್ಲಿ ಮಕ್ಕಳು ಎರಡು ವರ್ಷಗಳಲ್ಲಿ ಕಲಿಯುತ್ತಿದ್ದ ಸಂಗತಿಗಳನ್ನು ಕಲಿಯಲು ಈಗ ಮೂರು ನಾಲ್ಕು ವರ್ಷಗಳು ಬೇಕಾಗುತ್ತವೆ ಎಂದು ಹೇಳಿದನು. ಅವನು ಹೀಗೆ ಹೇಳಲು ಕಾರಣವೇನೆಂದರೆ ಅವನ ಮಗನಿಗೆ ಕಠಿಣವಾದ ಮಾನಸಿಕ ಲೆಕ್ಕಗಳನ್ನು ಆ ಎರಡು ವರ್ಷಗಳಲ್ಲಿ ಕಲಿಸಿರಲಿಲ್ಲ. ಅವನ ಮಗುವನ್ನು ಉತ್ತಮ ಕೆಲಸಗಾರನನ್ನಾಗಿ ಮತ್ತು ನಾಗರಿಕನನ್ನಾಗಿ ಮಾಡಲು ಶಾಲೆಯು ದುಡಿಯುತ್ತಿದೆ ಎಂಬುದನ್ನು ಅವನು ತಿಳಿದುಕೊಂಡಿದ್ದರೆ ತನ್ನ ಮಗನನ್ನು ಶಾಲೆಗೆ ಕಳುಹಿಸದೇ ಇರುತ್ತಿರಲಿಲ್ಲ.

ಕೈಕೆಲಸ ಮತ್ತು ಒಕ್ಕಲುತನದಲ್ಲಿ ಕಲಿಯತಕ್ಕ ಹೆಚ್ಚಿನ ಸಂಗತಿಗಳೇನೂ ಇಲ್ಲ ಎಂದು ಅನೇಕ ಪಾಲಕರ ಭಾವನೆಯಾಗಿದೆ.

ಅನಂತರ ಈ ಕ್ರಮದಲ್ಲಿ ಸೇರಿಸಲ್ಪಟ್ಟಿರುವ ತರಬೇತಿಯ ಸಂಗತಿ. ಸಮಾಜ ಸೇವೆಯಿಂದ ಸಮಾಜವೂ ತಾನೂ ಒಂದೇ ಎಂಬ ಭಾವನೆಯು ಹುಟ್ಟುವುದಲ್ಲದೆ ಶ್ರಮಗೌರವವು ಕಲಿಯಲ್ಪಡುವುದು ಮತ್ತು ಹಿಂದುಳಿದ ವರ್ಗಗಳ ಬಗೆಗೆ ಇರುವ ಕೀಳುಭಾವನೆಯು ದೂರವಾಗುತ್ತದೆ. ಸಾಂಘಿಕ ಜೀವನದ ಮೊದಲನೆಯ ಪಾಠವನ್ನು ಸಮಾಜ ಶಿಕ್ಷಣವು ಕಲಿಸುತ್ತದೆ. ಇಲ್ಲಿ ಎಲ್ಲ ಮಕ್ಕಳು ಸಮತಾಭಾವನೆಯಿಂದ ಭಾಗವಹಿಸುವರು. ಸಾಮಾಜಿಕ ಕಾರ್ಯ ನಿರ್ವಹಣೆಯ ಮುಖಾಂತರ ಮಕ್ಕಳಲ್ಲಿ ಸಾಮಾಜಿಕ ಬೆಳವಣಿಗೆ ಎಷ್ಟಾಗಿದೆಯೆಂಬುದನ್ನು ಚೆನ್ನಾಗಿ ಅಳೆಯಲು ಸಾಧ್ಯವಾಗುತ್ತದೆ. ಕೆಲಸದ ಬಗೆಗೆ ಪ್ರೇಮ ಮತ್ತು ನಿಃಸ್ವಾರ್ಥ ಕೆಲಸ ಇವು ಜೀವನದಲ್ಲಿ ಕಲಿಯಬೇಕಾದ ಬಹು ದೊಡ್ಡ ಪಾಠಗಳಾಗಿವೆ.

ಶಾಲೆಯಲ್ಲಿ ಇಂತಹ ಪರಿಸ್ಥಿತಿ ವಾತಾವರಣಗಳಲ್ಲಿ ಮನನ ಮಾಡಿಕೊಂಡ ಯೋಗ್ಯತೆಯನ್ನು ಮನೆಯಲ್ಲಿ ಕಳೆದುಕೊಳ್ಳಲಾಗದು. ಮನೆ ಮತ್ತು ಶಾಲೆಗಳು ಇಂತಹ ಯೋಗ್ಯತೆಯನ್ನು ಮಕ್ಕಳು ಹೆಚ್ಚಿಸಿಕೊಳ್ಳುವಂತೆ ಕೆಲಸ ಮಾಡಬೇಕು. ಎಲ್ಲಾ ಶಿಕ್ಷಣ ತಜ್ಞರು ವಿದ್ಯಾಭ್ಯಾಸದಲ್ಲಿ ಇಂತಹ ಪದ್ಧತಿಯ ಅತ್ಯಾವಶ್ಯಕತೆಯನ್ನು ಒಪ್ಪಿಕೊಂಡಿದ್ದಾರೆ.

ಕಡೆಯದಾಗಿ, ಮಕ್ಕಳು ಸಮಾಜದೊಂದಿಗೆ ಶಾಂತತೆಯಿಂದ ನಡೆದುಕೊಂಡು ಸುಸಂಬದ್ಧವಾದ ವ್ಯಕ್ತಿತ್ವವನ್ನು ಬೆಳೆಯಿಸಿಕೊಳ್ಳುವರು. ಮಕ್ಕಳಲ್ಲಿ ಬೇಕಾಗುವ ಮುಂದಾಳುತನ ಧೈರ್ಯ, ಮಹಾಪುರುಷರು ಸೌಂದರ್ಯ ಮತ್ತು ನ್ಯಾಯ ಇವುಗಳ ಪ್ರೇಮ ಮುಂತಾದ ಗುಣಗಳು ಬೆಳೆಯುತ್ತವೆ. ಆ ಮಕ್ಕಳು ಮತ್ತು ಆ ಸಮಾಜವು ಬಹಳ ದಿನ ಬಾಳುವವು. ಸಮಾಜ ಮತ್ತು ಮಕ್ಕಳು ಮುಂದೆ ತಮ್ಮ ಮನರಂಜನೆಯ ಮತ್ತು ಸಾಂಸ್ಕೃತಿಕ ಜೀವನವನ್ನು ಕೂಡಿಯೇ ಸಾಗಿಸುವರು. ಶಾಲೆಯ ಕಾರ್ಯಕ್ರಮವು ಭವ್ಯವಾಗುವದು ಮತ್ತು ಸಮಾಜಕ್ಕೆ ಆನಂದ ಕೊಡುವ ಕೆಲವು ಸಂಗತಿಗಳು ದೊರಕುವವು.

ಈ ಕಾರ್ಯವನ್ನು ಹೇಗೆ ಮಾಡಬೇಕು ?

ಎಚ್. ಎಲ್. ಹೋಮ್ಸ್ ಎಂಬವನು ಇಂಗ್ಲಂಡದಲ್ಲಿ ಒಬ್ಬ ಮುಖ್ಯಾಧ್ಯಾಪಕನು ಇಂತಹದೊಂದು ಪ್ರಯೋಗವನ್ನು ನಡೆಸಿ ತಾನು ಜಯ ಹೊಂದಿ ಈ ಸಂಗತಿಗಳನ್ನು ದೊರಕಿಸಿದ್ದನ್ನು "ಮೂರ್ಖ ಶಿಕ್ಷಕ"ದಲ್ಲಿ ಬರೆದಿರುವನು. ಶಾಲೆಯ ಬಗೆಗೆ ಸಮಾಜದ ಆಸ್ಥೆಯನ್ನು ಹುಟ್ಟಿಸಿ ಮೇಲಿಂದ ಮೇಲೆ ಜನರು ಶಾಲೆಗೆ ಸಂದರ್ಶನ ಕೊಡಲು ಉತ್ತೇಜನ ಕೊಟ್ಟು ಅವರು ಶಾಲೆಯಲ್ಲಿ ಸ್ವಲ್ಪ ಸಮಯ ಕಳೆಯುವ ವ್ಯವಸ್ಥೆಯನ್ನು ಮಾಡುವುದೇ ಅವನು ಅನುಸರಿಸಿದ ಪದ್ಧತಿಯು.

ಶಾಲೆಯಲ್ಲಿ ಸಮಾಜದ ಆಸ್ಥೆ ಹುಟ್ಟಿಸಲು ಜೀವನ ಶಿಕ್ಷಣ ಶಾಲೆಯು ಸಮಾಜದ ಕಡೆಗೆ ಹೋಗಬೇಕು. "ಸಫಾಯಿ"ಯ ಒಂದು ಮಹತ್ವದ ಸಂಗತಿಯಾಗಿದೆ. ಶಾಲೆಯು ತನ್ನ ನೆರೆಹೊರೆಯ ಹಳ್ಳಿಗಳಿಗೆ ಆಗಾಗ ಹೋಗಿ ಸ್ವಚ್ಛತೆಯು ಎಷ್ಟು ಕಡಿಮೆ ಕಿಮ್ಮತ್ತಿನಲ್ಲಿ ಆಗುತ್ತದೆ ಮತ್ತು ಎಷ್ಟು ಉಪಯುಕ್ತವಾಗಿದೆಯೆಂಬುದನ್ನು ತೋರಿಸಿಕೊಟ್ಟರೆ ಹಳ್ಳಿಗಳು ಹೆಚ್ಚು ಸ್ವಚ್ಛವಾಗುವವು. ಅಂತಹ ವಾತಾವರಣದಲ್ಲಿ ವ್ಯಕ್ತಿಗಳೂ ಹೆಚ್ಚು ಸ್ವಚ್ಛವಾಗಿರಲು ಪ್ರಯತ್ನಿಸುವರು. ಶಾಲೆಯು ಸಫಾಯಿ ಕಾರ್ಯಕ್ರಮದಲ್ಲಿ ತಮ್ಮ ಶಾಲೆಯಲ್ಲಿ ಕಡಿಮೆ ಖರ್ಚಿನಿಂದ ಮಾಡಿದ ಸಬಕಾರವನ್ನು ಒದಗಿಸಿ ಕೊಡಬೇಕು. ಮತ್ತು ಅದನ್ನು ತಯಾರು ಮಾಡುವ ಪದ್ಧತಿಯನ್ನು ತೋರಿಸಬೇಕು. ಶಾಲೆಯಲ್ಲಿ 'ಸುಂದರ ಮನೆ', 'ಸುಂದರ ಹಳ್ಳಿ' ಮೊದಲಾದವನ್ನು ಮಾಡಿ ಪ್ರದರ್ಶಿಸಿ ಮನೆಯನ್ನು ಮತ್ತು ಹಳ್ಳಿಯನ್ನು ಸ್ವಚ್ಛವಾಗಿಡಲು ಏನೂ ಖರ್ಚು ಹತ್ತುವುದಿಲ್ಲವೆಂಬುದನ್ನು ತಿಳಿಸಿಕೊಡಬಹುದು. ಶಿಕ್ಷಣದ ಕೇಂದ್ರ ಸಂಸ್ಥೆಯ ವಿಸ್ತರಣಾ ಸೇವಾ ಖಾತೆಯ (Extension Service Department of the Central Institute of Education) "ಸುಂದರ ಶಾಲೆ"ಯು ಇಂತಹ ಕಾರ್ಯಕ್ರಮವು ಎಷ್ಟು ಜಯಶಾಲಿಯಾಗುವುದೆಂಬುದನ್ನು ತೋರಿಸಿಕೊಟ್ಟಿದೆ.

ಶಾಲೆಯು ಹಳ್ಳಿಗರಿಗೆ ಮೂಲೋದ್ಯೋಗವನ್ನು ಕಲಿಸುವ ಸಮಾಜ ಶಿಕ್ಷಣದ ಒಂದು ಸಂಘ ಆಗಬೇಕು. ಮೊದಲೇ ಸೂಚಿಸಿರುವಂತೆ ಜನರಿಗೆ ಸಾಧನ ಸಾಮುಗ್ರಿ

ಗಳ ಉಪಯೋಗ ಮಾಡಿಕೊಳ್ಳಲು ಅನುಕೂಲ ಮಾಡಿ ಕೊಡಬೇಕು.

ಶಾಲೆಯು ಹಳ್ಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪ್ರಯೋಗ ಮಾಡುವ ಪ್ರಯೋಗ ಶಾಲೆಯಾಗಬೇಕು. ಅದರಲ್ಲಿಯೂ ಶಾಲೆಗೆ ಸಂಬಂಧಿಸಿದ ಮೂಲೋದ್ಯೋಗಕ್ಕೆ ಸಂಬಂಧಪಟ್ಟ ಪ್ರಯೋಗಗಳನ್ನು ಮಾಡಬೇಕು. ಹೀಗಾದರೆ ಶಾಲೆಯು ಹೊಸ ಗೊಬ್ಬರಗಳು, ಒಕ್ಕಲತನದ ಹೊಸ ಪದ್ಧತಿಗಳು, ತೋಟದ ಕೆಲಸ, ನೂಲುವುದು ನೇಯುವದು ಮುಂತಾದವುಗಳ ಪ್ರಯೋಗ ಮಾಡಿ ತೋರಿಸಬಹುದು.

ಶಾಲೆಯು 'ಗ್ರಾಮರಕ್ಷಕ ದಳ'ವನ್ನು ಸಂಘಟಿಸಬಹುದು. ಹಳ್ಳಿಗರಿಗಾಗಿ ತನ್ನ ಪುಸ್ತಕ ಭಾಂಡಾರವನ್ನು ಮತ್ತು ರೇಡಿಯೋವನ್ನು ಸಮಾಜಕ್ಕೆ ಕೊಡಬಹುದು. ಸಮಾಜದ ಸೇವೆಯಲ್ಲಿ ಒಂದು ಹಸ್ತಲಿಖಿತ ಪತ್ರಿಕೆಯನ್ನು ಹೊರಡಿಸಬಹುದು. ಅಥವಾ ಕರೆಹಲಗೆಯ ಮೇಲೆ ಸುದ್ದಿಯನ್ನು ಬಿತ್ತರಿಸಬಹುದು.

ದೈನಂದಿನ ಬೇಡಿಕೆಯಲ್ಲಿಯೂ ಸಹ ವಿಸ್ತರಣಾ ಕಾರ್ಯವು ಸಹಾಯ ಮಾಡಬಲ್ಲುದು. 'ಮಗನ್ ಚೂಲಾ' (ಒಲೆ) ಗೊಬ್ಬರದ ಕುಣಿ, ಪಾಯಿಖಾನೆಗಳು, ರಸ್ತೆಯ ರಿಪೇರಿ ಮೊದಲಾದುವುಗಳನ್ನು ಶಾಲೆಗಳು ಪ್ರಾರಂಭಿಸಬಹುದು. ಇಂತಹ ಪ್ರಯೋಗದಿಂದ ಹಳ್ಳಿಗರು ಇವುಗಳ ಉಪಯೋಗ ಮಾಡಲು ಅವರಿಗೆ ಸಹಾಯ ಮಾಡಿದಂತೆ ಆಗುತ್ತದೆ. "ಜೀವನ ಶಿಕ್ಷಣ ಶಾಲೆಯ ಶಿಕ್ಷಕರ ಕೈಪಿಡಿ"ಯು (The Hand book of Teachers of Basic Schools) ಹೇಳಿದಂತೆ "ಹಳ್ಳಿಯ ಪ್ರತಿಯೊಂದು ಮನೆಗೂ ಶಾಲೆಯ ಚಟುವಟಿಕೆಗಳು ಮುಟ್ಟದಿದ್ದರೆ ಅಂತಹ ಚಟುವಟಿಕೆಗಳು ನಿಜವಾಗಿ ಬೆಲೆಬಾಳುವಂತಹವಲ್ಲ. ಶಾಲೆಯ ಸಫಾಯಿ (ಸ್ವಚ್ಛತೆಯ) ಕಾರ್ಯಕ್ರಮ ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಮನರಂಜನೆಯ ಕಾರ್ಯಕ್ರಮ ಮತ್ತು ಮೂಲೋದ್ಯೋಗ ಚಟುವಟಿಕೆಗಳು ಮುಂತಾದವು ಹಳ್ಳಿಗರಿಗೆ ಸರಿಯಾಗಿ ತಿಳಿಸಲ್ಪಡಬೇಕು. ಶಾಲೆಯ ಸದಸ್ಯರು ಹಳ್ಳಿಗರ ನಡುವೆ ಸೇರಿಕೊಂಡು ಕೆಲಸಮಾಡಲು ಮೇಲಿಂದ ಮೇಲೆ ಹೋಗಬೇಕು. ಪ್ರದರ್ಶನಗಳನ್ನೂ ಪ್ರಚಾರ ಕಾರ್ಯವನ್ನೂ ಮಾಡುವ ಇತರ ಸಂಗತಿಗಳ ಏರ್ಪಾಡುಗಳನ್ನು ಮಾಡಬೇಕು. ಔಷಧಿಗಳನ್ನು ಹಂಚುವದು, ಸಾಂಸ್ಕೃತಿಕ ಚಟುವಟಿಕೆಗಳನ್ನು ಸಂಘಟಿಸುವದು ಮತ್ತು ಉಪಯುಕ್ತ ಮಾಹಿತಿಯನ್ನು ಕೊಡುವುದು ಶಾಲೆಯ ಮುಖಾಂತರ ಉತ್ತಮ ರೀತಿಯಿಂದ ಸಾಗಬಲ್ಲದು. ಉತ್ತಮ ಸಾಂಘಿಕ ಜೀವನವನ್ನು ಸಾಗಿಸಲು ಸಹಾಯವಾಗುವಂತೆ ಜೀವನ ಶಿಕ್ಷಣ ಶಾಲೆಯು ಸಮಾಜ ಶಿಕ್ಷಣದ ಮತ್ತು ಸಮಾಜ ಸೇವೆಯ ಚಟುವಟಿಕೆಯಿಂದ ದುಡಿಯುವ ಕೇಂದ್ರವಾಗಬಲ್ಲದು.

ಜೀವನ ಶಿಕ್ಷಣ ಶಾಲೆಯು ಪಟ್ಟಣಗಳಲ್ಲಿ ಸಮಾಜಕ್ಕೆ ಹೇಗೆ ಸಹಾಯ ಮಾಡಬಲ್ಲದು ? ನಗರ ಸಭೆಯು ಸ್ವಚ್ಛತೆಗಾಗಿ ಸಾಕಷ್ಟು ವ್ಯವಸ್ಥೆಯಿಟ್ಟಿರುವಾಗ ವ್ಯಾಪಕವಾದ ಸಫಾಯಿ ಕಾರ್ಯಕ್ರಮಕ್ಕೆ ಅನುವಿಲ್ಲ. ಆದರೆ ಶಾಲೆಯು ತನ್ನ ಸುತ್ತ ಮುತ್ತಲಿನ ಸ್ಥಳ, ಉದ್ಯಾನವನ ಮೊದಲಾದುವನ್ನು ಶುಚಿಯಾಗಿಡುವ ಕೆಲಸವನ್ನು ಕೈಕೊಳ್ಳಬಲ್ಲದು. ಸುಂದರ ಮನೆ, ಹೆಚ್ಚು ಮರಗಳನ್ನು ಬೆಳೆಯಿಸಿರಿ, ಸಾರ್ವಜನಿಕ ಸ್ವತ್ತಿಗೆ ಮರ್ಯಾದೆ ಕೊಡಿರಿ, ಸುತ್ತ ಮುತ್ತಲಿನ ಸಂಗತಿಗಳನ್ನು ನಾಶಪಡಿಸದಿರಿ ಮುಂತಾಗಿ ಪ್ರಚಾರ ಕಾರ್ಯವನ್ನು ಮಾಡಬಲ್ಲದು. ಆಗಾಗ್ಗೆ ಸುತ್ತಲಿನ ಪ್ರದೇಶದಲ್ಲಿ ಕ್ರಿಮಿನಾಶಕಗಳ ಉಪಯೋಗ ಮಾಡಬಹುದು; ಕ್ರಿಮಿನಾಶಕಗಳನ್ನು ಹಂಚುವ ಕೆಲಸ ಮಾಡಬಲ್ಲದು. ಸಂಜೆಯಲ್ಲಿ ಕಲಿಯುವುದಕ್ಕಾಗಿ ಬರುವ ಜನರನ್ನು ಆಕರ್ಷಿಸಬಲ್ಲದು; ಅಥವಾ ಶಾಲೆಯಲ್ಲಿ ವ್ಯವಸ್ಥೆಯಿರುವ ಮೂಲೋದ್ಯೋಗವನ್ನು ಕಲಿಸಬಲ್ಲದು. ಹೀಗೆ ನೂಲುವುದು, ಹೊಲಿಗೆ, ಸಿಂಪಿಗರ ಕೆಲಸ ಮತ್ತು ಕೈತೋಟ ಮಾಡುವುದನ್ನು ಸುಲಭವಾಗಿ ಕಲಿಸಬಹುದು. ಮತ್ತು ಅವುಗಳ ಮಹತ್ವವನ್ನೂ ಉಪಯೋಗವನ್ನೂ ತಿಳಿಸಬಹುದು. ಹೀಗೆ ಶಾಲೆಯು ಸಾಂಸ್ಕೃತಿಕ ಮತ್ತು ಮನರಂಜನೆಯ ಕಾರ್ಯಕ್ರಮಗಳ ಕೇಂದ್ರವಾಗಬಲ್ಲದು. ರಾಜ್ಯದ ಮತ್ತು ನಗರ ಸಭೆಯ ಪ್ರಚಾರ ಕಾರ್ಯದ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳ ಕೇಂದ್ರವೂ ಆಗಬಲ್ಲದು. ಶಾಲೆಯು ಪುಸ್ತಕ ಭಾಂಡಾರದ ಮತ್ತು ಓದುವ ಸಾಮಗ್ರಿಯನ್ನೊದಗಿಸುವ ಸೇವೆ ಸಲ್ಲಿಸಬಲ್ಲದು. ಈ ರೀತಿ ಉತ್ತಮವಾಗಿ ಬಾಳಲು ಶಾಲೆಯು ನಿಜವಾಗಿಯೂ ಸಹಾಯ ಮಾಡಬಲ್ಲದು.

ಹತ್ತಿಯ ಕೆಲಸದ ಮೂಲಕ ಸಮನ್ವಯ ಪಾಠದ ಟಿಪ್ಪಣೆ

ಶ್ರೀ ಎಸ್. ರಾಮಚಂದ್ರ ಚಾರಿ, ಅಸಿಸ್ಟಂಟ ಲೀಡರ ಜನತಾ ಕಾಲೇಜ, ಕೊಡಿಗೆ. [ನವೀನ ಶಿಕ್ಷಕ ಕೃಪೆಯಿಂದ]

೧. ತಾರೀಖು ....
೨. ಉಪಾಧ್ಯಾಯನ ಹೆಸರು ....
೩. ಬೋಧಿಸಿದ ತರಗತಿ .... ೬ನೇ ತರಗತಿ
೪. ಆರಿಸಿದ ಚಟುವಟಿಕೆ .... ಹಂಜಿ ತಯಾರಿಸುವದು.
೫. ಸಮನ್ವಯ ಮಾಡಿದ ಪಾಠಭಾಗ .... ವಿವಿಧ ಜಾತಿಯ ಹತ್ತಿ.
೬. ಸಮಯ .... ೧ ಗಂಟೆ ೪೦ ನಿಮಿಷ.
೭. ಉದ್ದಿಷ್ಟ .... ಅರಳೆಯನ್ನು ಹಿಂಜಿ ಹಂಜಿ ತಯಾರಿಸುವ ಶಾಸ್ತ್ರೀಯ ಕ್ರಮವನ್ನು ಅಭ್ಯಾಸ ಮಾಡಿಸಿ, ತನ್ಮೂಲಕ ಹತ್ತಿಯ ವಿಧಗಳು ಮತ್ತು ವ್ಯತ್ಯಾಸ—ಇವುಗಳನ್ನು ತಿಳಿಸುವುದು.
೮. ಉಪಯೋಗಿಸಿದ ಸಲಕರಣೆಗಳು ... ಧುನ್ಕಿ, ಗೊಟಿಲಾ, ಬೇವು (Guts), ಬಿದಿರು ಬಲೆ, ಕಾಗದ, ಹಂಜಿಮಣೆ, ಒತ್ತುಮಣೆ, ಹಂಜಿಕೋಲು.

ಕ್ರ ಸಂ	ಪಾಠದ ಹೆಜ್ಜೆಗಳು	ಆವಶ್ಯಕ ಜ್ಞಾನ	ಬೋಧನಾ ವಿಧಾನ	ಕರಿ ಹಲಗೆಯ ಕೆಲಸ
೧	೨	೩	೪	೫
೧	ಕಾರ್ಯ ಪ್ರೇರಣೆ	ಹಿಂದಿನ ಚಟುವಟಿಕೆಯನ್ನೂ [ವಟಾಯಿ ಮಾಡಿದ್ದು], ಅನುಬಂಧಿತ ಕಲಿತ ವಿಷಯವನ್ನೂ ಮಕ್ಕಳ ನೆನಪಿಗೆ ತಂದು, ಮುಂಬರಿವುದು. ಹಂಜಿ ತಯಾರಿಸುವ ವಿಧಾನವನ್ನು ಮಕ್ಕಳು ಇದೀಗ ಮೊಟ್ಟಮೊದಲನೆಯದಾಗಿ ಕಲಿಯುತ್ತಿರುವವರಾದ ಕಾರಣ ಉಪಾಧ್ಯಾಯನು ಈ ಬಗ್ಗೆ ಸಂಕ್ಷಿಪ್ತ ವಿವರವನ್ನು ಕೊಡುವುದು.	೧. ವಟಾಯಿ ಮಾಡುವುದು ಎಂದರೇನು? —[ಹತ್ತಿಯಿಂದ ಬೀಜವನ್ನು ಪ್ರತ್ಯೇಕಿಸುವುದು] ೨. ಬೀಜವನ್ನು ತೆಗೆದ ಹತ್ತಿಗೆ ಏನೆಂದು ಹೆಸರು? —[ಅರಳೆ] ೩. ವಟಾಯಿ ಮಾಡಲು ಉಪಯೋಗಿಸಿದ ಸಲಕರಣೆಗಳಾವುವು? —[ವಟಾಯಿ ಮಣೆ, ವಟಾಯಿ ಕೋಲು, ಕಾಗದ, ಹತ್ತಿ] ೪. ವಟಾಯಿ ಮಾಡಿದ ಬಳಿಕ ಅರಳೆಯು ಹೇಗಿರುತ್ತದೆ? —[ಮುದ್ದೆ ಮುದ್ದೆಯಾಗಿರುತ್ತದೆ] ೫. ಇದರಿಂದ ಹಂಜಿ ತಯಾರಿಸುವುದು ಹೇಗೆ? —[ಅದನ್ನು ಸಡಿಲಿಸಿಕೊಳ್ಳಬೇಕು]	

			೬. ಅದನ್ನು ಸಸಿದು ಹಂಜಿ ತಯಾರಿಸುವುದು ಹೇಗೆ? —[ನಮಗದು ಗೊತ್ತಿಲ್ಲ] [ಹಾಗಾದರೆ ನಾವು ಈಗ ಅರಳೆಯನ್ನು ಸಸಿದು ಹಂಜಿ ತಯಾರಿಸುವ ಕ್ರಮವನ್ನು ಕಲಿಯುವ]	
೨	ಪೂರ್ವ ಸಿದ್ಧತೆ	ಆವಶ್ಯಕ ಸಾಧನಗಳು :— [೧] ಬೇವನ್ನು ಬಿಗಿದು ತಯಾರುಗೊಳಿಸಿದ ಧುನ್ಕಿ [೨] ಗೊಟಲಾ [೩] ಬಿದಿರ ಬಲೆ [೪] ಕಾಗದ [೫] ಹಂಜಿಮಣೆ [೬] ಒತ್ತುಮಣೆ [೭] ಹಂಜಿಕೋಲು [ಹಂಜಿಕೋಲು ೧೦" ಉದ್ದವಾಗಿದ್ದು ಇಳಿಜಾರಾಗಿರಬೇಕು. ಮತ್ತು ಬಹಳ ನುಣುಪಾಗಿರಬೇಕು]	ಪ್ರತಿ ಸಾಧನದ ಉಪಯೋಗ :— ೧. ಧುನ್ಕಿ.—ಇದು ಅರಳೆಯನ್ನು ಹಿಂಜುವ ಸಾಧನ. ಇದರ ಹಿಡಿಕೆಯನ್ನು ಎಡಗೈಯಿಂದ ಹಿಡಿದುಕೊಂಡು ಬಲಗೈಯಲ್ಲಿ ಹಿಡಿದ ಗೊಟಲಾದ ಸಹಾಯದಿಂದ ಧುನ್ಕಿಯ ಹಲಗೆಯ ಹತ್ತಿರದ ಬೇವನ್ನು ಸಾಧಾರಣ ಬಿರುಸಿನಿಂದ ಮೀಟಬೇಕು. ೨. ಗೊಟಲಾ.—ಬೇವನ್ನು (Guts) ಮೀಟಿ ಅದರಲ್ಲಿ ಕಂಪನ (Vibration) ವನ್ನುಂಟುಮಾಡಲು. ೩. ಬಿದಿರ ಬಲೆ.—ಬಿದಿರ ಬಾಸಿನಿಂದ ತಯಾರಿಸಿದ ೨' ಉದ್ದ ೧½' ಅಗಲದ ಬಲೆ ಇದು. ಅರಳೆಯು ಹಿಂಜಲ್ಪಡುವಾಗ ಉದುರಿದ ಕಸ, ಧೂಳು ಪುನಃ ಅದಕ್ಕೆ ಅಂಟಿಕೊಳ್ಳದಂತೆ ಇದು ತಡೆಯುತ್ತದೆ. ೪. ಕಾಗದ.—ಹಿಂಜಿದ ಅರಳೆಯನ್ನಿಡಲು ಮತ್ತು ತಯಾರಿಸಿದ ಹಂಜಿಯನ್ನು ಗಾಳಿ ಸೋಂಕದಂತೆ ಕಟ್ಟಿಡಲು. ೫. ಹಂಜಿ ಮಣೆ.—ಹಿಂಜಿದ ಅರಳೆ (ತಿಳಿ) ಯನ್ನು ಒಂದೊಂದು ಅಣೆ ತೂಕದಷ್ಟನ್ನೇ ಇದರ ಮೇಲೆ ಸಮಾನಾಂತರವಾಗಿ (೬"ನಷ್ಟು) ಅಗಲವಾಗಿ ಹರಡಿಡಲು. (ಇದರ ಇಳಿಜಾರು ನಮ್ಮ ಕಡೆಗಿರುವಂತೆ ನಮ್ಮೆದುರಿಗಿಟ್ಟುಕೊಳ್ಳಬೇಕು). ೬. ಒತ್ತುಮಣೆ ಮತ್ತು ಹಂಜಿಕೋಲು.—ಹಂಜಿಮಣೆಯಮೇಲೆ ಹಾಗೆ ಹರಡಿದ ಅರಳೆಯ ಮೇಲೆ ಹಂಜಿಕೋಲನ್ನಿಟ್ಟು, ಅದನ್ನು ಒತ್ತುಮಣೆಯಿಂದ ಮೇಲಿಂದ ಕೆಳಗೆ ೫-೬ ಬಾರಿ ಒತ್ತಿ, ಉರುಳಿಸಿ, ತಿಕ್ಕುವುದರಿಂದ ಹಂಜಿಯು ತಯಾರಾಗುವುದು.	

೦	ಪಾಠದ ಹೆಜ್ಜೆಗಳು	ಅವಶ್ಯಕ ಜ್ಞಾನ	ಬೋಧನಾ ವಿಧಾನ	ಕರಿ ಹಲಗೆಯ ಕೆಲಸ
೧	೨	೩	೪	೫
			ನೂರು ಅಡಿಗೆ ಒಬ್ಬೊಬ್ಬರಂತೆ ವಿದ್ಯಾರ್ಥಿಗಳನ್ನು ಸಾಲಾಗಿ ಕುಳ್ಳಿರಿಸುವುದು. ಹಿಂಜುವ ಸಾಧನಗಳು ವಿದ್ಯಾರ್ಥಿಯ ಬಲ ಭಾಗದಲ್ಲಿ ವ್ಯವಸ್ಥಿತವಾಗಿರುವಂತೆ ಮಾಡುವುದು. ಪ್ರತಿಯೊಬ್ಬನಿಗೂ ಒಂದು ತೊಲೆಯಷ್ಟು (ಮೊದಲ ಸಲವಾದ್ದರಿಂದ) ಅರಳೆಯನ್ನು ಕೊಟ್ಟು ಹಿಂಜಲು ಅಣಿಗೊಳಿಸುವುದು.	
೨	ಕಾರ್ಯಾರಂಭ	[ಅ] ಅಧ್ಯಾಪಕನ ಕೆಲಸ. [ಆ] ಮಕ್ಕಳ ಕೆಲಸ. **ಕೆಲಸ ಮಾಡುವಾಗ ವಹಿಸಬೇಕಾದ ಎಚ್ಚರಿಕೆ:**—[ಅ] ಎಡಗೈ ಬಲಗೈಗಳ ಚಲನೆಯ ಕಡೆಗೆ ಲಕ್ಷ್ಯಪೂರ್ವಕ. [ಆ] ಸಾಧ್ಯವಾಗುವಷ್ಟೇ ಅರಳೆಯನ್ನು (ಎಂಟಾಣೆ ತೂಕದಷ್ಟು) ಒಮ್ಮೆಗೆ ಹಿಂಜಲು ತೆಗೆದುಕೊಳ್ಳುವುದು. [ಇ] ಗೊಟಲಾದಿಂದ ಬೇಕಾದ್ದಕ್ಕಿಂತ ಕಡಿಮೆ ರಭಸದಲ್ಲಿ ಜೇವನ್ನು ಮಿಟಿದಾಗ ಅರಳೆಯು ಜೇವಿಗೇ ಸುತ್ತಿಕೊಳ್ಳುವ ಸಂಭವವಿದೆ. [ಈ] ಅರಳೆಯು ಅತಿಯಾಗಿ ಹಿಂಜಲ್ಪಟ್ಟು ತಂತುಗಳು ತುಂಡಾಗದಂತೆ ನೋಡಿಕೊಳ್ಳುವುದು.	ಧ್ವನಿಯನ್ನು ಹಿಡಿಯುವ ಕ್ರಮ, ಗೊಟಲಾದಿಂದ ಜೇವನ್ನು ಮಿಟಿ ಅರಳೆಯನ್ನು ಹಿಂಜುವ ಸರಿಯಾದ ಕ್ರಮವನ್ನು ಪ್ರತ್ಯಕ್ಷ ತೋರಿಸುವುದು ಮತ್ತು ಹಂಜಿ ಮಾಡುವ ವಿಧಾನವನ್ನೂ ತಿಳಿಸಿ, ಮಕ್ಕಳು ಅದನ್ನು ಅನುಸರಿಸುವಂತೆ ಮಾಡುವುದು. ಅಧ್ಯಾಪಕನು ತೋರಿಸಿದ ಕ್ರಮವನ್ನನುಸರಿಸಿ ಜಾಗ್ರತೆಯಾಗಿ ಹಿಂಜುವುದು. ಜೇವಿನಲ್ಲುಂಟಾಗುವ ಕಂಪನದಿಂದ ಅರಳೆಯು ಹಿಂಜಲ್ಪಡುವ ಕ್ರಮವನ್ನು ಗಮನಿಸುವುದು. ಹಿಂಜಿದ ಬಳಿಕ ಅರಳೆಯನ್ನು ಮುದ್ದೆಯಾಗದಂತೆ ಎಡಭಾಗದಲ್ಲಿಟ್ಟುಕೊಂಡು ಒಂದೊಂದಾಣೆಯಷ್ಟೇ ತೂಕದ ಅರಳೆಯನ್ನು ಹಂಜಿಯ ಮಣೆಯ ಮೇಲಿಟ್ಟುಕೊಂಡು ಒತ್ತುಮಣೆ, ಹಂಜಿ ಕೋಲಿನ ಸಹಾಯದಿಂದ ಹಂಜಿ ತಯಾರಿಸುವುದು. ಕೆಲಸ ಮುಗಿದ ಬಳಿಕ ತನ್ನ ಸಲಕರಣೆಗಳನ್ನು ಯಥಾ ಸ್ಥಾನದಲ್ಲಿ ವ್ಯವಸ್ಥಿತವಾಗಿಟ್ಟು, ಕೆಲಸ ಮಾಡಿದ ಸ್ಥಳವನ್ನು ಗುಡಿಸಿ ಶುಚಿಗೊಳಿಸುವುದು.	
೩	ಕೆಲಸದ ಪರಿಶೀಲನೆ	ಸಾಮೂಹಿಕ ವಿವೇಚನೆ	ಪ್ರತಿಯೊಬ್ಬ ವಿದ್ಯಾರ್ಥಿಯು ಹಂಜಿಯನ್ನು ಪರಿಶೀಲಿಸಿ ಅದರ ಉದ್ದ, ಸಮಗಾತ್ರ, ರಚನಾಕೌಶಲ್ಯದ ಕುರಿತು ವಿಮರ್ಶಿಸುವುದು. ಹಂಜಿ ಸರಿಯಾಗದಿದ್ದಲ್ಲಿ ಕಾರಣವನ್ನು ಮಕ್ಕಳಿಗೆ ತಿಳಿಸುವುದು.	

			ಅರಳೆಯು ಸರಿಯಾಗಿ ಹಿಂಜಲ್ಪಡದಿದ್ದರೆ, ಹಂಜಿಮಣೆಯ ಮೇಲೆ ತಿಳಿಯನ್ನು (ಹಿಂಜಿದ ಅರಳೆ) ಸಮವಾಗಿ ಹರಡಿಕೊಳ್ಳದಿದ್ದರೆ ಸ್ವಾಭಾವಿಕವಾಗಿ ಹಂಜಿಯು ಅಸಮಗಾತ್ರವಾಗುತ್ತದೆ.	
೫	**ಸಮನ್ವಯ ಜ್ಞಾನ:** ಹತ್ತಿಯ ವಿಧಗಳು ಮತ್ತು ಭೇದಗಳು. [ಕ] ಪೀಠಿಕೆ	ಮಾಡಿದ ಚಟುವಟಿಕೆಯ ಆಧಾರದ ಮೇಲೆ ಪ್ರಶ್ನೋತ್ತರಗಳನ್ನು ನಡೆಸುತ್ತಾ ಸಂಬಂಧಿತ ಜ್ಞಾನವನ್ನು ಕೊಡುವುದು.	೧. ಧುನ್ನಿಯಿಂದ ಹಿಂಜುವ ಕ್ರಮಕ್ಕೆ ಏನೆಂದು ಹೆಸರು? ೨. ಹಂಜಿ ತಯಾರಿಸುವುದು ಹೇಗೆ? ೩. ಅರಳೆಯನ್ನು ಹಿಂಜಲು ಬೇಕಾಗುವ ಸಲಕರಣೆಗಳಾವುವು? ೪. ಹಂಜಿಯ ಉದ್ದವೆಷ್ಟಿರಬೇಕು.? (೬") ೫. ಹಂಜಿಯಲ್ಲಿ ಓರಣವಾಗಿ ಸುತ್ತಿಕೊಂಡಿರುವ ತಂತುಗಳನ್ನು ಮಕ್ಕಳು ಗಮನಿಸುವಂತೆ ಮಾಡುವುದು. ೬. ಹತ್ತಿ, ಅರಳೆ, ತಿಳಿ—ಇವುಗಳಲ್ಲಿ ತಂತುಗಳು ಇರುವ ಕ್ರಮದ ಕಡೆಗೆ ಅವರ ಗಮನ ಸೆಳೆಯುವುದು. ೭. ಅವರು ಉಪಯೋಗಿಸಿದ ಅರಳೆಯ ತಂತುವಿನ ಸರಾಸರಿ ಉದ್ದವನ್ನು ಮಕ್ಕಳಿಂದಲೇ ಕಂಡು ಹುಡುಕಿಸಿ ಆ ಜಾತಿಯ ಹತ್ತಿಯನ್ನು ಗುರ್ತಿಸುವಂತೆ ಮಾಡುವುದು.	
	[ಖ] ಬೆಳವಣಿಗೆ	ವಿವಿಧ ಜಾತಿಯ ಹತ್ತಿಯನ್ನು ಮಕ್ಕಳ ಪರಿಶೀಲನೆಗೆ ಕೊಟ್ಟು, ಅವುಗಳ ತಂತುವಿನ ಉದ್ದ, ಮೃದುತ್ವ ಮತ್ತು ಬೀಜದ ವಿಧ—ಇವುಗಳನ್ನು ನಿರೀಕ್ಷಿಸುವಂತೆ ಮಾಡುವುದು. ವಿವಿಧ ಹತ್ತಿಗಳು:— [೧] ಬೂರುಗ [ಇದರಿಂದ ನೂಲಲು ಸಾಧ್ಯವಿಲ್ಲ] [೨] ಜಯವಂತಿ [೩] ಜವಾರಿ [೪] ಸೂರತ್	ಈಗ ನಾವು ವಿವಿಧ ಜಾತಿಯ ಹತ್ತಿಯ ಪರಿಚಯ ಮಾಡಿಕೊಳ್ಳುವ. [೧] ಸಂಗ್ರಹಿಸಿದ ಬೇರೆ ಬೇರೆ ಜಾತಿಯ ಹತ್ತಿಯನ್ನು ಮಕ್ಕಳ ಕೈಗೆ ಕೊಟ್ಟು, ತಂತುಗಳ ಉದ್ದಳತೆಗಳನ್ನು ಹುಡುಕಿಸಿ, ತಖ್ತೆಯಲ್ಲಿರುವ ಉದ್ದಳತೆಗೆ ಹೋಲಿಸಿ ನೋಡುವಂತೆ ಮಾಡುವುದು. [೨] ಅವುಗಳ ಮೃದುತ್ವದ ವ್ಯತ್ಯಾಸವನ್ನು ಗಮನಿಸುವಂತೆ ಮಾಡುವುದು. [೩] ಆಸ್ಪತ್ರೆಯಲ್ಲಿ ಉಪಯೋಗಿಸುವ ಹತ್ತಿಯನ್ನೂ [ಜಡೆಹತ್ತಿ], ಬೂರುಗದ ಹತ್ತಿಯನ್ನೂ ನಿರೀಕ್ಷಿಸಿ ವ್ಯತ್ಯಾಸವನ್ನು ತಿಳಿಸಲು ಹೇಳುವುದು.	ಹತ್ತಿ ಬೆಳೆಯುವ ಪ್ರಾದೇಶಿಕ ವಿಭಾಗಗಳು:— [೧] ಬ್ರೋಚ್, [೨] ಓಮ್ರಾ, [೩] ಬಂಗಾಳ, [೪] ದಕ್ಷಿಣದೇಶ.

ಸಂ.	ಪಾಠದ ಹೆಜ್ಜೆಗಳು	ಅವಶ್ಯಕ ಜ್ಞಾನ	ಬೋಧನಾ ವಿಧಾನ	ಕರಿ ಹಲಗೆಯ ಕೆಲಸ
೧	೨	೩	೪	೫
		[ಆ] ಕುಮುಟಾ [ಇ] ಆಂಧ್ರ [ಪಟ್ಟಸಾಲಿ] [ಈ] ಸಂದ್ಯಾಳ [ನಂ. ೧೪] [ಈ ಜಾತಿಯ ಹತ್ತಿಯನ್ನು ಸಂಗ್ರಹಿಸಿ ಅವುಗಳ ತಂತುಗಳನ್ನು ಓರಣವಾಗಿ ಜೋಡಿಸಿ ಕಪ್ಪು ಬಣ್ಣದ ಕಾಗದದ ಮೇಲೆ ಸಾಲಾಗಿರಿಸಿ ಜಾತಿಗಳ ಹೆಸರನ್ನು ಬರೆದ 'ಚಾರ್ಟು' ಮತ್ತು ವಿವಿಧ ಜಾತಿಯ ಹತ್ತಿಯ ಹೆಸರು ಮತ್ತು ಅವುಗಳ ತಂತುವಿನ ಉದ್ದಳತೆಯನ್ನು ತಿಳಿಸುವ ತಖ್ತೆಯನ್ನು ಉಪಯೋಗಿಸಿಕೊಳ್ಳಬೇಕು]	ಈ ಮಧ್ಯೆ ಮಕ್ಕಳಿಗೆ ಬರುವ ಸ್ವಾಭಾವಿಕ ಸಂಶಯಗಳನ್ನು ನಿವಾರಿಸುತ್ತಾ ಅಧ್ಯಾಪಕನು ಹತ್ತಿಯ ಬಗ್ಗೆ ಅವರ ತಿಳಿವನ್ನು ಹೆಚ್ಚಿಸುವುದು	ದಕ್ಷಿಣ ದೇಶದಲ್ಲಿ ಬೆಳೆಯುವ ಕೆಲವು ವಿವಿಧ ಜಾತಿಯ ಹತ್ತಿಯ ಹೆಸರು — ತಂತುವಿನ ಉದ್ದಳತೆ ಜಯವಂತಿ — ೧″ ಜವಾರಿ — ೩/೪″ ಸೂರತ್ — ೧″ ಕುಮಟಾ — ೧″ ಆಂಧ್ರ [ಪಟ್ಟಿ ಸಾಲಿ] — ೧″ ನಂದ್ಯಾಳ [ನಂ. ೧೪] — ೧″ ಹಿರಮಣಿ — ೧″ ಭಡೋಚ — ೩/೪″ ಡೋಱಿಯಾ — ೧ ೧/೮″ ವ್ಹೆರಮ್ — ೩/೪″ ಕಾಂಬೋಡಿಯಾ — ೧″ ಗದಗ — ೩/೪″ ಗುಡದಾರಿ — ೩/೪″ ಕೋಕಟಿ — ೩/೪″ ಕರಂಗಣಿ — ೩/೪″

[ಗ] ಪುನರಾವರ್ತನೆ.		೧. ಹತ್ತಿ ಬೆಳೆಯುವ ನಾಲ್ಕು ಪ್ರಾದೇಶಿಕ ವಿಭಾಗಗಳ್ಯಾವುವು ? ೨. ದಕ್ಷಿಣ ದೇಶದಲ್ಲಿ ಬೆಳೆಯುವ ಐದು ಹತ್ತಿಯ ಜಾತಿಗಳನ್ನು ಹೇಳು. ೩. ಅತೀ ಗಿಡ್ಡೆಳೆಯ ಮತ್ತು ಅತೀ ಉದ್ದೆಳೆಯ ಹತ್ತಿ ಯಾವುದು ?	
[ಘ] ಮನೆಗೆಲಸ		ಮಕ್ಕಳು ತಮ್ಮ ಊರುಗಳಲ್ಲಿ ಮತ್ತು ನೆರೆ ಊರುಗಳಲ್ಲಿ ಬೆಳೆಯುವ ವಿವಿಧ ಜಾತಿಯ ಹತ್ತಿಯನ್ನೂ, ಅಯಾ ಗಿಡಗಳ ಎಲೆಗಳನ್ನೂ [ಒಣಗಿಸಿ] ಸಂಗ್ರಹಿಸುವಂತೆ ಪ್ರೇರೇಪಿಸಲ್ಪಡಬೇಕು.	

ಶ್ರೀ ವಿನೋಬಾ ಭಾವೆಯವರು ಸೂಚಿಸಿದ ಸ್ಥೂಲಮಾನದಿಂದ ವರ್ಗಮೂಲವನ್ನು ಹೇಳುವ ಪದ್ಧತಿ

ಲೇಖಕರು : **ತಟ್ಟಿ ಶಾಮರಾಯರು**

ನೂಲಿನ ವ್ಯಾಸವನ್ನು ತೆಗೆಯುವದಕ್ಕೆ ಕೆಳಗಿನ ಸೂತ್ರವನ್ನು ಉಪಯೋಗಿಸಬೇಕಾಗುತ್ತದೆ:—

$\sqrt{\text{ನಂಬರು}} \times ೨೭\frac{೧}{೨} =$ ೧ ಇಂಚಿನಲ್ಲಿ ಹಿಡಿಯುವ ಎಳೆಗಳ ಸಂಖ್ಯೆ

ಉದಾ : ೧೨ ನಂಬರಿನ ನೂಲಿದ್ದರೆ, ೧ ಇಂಚಿನಲ್ಲಿ ಸುಮಾರು ೯೬ ಎಳೆಗಳು ಕೂಡುತ್ತವೆ. ಆದ್ದರಿಂದ **ಅದರ** ವ್ಯಾಸವು $\frac{೧}{೯೬}$ ಇಂಚು.

ರೀತಿ : $\sqrt{೧೨} \times ೨೭\frac{೧}{೨} = ೩\frac{೧}{೨} \times ೨೭\frac{೧}{೨} = \frac{೭}{೨} \times \frac{೫೫}{೨} = \frac{೩೮೫}{೪} = ೯೬$

(ದುಂಡಂಕಿಯಲ್ಲಿ)

ಈ ಸೂತ್ರವನ್ನು ಉಪಯೋಗಿಸುವಾಗ ೧೨ ರ ವರ್ಗಮೂಲವನ್ನು ತೆಗೆಯಬೇಕಾಯಿತು. ಇಂಥ ಪ್ರಸಂಗದಲ್ಲಿ ಬಾಯಿಂದ ವರ್ಗಮೂಲವನ್ನು ಹೇಳುವ ಈ ಕೆಳಗಿನ ರೀತಿಯನ್ನು ಶ್ರೀ ವಿನೋಬಾಜಿಯವರು ಸೂಚಿಸಿದ್ದಾರೆ.

ಯಾವ ಸಂಖ್ಯೆಯ ವರ್ಗಮೂಲ ಬೇಕಾಗಿದೆಯೋ ಅದು ಯಾವ ಪೂರ್ಣ ವರ್ಗ ಸಂಖ್ಯೆಯ ಸಮೀಪವಿದೆ ಎಂಬುದನ್ನು ನೋಡಬೇಕು.

೧, ೪, ೯, ೧೬, ೨೫, ೩೬, ೪೯.... ಇ. ಇವು ಪೂರ್ಣ ವರ್ಗ ಸಂಖ್ಯೆಗಳಷ್ಟೇ. ಇವುಗಳಲ್ಲಿ ೧೨ ಯಾವುದಕ್ಕೆ ಸಮೀಪವಿದೆ? ೯ ಕ್ಕೂ ೧೬ ಕ್ಕೂ ಅದು ನಡುವೆ ಇದೆ; ೧೬ ಕ್ಕಿಂತ ಅದು ೯ ಕ್ಕೆ ಹೆಚ್ಚು ಸಮೀಪವಿದೆ; ಏಕೆಂದರೆ ೧೨—೯ =೩; ೧೬—೧೨ =೪. ೯ ರ ಹಿಂದೆಯೂ ಕೆಲವು ಸಂಖ್ಯೆಗಳು ೯ ಕ್ಕೆ ಸಮೀಪವಾಗಿವೆ; ಉದಾ, ಏಳು ಮತ್ತು ಎಂಟು. ೭, ೮, ೧೦, ೧೧, ೧೨ ಈ ಎಲ್ಲ ಸಂಖ್ಯೆಗಳು ೯ ರ "ಬಳಗ"ದವು ಎಂದು ಅನ್ನೋಣ.

ಇನ್ನು ೯ ರ ವರ್ಗಮೂಲ, ೩. ೯ ರ ಬಳಗದ ಸಂಖ್ಯೆಗಳ ವರ್ಗಮೂಲಗಳೆಲ್ಲ $\frac{೧}{೬}$ ದಂತೆ ಹೆಚ್ಚಾಗುತ್ತ ಹೋಗುತ್ತವೆ. (೯ ರ ವರ್ಗಮೂಲ ೩, ಅದರ ದ್ವಿಗುಣ ೬; ಇದರ ವ್ಯುತ್ಕ್ರಮ $\frac{೧}{೬}$)

ಆದ್ದರಿಂದ ೧೦ ರ ವರ್ಗಮೂಲ $೩\frac{೧}{೬}$

೧೧ ,, $೩\frac{೨}{೬}$

೧೨ ,, $೩\frac{೩}{೬}$

ಹೀಗೆಯೇ ೯ ರ ಹಿಂದೆ ಹೋಗಿ

೮ ರ ವರ್ಗಮೂಲ $೨\frac{೫}{೬}\left(= ೩-\frac{೧}{೬}\right)$

೭ ರ ವರ್ಗಮೂಲ $೨\frac{೪}{೬}\left(= ೩-\frac{೨}{೬}\right)$

೯ ರ ಬಳಗದ ಸಂಖ್ಯೆಗಳು : ೭, ೮, (೯), ೧೦, ೧೧, ೧೨

ಇವುಗಳ ವರ್ಗಮೂಲಗಳು : $೨\frac{೪}{೬}$, $೨\frac{೫}{೬}$, $೩\frac{೧}{೬}$, $೩\frac{೨}{೬}$, $೩\frac{೩}{೬}$

೬ ನಾಲ್ಕರ 'ಬಳಗ'ಕ್ಕೆ ಸೇರಿದ್ದು; ಏಕೆಂದರೆ ೪ ಮತ್ತು ೬ ರ ಅಂತರ ೨ ಆದರೆ ೬ ಮತ್ತು ೯ ರ ಅಂತರ ೩.

[೪], ೫, ೬,...............

ಇವುಗಳ ವರ್ಗಮೂಲಗಳು, ೨, $೨\frac{೧}{೪}$, $೨\frac{೨}{೪}$ (ಅಥವಾ $೨\frac{೧}{೨}$ ಅಥವಾ $೨\frac{೩}{೬}$)

ಈ ಸಂದರ್ಭದಲ್ಲಿ ಇನ್ನೊಂದು ಸುಲಭವಾದ ಬಾಯಲೆಕ್ಕವನ್ನು ಕಲಿಯೋಣ. ಅದೇನೆಂದರೆ.

ನೋಡಿರಿ. $೧\frac{೧}{೨} \times ೧\frac{೧}{೨} = \frac{೩}{೨} \times \frac{೩}{೨} = \frac{೯}{೪} = ೨\frac{೧}{೪}$

$೨\frac{೧}{೨} \times ೨\frac{೧}{೨} = \frac{೨೫}{೪} = ೬\frac{೧}{೪}$

$೩\frac{೧}{೨} \times ೩\frac{೧}{೨} = ೧೨\frac{೧}{೪}$; $೪\frac{೧}{೨} \times ೪\frac{೧}{೨} = (೪\times೫) + \frac{೧}{೪}$

$= ೨೦\frac{೧}{೪}$

ಬಾಯಲೆಕ್ಕ : $೩\frac{೧}{೨}$ ಆಣೆಗೆ ೧ ಸೇರು ಸಕ್ಕರೆಯಾದರೆ $೩\frac{೧}{೨}$ ಸೇರಿಗೆಷ್ಟು ?

ಬಾಯಲೆಕ್ಕದ ರೀತಿ : $೩ \times ೪ = ೧೨$; ಮೇಲೆ ಒಂದು ಕಾಲು; ಉತ್ತರ $೧೨\frac{೧}{೪}$ ಆಣೆ.

ಹೀಗೆಯೇ $೪\frac{೧}{೨} \times ೪\frac{೧}{೨} = ೪\times೫ + \frac{೧}{೪} = ೨೦\frac{೧}{೪}$

$೧೦\frac{೧}{೨} \times ೧೦\frac{೧}{೨} = ೧೦\times೧೧ + \frac{೧}{೪} = ೧೧೦\frac{೧}{೪}$

$೨\frac{೧}{೪}$, $೬\frac{೧}{೪}$, $೧೨\frac{೧}{೪}$, $೨೦\frac{೧}{೪}$ .... ಇತ್ಯಾದಿ ಸಂಖ್ಯೆಗಳಲ್ಲಿನ ಮೇಲಿನ ಒಂದು ಚತುರ್ಥಾಂಶವನ್ನು ಬಿಟ್ಟರೆ

೨, ೬, ೧೨, ೨೦, ೩೦, ೪೨........... ಬಂದವು. ಇವುಗಳನ್ನು ಹೀಗೂ ಬರೆಯಬಹುದು (ಇವುಗಳಿಗೆ ಶ್ರೇಣೀ ಸಂಖ್ಯೆಗಳೆಂದು ಹೆಸರಿಡೋಣ.)

೧×೨, ೨×೩, ೩×೪, ೪×೫, ೫×೬, ೬×೭ .... ಈ ಸಂಖ್ಯೆಗಳ ವರ್ಗಮೂಲಗಳು ಅನುಕ್ರಮವಾಗಿ (ಮೇಲಿನ ಬಾಯಲೆಕ್ಕದ ಉದಾಹರಣೆಗಳನ್ನು ನೋಡಿರಿ.)

$೧\frac{೧}{೨}$, $೨\frac{೧}{೨}$, $೩\frac{೧}{೨}$, $೪\frac{೧}{೨}$, $೫\frac{೧}{೨}$, $೬\frac{೧}{೨}$...............

ಎಂದರೆ ೬ ರ ವರ್ಗಮೂಲ $೨\frac{೧}{೨}$

೧೨ ರ ,, $೩\frac{೧}{೨}$

೨೦ ರ ವರ್ಗಮೂಲ $೪\frac{೧}{೨}$ ಇತ್ಯಾದಿ

೧×೨, ೨×೩, ೩×೪ .... ಈ ಶ್ರೇಣಿಯನ್ನು ನಾವು ಬೇಕಾದಷ್ಟು ಮುಂದೆ ಒಯ್ಯಬಹುದು.

೧೨×೧೩ ಈ ಶ್ರೇಣಿಯಲ್ಲಿ ಬರುವದು

ಆದ್ದರಿಂದ ೧೫೬ ರ (=೧೨×೧೩) ವರ್ಗಮೂಲವು $೧೨\frac{೧}{೨}$

೬ ರ (=೨×೩) ವರ್ಗಮೂಲವು $೨\frac{೧}{೨}$

[೪], ೫, ೬, ೭, ೮, [೯], ೧೦, ೧೧, ೧೨

ಇವುಗಳ ವರ್ಗಮೂಲಗಳು ಶ್ರೀ ವಿನೋಬಾರವರ ರೀತಿಯಂತೆ ಹೀಗಾಗುವವು.

೨, $೨\frac{೧}{೪}$, $೨\frac{೨}{೪}$...........

$೨\frac{೨}{೪}$ ಯನ್ನು $೨\frac{೧}{೨}$ ಅಥವಾ $೨\frac{೩}{೬}$ ಎಂದು ತಿಳಿದರೆ

೭ ರಿಂದ ೧೨ರ ವರೆಗಿನ ವರ್ಗಮೂಲಗಳು ಹೀಗೆ ಬರುವವು.

($೨\frac{೩}{೬}$ ದ ಮುಂದೆ), $೨\frac{೪}{೬}$, $೨\frac{೫}{೬}$, $೨\frac{೬}{೬}$ ಅಥವಾ ೩, $೩\frac{೧}{೬}$, $೩\frac{೨}{೬}$, $೩\frac{೩}{೬}$ ಅಥವಾ $೩\frac{೧}{೨}$

ಸಾರಾಂಶ : ೧೫ರ ವರ್ಗಮೂಲ ಬೇಕಾಗಿದ್ದರೆ ಈ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು. ಅದರ ಹಿಂದಿನ ಶ್ರೇಣಿ ಸಂಖ್ಯೆ ಯಾವದು? ಮುಂದಿನ ಶ್ರೇಣೀ ಸಂಖ್ಯೆ ಯಾವದು? ಅದು ಯಾವ 'ಬಳಗ'ದ್ದು?

೧೫ರ ಹಿಂದಿನ ಶ್ರೇಣೀ ಸಂಖ್ಯೆಯು ೧೨

೧೫ರ ಮುಂದಿನ ,, ೨೦

೧೫ ಇದು ೧೬ರ "ಬಳಗ"ದ್ದು

೧೨, ೧೩, ೧೪, ೧೫, [೧೬], ೧೭, ೧೮, ೧೯, ೨೦

$೩\frac{೧}{೨}$, ... ೪ .... $೪\frac{೧}{೨}$

$೩\frac{೪}{೮}$, $೩\frac{೫}{೮}$, $೩\frac{೬}{೮}$, $೩\frac{೭}{೮}$, ೪, $೪\frac{೧}{೮}$, $೪\frac{೨}{೮}$, $೪\frac{೩}{೮}$, $೪\frac{೪}{೮}$

ಈ ಶ್ರೇಣೀ ಸಂಖ್ಯೆಗಳಲ್ಲಿ ಪ್ರತಿಯೊಂದರ ವರ್ಗಮೂಲದಲ್ಲಿಯೂ ಅಪೂರ್ಣಾಂಕದ ಛೇದವು ೮ ಆಗಿರುತ್ತದೆ, (ಅವು ೧೬ರ ಬಳಗದವು; ೧೬ರ ವರ್ಗಮೂಲ ೪; ಅದರ ದ್ವಿಗುಣ ೮)

ಗುರು-ಶಿಷ್ಯರಿಗೆ ಬಹುಮಾನ ವಿತರಣ ಸಮಾರಂಭ

ಪ್ರಾ. ಶಾ. ಪ್ರ. ಪ. ಪರೀಕ್ಷೆ ೧೯೫೭

ಕಲಿಸಿದ ಗುರುಗಳಾದ
ಶ್ರೀ ವಾಯ್. ಎಲ್. ಕುಕನೂರ
ಪೋಲೀಸ ಹೆಡ್‌ಕ್ವಾರ್ಟರ ಶಾಲೆ

ಜಿಲ್ಹೆಗೆ ಪ್ರಥಮ ಸ್ಥಾನಗಳಿಸಿದ
ಕುಮಾರ ಜಯರಾಮ ಸಾವಂತ

ದಿನಾಂಕ ೨೧-೫-೫೭ನೇ ದಿನ ಬಾಸೆಲ್ ಮಿಶನ್ ಹಾಯಸ್ಕೂಲಿನ ಸಭಾಭವನದಲ್ಲಿ ಶ್ರೀಮಾನ್ ಸಿ. ಕೆ. ಕುಲಕರ್ಣಿ ಜಿಲ್ಹಾ ಸ್ಕೂಲಬೋರ್ಡ ಚೇರಮನ್ ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಬಹುಮಾನ ವಿತರಣ ಸಮಾರಂಭವು ಜರುಗಿತು. ಮಾನ್ಯ ಶ್ರೀ ಎಸ್. ವ್ಹಿ. ಜೇವೂರ, ಡೆಪ್ಯುಟಿ ಡಾಯರೆಕ್ಟರ ಧಾರವಾಡ ಇವರು ಮುಖ್ಯ ಅತಿಥಿಗಳಾಗಿ ದಯಮಾಡಿಸಿದ್ದರು. ಮುಖ್ಯ ಅತಿಥಿಗಳ ಅಮೃತ ಹಸ್ತದಿಂದ ಬಹುಮಾನಗಳು ಕೆಳಗಿನಂತೆ ಕೊಡಲ್ಪಟ್ಟವು.

ಜಿಲ್ಹೆಗೆ ಪ್ರಥಮ ಸ್ಥಾನಗಳಿಸಿದ ಕುಮಾರ ಜಯರಾಮ ಸಾವಂತ ಇವನಿಗೆ ೫೦ ರೂ. ಹಾಗೂ ಗಣಿತದಲ್ಲಿ ಜಿಲ್ಹೆಗೆ ಪ್ರಥಮ ಸ್ಥಾನಗಳಿಸಿದ್ದಕ್ಕಾಗಿ ೨೫ ರೂ. ಅವನಿಗೆ ಕಲಿಸಿದ ಗುರುಗಳಾದ ಶ್ರೀ ವಾಯ್. ಎಲ್. ಕುಕನೂರ ಇವರಿಗೆ ೫೦ ರೂ. ಹಾಗೂ ೨೫ ರೂ. ಹೀಗೆ ಜಿಲ್ಹಾ ಸ್ಕೂಲಬೋರ್ಡಿನಿಂದ ಮತ್ತು ಜಿಲ್ಹೆಗೆ ಪ್ರಥಮ ಸ್ಥಾನಗಳಿಸಿದ್ದಕ್ಕಾಗಿ ಕುಮಾರ ಜಯರಾಮ ಸಾವಂತ ಇವನಿಗೆ ಸರಕಾರದ ೨೫ ರೂ.ಗಳ ಬಹುಮಾನ, ಮತ್ತು ಜಿಲ್ಹೆಗೆ ಪ್ರಥಮ ಸ್ಥಾನಗಳಿಸಿದ್ದಕ್ಕಾಗಿ ಶಾಲೆಗೆ ಆಕಳವಾಡಿ ಬಂಧುಗಳ ಸಂಚಾರಿ ಶೀಲ್ಡು ಕೊಡಲ್ಪಟ್ಟವು.

ಮುಖ್ಯ ಅತಿಥಿಗಳು ಶಿಕ್ಷಣದಲ್ಲಿ ಪೋಲೀಸ ಹೆಡ್‌ಕ್ವಾರ್ಟರದ ಶಾಲೆಯ ಪ್ರಗತಿ ಹಾಗೂ ವಿವಿಧ ಚಟುವಟಿಕೆಗಳಲ್ಲಿ ಗಳಿಸುವ ಪೇಲ್ಪಂಕ್ತಿ ಇವುಗಳನ್ನು ವರ್ಣಿಸುತ್ತ ಇದೇ ರೀತಿಯಾಗಿ ಪ್ರತಿಯೊಂದು ಶಾಲೆ ಮುಂದುವರಿಯಲೆಂದು ಹಾರೈಸಿದರು.

ಉತ್ಸಾಹಿ ಶಿಕ್ಷಕರಾದ ಶ್ರೀ ವಾಯ್. ಎಲ್. ಕುಕನೂರ ಇವರು ಟ್ರೇನಿಂಗ ಪಡೆದನಂತರ ಜೀವನ ಶಿಕ್ಷಣ ಶಾಲೆ ಅಮ್ಮಿನಭಾವಿಯಲ್ಲಿ ಕೆಲಸ ಮಾಡುವಾಗ ಪರೀಕ್ಷೆಗೆ (ಪ್ರಾ. ಶಾ. ಪ್ರ. ಪ. ಪ.) ಕುಳಿತ ಎಂಟೂ ವಿದ್ಯಾರ್ಥಿಗಳು ಒಂದನೆಯ ತರಗತಿಯಲ್ಲಿ ಉತ್ತೀರ್ಣರಾದರು. ಆ ಮೇಲೆ ಇವರು ಪೋಲೀಸ ಹೆಡ್‌ಕ್ವಾರ್ಟರ ಶಾಲೆಗೆ ವರ್ಗವಾಗಿ

ಬಂದಮೇಲೆ ಮೇಲಿನ ವರ್ಗಗಳನ್ನು ಪ್ರಾರಂಭಿಸಿದರು. ಪ್ರತಿವರುಷವೂ ಪ್ರಾ. ಶಾ. ಪ್ರ. ಪ. ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಪ್ರಮಾಣದಿಂದ ಉತ್ತೀರ್ಣರಾಗಿ ಮೇಲು ನಂಬರುಗಳನ್ನು ಪಡೆಯುತ್ತ ಬಂದಿದ್ದಾರೆ. ೧೯೫೫ರಲ್ಲಿ ಪರೀಕ್ಷೆಗೆ ಕುಮಾರಿ ಕಮಲಾ ಸಾವಂತ ಎಂಬ ವಿದ್ಯಾರ್ಥಿನಿಯು ಜಿಲ್ಹೆಗೆ ಮಹಿಳೆಯರಲ್ಲಿ ಪ್ರಥಮ ಸ್ಥಾನಗಳಿಸಿ ಸರಕಾರದ ಬಹುಮಾನ ಪಡೆದಳು. ೧೯೫೬ರಲ್ಲಿ ಪರೀಕ್ಷೆಗೆ ಕುಳಿತ ೧೯ ವಿದ್ಯಾರ್ಥಿಗಳಲ್ಲಿ ೧೮ ವಿದ್ಯಾರ್ಥಿಗಳು ಹೆಚ್ಚಿನ ಗುಣ ಪಡೆದು (೧೦೦ಕ್ಕೆ ೬೦ಕ್ಕಿಂತ ಹೆಚ್ಚು) ಉತ್ತೀರ್ಣರಾದರು.

ಇವರು ಶಿಕ್ಷಣದಲ್ಲಿ ಅಲ್ಲದೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದಾರೆ. ಪೋಲೀಸ ಹೆಡ್‌ಕ್ವಾರ್ಟರ ಶಾಲೆಯ ವಿವಿಧ ನೃತ್ಯಗಳು, ಆಕರ್ಷಿತವಾದ ಶಾರೀರಿಕ ಚಟುವಟಿಕೆಗಳು ಧಾರವಾಡದಲ್ಲಿಯೇ ಪ್ರಥಮ ಸ್ಥಾನಗಳಿಸಿವೆ. ಇಂಥ ಆದರ್ಶ ಶಿಕ್ಷಕರಿಂದ ಪೋಲೀಸ ಹೆಡ್‌ಕ್ವಾರ್ಟರ ಶಾಲೆಯು ಬಿದಿಗೆಯ ಚಂದ್ರನಂತೆ ಬೆಳೆಯುತ್ತ ಕೀರ್ತಿಪಡೆಯುತ್ತ ನಡೆದಿದೆ.

ಗೌ. ಹ. ಕುಡಚೀಕರ
ಮುಖ್ಯ ಗುರುಗಳು
ಜೀವನ ಶಿಕ್ಷಣ ಶಾಲೆ ಪೋ. ಹೆ. ಕ್ವಾ. ಧಾರವಾಡ

ದಿನಾಂಕ
೭-೬-೧೯೫೭

೧೯೫೭ನೆಯ ಎಪ್ರಿಲ ತಿಂಗಳಲ್ಲಿ ಜರುಗಿದ ಪ್ರಾ. ಶಾ. ಪ್ರ. ಪರೀಕ್ಷೆಯಲ್ಲಿ ಯಶಸ್ಸು ಪಡೆದ ಶಾಲೆಗಳು

ಶಾಲೆಯ ಹೆಸರು	ಕುಳಿತವರ ಸಂಖ್ಯೆ	ಪಾಸಾದವರ ಸಂಖ್ಯೆ	ಶಾಲೆಯ ಗುರುಗಳ ಹೆಸರು
ಕ. ಗ. ಮ. ಶಾಲೆ ಹಳದೀಪುರ	೨೦	೧೮	ಮುಖ್ಯಾಧ್ಯಾಪಕರು
,, ,, ನಾಗನೂರ (ತಾ. ಬೈಲಹೊಂಗಲ)	೧೧	೮	ವಿ. ಬ. ಭದ್ರಣ್ಣವರು ಪ್ರ. ಶಿ.
,, ,, ಮೊರಬ (ತಾ. ನವಲಗುಂದ)	೨೯	೨೦	ವಿ. ಶಂ. ಫಕೀರಗೌಡರ
,, ,, ಯರಗಲ್ಲ (ತಾ. ಸಿಂದಗಿ)	೮	೮	ಬಿ. ಬಿ. ಕುಲಕರ್ಣಿ ಪ್ರ. ಶಿ.
,, ,, ಕುಲಗೋಡ	೧೭	೧೬	ರ. ಕೆ. ಸಬಳಗೆ ಪ್ರ. ಶಿ.
,, ,, ಯರಗಲ್ಲ (ತಾ. ರೋಣ)	೨೧	೧೫	ದ. ಮ. ಕುಲಕರ್ಣಿ ಪ್ರ. ಶಿ.
,, ,, ಕರೂರ (ತಾ. ರಾಣೇಬೆನ್ನೂರ)	೧೦	೮	ಎಚ್. ಎಸ್. ಎಲಿಗಾರ, ಸ್ಥಾ. ಸ್ಕೂ. ಕ. ಚೇರಮನ್
,, ,, ರಡ್ಡೇರತಿಮ್ಮಾಪೂರ (ತಾ. ಬದಾಮಿ)	೧೨	೯	ಗೌ. ವೆಂ. ನೀರಲಕೇರಿ ಪ್ರ. ಶಿ.
,, ,, ಲಕ್ಷ್ಮೇಶ್ವರ	೩೯	೨೧	ಬ. ಮ. ಹರವಿ ಉ. ಶಿ.
,, ,, ಕೊಂಡಗೂಳಿ (ತಾ. ಸಿಂದಗಿ)	೧೩	೧೨	ಕೃ. ರಂ. ಕುಲಕರ್ಣಿ ಪ್ರ. ಶಿ.
,, ,, ಬೆಲ್ಲದಬಾಗೇವಾಡಿ (ತಾ. ಹುಕ್ಕೇರಿ)	೨೪	೧೯	—
,, ,, ಘೋಡಗೇರಿ (ತಾ. ಹುಕ್ಕೇರಿ)	೮	೮	ರಾ. ತ. ತಳವಾರ ಉ. ಶಿ.

ಶಾಲೆಯ ಹೆಸರು	ಕುಳಿತವರ ಸಂಖ್ಯೆ	ಪಾಸಾದವರ ಸಂಖ್ಯೆ	ಶಾಲೆಯ ಗುರುಗಳ ಹೆಸರು
,, ,, ಅರಳೇಶ್ವರ	೬	೫	ಯು. ಎಫ್. ಚಿಕ್ಕಜ್ಜನವರ ಉ. ಶಿ.
,, ,, ತಡಸ (ತಾ. ಸಿಗ್ಗಾಂವ)	೫	೪	ಫ. ಹೊ. ನಾಯಕ ಪ್ರ. ಶಿ.
,, ,, ಕೊಣ್ಣೂರ (ತಾ, ಗೋಕಾಕ)	೧೬	೧೫	ಇ. ಬಾ. ಹವಾಲದಾರ ಉ. ಶಿ.
,, ,, ಶಿರಗುಪ್ಪಿ (ತಾ. ಹುಬ್ಬಳ್ಳಿ)	೨೯	೧೯	ವಿ. ಬ. ಅಕ್ಕಿ ಉ. ಶಿ.
,, ,, ಯಂಕಂಚಿಮಣಿನಾಗರ (ತಾ. ಬದಾಮಿ)	೧೬	೧೪	ಮ. ಶಿ. ಮಠ ಉ. ಶಿ.
,, ,, ಅಮೀನಗಡ	೧೩	೧೨	ವ್ಹಿ. ಟಿ. ಅಗಸರ ಉ. ಶಿ.
,, ,, ಹಿರೇಪಡಸಲಗಿ	೮	೬	ರಾ. ವಾ. ಕುಲಕರ್ಣಿ ಉ. ಶಿ.
,, ,, ಬರಡೋಲ (ತಾ. ಇಂಡಿ)	೯	೬	—
,, ,, ಸೂಡಂಬಿ	೧೦೦ಕ್ಕೆ ೮೦ರಂತೆ		—
,, ,, ಭಗವತಿ (ತಾ. ಬಾಗಲಕೋಟ)	೧೦	೭	ಶಿ. ಧ. ಗೌಡರ ಪ್ರ. ಶಿ.
,, ,, ತಿಳಗೂಳ (ತಾ. ಸಿಂದಗಿ)	೧೦	೯	ಚ. ಶಂ. ದೇಸಾಯಿ ಪ್ರ. ಶಿ.
,, ,, ಹೆಬಸೂರ	೧೫	೧೪	ಜಿ. ಕೆ. ಮುಲ್ಲಾ ಪ್ರ. ಶಿ.
ಉ. ಗ. ಮ. ಶಾಲೆ ಮುದ್ದೇಬಿಹಾಳ	೧೩	೧೩	ಕೆ. ಎಲ್. ಇನಾಮದಾರ ಉ. ಶಿ.
ಕ. ಗ. ಮ. ಶಾಲೆ ಮುನವಳ್ಳಿ (ತಾ. ಸವದತ್ತಿ)	೩೦	೨೩	ಯ. ಅ. ಕಂಬಾರ ಶಿ.
ಕ. ಹೆ ಮ, ಶಾಲೆ ಮುನವಳ್ಳಿ	೬	೫	ಶ್ರೀಮತಿ ಅಕ್ಕೂಬಾಯಿ ಕಂಬಾರ
ಕ. ಗ. ಮ. ಶಾಲೆ ಹಮ್ಮಿಗಿ	೪	೨	ಶಂ. ಯ. ನಾರಣಚದರಿ
,, ,, ಬರದ್ವಾಡ	೩	೩	ಬ. ಸಿ. ಗೋಜನೂರ ಸ್ಕೂ. ಕ. ಚೇರಮನ್
,, ,, ಗೋರಬಾಳ	೧೧	೮	ಅ. ರಾ. ಗೋಡಿ ಮು. ಗು.
,, ,, ನಾಂತಗಿರಿ	೭	೬	ರಾ. ಹ. ಜೇವಿನಮರದ ಮು. ಗು.
,, ,, ಯಂಭತ್ನಾಳ	೧೬	೧೬	ಅ. ಯ. ಕೌಲಗಿ ಮು. ಗು.
,, ,, ಭಂಟನೂರ	೩	೨	ರು. ಬ. ಬಟಕುರ್ಕಿ ಮು. ಗು.
,, ,, ತಬಕದಹೊನ್ನಿಹಳ್ಳಿ	೬	೬	ಪ್ರಧಾನ ಶಿಕ್ಷಕ
,, ,, ಹೂವಿನಹಿಪ್ಪರಗಿ	೯	೮	ಸಂ. ಸಾ. ಬ್ಯಾಕೋಡ ವಾಚನಾಲಯ ಸೆಕ್ರೆಟರಿ

೧೯೫೬ನೆಯ ಇಸವಿಯಿಂದ ಪ್ರಾರಂಭವಾಗುವ ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ

ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

ಶೇಲಾರ ಕೃತ

ಪ್ರಾಥಮಿಕ ಭೂಮಿತಿ **[ಕ್ಷೇತ್ರಫಲ ಘನಫಲ ಸಹಿತ]**

೪ರಿಂದ ೭ನೆಯ ವರ್ಗದ ವರೆಗಿನ ವಿಷಯವನ್ನೆಲ್ಲ ಒಳಗೊಂಡಿದೆ.

ಬೆಲೆ : ೧ರೂ. ೮ಆಣೆ ಮಾತ್ರ

ದೊರೆಯುವ ಸ್ಥಳ : **ಸಾಯಿ ಪಬ್ಲಿಶಿಂಗ್ ಹಾವುಸ್,** ವಿಜಯ ರೋಡ, ಧಾರವಾಡ,

ಶ್ರೀ ಅರವಿಂದ ಪ್ರಭಾವಿತೆಯೂ ಶ್ರೀ ತಾಯಿಯವರ ಪ್ರಾಸಾದಿಕತೆಯೂ ಒಂದೆಡೆಗೆ ತೋರುವ ಪವಿತ್ರ ಸಾಹಿತ್ಯದಿಂದ

ವಾಚನಾಲಯದ ಬೆಲೆ ಹೆಚ್ಚಿಸಬೇಕಿವೇ ?

ಹಾಗಿದ್ದರೆ, ಕೆಳಗೆ ಕಾಣಿಸಿದ ಪುಸ್ತಕಗಳನ್ನು ತರಿಸಿಕೊಳ್ಳಿರಿ.

೧.	ನನ್ನನಲ್ಲ (ಅಂತರ್ಮುಖಿಗೊಳಿಸುವ ದಿ. ಮಧುರಚೆನ್ನರ ಸಮಗ್ರ ಕವನ ಸಂಗ್ರಹ	....	೧–೧೨
೨.	ಆತ್ಮಸಂಶೋಧನ (ದಿ. ಮಧುರಚೆನ್ನರ ಜೀವನದ ಕಲಶಪ್ರಾಯದ ಪ್ರಾಂಜಲ ಸಾಹಿತ್ಯ)	....	೧–೮
೩.	ಪವಿತ್ರ ಜೀವನ (ಹೊಸಕಾಲದ ಋಷಿ ಟಾಲಸ್ಟಾಯರ ಕಥಾಸಂಕಲನ)	....	೧–೨
೪.	ಸುಂದರ ಕಥೆಗಳು (ಮಕ್ಕಳಿಗೂ ಮಕ್ಕಳಂಥವರಿಗೂ ಶ್ರೀ ತಾಯಿಯವರು ಹೇಳಿದುವು)	....	೧–೪
೫.	ಶ್ರೀ ಅರವಿಂದರು (ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ)	....	೧–೮
೬.	ಶ್ರೀ ಅರವಿಂದರ ಪತ್ರಗಳು (ಪೂರ್ಣಜೀವನದ ಸಿರಿಮೊಳಕೆ)		೦–೮
೭.	ಸ್ವರ್ಗದೋಲೆಗಳು (ಕನ್ನಡಿಗರ ಕೈಗೆ ಬಂದ ಸಾಂಸ್ಕೃತಿಕ ಕನ್ನಡಿ)	....	೧–೮
೮.	ಮುಗಿಲ ಜೇನು (ಮಿಂಚಿನ ಶಲಾಕೆಯಂಥ ಕವನ ಸಂಕಲನ)	....	೧–೮
೯.	ಸಪ್ತಪದಿ (ವಿದ್ಯಾರ್ಥಿಗಳ ಮೆಚ್ಚಿಕೆಯ ಏಕಾಂಕಗಳು)	....	೧–೪
೧೦.	ಭಾರತದ ಭವ್ಯಸಿದ್ಧತೆ (ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ)	....	೧–೦
೧೧.	ಬೆಟ್ಟದ ಹೊಳೆ (ಜೀವನ ಪ್ರಚೋದಕವಾದ ಕಾದಂಬರಿ)	....	೧–೪
೧೨.	ಗರತಿಯ ಬಾಳು (ಹೆಣ್ಣಿನ ಮಾಯೆಯಲ್ಲಿ ಕಪಿಲ ಸಿದ್ಧಮಲ್ಲಿಕಾರ್ಜುನ)	....	೧–೪
೧೩.	ಬಾಳಬಟ್ಟೆ (ಆಧುನಿಕ ಬಾಳಿನ ಬಂಡಾಟಕ್ಕೆ ಚಿಕಿತ್ಸೆ)	....	೧–೩
೧೪.	ಪೂಜಾ (ಅತೀಂದ್ರಿಯಃ ಜಾಗ್ರತಿಯ ಮಿಸುಕು)	....	೦–೧೨
೧೫.	ಜೀವನ ದೃಷ್ಟಿ (ಭವ್ಯ ಬದುಕಿನ ಬೊಕ್ಕಸ)	....	೧–೬
೧೬.	ಕನ್ನಡ ಕುಲದೀಪ ಬಸವಣ್ಣ (ಹಿಡಿದರೆ ಹಿಡಿಕೆಯಲ್ಲಿ ಬಿಟ್ಟರೆ ಮನೆತುಂಬ)	....	೧–೦

ಕನ್ನಡದಲ್ಲಿ ಶ್ರೀ ಅರವಿಂದರ ಸಾಹಿತ್ಯ ಬೇಕಾದರೆ ಬರೆಯಿರಿ. ಮೇಲೆ ಕಾಣಿಸಿದ ಪುಸ್ತಕಗಳನ್ನೆಲ್ಲ ತರಿಸಿಕೊಂಡಲ್ಲಿ ಅಂಚೆ ನಾವೇ ವಹಿಸುವೆವು.

ಶ್ರೀ ಅರವಿಂದ ಗ್ರಂಥಾಲಯ ಪೋ:— **ಚಡಚಣ** ಜಿ. ವಿಜಾ

ಶ್ರೀ ಜಿ. ಎ. ಬಸವರಾಜ ಅವರ

ಬಯಲಿನುಡಿಯಲ್ಲಿ

ಬೆಲೆ : ೬೦ ನಯೆ

[ಕಥಾ ಸಂಕಲನ]

- ಕೇವಲ ೬–೮–೦ (ಅಂಚೆ ಸೇರಿ) ವಾರ್ಷಿಕ ಚಂದಾಹಣದಲ್ಲಿ ಮಾಲೆಯ ಗನೆಯ ಕುಸುಮವನ್ನಾಗಿ ಪಡೆಯಿರಿ.
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ನಾಲ್ಕೈದು ಕೃತಿಗಳು ೪೦೦ ಪುಟಗಳಲ್ಲಿ.
- ಎಪ್ರಿಲದಿಂದ ಎಪ್ರಿಲಕ್ಕೆ ಒಂದು ವರುಷ.
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಶ್ರೇಷ್ಠ ಸಾಹಿತಿಗಳ ಕೃತಿಗಳನ್ನು ಪ್ರಕಟಿಸಿ ಚಂದಾದಾರರಿಗೆ ½ ಬೆಲೆಯಲ್ಲಿ ಕೊಡಲಾಗುವದು. (ಅಂಚೆ ಬೇರೆ)
- ಶಿಕ್ಷಕರಿಗೆ ವಿಶೇಷ ಸವಲತ್ತುಗಳಿವೆ. ಕೂಡಲೇ ಚಂದಾದಾರರಾಗಿ ತಮ್ಮದೇ ಆದ ಶಿಕ್ಷಕರ ಸಂಸ್ಥೆಯು ಚಿರಸ್ಥಾಯಿಯ ನಿಲ್ಲುವಂತೆ ನೆರವು ನೀಡಿರಿ. ಈ ಅತ್ಯಲ್ಪಹಣ ತಮ್ಮ ಶಿಕ್ಷಕ ಮಿತ್ರರ ಏಳ್ಗೆಗೆ ಮೀಸಲಾಗಿದೆ.

★ ಮುಂಬೈ ರಾಜ್ಯದ ಶಿಕ್ಷಣಾಧಿಕಾರಿಗಳಿಂದ ಶಾಲಾವಾಚನಾಲಯಗಳಿಗೆ ಮಂಜೂರಾದ ೩೦೦ ಜನ ಶ್ರೇಷ್ಠ ಸಾಹಿ ವಿವಿಧ ಕೃತಿ, ಪರಿಚಯಗಳನ್ನೊಳಗೊಂಡ 'ಆನೆಕಲ್ಲು' 'ಪುಟಚೆಂಡು' ಕಥೆ, ಕವನಗಳ ಪುಸ್ತಕಗಳು ನಿಮ್ಮಲ್ಲಿ ಕೆಲವೇ ಪ್ರತಿ ಉಳಿದಿವೆ. ಈಗಲೇ ತರಿಸಿಕೊಳ್ಳಿರಿ ಚಂದಾದಾರರಿಗೆ ಮಾತ್ರ ½ ಬೆಲೆ (ಅಂಚೆ ಬೇರೆ) ಬೆಲೆ ೧೨ ಆಣೆಯ

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ : **ಬಿಜಾಪುರ**

Printed by Shri S. F. Kattimani, at Manohar Power Printing Press, Hubli. Edited
Published by Sjts. S. P. Patil, B. M. Shintri, S. R. Tatti & Smti. P. A. Bhaskar, at the Kann

ಜೀವನ ಶಿಕ್ಷಣ

ಪ್ರಧಾನ ಸಂಪಾದಕರು:
ಶ್ರೀ ಎಸ್. ಪಿ. ಪಾಟೀಲ

ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳೆಂದು
೨ನೇ ಸಾರೆ ಆಯ್ಕೆ ಹೊಂದಿದ ರ್‍ಯಾಂಗ್ಲರ ಶ್ರೀ ಡಿ. ಸಿ. ಪಾವಟೆ ಅವರು

ಪ್ರತಿ ೨ ಆಣೆ ೧೯೫೭ ಜುಲೈ ವಾ. ಚಂ. ೪ ರೂ.

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : ಶ್ರೀ ಜಿ. ಕೆ. ಕೊಪ್ಪಿಕರ, ಬಿ.ಎ.(ಆನರ್ಸ). ಬಿ.ಎಸ್‌ಸಿ., ಎಮ್.ಇಡಿ.
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : ಶ್ರೀ ಎಸ್. ಪಿ. ಪಾಟೀಲ, ಬಿ.ಎ., ಬಿ.ಟಿ., ಡಿ.ಪಿ.ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗದ (ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೩] ಜುಲೈ ೧೯೫೭ **[ಸಂಚಿಕೆ ೨**

— ಪರಿವಿಡಿ —

	ವಿಷಯ		ಪುಟ
೧	ಸಂಪಾದಕೀಯ		೧
೨	೧೯೫೭ನೇ ಎಪ್ರಿಲ್ ತಿಂಗಳಲ್ಲಿ ಜರಗಿದ ಪ್ರಾ. ಶಾ ಪ್ರ. ಪ. ಪರೀಕ್ಷೆಯಲ್ಲಿ ಯಶಸ್ಸು ಪಡೆದ ಶಾಲೆಗಳು		೩
೩	ಮೂಲಶಿಕ್ಷಣದ ಹಿನ್ನೆಲೆಯಲ್ಲಿರುವ ತಾತ್ವಿಕ ವಿಚಾರಗಳು	ಶ್ರೀ ತಟ್ಟಿ ಶಾಮರಾಯರು	೬
೪	ನಯಾ ಪೈಸಾ—ನಯೇ ಪೈಸೆ	ಶ್ರೀ ರಾ. ರು. ಕುಪ್ಪಸದ	೯
೫	ಹಳ್ಳಿಯ ಜನರಿಗೆ ಉದ್ಯೋಗದ ವಿತರಣ	ಶ್ರೀ ತಟ್ಟಿ ಶಾಮರಾಯರು	೧೨
೬	"ಕನ್ನಡ ವರ್ಧಪ್ರಾಯಿಜ" ಪರೀಕ್ಷೆ ೧೯೫೭.		೧೫
೭	ಪ್ರಾಯೋಗಿಕ ಶಾಲೆ ಮತ್ತು ಪ್ರಯೋಗ	ಶ್ರೀ ನೀ. ರೇ. ಹಿರೇಮಠ	೧೬
೮	ಮೂಲ ಶಿಕ್ಷಣದ ಅರಿವು	ಶ್ರೀ ಶಿಂತ್ರಿ ಬಸಪ್ಪನವರು	೧೯
೯	ಡಾ॰ ಮಿಸ್ ಹೆಲೆನ್ ಕೆಲರ ಇವರ ಹುಟ್ಟುಹಬ್ಬದ ದಿನಾಚರಣೆ		೨೨
೧೦	ಕುರಬಗೊಂಡ ಶಾಲೆಯ ಅಪೂರ್ವ ಯಶಸ್ಸು		೨೪
೧೧	ಸಮನ್ವಯ ಪಾಠದ ಟಿಪ್ಪಣಿ	ಶ್ರೀ ಎಮ್. ಎನ್. ಮಾಳಿಗಿ	೨೫
೧೨	ಜೀವನ ಶಿಕ್ಷಣ ಪ್ರಪಂಚದಲ್ಲಿ		೨೭

ಸಂಪಾದಕೀಯ

ಹಾರ್ದಿಕ ಅಭಿನಂದನೆಗಳು

ಕಳೆದ ತಿಂಗಳ ದಿ. ೨೯ರಂದು ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ರ್‍ಯಾಂಗ್ಲರ ಡಿ. ಸಿ. ಪಾವಟೆಯವರು ಪುನಃ ಆಯ್ಕೆ ಹೊಂದಿರುವುದು ಎಲ್ಲರಿಗೂ ಹೆಮ್ಮೆಯ ಹಾಗೂ ಸಂತಸದ ವಿಷಯವಾಗಿದೆಯೆಂದು ಹೇಳಿದರೆ ಯಾವ ರೀತಿಯಿಂದಲೂ ಅತಿಶಯೋಕ್ತಿಯಾಗಲಾರದು. ಅವರ ಈ ಆಯ್ಕೆಯು ಎರಡನೆಯ ಸಲವಾಗಿದೆ. ಈ ಮೊದಲು ಅವರು ೧೯೫೪ರಲ್ಲಿ ಪ್ರಥಮವಾಗಿ ಆ ಸ್ಥಾನಕ್ಕೆ ಆರಿಸಲ್ಪಟ್ಟು ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅವರ ಸೇವೆಯನ್ನು ಎಲ್ಲರೂ ಬಾಯಿತುಂಬ ಹೊಗಳಿರುವರು. ಇನ್ನೂ ಎಳೆ ವಯಸ್ಸಿನಲ್ಲಿದ್ದ ವಿಶ್ವವಿದ್ಯಾಲಯಕ್ಕೆ ಶಕ್ತಿ-ಸಾಮರ್ಥ್ಯ-ಪ್ರತಿಭೆಗಳನ್ನು ತಂದುಕೊಡುವ ದೃಷ್ಟಿಯಿಂದ ಶ್ರೀ ಪಾವಟೆಯವರೇ ಆ ಉನ್ನತ ಸ್ಥಾನದಲ್ಲಿ ಇನ್ನೂ ಅನೇಕ ವರುಷಗಳ ವರೆಗೆ ಉಳಿಯಬೇಕಾದುದು ಅತ್ಯವಶ್ಯವೆಂದು ಯಾರಿಗೂ ಅನಿಸದಿರಲಾರದು. ಅವರನ್ನು ಮತ್ತೊಮ್ಮೆ ಆರಿಸಿದುದು ಇದೆಲ್ಲದರ ದ್ಯೋತಕವಾಗಿದೆ.

ಕಳೆದ ಮೂರು ವರುಷಗಳಲ್ಲಿ ಅವರು ವಿಶ್ವವಿದ್ಯಾಲಯದಲ್ಲಿ ಸಾಧಿಸಿದ ಪ್ರಗತಿಯು ಅಷ್ಟಿಷ್ಟಲ್ಲ. ಭವ್ಯ ಮಂದಿರವು ಬೃಹದಾಕಾರದಲ್ಲಿ ಮೇಲಕ್ಕೇಳಹತ್ತಿದೆ. ಸ್ನಾತಕೋತ್ತರ ವಿಭಾಗಗಳು ವರು-ವರುಷ ಬೆಳೆಯಹತ್ತಿವೆ. ಸಿನೇಟ ಮತ್ತು ಸಿಂಡೀಕೇಟದ ಕಾರ್ಯಕಲಾಪಗಳು ಸುಮಧುರವಾಗಿ ನಡೆಯುತ್ತಿವೆ. ಕೇಂದ್ರ ಸರಕಾರದಿಂದ ನಮ್ಮ ವಿಶ್ವವಿದ್ಯಾಲಯವು ಹೊಸದಾಗಿದ್ದರೂ ಉಳಿದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಂತೆ ಅದಕ್ಕೂ ಧನ ಸಹಾಯ ಸಿಗಹತ್ತಿದೆ. ಅಂತರ್‍ರಾಷ್ಟ್ರೀಯ ಶೈಕ್ಷಣಿಕ ಅಂತರಂಗದಲ್ಲಿ ನಮ್ಮ ವಿಶ್ವವಿದ್ಯಾಲಯಕ್ಕೂ ಮಾನ್ಯತೆ ದೊರೆಯಹತ್ತಿದೆ. ಶ್ರೇಷ್ಠ ಭಾರತೀಯರಿಗೆ ಗೌರವ ಪದವಿಗಳನ್ನು ಕೊಟ್ಟು ಅವರನ್ನು ಮನ್ನಿಸುವ ವಿಧಾನವನ್ನು ನಮ್ಮ ಕರ್ನಾಟಕ ವಿಶ್ವವಿದ್ಯಾಲಯವು ಮೊದಲು ಮಾಡಿದೆ. ತಾತ್ವಿಕ ವಿಷಯಗಳ ಮೇಲೆ ಗ್ರಂಥಗಳನ್ನು ಪ್ರಸಿದ್ಧಿಸುವ ಕಾರ್ಯವನ್ನೂ ಕೈಕೊಂಡಿದೆ. ಹೀಗಾಗಿ ಕರ್ನಾಟಕ ವಿಶ್ವವಿದ್ಯಾಲಯವು ಕರ್ನಾಟಕ ಜನತೆಯ ಸಂಸ್ಕೃತಿಯ ಬೆಳವಣಿಗೆಯ ನಿದರ್ಶಕವೂ ಆಶೆ-ಆಕಾಂಕ್ಷೆಗಳ ದ್ಯೋತಕವೂ ಆಗಿರುವದಕ್ಕೆ ಮುಖ್ಯವಾಗಿ ರ್‍ಯಾಂಗ್ಲರ ಶ್ರೀ ಪಾವಟೆಯವರ ಅವಿಶ್ರಾಂತ ಸೇವೆಯೇ ಎಂದು ನಿಸ್ಸಂದೇಹವಾಗಿ ಹೇಳಬೇಕು. ನಮ್ಮ ಅಭಿಪ್ರಾಯದಲ್ಲಿ ತಮ್ಮ ವೇಳೆ, ಶಕ್ತಿ, ಸಾಹಸಗಳನ್ನೆಲ್ಲ ವಿಶ್ವವಿದ್ಯಾಲಯದ ಏಳಿಗೆಯ ಬಗೆಗೆ ಮುಡುಪಾಗಿಸಿರುವದರಿಂದಲೇ ಇದೆಲ್ಲವೂ ಸಾಧ್ಯವಾಗಿದೆ. ಆದುದರಿಂದ ನಾವೆಲ್ಲರೂ ಅವರಿಗೆ ಉಪಕೃತರು. ಅವರ ಘನವಾದ ಸೇವೆಯು ಮುಂದುವರಿಯುವಂತೆ ಅನುವು ಮಾಡಿಕೊಟ್ಟದ್ದಕ್ಕಾಗಿ ವಿಶ್ವವಿದ್ಯಾಲಯದ ಸಿನೇಟ ಸದಸ್ಯರು ಕರ್ನಾಟಕ ಜನತೆಯ ಅಭಿನಂದನೆಗಳಿಗೆ ಅರ್ಹರಾಗಿದ್ದಾರೆಂದು ನಾವು ಹೇಳಬಯಸುತ್ತೇವೆ.

ಸ್ತುತ್ಯ ಕಾರ್ಯ

ಶ್ರೀ ಶಿಂತ್ರಿ ಬಸಪ್ಪನವರ ಪಾರಿತೋಷಿಕಗಳು

ಶ್ರೀ ಮಾನ್ ಶಿಂತ್ರಿ ಬಸಪ್ಪನವರು ಕರ್ನಾಟಕದ ಶಿಕ್ಷಣ ಕ್ಷೇತ್ರದಲ್ಲಿ ಒಳ್ಳೇ ಪರಿಚಿತರು. ಅವರು ಆಗಿನ ದಕ್ಷಿಣ ಭಾಗದ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರರ ಹುದ್ದೆಯಿಂದ ನಿವೃತ್ತರಾಗಿ ಧಾರವಾಡದಲ್ಲಿದ್ದು ತಮ್ಮ ಲೇಖಗಳ ಮುಖಾಂತರ ಸಾಹಿತ್ಯ ಹಾಗೂ ಶಿಕ್ಷಣ ಸೇವೆಯನ್ನು ಮಾಡುತ್ತಿರುವುದು ಎಲ್ಲರಿಗೂ ಗೊತ್ತಿದ್ದ ಸಂಗತಿ. ಅವರು ನಮ್ಮ ಸಂಪಾದಕ ಮಂಡಲದ ಸದಸ್ಯರು. ಶ್ರೀ ಶಿಂತ್ರಿಯವರು ತಮ್ಮ ಜನ್ಮಸ್ಥಳವಾದ ಮಿಶ್ರಿಕೋಟಿಯ ಸಹಕಾರಿ ಸಂಘದಲ್ಲಿದ್ದ ತಮ್ಮ ೨೦೦೦ ರೂಪಾಯಿಗಳ ಠೇವನ್ನು ಶ್ರೀ ಶಿಂತ್ರಿ ಬಸಪ್ಪನವರ ಪಾರಿತೋಷಿಕಗಳ ನಿಧಿಯೆಂದು ಪರಿವರ್ತಿಸಿದ್ದಾರೆ. ಈ ನಿಧಿಯಿಂದ ಬರುವ ವಾರ್ಷಿಕ ಬಡ್ಡಿಯ ಹಣವನ್ನು ಈ ಕೆಳಗೆ ಸೂಚಿಸಿದಂತೆ ವಿನಿಯೋಗಿಸಲು ಆ ಊರ ಗಂಡು ಮಕ್ಕಳ ಶಾಲೆಯ ಮುಖ್ಯ ಗುರುಗಳಿಗೆ ಅಧಿಕಾರ ಕೊಟ್ಟಿದ್ದಾರೆ.

೧. ಮಿಶ್ರಿಕೋಟಿಯ ಗಂ. ಮ. ಶಾಲೆಯಿಂದ ಪ್ರಾ. ಶಾ. ಪ್ರ. ಪ. ಪರೀಕ್ಷೆಯಲ್ಲಿ ಪಾಸಾಗಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗೆ ೧೫ ರೂಪಾಯಿ, ದ್ವಿತೀಯ ಸ್ಥಾನ ಪಡೆದವನಿಗೆ ೧೦ ರೂಪಾಯಿಗಳ ಬಹುಮಾನಗಳು.

೨. ೧೦ ರೂಪಾಯಿಗಳನ್ನು ಪಾರಿತೋಷಿಕ ವಿತರಣ ಸಮಾರಂಭದ ಕೊನೆಗೆ ನಡೆಯುವ ಅಲ್ಪೋಪಹಾರಕ್ಕೆ.

೩. ಇನ್ನುಳಿದ ಹಣದಿಂದ ಅಂದಿನ ಸಭೆಗೆ ಬಂದ ಎಲ್ಲ ಶಾಲಾ ಮಕ್ಕಳಿಗೆ ಮಿಠಾಯಿಗಳನ್ನು ಹಂಚುವದು.

ಈ ಪಾರಿತೋಷಿಕಗಳ ವಿತರಣವು ಪ್ರತಿ ವರುಷ ಅಗಷ್ಟ ತಿಂಗಳ ದಿ. ೧೫ ರಂದು ನೆರವೇರಬೇಕೆಂದು ಅವರು ಉದ್ದೇಶಿಸಿದ್ದಾರೆ. ಈ ಬಗೆಗೆ ಅವರು ಇನ್ನೂ ಹೆಚ್ಚಿನ ವಿವರಗಳನ್ನು ಕೊಟ್ಟಿದ್ದಾರೆ. ಅವರ ಸೂಚನೆಗಳಂತೆ ಕಾರ್ಯ ಸಾಗಿಸಲು ಆ ಊರಿನ ಸರಪಂಚರು ಹೃತ್ಪೂರ್ವಕವಾಗಿ ಒಪ್ಪಿದ್ದಾರೆ. ಸತ್ಯ-ಶುದ್ಧ-ಕಾಯಕದಿಂದಾದ ಗಳಿಕೆಯಲ್ಲಿ ಶ್ರೀಮಾನ್ ಶಿಂತ್ರಿಯವರು ೨೦೦೦ ರೂಪಾಯಿಗಳ ಕಾಯಂನಿಧಿಯನ್ನು ರಚಿಸಿ ಅದರಿಂದ ದೊರೆಯುವ ವಾರ್ಷಿಕ ಬಡ್ಡಿಯ ಹಣದಿಂದ ತಮ್ಮೂರಿನ ಗಂಡು ಮಕ್ಕಳ ಶಾಲೆಯಿಂದ ಪ್ರಾ. ಶಾ. ಪ್ರ. ಪ. ಪರೀಕ್ಷೆಯಲ್ಲಿ ಮೇಲಿನ ಸ್ಥಾನ ಪಡೆದವರಿಗೆ ಬಹುಮಾನ, ಸಭೆಗೆ ಆಗಮಿಸಿದ ಮಹಾ ಜನರಿಗೆ ಉಪಹಾರ, ಎಲ್ಲ ಬಾಲಕರಿಗೆ ಮಿಠಾಯಿಗಳ ಹಂಚುವಿಕೆ, ಇವೆಲ್ಲವುಗಳು ಪ್ರತಿ ವರುಷ ಸ್ವಾತಂತ್ರ್ಯ ದಿನೋತ್ಸವದ ಭಾಗವಾಗಿ ನಡೆಯುವಂತೆ ಯೋಜನೆಯನ್ನು ಮಾಡಿರುವರು. ಆ ಯೋಜನೆಯು ಅವರಲ್ಲಿರುವ ತಮ್ಮೂರಿನ ಅಭಿಮಾನ ಹಾಗೂ ತಮ್ಮೂರ ಶಾಲೆಯ ಮಕ್ಕಳ ಬಗೆಗೆ ಅವರಲ್ಲಿದ್ದ ಅಂತಃಕರಣಗಳ ದ್ಯೋತಕವಾಗಿದೆ. ಈ ಅಭಿನಂದನಾರ್ಹ ಯೋಜನೆಯನ್ನು ಮುಂಬರುವ ಪ್ರಥಮ ಸ್ವಾತಂತ್ರ್ಯದ ಶತಾಬ್ದಿ ಉತ್ಸವದ ನೆನಪಿಗಾಗಿ ಮಾಡಿರುವದು ಔಚಿತ್ಯ ಪೂರ್ಣವೂ ಮಾರ್ಗದರ್ಶಕವೂ ಆಗಿದೆ. ಇದೆಲ್ಲಕ್ಕಾಗಿ ನಾವು ಅವರನ್ನು ಹಾರ್ದಿಕವಾಗಿ ಅಭಿನಂದಿಸುವೆವು.

ಧಾರವಾಡದ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಶತಾಬ್ದಿ ಸಮಾರಂಭ

ಕರ್ನಾಟಕದಲ್ಲಿ ಎಲ್ಲಕ್ಕೂ ಹಿರಿಯ ಸಂಸ್ಥೆಯೆಂದು ಹೆಸರಾದ ಈ ಕಾಲೇಜವು ಈ ವರುಷದ ಪ್ರಾರಂಭಕ್ಕೆ ತನ್ನ ೧೦೦ ವರುಷಗಳ ದೀರ್ಘಾಯುಷ್ಯವನ್ನು ಮುಟ್ಟಿತೆಂದು ಕಾಲೇಜದ ಕಾಗದ-ಪತ್ರಗಳ ಮೇಲಿಂದ ಕಾಣುತ್ತದೆ. ೧೮೫೭ರಲ್ಲಿ ಮೊದಲು ಇದೇ ಊರಲ್ಲಿ ನಾರ್ಮಲ್ ಕ್ಲಾಸ ಎಂದು ಪ್ರಾರಂಭವಾಗಿ ನಾಲ್ಕು ವರುಷಗಳ ನಂತರ ಬೆಳಗಾಂವಿಗೆ ವರ್ಗಾಯಿಸಲ್ಪಟ್ಟು ಅಲ್ಲಿ ೧೮೬೫ರಲ್ಲಿ ಧಾರವಾಡಕ್ಕೆ ಪುನಃ ತರಲ್ಪಟ್ಟಿತು. ಕಾ ಜದ ೧೦೦ ವರುಷಗಳ ಸುದೀರ್ಘವಾದ ಸಂಗತಿಗ ಸ್ಪಷ್ಟವಾದ ರೀತಿಯಲ್ಲಿ ಸಿಗುವದು ಜಡವಾಗಿದೆ. ಆದ ಈ ಸಂಸ್ಥೆಯ ಶತಾಬ್ದಿ ಸಮಾರಂಭವನ್ನು ಮಾಡ ಕೆಂದು ಈ ಸಂಸ್ಥೆಗೆ ಸಂಬಂಧಿಸಿದ ಹತ್ತಿಪ್ಪತ್ತು ಸಾ ಶಿಕ್ಷಕರ ಆಶೆಯಾಗಿದೆ. ಆದುದರಿಂದ ಎಲ್ಲವೂ ಅನುಕೂ ವಾದರೆ ಈ ವರುಷದ ಕೊನೆಗೆ ಈ ಸಮಾರಂಭವನ ನೆರವೇರಿಸಬೇಕೆಂಬ ವಿಚಾರವು ಈಗೀಗ ಬಲಗೊಳ ತ್ತಿದೆ. ಇದರ ಬಗೆಗೆ ಶಿಕ್ಷಣ ಖಾತೆಯ ಡಾಯರೆಕ್ಟ ರೊಡನೆ ಪ್ರಾಸ್ತಾವಿಕ ಮಾತುಗಳೂ ಮೊನ್ನೆ ನಡೆದ ನಿರ್ದಿಷ್ಟವಾದ ಕಾರ್ಯಕ್ರಮದ ವಿವರಣೆಗಳು ಹಿಂದಿನಿಂ ಪ್ರಸಿದ್ಧಮಾಡಲ್ಪಡುವವು. ಕಾರ್ಯಕ್ರಮದ ಸಂಘಟನೆಗ ಅದರ ಸಾಧ್ಯತೆಗೂ ಈ ಎಲ್ಲ ಶಿಕ್ಷಣಾಭಿಮಾನಿಗ ಸಹಾಯ ಸಹಕಾರಗಳನ್ನು ನಾವು ಕೋರುತ್ತೇ ನಮ್ಮ ಸಂಸ್ಥೆಯ ಹಿರಿಮೆಗೆ ತಕ್ಕಂತೆ ಕಾರ್ಯಕ್ರಮ ನಡೆಯಬೇಕಾದರೆ ಈ ಸಂಸ್ಥೆಯ ಹಳೆ ವಿದ್ಯಾರ್ಥಿಗ ಮತ್ತು ಶಿಕ್ಷಕರ ನೆರವು ಅತ್ಯವಶ್ಯವಾದುದು. ಸ್ಮಾರ ಗ್ರಂಥವೂ ತಯಾರಾಗಬೇಕಾಗುವದು. ಆದುದರಿಂದ ಕಾಲೇಜದ ಹಳೆ ವಿದ್ಯಾರ್ಥಿಗಳಿಗೆ ಈಗಲೇ ವಿನಂತಿ ಅವರು ಕಾಲೇಜದ ದೀರ್ಘಕಾಲದ ಸೇವೆಯ ಯಾ ದಾದರೊಂದು ಭಾಗವನ್ನು ಆರಿಸಿ ಲೇಖನಗಳನ ತಯಾರಿಸುವರೆಂದು ನಾವು ಬಲವಾಗಿ ಆಶಿಸುತ್ತೇವೆ.

ಸಮಾರಂಭದ ಯೋಜನೆಯ ಬಗೆಗೆ ಸೂಚ ಗಳನ್ನು ಕೇಳಬಯಸುತ್ತೇವೆ. ಹೆಚ್ಚಿನ ವಿವರಗಳನ ಮುಂದಿನ ಸಂಚಿಕೆಯಲ್ಲಿ ಕಾಣಿಸುವೆವು.

ಚಂದಾದಾರರಲ್ಲಿ ಬಿನ್ನಹ

ಪ್ರತಿತಿಂಗಳು ೧೫ನೆಯ ದಿನಾಂಕಕ್ಕೆ "ಜೀವನ ಶಿಕ್ಷಣ" ಪತ್ರಿಕೆಯ ಸಂಚಿಕೆಗಳನ್ನು ನಿಮ್ಮ ನಿಮ್ಮ ವಿಳಾಸಕ್ಕೆ ಕಳುಹಿಸಲಾಗುತ್ತಿದೆ. ಇದರಲ್ಲಿ ಏನೂ ವ್ಯತ್ಯಯ ಬರಲಾರದು. ಹೀಗಿದ್ದೂ ಪತ್ರಿಕೆಗಳು ನಿಮಗೆ ತಲುಪದಿದ್ದಲ್ಲಿ ಸ್ಥಳಿಕ ಅಂಚೆ ಅಧಿಕಾರಿಗಳಿಗೆ ತಪ್ಪದೇ ಬರೆದುಕೊಳ್ಳಬೇಕು.

— ಪ್ರಧಾನ ಸಂಪಾದಕರು

೧೯೫೭ನೆಯ ಎಪ್ರಿಲದಲ್ಲಿ ಜರುಗಿದ ಪ್ರಾ. ಶಾ. ಪ್ರ. ಪ. ಪರೀಕ್ಷೆಯಲ್ಲಿ ಯಶಸ್ಸನ್ನು ದೊರಕಿಸಿದ ಊರುಗಳ ಶಾಲೆಯ ಹೆಸರು

ಶಾಲೆಯ ಊರ ಹೆಸರು		ಪರೀಕ್ಷೆಗೆ ಕುಳಿತ ಸಂಖ್ಯೆ	ಪಾಸಾದ ಸಂಖ್ಯೆ	ಶಾಲೆಯ ಮುಖ್ಯ ಅಥವಾ ಉ. ಗುರುಗಳ ಹೆಸರು
ಕ. ಗಂ. ಮ. ಶಾಲೆ.	ಅಮರಗೋಳ	೯	೪	ಸಂ. ಅ. ಬಿದರಕುಂದಿ ಉ. ಗು.
,, ,,	ಕೋರವಾರ	೭	೭	ಶಿ. ಶಾ. ಕೋರವಾರ ಮು. ಗು,
,, ,,	ಧನ್ನೂರ	೧೧	೧೧	ಬಾ. ಚ. ಹೊಸಮನಿ ಮು. ಗು.
,, ,,	ಅಳ್ಳಾವರ	೧೫	೮	ಮು. ಗು.
,, ,,	ಹಳ್ಳಿಗುಡಿ	೮	೫	ನಾ. ಅ. ಪಾಟೀಲ ಮು. ಗು.
ಕ. ಹೆ. ಮ. ಶಾಲೆ	ತಾಳಿಕೋಟೆ	೧೦	೧೦	ಎಸ್. ಎಸ್. ಸ್ಥಾವರ ಉ. ಗು.
ಕ. ಗಂ. ಮ. ಶಾಲೆ	ಆಲಮೇಲ	೨೬	೨೧	ಎನ್. ಡಿ. ಹಕೀಮ ಉ. ಗು.
,, ,,	ಜೊಳದಗುಡ್ಡ	೧೬	೧೩	ಪಾ. ರಾ. ಪಾಟೀಲ ಮು. ಗು.
,, ,,	ಕಾಗವಾಡ	೧೮	೯	ಅ. ರಾ. ಹಾವರಿ ಮು. ಗು.
,, ,,	ತಬಕದಹೊನ್ನಿಹಳ್ಳಿ	೬	೬	ಜಿ. ವ್ಹಿ. ಹಿರೇಮಠ ಉ. ಗು.
,, ,,	ಹೊಸೂರ (ತಾ. ಶಿಗ್ಗಾಂವ)	೯	೭	ಶಂ. ಗು. ಕುಂಬಾರ ಮು. ಗು.
,, ,,	ಹಿರೇಉಳ್ಳಿಗೇರಿ	೮	೭	ಮ. ಅ. ಕಡಗೋಳ
,, ,,	ಉಮದಿ	೧೨	೧೧	ಆರ್. ಎಸ್. ಪತ್ತಾರ
,, ,,	ಸೂಲವಿ	೬	೪	ಶಂ. ನಾ. ಬಾಳಪ್ಪಗೌಡರ
,, ,,	ಕೋಣನತಂಬಿಗಿ	೯	೭	ಗು. ವಿ. ಇಚ್ಚಂಗಿ ಮ. ಗು.
,, ,,	ತುಂಗಳ	೧೧	೮	ಮ. ಕ. ಶಾನಿಗೊಂಡ ಮ. ಗು.
,, ,,	ಸಿಂದಗಿ	೩೦	೨೮	ಸಿ. ಪ. ಮಣೂರ ಮ. ಗು.
,, ,,	ಮಂಕಣಿ	೪	೪	ಜಿ. ಚಿ. ಕುರಹಟ್ಟಿ ಮ. ಗು.

(ಕಪ್ಪರ ೩ನೆಯ ಪುಟದಿಂದ)

ಅಣ್ಣಿಗೇರಿ :– ದಿ. ೧೮–೬–೫೭ರಂದು ನಮ್ಮ ಶಾಲೆಯ ಬಾಲಪ್ರಪಂಚ ಸಹಕಾರಿ ಅಂಗಡಿಯ ೩ನೆಯ ವಾರ್ಷಿಕ ಸಭೆಸೇರಿ ಕೆಳಗಿನಂತೆ ನಿರ್ಣಯಿಸಲಾಯಿತು. ಅಧ್ಯಕ್ಷ ಜಿ. ಆರ್. ಅಂಗಡಿ, ಸಂಚಾಲಕ ಆರ್. ಎಫ್. ಹಿರೇಮಠ, ಆಡಿಟರ ಎಚ್. ಡಿ. ಭಾವಾಖಾನ, ಕಾರ್ಯಾಧ್ಯಕ್ಷ ಯು. ಎಫ್. ಮರಡ್ಡಿ, ಕಾರ್ಯದರ್ಶಿ ಎಚ್. ಜಿ. ನಾಯಿಕ ನಮ್ಮ ಶಾಲೆಯ ಮು. ಮಂ. ಮರಡ್ಡಿ ಒಕ್ಕಲತನ ಮಂ. ನೀಲಪ್ಪಗೌಡ್ರ ಮತ್ತು ಆರೋಗ್ಯ ಮಂತ್ರಿ ಹಳೇಮನಿ ಈ ಪ್ರಕಾರ ಇರುತ್ತಾರೆ.

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ಸುವರ್ಣ ಸಂಧಿ! **ಸಚಿತ್ರ ಗ್ರಂಥ!!** **ಸುಂದರ ಮುದ್ರಣ!**

“ಶಿಕ್ಷಣ-ಶಿಕ್ಷಕ-ದರ್ಶನ”

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-ಃ ತಣಿಸುವಂಥ, ಶಿಕ್ಷಣ ತಜ್ಞರಿಂದ **ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂ** **ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟ** ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್‍ಯಾಂಗ್ಲರ್ **ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆದಂ** **ಅಮೋಘ** ಗ್ರಂಥ.

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿಂ ಬಣ್ಣ ಬಣ್ಣಗಳಲ್ಲಿ ೪೧ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ ಅಮರ ಸಾಹಿತ್ಯ ಗ್ರಂ **ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.**

ದಿ. ೧೫ ಆಗಸ್ಟ ೫೭ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ ಅಧ್ಯ ಯಲ್ಲಿ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ.

ವಿವರಗಳಿಗೆ ಇಂದೇ ಈಗಲೇ ಬರೆಯಿರಿ. ಪ್ರೋತ್ಸಾಹನೆ ಕೊಡಿರಿ.

ಸಾದಾ ಪ್ರತಿ ೩ ರೂ.] **ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್.** [**ಸುಂದರ ಪ್ರತಿ ೪ ರ**

ವಿಳಾಸ :- **ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಿಕೋಟಾ, ಜಿಲ್ಲಾ:— ವಿಜಾಪುರ.**

ಸುಬೋಧ ಹಿಂದೀ ಕನ್ನಡ ವ್ಯಾಕರಣ

● ★ ●

ಇದನ್ನು ಬರೆದವರು ಹಿಂದೀ ಕ್ಷೇತ್ರದಲ್ಲಿ ಹೆಸರು ಪಡೆದ **ಶ್ರೀ ಗುರುನಾಥ ಜೋಶಿ** ಅವರು. ತಮ್ಮ ಅಃ ಅನುಭವದಿಂದ ಅಲ್ಲಲ್ಲಿ ಕನ್ನಡ ವ್ಯಾಕರಣಕ್ಕೆ ಹೋಲಿಸಿ ಸುಲಭ ಭಾಷೆಯಲ್ಲಿ ಸರ್ವರಿಗೂ ತಿಳಿಯುವಂತೆ ಬರೆದಿಃ ಇದರಲ್ಲಿ ಕೇವಲ ವ್ಯಾಕರಣದ ನಿಯಮಗಳು ಇರದೆ ಹಿಂದೀಯಿಂದ ಕನ್ನಡಕ್ಕೂ ಕನ್ನಡದಿಂದ ಹಿಂದೀ ಭಾಷಾಂತರ ಮಾಡುವದಕ್ಕೆ ವಾಕ್ಯಗಳೂ ಕೊಡಲ್ಪಟ್ಟಿವೆ. ಇದರಿಂದ ಕಲಿಯಬಯಸುವವರೆಲ್ಲರೂ ಸುಲಭಃ ಹಿಂದೀಯನ್ನು ಕಲಿಯಬಹುದಾಗಿದೆ. ಈ ಪುಸ್ತಕವನ್ನು ಕನ್ನಡದ ಸುಪ್ರಸಿದ್ಧ ಸಾಹಿತಿಗಳಾದ, ಪ್ರಿನ್ಸಿಪ ವ್ಹಿ. ಕೆ. ಗೋಕಾಕ ಅವರು ಸ್ವಾಗತಿಸಿದ್ದಾರೆ. ಇಂದೇ ಇದನ್ನು ತರಿಸಿಕೊಂಡು ಹಿಂದೀಯನ್ನು ಕಲಿ ಒಂದುನೂರಾ ಹನ್ನೆರಡು ಪುಟಗಳು! ಬೆಲೆ ಕೇವಲ ೧೪ ಆಣೆ. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ನು!

ಕೆಳಗಿನ ಪತ್ತೆಗೆ ಬರೆಯಿರಿ.

ಕನ್ನಡ ಸಾಹಿತ್ಯ ಪ್ರಕಾಶನ, ಧಾರವಾಡ.

ಮೂಲ ಶಿಕ್ಷಣದ ಹಿನ್ನೆಲೆಯಲ್ಲಿರುವ ತಾತ್ವಿಕ ವಿಚಾರಗಳು

೧೯೫೩ ಇಸವಿ ಆಕಾಶವಾಣಿ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಆಚಾರ್ಯ ಕೃಪಲಾನಿಯವರು ಮಾಡಿದ ಭಾಷಣದ ಅನುವಾದ—

ಅನುವಾದಕರು :— **ತಟ್ಟಿ ಶಾಮರಾಯರು** (ನಿವೃತ್ತ ಪ್ರಿನ್ಸಿಪಾಲರು)

ಮಧ್ಯಯುಗಾನಂತರದ ಯುರೋಪದ ಶಿಕ್ಷಣ ತಜ್ಞರು ಪರಂಪರಾಗತ ಶಿಕ್ಷಣ ಪದ್ಧತಿಯಲ್ಲಿದ್ದ ಲೋಪ ದೋಷಗಳನ್ನು ಎತ್ತಿ ತೋರಿಸುತ್ತಾ ಬಂದಿದ್ದಾರೆ. ಫಲ ಕಾರಿಯೂ ನೂತನ ನಿರ್ಮಿತಿಗೆ ಸಹಾಯಕವೂ ಆದ ಕೆಲಸ ಕಾರ್ಯಗಳ ಆಧಾರದ ಮೇಲೆ ರಚಿಸಿದಂಥ ಒಂದು ಶಿಕ್ಷಣದ ವ್ಯವಸ್ಥೆಯನ್ನು ಅವರು ಸೂಚಿಸುತ್ತ ಬಂದಿದ್ದಾರೆ.

ಈ ಕ್ಷೇತ್ರದಲ್ಲಿ ಮೊದಲಿಗನಾದ ರೂಸೋನು ಶಿಕ್ಷಣವು ಪ್ರೌಢರ ಮನೋವಿಜ್ಞಾನವನ್ನು ಮುಂದಿಟ್ಟುಕೊಳ್ಳದೇ ಶಿಶುಮನಃ ಶಾಸ್ತ್ರವನ್ನು ಅನುಸರಿಸಬೇಕೆಂದು ಪ್ರತಿಪಾದಿಸಿದನು. ಸಂಣ ಮಕ್ಕಳು ಮೊದಲು ಚಂಚಲ ಮನೋವೃತ್ತಿಯವರೂ ಆಮೇಲೆ ಕುತೂಹಲಿಗಳು ಎಂದು ಕಂಡು ಬರುವದು. ಈ ಚಾಂಚಲ್ಯಕ್ಕೂ ಜಿಜ್ಞಾಸೆ ಮೇಲ್ವಿಚಾರಣೆಯಲ್ಲಿ ನಡೆಯುವ ನಿರೀಕ್ಷಣೆ ಉದ್ಯೋಗ ಹಾಗೂ ಚಟುವಟಿಕೆಗಳ ಮುಖಾಂತರ ಸಂತೃಪ್ತಿಯಾಗಬೇಕು. ರೂಸೋನ ಮಾತಿನಲ್ಲಿಯೇ ಹೇಳುವದಾದರೆ "ಮಗುವಿಗೆ ಯಾವದಾದರೊಂದು ಮಾತು, ತಾನಾಗಿ ಕಲಿತುಕೊಂಡ ಕಾರಣದಿಂದ ಗೊತ್ತಾಗಬೇಕೇವಿನಃ ನೀನು (ಶಿಕ್ಷಕನು) ಅದನ್ನು ಅದಕ್ಕೆ ಹೇಳಿದೆ ಎಂದು ಅಲ್ಲ. ಶಾಸ್ತ್ರೀಯ ವಿಷಯದ ಅಭ್ಯಾಸವನ್ನು ನೀನು ಹುಡುಗರಿಗೆ ಹೇಳಿಕೊಡಬೇಡ, ಶಾಸ್ತ್ರೀಯ ಸಂಗತಿಗಳನ್ನು ಅವನೇ ಪರಿಶೋಧಿಸಲಿ. ಹುಡುಗನ ವಿಮರ್ಶ ಶಕ್ತಿಯ ಉಪಯೋಗಕ್ಕೆ ಅವಕಾಶ ಕೊಡದೆ ಅಧಿಕಾರವನ್ನೇ ನಿನ್ನ ಶಿಕ್ಷಣ ತಂತ್ರವಾಗಿ ಮಾಡಿದರೆ ಅವನು ತನ್ನ ವಿಮರ್ಶ ಶಕ್ತಿಯನ್ನು ಎಂದೂ ಉಪಯೋಗಿಸುವದೇ ಇಲ್ಲ. ಅವನನ್ನು ಪುಸ್ತಕ ಹಿಡಿದುಕೊಂಡು ಕೂಡಲಿಕ್ಕೆ ಹಚ್ಚುವ ಬದಲಾಗಿ ಒಂದು ಉದ್ಯಮ ಗೃಹದಲ್ಲಿ ತೊಡಗಿಸಿಟ್ಟರೆ ಅವನ ಕೈಗಳ ಕೆಲಸದಿಂದ ಅವನ ಮನಸಿಗೆ ಸಂಸ್ಕಾರವು ಲಭಿಸುವದು. ಹುಡುಗನನ್ನು ಉದ್ಯೋಗ ಮಂದಿರದ ಒಂದೊಂದೇ ಕೋಣೆಗೆ ಕರೆದುಕೊಂಡು ಹೋದಾಗ ತಾನು ಆ ಕೆಲಸಕ್ಕೆ ತನ್ನ ಕೈ ಹಚ್ಚಿ ತಿಳಿದುಕೊಳ್ಳದೆ ಯಾವ ಕೆಲಸವನ್ನು ಅವನಿಗೆ ನೋಡಲಿಕ್ಕೆ ಕೊಡಬೇಡ. ಅವನು ಅದನ್ನು ಪೂರಾ ತಿಳಿದುಕೊಳ್ಳದೆ ಅಲ್ಲಿ ನಡೆದ ಯಾವದೊಂದು ಸಂಗತಿಯ ಅಥವಾ ನೋಡಿದ ಯಾವದೊಂದು ಸಂಗತಿಯ ಕಾರಣವನ್ನು ಕಲಿಸಬೇಡ. ಸಂಗತಿಗಳು ಸ್ಮೃತಿಯಲ್ಲಿ ಸಂಗ್ರಹಿಸಲ್ಪಡುವದಕ್ಕೆ ಮುಂಚೆ ಅವುಗಳನ್ನು ಬುದ್ಧಿಯೊಂದಿಗೆ ಸಮರಸ ಮಾಡಿಕೊಂಡಿದ್ದರೆ, ಸ್ಮರಣ ಶಕ್ತಿಯಿಂದ ನೆನಪಾದ ಮಾತು ಆಗ ಅವನದೇ ಹೌದು."

ಈ ವಿಚಾರಗಳನ್ನು ಮುಂದೆ ಅನೇಕ ವಿದ್ಯಾ ಸುಧಾರಕರೂ, ತತ್ವವೇತ್ತರೂ ಮುಂದುವರಿಸಿದರು. ವ್ಯಕ್ತಿಯ ಭೌತಿಕ, ಮಾನಸಿಕ, ನೈತಿಕ ಶಕ್ತಿಗಳ ಸಮನ್ವಿತ ವಿಕಾಸವೇ ಶಿಕ್ಷಣವೆಂದು ಪೆಸ್ಟಲೋಜ್ಜಿಯು ಹೇಳಿದ್ದಾನೆ.

"ಮಕ್ಕಳ ಸಾಮರ್ಥ್ಯವೂ ಅನುಭವವೂ ಅವರ ವಯಸ್ಸಿನಲ್ಲಿ ಅಧಿಕಾಂಶದಲ್ಲಿಯೇ ಬರುವದಿಲ್ಲ; ಆದರೆ ಮನೋವಿಜ್ಞಾನ ದೃಷ್ಟಿಯಿಂದ ಅಸಂಗತವಾದ ನಮ್ಮ ಶಾಲೆಗಳು, ಸೃಷ್ಟಿಯು ತಾನೇ ಮಕ್ಕಳಲ್ಲಿ ಬೆಳಸಿದ ಸಾಮರ್ಥ್ಯದ ಮತ್ತು ಅನುಭವದ ಉಪಯೋಗವನ್ನು ನಷ್ಟಮಾಡುವ ವಿನಾಶಕ ಯಂತ್ರ, ಸಾಲೆ ಆಗಿಬಿಟ್ಟಿವೆ. ಐದು ವರ್ಷಗಳ ವರೆಗೆ ಮಕ್ಕಳು ಸೃಷ್ಟಿಯ ಸಂಪೂರ್ಣ ಉಪಭೋಗದಲ್ಲಿರುವದಿಲ್ಲ. ಆಗ ಅನಿಯಂತ್ರಿತ ಸ್ವಾತಂತ್ರ್ಯದ ಆನಂದವನ್ನು ಅವರು ಬಲ್ಲರು. ಈ ಕಾರ್ಯ ತತ್ಪರತೆಯನ್ನು ಮತ್ತು ಪ್ರತ್ಯಕ್ಷ ಜ್ಞಾನವನ್ನು ಅವರು ಅನುಭವಿಸಿ ಆನಂದಪಟ್ಟ ಮೇಲೆ ಒಮ್ಮೆಲೆ ಅವರ ಸುತ್ತಲಿನ ಪ್ರಾಕೃತಿಕ ಸನ್ನಿವೇಶವನ್ನು ಅವರ ಕಣ್ಣಿನಿಂದ ಪೂರ್ತಿಯಾಗಿ ಮರೆ ಮಾಡಿ ಬಿಡುತ್ತೇವೆ. ಅವರ ಅನಿರ್ಬಂಧಸ್ವಾತಂತ್ರ್ಯದ ಆಲ್ಹಾದಕರವಾದ ಗತಿಯನ್ನು ನಿರ್ದಯದಿಂದ ನಿಲ್ಲಿಸಿ ಬಿಡುತ್ತೇವೆ; ದುರ್ಗಂಧವುಳ್ಳ ಕೋಣೆಗಳಲ್ಲಿ ಅವರನ್ನು ಕುರಿಗಳಂತೆ ಹಿಂಡಿಗೆ ಹಿಂ

ಡನ್ನೇ ತುರುಕಿ ಹಿಡಿದು ಹಾಕುತ್ತೇವೆ; ಒಂದು ತಾಸಲ್ಲ ಒಂದು ತಿಂಗಳಲ್ಲ; ವರ್ಷಗಟ್ಟಲೆ ಒಂದೇ ಸವನೆ ಅವ ರನ್ನು ಬೇಡಿ ಹಾಕಿದಂತೆ ಹಿಡದುಕೂಡಿಸುತ್ತೇವೆ; ಏತಕ್ಕೆ? ಅಸ್ವಾಭಾವಿಕನಾದ ಮತ್ತು ಅನಾಕರ್ಷಕವಾದ ಅಕ್ಷರ ಸಂಜ್ಞೆಗಳ ಅವಗಾಹನೆಯಲ್ಲಿ ತಮ್ಮ ಪೂರ್ವದ ಸ್ಥಿತಿಗೆ ತೀರ ವಿಪರೀತವಾಗಿ ಹುಚ್ಚು ಹಿಡಿಸುವ ಒಂದು ಬಾಳುವೆ ಕ್ರಮದಲ್ಲಿ ಕಾಲ ಕಳೆಯುವದಕ್ಕೆ". ಇದಕ್ಕೆ ನಿವಾರಣೋ ಪಾಯವಾವುದು? ವಿದ್ಯಾರ್ಥಿಗಳಿಗೆ ಬುದ್ಧಿಯಿಂದ ಮಾಡ ಬೇಕಾಗುವ ಕೆಲಸವನ್ನು ಕೊಟ್ಟು ಸಾಲೆಯು ಚಟುವಟಿಕೆ ಯಿಂದ ನಲಿಯುವಂತೆ ಮಾಡುವದೇ ಉಪಾಯವು. ಯಾವದೇ ಕೆಲಸವಾಗಲಿ ನಿರ್ಮಾಪಕ ಉತ್ಪಾದಕ ಸ್ವರೂ ಪದ್ದಿದ್ದೇ ಇರುವದು.— ಎಷ್ಟರ ಮಟ್ಟಿಗೆ ಎಂಬದರಲ್ಲಿ ಸ್ವಲ್ಪ ತಾರತಮ್ಯವಿರಬಹುದು. ಈ ಕಾಯಕದ ಮುಖಾಂ ತರವೇ ಮಾನವನು ತನ್ನ ಸೃಷ್ಟಿಕರ್ತನ ದಿವ್ಯ ಪ್ರತಿರೂ ಪವಾಗಿ ಪರಿವರ್ತನೆ ಹೊಂದುವನು. ತನ್ನ ಸ್ವೇಚ್ಛಾನು ಸಾರ ಸೃಷ್ಟಿ ಮಾಡಬಲ್ಲವನಾಗುವನು.

ಅಮೇರಿಕನ್ ತತ್ವವೇತ್ತನೂ ವಿದ್ಯಾಪಾರಂಗತನೂ ಆದ ಡ್ಯೂಯಿಯನು ಹೇಳುವದು ಹೀಗೆ:– "ಕಟ್ಟಿಗೆ, ಲೋಹದ ಎಲ್ಲ ಕೆಲಸವನ್ನು, ನೇಯ್ಗೆ, ಹೊಲಿಗೆ, ಅಡಿಗೆ, ಮುಂತಾದ ಕೆಲಸಗಳನ್ನು ಬಾಳುವ ಮತ್ತು ಕಲಿಯುವ ಪದ್ಧತಿಗಳಂತೆ ಉಪಯೋಗ ಮಾಡಿಕೊಳ್ಳಬೇಕು.......... ಪಾಠಗಳನ್ನು ಕಲಿಯಲಿಕ್ಕೆ ಮೀಸಲಾಗಿರಿಸಿದ ಮನೆ ಯಂತೆ ಮಾಡದೆ ಸಾಲೆಯನ್ನು ಸಚೇತನ ಸಾಂಘಿಕ ಜೀವ ನದ ಆದರ್ಶ ರೂಪವಾಗಿಯೇ ಪರಿವರ್ತಿಸಬೇಕು."

ಪಾಶ್ಚಾತ್ಯ ಲೇಖಕರ ವಾಕ್ಯಗಳನ್ನು ಮೇಲೆ ಉದ್ಧ ರಿಸಿದ್ದೇನೆ, ಈ ವಿಷಯದ ಮೇಲೆ ಬೇಕಾದಷ್ಟು ಇಡಿ ಇಡಿ ಯಾಗಿ ಗಾಂಧೀಜಿಯವರ ಮಾತುಗಳನ್ನು ಅವತರಿಸಬಹುದು. ಆದರೆ ಆ ಮಹಾಪುರುಷನು ಜೀವಿಸಿರುವಾಗ ಅವರ ಮಾತಿನಿಂದ ಮನವರಿಕೆಯಾ ದಷ್ಟೇ ನಮಗೆ ಈಗಲೂ ಆಗಬಹುದು. ಆದರೂ ಒಂದೆ ರಡು ಅವತರಣಿಕೆಗಳು ಇಲ್ಲಿ ಅಪ್ರಾಸಂಗಿಕವಾಗಲಿಕ್ಕಿಲ್ಲ. ಅವರು ಹೇಳುವದು "ಇವೊತ್ತು ಸಾಲೆ ಕಾಲೇಜುಗಳಲ್ಲಿ ವಿದ್ಯಾಭ್ಯಾಸದ ಹೆಸರಿನಿಂದ ನಡೆಯುವದು ನಿಜವಾಗಿ ಬೌದ್ಧಿಕ ದುಂದುಗಾರಿಕೆಯಾಗಿದೆ. ಜ್ಞಾನದ ಶಿಕ್ಷಣವು ನೈತಿಕ ಅಥವಾ ಭೌತಿಕ ಕೆಲಸಕ್ಕೆ ಸಂಬಂಧಪಟ್ಟಿರಬೇಕಾ ಗಿಲ್ಲವೆಂಬ ಹಾಗೆ ತಿಳಿಯಲಾಗುತ್ತದೆ. ತಿಳಿಯಿರಿ ಮಗು ವನ್ನು ನೂಲುವದು, ಬಡಿಗತನ, ಒಕ್ಕಲತನ, ಇತ್ಯಾದಿ ಯಾವದೋ ಒಂದು ಉಪಯುಕ್ತವಾದ ಉದ್ಯೋಗಕ್ಕೆ ಹಚ್ಚಿದೆವು; ಮತ್ತು ಆ ಸಂದರ್ಭದಲ್ಲಿ ವಿವಿಧ ವಿಧಾನಗಳ ಕಾರಣ ಮಿಮಾಂಸೆಯ ಬಗೆಗೆ, ಮತ್ತು ಎಲ್ಲ ಸಲಕರಣೆ ಗಳ ರಚನೆ ಹಾಗೂ ಉಪಯೋಗದ ಬಗೆಗೆ ಆತನಿಗೆ ಸಂ ಪೂರ್ಣವಾದ, ವಿಸ್ತೃತವಾದ ಜ್ಞಾನವನ್ನು ಮಾಡಿಕೊ ಟ್ಟರೆ, ಅವನು ಬಂಧುರವಾದ ಆರೋಗ್ಯಕರವಾದ ದೇಹ ವನ್ನಷ್ಟೇ ಬೆಳಿಸಿಕೊಳ್ಳುವದಲ್ಲದೆ, ಕೇವಲ ವಿದ್ವತ್ತಾ ಲಕ್ಷಣ ರೂಪವಲ್ಲದ, ಅನುಭವ ರೂಢ ಮೂಲವಾದ ಮತ್ತು ಪ್ರತಿನಿತ್ಯದ ಅನುಭವದ ಒರೆಗಲ್ಲಿಗೆ ನಿಲ್ಲುವ ನಿರ್ದಿಷ್ಟ, ಕಾರ್ಯಕ್ಷಮವಾದ ಬುದ್ಧಿ ಶಕ್ತಿಯನ್ನು ಬೆಳಿಸಿ ಕೊಳ್ಳುವನು. ಅವನ ಬೌದ್ಧಿಕ ಶಿಕ್ಷಣದಲ್ಲಿ ತನ್ನ ವಿದ್ಯಾ ಭ್ಯಾಸದ ಯೋಗ್ಯ ಹಾಗೂ ಯಶಸ್ವಿ ಉಪಯೋಗಕ್ಕೆ ಸಹಾಯಕವಾದ ಗಣಿತ ಮತ್ತು ವಿವಿಧ ಜ್ಞಾನಗಳ ಸಮಾವೇಶವಾಗುವದು."

"ಮಾನವನೆಂದರೆ ಬರಿಯ ಬುದ್ಧಿಯಲ್ಲ, ಸ್ಥೂಲ ಪ್ರಾಣಿ ದೇಹ ಮಾತ್ರವಲ್ಲ ಅಥವಾ ಆತ್ಮ ಹೃದಯಗಳು ಮಾತ್ರವಲ್ಲ. ಇಡಿಯಾದ ಮಾನವನ ನಿರ್ಮಿತಿಗೆ ಈ ಮೂರು ಅಂಗಗಳ ಯೋಗ್ಯ ಹೊಂದಾಣಿಕೆಯ ಸಮ ನ್ವಯವು ಅವಶ್ಯವಾದುದು; ಇದೇ ಶಿಕ್ಷಣ ಶಾಸ್ತ್ರದ ಮೂಲ ಸಿದ್ಧಾಂತ" ಇನ್ನೊಂದು ಕಡೆ ಗಾಂಧೀಜಿಯ ವರೇ ಹೀಗೆ ಹೇಳಿದ್ದಾರೆ:–ಕೈಗಾರಿಕೆಯ ಉದ್ಯೋಗದ ಶಿಕ್ಷ ಣದಿಂದ ಮನಸ್ಸಿನ ಮತ್ತು ಆತ್ಮದ ಉಚ್ಚತಮ ವಿಕಾ ಸವು ಸಾಧ್ಯವಿದೆ ಎಂದು ನನ್ನ ಅಭಿಪ್ರಾಯ. ಆದರೆ ಇಷ್ಟೇ ಪ್ರತಿಯೊಂದು ಕೈಗಾರಿಕೆಯನ್ನು ಈಗ ಕಲಿಸು ವಂತೆ ಕೇವಲ ಯಾಂತ್ರಿಕವಾಗಿ ಕಲಿಸದೆ ಶಾಸ್ತ್ರೋಕ್ತ ವಾಗಿ ಕಲಿಸಬೇಕಾಗಿದೆ; ಎಂದರೆ ಮಗುವು ಪ್ರತಿಯೊಂ ದು ವಿಧಾನದ ಹೇಗೆ, ಏಕೆಂಬುದರ ಉಪಪತ್ತಿಯನ್ನು ತಿಳಿದುಕೊಳ್ಳಬೇಕು." ಇದಾಯಿತು ವಿದ್ಯಾಭ್ಯಾಸದ ಪದ್ಧತಿಯ ಬಗೆಗೆ; ಅದು ಶಾಸ್ತ್ರೀಯವಾಗಿರಬೇಕು ಎಂದರೆ ಯಾವದಾದರೊಂದು ಉಪಯುಕ್ತ ಉದ್ಯೋಗ, ಕೈಗಾರಿಕೆ, ಚಟುವಟಿಕೆಯ ಆಧಾರದ ಮೇಲೆ ಅದು ಸ್ಥಾಪಿತವಾಗಿರಬೇಕು. ವರ್ಗದ ಕೋಣೆಯಲ್ಲಿ ಕೈಕೊಂಡ ಇಂಥಹದೊಂದು ಚಟುವಟಿಕೆಗೆ ಶಿಕ್ಷಕನ ಸೂಜ್ಞ ಮಾರ್ಗ ದರ್ಶನವಿದ್ದರೆ ಅದರಿಂದ ವಿದ್ಯಾರ್ಥಿಯು ನಾಗರಿಕ ಜೀವ ನದ ನೈತಿಕ ಸದ್ಗುಣಗಳೂ ಮೈಗೂಡುವವು. ಸಂಘಟಿತ

ಸಮಾಜದ ಒಂದು ಅಂಗವಾಗಿದ್ದೇನೆ ನಾನು—ಎಂಬ ಭಾವನೆಯನ್ನು ಅದು ಬೇಗನೆ ಉಂಟು ಮಾಡುವದು.

ಈಗಿನ ಶಿಕ್ಷಣ ವ್ಯವಸ್ಥೆಯು ಶಾಸ್ತ್ರೋಕ್ತ ಪದ್ಧತಿಯಲ್ಲಿ ವಿಕಲವಾಗಿದ್ದರೆ, ಧ್ಯೇಯ ಉದ್ದೇಶಗಳಲ್ಲಿ ಅದು ಇನ್ನೂ ಹೆಚ್ಚು ವಿಕಲವಾಗಿದೆ. ಅದರ ಉದ್ದೇಶವೇನೆಂದರೆ, ಪರಕೀಯ ಆಳುವವರಿಗೆ, ತಮಗೂ ಜನಸಾಮಾನ್ಯರಿಗೂ ಮಧ್ಯಸ್ಥರಾಗಿ ಅಲ್ಪ ವೆಚ್ಚದಿಂದ ಆಡಳಿತ ಸೂತ್ರಗಳನ್ನು ನಡಿಸಿಕೊಂಡು ಹೋಗುವ ಆಡಳಿತೆಗಾರರ ವ್ಯವಸ್ಥೆಯೊಂದು ಬೇಕಿತ್ತು. ಇದಕ್ಕಿಂತಲೂ ಶ್ರೇಷ್ಠವಾದ ಉದ್ದೇಶವೊಂದಿತ್ತೆಂದು ಹೇಳುವದಾದರೆ, ಸುಶಿಕ್ಷಿತ ಹಿಂದಿಯರು ಆಂಗ್ಲೇಯರಿಗೆ ಮೈಯಮೇಲಿನ ತ್ವಚೆಯ ಬಣ್ಣ ಹಾಗೂ ನಾಡಿಗಳಲ್ಲಿ ಹರಿಯುವ ರಕ್ತ ಇವೆರಡನ್ನು ಬಿಟ್ಟು ಉಳಿದ ಎಲ್ಲ ರೀತಿಯಿಂದಲೂ ಸಮಸಮಾನರಾಗಬೇಕೆಂಬ ಉದ್ದೇಶವೇ ಅದು. ಹಿಂದೀ ಯುವಕರನ್ನು ಆಡಳಿತದ ಸೇವೆಗೆ ಅರ್ಹರಾಗುವಂತೆ ಮಾಡುವದಾದರೆ ಅಥವಾ ಆಂಗ್ಲೇಯರ ಪ್ರತಿ ಚಿತ್ರಗಳಂತೆ ಆಗಿಸಬೇಕಾಗಿದ್ದರೆ, ಇಂಗ್ಲೀಷು ಶಿಕ್ಷಣದ ಮಾಧ್ಯಮವಾಗಿರಬೇಕಾದುದು ಸ್ವಾಭಾವಿಕವೇ. ಪ್ರಾಥಮಿಕ ಮಟ್ಟದ ಮುಂದಿನ ಪ್ರತಿಯೊಂದು ವಿಷಯವನ್ನು ಇಂಗ್ಲೀಷದ ಮೂಲಕ ಕಲಿಸಲಾಗುತ್ತಿತ್ತು. ಇದು ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ರೂಪಿಸುವ ಮಹತ್ವದ ವಯಸ್ಸಿನ ಅವಧಿಯಲ್ಲಿ ಅವರ ಮೇಲೆ ಹೊರಲಾರದ ಭಾರವನ್ನು ಹೊರಿಸಿದಂತಾಯಿತು. ಹಿಂದೀಯರ ಪರಿಸರದಲ್ಲಿದ್ದು ಇಂಗ್ಲೀಷ ಭಾಷೆಯ ಸೂಕ್ಷ್ಮ ಪ್ರಯೋಗಗಳನ್ನು ಸ್ವಗತ ಮಾಡಿಕೊಳ್ಳಲು ತಮ್ಮ ಹಲವಾರು ಅಮೌಲ್ಯ ವರ್ಷಗಳನ್ನು ವ್ಯರ್ಥ ಕಳೆಯಬೇಕಾಗಿತ್ತು. ಇದರ ಪರಿಣಾಮವೇನಾಯಿತೆಂದರೆ, ಸಾಲೆ ಕಾಲೇಜುಗಳಲ್ಲಿ ಕಲಿಸಲಾಗುತ್ತಿದ್ದ ಬರಿಯ ತಾತ್ವಿಕ ಹಾಗೂ ಮೇಲ್ಮೇಲಿನ ಶಿಕ್ಷಣದ ಬಹುಭಾಗವನ್ನು ಅವರು ಅರಗಿಸಿಕೊಳ್ಳದೇ ಹೋದರು. ಅನ್ಯರ ವಿಚಾರಗಳ ಉಚ್ಛಿಷ್ಟವಲ್ಲದ ಸ್ವತಂತ್ರ ವಿಚಾರ ಶಕ್ತಿಯು ಅವರಲ್ಲಿ ಕ್ಷೀಣವಾಯಿತು; ನೂತನ ನಿರ್ಮಿತಿಯ ಪ್ರತಿಭೆಯು ಕುಂದಿತು. ಹೀಗಾಗಿ ಅವರು, ಸಾಮಾಜಿಕ ಹಾಗೂ ಸಾಂಸ್ಕೃತಿಕ ವಾತಾವರಣಕ್ಕೆ ಪರಂಪರಾಗತ ವಿಚಾರ ಸಂಪತ್ತಿಗೂ ಎರವಾದರು.

ಇದಲ್ಲದೆ ಪರಕೀಯ ಭಾಷೆಯ ಮುಖಾಂತರ ಕಷ್ಟದಿಂದ ಕಲಿತ ಅಲ್ಪ ಸ್ವಲ್ಪ ಜ್ಞಾನವು ಸಮಾಜಕ್ಕೆ ಪ್ರಯೋಜನಕಾರಿಯಾಗದೆ ಉಳಿಯಿತು. ಅದೇ ಸಾಮಾನ್ಯ ಜನರ ವರೆಗೆ ಮುಟ್ಟಲೇ ಇಲ್ಲ. ಕಲಿತವರ ಹಾಗೂ ಸಾಮಾನ್ಯ ಜನರ ನಡುವೆ ಅದು ಒಂದು ದಾಟಲಾಗದ ಕಂದಕವನ್ನು ನಿರ್ಮಿಸಿತು. ಅದೇಕೆ, ಈ ಒಡಕು ಒಂದೊಂದೇ ಮನೆತನದ ಒಳಕ್ಕೂ ಹರಡಲಾರಂಭಿಸಿತು. ಇಂಗ್ಲೀಷ ಕಲಿತವರು ತಮ್ಮ ಹಿರಿಯರ ಮತ್ತು ತಮ್ಮ ಮನೆಯೊಳಗಿನ ಹೆಂಣು ಮಕ್ಕಳ ಮಾತನ್ನು ತಿಳಿದುಕೊಳ್ಳದಾದರು. ಮತ್ತು ತಮ್ಮ ವಿಚಾರವನ್ನು ಅವರಿಗೂ ತಿಳಿಸಲು ಬಾರದಾದರು. ಅವರು ತಮ್ಮ ಕುಟುಂಬದಿಂದಲೂ ಸಮಾಜದಿಂದಲೂ ಉಚ್ಛಿನ್ನವಾಗಿ ಒಂದು ಕೃತ್ರಿಮ ಜೀವನವನ್ನು ನಡೆಸುವಂತಾದರು. ಅವರದೇ ಒಂದು ವರ್ಗವಾಯಿತು. ಈಗಲೂ ಅದು ದೊಡ್ಡ ನಗರಗಳ ಕ್ಷೇತ್ರವನ್ನು ವ್ಯಾಪಿಸಿದ ಒಂದು ವರ್ಗವಾಗಿದೆ. ವ್ಯಕ್ತಿಯ ಯೋಗ್ಯತೆಗಳನ್ನು ಬೆಳಿಸುವದೊಂದಲ್ಲದೆ ವಿದ್ಯಾಭ್ಯಾಸಕ್ಕೆ ಯಾವಾಗಲೂ ಸಾಮಾಜಿಕ ಪ್ರಯೋಜನೆ ಸಾಧನೆಯೂ ಒಂದಿದೆ. ಮಗುವಿನ ಶಿಕ್ಷಣವು ಅದರ ಜನನದೊಂದಿಗೆ ಆರಂಭವಾಗುವದು. ತಾಯಿಯು ಅದಕ್ಕೆ ಹೇಗೆ ಹೇಳಿಕೊಟ್ಟು ಕಲಿಸುವಳು ? ಅವಳು ಅದಕ್ಕೆ ಉಪಯುಕ್ತವಾದ ಮತ್ತು ಕೆಲಸಕ್ಕೆ ಬರುವ ಜ್ಞಾನವನ್ನು ನೀಡುವಳು? ಆ ಸಂಣ ಜೀವಕ್ಕೆ ಸಾಮಾಜಿಕ ಸಂಸ್ಕಾರವನ್ನು ಕೊಡುವಳು ? ಎಂದರೆ ಯಾವ ಸಾಮಾಜಿಕ ಗುಂಪಿನ ಒಂದು ಘಟಕವು ಅದು ಆಗಿದೆಯೋ ಆ ಗುಂಪಿನ ರೀತಿ ನೀತಿಗಳಿಗೆ ಆಚಾರ ವಿಚಾರಗಳಿಗೆ,—ಸಂಪ್ರದಾಯಗಳಿಗೆ, ಕುಂದು ಬಾರದಂತೆ ಮಗುವನ್ನು ಇಟ್ಟು ಬೆಳಿಸುವಳು. ಆಕೆಯು ಮಗುವಿಗೆ ಕೊಡುವ ಉಪಯುಕ್ತವಾದ ವ್ಯಾವಹಾರಿಕ ಜ್ಞಾನದಲ್ಲಿ ಸಹ ಸಾಮಾಜಿಕ ಬಾಂಧವ್ಯದ ಒಂದು ಸೂಕ್ಷ್ಮ ಅರಿವು ಇರುವದು. ವಿದ್ಯೆಯ ಸರ್ವ ಪ್ರಧಾನವಾದ ಧ್ಯೇಯವು ಶೀಲ ಸ್ವಭಾವವನ್ನು ರೂಪಿಸುವದೆಂದು ಮೇಲಿಂದ ಮೇಲೆ ಹೇಳುವದನ್ನು ಕೇಳಿದ್ದೇವೆ. ಒಂದು ಸಮಾಜವು ತನ್ನ ಮುಂದೆ ಹಾಗೂ ತನ್ನ ವ್ಯಕ್ತಿಗಳ ಮುಂದೆ ಯಾವ ಧ್ಯೇಯಗಳನ್ನು ಪ್ರಸ್ಥಾಪಿಸುವದೋ ಆ ದಿಸೆಯಲ್ಲಿಯೇ ಈ ಶೀಲ ಸಂವರ್ಧನೆಯು ನಡೆಯ ಬಲ್ಲದು. ಯೌಧೇಯ ಸಮಾಜವಿದ್ದರೆ ಯುದ್ಧ ನೀತಿಗೆ ಪುರಸ್ಕಾರವನ್ನು ಈಯುವದು. ಶಾಂತಿಪ್ರಿಯ ಸಮಾಜವು ತನ್ನ ಉದ್ದೇಶಗಳಿಗೆ ಸರಿಹೋಗುವರೀತಿ ನೀತಿಗಳಿಗೆ ಪ್ರಾಧಾನ್ಯವೀಯುವದು.

ಆದ್ದರಿಂದ ಪ್ರತಿಯೊಂದು ಸಂಘಟಿತ ಸಮಾಜವು ಅಥವಾ ರಾಷ್ಟ್ರವು ತನಗೆ ಅಗತ್ಯವಿರುವ ಪ್ರಯೋಜನೆಗಳಿಗೆ ಹೊಂದಿಕೊಳ್ಳುವ ಶಿಕ್ಷಣ ವ್ಯವಸ್ಥೆಯನ್ನು ಅಸ್ತಿತ್ವದಲ್ಲಿ ತಂದುಕೊಳ್ಳುವದು; ಈ ಶಿಕ್ಷಣವು ಅದರ ಅಸಾಧಾರಣ ವಿಶಿಷ್ಟ ಪ್ರತಿಭಾ ದೃಷ್ಟಿಗೂ ಅದರ ರೂಢಿಯಾಗಿ ಬೆಳೆದುಬಂದ ಸಂಸ್ಕೃತಿಗೂ ಹೊಂದಿಕೊಳ್ಳುವಂಥದಿರುವದು. ವರ್ಣ ವ್ಯವಸ್ಥೆಯ ಆಧಾರದ ಮೇಲೆ ರಚಿತವಾದ ಪ್ರಾಚೀನ ಭಾರತದ ಸಮಾಜದಲ್ಲಿ ನಾಲ್ಕು ವರ್ಣಗಳು ಅವುಗಳ ಭಿನ್ನಪ್ರಯೋಜನ, ಕರ್ತವ್ಯಗಳು ಇದ್ದದರಿಂದ ಈ ಮೂಲಭೂತ ಸಮಾಜದ ಆದರ್ಶಕ್ಕನುಸರಿಸಿ ತನ್ನ ಶಿಕ್ಷಣ ವ್ಯವಸ್ಥೆಯನ್ನು ಅದು ಮಾಡಿಕೊಂಡಿತು. ಚೀನದ ಜನರು ಸಹಸ್ರಾರು ವರ್ಷಗಳಿಂದ ತಮ್ಮ ವಿಶಿಷ್ಟ ಪೌರ ನೀತಿ ಸಂಸ್ಕೃತಿಗನುಸರಿಸಿ ತಮ್ಮ ಶಿಕ್ಷಣವನ್ನು ಮಾಡಿಕೊಂಡಿದ್ದರು. ಪ್ರಾಚೀನ ಗ್ರೀಸದಲ್ಲಿಯ ಎರಡು ಮುಖ್ಯ ನಗರ ರಾಜ್ಯಗಳು ಬೇರೆ ಬೇರೆ ಶಿಕ್ಷಣ ವ್ಯವಸ್ಥೆಯನ್ನು ಮಾಡಿಕೊಂಡಿದ್ದವು. ಅಥೆನ್ಸದಲ್ಲಿ ಕಲೆ, ಸಾಹಿತ್ಯ ತತ್ವಜ್ಞಾನಗಳಿಗೆ ಪ್ರಾಶಸ್ತ್ಯವನ್ನಿತ್ತಿದ್ದರೆ ಸ್ಪಾರ್ಟಾದಲ್ಲಿ ಸೈನಿಕ ತರಬೇತಿಗೆ ಪ್ರಾಶಸ್ತ್ಯವಿದ್ದಿತು.

ಯಾವ ಕಾಲಕ್ಕೇ ಆಗಲಿ ಜಗತ್ತಿನ ಯಾವ ಭಾಗದಲ್ಲಿಯೇ ಆಗಲಿ ವ್ಯಾಪಕವಾದ ಕ್ರಾಂತಿಯೊಂದು ನಡೆದರೆ ಆ ಕ್ರಾಂತಿಯಿಂದ ಸ್ಥಾಪಿಸಬೇಕಾಗಿದ್ದ ನೂತನ ಸಮಾಜದ ಆದರ್ಶಗಳಿಗೆ ಸರಿ ಹೋಗುವಂತೆ ಶಿಕ್ಷಣದ ಏರ್ಪಾಟಾಗಿದೆ. ಧರ್ಮೋಪದೇಶಕರು ವಿಶ್ವಾಸವಿದ್ದ ಜನರೆದುರಿಗೆ ಇಟ್ಟ ಮತ್ತು ಹೊಸ ಸಮಾಜವು ಮುಂದಿಟ್ಟುಕೊಂಡ ಆದರ್ಶಗಳಿಗೆ ಸರಿ ಹೋಗುವಹಾಗೆ, ಹಳೆಯ ಶಿಕ್ಷಣ ಪದ್ಧತಿಯನ್ನು ಬದಲು ಮಾಡಿ ಜಗತ್ತಿನ ಎಲ್ಲ ದೊಡ್ಡ ಧರ್ಮಗಳು ಹೊಸ ಶಿಕ್ಷಣ ಸಂಸ್ಥೆಯನ್ನು ರೂಢಿಯಲ್ಲಿ ತಂದವು. ಪಾಶ್ಚಾತ್ಯ ದೇಶಗಳ ಆಧುನಿಕ ಔದ್ಯೋಗಿಕ ಕ್ರಾಂತಿಯು ಹೊಸ ಜೀವನ ಮೌಲ್ಯಗಳನ್ನು ಮನ್ನಿಸಿ ಹೊಸ ದೃಷ್ಟಿಕೋನವನ್ನಿಟ್ಟುಕೊಂಡು ಭಂಡವಲ ಶಾಹಿ ಸಮಾಜದ ಅಗತ್ಯಗಳಿಗೆ ಸರಿಹೋಗುವಂತೆ ಶಿಕ್ಷಣ ವ್ಯವಸ್ಥೆಯನ್ನು ಪರಿವರ್ತಿಸಿದೆ.

ವರ್ಗರಹಿತ ಸಮಾಜದ ತನ್ನ ಆದರ್ಶಕ್ಕನುಸಾರವಾಗಿ ಕಮ್ಯುನಿಸ್ಟ ರಶ್ಯವು ಝಾರಿಸ್ಟ್ ರಶ್ಯದ ಶಿಕ್ಷಣ ಕ್ರಮವನ್ನು ಆ ಮೂಲಾಗ್ರವಾಗಿ ಬದಲು ಮಾಡಿಕೊಂಡಿತು. ಸೋವ್ಹಿಯಟ್ ರಶಿಯಾದಲ್ಲಿ ಲೆನಿನ್ನನು ವಿದ್ಯಾಭ್ಯಾಸದ ಬೃಹತ್ತಂತ್ರೀಕರಣವನ್ನು ಕುರಿತು ಮಾತಾಡುವಾಗ, "ನಾನು ಹೇಳುವದು ಕೇವಲ ವಿದ್ಯೆಗೆ ಸಂಬಂಧಿಸಿರದೆ ಅದೊಂದು ರಾಜಕೀಯ ಹಾಗೂ ಸಾಮಾಜಿಕ ಪ್ರಶ್ನೆಯಾಗಿದೆ—ಸಮಾಜದ ಆಮೂಲಾಗ್ರ ಪರಿವರ್ತನಕ್ಕೆ ಸಂಬಂಧಿಸಿದ್ದಾಗಿದೆ." ಎಂದು ತಿಳಿಸಿ ಹೇಳಿದನು. ಆ ಹೊಸ ಶಿಕ್ಷಣವು ಒಂದು ಶಿಕ್ಷಣ ತಂತ್ರವೂ ಆಗಿತ್ತು, ಹೊಸದೊಂದು ವಿದ್ಯಾಭ್ಯಾಸದ ವ್ಯವಸ್ಥೆಯೂ ಆಗಿತ್ತು. ವ್ಯವಸ್ಥೆಯ ದೃಷ್ಟಿಯಿಂದ ಅದು ವಿದ್ಯೆಗೂ ಜೀವನಕ್ಕೂ ಒಂದು ಸಾಮರಸ್ಯವನ್ನು ತರುವದಕ್ಕೆ ಪ್ರಯತ್ನಿಸಿತು. ಪದ್ಧತಿ ಅಥವಾ ತಂತ್ರದ ದೃಷ್ಟಿಯಿಂದ ಅದು ದೇಶದ ಮಕ್ಕಳು ಸಮಾಜದ ಹಿತಕ್ಕಾಗಿ ಕುಶಲ ಕೆಲಸಗಾರರಾಗಿ ಬುದ್ಧಿವಂತಿಕೆಯಿಂದ ದುಡಿಯುವವರಾಗುವಂತೆ ತರಬೇತಿಯನ್ನು ಕೊಟ್ಟಿತು. ಕೆಲಸಗಾರನು ತನ್ನ ಕೆಲಸವನ್ನು ತಿಳಿದುಕೊಂಡು ಮತ್ತು ಕಮ್ಯುನಿಸ್ಟ ಸಮಾಜದ ಅದರ ಮೌಲ್ಯವನ್ನೂ ಮಹತ್ವವನ್ನೂ ಅರಿತು ದು[illegible] ಯುವವನು; ತಾತ್ವಿಕ ಮತ್ತು ವ್ಯಾವಹಾರಿಕ ಅಂಗಗಳು ಅಲ್ಲಿ ಒಂದಕ್ಕೊಂದು ಏಕಜೀವವಾಗಿ ಹೊಂದಿಕೊಂಡಿವೆ.

ನಮ್ಮ ದೇಶಕ್ಕೆ ಬರೋಣ, ಸ್ವಾತಂತ್ರ್ಯಕ್ಕಾಗಿ ಕೈಕೊಂಡ ರಾಷ್ಟ್ರೀಯ ಹೋರಾಟದ ಪ್ರತಿಯೊಂದು ಅಂಗವೂ ಯುವಕ ಯುವತಿಯರ ವಿದ್ಯಾಭ್ಯಾಸದ ಪ್ರಶ್ನೆಯನ್ನು ಬಿಡಿಸಲಿಕ್ಕೆ ಹೆಚ್ಚಾಗಿ ಹೆಣಗಿತು. ಆರ್ಯ ಸಮಾಜವು ತನ್ನ ಪ್ರಾಚೀನ ಪರಂಪರೆಯನ್ನು ಉಳಿಸಿಕೊಳ್ಳಲು ಗುರುಕುಲಗಳನ್ನು ಸ್ಥಾಪಿಸಿತು. ವಂಗ ವಿಭಜನೆಯ ನಂತರ ಚಳುವಳಿಯ ರಾಷ್ಟ್ರೀಯ ನೇತಾರರು ರಾಷ್ಟ್ರೀಯ ಶಿಕ್ಷಣದ ಒಂದು ವ್ಯವಸ್ಥೆಯನ್ನು ಶೋಧಿಸಿದರು. ೧೯೦೭ ರಲ್ಲಿ ನಡೆದ ಸುರತ ಕಾಂಗ್ರೆಸ್ಸಿನಲ್ಲಿ ಉಗ್ರವಾದಿಗಳಿಗೂ ಸೌಮ್ಯ ವಾದಿಗಳಿಗೂ ನಡೆದ ವಿವಾದದಲ್ಲಿ ಇದೂ ಒಂದು ಮತಭೇದದ ವಿಷಯವಾಗಿತ್ತು. ಮಿಸೆಸ್ ಬೆಜಂಟಳು ಸ್ಥಾಪಿಸಿದ ಹೋಮ್-ರೂಲ್ ಚಳುವಳಿಯು ತನ್ನದೇ ಆದ ಒಂದು ರಾಷ್ಟ್ರೀಯ ಶಿಕ್ಷಣ ಪದ್ಧತಿಯನ್ನು ಹಿಡಿದು ಹೊಸ ಸಾಲೆ ಕಾಲೇಜುಗಳನ್ನು ಪ್ರಾರಂಭಿಸಿತು.

೧೯೨೦ ರಲ್ಲಿ ಗಾಂಧೀಜಿಯವರು ಪರಕೀಯ ಸಾಲೆ ಕಾಲೇಜುಗಳನ್ನು ಬಿಟ್ಟು ಬಿಡಲಿಕ್ಕೆ ವಿದ್ಯಾರ್ಥಿಗಳಿಗೆ ಕ[illegible]ಯನ್ನಿತ್ತರು; ಬಿಟ್ಟು ಬಂದವರಿಗಾಗಿ ರಾಷ್ಟ್ರೀಯ ಶಾಲೆಗಳನ್ನೂ ವಿದ್ಯಾಪೀಠಗಳನ್ನೂ ತೆರೆಯಿಸಿದರು. ಶಿಕ್ಷ

ದಲ್ಲಿ ಅದರ ಕೊನೆಯ ಪ್ರಯೋಗಗಳು ನಯಿ ತಾಲಿಮ್ ವ್ಯವಸ್ಥೆಗೆ ಜನ್ಮವಿತ್ತವು; ಭಾರತದ ಸಾಮಾಜಿಕ ಪುನರ್ರಚನೆಯ ವಿಷಯದಲ್ಲಿ ಅವರು ಸುದೀರ್ಘ ವಿಚಾರಾಂತ್ಯದಲ್ಲಿ ಮಾಡಿಕೊಂಡ ಕಲ್ಪನೆಯ ಫಲವೇ ಈ ನಯಿ ತಾಲಿಮ್ ಅಥವಾ ಮೂಲ ಶಿಕ್ಷಣ. ವರ್ಗರಹಿತ ಜಾತಿ ರಹಿತ ಸಮಾಜ ವ್ಯವಸ್ಥೆಯ ಅಗತ್ಯದ ಬೇಡಿಕೆಗಳಿಗಾಗಿ ಅವರು ಕೈಗಾರಿಕೆಯ ಪದ್ಧತಿಯನ್ನು ಸೂಚಿಸಿದರು; ಈ ಸಮಾಜದಲ್ಲಿ ಅನನ್ಯಗತಿಕದಿಂದ ಅನ್ಯಾಯದಿಂದ ಲಾಭ ಪಡೆಯುವ ಪ್ರವೃತ್ತಿ ಇರಕೂಡದು; ಅಹಿಂಸೆಯೇ ಅದರ ಧರ್ಮವಾಗಬೇಕು. ಅದರಲ್ಲಿ ಕೃಷಿ, ಉದ್ಯೋಗ ಆಡಳಿತ ಇವು ಮೂರು ವಿಕೇಂದ್ರೀಕೃತವಾಗಬೇಕು, ಇಂಥಹ ಸಮಾಜದ ಅಗತ್ಯಗಳಿಗಾಗಿ ಅವರು ಮೂಲ ಶಿಕ್ಷಣವನ್ನು ಸೂಚಿಸಿದರು.

ಈಗ ಅಧಿಕಾರದಲ್ಲಿದ್ದ ರಾಜಕಾರಣಿಗಳು ಗಾಂಧೀಜಿಯವರ ಭವಿಷ್ಯದ್ಭಾರತ ಸಮತಾವಾದಿ ಸ್ವರೂಪ ಸಾಮಾಜಿಕ ಪುನರ್ರಚನೆಯ ವಿಚಾರವನ್ನು ಆಗ ತಾತ್ವಿಕವಾಗಿ ಸ್ವೀಕರಿಸಿದರೂ ಮತ್ತು ಮೂಲ ಶಿಕ್ಷಣದ ಪದ್ಧತಿಯ ಶಾಸ್ತ್ರೀಯ ಸ್ವರೂಪವನ್ನು ಒಪ್ಪಿದರೂ ಹೆಚ್ಚಾಗಿ ಅವರ ಮನಸ್ಸನ್ನು ಕಲಕುತ್ತಿದ್ದ ಪ್ರಶ್ನೆಯು ಪರಕೀಯರ ಆಳಿಕೆಯನ್ನು ಕೊನೆಗಾಣಿಸಬೇಕೆಂಬದಾಗಿತ್ತೇ ವಿನಾ ಮೂಲಭೂತ ಸಾಮಾಜಿಕ ಕ್ರಾಂತಿಯ ವಿಚಾರವಾಗಿರಲಿಲ್ಲವೆಂದು ತೋರುವದು. ಇದುವರೆಗೂ ನಮ್ಮ ದೇಶದಲ್ಲಿದ್ದ ಪರಿಸ್ಥಿತಿಯೆಂದರೆ ಸಾಲೆ ಕಾಲೇಜುಗಳ ಮೂಲಕ ವಿತರಣವಾಗುವ ಮೇಲೆ ಮೇಲಿನ ಶಿಕ್ಷಣವು ಶತಕಾನುಶತಕಗಳಿಂದ ಜಾತಿವರ್ಣಗಳ ಹಿತವನ್ನು ಲಕ್ಷಿಸುವದಾಗಿದೆ. ಅದು ಮೇಲಿನ ವರ್ಗದ, ಶ್ರೇಷ್ಠ ಜಾತಿಯ ಕೆಲವೇ ಜನರಿಗಾಗಿ ಇತ್ತು; ಅವರು ಉಳುವವರೂ ಅಲ್ಲ, ನೂಲುವವರೂ ಅಲ್ಲ, ತಮ್ಮ ಕೈಗಳಿಂದ ಶ್ರಮಿಸುವವರೂ ಅಲ್ಲ, ಅಂತೆಯೇ ಭಾಂಡವಲ ಶಾಹಿ ದೇಶಗಳಲ್ಲಿ ಕೂಡ ಸಾರ್ವತ್ರಿಕ ಶಿಕ್ಷಣವನ್ನು ಪ್ರಾರಂಭಿಸಿದಾಗ, ಅದು ಪರಿಶ್ರಮ ಮಾಡುವ ಲಕ್ಷಾಂತರ ಜನರಿಗೆ ಕೇವಲ ಓದು ಬರೆಹ ಲೆಖ್ಖ ಇಷ್ಟಕ್ಕೆ ಮಾತ್ರ ಪರಿಸೀಮಿತವಾಗಿತ್ತು. ಉಚ್ಚ ಶಿಕ್ಷಣವು ಸಿರಿವಂತರ ಹಾಗೂ ವಿರಾಮ ಸಮಯವುಳ್ಳ ವರ್ಗಗಳ ಜನರ ಮಕ್ಕಳಿಗಾಗಿ ಮೀಸಲಾಗಿತ್ತು.

ಕೈ ಕಸಬಿನ ಪದ್ಧತಿಯು ಶಾಸ್ತ್ರೋಕ್ತವಾಗಿದ್ದರೂ ಪ್ರಯೋಗಗಳಿಂದ ಯಶಸ್ವಿಯಾಗಿ ಕಂಡುಬಂದಿದ್ದರೂ ಯುರೋಪ ಅಮೇರಿಕೆಗಳಲ್ಲಿ ಅದನ್ನು ಅನುಷ್ಠಾನಕ್ಕೆ ತರಲಾಗಲಿಲ್ಲ; ಏತಕ್ಕೆಂದರೆ ಭಂಡವಾಳಶಾಹಿ ಸಮಾಜದಲ್ಲಿ ಅದಕ್ಕೆ ಅನುಕೂಲವಾದ ವಾತಾವರಣವಿರಲಿಲ್ಲ. ಇಂಥಹ ಸಮಾಜದಲ್ಲಿ ಪ್ರತಿಯೊಬ್ಬ ಉದ್ಯೋಗಸ್ಥನ ಕನಸಿನ ಸಾಮ್ರಾಜ್ಯವಾವದೆಂದರೆ ಒಳ್ಳೇ ಬಟ್ಟೆಬರೆಗಳನ್ನು ಹಾಕಿಕೊಂಡು ಗಣ್ಯವ್ಯಕ್ತಿಯೆನಿಸಿಕೊಂಡು ಮೆರೆಯುವದು ಮತ್ತು ಸಾಧ್ಯವಾದರೆ ಶಾರೀರಿಕ ಪರಿಶ್ರಮವನ್ನು ತಪ್ಪಿಸಿಕೊಳ್ಳಲು ಬರುವ ಮಟ್ಟಿಗಾದರೂ ಸಾಕಷ್ಟು ಹಣದ ಸಂಗ್ರಹ ಮಾಡುವದು. ಇದೇ ಆಗಿದೆ ರಶಿಯಾದಲ್ಲಿ ಈ ಕೈ ಕಸಬಿನ ಪದ್ಧತಿಯನ್ನು ರೂಢಿಯಲ್ಲಿ ತರಲು ಸಾಧ್ಯವಾಯಿತು. ಏಕೆಂದರೆ ಅದರ ಸಮಾಜದ ಆದರ್ಶವು ಶಿಕ್ಷಣ ತಂತ್ರಕ್ಕೆ ಅನುಗುಣವಾಗಿಯೇ ಇದೆ. ಅಲ್ಲಿ ಅದು ವಿದ್ಯಾಭ್ಯಾಸದ ಮಟ್ಟವನ್ನಾಗಲೀ ಉಚ್ಚ ಸಂಶೋಧನೆಯ ಮಟ್ಟವನ್ನಾಗಲೀ ಕುಗ್ಗಿಸಿಲ್ಲ.

ಈಗಿದ್ದ ಶಿಕ್ಷಣ ಪದ್ಧತಿಯಲ್ಲಿ ಬದಲು ಮಾಡಲು ನಾವು ಇಚ್ಛಿಸಿದ್ದಾದರೆ ಯಾವ ಸಾಮಾಜಿಕ ಕ್ರಾಂತಿಯನ್ನು ನಾವು ಹೇಗೆ ಸಾಧಿಸಬೇಕೆನ್ನುವೆವು ಎಂಬುದರ ಸುಸ್ಪಷ್ಟ ಕಲ್ಪನೆ ಮೊದಲು ನಮಗೆ ಬೇಕು.

ನಯಾ ಪೈಸಾ–ನಯೆ ಪೈಸೆ

ಲೇಖಕರು :- ಶ್ರೀ ರಾ. ರು. ಕುಪ್ಪಸದ M.A., B.T. ಮುಖ್ಯಾಧ್ಯಾಪಕರು ಸರಕಾರಿ ಕೃಷಿಶಾಲೆ, ಬಿಜಾಪುರ

— ೧ —

ಮಗು:– ಅಪ್ಪಾ, ನನಗೊಂದು ದುಡ್ಡು ಕೊಡು.

ಅಪ್ಪ:– ಇಕೊ ತಕ್ಕೋ. ಈ ದುಡ್ಡು. ಇದು ಹೊಸ ದುಡ್ಡು.

ಮಗು:– ಹೊಸ ದುಡ್ಡೇ ಇದು? ಎಷ್ಟು ಸಣ್ಣದಿದೆಯಲ್ಲ! ಈ ಸಣ್ಣ ದುಡ್ಡು ನಾನೊಲ್ಲೆ. ನನಗೆ ದೊಡ್ಡ ದುಡ್ಡನ್ನೇ ಕೊಡು.

ಅಪ್ಪ:– ಮೊದಲಿನ ದುಡ್ಡು ತಕ್ಕೊಂಡು ಏನು ಮಾಡುತ್ತೀ? ಬೇಡ ಮಗು. ತಕ್ಕೊ, ಬೇಕಾದರೆ

ಇನ್ನೊಂದು ಹೆಚ್ಚಿಗೆ ಕೊಡುತ್ತೇನೆ. ನಿನಗೆ ಎರಡು ದುಡ್ಡು ಸಿಕ್ಕವು, ಅಲ್ಲವೆ ? ಒಂದು ದುಡ್ಡಿನ ಬದಲಾಗಿ ಈ ಹೊಸ ಎರಡು ದುಡ್ಡು ತಕ್ಕೊ.

ಮಗು:- ಇವು ತೀರ ಸಣ್ಣವು ಅವೆ, ಅಪ್ಪಾ.

ಅಪ್ಪ:- ಆದ್ದರಿಂದಲೇ, ಒಂದು ದುಡ್ಡಿನ ಬದಲಾಗಿ ಎರಡು ದುಡ್ಡು ಕೊಟ್ಟಿದ್ದೇನೆ. ಇವು ಹೊಸ ದುಡ್ಡುಗಳು; ಇವು ಹೊಸ ನಾಣ್ಯಗಳು ನೋಡು. ಇದು ಒಂದು ನಯಾ ಪೈಸಾ; ಇವು ಎರಡು ನಯೆ ಪೈಸೆ.

ಮಗು:- ಅಲಲಾ ! ಇದೇನು ? ಇದಕ್ಕೆ ನಯೆ ಪೈಸಾ ಅನ್ನಬೇಕೆ ? ಅಪ್ಪಾ.

ಅಪ್ಪ:- ಹಾಗಲ್ಲ, ತಮ್ಮಾ. ನಯೆ ಪೈಸಾ ಅನ್ನಬೇಡ. ಒಂದು 'ನಯಾ ಪೈಸಾ' ಅನ್ನಬೇಕು; ಎರಡು ನಯೆ ಪೈಸೆ; ಮೂರು ನಯೆ ಪೈಸೆ, ಹೀಗೆ ಮುಂದೆ ಅನ್ನು; ನೋಡುವಾ,

ಮಗು:- ನಾಲ್ಕು ನಯೆ ಪೈಸೆ;
ಐದು ನಯೆ ಪೈಸೆ;
ಆರು ನಯೆ ಪೈಸೆ,........

ಅಪ್ಪ:- ಸರಿ ಸರಿ. ಈಗ ಲಕ್ಷಗೊಟ್ಟು ಹೇಳು. **ಸರಿ** ಅಥವಾ **ತಪ್ಪು** ಎಂಬದನ್ನು ಹೇಳು. ನೋಡೋಣ.
ಒಂದು ನಯೆ ಪೈಸಾ

ಮಗು:- ತಪ್ಪು ; ಒಂದು ನಯಾ ಪೈಸಾ.

ಅಪ್ಪ:- ಒಂದು ನಯಾ ಪೈಸೆ.

ಮಗು:- ತಪ್ಪು; ಒಂದು ನಯಾ ಪೈಸಾ.

ಅಪ್ಪ:- ಎರಡು ನಯಾ ಪೈಸಾ.

ಮಗು:- ಸರಿ.

ಅಪ್ಪ:- ಅಲ್ಲ, ಅಲ್ಲ. ತಪ್ಪಿದೆ. ಮರೆತೆ ಏನು ? ಎರಡು ನಯೆ ಪೈಸೆ. ಈಗ ಹೇಳು. ಎರಡು ನಯಾ ಪೈಸೆ.

ಮಗು:- ತಪ್ಪು ; ಎರಡು ನಯೆ ಪೈಸೆ.

ಅಪ್ಪ:- ಮೂರು ನಯೆ ಪೈಸಾ.

ಮಗು:- ಅಲ್ಲ; ಮೂರು ನಯೆ ಪೈಸೆ.

ಅಪ್ಪ:- ಐದು ನಯೆ ಪೈಸೆ.

ಮಗು:- ಸರಿ. ಐದು ನಯೆ ಪೈಸೆ.

ಅಪ್ಪ:- 'ನಯಾ ಪೈಸಾ' ಅಂದರೆ 'ಹೊಸ ದುಡ್ಡು' ಎಂದಂತೆ:

ಮಗು:- ಅದು ಹೇಗೆ ?

ಅಪ್ಪ:- ನಯಾ ಪೈಸಾ ಇದು ಹಿಂದೀ ಶಬ್ದ. ನಯಾ (नया) ಅಂದರೆ ಹೊಸ; ಪೈಸಾ (पैसा) ಅಂದರೆ ದುಡ್ಡು. ನಯಾ ಪೈಸಾ ಅಂದರೆ ಹೊಸ ದುಡ್ಡು ಇದು ಏಕ ವಚನ. ತಿಳಿಯಿತೇನು ? ನಯಾ ಪೈಸಾ ಇದರ ಬಹುವಚನ ಹೇಳು.

ಮಗು:- ನಯೆ ಪೈಸೆ; ಐದು ನಯೆ ಪೈಸೆ, ಆರು ನಯೆ ಪೈಸೆ. ಈಗಲೇ ಕಲಿತಿದ್ದೇನೆ, ಇದು ತಿಳಿಯಿತು. ನಯಾ ಪೈಸಾ—ಏಕ ವಚನ; ನಯೆ ಪೈಸೆ ಬಹು ವಚನ.

— ೨ —

ಅಪ್ಪ:- ತಮ್ಮಾ, ತಕ್ಕೊ, ಇಲ್ಲೊಂದು ನಾಣ್ಯ ಇದೆ. ಇದು ಎರಡು ನಯೆ ಪೈಸೆಯ ನಾಣ್ಯವು.

ಮಗು:- ಇದು ಸಣ್ಣದಾದ ಆಣೆಯಾಗಿದೆ; ಅಪ್ಪಾ.

ಅಪ್ಪ:- ಹೌದು, ಹೌದು. ಇದು ಚಿಕ್ಕ ಆಣೆ. ಇದರ ಬೆಲೆ ಎರಡೇ ನಯೇ ಪೈಸೆ. ಇಲ್ಲೊಂದು ಬೇರೆ ನಾಣ್ಯವಿದೆ. ನೋಡು.

ಮಗು:- ಎಲ್ಲಿ ? ನೋಡುವೆ. ಇದು ಸಣ್ಣ ಚೌಕ ಚವಲಿಯಾಗಿದೆ; ಅಪ್ಪ.

ಅಪ್ಪ:- ಸರಿ, ಸರಿ, ನೀನನ್ನುವದು ಸರಿ. ಇದರಲ್ಲಿ ಐದು ನಯೆ ಪೈಸೆಯ ನಾಣ್ಯ. ನೆನಪಿಡು. ಇದು ಚೌಕಾಗಿ ಇದೆ.

ಈಗ ಇದನ್ನು ನೋಡು; ಇದು ದೊಡ್ಡನಾಣ್ಯವಿದೆ

ಮಗು:- ಇದು ಮುರಿಗಿ ಪಾವಲಿಯಂತೇ ಅದೆ ? ಅಪ್ಪಾ.

ಅಪ್ಪ:- ನೀನು ಅಂದಂತೆ ಇದು ಮುರಮುರಗಿ ಪಾವಲಿಯಂತೆಯೇ ಅದೆ. ಹತ್ತು ನಯೆ ಪೈಸೆಯ ನಾಣ್ಯ. ಇದು ಹೊಸ ನಾಣ್ಯವೆ. ನೋಡು ನೆನಪಿಡು ಯಾವ ಯಾವ ಹೊಸ ನಾಣ್ಯ ನೋಡಿದಿ. ಹೇಳು, ನೋಡುವಾ.

ಮಗು:- ಇದು ಒಂದು ನಯಾ ಪೈಸಾ
ಇದು ಎರಡು ನಯೇ ಪೈಸೆ
ಇದು ಐದು ನಯೆ ಪೈಸೆ
ಇದು ಹತ್ತು ನಯೆ ಪೈಸೆ

ಅಪ್ಪ:- ಶಹಾಬಾಶ್; ನೀನು ಜಾಣನಿದ್ದಿ. ಎಲ್ಲವನ್ನೂ ನೆನಪಿಟ್ಟಿರುತ್ತೀ ಸಾಕು; ಈಗ ಇಷ್ಟು ನೆನಪಿ

ಟ್ಟರೆ ಸಾಕು. ಇನ್ನು ಅವುಗಳ ಆಕಾರ, ಬಣ್ಣ ಹೇಳು ನೋಡುವಾ.

ಮಗು:– ನಯಾ ಪೈಸಾ ದುಂಡಗೆ ಅದೆ; ಕೆಂಪಗೆ ಅದೆ. ಸಣ್ಣ ಚಂದಪ್ಪನಂತೆ ಅದೆ.

೨ ನಯೆ ಪೈಸೆ— ಮುರಮುರಗಿ ಅದೆ. ಬೆಳ್ಳಗೆ ಅದೆ.

೫ ನಯೆ ಪೈಸೆ—ಚೌಕ ಅದೆ; ಬೆಳ್ಳಗೆ ಅದೆ.

೧೦ ನಯೆ ಪೈಸೆ—ಮುರಮುರಗಿ ಅದೆ; ಬೆಳ್ಳಗೆ ಅದೆ.

ಅಪ್ಪ:– ಒಳ್ಳೇದು; ಇವು ನಾಲ್ಕು ಹೊಸ ನಾಣ್ಯಗಳು. ತಿಳಿಯಿತೇ. ೧ರೂ. ಗೆ ಈ ನಯೆ ಪೈಸೆ ೧೦೦ ಸಿಗುತ್ತವೆ. ತಿಳಿದುಕೊ.

ಮಗು:– ಅಂದರೆ, ಈಗ ೧ರೂ.ಗೆ ೬೪ ದುಡ್ಡುಗಳು. ಇನ್ನು ೧ರೂ.ಗೆ ೧೦೦ ಹೊಸ ದುಡ್ಡುಗಳು ಅಂದಂತಾಯಿತು. ಅಲ್ಲವೇ ಅಪ್ಪಾ.

ಅಪ್ಪ:– ಹೌದು ನೀನಂದದ್ದು ಸರಿ. ೧ರೂ ಗೆ ೧೦೦ ನಯೆ ಪೈಸೆ ಹಾಗಾದರೆ, ಒಂದು ಪಾವಲಿಗೆ ನಯೆ ಪೈಸೆ ಎಷ್ಟು ಹೇಳು.

ಮಗು:– ೨೫ ನಯೆ ಪೈಸೆ.

ಅಪ್ಪ:– ಎಂಟಾಣೆಗೆ ಎಷ್ಟು ನಯೆ ಪೈಸೆ ?

ಮಗು:– ಹೇಳಲಾ; ಅರ್ಧ ರೂಪಾಯಿಗೆ ೫೦ ನಯೆ ಪೈಸೆ.

ಅಪ್ಪ:– ಶಹಾಬಾಶ್; ನೀನು ಸರಿಯಾಗಿ ಉತ್ತರ ಕೊಟ್ಟೆ. ಇನ್ನೂ ಹೊಸ ನಾಣ್ಯ ಬರುವವಿವೆ. ಪಾವಲಿಯ ನಾಣ್ಯ, ಅರ್ಧ ರೂಪಾಯಿಯ ನಾಣ್ಯ ಹೊಸವು ಬರುವವು ಅವೆ ಅಂದರೆ, ೨೫ ನಯೆ ಪೈಸೆ, ೫೦ ನಯೆ ಪೈಸೆ ನಾಣ್ಯಗಳು ಬಂದ ಕೂಡಲೇ ತೋರಿಸುತ್ತೇನೆ. ನೋಡುವಿಯಂತೆ.

ಅವೂ ಬಂದ ಬಳಿಕ ಎಷ್ಟು ನಾಣ್ಯಗಳಾಗುವವು? ಹೇಳು?

ಮಗು:– ಏಳು.

ಅಪ್ಪ– ಅವು ಯಾವ ಯಾವವು ?

ಮಗು:– ಒಂದು ನಯಾ ಪೈಸಾ ನಾಣ್ಯ—೧ ನೆಯದು;

೨ ನಯೆ ಪೈಸೆ ನಾಣ್ಯ–೨ನೆಯದು;

೫ ನಯೆ ಪೈಸೆ ನಾಣ್ಯ–೩ನೆಯದು;

೧೦ ನಯೆ ಪೈಸೆ ನಾಣ್ಯ–೪ನೆಯದು;

೨೫ ನಯೆ ಪೈಸೆ ನಾಣ್ಯ–೫ನೆಯದು;

೫೦ ನಯೆ ಪೈಸೆ ನಾಣ್ಯ–೬ನೆಯದು;

ಕಡೆಗೆ ೧೦೦ ನಯೆ ಪೈಸೆ ನಾಣ್ಯ (ಒಂದು ರೂ.) ೭ನೆಯದು.

ಅಪ್ಪ:– ಈ ಮೊದಲಿನ ನಾಣ್ಯಗಳು ಎಷ್ಟು?

ಮಗು:– ೧ದುಡ್ಡು—೧ನೆಯದು

೨ದುಡ್ಡು—೨ನೆಯದು

೧ಆಣೆ—೩ನೆಯದು

ಚವಲಿ; ೨ಆಣೆ—೪ನೆಯದು

ಪಾವಲಿ; ೪ಆಣೆ—೫ನೆಯದು

ಅರ್ಧರೂಪಾಯಿ; ೮ಆಣೆ—೬ನೆಯದು

೧ರೂಪಾಯಿ —೭ನೆಯದು—ಅಪ್ಪಾ ;

ಈ ಮೊದಲಿಗೂ ಏಳೇ ನಾಣ್ಯಗಳಿವೆ ಅಲ್ಲವೇ ?

ಅಪ್ಪ:– ಹೌದು; ಹೌದು. ಅಂದ ಮೇಲೆ ನಿನಗೆ ನೆನಪಿಡಲಿಕ್ಕೆ ಒಳ್ಳೆಯದಾಯಿತಲ್ಲವೇ ? ಈಗ ಹೇಳು; ಯಾವ ನಾಣ್ಯದ ಬದಲಾಗಿ ಯಾವ ಹೊಸ ನಾಣ್ಯ ಬಂದಂತಾಯಿತು ?

ಮಗು:– ದುಡ್ಡಿನ ಬದಲು–ನಯಾ ಪೈಸಾ

೨ದುಡ್ಡಿನ ,, –೨ ನಯೆ ಪೈಸೆ.

೧ಆಣೆಯ ,, –೫ ನಯೆ ಪೈಸೆ.

೨ಆಣೆಯ ,, –೧೦ ನಯೆ ಪೈಸೆ.

೪ಆಣೆಯ ,, –೨೫ ನಯೆ ಪೈಸೆ.

೮ಆಣೆಯ ,, –೫೦ ನಯೆ ಪೈಸೆ

(ಒಂದುರೂ.) ೧೬ಆಣೆಯ ,, –೧೦೦ ನಯೆ ಪೈಸೆ.

ಮೊದಲೂ ಏಳು ನಾಣ್ಯಗಳು; ಈಗಲೂ ಏಳು ನಾಣ್ಯಗಳು. ಏಳು ವಾರಗಳಂತೆ–, ಏಳು ನಾಣ್ಯಗಳಿವೆ. ನನಗೆ ಪಕ್ಕಾ ನೆನಪುಳಿಯಿತು. ಇದನ್ನು ಮರೆಯಲಿಕ್ಕೆ ಶಕ್ಯವಿಲ್ಲ.

"ಗ್ರಾಮಸೇವಕ" ಎಂಬ ಇಂಗ್ಲೀಷ ಪತ್ರಿಕೆಯಲ್ಲಿಯ ಲೇಖನದ ಅನುವಾದ

ಅನುವಾದಕರು: ತಟ್ಟಿ ಶಾಮರಾಯರು (ನಿವೃತ್ತ ಪ್ರಿನ್ಸಿಪಾಲರು)

ಹಳ್ಳಿಯ ಜನರಿಗೆ ಉದ್ಯೋಗದ ವಿತರಣ

ನೂಲುವದು, ಗಾಣದ ಎಣ್ಣೆಯ ಉದ್ಯೋಗ, ಕುಂಬಾರಿಕೆ, ಚರ್ಮ ಹದಮಾಡುವದು ಇತ್ಯಾದಿ ಗ್ರಾಮೋದ್ಯೋಗಗಳನ್ನು ಕೆಲಸಗಾರರು ಪರಂಪರೆಯಿಂದ ಬಂದ ರೂಢಿಯ ಸಾಧನಗಳಿಂದ ಶತಕಾನುಶತಕಗಳವರೆಗೆ ನಡಿಸಿಕೊಂಡು ಬಂದಿದ್ದಾರೆ. ಆದರೆ ಅವರು ಒದಗಿಸುವ ವಸ್ತುಗಳನ್ನು ಕೊಳ್ಳುವ ಗಿರಾಕಿಗಳ ಸಂಖ್ಯೆಯು ತೀವ್ರವಾಗಿ ಕರಗುತ್ತ ನಡೆದಿದೆ. ಎಂಬದು ಎಲ್ಲರಿಗೂ ತಿಳಿದ ಮಾತು; ಅದೇ ನಮೂನೆಯ ಯಂತ್ರ ನಿರ್ಮಿತ ಸಾಮಾನುಗಳೊಡನೆ ಬೆಳೆಯುತ್ತಿರುವ ಸ್ಪರ್ಧೆಯನ್ನು ತಡೆಯುವದು ಅವರಿಗೆ ಬಹು ಕಷ್ಟವಾಗಿದೆ. ಅಭಿವೃದ್ಧಿ ಕಾರ್ಯಕ್ರಮವು, ಇತ್ತ ಬುನಾದಿಯ ಕಸಬುದಾರರು ಸುಧಾರಿಸಿದ ಸಲಕರಣೆಗಳಿಂದ ವಿಧಾನಗಳಿಂದ ತಮ್ಮ ಉತ್ಪಾದನೆಯನ್ನು ಹೇಗೆ ಹೆಚ್ಚಿಸಬಹುದು ಎಂಬ ಮಾರ್ಗವನ್ನು ಹುಡುಕುವದಲ್ಲದೇ ಅದಕ್ಕೆ ಬೇಕಾಗುವ ಬಂಡವಳ ಮತ್ತು ಪೇಟೆಯ ಸೌಕರ್ಯಗಳನ್ನು ದೊರಕಿಸಲು ಸಹಾಯ ಮಾಡುತ್ತದೆ; ಅದೇ ಕಾಲಕ್ಕೆ ಹಳ್ಳಿಯ ಜನರಿಗೆ ಪೂರಾ ಇಲ್ಲವೆ ಅರೆಉದ್ಯೋಗಗಳನ್ನಾದರೂ ಪೂರೈಸುವ ಗುರಿಯನ್ನಿಟ್ಟುಕೊಂಡಿರುತ್ತದೆ; ಇದಕ್ಕಾಗಿ ಅವರು ಬುನಾದಿಯ ಕಸುಬುಗಳಲ್ಲಾಗಲಿ ಅಥವಾ ಜೇನು ಸಾಕುವದು, ಕಬ್ಬಿನ ಬೆಲ್ಲ, ತಾಳಿಬೆಲ್ಲ ಮುಂತಾದ ಉದ್ಯೋಗಗಳಲ್ಲಾಗಲಿ ತೊಡಗಬೇಕು.

ಅಂಬರ ಚರಖ

೧೯೫೬ ನೆಯ ಇಸ್ವಿಯ ಮಧ್ಯದ ಸುಮಾರಿಗೆ, ನೂತನ, ನಾಲ್ಕು ಕದರಿನ, ಶೈಲಿನೂಲುವ, ಉಪಕರಣವಾದ ಈ ಅಂಬರ ಚರಖದಿಂದ ಆರ್ಥಿಕ ದೃಷ್ಟಿಯಿಂದಲೂ ತಾಂತ್ರಿಕ ದೃಷ್ಟಿಯಿಂದಲೂ ನಮ್ಮ ಅಪೇಕ್ಷಿತರಗಳ ಪೂರ್ತಿಯಾಗುವ ಸಾಧ್ಯಾಸಾಧ್ಯತೆಯನ್ನು ಸುದೀರ್ಘವಾಗಿ ಪರೀಕ್ಷಿಸಿ ಭಾರತ ಸರಕಾರವು ಈ ಚರಖಕೆ, ಒಂದು ಮಹತ್ವದ ಪಾತ್ರವನ್ನು ನಿರ್ದಿಷ್ಟ ಮಾಡಿತು. ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಗುರಿಯನ್ನು ಮುಟ್ಟಬೇಕಾದ ೧೭೦ ಕೋಟಿ ಗಜ ಬಟ್ಟೆಯ ಅಧಿಕ ಉತ್ಪಾದನೆಯಲ್ಲಿ ೩೦ ಕೋಟಿ ಗಜ ಬಟ್ಟೆಯನ್ನು ಅಂಬರ ಚರಖಗಳ ಮೇಲೆ ಸಹಸ್ರಾರು ಗ್ರಾಮೀಣ ಕುಟುಂಬಗಳಲ್ಲಿ ನೂತ ನೂಲಿನಿಂದ ತಯಾರಿಸಲಾಗುವದು.

೧೯೫೭ನೆಯ ಇಸ್ವಿ ಮಾರ್ಚದೊಳಗಾಗಿ ಮೊದಲನೆಯ ಹಂತವೆಂದು ೭೫,೦೦೦ ಚರಖಗಳನ್ನು ಬಳಕೆಯಲ್ಲಿ ತರಲಾಗುತ್ತಿದೆ. ೧೯೫೬ರ ನವಂಬರ ತಿಂಗಳದ ಕೊನೆ ಕೊನೆಗೆ ಆಗಲೇ ಸುಮಾರು ೩೦,೦೦೦ ಚರಖಗಳನ್ನು ತಯಾರ ಮಾಡಲಾಗಿತ್ತು. ೧೯೫೬-೫೭ ಇಸವಿಯಲ್ಲಿ ಹೊರಡಿಸಬೇಕೆಂಬ ೩೦ ತರಬೇತೀ ಸಂಸ್ಥೆಗಳೆಲ್ಲವೂ ಕೆಲಸವನ್ನು ಪ್ರಾರಂಭಿಸಿದ್ದವು. ಈ ವರ್ಷ ತೆರೆಯಬೇಕಾದ ೩೦೦ ತರಬೇತಿ ಹಾಗು ಉತ್ಪಾದನೆಯ ಕೇಂದ್ರಗಳ ಪೈಕಿ ೨೪೦ಕ್ಕಿಂತ ಹೆಚ್ಚು ಕಾರ್ಯಮಾಡಲಾರಂಭಿಸಿವೆ. ಸುಮಾರು ೨೦,೦೦೦ ನೂಲುವವರು ತಮ್ಮ ಹೆಸರು ಕೊಟ್ಟವರಿದ್ದು, ೧೬೦೦ ಕ್ಕಿಂತ ಮೇಲ್ಪಟ್ಟ ಬಡಗಿಗಳೂ ಅಧ್ಯಾಪಕರು ಕೆಲಸದಲ್ಲಿದ್ದರು.

ಅಂಬರ ನೂಲಿನಿಂದ ತಯಾರಾಗುವ ಖಾದಿ ಬಟ್ಟೆಯು ಸರಾಸರಿ ಒಂದು ಗಜಕ್ಕೆ ರೂ. ೧-೪-೦ ಬೆಲೆ ಬೀಳುವದೆಂದು ಅಂದಾಜ ಮಾಡಲಾಗಿದೆ, ಹಳೆಯ ಚರಖದಮೇಲೆ ನೂತನೂಲಿನಿಂದ ತಯಾರಿಸಿದ ಖಾದಿಯು ಸರಾಸರಿ ಒಂದು ಗಜಕ್ಕೆ ೨ರೂ. ಬೆಲೆ ಬೀಳುತ್ತದೆ. ಮುಂದಿನ ಆರ್ಥಿಕ ವರ್ಷದಲ್ಲಿ ಇನ್ನು ೨೦,೦೦೦ ಅಂಬರ ಚರಖಗಳನ್ನು ಕಾರ್ಯಕ್ಕೆಳಿಸಬೇಕೆಂದು ಸೂಚಿಸಲಾಗಿದೆ. ಆಸೆಯನಿಟ್ಟುಕೊಂಡಂತೆ ಈ ಕಾರ್ಯಕ್ರಮವು ಯಶಸ್ವಿಯಾದರೆ ಮುಂದಿನ ವರ್ಷ ಅಂಬರ ನೂಲಿನಿಂದಲೇ ೬ ಕೋಟಿ ಗಜ ಬಟ್ಟೆಯ ಪೂರೈಕೆಯಾಗುವದು.

ಉದ್ಯೋಗದ ವ್ಯಾಪ್ತಿಯ ಹೆಚ್ಚಳ

ಕಳೆದ ಮೂರು ನಾಲ್ಕು ವರ್ಷಗಳಲ್ಲಿ ಖಾದಿ ಉದ್ಯೋಗದ ಅಭಿವೃದ್ಧಿಯಲ್ಲಿ ಸಾಧಿಸಿದ ಪ್ರಗತಿಯ ಮೇಲಿಂದ ಈ ಕಾರ್ಯಕ್ರಮದ ಯಶಸ್ಸನ್ನು ಅದು ಹಳ್ಳಿಗಳಿಗೆ ಮಾಡುವ ಉಪಕಾರದ ಕಲ್ಪನೆಯನ್ನು ಮಾಡಬಹುದು. ಖಾದಿ ಬಟ್ಟೆಯ ಉತ್ಪಾದನೆಯು ೧೯೫೨–೫೩ ರಲ್ಲಿ ೧.೯೪ ಕೋಟಿ ರೂಪಾಯಿ ಇದ್ದದ್ದು, ೧೯೫೫–೫೬ ರಲ್ಲಿ ೪.೫ ಕೋಟಿ ರೂ.ಗೆ ಮುಟ್ಟಿದೆ. ಅದರಂತೆ ೧೯೫೩–೫೪ ರಲ್ಲಿ ಖಾದಿ ಉತ್ಪಾದನೆಯಲ್ಲಿ ತೊಡಗಿದ ಕೆಲಸಗಾರರ ಸಂಖ್ಯೆಯು ೨.೬ ಲಕ್ಷ ಇದ್ದುದು ೧೯೫೫-೫೬ರಲ್ಲಿ ೫.೫೭ ಲಕ್ಷಕ್ಕೆ ಏರಿದೆ. ಇದರಿಂದ ತಿಳಿಯುವದೇನಂದರೆ ಈ ಗ್ರಾಮೋದ್ಯೋಗದ ಉತ್ಪಾದನೆಯು ಅಲ್ಪಮಿತಿಯದಿದ್ದರೂ ಅದು ಉದ್ಯೋಗವನ್ನು ಕೊಡುವ ಜನಸಂಖ್ಯೆಯ ಪ್ರಮಾಣವು ಸಂಘಟಿತ ವಸ್ತ್ರೋದ್ಯಮವು ಉದ್ಯೋಗವನ್ನು ನೀಡುವ ಪ್ರಮಾಣಕ್ಕಿಂತ ಹೆಚ್ಚಾಗಿದೆ.

ಇತರ ಗ್ರಾಮೋದ್ಯೋಗಗಳ ಅಭಿವೃದ್ಧಿಯ ಕಾರ್ಯಕ್ರಮದಲ್ಲಿ, ಗ್ರಾಮೋದ್ಯೋಗಗಳು ಸಂಘಟಿತ ಉದ್ಯಮದ ವಸ್ತುಗಳೊಂದಿಗೆ ಸ್ಪರ್ಧಿಸಲು ಸಾಧ್ಯವಾಗುವಂತೆ ಅವುಗಳಿಗೆ ಸಹಾಯ ಧನವನ್ನು ನೀಡುವ ವ್ಯವಸ್ಥೆ ಇದೆ; ಮತ್ತು ಸಾಧ್ಯವಿದ್ದ ಮಟ್ಟಿಗೆ ಅವುಗಳಿಗೆ ಸುಧಾರಿಸಿದ ಸಲಕರಣೆಗಳನ್ನೂ ವ್ಯಾಪಾರದ ಸಾಧನಗಳನ್ನೂ ಒದಗಿಸುವ ವ್ಯವಸ್ಥೆಯೂ ಇದೆ. ಕೆಲಸಗಾರರನ್ನು ಕೂಡ ಸಹಕಾರಿ ಸಂಘಗಳಲ್ಲಿ ಉತ್ಪಾದನೆ ಮತ್ತು ಮಾರಾಟಕ್ಕಾಗಿ ಸಮಾವೇಶ ಮಾಡಲಾಗುತ್ತಿದೆ.

ಈ ವರ್ಷದ ಎಣ್ಣೆಯ ಗಾಣದ ಗ್ರಾಮೋದ್ಯೋಗದ ಕಾರ್ಯಕ್ರಮದಲ್ಲಿನ ಇನ್ನೂ ೭೫ ಹೆಚ್ಚು ಆದರ್ಶ ಪ್ರಾತ್ಯಕ್ಷಿಕೆ ಹಾಗೂ ಉತ್ಪಾದನೆಯ ಕೇಂದ್ರಗಳನ್ನು ತೆರೆಯುವದನ್ನು ಇಟ್ಟುಕೊಳ್ಳಲಾಗಿದೆ; ಈಗಾಗಲೇ ೧೦೫ ಕೇಂದ್ರಗಳಿವೆ. ಎರಡು ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗುವದು. ವರ್ಷದ ಅವಧಿಯಲ್ಲಿ ೨,೦೦೦ ಸುಧಾರಿಸಿದ ಗಾಣಗಳನ್ನು ಒದಗಿಸಲಾಗುವದು.

ಹಳ್ಳಿಗಳಲ್ಲಿಯ ಕುಂಬಾರಿಕೆ

ಹಳ್ಳಿಯ ಕುಂಬಾರರ ಉದ್ಯೋಗದ ಊರ್ಜಿತ ಸ್ಥಿತಿಗೆಂದು ಇಟ್ಟುಕೊಂಡ ಕಾರ್ಯಕ್ರಮವು ಮುಂಬಯಿಯಲ್ಲಿ, ಖಾನಪುರದಲ್ಲಿ ತರಬೇತಿ ಹಾಗೂ ಸಂಶೋಧನೆ ಕೇಂದ್ರ ಸಂಸ್ಥೆಯಲ್ಲಿ ತರಬೇತಿಯ ಸೌಕರ್ಯಗಳನ್ನು ಒದಗಿಸುತ್ತದೆ; ಇದಲ್ಲದೇ ಮೂರು ಪ್ರಾದೇಶಿಕ ತರಬೇತಿ ಕೇಂದ್ರಗಳಲ್ಲಿಯೂ ಈ ವ್ಯವಸ್ಥೆ ಇದೆ. ಸುಧಾರಿಸಿದ ತಾಂತ್ರಿಕ ವಿಧಾನವನ್ನೂ ಸಲಕರಣೆಗಳನ್ನೂ ಪ್ರಾತ್ಯಕ್ಷಿಕೆಯಿಂದ ತಿಳಿಸಲಿಕ್ಕೆಂದು ೧೨೦ ಜನರು ಹಳ್ಳಿಗಳಲ್ಲಿ ಸಂಚಾರ ಕೈಕೊಂಡಿದ್ದಾರೆ; ಅವರು ಸ್ಥಳೀಯ ಕುಂಬಾರರಿಗೆ ಈ ನೂತನ ವಿಧಾನಗಳನ್ನು ಕಲಿಸಲಿದ್ದಾರೆ. ಇದಲ್ಲದೆ ೯೦೦ ಸುಧಾರಿಸಿದ ತಿಗರಿಗಳನ್ನೂ ಹಾಗೂ ಪೈಪುಗಳನ್ನೂ ವಿಶಿಷ್ಟ ಮಾದರಿಯ ಹಂಚುಗಳನ್ನು ತಯಾರಿಸಲಿಕ್ಕೆ ಬೇಕಾಗುವ ಅಚ್ಚುಪಡಿಯ ೫೦ ಸೆಟ್ಟುಗಳನ್ನು ಒದಗಿಸಲಾಗುತ್ತಿದೆ. ಕುಂಬಾರರಿಗೆ ಬೇಕಾಗುವ ಇತರ ಸುಧಾರಿಸಿದ ಸಾಧನಗಳೆಂದರೆ ಬೆಂಕಿಗೆ ಆದಾಹ್ಯವಾದ ಭಟ್ಟಿಯ ಮನೆಗಳು, ಛಪ್ಪರದ ಹಂಚುಗಳನ್ನು, ನೆಲಕ್ಕೆ ಕೂಡಿಸುವ ಹಂಚುಗಳನ್ನು, ಆಟಿಗೆ ಮುಂತಾದ ಇತರ ವಸ್ತುಗಳನ್ನು ತಯಾರಿಸುವ ತಿರುಗಣಿಗೆಯಿಂದ ಒತ್ತಿ ಮಾಡಿಸುವ ಪ್ರೆಸ್ಸುಗಳು, ಇವೇ ಆಗಿವೆ.

ಅಲ್ಲಲ್ಲಿ ತೊಗಲನ್ನು ಸುಲಿಯುವ ಕೇಂದ್ರಗಳನ್ನು ಮಾದರಿಯ ಚರ್ಮ ಹದಮಾಡುವ ಸ್ಥಳಗಳನ್ನು, ಎಲಬುಗಳನ್ನೂ ಪುಡಿಮಾಡುವ ಸುವ್ಯವಸ್ಥಿತ ಸಾಧನಗಳನ್ನೂ ಸ್ಥಾಪಿಸಿ ಹಳ್ಳಿಯ ಸಮಗಾರನಿಗೆ ಸಹಾಯ ನೀಡಲಾಗುವದು. ಈ ಕೇಂದ್ರಗಳಲ್ಲಿ ಉತ್ಪಾದನೆಯ ಆಧುನಿಕ ತಂತ್ರಗಳಲ್ಲಿ ತರಬೇತಿಯನ್ನು ಕೊಡಲಾಗುತ್ತಿದೆ. ತಾಳಿಬೆಲ್ಲದ ಉತ್ಪಾದನೆಗೆಂದು ತರಬೇತಿಯ ಸೌಕರ್ಯಗಳನ್ನು ಹೆಚ್ಚಿಸಲಾಗುತ್ತಿದೆ. ಇದಕ್ಕಾಗಿ ಒಂದು ಕೇಂದ್ರ ಸಂಸ್ಥೆಯಲ್ಲದೆ, ಮುಂದಾಗಿ ನಡಿಸಿ ತೋರಿಸುವ ನಾಲ್ಕು ಠಾಣ್ಯಗಳು ಮತ್ತು ಹಲವಾರು ತರಬೇತಿ ಹಾಗೂ ಉತ್ಪಾದನೆಯ ಸ್ಥಳಗಳು ಇವೆ. ಪ್ರಚಾರ ಪಥಕಗಳು ತಾಳಿಬೆಲ್ಲದ ಮತ್ತು ತಾಳಿಯ ಇತರ ವಸ್ತುಗಳ ಉತ್ಪಾದನೆಯ ರೀತಿಯನ್ನು ಪ್ರಯೋಗದಿಂದ ತಿಳಿಸಿ ಹೇಳುವ ಮತ್ತು ಜನರನ್ನು ಆ ವಸ್ತುಗಳನ್ನು ಬಳಿಸುವಂತೆ ಮನ ಒಲಿಸುವ ಕಾರ್ಯವನ್ನು ಮಾಡುತ್ತವೆ.

ಸಾಲೆಯಲ್ಲಿ ಕಸಬುಗಳು

ಇನ್ನೊಂದು ಕಾರ್ಯಯೋಜನೆಯ ಪ್ರಕಾರ, ೪,೦೦೦ಕೆಲಸಗಾರರಿಗೆ ಪೂರ್ಣಾವಧಿ ಉದ್ಯೋಗವನ್ನೂ, ಸುಮಾರು ಒಂದು ಲಕ್ಷ ಜನರಿಗೆ ಪರಿಮಿತ ಕಾಲಾ

ವಧಿಯ ಉದ್ಯೋಗವನ್ನು ಒದಗಿಸಲಾಗುತ್ತಿದೆ. ಈ ಯೋಜನೆಯೆಂದರೆ ಅಖಾದ್ಯ ತೈಲಗಳನ್ನು ಉಪಯೋಗಿಸುವ ಸಾಬೂನಿನ ಕುಟೀರ ಉದ್ಯೋಗ. ಈ ವರ್ಷ ೧೬೦ ಕ್ಕಿಂತ ಹೆಚ್ಚಾಗಿ ಎಣ್ಣೆ ತೆಗೆಯುವ ಮತ್ತು ಸಾಬೂನನ್ನು ತಯಾರಿಸುವ ಠಾಣ್ಯಗಳನ್ನು ಸ್ಥಾಪಿಸಲಾಗುವದು. ದೇಶದ ವಿವಿಧ ಭಾಗಗಳಲ್ಲಿಯ ಸುಮಾರು ೧೦೦ ಸಾಲೆಗಳಲ್ಲಿ ಅಖಾದ್ಯ ತೈಲಗಳಿಂದ ಸಬಕಾರದ ಕೈಗಾರಿಕೆಯನ್ನು ಉತ್ಪಾದಕ ಕೈಕಸಬೆಂದು ಪ್ರಾರಂಭಿಸಲಾಗುತ್ತಿದೆ.

ಜೇನು ಸಾಕುವ ಇನ್ನೊಂದು ಕಸಬು ಸಾಲೆಗಳಲ್ಲಿ ಪ್ರಾರಂಭಿಸಲಾಗುತ್ತಿದೆ. ಸುಶಿಕ್ಷಿತ ಗೃಹಸ್ಥರು ಮತ್ತು ಒಕ್ಕಲಿಗರು ಮಧುಮಕ್ಷಿಕ ಗೃಹಗಳನ್ನು ಇಡಲಿಕ್ಕೆ ಪ್ರೋತ್ಸಾಹ ಪಡೆಯುತ್ತಿದ್ದಾರೆ. ಕೃತಕ ಮಂದಿರಗಳಲ್ಲಿ ಜೇನುನೊಣಗಳನ್ನು ಇಟ್ಟು ಪಾಲನೆ ಮಾಡಲು ಇವರಿಗೆ ಶಿಕ್ಷಣ ಕೊಡಲಾಗುತ್ತಿದೆ. ಜೇನು ತುಪ್ಪವನ್ನು ಕೂಡಿಸಲಿಕ್ಕೆ ಜೇನು ಹುಟ್ಟುಗಳನ್ನು ನಾಶ ಮಾಡುವ ಹಳೆಯ ಪರಂಪರೆಯು ಹಾನಿಕರವಾದದ್ದು. ಯಾಕಂದರೆ ಅದರಿಂದ ಜೇನು ಹುಳುಗಳು ಸಾಯುವವಲ್ಲದೇ ಜೇನು ತುಪ್ಪವೂ ಕೆಡುವದು.

ಈ ರೀತಿ ನಮ್ಮ ಹಳ್ಳಿಗಳಲ್ಲಿ ನವಜೀವನವನ್ನು ತುಂಬಲಾಗುತ್ತಿದೆ. ಹಳ್ಳಿಗಳ ಉತ್ಪಾದನೆಯು ಸ್ಥಗಿತವಾದ ಮಟ್ಟವು ತಲೆ ಎತ್ತುತ್ತಿದೆ. ತಮ್ಮದೇನೂ ತಪ್ಪಿಲ್ಲದೇ ಕೆಲಸವಿಲ್ಲದೇ ಕುಳಿತ ಸೋಮಾರಿಗಳಿಗೆ ಕೆಲಸವನ್ನು ಕೊಟ್ಟು ದ್ರವ್ಯೋತ್ಪಾದನೆಯ ಹಳೆಯ ಕ್ರಮಗಳನ್ನು ಆಧುನಿಕ ಅಗತ್ಯಗಳಿಗೆ ಸರಿ ಹೋಗುವಂತೆ ಹೇಗೆ ತಿದ್ದಿಕೊಳ್ಳಬೇಕೆಂಬದನ್ನು ಕಲಿಸಲಾಗುತ್ತಿದೆ.

೨ನೆಯ ವಾರ್ಷಿಕ ಯೋಜನೆಯು ಹಳೆಯ ಖಾದಿಯ ಮೇಲೆಯೇ ೧೬.೭ ಕೋಟಿ ರೂಪಾಯಿಗಳ ಖರ್ಚಿನ ವ್ಯವಸ್ಥೆ ಮಾಡಿದೆ. ಅಂಬರ ಚರಖದ ಕಾರ್ಯಕ್ರಮದ ಖರ್ಚಿನ ಮಟ್ಟವು ಇದಕ್ಕೂ ಮಿಗಿಲಾಗುವದು. ಖಾದಿಯನ್ನುಳಿದು ಇನ್ನಿತರ ಗ್ರಾಮೋದ್ಯೋಗಗಳ ಬೆಳವಣಿಗೆಗಾಗಿ ಈ ಯೋಜನೆಯು ಒಟ್ಟಾರೆ ೩೮.೮ ಕೋಟಿ ರೂಪಾಯಿ ವೆಚ್ಚ ಮಾಡಲಿದೆ. ಕಾರ್ಯದಲ್ಲಿ ತೊಡಗಿದ ಬಂಡವಲಕ್ಕೆಂದು ಸರಕಾರದವರು ತೆಗೆದಿಟ್ಟ ೨೧.೫ ಕೋಟಿ ರೂಪಾಯಿಯ ಖರ್ಚು ಬೇರೆಯೇ.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—
ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋಶಿ, ಮತ್ತು
ಶ್ರೀ. ಜಿ. ಡಿ. ಮಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. ಬೆಲೆ ೧-೧೨-೦ ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.
ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ವಾಯ್. ರಾಣೆ
ಪ್ರಕಾಶಕರು, ೩೪೩, ಕಸಬಾ ಪೇಟೆ, ಪುಣೆ.

೧೯೫೬ನೆಯ ಇಸವಿಯಿಂದ ಪ್ರಾರಂಭವಾಗುವ ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

ಶೇಲಾರ ಕೃತ

ಪ್ರಾಥಮಿಕ ಭೂಮಿತಿ

[ಕ್ಷೇತ್ರಫಲ-ಘನಫಲ ಸಹಿತ]

೪ ರಿಂದ ೭ನೆಯ ವರ್ಗದ ವರೆಗಿನ ವಿಷಯವನ್ನೆಲ್ಲ ಒಳಗೊಂಡಿದೆ.

ಬೆಲೆ : ೧ ರೂ. ೮ ಆಣೆ ಮಾತ್ರ

ದೊರೆಯುವ ಸ್ಥಳ :-
ಸಾಯಿ ಪಬ್ಲಿಶಿಂಗ್ ಹಾವುಸ್,
ವಿಜಯ ರೋಡ, ಧಾರವಾಡ.

ಕನ್ನಡ 'ವರ್ಧಪ್ರಾಯಿಜ' ಪರೀಕ್ಷೆ ೧೯೫೭

(ಮುಂಬಯಿ ಸರಕಾರದ ವಿದ್ಯಾಖಾತೆಯು ತಾ. ೪-೩-೧೯೫೪ರ ಗೊತ್ತುವಳಿ ನಂ CEF 1054 ಮತ್ತು ಪ್ರಕಟನೆಯ ಮೇರೆಗೆ)

೧. **ಪರೀಕ್ಷೆಯ ವಿಷಯುಗಳು** :- (೧) ವ್ಯಾಕರಣ ಮತ್ತು ಛಂದಸ್ಸು (೨) ಹಳಗನ್ನಡ ನಿಬಂಧ (೩) 'ಕನ್ನಡ ಬಾವುಟ'ದಿಂದ ಕವಿತೆಗಳು. (೪) ಹಳಗನ್ನಡದ ಗೊತ್ತಿದ್ದ ಗದ್ಯಸಂಗ್ರಹ (೫) ಹೊಸಗನ್ನಡ ನಿಬಂಧ. (೬) ೧೨ನೆಯ ಶತಮಾನದ ಕನ್ನಡ ಸಾಹಿತ್ಯ.

೨. **ಬಹುಮಾನ** :- ಈ ಮೊದಲು ಇದ್ದ ೮೦ ರೂಪಾಯಿಗಳ ಒಂದೇ ಬಹುಮಾನದ ಬದಲಾಗಿ ಇನ್ನು ಮುಂದೆ ಈಗ ೫೦ ಹಾಗೂ ೩೦ ರೂ. ಗಳ ಎರಡು ಬಹುಮಾನಗಳು ಕೊಡಲ್ಪಡುವವು. ಮೊದಲನೆಯ ಬಹುಮಾನ ಪಡೆಯುವ ಉಮೇದವಾರನಿಗೆ ಒಟ್ಟಿನಲ್ಲಿ ಕನಿಷ್ಟ ೧೦೦ಕ್ಕೆ ೭೫, ಎರಡನೆಯ ಬಹುಮಾನ ಪಡೆಯುವ ಉಮೇದವಾರನಿಗೆ ಒಟ್ಟಿನಲ್ಲಿ ಕನಿಷ್ಟ ೧೦೦ಕ್ಕೆ ೫೦ ಗುಣಗಳನ್ನು ದೊರೆಕಿಸಲೇಬೇಕು.. ಈ ಉಮೇದವಾರರು ಯಾವ ವಿಷಯದಲ್ಲಿಯೂ ಅಸಮಾಧಾನಕರವಾಗಿ ಕಡಿಮೆ ಗುಣಗಳನ್ನು ಪಡೆದು ನಾಪಾಸಾಗಿರಕೂಡದು. ಒಂದು ವೇಳೆ ಒಬ್ಬನಿಗಿಂತ ಹೆಚ್ಚು ಉಮೇದವಾರರು ಸಮಾನಗುಣಗಳನ್ನು ಪಡೆದು ಸಮಾಧಾನಕರವಾಗಿ ಪಾಸಾಗಿದ್ದರೆ ಬಹುಮಾನಗಳನ್ನು ಸರಿಯಾಗಿ ವಿಭಜಿಸಿ ಹಂಚಲಾಗುವುದು.

೩. **ಅರ್ಜಿ ಮಾಡತಕ್ಕ ಅವಧಿ** :- ಪರೀಕ್ಷೆಗೆ ಕೂಡ್ರಲಿಚ್ಛಿಸುವವರು ೧೯೫೭ ಅಗಸ್ಟ ೧ನೆಯ ತಾರೀಖಿನೊಳಗಾಗಿ ನಮ್ಮ ಕಚೇರಿಗೆ ಮುಟ್ಟುವಂತೆ ಅಪೇಕ್ಷಾಪತ್ರವನ್ನು ಕಳುಹಿಸತಕ್ಕದ್ದು.

೪. **ಪರೀಕ್ಷೆಯ ಸ್ಥಳ, ದಿವಸ ಹಾಗು ವೇಳೆ** :- ಧಾರವಾಡ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ಈ ಪರೀಕ್ಷೆಯು ೧೯೫೭ ನೆಯ ಇಸವಿ ಅಗಸ್ಟ ತಿಂಗಳಲ್ಲಿ ನಡೆಯುವದು. ತಾರೀಖು, ವೇಳೆ ಮೊದಲಾದವುಗಳನ್ನು ಹಿಂದಿನಿಂದ ಪ್ರಕಟಿಸಲಾಗುವುದು.

೫. **ಪ್ರಶ್ನೆ ಕಾಗದಗಳು** :- ಪ್ರತಿಯೊಂದು ಕಾಗದಕ್ಕೆ ೩ ಗಂಟೆ ಅವಧಿಯೂ ೧೦೦ ಗುಣಗಳೂ ಉಂಟು.

ಮೊದಲನೆಯ ಕಾಗದ:- ಹಳಗನ್ನಡ ನಿಬಂಧ ೪೦ ಗುಣಗಳು. ಹೊಸಗನ್ನಡ ನಿಬಂಧ ೬೦ ಗುಣಗಳು.

ಎರಡನೆಯ ಕಾಗದ :- ಕನ್ನಡ ಬಾವುಟದ ಕವಿತಾಭಾಗ ೫೦ ಗುಣಗಳು. ಹಳಗನ್ನಡದ ಗೊತ್ತಿದ್ದ ಗದ್ಯಸಂಗ್ರಹ ೫೦ ಗುಣಗಳು.

ಮೂರನೆಯ ಕಾಗದ :- ವ್ಯಾಕರಣ ಮತ್ತು ಛಂದಸ್ಸು ೫೦ ಗುಣಗಳು. ಹನ್ನೆರಡನೆಯ ಶತಮಾನದ ಕನ್ನಡ ಸಾಹಿತ್ಯ ೫೦ ಗುಣಗಳು.

ಕನ್ನಡಬಾವುಟದಲ್ಲಿಯ ಕವಿತಾ ವಿವರಣೆ :- (೧) ರಾಷ್ಟ್ರಕೂಟ ರಾಜನ ಶಾಸನ (ಪುಟ ೫) (೨) ಕನ್ನಡನಾಡಿನ ಚೆಲವು (ಪುಟ ೧೭ ರಿಂದ ೨೦ ಪೂರ್ಣ) (೩) ಬಸವಣ್ಣನವರ ಗುಣ (ಪುಟ ೪೫). (೪) ಮಹಾದೇವಿಯಕ್ಕ (ಪುಟ ೪೬-೪೯ ಪೂರ್ಣ) (೫) ಕನಕದಾಸರು (ಪುಟ ೫೯-೬೧ ಪೂರ್ಣ) (೬) ಅರುಣೋದಯ [ಪುಟ ೯೭] [೭] ಕರ್ಗಾಲದ ವೈಭವ [ಪುಟ ೧೦೦] [೮] ಕೊಡಗು [ಪುಟ ೧೦೨] [೯] ತೆಂಕಣ ಗಾಳಿಯಾಟ [ಪುಟ ೧೦೬] [೧೦] ಕುಮಾರವ್ಯಾಸ [ಪುಟ ೧೨೧] [೧೧] ಬೇಲೂರಿನ ಶಿಲಾಬಾಲಿಕೆಯರು [ಪುಟ ೧೨೬].

ಹಳಗನ್ನಡದ ಗೊತ್ತಿದ್ದ ಗದ್ಯ :- ಪಂಡಿತ ಮ. ಪ್ರ. ಪೂಜಾರರಿಂದ ಸಂಪಾದಿತ ದುರ್ಗಸಿಂಹನ **ಪಂಚತಂತ್ರ ಸಾರಮ್**

೧೨ ನೆಯ ಶತಮಾನದ ಸಾಹಿತ್ಯ :- ಕನ್ನಡ ಕವಿಚರಿತೆಯ ೧ನೆಯ ಭಾಗ ಮತ್ತು ಇದುವರೆಗೆ ಅಚ್ಚಾದ ಕನ್ನಡ ಸಾಹಿತ್ಯ ಇತಿಹಾಸದ ಗ್ರಂಥಗಳು.

ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ,
ಧಾರವಾಡ
ತಾ. ೨೭-೬-೫೭

ಎಸ್. ಪಿ. ಪಾಟೀಲ
ಪ್ರಿನ್ಸಿಪಾಲ, ಧಾರವಾಡ

ಪ್ರಾಯೋಗಿಕ ಶಾಲೆ ಮತ್ತು ಪ್ರಯೋಗ

ಲೇಖಕರು : ಶ್ರೀ ಸೀ. ರೇ. ಹಿರೇಮಠ, ಬಿ.ಎಸ್‌ಸಿ.,ಎಮ್‌.ಇಡಿ.

ಅಧ್ಯಾಯ ೨

ಪ್ರಯೋಗಕ್ಕಾಗಿ ಉಪಯೋಗಿಸಿದ ಶಾಲೆಯ ವಿವರಗಳು

ಈ ಪ್ರಯೋಗವನ್ನು ಧಾರವಾಡದ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಸಂಸ್ಥೆಯ ಪ್ರಾಯೋಗಿಕ ಶಾಲೆಯ ೧ನೆಯ ವರ್ಗದ ಎರಡು ವಿಭಾಗಗಳಲ್ಲಿ ಕೈಕೊಳ್ಳಲಾಯಿತು. ಧಾರವಾಡ ನಗರವು ಉತ್ತರ ಕರ್ನಾಟಕದ ವಿದ್ಯಾಕೇಂದ್ರವಿದ್ದು ೧೧ ಹಳ್ಳಿಗಳನ್ನು ಒಳಗೊಂಡಿದೆ. ಜಿಲ್ಹೆಯ ಸ್ಥಳವಾದರೂ ಪಟ್ಟಣ ಮತ್ತು ಹಳ್ಳಿಗಳ ಮಿಶ್ರ ವಾತಾವರಣವನ್ನು ಇಲ್ಲಿ ಕಾಣಬಹುದು. ಸಮುದ್ರ ಪಾತಳಿಯಿಂದ ೨೪೦೦ ಫೂಟು ಎತ್ತರದ ಮೇಲಿರು ಗುಡ್ಡಗಳಲ್ಲಿರುವದರಿಂದ ವರುಷದಲ್ಲೆಲ್ಲ ಆಲ್ಹಾದಕ ಹವೆಯಿದೆ.

ಈ ಪ್ರಾಯೋಗಿಕ ಶಾಲೆಯು ಸಪ್ತಾಪುರ ಭಾ ದಲ್ಲಿ ಇರುವದು. ಸೈದಾಪುರ, ಮಾಳಾಪುರ, ಸಪ್ತಾಪು ಮತ್ತು ಮಾಳಮಡ್ಡಿ ಭಾಗಗಳ ಮಕ್ಕಳೇ ಹೆಚ್ಚಾಗಿ ಈ ಶಾಲೆಗೆ ಬರುತ್ತಾರೆ. ಆದುದರಿಂದ ವಿವಿಧ ಜಾತಿ, ಉದ್ಯೋಗ, ಆರ್ಥಿಕ ಮತ್ತು ಶೈಕ್ಷಣಿಕ ಮಟ್ಟಗಳ ವಿದ್ಯಾರ್ಥಿಗಳನ್ನು ಈ ಶಾಲೆಯಲ್ಲಿ ಕಾಣಬಹುದು. ಕೆಳಗಿ ನಾಲ್ಕು ಕೋಷ್ಟಕಗಳಿಂದ ಈ ಮಾತು ಸ್ಪಷ್ಟವಾಗುವದು.

ಕೋಷ್ಟಕ ೧ : ಪಾಲಕರ ಉದ್ಯೋಗದನುಗುಣ ಮಕ್ಕಳ ವರ್ಗೀಕರಣ

ನೌಕರಿ	ವ್ಯಾಪಾರ	ಕೂಲಿ	ಕೈಕಸಬು	ಮನೆಗೆಲಸ	ಒಕ್ಕಲತನ	ಒಟ್ಟು
೨೭	೯	೫	೩	೨	೧	೪೭

೫೫% ಮಕ್ಕಳು ಸರಕಾರಿ ಇಲ್ಲವೆ ಖಾಸಗಿ ಸಂಸ್ಥೆಗಳಲ್ಲಿ ನವಕರದಾರರ ಮಕ್ಕಳಿದ್ದಾರೆ. ಯಾಕಂದರೆ ಈ ಸಾಲೆಯ ಸುತ್ತಲಿನ ಭಾಗಗಳಲ್ಲಿ ನವಕರದಾರರ ಕುಟುಂಬಗಳೇ ಹೆಚ್ಚಾಗಿ ನೆಲಸಿವೆ. ಒಕ್ಕಲಿಗರ ಕುಟುಂಬಗಳು ತೀರ ಕಡಿಮೆ ಇವೆ.

ಕೋಷ್ಟಕ ೨ : ಪಾಲಕರ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಮಕ್ಕಳ ವರ್ಗೀಕರಣ

ಮೇಲಿನ ವರ್ಗ	ಮಧ್ಯಮ ವರ್ಗ	ಕೆಳಗಿನ ವರ್ಗ	ಒಟ್ಟು
೧೨	೧೨	೨೩	೪೭

೫೦೦೦ ರೂ. ಗಿಂತ ಹೆಚ್ಚು ವಾರ್ಷಿಕ ಉತ್ಪನ್ನವಿರುವವರು ಮೇಲಿನ ವರ್ಗವೆಂದೂ ೨೦೦೦-೫೦೦೦ ರೂ. ಉತ್ಪನ್ನವಿರುವವರು ಮಧ್ಯಮ ವರ್ಗವೆಂದೂ ೧೦೦೦ ರೂ. ಗಿಂತ ಕಡಿಮೆ ಉತ್ಪನ್ನವಿರುವವರು ಕೆಳಗಿನ (ಬಡ) ವರ್ಗವೆಂದೂ ಗ್ರಹಿಸಲಾಗಿದೆ.

ಕೋಷ್ಟಕ ೩ : ಮಾತೃ ಭಾಷೆಯಂತೆ ಮಕ್ಕಳ ವರ್ಗೀಕರಣ

ಕನ್ನಡ	ಮರಾಠಿ ಮತ್ತು ಕೊಂಕಣಿ	ಉರ್ದು	ಒಟ್ಟು
೨೮	೧೮	೧	೪೭

ಮರಾಠಿ ಮತ್ತು ಕೊಂಕಣಿ ಜನರು ಮನೆಯಲ್ಲಿ ಮಾತೃ ಭಾಷೆಯನ್ನೂ, ಸುತ್ತಲಿನ ಜನರೊಡನೆ ಕನ್ನಡವನ್ನೂ ಮಾತಾಡುತ್ತಾರೆ. ಅದರಂತೆ ಮುಸಲ್ಮಾನರು ಮನೆಯಲ್ಲಿ ಉರ್ದು ಮತ್ತು ಹೊರಗಡೆ ಕನ್ನಡ ಮಾತಾಡುತ್ತಾರೆ. ಮಗುವಿನ ವಯಸ್ಸು ಮತ್ತು ಕನ್ನಡ ಮಾತಾಡುವ ಹುಡುಗರೊಡನೆ ಅವನ ಸಂಪರ್ಕ ಇವುಗಳ ಮೇಲೆ ಮರಾಠಿ ಕೊಂಕಣಿ ಮತ್ತು ಉರ್ದು ಮಕ್ಕಳ ಕನ್ನ

ಮಾತಾಡುವ ಸಾಮರ್ಥ್ಯವು ಅವಲಂಬಿಸಿದೆ. ಈ ವರ್ಗದ ಉರ್ದು ಹುಡುಗನಿಗೆ ಕನ್ನಡವೇ ಬರುತ್ತಿರಲಿಲ್ಲ.

ಕೋಷ್ಟಕ ೪ : ಪಾಲಕರ ಶೈಕ್ಷಣಿಕ ಪ್ರಗತಿಯ ಮೇಲಿಂದ ಮಕ್ಕಳ ವರ್ಗೀಕರಣ

ಮುಂದು ವರೆದವರು	ಮಧ್ಯಮ ವರ್ಗ	ಹಿಂದುಳಿದವರು	ಒಟ್ಟು
೬	೪೦	೧	೪೭

ಮಕ್ಕಳ ವಯಸ್ಸು:– ಪ್ರಯೋಗದ ಆರಂಭದಲ್ಲಿ ಈ ವರ್ಗದ ಮಕ್ಕಳ ಸರಾಸರಿ ವಯಸ್ಸು ೬ ವರುಷ ೪ ತಿಂಗಳು ಇತ್ತು. ಅವರಲ್ಲಿ ೫ ವರುಷದ ಕೆಳಗಿನವನು ಒಬ್ಬ, ೬ ವರುಷದ ಕೆಳಗಿನವರು ೨೩. ಹೀಗೆ ಯಾವದೇ ಪ್ರಾಥಮಿಕ ಶಾಲೆಯಲ್ಲಿ ಕಂಡು ಬರುವಂತೆ ವಿವಿಧ ವಯಸ್ಸಿನ ಗುಂಪುಗಳ ಮಕ್ಕಳಿದ್ದರು.

ಶಾಲೆಯಲ್ಲಿ ಶಿಕ್ಷಣದ ಸೌಕರ್ಯಗಳು

ಈ ಶಾಲೆಯನ್ನು ೧೯೪೮ರಲ್ಲಿ ಮೂಲಶಿಕ್ಷಣ ಶಾಲೆಯನ್ನಾಗಿ ಮಾರ್ಪಡಿಸಲಾಯಿತು. ನೂಲುವದು, ನೇಯುವದು, ಒಕ್ಕಲತನ ಮತ್ತು ಕೈತೋಟ ಇವು ಮೂಲೋದ್ಯೋಗಗಳಾಗಿವೆ. ೧ನೆಯ ವರ್ಗಕ್ಕಾಗಿ ಪ್ರತ್ಯೇಕವಾದ ಮಡಿಗಳನ್ನು ಕೊಡಲಾಗಿತ್ತು. ಆಡಲು ಶಾಲೆಯ ಸುತ್ತಲೂ ಬಯಲಿದೆ. ಗಂಡು ಹುಡುಗರಿಗಾಗಿ ಮಾತ್ರ ಪ್ರವೇಶವಿದೆ.

ಕೆಲಸದ ಅವಧಿಗಳು:– ಈ ಶಾಲೆಯು ಪ್ರತಿ ದಿನ ಮುಂಜಾನೆ ಮಧ್ಯಾಹ್ನ ಹೀಗೆ ಎರಡು ಒಪ್ಪತ್ತು ಕೆಲಸ ಮಾಡಿತು. ಒಂದು ವಾರದಲ್ಲಿ ೧ನೆಯ ವರ್ಗದ ಕೆಲಸದ ತಾಸುಗಳು ೨೮. ಮೂರನೆಯ ತ್ರೈಮಾಸಿಕದಲ್ಲಿ ಕೆಲಸದ ವೇಳೆಯನ್ನು ಬದಲಾಯಿಸಿ ೧೧-೧೫ ರಿಂದ ಸಾಯಂಕಾಲ ೫–೧೫ಕ್ಕೆ ತರಲಾಯಿತು. ಪ್ರತಿ ತಾಸಿನ ಕೊನೆಗೆ ೫ ಮಿನಿಟಿನ ಬಿಡುವು ಮತ್ತು ಮಧ್ಯಾಹ್ನದಲ್ಲಿ ೪೦ ಮಿನಿಟು ದೀರ್ಘ ಬಿಡುವು ಕೊಡಲಾಗುತ್ತಿತ್ತು.

ಶಿಕ್ಷಕರ ಕೆಲಸದ ಪ್ರಮಾಣ ಮತ್ತು ಅರ್ಹತೆ:– ಈ ವರ್ಗದ ಪ್ರತಿಯೊಂದು ವಿಭಾಗದಲ್ಲಿ ೨೭ ವಿದ್ಯಾರ್ಥಿಗಳು ಹಾಜರಿ ಪಟದ ಮೇಲೆ ಇದ್ದರೂ ೨೪ ಮತ್ತು ೨೩ ಹುಡುಗರು ಶಾಲೆಗೆ ಬರುತ್ತಿದ್ದರು. ಕಲಿಸುವದಲ್ಲದೇ ಪಾಳೀಪಾಠದ ಶಿಕ್ಷಕರಿಗೆ ಮಾರ್ಗ ದರ್ಶನ ಮಾಡುವದು ಅವರ ಪಾಠಗಳನ್ನು ನಿರೀಕ್ಷಿಸುವದು ಮತ್ತು ಸಲಹೆ ಸೂಚನೆಗಳನ್ನು ಕೊಡುವದು ಈ ವರ್ಗದ ಶಿಕ್ಷಕರ ಕೆಲಸವಾಗಿತ್ತು.

ಈ ಇಬ್ಬರು ಶಿಕ್ಷಕರಲ್ಲಿ ಒಬ್ಬರು ಮ್ಯಾಟ್ರಿಕ್ ಮತ್ತು ಬೇಸಿಕ್ ಟ್ರೇಂಡ, ಇನ್ನೊಬ್ಬರು ಮುಲಕೀ ಮತ್ತು ಬೇಸಿಕ್ ಟ್ರೇಂಡರಿದ್ದರು. ಇಬ್ಬರಿಗೂ ಒಟ್ಟು ೧೩ ವರುಷಗಳ ಕಲಿಸುವ ಅನುಭವವಿತ್ತು.

ಬ) ಈ ಪ್ರಯೋಗದಲ್ಲಿ ಇಡಲಾದ ರೆಕಾರ್ಡು (ಪತ್ರಿಕೆ)ಗಳು :– ಪ್ರಾಥಮಿಕ ಮತ್ತು ಪದವೀಧರ ಜೀವನ ಶಿಕ್ಷಣ ಕೇಂದ್ರಗಳಲ್ಲಿ ಅಧ್ಯಾಪಕನಾಗಿ ಕಾರ್ಯ ಮಾಡಿಯೂ ಮತ್ತು ಧಾರವಾಡದ ಮೂಲ ಶಿಕ್ಷಣ ಪ್ರಾಯೋಗಿಕ ಕ್ಷೇತ್ರದ ಶಾಲೆಗಳ ಮೇಲ್ವಿಚಾರಕನಾಗಿ ಕೆಲಸ ಮಾಡಿಯೂ ಪ್ರಾಯೋಗ ಶಾಲೆಗಳಲ್ಲಿ ಇಡಬೇಕಾದ ಪತ್ರಿಕೆಗಳು– ತಿಂಗಳದ, ವಾರದ ಮತ್ತು ದಿನದ ಅಭ್ಯಾಸದ ಅಂದಾಜ ಪತ್ರಿಕೆಗಳು– ಅವುಗಳ ಪರಿಶೀಲನೆ, ಪಾಠಗಳಲ್ಲಿ ಮಾರ್ಗದರ್ಶನ ಮತ್ತು ನಿರೀಕ್ಷಣೆ ಮುಂತಾದ ಕಾರ್ಯಗಳ ವಿವಿಧ ಅನುಭವಗಳು ನನಗಿದ್ದವು. ಈ ಅನುಭವಗಳ ಆಧಾರದ ಮೇಲೆ ಪ್ರಯೋಗದ ಪೂರ್ವ ಪೀಠಿಕೆಯನ್ನು (ಪ್ರಾಥಮಿಕ ಯೋಜನೆಯಲ್ಲಿ) ಹಾಕಲಾಯಿತು.

ಪ್ರಾಥಮಿಕ ಯೋಜನೆ:– ವಿವರವಾದ ಪ್ರಯೋಗವನ್ನು ಆರಂಭಿಸುವ ಮೊದಲು ೧೯೫೦ ಅಕ್ಟೋಬರದಿಂದ ೧೯೫೧ ಫೆಬ್ರುವರಿಯವರೆಗೆ ಒಂದು ಪ್ರಾಥಮಿಕ ಯೋಜನೆಯನ್ನು ಸಿದ್ಧಪಡಿಸಿ ಕಾರ್ಯಕಾರಿಮಾಡಿ, ನಿರೀಕ್ಷಿಸಿ ಪರಿಶೀಲಿಸಲಾಯಿತು. ಈ ರೀತಿ ಸಂಬಂಧಿಸಿದ ಶಿಕ್ಷಕರಿಗೆ ಪ್ರಯೋಗದ ವಿವಿಧ ಅಂಶಗಳಲ್ಲಿ ತರಬೇತಿ ಕೊಡಲಾಯಿತು. ಅಲ್ಲದೇ ನನ್ನ ಯೋಜನೆಗಳ ವ್ಯವಹಾರಿಕತೆಯನ್ನು ಪರೀಕ್ಷಿಸಲಾಯಿತು. ಯಾಕಂದರೆ ಈ ಬಗೆಯ ಪ್ರಯೋಗವು ತೀರ ಹೊಸದು. ಅದಕ್ಕೆ ಬೇಕಾದ ಮಾರ್ಗದರ್ಶನವು ಹೊರಗಿನಿಂದ ಸಿಗುವಂತೆಯೂ ಇರಲಿಲ್ಲ. ಆನಂತರ ೧೯೫೧ ಎಪ್ರಿಲದಿಂದ ವಿವರವಾಗಿ ಪ್ರಯೋಗವು ಆರಂಭವಾಯಿತು.

ಪತ್ರಿಕೆಗಳ ಪ್ರಕಾರ ಮತ್ತು ಸ್ವರೂಪ

ಒಟ್ಟು ೧೨ ಪತ್ರಿಕೆಗಳು ಇದ್ದವು–– ಸಾಗಿಸಬೇಕಾದ ಅಭ್ಯಾಸದ ಯೋಜನೆಗೆ ಸಂಬಂಧಿಸಿದವು ಎರಡು

ಸಾಗಿದ ಅಭ್ಯಾಸಕ್ಕೆ ಸಂಬಂಧಿಸಿದವು ಐದು ಉಳಿದವುಗಳು ನಿರೀಕ್ಷಣೆ ಕಾಲ ಕಾಲಕ್ಕೆ ಕೈಕೊಂಡ ಪರೀಕ್ಷೆ, ಪ್ರಯೋಗ ಕರ್ತನು ಮಾಡಿದ ನಿರೀಕ್ಷಣೆಗಳು, ಮಕ್ಕಳು ಕೇಳಿದ ಪ್ರಶ್ನೆಗಳು, ಮಕ್ಕಳ ಆರೋಗ್ಯ ಇವುಗಳಿಗೆ ಸಂಬಂಧಿಸಿದವು.

(೧) **ತಿಂಗಳ ಅಂದಾಜ ಪತ್ರಿಕೆ**:- ಇದು ತಿಂಗಳಲ್ಲಿ ಕೈಕೊಳ್ಳಬಹುದಾದ ಚಟುವಟಿಕೆ ಮತ್ತು ಅಭ್ಯಾಸದ ವಿಷಯಗಳ ಪೂರ್ವಯೋಜನೆ. ಇದರಲ್ಲಿ ೭ ಕೋಷ್ಟಕಗಳಿದ್ದು, ಮೊದಲಿನ ೫ ಕೋಷ್ಟಕಗಳು ಮೂಲೋದ್ಯೋಗ [ಉತ್ಪಾದಕ ಚಟುವಟಿಕೆ], ಸಾಮಾಜಿಕ ನೈಸರ್ಗಿಕ, ಆರೋಗ್ಯ ಆಟ ಮತ್ತು ಆಕಸ್ಮಿಕ ಚಟುವಟಿಕೆಗಳಾಗಿವೆ. ಆರನೆಯ ಕೋಷ್ಟಕದಲ್ಲಿ ಈ ಚಟುವಟಿಕೆಗಳಿಗೆ ಬೇಕಾಗುವ ಸಾಧನ ಸಾಮುಗ್ರಿಗಳನ್ನು ಮತ್ತು ೭ ನೆಯ ಕೋಷ್ಟಕದಲ್ಲಿ ಈ ಚಟುವಟಿಕೆಗಳಿಗೆ ಸಮವಾಯವಾಗಿ ಬರುವ ಭಾಷೆ, ಗಣಿತ, ಸಾಮಾನ್ಯವಿಜ್ಞಾನ ಸಮಾಜವಿಜ್ಞಾನ, ಕತೆ ಮುಂತಾದ ವಿಷಯಗಳ ಅಂದಾಜು ಇದೆ.

[೨] **ವಾರದ ಅಂದಾಜ ಪತ್ರಿಕೆ**:— ತಿಂಗಳ ಅಂದಾಜ ಪತ್ರಿಕೆಯ ಆಧಾರದಮೇಲೆ ತಯಾರಿಸಲಾದ ಹನ್ನೊಂದು ಕೋಷ್ಟಕಗಳಿಂದ ಕೂಡಿದ ಪತ್ರಿಕೆ ಇದು. ಸೋಮವಾರದಿಂದ ಶನಿವಾರದ ವರೆಗಿನ ಎಲ್ಲ ದಿವಸಗಳಲ್ಲಿ ಕೈಕೊಳ್ಳಬಹುದಾದ ಚಟುವಟಿಕೆ ವ ಬೇಕಾಗುವ ಸಾಧನ ಸಾಮುಗ್ರಿ, ಸಂಘಟನೆಯ ಯೋಜನೆ ಸಮವಾಯ ಜ್ಞಾನ ಮತ್ತು ಶಿಕ್ಷಕರ ಶರಾ ಇವುಗಳನ್ನು ಈ ಪತ್ರಿಕೆಯಲ್ಲಿ ಸ್ಪುಟವಾಗಿ ಕಾಣಬಹುದು.

(೩.) ಪೂರೈಸಿದ ಕೆಲಸದ ವಾರದ ಮತ್ತು ತಿಂಗಳ ಪತ್ರಿಕೆಗಳು

(ಅ) **ವಾರದ ಪತ್ರಿಕೆ**:—ಇದರಲ್ಲಿ ೧೦ ಕೋಷ್ಟಕಗಳಿದ್ದು ಕೈಕೊಂಡ ಚಟುವಟಿಕೆ, ಅದರ ಬಗ್ಗೆ ಮಕ್ಕಳ ಆಸ್ಥೆ, ಮಕ್ಕಳ ಮೇಲಾದ ಪರಿಣಾಮದ ಬಗ್ಗೆ ಶಿಕ್ಷಕರ ಅಭಿಪ್ರಾಯ, ಪೂರೈಸಿದ ಸಮವಾಯ ಜ್ಞಾನ ಇವುಗಳನ್ನು ದಿನದ ಕೊನೆಗೆ ಶಿಕ್ಷಕರು ಬರೆದಿಡಬೇಕಾಗುತ್ತಿತ್ತು.

(ಆ) **ಪೂರೈಸಿದ ಕೆಲಸದ ತಿಂಗಳ ಪತ್ರಿಕೆ**:- ಮೇಲಿನ ವಾರದ ಪತ್ರಿಕೆಗಳ ಆಧಾರದ ಮೇಲಿಂದ ಈ ತಿಂಗಳ ಪತ್ರಿಕೆಯನ್ನು ರಚಿಸಲಾಗಿತ್ತು. ಇದರಲ್ಲಿ ಒಟ್ಟು ಆರು ಕೋಷ್ಟಕಗಳಿದ್ದು ಮೊದಲಿನ ಐದರಲ್ಲಿ ವಿವಿಧ ಚಟುವಟಿಕೆಗಳನ್ನು ಕೊನೆಯದರಲ್ಲಿ ಒಟ್ಟಾರೆ ಪೂರೈಸಿದ ಸಮವಾಯ ಜ್ಞಾನವನ್ನು ಕೊಡಲಾಗಿದೆ.

(೪) ಮೂಲೋದ್ಯೋಗದ ಪತ್ರಿಕೆಗಳು:—

[೧] **ದೈನಂದ ಕಾರ್ಯದ ಪತ್ರಿಕೆ**:—ಮಾಡಿದ ಕಾರ್ಯದ ಪ್ರಮಾಣ ಮತ್ತು ಹಾಜರಿದ್ದ ಮಕ್ಕಳು.

[೨] **ಮಾಸಿಕ ಕಾರ್ಯದ ಪತ್ರಿಕೆ**:— ಇದರಲ್ಲಿ ೩೭ ಕೋಷ್ಟಕಗಳಿದ್ದು ವಿದ್ಯಾರ್ಥಿಗಳ ಹಾಜರಿ, ಬಳಸಿದ ಕಚ್ಚಾ ಮಾಲು,ಸಾಧನ, ವಿನಿಯೋಗಿಸಿದ ಸಮಯ, ಪ್ರತಿ ಮಗುವಿನ ಸರಾಸರಿ ಉತ್ಪನ್ನ, ಸರಾಸರಿ ಹಾಳು, ಒಟ್ಟು ಹಾಳು, ಶಿಕ್ಷಕರ ಶರಾ ಇವುಗಳನ್ನೊಳಗೊಂಡಿವೆ.

೩) ಮೂಲೋದ್ಯೋಗದಲ್ಲಿ ಪ್ರಗತಿ ಪರೀಕ್ಷೆ:- ಹತ್ತಿ ಸ್ವಚ್ಛತೆಯಿಂದ ನೂಲುವ ವರೆಗಿನ ವಿವಿಧ ಚಟುವಟಿಕೆಗಳಲ್ಲಿ ಸಾಧಿಸಿದ ಪ್ರಗತಿಯನ್ನು ಕಾಲಕಾಲಕ್ಕೆ ಆಲೇಖಗಳಿಂದೊಡಗೂಡಿದ ಪತ್ರಿಕೆ.

೫) ಓದುವ ಪಾಠಗಳು :- ಬೇರೆ ಬೇರೆ ಚಟುವಟಿಕೆಗಳಿಗೆ ಸಮವಾಯ ಮಾಡಿ ಮಕ್ಕಳಿಗೆ ಓದಿಸಲು ತಯಾರಿಸಿದ ಪಾಠಗಳು· ಇವುಗಳನ್ನು ಡ್ರಾಯಿಂಗ ಹಾಳಿಯಲ್ಲಿ ದೊಡ್ಡ ಅಕ್ಷರಗಳಲ್ಲಿ ಬರೆದು ಗೋಡೆಗೆ ಅಂಟಿಸಲಾಗುತ್ತಿತ್ತು.

೬) ಷಾಣ್ಮಾಸಿಕ ಮತ್ತು ವಾರ್ಷಿಕ ಪರೀಕ್ಷೆಗಳ ಪತ್ರಿಕೆಗಳು.

೭) ಶಿಕ್ಷಕರ ದಿನಚರೀ- ವೈಕ್ತಿಕವಾಗಿ ಪ್ರತಿಯೊಬ್ಬ ವಿದ್ಯಾರ್ಥಿಯ ಪ್ರಗತಿಯಬಗ್ಗೆ [-ಮೂಲೋದ್ಯೋಗ, ಸಾಮಾಜಿಕ ನಡತೆ ಮತ್ತು ಪಾಠಗಳಲ್ಲಿ-] ಶಿಕ್ಷಕರು ಇಟ್ಟವು. ಇದರಲ್ಲಿ ಸ್ಪುಟವಾಗಿ ಕಂಡು ಬಂದ ಸಂಗತಿಗಳನ್ನು ನಮೂದಿಸಲಾಗುತ್ತಿತ್ತು.

೮) ಮಕ್ಕಳು ಕೇಳಿದ ಪ್ರಶ್ನೆಗಳು:- ಬೇರೆ ಬೇರೆ ಪ್ರಸಂಗಗಳಲ್ಲಿ ಮಕ್ಕಳು ಕೇಳಿದ ಪ್ರಶ್ನೆಗಳು ಇದರಲ್ಲಿವೆ.

೯) ಶಿಕ್ಷಕರ ವರದಿಗಳು:- ಶಿಕ್ಷಕರು ಕಾಲಕಾಲಕ್ಕೆ ಒಪ್ಪಿಸಿದ ವರದಿಗಳು ವಿಶೇಷವಾಗಿ ವರ್ಷದ ಕೊನೆಗೆ ಒಪ್ಪಿಸಿದ ವರದಿಯು ಮಹತ್ವದ್ದಿದೆ.

೧೦) ೧೯೫೧-೫೨ ರಲ್ಲಿ ಈ ಪ್ರಯೋಗದ ವರ್ಗಗಳಲ್ಲಿ ಕೈಕೊಂಡ ಚಟುವಟಿಕೆಗಳ [ವರ್ಗೀಕೃತ] ಪತ್ರಿಕೆ.

೧೧) **ಪ್ರಯೋಗ ಕರ್ತನ ನಿರೀಕ್ಷಣಾ ಟಿಪ್ಪಣೆಗಳು:** ಆರಂಭದ ತಿಂಗಳಲ್ಲಿ [ಎಪ್ರಿಲ ೧೯೫೧] ಪ್ರತಿ ದಿನವೂ ವರ್ಗದಲ್ಲಿ ಕುಳಿತು ಮಕ್ಕಳನ್ನು ನಿರೀಕ್ಷಿಸಿ, ಪ್ರತ್ಯಕ್ಷ ಕಲಿಸಿ ಬರೆದಿಟ್ಟುದು.

೧೨ ಮಕ್ಕಳ ತೂಕ ಮತ್ತು ಎತ್ತರಗಳ ಪತ್ರಿಕೆ

ಪತ್ರಿಕೆಗಳ ಆವಶ್ಯಕತೆ:– ಅಭ್ಯಾಸದ ಅಂದಾಜು ಮತ್ತು ಪೂರೈಸಿದ ಅಭ್ಯಾಸ. ಈ ಪತ್ರಿಕೆಗಳು ಇಂಥಹ ಪ್ರಯೋಗಕ್ಕೆ ತೀರ ಅವಶ್ಯ. ಇವುಗಳ ಮೂಲಕ ಯೋಜನೆ ಮತ್ತು ಅದರ ಕಾರ್ಯಾಚರಣೆ ಆದರಲ್ಲಿ ಅಡಕವಾದ ಅಡೆ-ತಡೆಗಳು, ಅಭ್ಯಾಸ ಪತ್ರಿಕೆಯ ವ್ಯಾಪ್ತಿ ಹಾಗು ವ್ಯವಹಾರಿಕತೆ ಇವುಗಳ ಜ್ಞಾನವಾಗುವದು. ರೇಖಾಲೇಖಗಳ ಮೂಲಕ ಮೂಲೋದ್ಯೋಗದಲ್ಲಿ ಪ್ರತಿ ಮಗುವಿನ ಹಾಗು ವರ್ಗದ ತಿಂಗಳು ತಿಂಗಳಲ್ಲಿ ಆದ ಪ್ರಗತಿಯನ್ನು ಅಳೆಯಲು ಮತ್ತು ಶಿಕ್ಷಕನು ತನ್ನ ಕಲಿಸುವಿಕೆಯ ಪರಿಣಾಮವನ್ನು ಪರಿಶೀಲಿಸಲು ನೆರವಾಗುವದು. ವಿವಿಧ ಚಟುವಟಿಕೆಗಳಿಗೆ ಹೊಂದಿಸಿ ಕಲಿಸಬಹುದಾದ ಓದುವ ಪಾಠಗಳು ಬೇರೆ ಶಿಕ್ಷಕರಿಗೂ ಉಪಯೋಗ ಬೀಳಲೆಂದು ಬರೆದಿಡಲಾಗಿದೆ. ವಿದ್ಯಾರ್ಥಿಗಳ ಬಗ್ಗೆ ವೈಯಕ್ತಿಕವಾಗಿಟ್ಟ ವರದಿಗಳ ಮೂಲಕ ವಿಶೇಷ ಮಾರ್ಗದರ್ಶನದ ಅವಶ್ಯಕತೆ ಇರುವ ಮಗುವನ್ನು ಕಂಡು ಹಿಡಿಯಬಹುದು. ಅಲ್ಲದೇ ವಿವಿಧ ಚಟುವಟಿಕೆಗಳಿಂದ ಮಗುವಿನಲ್ಲಿ ಆಗುವ ಮಾರ್ಪಾಟುಗಳನ್ನು ಅವಲೋಕಿಸಲೂ ಸಾಧ್ಯವಿದೆ. ಮಕ್ಕಳು ಕೇಳಿದ ಪ್ರಶ್ನೆಗಳು ಆಯಾ ಮಕ್ಕಳ ವಿಶೇಷ ಅಭಿರುಚಿಗಳನ್ನು ಸಾಮಾನ್ಯವಾಗಿ ಮಕ್ಕಳ ಕುತೂಹಲ ಕೆಣಕುವ ಸನ್ನಿವೇಶಗಳನ್ನು ತಿಳಿಯಲು ಶಿಕ್ಷಕನಿಗೆ ನೆರವಾಗುವವು. ಶಿಕ್ಷಕರ ವರದಿ ಮತ್ತು ವರ್ಗೀಕೃತ ಚಟುವಟಿಕೆಗಳ ಯಾದಿಯು ಮಾಡಿದ ಕಾರ್ಯದ ಕಲ್ಪನೆಯನ್ನು ತಂದು ಕೊಡುವವು. ಕೊನೆಯದಾಗಿ ಪ್ರಯೋಗ ಕರ್ತನ ನಿರೀಕ್ಷಣೆಗಳಂತೂ ಈ ಪ್ರಯೋಗದ ಜೀವಾಳದಂತಿವೆ. ಪ್ರಯೋಗದ ಯೋಜನೆಯನ್ನು ರೂಪಿಸಲು ಹಾಗೂ ಪರಿಣಾಮಗಳನ್ನು ಅಳೆಯಲು ಅವು ಬಹುಮಟ್ಟಿಗೆ ನೆರವಾಗಿವೆ.

ಈ ಪತ್ರಿಕೆಗಳ ಮರ್ಯಾದೆ (ಸೀಮೆ)

ಈ ಎಲ್ಲ ಪತ್ರಿಕೆಗಳನ್ನು ಸಾಧ್ಯವಿದ್ದಷ್ಟು ದಕ್ಷತೆಯಿಂದ ಬರೆದಿಡಲಾಗುತ್ತಿತ್ತು. ಈ ಕಾರ್ಯಕ್ಕಾಗಿ ಶಿಕ್ಷಕರು ಶಾಲೆಯ ಹೊರಗೂ ತಮ್ಮ ಅಮೂಲ್ಯವೇಳೆ ಮತ್ತು ಶ್ರಮಗಳನ್ನು ವಿನಿಯೋಗಿಸಬೇಕಾಗಿ ಬಂತು. ಇದು ಪ್ರಾಥಮಿಕ ಶಿಕ್ಷಕರ ಕಾರ್ಯಕ್ಷೇತ್ರದಲ್ಲಿ ಸಾಮಾನ್ಯವಾಗಿ ಕಾಣದ ಮಾತು. ಆದಾಗ್ಯೂ ಈ ಪ್ರಯೋಗದಲ್ಲಿ ಭಾಗ ವಹಿಸಿದ ಶಿಕ್ಷಕರು ಈ ಶ್ರಮವನ್ನು ಸಂತೋಷದಿಂದ ವಹಿಸಿದ್ದಾರೆ. ಒಂದು ವರುಷದ ವರೆಗೆ ನಡೆಯುವ ಪ್ರಯೋಗದಲ್ಲಿ ಬೇನೆ ಬೇಸರಿಕೆಗಳ ಮೂಲಕ ಕೆಲವುಸಲ ಈ ಕಾರ್ಯಗಳಲ್ಲಿ ಚುತಿಬಂದರೂ ಒಟ್ಟಾರೆ ಅವುಗಳನ್ನು ನಿಯಮಿತತನದಿಂದ ಬರೆದಿಡಲಾಗಿದೆ.

ವಿ. ಸೂ. ಈ ಪ್ರಯೋಗದಲ್ಲಿ ಸಹಕರಿಸಿದ ಶಿಕ್ಷಕರು ೧) ಶ್ರೀ ವ್ಹಿ. ಎಸ್. ಹಿರೇಮಠ ಮುಖ್ಯಾಧ್ಯಾಪಕರು ಆಲೂರ ಕ. ಗ. ಶಾಲೆ ೨) ಶ್ರೀ ಸಗರ ಪ್ರಾ. ಸ್ಕೂಲ ಗಂ. ಮಂ. ಸರಕಾರಿ ಟ್ರೇ. ಕಾಲೇಜ ಧಾರವಾಡ ಈ ಮಹನೀಯರ ನೆರವನ್ನು ಪ್ರಯೋಗ ಕರ್ತನು ಕೃತಜ್ಞತೆಯಿಂದ ನೆನೆಯುವನು.

ಮೂಲ ಶಿಕ್ಷಣದ ಅರಿವು

ಅನುವಾದಕರು : **ಶ್ರೀ ಶಿಂತ್ರಿ ಬಸಪ್ಪನವರು,** ಬಿ.ಎ.,ಬಿ.ಟಿ.

(ಹಿಂದಿನಿಂದ ಸಾಗಿ ಬಂದದ್ದು)

“ಶಕ್ತಿ ಮುಂತಾದ ಶರೀರದ ಇತರ ಬೇಡಿಕೆಗಳನ್ನು ದೊರಕಿಸುವ ಬಗೆ ಹೇಗೆ ? ” ಎಂಬ ಪ್ರಶ್ನವು ನಮ್ಮ ಮುಂದೆ ಬಂದು ನಿಲ್ಲುತ್ತಿದೆ. ಈ ಪ್ರಶ್ನವು “ಸಮತೋಲ ಪ್ರಸಾದ” ವೆಂಬತಿಮುಖ್ಯವಾದ ವಿಷಯದತ್ತ ನಮ್ಮನ್ನೊಯ್ಯುತ್ತಿದೆ. ಬಹಳಷ್ಟು ಅನ್ನ, ತುಸು ಹಾಲು, ತುಸು ಕಾಯಿಪಲ್ಯ ಇಲ್ಲವೆ ಹಣ್ಣು ಇವುಗಳಿಂದ ಕೂಡಿದ ಆಹಾರವು ಸಮತೋಲ ಪ್ರಸಾದವಾಗಲಾರದು. ಅದನ್ನು ಸಮತೋಲ ಪ್ರಸಾದವನ್ನಾಗಿ ಮಾಡುವದಾದರೆ ಅದಕ್ಕೆ ಹಾಲು, ಕಾಯಿಪಲ್ಯ ಮತ್ತು ಹಣ್ಣು ಇವುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕೂಡಿಸಬೇಕು. ಹೀಗೆ ಮಾಡುವದರಿಂದ ಅದು ಹೆಚ್ಚು ಖರ್ಚಿನದಾಗಿ ಸಾಧಾ ಮನೆತನಗಳಿಗೆ ನಿಲುಕದಂತಾಗುತ್ತಿದೆ. ಹಾಲನ್ನು

ಕೊಳ್ಳಲು ಶಕ್ಯವಾಗದಿದ್ದರೆ ಕಡಿಮೆ ಬೆಲೆಯಲ್ಲಿ ಸಿಗುವ ಮಜ್ಜಿಗೆ ಇಲ್ಲವೆ ಹಾಲಿನ ಪುಡಿಯಿಂದ ತಯಾರಿಸಿದ ಹಾಲು ಇವುಗಳನ್ನು ಸೇರಿಸಿ ಪ್ರಸಾದದ ಪೋಷಕ ಗುಣವನ್ನು ಹೆಚ್ಚಿಸಿಕೊಳ್ಳಬೇಕು. ಗಿರಣಿ ಅಕ್ಕಿಯನ್ನುಂಣುವವರು ಅದರಲ್ಲಿ ಕೈಯಿಂದ ಕುಟ್ಟಿದ ಅಕ್ಕಿಯನ್ನು ಸೇರಿಸಿ ಇಲ್ಲವೆ ಗೋದಿ, ಜೋಳ ಅಥವಾ ರಾಗಿ ಇವುಗಳ ಇಡಿಯ ಹಿಟ್ಟಿನ ರೊಟ್ಟಿಯನ್ನು ತಿಂದು ತಮ್ಮ ಪ್ರಸಾದದ ಪೋಷಕ ಗುಣವನ್ನು ಬೆಳೆಸಿಕೊಳ್ಳಬೇಕು. ಗೋದಿ, ಜೋಳ ಇಲ್ಲವೆ ರಾಗಿ ಇವುಗಳ ಇಡಿಯ ಹಿಟ್ಟಿನ ರೊಟ್ಟಿಯನ್ನು ತಿನ್ನುವವರಿಗಿಂತ ಗಿರಣಿ ಅಕ್ಕಿಯ ಅನ್ನವನ್ನು ಅನಿವಾರ್ಯವಾಗಿ ಉಣ್ಣಬೇಕಾದವರು ಸಂರಕ್ಷಕ ಆಹಾರ ವಸ್ತುಗಳೆಂದ ಹಾಲು, ತಾಜಾ ಕಾಯಿಪಲ್ಯ, ಹಣ್ಣು, ಮುಂತಾದವುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಸೇವಿಸಬೇಕೆಂಬುದನ್ನು ಮರೆಯಕೂಡದು. ಅಕ್ಕಿಯೇ ಮುಖ್ಯ ಆಹಾರವಾಗಿದ್ದು ಸಂರಕ್ಷಕ ಆಹಾರ ವಸ್ತುಗಳನ್ನು ಅತಿ ಕಡಿಮೆ ಪ್ರಮಾಣದಲ್ಲಿ ಕೊಂಡು ತಿನ್ನುವಷ್ಟು ಬಡವರಿದ್ದರೆ ಅಕ್ಕಿಯನ್ನು ಆವ ಸ್ಥಿತಿಯಲ್ಲಿ ಉಣ್ಣುವರೆಂಬುದು ಮಹತ್ವದ ವಿಷಯವು. ಕುಚ್ಚಕ್ಕಿಯು ಗಿರಣಿಯಲ್ಲಿ ಕುಟ್ಟಿದ್ದವಿದ್ದರೂ ಸಹ ಗಿರಣಿಯಲ್ಲಿ ಕುಟ್ಟಿದ ಸಾದಾ ಅಕ್ಕಿಗಿಂತ ಹೆಚ್ಚು ಪೋಷಕವಿರುತ್ತಿದೆ. ಭಾರತ ಸರಕಾರದಿಂದ ಪ್ರಕಟಿಸಲ್ಪಟ್ಟ ೨೮ ನೆಯ ನಂಬರಿನ 'ಆರೋಗ್ಯದ ಚಿಕಿತ್ಸಾ ವರದಿ'ಯ ೧೭ ನೆಯ ಪುಟದ ಮೇಲೆ ನಮೂದಿಸಿದಂತೆ ಅಕ್ಕಿಯೇ ಮುಖ್ಯ ಪ್ರಸಾದವಾಗಿದ್ದವರ ಸಾದಾ ಆಹಾರ ಮತ್ತು ಸಮತೋಲ ಪ್ರಸಾದ ಇವುಗಳನ್ನು ಕೆಳಗೆ ಕೊಟ್ಟಿದೆ:—

(ಒಬ್ಬ ಪ್ರಬುದ್ಧನಿಗೆ ದಿನಾಲು ಬೇಕಾಗುವಷ್ಟು, ಔಂಸುಗಳಲ್ಲಿ)

ಆಹಾರ ವಸ್ತುಗಳ ಹೆಸರು	ಸಾದಾ ಪ್ರಸಾದ [ಔಂಸುಗಳಲ್ಲಿ]	ಸಮತೋಲ ಪ್ರಸಾದ [ಔಂಸುಗಳಲ್ಲಿ]
ಅಕ್ಕಿ	೧೫ ರಿಂದ ೨೫	೧೫
ಬೇಳೆಯ ಕಾಳುಗಳು	೦·೫ ರಿಂದ ೧·೫	೩
ಹಾಲು	ಅತಿ ಸ್ವಲ್ಪ ಇಲ್ಲವೆ ಏನೂ ಇಲ್ಲ	೮
ತೊಪ್ಪಲು ಪಲ್ಯ	೦·೫ ರಿಂದ ೧·೦	೪
ಕಾಯಿ ಪಲ್ಯ	೨ ರಿಂದ ೫	೬
ಕೊಬ್ಬು ಮತ್ತು ಎಂಣೆಗಳು	೧ ಕ್ಕಿಂತ ಕಡಿಮೆ	೨
ಹಣ್ಣು	ಅತಿ ತುಸು	೨
ಮೀನ, ಮಾಂಸ, ತತ್ತಿ	೦·೫ ರಿಂದ ೧·೫	೩ (ಹಾಲು ಅತಿ ಸ್ವಲ್ಪ, ಇಲ್ಲವೆ ಇಲ್ಲದಿದ್ದಲ್ಲಿ)

ನಮ್ಮ ಪ್ರಸಾದವನ್ನು ಹಾಗೇ ತಿನ್ನದೆ ಅಡಿಗೆ ಮಾಡಿ ತಿನ್ನುತ್ತೇವೆ. ಈ ವಿಷಯವು ಮಾನವನು ಎಂದಿನಿಂದ ಅಡಿಗೆ ಮಾಡಲು ಪ್ರಾರಂಭಿಸಿದನೆಂಬ ಪ್ರಾಚೀನ ಕಾಲದ ಇತಿಹಾಸದತ್ತ ನಮ್ಮನ್ನೊಯ್ಯುತ್ತಿದೆ. ಅಡಿಗೆ ಮಾಡುವದರಿಂದ ಪ್ರಸಾದದ ಪೋಷಕ ಗುಣದ ಮೇಲಾಗುವ ಪರಿಣಾಮಗಳನ್ನರಿತುಕೊಳ್ಳುವದೊಂದು ಮನೋರಂಜಕ ವಿಷಯವು. ಅಡಿಗೆ ಮಾಡುವದು ಎರಡು ತೆರನಾಗಿದೆ— ಮೊದಲನೆಯದು, ನೀರಿನಲ್ಲಿ ಕುದಿಸಿ ಇಲ್ಲವೆ ನೀರಿನ ಉಗಿಯ ಸಹಾಯದಿಂದ ತಯಾರಿಸುವದು; ಎರಡನೆಯದು, ಎಂಣೆ-ತುಪ್ಪಗಳಲ್ಲಿ ಕರಿಯುವದು, ಬೆಂಕಿಯಲ್ಲಿಟ್ಟು ಸುಡುವದು, ಹಂಚಿನ ಮೇಲಿಟ್ಟು ಬೇಯಿಸುವದು. ಅಡಿಗೆ ಮಾಡುವ ಮೊದಲು ಅಕ್ಕಿಯನ್ನು ತೊಳೆದು ತೊಳೆದ ನೀರನ್ನು ಚೆಲ್ಲಿಬಿಡುವದರಿಂದ ಅದರಲ್ಲಿದ್ದ ಹಲವು ಲವಣಗಳನ್ನು ನಾವು ಕಳೆದುಕೊಳ್ಳುತ್ತೇವೆ. ನಮ್ಮ ಮನೆಗಳಲ್ಲಿ ಅಡಿಗೆ ಮಾಡುವ ಮೊದಲು ಅಕ್ಕಿಯನ್ನು ಮೂರು-ನಾಲ್ಕು ಸಲ ಯಥೇಚ್ಛ ನೀರಿನಲ್ಲಿ ಹಾಕಿ ತೊಳೆಯುವ ಸಂಪ್ರದಾಯವಿದೆ. ಹೀಗೆ ಮಾಡುವದರಿಂದ ಬಹಳಷ್ಟು ಲವಣಗಳು ನೀರಿನಗೂಡ ವ್ಯ

ವಾಗಿ ಹಾಳಾಗಿ ಹೋಗುತ್ತಿವೆ. ಅಡಿಗೆ ಮಾಡುವಾಗ ಜೀವಸತ್ವಗಳು ನಾಶ ಹೊಂದುತ್ತಿವೆ. ಬೇಗನೆ ಕುದಿಸ ಬೇಕೆಂಬ ಉದ್ದೇಶದಿಂದ ಕುದಿಯುವ ನೀರಿನಲ್ಲಿ ಸೋಡಾದ ಪುಡಿಯನ್ನು ಹಾಕುವದರಿಂದ ಮತ್ತಿಷ್ಟು ಹಾನಿಯಾಗುತ್ತಿದೆ. ಆದರೆ, ಅತಿ ಸಾವಕಾಶವಾಗಿ ಅಡಿಗೆ ಮಾಡದಿದ್ದರೆ ಮಾತ್ರ ಹುಣಸಿಹಂಣಿನ ಮತ್ತು ಲಿಂಬಿಯ ರಸಗಳು ತಮ್ಮಲ್ಲಿಯ ಹುಳಿಯ ಪ್ರಭಾವದಿಂದ ಜೀವಸತ್ವಗಳನ್ನು ಸಂರಕ್ಷಿಸುತ್ತಿವೆ. ಅಡಿಗೆ ಮಾಡುವದರಿಂದ ನಮಗೆ ಇಷ್ಟು ಹಾನಿಯಾಗು ತ್ತಿದ್ದಾಗ್ಯೂ ನಾವು ಇನ್ನೂ ವರೆಗೂ ಅಡಿಗೆ ಮಾಡಿ ಏಕೆ ಉಂಣುತ್ತಿದ್ದೇವೆ? ಏಕೆಂದರೆ, ಪ್ರಸಾದವು ಬೇಗನೆ ಪಚನವಾಗಬೇಕು. ಕಣ್ಣಿಗೆ ಚಂದ ಕಾಣಬೇಕು, ರುಚಿ ಕಟ್ಟಾಗಬೇಕು ಮತ್ತು ಅಪಾಯಕಾರಕ ಜಂತುಗಳೆಲ್ಲ ನಾಶವಾಗಬೇಕು. ಅಡಿಗೆ ಯಾರು ಮಾಡುವರು? ಇದು ಮುಂದಿನ ಪ್ರಶ್ನೆ. "ನಮ್ಮ ಅವ್ವ, ಅತ್ತಿ, ಅಕ್ಕ" ಎಂದು ಉತ್ತರ ಬರಬಹುದು. ಈ ಉತ್ತರವು ಮನೆತನದಲ್ಲಿಯ ಹಾಗೂ ಸಮಾಜದಲ್ಲಿಯ ಸಂಬಂಧ-ಸೂತ್ರಗಳ, ಆಪ್ತತ್ವ ಗಳ ಹಾಗೂ ಮನೆತನದಲ್ಲಿಯ ಶ್ರಮ ವಿಭಾಗದ ವಿಶಾಲ ಕ್ಷೇತ್ರದ ಬಗೆಗಿನ ಚರ್ಚೆಗೆ ಹಾದೀ ಮಾಡಿ ಕೊಡುತ್ತಿವೆ.

"ನಮ್ಮ ಪ್ರಸಾದಕ್ಕೆ ಬೇಕಾಗುವ ಪದಾರ್ಥ ಗಳನ್ನು ಯಾರು ಬೆಳೆವರು?" ಎಂಬುದು ಮುಂದಿನ ಪ್ರಶ್ನವು. ಉತ್ತರವು ಸ್ಪಷ್ಟವೇ ಇದೆ. ಜೀವನದ ಮೂಲ ಬೇಡಿಕೆಯ ಮೂಲ ಹುಟ್ಟುವಳಿಗಳನ್ನು ಒಕ್ಕಲಿ ಗನು ಬೆಳೆಯುತ್ತಾನೆ. ಶ್ರಮವಿಲ್ಲದೆ ಭೂಮಿಯು ಫಲ ವನ್ನು ಕೊಡಲಾರದು. ನಮ್ಮ ಶ್ರಮವು ವಿವೇಕವುಳ್ಳ ದ್ದಿರಬೇಕು. ಒಕ್ಕಲಿಗನ ಆಧಾರಸ್ತಂಭಗಳೆಂದರೆ ದನ ಗಳು; ಅವು ಈ ಜಗತ್ತಿನಲ್ಲಿ ಅವನ ಜೀವದ ಮಿತ್ರರು, ಸಹಾಯಕರು. ಸಾಲೆಯ ಕೈದೋಟದಲ್ಲಿ ಮಕ್ಕಳು ದುಡಿದು ಮುಂದೆ ವಿವರಿಸಿದ ಆಲ್ಹಾದಕರವಾದ ಅನುಭವ ಗಳನ್ನು ಪಡೆಯಬೇಕು- ತೋಟದ ನೆಲವನ್ನು ಹದಗೊ ಳಿಸುವದು, ಬೇರೆ ಬೇರೆ ಋತುಮಾನಗಳು ಮತ್ತು ಕೃಷಿ ಕರ್ಮದ ಮೇಲಾಗುವ ಅವುಗಳ ಪರಿಣಾಮಗಳು, ಬೇರೆ ಬೇರೆ ಜಾತಿಯ ಮಂಣು ಮತ್ತು ಅವುಗಳಿಗೆ ಅನುರೂಪ ವಾಗುವ ಗೊಬ್ಬರ-ಬೀಜಗಳನ್ನಾರಿಸುವದು, ನೀರನ್ನು ಎಷ್ಟು ಪ್ರಮಾಣದಿಂದ ಉಣ್ಣಿಸಬೇಕು, ಕಳೆಯನ್ನು ಯಾವಾಗ ಕಿತ್ತಬೇಕು, ಕ್ರಿಮಿ-ಕೀಟಕಗಳ ದನಗಳ ಹಾಗೂ ಮನುಷ್ಯರ ಕಾಟವಾಗದಂತೆ ಸಂರಕ್ಷಿಸುವದು, ದಿನಾಲು ಕಾಯುವದು, ಸುಗ್ಗಿಯ ಕಾಲದ ಆನಂದವನ್ನು ಪಡೆಯುವದು. ಆಹಾರದ ಕಾಳುಗಳನ್ನು ಎಲ್ಲಿ ಮಾರು ವರೆಂಬುದು ಮುಂದಿನ ಪ್ರಶ್ನವು. ಈ ಪ್ರಶ್ನವು ಮಕ್ಕ ಳನ್ನು ಸಂತೆ–ಪೇಟೆಗಳತ್ತ ಒಯ್ದು, ಅರ್ಥಶಾಸ್ತ್ರದ ಪ್ರಾರಂಭಿಕ ಕಲ್ಪನೆಗಳನ್ನು ಮಾಡಿಕೊಡುವದು.

"ನಾವು ಉಂಡ ಆಹಾರದ ಗತಿಯು ಮುಂದೆ ಏನಾಗುವದು?" ಎಂಬ ಪ್ರಶ್ನವನ್ನು ಈ ಸಂದರ್ಭದಲ್ಲಿ ಚರ್ಚಿಸಲು ಶಕ್ಯವಿದೆ. ಪಚನಕ್ರಿಯೆಯ ಹಾಗೂ ಪಚನ ಕ್ರಿಯೆಯು ನಡೆಯುವ ಎಲ್ಲ ಅವಯವಗಳ ವಿಜ್ಞಾನ ವನ್ನು ತಿಳಿಸಿ ಕೊಡಲು ಶಕ್ಯವಿದೆ. ಅತಿ ಹೆಚ್ಚು ಮತ್ತು ಅತಿ ಕಡಿಮೆ ಉಣ್ಣುವದರಿಂದಾಗುವ ಪರಿಣಾಮಗಳನ್ನು ತಿಳಿಸಿ ಹೇಳಿದರೆ ಮಕ್ಕಳು ಅದನ್ನು ಒಳ್ಳೇ ಆಸ್ಥೆ ವಹಿಸಿ ಕೇಳುವರು. ನಾವು ಬದುಕಿರಲು ಉಣ್ಣಬೇಕು. ಆದರೆ ಉಣ್ಣಲು ಬದುಕಿರಬಾರದೆಂಬ ತತ್ವವನ್ನು ಮಕ್ಕಳ ಮನ ಸಿನ ಮೇಲೆ ಬಿಂಬಿಸಬೇಕು. ಆರೋಗ್ಯದಿಂದಿರುವದು ಮಿತದಿಂದಿದ್ದ ಜೀವನದ ಲಕ್ಷಣವು. ಬೇನೆ ಬೀಳುವದು ನಾಚಿಕೆಗೇಡಿತನದ ಮಾತು; ಏಕೆಂದರೆ, ಅಸ್ವಾಸ್ಥ್ಯವು ನಿಸರ್ಗದ ನಿಯಮವನ್ನು ಮೀರಿದ್ದರ ನೇರವಾದ ಪರಿಣಾ ಮವಾಗಿದೆ. ಪ್ರಸಾದವನ್ನು ಆನಂದದಿಂದ ಉಂಡರೆ ಅದು ಹೆಚ್ಚು ಚನ್ನಾಗಿ ಜೀರ್ಣವಾಗುವದು. ಸಿಡುಕು–ಮುನಿಸು ಗಳು ಹಾಗೂ ಹುರುಪಿಲ್ಲದ ನಿಸ್ತೇಜ ಭಾವನೆಗಳು ಪಚ ನಕ್ರಿಯೆಗೆ ತೊಂದರೆಯನ್ನುಂಟು ಮಾಡುತ್ತಿವೆ. ಭಾವೋದ್ರೇಕಗಳಿಗೂ ಆರೋಗ್ಯಕ್ಕೂ ಇರುವ ಅನ್ಯೋನ್ಯ ಸಂಬಂಧವನ್ನು ತಿಳಿಸಿ ಹೇಳಿದರೆ ಮಕ್ಕಳು ಚಿಕ್ಕಂದಿ ನಿಂದ ಸರ್ವಾಂಗಸುಂದರವಾದ ಶರೀರವನ್ನೂ ಸಮತೋಲ ಮನಸನ್ನೂ ಪಡೆಯಲು ಕಲಿಯುವರು.

ಕಲಾತ್ಮಕವಾಗಿ ಚಂದಕಾಣುವಂತೆ ಪ್ರಸಾದವನ್ನು ತಯಾರಿಸುವದು ಮಕ್ಕಳಿಗೂ, ಪ್ರಬುದ್ಧರಿಗೂ ಚಿತ್ತಾಕ ರ್ಷಕವಾದ ವಿಷಯವು. ಪಕ್ವಾನ್ನಗಳಿಗೆ ಚಂದ ಕಾಣುವ ಬಂಣವನ್ನು ತಂದುಕೊಡುವದು, ಅವುಗಳಿಗೆ ಸುಂದರ ವಾದ ಆಕಾರಗಳನ್ನುಂಟುಮಾಡುವದು, ಇವು ಹೇಳತೀರ ದಷ್ಟು ಮೆಚ್ಚುಗೆಯ ಕೆಲಸಗಳು. ಮುರುಕ್ಕು [ನಮ್ಮ ಲ್ಲಿಯ ಚಕ್ಕುಲಿ] ಜಲೇಬಿ, ಹೋಳಿಗೆ, ಕರ್ಚಿಕಾಯಿ, ಮುಂತಾದವುಗಳನ್ನು ಇಲ್ಲಿ ಉದಹರಿಸಬಹುದು. "ಪಕ್ವಾ ನ್ನಗಳೂ ಹಬ್ಬಗಳೂ" ಎಂಬುದು ಮತ್ತೊಂದು ಅಭ್ಯಾಸ ಮಾಡತಕ್ಕ ಮನೋರಂಜಕ ವಿಷಯವು. ಹಲವು ಪಕ್ವಾ

ನ್ನಗಳನ್ನು ಹಲವು ವಿಶಿಷ್ಟ ಹಬ್ಬಗಳಲ್ಲಿ ಮಾಡುವ ರೂಢಿಯುಂಟು— ಉದಾಹರಣೆಗಾಗಿ ಕೋಲುಕ್ಕಟ್ಟಾಯಿ [ನಮ್ಮಲ್ಲಿಯ ಮೋದಕ, ಕಡಬು –ಅನುವಾದಕರು] ಯನ್ನು ವಿನಾಯಕ ಚತುರ್ಥಿಯಲ್ಲಿ ಪೊಂಗಲ್ [ನಮ್ಮಲ್ಲಿಯ ಕರ್ಚಿಕಾಯಿ–ಅನುವಾದಕರು] ವನ್ನು ಪೊಂಗಲ್ (ಮಕರ ಸಂಕ್ರಮಣ) ಹಬ್ಬದಲ್ಲಿ ಮುಂತಾದವುಗಳು. [ಪಂಚಮಿ ಹಬ್ಬದಲ್ಲಿ ನಮ್ಮಲ್ಲಿ ಮಾಡುವ ತಂಬಿಟ್ಟುಗಳನ್ನು ಇಲ್ಲಿ ಉದಹರಿಸಬಹುದು — ಅನುವಾದಕರು] ಅವು ಸ್ವಾಭಾವಿಕವಾಗಿ ನಮ್ಮನ್ನು ನಮ್ಮ ಸಾಮಾಜಿಕ ಸಂಪ್ರದಾಯ ಪದ್ಧತಿಗಳತ್ತ ಒಯ್ಯುತ್ತಿವೆ. ದೇವರಿಗೆ ನೈವೇದ್ಯವನ್ನರ್ಪಿಸುವ ನಮ್ಮ ಪದ್ಧತಿಯು ನಮ್ಮ ಮನಸ್ಸನ್ನು ಶುದ್ಧಗೊಳಿಸಿ ನೈವೇದ್ಯಕ್ಕೆ ಒಂದು ತರಹದ ಪವಿತ್ರತೆಯನ್ನು ತಂದುಕೊಡುತ್ತಿದೆ.

ಪ್ರಸಾದದ ಮುಖಾಂತರ ಎಷ್ಟೋ ಸಂಗತಿಗಳನ್ನು ಕಲಿಸಲು ಶಕ್ಯವಿದೆ— ಉದಾಹರಣಾರ್ಥವಾಗಿ; ಚಿಕ್ಕ ಮಕ್ಕಳಿಗೆ ತರುಣರಿಗೆ ಮತ್ತು ವಯಸ್ಸಾದವರಿಗೆ ಕೊಡಲು ಪ್ರಸಾದದಲ್ಲಿ ಪರ್ಯಾಯವಿದೆ. ಕುಳಿತಲ್ಲಿಯೇ ಕುಳಿತು ಕೆಲಸ ಮಾಡುವವನಿಗೆ ಹಾಗೂ ಪೈಮುರಿದು ಕೆಲಸ ಮಾಡುವವನಿಗೆ ಒಗ್ಗುವ ಆಹಾರದಲ್ಲಿ ಹೆಚ್ಚು ಕಡಿಮೆಯಿದೆ, ಸಾದಾ ಹೆಂಣು ಮಗಳೂ ಕೂಸಿದ್ದ ಹೆಂಣುಮಗಳ ಉಂಣುವ ಪ್ರಸಾದದಲ್ಲಿ ಅಂತರವಿದೆ. ಬೇನೆ ಬಿದ್ದವನಿಗ ಬೇನೆಯಿಂದ ಗುಣಮುಖನಾದವನಿಗೂ ಕೊಡುವ ಆಹಾ ದಲ್ಲಿ ವ್ಯತ್ಯಾಸವಿದೆ. ಅಡಿಗೆಯನ್ನು ಬೇರೆ ಬೇರೆ ಉರವ ಗಳಿಂದ ಮಾಡುವದುಂಟು—ಕಟ್ಟಿಗೆ, ಇದ್ದಲಿ, ಕಲ್ಲಿದ್ದಲಿ ಚಿಮಣಿಯೆಂಣೆ, ವಿದ್ಯುತ್ತು ಇವುಗಳನ್ನು ವಿವರಿಸುತ್ತ ಇವುಗಳಿಗೆ ಹತ್ತುವ ವೇಳೆ ಮತ್ತು ಹಣ ಹಾಗೂ ಇವು ಳಿಂದ ಪೋಷಕ ಗುಣದ ಮೇಲಾಗುವ ಪರಿಣಾಮ ಮು ತಾದವುಗಳನ್ನು ಚರ್ಚಿಸಲಿಕ್ಕೆ ಬರುತ್ತಿದೆ. ಅದರಂತೆ ಬೇ ಬೇರೆ ತರಹದ ಒಲೆಗಳು ಮತ್ತು ಅಡಿಗೆ ಮಾಡುವ ಪಾತ್ರೆ ಗಳು, ಇವುಗಳ ಬಗೆಗೂ ಅಭ್ಯಾಸಮಾಡಲು ಶಕ್ಯವಿದೆ ಒಟ್ಟಿನಲ್ಲಿ, ಪ್ರಸಾದದ ಸಮವಾಯದಿಂದ ಮಕ್ಕಳಿಗೆ ಕ ಸಲು ಶಕ್ಯವಿರುವ ಜ್ಞಾನಭಂಡಾರವು ಅಷ್ಟಿಷ್ಟಲ್ಲ. ಆದ ಅದು ಮಕ್ಕಳ ವಯೋಮಾನಕ್ಕೂ ಬುದ್ಧಿಮತ್ತೆಗ ಅನುಗುಣವಾದದ್ದಿರಬೇಕು. ಮತ್ತು ಶಿಕ್ಷಕನಲ್ಲಿ ಅಷ್ಟೊ ದು ಯೋಗ್ಯತೆಯೂ ಇರಬೇಕು.

(ಮುಂದುವರೆಯುವದು)

ಹುಬ್ಬಳ್ಳಿ ಕುರುಡ ಬಾಲಕರ ಸರಕಾರಿ ಶಾಲೆಯಲ್ಲಿ

ಡಾ. ಮಿಸ್ ಹೆಲನ್ ಕೆಲರ ಇವರ ಹುಟ್ಟುಹಬ್ಬದ ದಿನಾಚರಣೆ

ದಿ. ೨೭–೬–೫೭ ರಂದು ಹುಬ್ಬಳ್ಳಿ ಕೊ-ಆಪರೇಟೀವ್ಹ ಹಾಸ್ಪಿಟಲ್‌ದ ಮುಖ್ಯ ಡಾಕ್ಟರರಾದ ಶ್ರೀ ಆರ್. ಬಿ. ಪಾಟೀಲ, ಎಫ್. ಆರ್. ಸಿ. ಎಸ್. ಇಂಗ್ಲಂಡ ಹಾಗೂ ಎಡಿನ್‌ಬರ್ಗ ಇವರ ಅಧ್ಯಕ್ಷತೆಯಲ್ಲಿ, ಡಾ. ಮಿ. ಎಸ್. ಹೆಲನ್ ಕೆಲರ ಇಂದಿನ ಜಗತ್ತಿನ ಕುರಡರಲ್ಲಿ ಪ್ರಸಿದ್ಧ ವ್ಯಕ್ತಿಗಳಾದ, ಇವರ ೭೭ನೆಯ ಹುಟ್ಟು ಹಬ್ಬವನ್ನು ಆಚರಿಸಲಾಯಿತು. ಎಲ್ಲ ಕಾರ್ಯಕ್ರಮಗಳಲ್ಲಿ ಕುರುಡು ಮಕ್ಕಳ ಪಾತ್ರವೇ ಮುಖ್ಯವಾಗಿತ್ತು. ಅಧ್ಯಕ್ಷರು ಮಕ್ಕಳ ವಕ್ತೃತ್ವ ಕಲೆ, ಓದು ಬರಹ, ಹೆಣಿಕೆಯ ಕೆಲಸ, ಹಾಗೂ ಗಾಯನ ಕಾರ್ಯಕ್ರಮಗಳನ್ನು ನಿರೀಕ್ಷಿಸಿ ಅತ್ಯಾನಂದ ವ್ಯಕ್ತ ಮಾಡಿದರು. ಕೊನೆಯ ತಮ್ಮ ಭಾಷಣದಲ್ಲಿ ಇಲ್ಲಿಯ ಕುರುಡ ಮಕ್ಕಳಿಗೆ, ಪರದೇಶಗಳಲ್ಲಿಯ, ಕುರುಡರ ಜೀವನ ಕ್ರಮದ ಚಿತ್ರ ತಂದುಕೊಟ್ಟು, ಪರದೇಶದ ಕುರುಡರಂತೆ ನಮ್ಮ ನಾಡಿನ ಪ್ರತಿ ಕುರಡನೂ, ಬಿಕ್ಷುಕನಾಗದೇ ಸ್ವಾವಲಂಬಿಯಾಗಿ ಜೀ ಸುವದನ್ನು ಕಲಿಯಬೇಕೆಂದು ಉಪದೇಶಿಸಿದರು. ಸ ಕಾರ ಹಾಗೂ ಸಮಾಜ ಇವೆರಡರ ಸಹಾಯ ಹಾಗ ಸಹಾನುಭೂತಿಯಿಂದ ನಮ್ಮ ದೇಶದ ಎಲ್ಲ ಭಾ ಕುರುಡರು ಖಂಡಿತ ಸ್ವಾವಲಂಬಿಗಳಾಗುವರೆಂದು ಸಂಸ್ಥೆ ಯ ಸಂಚಾಲಕರಾದ ಶ್ರೀ ಸಿ. ಆರ್. ಮರಗಾಲ ಇವ ತಮ್ಮ ಭಾಷಣದಲ್ಲಿ ವ್ಯಕ್ತಮಾಡಿದರು. ಶಾಲೆಯ ಕುರು ಮಕ್ಕಳ ಬಗ್ಗೆ ಪ್ರತ್ಯೇಕ ದಯೆಯ ದೃಷ್ಟಿಯಿಂದ ಇರು ಡಾಕ್ಟರರಿಗೆ ಸಂಸ್ಥೆಯ ಬಾಲಕರು ವಿನಂತಿ ಮಾಡಿಕೊ ಡರು. ನಂತರ ಆಭಾರ ಮನ್ನಣೆ, ಒಂದೇ ಮಾತರ ಗೀತೆಯೊಂದಿಗೆ ಎಲ್ಲ ಕಾರ್ಯ ಕ್ರಮಗಳು ಮುಕ್ತಾಯ ಗೊಂಡವು.

ಸುಪರಿಂಟೆಂಡೆಂಟ

ಕುರುಡ ಬಾಲಕರ ಸ. ಶಾಲೆ ಹುಬ್ಬಳ್ಳಿ

ಕುರುಬಗೊಂಡ ಶಾಲೆಯ ಅಪೂರ್ವ ಯಶಸ್ಸು



ಕುಮಾರ ಅಶೋಕ ರಾಚೋಟೆಪ್ಪ ಹಾವೇರಿ ಕ. ಗಂ. ಶಾಲಾ ಕುರುಬಗೊಂಡದಿಂದ, ಈ ಸಲ ಜರುಗಿದ ಪ್ರಾ. ಶಾ. ಪ್ರ. ಪರೀಕ್ಷೆಯಲ್ಲಿ ಕುಳಿತ ಹದಿನೈದೂ ವಿದ್ಯಾರ್ಥಿಗಳು ಪಾಸಾಗಿರುವರಲ್ಲದೆ, ಕು. ಅಶೋಕ ಹಾವೇರಿ ಈತನು ೮೨ ರಂತೆ ಗುಣಪಡೆದು ಹೊಸ ವಿಕ್ರಮಸ್ಥಾಪಿಸಿ ಧಾರವಾಡ ಜಿಲ್ಹೆಗೆ ಮೊದಲನೆಯ ಸ್ಥಾನ ಪಡೆದು ಪಾಸಾಗಿದ್ದಾನೆ. ಈ ವಿದ್ಯಾರ್ಥಿಯು ಧಾರವಾಡ ಜಿಲ್ಹೆಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳ ಹಿಂದಿ ವಕ್ತೃತ್ವ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿರುವನು. ಈ ಅಭೂತಪೂರ್ವ ಯಶಸ್ಸಿಗೆ ಶ್ರೀ ಚಿ. ಬ. ಕೋಟಿ ಪ್ರಧಾನಗುರುಗಳ ಪರಿಶ್ರಮವೇ ಕಾರಣವು.

ಕುಮಾರ ಅಡಿವೆಪ್ಪ ಶಿವಬಸಪ್ಪ ಬಶೆಟ್ಟೆಯವರ ಕ. ಗಂ. ಶಾಲಾ ಕುರುಬಗೊಂಡದಿಂದ, ಈಸಲ ಜರುಗಿದ ಮಿಡಲ್ ಸ್ಕೂಲ ಸ್ಕಾಲರಶಿಪ್ ಪರೀಕ್ಷೆಗೆ ಕುಳಿತ ಆರೂ ವಿದ್ಯಾರ್ಥಿಗಳು ಸ್ಕಾಲರಶಿಪ್ಪು ಪಡೆದಿರುವರು. ಜಿಲ್ಹೆಯ ಮೊದಲಿನ ಮೂರು ಸ್ಥಾನಗಳು ಇದೇ ಸಾಲೆಗೆ ದೊರೆತಿದ್ದು ಕುಮಾರ ಅಡಿವೆಪ್ಪ ಶಿವಬಸಪ್ಪ ಬಶೆಟ್ಟೆಯವರ ಈತನು ಸರ್ವಪ್ರಥಮ ಸ್ಥಾನ ಪಡೆದಿರುವನು. ಈ ಬಗೆಯ ಅಭೂತಪೂರ್ವ ಯಶಸ್ಸಿಗೆ ೪ನೆಯ ವರ್ಗದ ಗುರುಗಳಾದ ಶ್ರೀ ಗು. ಹ. ಮಠದ ಇವರ ಅವಿಶ್ರಾಂತ ಪರಿಶ್ರಮವೇ ಕಾರಣವು.

ಸಮನ್ವಯ ಪಾಠದ ಟಿಪ್ಪಣಿ

ಚಟುವಟಿಕೆ :– ಹತ್ತಿಯನ್ನು ಅರೆದು ಹಿಂಜಿ ಹಿಂಜಿ ಹಾಕುವದು (ರೂಢಿ)
ವರ್ಗ :– ೫ನೆಯ "ಅ"

ಸಮನ್ವಿತ ವಿಷಯ :– (ಸಾ. ವಿ.) ಜಯಧರ ಹತ್ತಿಯ ಹುಟ್ಟು ಹಾಗೂ ಗುಣಧರ್ಮ
ವಿ. ಸಂಖ್ಯೆ :– ೨೪

ದಿನಾಂಕ :– ೨೪–೬–೫೭ (ಶಿಕ್ಷಕರು :– ಎಮ್. ಎನ್. ಮಾಳಿಗಿ)
ವೇಳೆ :– ೬೦ ಮಿನೀಟು

ಮೆಟ್ಟಲು ಹಾಗೂ ವಿವರ	ಆವಶ್ಯಕ ಜ್ಞಾನ	ಕಲಿಸುವ ಕ್ರಮ	ಕ. ಹ. ಬರೆಹ
೧. ಯೋಜನೆ:- (ಅ) ಪ್ರೇರಣೆ–	ಈ ವರ್ಷದಲ್ಲಿ ನಾವು ಆಸನಗಳನ್ನು ನೇಯುವದಿದೆ. ಅದಕ್ಕಾಗಿ ಸಾಕಷ್ಟು ನೂಲು ತಯಾರಿಸಬೇಕು. ಈ ಪೂರ್ವದಲ್ಲಿ ಹತ್ತಿಯನ್ನು ಸ್ವಚ್ಛಮಾಡಿ ಇಡಲಾಗಿದೆ.	೧. ಈ ವರ್ಷ ನಾವು ಏನನ್ನು ನೇಯಬೇಕಾಗಿದೆ ? ೨. ಅದಕ್ಕಾಗಿ ನಮಗೆ ನೂಲು ಸಾಕಷ್ಟು ಆಗಬೇಕಾದರೆ ಏನು ಮಾಡಬೇಕು ? ೩. ಹಾಗಿದ್ದರೆ ನಾವು ನೂಲಿಗಾಗಿ ಈ ಮುಂಚೆ ಯಾವ ಪೂರ್ವ ಕೆಲಸ ಮಾಡಿಟ್ಟುಕೊಂಡಿದ್ದೇವೆ ? ೪. ಅಂದ ಬಳಿಕ ಈಗ ಮುಂದಿನ ಯಾವ ಕೆಲಸ ಮಾಡೋಣ ?	ಚ:— ಹತ್ತಿಯನ್ನು ಅರೆದು, ಹಿಂಜಿ ಹಂಜಿ ಹಾಕುವದು.
(ಬ) ಅವಶ್ಯಕತೆ–	ಈಗ ಹತ್ತಿಯನ್ನು ಅರೆದು, ಬಂದ ಅರಳೆಯಿಂದ ಹಿಂಜಿ ಹಂಜಿ ಮಾಡಬೇಕು. (ಅದಕ್ಕಾಗಿ–)		
(ಕ) ಕೆಲಸದ ವಿವರ:–	೧. ಸಾಧನ ಸಾಮುಗ್ರಿಗಳನ್ನು ತೆಗೆದುಕೊಂಡು ವ್ಯವಸ್ಥಿತವಾಗಿ ಇಟ್ಟುಕೊಳ್ಳುವದು. ೨. ಹತ್ತಿಯನ್ನು ಅರೆಯುವದು. ೩. ಹಿಂಜುವದು. ೪. ಹಂಜಿ ಹಾಕುವದು. ೫. ಕಾಳು ಹಾಗು ಹಂಜಿಗಳನ್ನು ಸುರಕ್ಷಿತವಾಗಿ ಇಡುವದು.	ಹಂಜಿಗಳನ್ನು ತಯಾರಿಸಬೇಕಾದರೆ ನಾವು ಯಾವ ಯಾವ ಕೆಲಸ ಮಾಡಬೇಕಾಗುವದು ?	

ಯೋಜನೆ:—

ಕೆಲಸ (ಚಟುವಟಿಕೆ)	ಸಾಧನ	ಸಂಖ್ಯೆ	ಹಂಚು ವವರು
ಅರೆಯುವದು	ಹತ್ತಿ ಕುಡಮಣಿ	೨೪	ಅ.
ಹಿಂಜುವದು	ಬಿಲ್ಲು	೨೪	ಬ.
ಹಂಜಿ–ಹಾಕುವದು	ಹಂಜೀಮಣಿ ಹಂಜಿಕಡ್ಡಿ	೨೪	ಕ.
ಸಂರಕ್ಷಣೆ	ಕಾಗದ	೨೪	ಡ.

(ಡ) ಸಾಧನ ಸಾಮಗ್ರಿಗಳು:–	**ಈ ಕೆಲಸಕ್ಕಾಗಿ ೧. ಹತ್ತಿ ಅರೆಯಲಿ**ಕ್ಕಾಗಿ ೨. ಕುಡಮಣಿಯ ಸೆಟ್ಟು ೩. ಹಿಂಜುವ ಬಿಲ್ಲು (ಹಿಂಜುವದಕ್ಕಾಗಿ) ೪. ಹಂಜಿಯ ಸೆಟ್ಟು (ಹಂಜೀಹಾಕಲು) ೫. ಕಾಗದದ ತುಂಡುಗಳು (ಹಿಂಜಲು, ಹಾಗೂ ಹಂಜಿಗಳ ರಕ್ಷಣೆಗಾಗಿ)	**ಈ ಕೆಲಸಕ್ಕಾಗಿ ನಮಗೆ ಯಾವ** ಯಾವ ಸಾಧನ ಸಾಮಗ್ರಿಗಳು ಬೇಕು ? ಯಾತಕ್ಕಾಗಿ ? ಎಷ್ಟೆಷ್ಟು ಬೇಕು ?
೨. ಪೂರ್ವಸಿದ್ಧತೆ: **(ಅ) ಕಾರ್ಯಸಂಘಟನೆ:–** **(ಬ) ವೇಳೆ:–**	(೨೫ ನಿಮಿಷ ಕೆಲಸ ಮಾಡುವದು.)	ಈ ಸಾಧನ ಸಾಮಗ್ರಿಗಳನ್ನು ವರ್ಗದಲ್ಲಿ ಹೇಗೆ ಹಂಚೋಣ ? (ವರ್ಗದಲ್ಲಿ ಐದು ಜನ ಮುಂದಾಳುಗಳನ್ನು ಆರಿಸಿ ಅವರ ಮುಖಾಂತರ ಎಲ್ಲ ಸಾಧನ ಸಾಮಗ್ರಿಗಳನ್ನು ಹಂಚುವದು.)
೩. ಕಾರ್ಯ:– **(ಅ) ಶಿಕ್ಷಕರ ಮಾದರಿ ಕೃತಿ:–**		ಶಿಕ್ಷಕರು, ಸಾಧಾರಣ ಎರಡೆರಡು ತೊಲಿ ಹತ್ತಿಯನ್ನು ಅರೆಯಲು ಕೊಡುವದು, ಕೆಲಸದ ನಿರ್ದಿಷ್ಟ ವೇಳೆ ತಿಳಿಸುವದು. ರೂಢಿಯ ಚಟುವಟಿಕೆಯಾದ್ದರಿಂದ ಬಾಲಕರೊಡನೆ ಶಿಕ್ಷಕರು ಕೆಲಸ ಮಾಡುವದು.
(ಬ) ನೆನಪಿಡತಕ್ಕ ಸಂಗತಿಗಳು:–	೧. ಕಾಳುಗಳೊಡನೆ ಅರಳೆ ಉಳಿಯದಂತೆ ೨. ತಿಳಿಯಾಗಿ ಹಿಂಜುವದು. ೩. ಪ್ರಮಾಣದಂತೆ ಹಂಜಿ ಹಾಕಿ ಸುರಕ್ಷಿತವಾಗಿಡುವದು.	
(ಕ) ಬಾಲಕರ ಕೃತಿ:–		ಶಿ. ರು ಬಾಲಕರ ಕೆಲಸಗಳನ್ನು ನಿರೀಕ್ಷಿಸುತ್ತ ಮಾರ್ಗದರ್ಶನ ಮಾಡುವದು.

ಪಾಠ್ಯಾಂಶ ಹಾಗೂ ವಿವರ	ಆವಶ್ಯಕ ಜ್ಞಾನ	ಕಲಿಸುವ ಕ್ರಮ	ಕ. ಹ. ಬರೆಹ.
(ಳ) ಪರಿಶೀಲನೆ: (ಅ) ತುಲನೆ:–		ಶಿಕ್ಷಕರು ಬಾಲಕರೊಡನೆ ಚರ್ಚಿಸುತ್ತ ಯೋಜನೆ ಹಾಗೂ ಆದ ಕೆಲಸಗಳ ತುಲನೆ ಮಾಡುವದು.	
(ಬ) ಕಾರ್ಮಿಕ ತಪ್ಪುಗಳು:–		ಕೆಲಸದಲ್ಲಿ ಆದ ತಪ್ಪುಗಳು, ಹಾಗು ತಿದ್ದುವಿಕೆ	
(ಕ) ಅನಿರೀಕ್ಷಿತ ಘಟನೆ:–		ಒದಗಿದ ಆಕಸ್ಮಿಕ ಸಂಗತಿಗಳ ಬಗ್ಗೆ ಚರ್ಚಿಸುವದು.	
೫. ದೃಢೀಕರಣ:- (ಸಮನ್ವಿತ ವಿಷಯ:–)	ನಾವು ಅರಿದ ಹತ್ತಿಯ ಜಾತಿ "ಜಯಧರ"	೧. ಅರಿದ ಹತ್ತಿಯ ಜಾತಿ ಯಾವದು? (ಶಿ. ರು ಹತ್ತಿ ಗಿಡಗಳ ಚಿತ್ರ ತೋರಿಸುತ್ತ) ೨. ಇಲ್ಲಿ ನಿಮಗೆ ಮತ್ತೆ ಯಾವ ಯಾವ ಜಾತಿಯ ಹತ್ತಿಗಳು ಕಾಣುತ್ತಿವೆ? ೩. ಇವುಗಳ ಪರಸ್ಪರ ಸಂಬಂಧವು ನಿಮಗೇನು ಗೊತ್ತಿದೆ?	(ಹತ್ತಿಯ ಗಿಡಗಳ ಚಿತ್ರಗಳು) ಜಯವಂತ  ಧಾರವಾಡ ನಂ. ೧ ಧಾರವಾಡ ನಂ. ೨
	ಮೊಟ್ಟ ಮೊದಲು ನಮ್ಮ ಕರ್ನಾಟಕದಲ್ಲಿ "ಜವಾರಿ" ಎಂಬ ಹೆಸರಿನ ಹತ್ತಿಯು ಬೆಳೆಯುತ್ತಿತ್ತು. ಇದು ಕುಮಠಾ ಬಂದರದ ಮುಖಾಂತರ ಪರದೇಶಗಳಿಗೆ ಕಳಿಸಲ್ಪಡುತ್ತಿತ್ತು. ಕಾರಣ ಪರದೇಶದವರಿಂದ ಇದಕ್ಕೆ "ಕುಮಠಾ ಹತ್ತಿ" ಎಂಬ ಹೆಸರುಂಟಾಯಿತು. ಇದರಲ್ಲಿ ಎರಡು ಬಗೆಯ ಹತ್ತಿಗಳು ಕಾಣುತ್ತಿದ್ದವು. ಒಂದರ ತಂತುಗಳು ಉದ್ದವಾಗಿ ಜಿನುಗಾಗಿ ಇದು ಹೆಚ್ಚು ಪ್ರಮಾಣದಿಂದ ಅರಳೆ	ಶಿಕ್ಷಕರು ಪೂರ್ವಸಂಬಂಧ ಹೇಳುವದು. (ನಂ. ೧–೨ ಹತ್ತಿಯ ಚಿತ್ರಗಳನ್ನು ತೋರಿಸುತ್ತ–)	

ಗೂಡಿದೆ. ಆದರೆ ಇದಕ್ಕೆ ಸಿಡಿ ರೋಗದ ಭಯ ಬಹಳವಿದೆ. ಮತ್ತೊಂದರ ತಂತುಗಳು ಗಿಡ್ಡ ಹಾಗೂ ದಪ್ಪವಾದವುಗಳಿದ್ದು, ಕಡಿಮೆ ಪ್ರಮಾಣದ ಅರಳೆಯಿಂದ ಕೂಡಿದೆ ಇದಕ್ಕೆ ಸಿಡಿ ರೋಗದ ಭಯ ಕಡಿಮೆ.

ಈ ಎರಡೂ ಜಾತಿಯ ಹತ್ತಿಗಳನ್ನು ಸಂಕರಣ ಮಾಡಿ, ಇವೆರಡರಲ್ಲಿದ್ದ, ಕೇವಲ ಒಳ್ಳೇ ಗುಣಗಳುಳ್ಳ ಬೇರೊಂದು ಜಾತಿಯ ಹತ್ತಿಯನ್ನು ತಯಾರಿಸಿದರು. ಇದೇ "ಜಯವಂತ" ಹತ್ತಿಯು.

ಇದನ್ನು ತಯಾರಿಸಿದ್ದು ನಮ್ಮ ಧಾರವಾಡದ ಫಾರ್ಮಿನಲ್ಲಿಯೇ. ಈ ಹಿಡಿದ ಕೆಲಸವು ಕೈಗೂಡಿದ್ದಕ್ಕಾಗಿ ಇದಕ್ಕೆ "ಜಯವಂತ"ವೆಂದೇ ಹೆಸರಿಟ್ಟರು. ಜಯವಂತ ಹತ್ತಿಯ ಹುಟ್ಟಿಗೆ ಆಧಾರವಾದ ಆ ಎರಡೂ ಜಾತಿಯ (ಜವಾರಿ) ಹತ್ತಿಗಳಿಗೆ ಧಾರವಾಡ ನಂಬರ ೧. ಹಾಗೂ ಧಾರವಾಡ ನಂ. ೨ ಎಂದು ಹೆಸರಿಟ್ಟಿರುವರು.

ಜಯವಂತ ಹತ್ತಿಯಲ್ಲಿಯೇ ಮತ್ತೆ ಸುಧಾರಣೆ ಮಾಡಿ ಈ ಜಯಧರ ಹತ್ತಿಯನ್ನು ತಯಾರಿಸಲಾಗಿದೆ. ಜಯವಂತ ಹತ್ತಿಯಂತೆ ಇದರ ತಂತುಗಳು ೧" ಉದ್ದವಾಗಿದ್ದು, ೪೦ ನಂಬರಿನ ವರೆಗೆ ನೂಲು ತೆಗೆಯಲು ಬರುತ್ತವೆ. ಉತಾರವು ಜಯವಂತಕ್ಕಿಂತ ಹೆಚ್ಚು ಇರುವದಲ್ಲದೆ, ಸಿಡಿ ರೋಗವಂತೂ ತಟ್ಟುವದೇ ಇಲ್ಲ.

೪. ಈ ಚಿತ್ರಗಳಲ್ಲಿ ನಿಮಗೆ ಏನೇನು ಹೆಚ್ಚು ಕಡಿಮೆಗಳು ಕಾಣಿಸುತ್ತಿವೆ ?

೫. ಯಾಕೆ ?

೬. ಹಾಗಾದರೆ ಇವೆರಡರಲ್ಲಿರತಕ್ಕ ಕೇವಲ ಒಳ್ಳೇ ಗುಣಗಳನ್ನೇ ಹೇಳಿರಿ. (೩ನೆಯ ಚಿತ್ರ ತೋರಿಸುತ್ತ–)

೭. ಇದರಲ್ಲಿ ನಿಮಗೆ ಯಾವ ಗುಣಗಳು ಕಂಡು ಬರುತ್ತಿವೆ ?

೮. ಇದರ ಜನ್ಮ ಹೇಗಾಯಿತು. (ಶಿ. ರು ಸಂಕರಣದ ರೀತಿಯಿಂದ ತಯಾರಿಸಿದ್ದನ್ನು ವಿವರಿಸುವದು)

(ಹತ್ತಿಯ ನಮೂನೆ, ಹಾಗೂ ಅವುಗಳ ಗುಣಧರ್ಮ ತೋರಿಸುವ ಪಟವನ್ನು ನಿರೀಕ್ಷಣಮಾಡಿಸಿ–)

೯. ಇದರಲ್ಲಿ ನಿಮಗೆ ಯಾವ ಯಾವ ಜಾತಿಯ ಹತ್ತಿಗಳು ಕಾಣಿಸುತ್ತಿವೆ. ?

೧೦. ಇವುಗಳ ಗುಣಧರ್ಮಗಳನ್ನು ಹೇಳಿರಿ.

೧೧. ಇವುಗಳಲ್ಲಿ ಯಾವ ಹತ್ತಿಯು ಉತ್ತಮವೆಂದಂತಾಯಿತು ?

೧೨. ಇದರ ಹುಟ್ಟು ಹೇಗಾಯಿತು ? (ಶಿ. ರು. ತಿಳಿಸಿ ಹೇಳುವದು)

ವಿವಿಧ ಹತ್ತಿಗಳು, ಹಾಗೂ ಅವುಗಳ ಗುಣಧರ್ಮ

ಹತ್ತಿಯ ಚಿತ್ರ	ಹತ್ತಿಯ ಹೆಸರು	ತಂತುವಿನ ಉದ್ದ	ನೂಲಿನ ನಂಬರು	ಉತಾರ	ಸಿಡಿರೋಗದ ಬಾಧೆ
★	ಜಯಧರ	೧"	೪೦	೩೨	ಇಲ್ಲ.
★	ಜಯವಂತ	೧"	೪೦	೨೮	ಬಹು ಕಡಿಮೆ
★	ಧಾರವಾಡ ನಂ. ೧	·೯೨"	೩೬	೨೮	ಹೆಚ್ಚು
★	ಧಾರವಾಡ ನಂ. ೨	·೮೨"	೨೪	೨೭	ಕಡಿಮೆ

ಗಂಡು ಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜದಲ್ಲಿ ಕೊಟ್ಟ "ಮಾದರಿ ಪಾಠ"

ಜೀವನ ಶಿಕ್ಷಣ ಪ್ರಪಂಚದಲ್ಲಿ

ಧಾರವಾಡ :– ಶೈಕ್ಷಣಿಕ ಸಮ್ಮೇಲನವು ದಿ. ೨೧-೧-೫೭ರಂದು ಜಿಲ್ಹಾ ನ್ಯಾಯಾಧಿಕಾರಿಗಳಾದ ಶ್ರೀ ಆರ್. ಎಸ್. ಅಂಬೇಕರ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀಮತಿ ರಮಾಬಾಯಿ ಅಂಬೇಕರ ಇವರಿಂದ ಬಹುಮಾನ ವಿತರಣವು ನಡೆಯಿತು. ಸಂಜೆ ೪-೩೦ಕ್ಕೆ ಕಲಾವಸ್ತು ಪ್ರದರ್ಶನದ ಉದ್ಘಾಟನೆಯು ಧಾರವಾಡ ಜಿಲ್ಹಾಧಿಕಾರಿಗಳು ಶ್ರೀ ಆರ್. ವೆಂಕಟಾಚಲಂ ಇವರ ಅಮೃತ ಹಸ್ತದಿಂದ ನೆರವೇರಿತು. ಸಂಜೆ ೬ ಗಂಟೆಗೆ ಶ್ರೀ ಎಸ್. ಎಸ್. ಒಡೆಯರ ಇವರ ಅಧ್ಯಕ್ಷತೆಯಲ್ಲಿ ಮಕ್ಕಳ ವಿವಿಧ ವಿನೋದಾವಳಿಗಳು ಜರುಗಿದವು. ದಿ. ೨೨-೧-೫೭ರಂದು ಶ್ರೀ ಜಿ. ಕೆ. ಕೊಪ್ಪಿಕರ, ಜಿಲ್ಹಾ ಶಿಕ್ಷಣಾಧಿಕಾರಿಗಳು ಅಧ್ಯಕ್ಷರಾಗಿದ್ದರು. ಶ್ರೀ ಎಮ್. ಜಿ. ಹಂದ್ರಾಳ, ವ್ಹಾ. ಪ್ರಿ. ಜಿ. ಬಿ. ಟಿ. ಸಿ. ಇವರು ಜೀವನ ಶಿಕ್ಷಣದ ಬಗ್ಗೆ ಭಾಷಣ ಮಾಡಿದರು. ಮದ್ಯಾಹ್ನ ೩ ಗಂಟೆಗೆ ಬಹಿರಂಗ ಅಧಿವೇಶನವು ಶ್ರೀ ಎಚ್. ಎಫ್. ಕಟ್ಟಿಮನಿ, ಎಮ್. ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಚರ್ಚೆಯಲ್ಲಿ ಎಲ್ಲ ಶಿಕ್ಷಕರೂ ಶ್ರೀ ಕೆ. ಬಿ. ತೆರಗಾಂವಕರ ಡಿ.ಡಿ.ಪಿ.ಆಯ್., ಶ್ರೀ ಎಸ್. ಸಿ. ಉಣಕಲ್ಲ ಮುಂಭಾಗ ವಹಿಸಿದ್ದರು. ಇಲ್ಲಿ ಪಾಸಾದ ಠರಾವುಗಳ ಕಾರ್ಯಕಾರಣಿ ಮಾಡಲು ಒಂದು ಸಬ್ ಕಮಿಟಿಯನ್ನು ನೇಮಿಸಲಾಯಿತು. ನಂತರ ಅಧ್ಯಕ್ಷರು ಬಹುಮಾನ ಹಂಚಿದರು. ಕೊನೆಗೆ ಅಧ್ಯಕ್ಷರು ‘‘ಸಮ್ಮೇಲನವು ಬಹು ಯಶಸ್ವಿಯಾಗಿ ಜರುಗಿತೆಂದು” ಉದ್ಗಾರ ತೆಗೆದು ಭಾಷಣ ಮಾಡಿದರು.

ಅಮರಗೋಳ (ತಾ. ಮುದ್ದೇಬಿಹಾಳ) :– ಇಲ್ಲಿಯ ೫-೬ ಮತ್ತು ೭ನೆಯ ಇಯತ್ತೆಯ ವಿದ್ಯಾರ್ಥಿಗಳು ತಾ. ೧೦ರಿಂದ ೧೪-೧೧-೫೬ನೇ ಇಸ್ವಿಯ ವರೆಗೆ ಬದಾಮಿ, ಮೇಣಬಸದಿ, ಬಾಗಲಕೋಟೆಯ ಸಿಮೆಂಟ ಕಂಪನಿ ಮತ್ತು ಹವೇಲಿ ಫಾರ್ಮ ಮುಂತಾದವುಗಳನ್ನು ಸಂದರ್ಶಿಸಿದರು. ಶ್ರೀ ಸಂ. ಅ. ಬಿದರಕುಂದಿ ಅ. ಮಾಸ್ತರರು ಕರಕೊಂಡು ಹೋಗಿದ್ದರು.

ಕಲ್ಲೇದೇವರ :- ನಮ್ಮ ಶಾಲೆಯ ಉ. ಗುರು ಶ್ರೀ ವ್ಹಿ. ಎಸ್. ಪಾಟೀಲ ಇವರನ್ನು ಟ್ರೇ. ಕಾಲೇಜಕ್ಕೆ ಆರಿಸಿದ್ದರಿಂದ ಅವರನ್ನು ಬೀಳ್ಕೊಡಲು ಶ್ರೀ ಕನ್ನಮ್ಮನವ ಅಧ್ಯಕ್ಷತೆಯಲ್ಲಿ ಸಭೆ ಕರೆಯಲಾಗಿತ್ತು. ಅಂದು ಸಭೆಯಲ್ಲಿ ನಮ್ಮ ಶಾಲೆಯಿಂದ ಮುಲ್ಕಿ ಪರೀಕ್ಷೆಗೆ ೧ ನೇ ನಂಬರ ಬಂದ ಕು. ಕೆ. ಜಿ. ಹಿರೇಮಠ ಇವರಿಗೆ ಸರ ಪಂಚರು ೫ ರೂಪಾಯಿ ಬಹುಮಾನ ಕೊಟ್ಟರು.

ಗೊಜನೂರ :– ದಿ. ೧೬-೬-೫೭ ಇಲ್ಲಿಯ ಹಳೆಯ ವಿದ್ಯಾರ್ಥಿ ಶ್ರೀ ಕೃಷ್ಣಮೂರ್ತಿ ತಂಗೋಡ ಇವರು ಈ ಸಲದ ಎಮ್. ಎ. ಪರೀಕ್ಷೆಯಲ್ಲಿ ೨ನೇ ವರ್ಗದಲ್ಲಿ ಬಂದದ್ದರಿಂದ ನಮ್ಮ ಶಾಲೆಯ ವತಿಯಿಂದ ಶ್ರೀ ಎಸ್. ಕುಲಕರ್ಣಿ ಅಕ್ಕಿಗುಂದ ಇವರ ಹಿರಿತನದಲ್ಲಿ ಸತ್ಕಾರ ಸಮಾರಂಭವನ್ನು ಏರ್ಪಡಿಸಲಾಯಿತು.

ಅಂಕಲಿ :– ದಿ. ೧೫-೬-೫೭ರಂದು ಶಿಕ್ಷಕ ಶಿಕ್ಷಕಿಯರ ಗ್ರುಪ್ ಸಮ್ಮೇಲನವು ಮೆ. ಬಿ. ಟಿ. ಚಿವಟೆ, ಅ. ಡಿ.ಎ.ಇ., ಮೆ. ಆರ್. ವ್ಹಿ. ಶಿಂಧೆ ಮತ್ತುಮೆ. ಕು. ವ್ಹಿ. ಡಬ್ಲಿಯು. ಖೋತ ಬೆಳಗಾಂವಿ ಇವರ ನೇತೃತ್ವದಲ್ಲಿ ಜರುಗಿತು. ಸರಪಂಚರಾದ ಶ್ರೀ ಬಿ. ಪಾಟೀಲರು ಅಧ್ಯಕ್ಷರಾಗಿದ್ದರು. ಮೆ. ಚಿವಟೆ ಸಾಹೇಬರು ಮತ್ತು ಕು. ಖೋತ್ ಬಾಯಿಯವರು ೧೮೫೭ರ ಸ್ವಾತಂತ್ರ್ಯ ಯುದ್ಧದ ಶತಾಬ್ದಿ ಉತ್ಸವ ಆಚರಿಸುವ ಯೋಜನೆಯ ಬಗ್ಗೆ ಹಾಗೂ ಸಾಂಘಿಕ ಜೀವನ ಚಟುವಟಿಕೆಯ ವಿಷಯದ ಬಗ್ಗೆ ಮಾತನಾಡಿದರು. ಮೆ. ಸಿಂಧೆ ಸಾಹೇಬರು ಪಿ.ಎಸ್.ಸಿ. ಪರೀಕ್ಷೆಯ ಪರಿಣಾಮದ ಬಗ್ಗೆ ನಾಗರಿಕ ದೃಷ್ಟಿಕೋನ ಹಾಗೂ ಶಿಕ್ಷಕರ ಕರ್ತವ್ಯಗಳ ಬಗ್ಗೆ ದೀರ್ಘ ಕಾಲ ಹೇಳಿದರು.

ನೇಸರಗಿ :- ದಿ. ೯-೬-೫೭ರಂದು ಇಲ್ಲಿಯ ವಿದ್ಯಾಮಂದಿರ ಹೈಸ್ಕೂಲ ಶಾಲಾ ಕಟ್ಟಡದ ಉದ್ಘಾಟನಾ ಸಮಾರಂಭವು ಶ್ರೀ ಎಸ್. ವ್ಹಿ. ಜೇವೂರ ಇವ ಅಮೃತ ಹಸ್ತದಿಂದ ಜರುಗಿತು. ಡಾ. ಮೈಕೇಲ ರಾಡ್ರಿಗ್ಸ ಡಿ. ಡಿ. ಯವರು ಅಧ್ಯಕ್ಷತೆಯನ್ನು ವಹಿಸಿದ್ದರು. ಉದ್ಘಾಟನೆಯ ನಂತರ ಮಾನ್ಯ ಅತಿಥಿಗಳು ಭಾಷಣ ಮಾಡುತ್ತ, ೫ ವರ್ಷಗಳ ಅಲ್ಪಾವಧಿಯಲ್ಲಿಯೇ ವಿದ್ಯಾ ಮಂದಿರವು ಸಾಧಿಸಿದ ಪ್ರಗತಿಯನ್ನೂ ಇದಕ್ಕೆ ಕಾರಣ

ರಾದವರನ್ನು ಹೊಗಳಿದರು. ಈ ಸಮಾರಂಭಕ್ಕೆ ಸುತ್ತ ಲಿನ ೫೭೦ ಶಿಕ್ಷಣ ಪ್ರೇಮಿಗಳು ಆಗಮಿಸಿದ್ದರು.

ಇಲ್ಲಿಯ ಜೀ. ಶಿ. ಶಾಲೆಯಲ್ಲಿ ನಡೆಯುತ್ತಿರುವ ಸಮಾಜ ಶಿಕ್ಷಣ ವರ್ಗಕ್ಕೆ ಮೆ. ಮಾನ್ಯ ಜೇವೂರ ಮತ್ತು ಮಾನ್ಯ ಲೋಹಿಡೇಕರ ಸಾಹೇಬರು ಇಲ್ಲಿಯ ಬೀಟ ಆಫೀಸರ ರೊಂದಿಗೆ ಭೆಟ್ಟಿಯನ್ನಿತ್ತರು. ಅಧಿಕಾರಿಗಳು ವರ್ಗದ ಪ್ರಗತಿಯನ್ನು ಕಂಡು ಆನಂದ ಪಟ್ಟರು ಮತ್ತು ಪ್ರೌಢ ಶಿಕ್ಷಣದ ಮಹತ್ವದ ಬಗ್ಗೆ ಉಪದೇಶಿಸಿದರು.

ಇಲ್ಲಿಯ ಕ. ಗಂ. ಮು. ಶಾಲೆಯಲ್ಲಿ ದಿನಾಂಕ ೨೨-೬-೫೭ರಂದು ೧೯೫೭ನೇ ಎಪ್ರಿಲದಲ್ಲಿ ಜರುಗಿದ ಪ್ರಾ. ಶಾ. ಪ್ರ. ಪ. ಪರೀಕ್ಷೆಯಲ್ಲಿ ಉತ್ತೀರ್ಣರಾದ ಬಾಲಕರ ಸರ್ಟಿಫಿಕೇಟ ವಿತರಣ ಸಮಾರಂಭವು ಶ್ರೀ ಬ. ಸ. ಕರಡಿ ನಿವೃತ್ತ ಗುರುಗಳ ಅಧ್ಯಕ್ಷತೆಯಲ್ಲಿ ಜರುಗಿತು. ಅಧ್ಯಕ್ಷರು ಪ್ರಮಾಣ ಪತ್ರಗಳನ್ನು ಹಂಚಿದ ನಂತರ ಇಂದಿನ ಪಂಚವಾರ್ಷಿಕ ಯೋಜನೆ ಮತ್ತು ಶಾಲೆ, ಹೇಗೆ ಸಂಬಂಧವಾಗಿವೆ ಎಂಬದನ್ನು ತಿಳಿಸಿದರು.

ಲಾಯದಗುಂದಿ :– ನಮ್ಮ ಶಾಲೆಗೆ ಊರ ಪ್ರಮುಖರು ಶಾಲಾ ಅನುಕೂಲತೆಗಾಗಿ ಹೊಸ ಖೋಲಿ ಗಳೆರಡನ್ನು ಕಟ್ಟಿಸುವದರಸಲುವಾಗಿ ೨೬೦೦ ರೂಪಾಯಿ ಲಾಯಬ್ರಿ–೧೫೦ ರೂ. ನೀರಿನಟಾಕಿ, ರೆಡಿಯೋಗಳ ದೆಸೆ ಯಿಂದ ೫೦೦ ರೂ. ಗಳ ಸಹಾಯ ಮಾಡಿದ್ದು ಈಗಾ ಗಲೇ ನೀರಿನ ಟಾಕಿ, ವಾಚನಾಲಯ ಮತ್ತು ರೇಡಿಯೋ ಕೆಲಸ ಮಾಡುತ್ತವೆ. ಕಟ್ಟಡವು ಚಾಲು ಆಗಿದೆ.

ಹಮ್ಮಿಗಿ :– ಇಲ್ಲಿಯ ಕ. ಗಂ ಮು. ಶಾಲೆಯಿಂದ ನವಲಗುಂದ ತಾಲೂಕ ಪೈಕಿ ಮಣಕವಾಡ ಶಾಲೆಗೆ ವರ್ಗಾಯಿಸಿದ ಉ. ಗುರುಗಳಾದ ಶ್ರೀ ಮ. ಖಾ. ಮುಲ್ಲಾನವರನ್ನು ಬೀಳ್ಕೊಡಲಾಯಿತು. ಸಭೆಯಲ್ಲಿ ಸದರೀಯವರ ಕರ್ತವ್ಯ, ಶಿಕ್ಷಣದ ರೀತಿಗಳನ್ನು ಹೊಗಳ ಲಾಯಿತು.

ಬಟ್ಟೂರ :– ದಿ. ೧೭-೬-೧೯೫೭ರಂದು ಇಲ್ಲಿಯ ಊರ ಪ್ರಮುಖರು ಮನರಂಜನೆಯ ಕಾರ್ಯಕ್ರಮವು ಮೆ. ಮಾಮಲೇದಾರ ಸಾಹೇಬ ವ ಅಭಿವೃದ್ಧಿ ಅಧಿಕಾರಿ ಮತ್ತು ಅ. ಡಿ. ಎ. ಇ. ಶಿರಹಟ್ಟಿ ಭಾಗದ ಶಿಕ್ಷಣಾಧಿ ಕಾರಿಗಳ ನೇತೃತ್ವದಲ್ಲಿ ಯಶಸ್ವಿಯಾಗಿ ಜರುಗಿತು.

ಕೋಟಮಂಜಗಿ :– ದಿ. ೨೪-೬-೧೯೫೭ರಂದು ಪ್ರತಿಸಲದಂತೆ ಈ ಸಲ ಮೊದಲನೇ ವರ್ಷವೇ ಪಾಸಾದವ ರಲ್ಲಿ ಹೆಚ್ಚಿಗೆ ಗುಣಗಳನ್ನು ಪಡೆದು ಪಾಸಾದವರಿಗೆ ಶ್ರೀ ಶ್ರೀ ಬಿ. ಎಸ್. ಸೊನ್ನದ, ಬಿ.ಎ.,ಬಿ.ಟಿ. ಇವರು ತಮ್ಮ ದಿ. ಮಾತೋಶ್ರೀಯವರ ಸ್ಮರಣೆಗಾಗಿ ೧೦ರೂ. ಬಹ ಮಾನವನ್ನಿತ್ತರು.

ಮುಂಕಣಿ (ತಾ. ಬಾಗಲಕೋಟ) :– ದಿನಾಂಕ ೨೪-೬-೫೭ರಂದು ಪ್ರೌಢರ ೨ನೇ ವರ್ಗದ ಸರ್ಟಿಫಿಕೇಟ ವಿತರಣ ಸಮಾರಂಭವು ಮೆ. ಅ. ಡಿ. ಎ. ಇ. ಶ್ರೀ ಕೆ. ಜಿ ಕಲ್ಲನಗೌಡರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀಮತಿ ಮಲ್ಲವ್ವ ಜ್ಯೋತಿ ಇವರು ಬಡಮಕ್ಕಳಿಗೆ ೨೦ವಾರ ಅರಿವೆ ಒಂದು ನಾಗವಾನಿ ಕಪಾಟು ಕೊಡುತ್ತೇನೆಂದು ವಾಗ್ದಾನ ಮಾಡಿರುವರು. ಬಡ ವಿದ್ಯಾರ್ಥಿಗಳಿಗೆ ಊಟ, ವಸತಿ, ಪಾಟಿ, ಪುಸ್ತಕಗಳನ್ನು ಸ್ಕೂಲ ಕಮಿಟಿ ಮಂಡಲದವರು ಕೊಡುವ ವ್ಯವಸ್ಥೆ ಮಾಡಿದ್ದಾರೆ. ಬರಲಿರುವ ವಿದ್ಯಾರ್ಥಿ ಗಳು ತೀವ್ರ ಬರಬೇಕಾಗಿ ವಿನಂತಿ.

ಅಕ್ಕಿಆಲೂರ :– ದಿ. ೧೯-೬-೫೭ರಂದು ಕ. ಗಂ. ಶಾಲೆಯಲ್ಲಿ ಶ್ರೀ ಕೃಷ್ಣಾಜಪ್ಪ ಬಾಳಪ್ಪ ಇವರ ಅಧ್ಯಕ್ಷತೆ ಯಲ್ಲಿ ಈ ಶಾಲೆಯಿಂದ ವರ್ಗವಾದಂಥ ಶ್ರೀ ಕ. ಫ. ಸಾಸ್ವಿಹಳ್ಳಿ ಹೆ. ಮಾ. ಹಾಗೂ ಅ. ಮಾಸ್ತರರಾದ ಶ್ರೀ ಜಂ. ಬ. ಬಾಳೂರ ಮತ್ತು ಶ್ರೀ ಬ. ಮ. ಶಿರಗುಂಪಿ ಇವ ರಿಗೆ ಬೀಳ್ಕೊಡುವ ಹಾಗೂ ಹೊಸದಾಗಿ ಆಗಮಿಸಿದ ಮೆ. ಅ. ಡಿ. ಎ. ಇ. ಶ್ರೀ ಜಿ. ಆರ್. ಕುಲಕರ್ಣಿ ಇವರನ್ನೂ ಸ್ವಾಗತಿಸುವ ಸಮಾರಂಭವನ್ನು ನೆರವೇರಿಸಲಾಯಿತು.

ನಂದಗಾಂವ-ಖಾನಾಪೂರ :– ದಿನಾಂಕ ೨೩-೬-೫೭ರಂದು ಇಲ್ಲಿಯ ಜೀವನ ಶಿಕ್ಷಣ ಕ. ಗಂ. ಶಾಲೆ ಯಲ್ಲಿ ಪ್ರ. ಗುರುಗಳೆಂದು ಕೆಲಸ ಮಾಡಿದ ಶ್ರೀ ಅ. ಖಾ. ಪಾಚ್ಛಾಪೂರರವರ ಸೇವಾ ನಿವೃತ್ತಿಯ ಬೀಳ್ಕೊಡುವ ಸಮಾರಂಭವು ಶ್ರೀ ಪರಮಪೂಜ್ಯ ಮಹಾಸ್ವಾಮಿಗಳು ಸಂಸ್ಥಾನಮಠ ಸಾವಳಗಿಯವರ ಅಧ್ಯಕ್ಷತೆಯಲ್ಲಿ ಜರು ಗಿತು.

ಬಳಹಟ್ಟಿ :– ದಿ. ೧೫–೬–೫೭ರಂದು ಇಲ್ಲಿಯ ಕ. ಗಂ. ಮು. ಶಾಲೆಯ ಹೊಸ ಕಟ್ಟಡದ ಉದ್ಘಾಟನಾ ಸಮಾರಂಭವು ಶ್ರೀ ಸಿ. ಎಮ್. ನಾಡಗೌಡ ಡಿ. ಸ್ಕೂ. ಬೊ. ಚೇರಮನ ವಿಜಾಪುರ ಇವರ ಅಧ್ಯಕ್ಷತೆಯಲ್ಲಿ ಮಿ. ಲುಯಿಸ ಪಿ. ಜೆ. ಆಯ್. ಪಿ. ಎಸ್. ಡಿ. ಎಸ್. ಪಿ. ವಿಜಾಪುರ ಇವರ ಅಮೃತ ಹಸ್ತದಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ನಾಡಗೌಡರು ಹೊಸ ಶಿಕ್ಷಣದ ತಿರುಳನ್ನು ತಿಳಿಸಿದರು. ಇದಕ್ಕೆ ಮುಖ್ಯ ಕಾರಣ ಪಾಲಕರ ಕರ್ತವ್ಯ ವೆಂದು ಹೇಳಿದರು.

Regd No. B.

ಶ್ರೀ ಅರವಿಂದ ಪ್ರಭಾವಿತೆಯೂ ಶ್ರೀ ತಾಯಿಯವರ ಪ್ರಾಸಾದಿಕತೆಯೂ ಒಂದೆಡೆಗೆ ತೋರುವ ಪವಿತ್ರ ಸಾಹಿತ್ಯದಿಂ

ವಾಚನಾಲಯದ ಬೆಲೆ ಹೆಚ್ಚಿಸಬೇಡವೇ ?

ಹಾಗಿದ್ದರೆ, ಕೆಳಗೆ ಕಾಣಿಸಿದ ಪುಸ್ತಕಗಳನ್ನು ತರಿಸಿಕೊಳ್ಳಿರಿ.

೧. ನನ್ನನಲ್ಲ (ಅಂತರ್ಮುಖಗೊಳಿಸುವ ದಿ. ಮಧುರಚೆನ್ನರ ಸಮಗ್ರ ಕವನ ಸಂಗ್ರಹ ೧-
೨. ಆತ್ಮಸಂಶೋಧನ (ದಿ. ಮಧುರಚೆನ್ನರ ಜೀವನದ ಕಲಶಪ್ರಾಯದ ಪ್ರಾಂಜಲ ಸಾಹಿತ್ಯ) ೧-
೩. ಪವಿತ್ರ ಜೀವನ (ಹೊಸಕಾಲದ ಋಷಿ ಟಾಲಸ್ಟಾಯರ ಕಥಾಸಂಕಲನ) ೧-
೪. ಸುಂದರ ಕಥೆಗಳು (ಮಕ್ಕಳಿಗೂ ಮಕ್ಕಳಂಥವರಿಗೂ ಶ್ರೀ ತಾಯಿಯವರು ಹೇಳಿದುವು) ೧-
೫. ಶ್ರೀ ಅರವಿಂದರು (ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ) ೧-
೬. ಶ್ರೀ ಅರವಿಂದರ ಪತ್ರಗಳು (ಪೂರ್ಣಜೀವನದ ಸಿರಿಮೊಳಕೆ) ೦-
೭. ಸ್ವರ್ಗಜೋಲಿಗಳು (ಕನ್ನಡಿಗರ ಕೈಗೆ ಬಂದ ಸಾಂಸ್ಕೃತಿಕ ಕನ್ನಡಿ) ೧-
೮. ಮುಗಿಲ ಜೇನು (ಮಿಂಚಿನ ಶಲಾಖೆಯಂಥ ಕವನ ಸಂಕಲನ) ೧-
೯. ಸಪ್ತಪದಿ (ವಿದ್ಯಾರ್ಥಿಗಳ ಮೆಚ್ಚಿಕೆಯ ಏಕಾಂಕಗಳು) ೧-
೧೦. ಭಾರತದ ಭವ್ಯಸಿದ್ಧತೆ (ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ) ೧-
೧೧. ಬೆಟ್ಟದ ಕೋಳಿ (ಜೀವನ ಪ್ರಚೋದಕವಾದ ಕಾದಂಬರಿ) ೧-
೧೨. ಗರತಿಯ ಬಾಳು (ಹೆಣ್ಣಿನ ಮಾಯೆಯಲ್ಲಿ ಕಪಿಲ ಸಿದ್ಧಮಲ್ಲಿಕಾರ್ಜುನ) ೧-
೧೩. ಬಾಳಬಟ್ಟೆ (ಆಧುನಿಕ ಬಾಳಿನ ಬಂಡಾಟಕ್ಕೆ ಚಿಕಿತ್ಸೆ) ೧-
೧೪. ಪೂಜಾ (ಅತೀಂದ್ರಿಯ ಜಾಗ್ರತಿಯ ಮಿಸುಕು) ೦-
೧೫. ಜೀವನ ದೃಷ್ಟಿ (ಭವ್ಯ ಬದುಕಿನ ಬೊಕ್ಕಸ) ೧-
೧೬. ಕನ್ನಡ ಕುಲದೀಪ ಬಸವಣ್ಣ (ಹಿಡಿದರೆ ಹಿಡಿಕೆಯಲ್ಲಿ ಬಿಟ್ಟರೆ ಮನೆತುಂಬ) ೧-

ಕನ್ನಡದಲ್ಲಿ ಶ್ರೀ ಅರವಿಂದರ ಸಾಹಿತ್ಯ ಬೇಕಾದರೆ ಬರೆಯಿರಿ. ಮೇಲೆ ಕಾಣಿಸಿದ ಪುಸ್ತಕಗಳನ್ನೆಲ್ಲ ತರಿಸಿಕೊಂಡಲ್ಲಿ ಅ
ನಾವೇ ವಹಿಸುವೆವು. **ಶ್ರೀ ಅರವಿಂದ ಗ್ರಂಥಾಲಯ ಪೋ:— ಚಡಚಣ** ಜಿ. ಬಿ

ಶ್ರೀ ಜಿ. ಎ. ಬಸವರಾಜ ಅವರ

ಬಯಲಿನುಡಿಯಲ್ಲಿ

ಬೆಲೆ : ೬೦ ನ

[ಕಥಾ ಸಂಕಲನ]

- ಕೇವಲ ೨-೮-೦ (ಅಂಚೆ ಸೇರಿ) ವಾರ್ಷಿಕ ಚಂದಾಹಣದಲ್ಲಿ ಮಾಲೆಯ ೫ನೆಯ ಕುಸುಮವನ್ನಾಗಿ ಪಡೆಯಿರಿ
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ನಾಲ್ಕೈದು ಕೃತಿಗಳು ೪೦೦ ಪುಟಗಳಲ್ಲಿ.
- ಎಪ್ರಿಲದಿಂದ ಎಪ್ರಿಲಕ್ಕೆ ಒಂದು ವರುಷ.
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಶ್ರೇಷ್ಠ ಸಾಹಿತಿಗಳ ಕೃತಿಗಳನ್ನು ಪ್ರಕಟಿಸಿ ಚಂದಾದಾರರಿಗೆ ೩ ಬೆಲೆಯಲ್ಲಿ ಕೊಡಲಾಗುವದು. (ಅಂಚೆ ಬೇರೆ)
- ಶಿಕ್ಷಕರಿಗೆ ವಿಶೇಷ ಸವಲತ್ತುಗಳಿವೆ. ಕೂಡಲೇ ಚಂದಾದಾರರಾಗಿ ತಮ್ಮದೇ ಆದ ಶಿಕ್ಷಕರ ಸಂಸ್ಥೆಯು ಚಿರಸ್ಥಾಯಿ ನಿಲ್ಲುವಂತೆ ನೆರವು ನೀಡಿರಿ. ಈ ಅತ್ಯಲ್ಪಹಣ ತಮ್ಮ ಶಿಕ್ಷಕ ಮಿತ್ರರ ಏಳ್ಗೆಗೆ ಮೀಸಲಾಗಿದೆ.

★ ಮುಂಬೈ ರಾಜ್ಯದ ಶಿಕ್ಷಣಾಧಿಕಾರಿಗಳಿಂದ ಶಾಲಾವಾಚನಾಲಯಗಳಿಗೆ ಮಂಜೂರಾದ ೩೦೦ ಜನ ಶ್ರೇಷ್ಠ ಸಾ
ವಿವಿಧ ಕೃತಿ, ಪರಿಚಯಗಳನ್ನೊಳಗೊಂಡ ' ಅಣೆಕಲ್ಲು ' ' ಪುಟಚೆಂಡು ' ಕಥೆ, ಕವನಗಳ ಪುಸ್ತಕಗಳು ನಿಮ್ಮ
ಕೆಲವೇ ಪ್ರತಿ ಉಳಿದಿವೆ. ಈಗಲೇ ತರಿಸಿಕೊಳ್ಳಿರಿ ಚಂದಾದಾರರಿಗೆ ಮಾತ್ರ ೩ ಬೆಲೆ (ಅಂಚೆ ಬೇರೆ) ಬೆಲೆ ೧೨ ಅ

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

Printed by Shri S. F. Kattimani, at Manohar Power Printing Press, Hubli. Edi
Published by Sjts. S. P. Patil, B. M. Shintri, S. R. Tatti & Smti. P. A. Bhaskar, at the K

ಜೀವನ ಶಿಕ್ಷಣ

16/8/57

ಭಾರತರತ್ನ ಪಂಡಿತ ಜವಾಹರಲಾಲ ನೆಹರೂರವರು

ಪ್ರತಿ ೬ ಆಣೆ ೧೯೫೭ ಅಗಸ್ಟ ವಾ. ಚಂ. ೪ ರೂ.

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : ಶ್ರೀ ಜಿ. ಕೆ. ಕೊಪ್ಪಿಕರ, ಬಿ.ಎ.(ಆನರ್ಸ), ಬಿ.ಎಸ್‌ಸಿ., ಎಮ್‌.ಇಡಿ.
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವ

ಪ್ರಧಾನ ಸಂಪಾದಕರು : ಶ್ರೀ ಎಸ್. ಪಿ. ಪಾಟೀಲ, ಬಿ.ಎ., ಬಿ.ಟಿ., ಡಿ.ಪಿ.ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರ

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರ

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭ (ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯ ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗ

ಸಂಪುಟ ೯೩] ಅಗಸ್ಟ ೧೯೫೭ **[ಸಂಚಿ**

— ಪರಿವಿಡಿ —

ವಿಷಯ

೧ ಸಂಪಾದಕೀಯ ....
೨ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಶತಮಾನೋತ್ಸವ
೩ ವಸ್ತುಸಂಗ್ರಹಾಲಯ ಹಾಗು ಸಾಲೆಗೆ ಅದರ ಮಹತ್ವ — ಶ್ರೀ ಆಯ್‌. ಎಸ್‌. ಬಿದರಿ
೪ ಸಾಲೆಗೆ ಮೂತ್ರ ಹಾಗು ಗೊಬ್ಬರ ಕುಣಿಗಳ ಅವಶ್ಯಕತೆ — ಶ್ರೀ ಕೆ. ಎಸ್. ಕುಲಕರ್ಣಿ
೫ ಪ್ರಾರ್ಥನೆ ಹಾಗು ಅದನ್ನು ಸಾಗಿಸುವ ವಿಧಾನ — ಶ್ರೀ ಎಸ್. ಬಿ. ಪಾಟೀಲ
೬ ಮೂಲಶಿಕ್ಷಣದ ಅರಿವು — ಶ್ರೀ ಶಿಂತ್ರಿ ಬಸಪ್ಪನವರು
೭ ಪ್ರಯೋಗದ ಯೋಜನೆಯಲ್ಲಿ ಅಡಕವಾದ ಮಾನಶಾಸ್ತ್ರದ ತಳಹದಿ — ಶ್ರೀ ನೀ. ರೇ. ಹಿರೇಮಠ
೮ ಇಂದಿನ ಮಕ್ಕಳ ಕೈಬರಹದ ದುರ್ದೆಶೆ — ಶ್ರೀ ಮ. ಗು. ಫಿವಾರಿ
೯ ನಯಾ ಪೈಸಾ–ನಯೆ ಪೈಸೆ — ಶ್ರೀ ರಾ. ರು. ಕುಪ್ಪಸದ
೧೦ ಮೈಸೂರ ರಾಜ್ಯದ ಶೈಕ್ಷಣಿಕ ಪರಿಶೀಲನೆ — ಶ್ರೀ ಹು. ಅ. ಶಿಗ್ಗಾಂವ
೧೧ ಶಿಶು ಗೀತೆಗಳ ಸ್ಪರ್ಧೆ
೧೨ ಮೂಲಶಿಕ್ಷಣ — ಶ್ರೀಮತಿ ಪಿ. ಎ. ಭಾಸ್ಕರ
೧೩ ಜೀವನ ಶಿಕ್ಷಣ ಪ್ರಪಂಚದಲ್ಲಿ

ಸಂಪಾದಕೀಯ

೧೮೫೭ ರ ಶತಾಬ್ದಿ

ಭಾರತ ಇತಿಹಾಸದಲ್ಲಿ ೧೮೫೭ ಎಂದೂ ಮರೆಯ ಗದ ವರುಷ. ಆ ವರುಷದಲ್ಲಿ ನಡೆದ ಸ್ವಾತಂತ್ರ್ಯ ಂಗ್ರಾಮದಿಂದ ನಮ್ಮ ದೇಶದ ಆಡಳಿತೆಯಲ್ಲಿ ಹೊಸ ಯುಗವೇ ಪ್ರಾರಂಭವಾಯಿತೆನ್ನಬಹುದು. ಷ್ಟು ಮಹತ್ವವುಳ್ಳ ಐತಿಹಾಸಿಕ ಘಟನೆಗಳು ಇಡೀ ಂದುಸ್ತಾನದ ಇತಿಹಾಸದಲ್ಲಿಯೇ ವಿರಳ. ಇದನ್ನೇ ್ರಿಟಿಶರು ಸಿಪಾಯರ ದಂಗೆ ಎಂದು ಕರೆದು ಅದರ ಮಹ ್ವವನ್ನೆಲ್ಲ ಕಡಿಮೆ ಮಾಡಲೆತ್ನಿಸಿದ್ದಾರೆ. ಭಾರತೀಯರು ಾತ್ರ ಅದನ್ನು ಸ್ವಾತಂತ್ರ್ಯದ ಪ್ರಥಮ ಸಂಗ್ರಾಮ ೆಂದು ಕರೆದು ಆ ಘಟನೆಗೆ ಸ್ವಾತಂತ್ರ್ಯದ ಉಗಮ ್ಥಾನವನ್ನು ಕೊಟ್ಟಿದ್ದಾರೆ. ಕೆಲವು ಬ್ರಿಟಿಶ ಇತಿಹಾಸ ಾರರು ಆ ಘಟನೆಗೆ ಸೈನ್ಯದಲ್ಲಿಯ ಅತೃಪ್ತಿಯೇ ಕಾರಣ ಂದು ಹೇಳಿದ್ದಾರೆ. ಅವರಲ್ಲಿ ಇನ್ನೂ ಕೆಲವರು ಮುಸ ್ಮಾನರ ಒಳಸಂಚಾಗಿತ್ತೆಂದೂ ಪೇಶ್ವೆಯರ ಅಧಿಕಾರವನ್ನು ುನಃ ಸ್ಥಾಪಿಸಬೇಕೆಂಬುದಾಗಿತ್ತೆಂದೂ ಸೂಚಿಸಿದ್ದಾರೆ. ಂಗ್ಲೆಂಡದ ಆಗಿನ ಮಹಾರಾಣಿ ವಿಕ್ಟೋರಿಯಾರವರು ದನ್ನೇ ಅಂತಃಕಲಹವೆಂದು ಕರೆದಿದ್ದಾರೆ. ಈ ಮಹಾ ಟನೆಯ ಬಗ್ಗೆ ಪರದೇಶದವರ ಅಭಿಪ್ರಾಯ ಹೀಗಿದ್ದಾಗ ಮ್ಮವರ ಅಭಿಪ್ರಾಯ ಬೇರೆಯಾಗಿದೆ. ಶೂರತನದ ಾಗೂ ಸಾಹಸಮಯವಾದ ಚಟುವಟಿಕೆಗಳನ್ನೂ ಸ್ವದೇ ಾಭಿಮಾನವನ್ನೂ ಆತ್ಮ ಗೌರವದ ರಕ್ಷಣೆಯನ್ನೂ ೋರಿಸುವ ಸುಪ್ರಸಂಗವು ಆ ಘಟನೆಯಲ್ಲಿ ಒಂದೊದಗಿ ಂದು ನಮ್ಮವರು ನಿಜವಾಗಿ ನಂಬಿ ಅದರಲ್ಲಿ ನಮ್ಮ ್ವಾತಂತ್ರ್ಯದ ಬೇರುಗಳನ್ನು ಕಾಣುತ್ತಾರೆ. ಈ ದೃಷ್ಟಿ ಂದ ಈ ವರುಷ ನಡೆಯುವ ಆ ಮಹಾ ಘಟನೆಯ ತಮಾನೋತ್ಸವದಲ್ಲಿ ತುಂಬಾ ಔಚಿತ್ಯವಿದೆ.

ನಮ್ಮ ರಾಷ್ಟ್ರದ ಭವ್ಯ ಭವಿಷ್ಯತ್ತಿನ ದೃಷ್ಟಿಯಿಂದ ಘಟನೆಯ ಹಿನ್ನೆಲೆಯನ್ನೂ ಅದರ ಪರಿಣಾಮವನ್ನೂ ಾವೆಂದೂ ಮರೆಯಲಾಗದು. ೧೮೫೭ ರ ಕ್ರಾಂತಿಯು ೇವಲ ಸೈನ್ಯಕ್ಕೆ ಸಂಬಂಧಿಸಿರದೇ ಆಗಿನ ಪರಕೀಯ ಾಜ್ಯ ಧೋರಣೆಯ ಫಲವಾಗಿತ್ತು.

ಇತಿಹಾಸದ ಪಠ್ಯ ಪುಸ್ತಕಗಳಲ್ಲಿ ಕಂಡಂತೆ ನೆಣ ನು. ಹಚ್ಚಿದ ಕಾಡತೂಸುಗಳನ್ನು ಉಪಯೋಗಿಸಲು ನಿರಾಕರಿಸಿದುದೇ ಮಾತ್ರ ಆ ಮಹಾ ಘಟನೆಗೆ ಕಾರಣ ವಾಗಿರಲಿಲ್ಲ. ಆ ಸಂಗ್ರಾಮದ ಹಿನ್ನೆಲೆ ಆ ಶತಮಾನದ ಪ್ರಾರಂಭದಿಂದಲೇ ಮೊದಲಾಗುತ್ತದೆ. ಬ್ರಿಟಿಶರ ರಾಜ್ಯ ವಿಸ್ತಾರದ ಕ್ರಮ ಹಾಗೂ ಧೋರಣೆ, ಸಂಸ್ಥಾನಿಕರನ್ನು ನಡಿಸಿಕೊಂಡ ರೀತಿನೀತಿಗಳು ಆಗಿನ ಭಾರತೀಯ ಸಮಾಜದ ದೃಷ್ಟಿಕೋನಗಳ ಅಜ್ಞಾನ, ಕ್ರಿಶ್ಚಿಯನ್ ಧರ್ಮೋಪದೇಶಕರ ಅತ್ಯುತ್ಸಾಹದ ಪ್ರಚಾರ ಹಾಗೂ ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಸಾರ ಇವೇ ಮೊದಲಾದ ವುಗಳಲ್ಲಿ ಆ ಘಟನೆಯ ಮುನ್ಸೂಚನೆಗಳಿವೆ ಎಂದು ನಾವು ತಿಳಿಯಬೇಕು. ಆಗಿನ ಆಳರಸರ ಅನ್ಯಾಯ ಕೃತಿ ಗಳು ಒಂದರ ಮೇಲೊಂದಾಗಿ ಭಾರತೀಯರ ಸಹನ ಶಕ್ತಿ ಯನ್ನು ಮೀರಿಸಿರಬಹುದು. ನುರಿತ ಸೈನ್ಯ ಹಾಗೂ ಶಸ್ತ್ರಾ ಸ್ತ್ರಗಳ ಸಂಗ್ರಹದಿಂದ ಸೊಕ್ಕು ತಲೆಗೇರಿದ ಹಲ ಕೆಲವು ಬ್ರಿಟಿಶ್ ಆಡಳಿತೆಗಾರರ ತಪ್ಪುಗಳು ಆ ಕ್ರಾಂತಿಗೆ ಸ್ವಾಗ ತವಿತ್ತವು. ವ್ಯಾಪಾರಕ್ಕೆಂದು ಬಂದವರು ರಾಜಕಾರಣ ದಲ್ಲಿ ಕೈಹಾಕಿದರು. ಒಂದಿಲ್ಲೊಂದು ನೆವದಿಂದ ಸಂಸ್ಥಾ ನಿಕರನ್ನು ಮೂಲೆಗೊತ್ತಿ ಅವರ ರಾಜ್ಯಗಳನ್ನು ಕೈವಶ ಮಾಡಿಕೊಂಡದ್ದೂ ಭಾರತೀಯರ ಧಾರ್ಮಿಕ ವಿಷಯ ಗಳಲ್ಲಿ ಕೈ ಹಾಕಿ ಅವರ ಸೂಕ್ಷ್ಮ ಭಾವನೆಗಳಿಗೆ ಕೊಡ ಲಿಯ ಪೆಟ್ಟನ್ನು ಕೊಟ್ಟದ್ದೂ ನೌಕರಿ ವರ್ಗದಲ್ಲಿ ತಾವು ಉತ್ತಮರೂ ಭಾರತೀಯರು ಕನಿಷ್ಟರೆಂದು ನಡೆಸಿಕೊಂ ಡದ್ದೂ ಇವೇ ಮೊದಲಾದ ಇನ್ನೂ ಅನೇಕ ಕಾರಣಗಳು ಆ ಸಂಗ್ರಾಮಕ್ಕೆ ಮೂಲವಾಗಿವೆ. ಇವೆಲ್ಲವುಗಳ ಪರಿಣಾ ಮವಾಗಿ ಭಾರತೀಯರ ಅಸಂತೋಷ ಹೆಚ್ಚಾಗುತ್ತಲೇ ಇತ್ತು. ೧೮೩೪ ರ ಸುಮಾರಕ್ಕೆ ಕಿತ್ತೂರಿನಲ್ಲಿ ನಡೆದ ಸ್ವಾತಂತ್ರ್ಯ ಚಳವಳಿ ಹಾಗು ಅದಕ್ಕೂ ಮೊದಲು ಸಂಭವಿಸಿದ ವೆಲ್ಲೂರ ದಂಗೆ ಇವುಗಳ ಅನುಭವದಿಂದ ಬ್ರಿಟಿಶರು ಜಾಣರಾಗಬಹುದಾಗಿತ್ತು. ಅಮೇರಿಕಾದ ಸ್ವಾತಂತ್ರ್ಯ ಯುದ್ಧದ ಅನುಭವಗಳನ್ನೂ ಅವರು ಮರೆ ತಿದ್ದುದು ಅವರ ದುರ್ದೈವ. ಒಂದು ದೃಷ್ಟಿಯಿಂದ ಅದು ನಮ್ಮ ಸುದೈವ. ಯಾಕಂದರೆ ಜನಸಾಮಾನ್ಯರಲ್ಲಿ ಅಸಂತೋಷ ಹೆಚ್ಚಾಗಿ ಅದು ಬೇಗನೆ ಸ್ಫೋಟವಾಗಲೇ ಬೇಕಾಯಿತು. ಅಂತಹ ಪರಿಸ್ಥಿತಿಯಲ್ಲಿ ಬ್ರಿಟಿಶರನ್ನು ಎದು ರಿಸಿ ಅವರನ್ನು ಆಹ್ವಾನಿಸುವ ಶಕ್ತಿ ಹಾಗೂ ಸಂಘಟನೆ ಸೈನ್ಯ ಪಡೆಗಳಲ್ಲಿಯೇ ಮಾತ್ರ ಇದ್ದಿತು. ಆದುದರಿಂದಲೇ

ಕ್ರಾಂತಿಯ ಕಿಡಿಗಳು ಮೊದಲು ಸೈನ್ಯದಲ್ಲಿಯೇ ಹಾರಿ ಯುದ್ಧದ ಜ್ವಾಲೆ ಉತ್ತರ ಹಿಂದುಸ್ತಾನದಲ್ಲೆಲ್ಲ ಹಬ್ಬಿತು. ಬ್ರಿಟಿಶರ ಶಕ್ತಿ ಸಾಮರ್ಥ್ಯ ಹಾಗೂ ಸಂಘಟನೆಗಳ ಪೂರ್ಣ ಪರಿಚಯವು ನಮ್ಮವರಿಗಿದ್ದರೂ ಅವರನ್ನು ಎದುರಿಸುವದರಲ್ಲಿ ತೋರಿಸಿದ ನಮ್ಮವರ ಸಾಹಸ ಅಪ್ರತಿಮವೂ ಅದ್ವಿತೀಯವೂ ಆಗಿದೆ. ಶಸ್ತ್ರಾಸ್ತ್ರಗಳ ಸಂಗ್ರಹ, ಸಂಘಟನೆ ಹಾಗೂ ನಾಯಕತ್ವ ಇವೇ ಮೊದಲಾದವುಗಳ ಅಭಾವದ ಪರಿಚಯವು ಸ್ವಾತಂತ್ರ್ಯ ವೀರರಿಗೆ ಸಾಕಷ್ಟು ಇದ್ದರೂ ನಿರುತ್ಸಾಹಗೊಳ್ಳದೆ ಮುನ್ನುಗ್ಗಿ ಬ್ರಿಟಿಶರ ಸೈನಿಕ ಸ್ಥಳಗಳನ್ನು ವಶಮಾಡಿಕೊಂಡು ದಿಲ್ಲಿಯನ್ನು ಪ್ರವೇಶಿಸಿದುದು ಭಾರತೀಯರ ಸ್ವಾತಂತ್ರ್ಯಾಪೇಕ್ಷೆ ಹಾಗು ಶೂರತನದ ದ್ಯೋತಕವಾಗಿದೆ. ಇಂಥ ಸಾಹಸವನ್ನು ತೋರಿಸಿ ಸ್ವಾತಂತ್ರ್ಯವನ್ನು ಪಡೆಯುವ ಪ್ರಯತ್ನದಲ್ಲಿ ಮಡಿದು ವೀರಸ್ವರ್ಗವನ್ನೇರಿದವರೆಲ್ಲರಿಗೂ ಇಂದು ನಾವು ಶ್ರದ್ಧಾಂಜಲಿಗಳನ್ನರ್ಪಿಸಬೇಕು. ಅದೊಂದು ನಮಗೆ ಮಹಾಪವಿತ್ರ ಕಾರ್ಯವಾಗಬೇಕು. ಆದುದರಿಂದಲೇ ಈ ವರುಷ ಆ ಸಂಗ್ರಾಮದ ಶತಮಾನೋತ್ಸವವನ್ನು ಆಚರಿಸಲು ನಮ್ಮ ಸರಕಾರದವರು ಕೈಕೊಂಡ ಯೋಜನೆಗಳು ಪ್ರಶಂಸಾರ್ಹವಾಗಿವೆ. ಈ ಕ್ರಾಂತಿಗೆ ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಸಂಬಂಧಿಸಿದ ಮಹಾವೀರರ ಸ್ಮಾರಕಗಳನ್ನು ನಮ್ಮ ರಾಷ್ಟ್ರದ ಬೇರೆ ಬೇರೆ ಭಾಗಗಳಲ್ಲಿ ಸ್ಥಾಪಿಸುವದು ಎಲ್ಲ ದೃಷ್ಟಿಯಿಂದಲೂ ಸಮಂಜಸವಾಗಿವೆ. ಅವುಗಳಿಂದ ನಮ್ಮ ಮುಂದಿನ ಪೀಳಿಗೆಯವರು ಸ್ಫೂರ್ತಿ ಪಡೆಯುವರು. ಇಂಥ ಇನ್ನೂ ಅನೇಕ ರೀತಿಗಳಲ್ಲಿ ಈ ಶತಮಾನೋತ್ಸವವು ಐತಿಹಾಸಿಕವಾಗಿಯೇ ನಡೆಯುವದರಲ್ಲಿ ಯಾವ ಸಂದೇಹವೂ ಇಲ್ಲ. ಇದೇ ದಿ. ೧೫ ರಂದು ದೇಶದಾದ್ಯಂತ ನಡೆಯುವ ಸ್ವಾತಂತ್ರ್ಯ ದಿನೋತ್ಸವದಂದು ಈ ೧೦ ವರುಷಗಳಲ್ಲಿ ನಾವು ಸಾಧಿಸಿದ ಪ್ರಗತಿಯನ್ನು ನೆನೆಯುವಂತೆ, ದಿ. ೧೬ ರಂದು ದೇಶದಲ್ಲೆಲ್ಲ ನಡೆಯುವ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಶತಮಾನೋತ್ಸವದಲ್ಲಿ ಅಂದಿನ ವೀರರ ಮಹಾ ಪ್ರಯತ್ನಗಳನ್ನೂ ಅವರು ತೋರಿಸಿದ ಧೈರ್ಯ ಸ್ಥೈರ್ಯಗಳನ್ನೂ ಸಹಿಸಿದ ಕಷ್ಟ ಕಾರ್ಪಣ್ಯಗಳನ್ನೂ ನಾವು ಅಂತಃಕರಣದಿಂದ ಸ್ಮರಿಸಬೇಕು. ಒಂದು ವೇಳೆ ಆ ಪ್ರಯತ್ನದಲ್ಲಿ ಸಕಾಲಕ್ಕೆ ಭಾರತೀಯರೆಲ್ಲರೂ ಭಾಗಿಗಳಾಗಿದ್ದರೆ ಇಲ್ಲವೆ ಬ್ರಿಟಿಶರಿಗೆ ಕೆಲವು ಭಾರತೀಯರ ಸಹಾಯ ಸಹಕಾರಗಳು ದೊರೆಯದೆ ಹೋಗಿದ್ದರೆ ಇಂದು ನಾವು ಸ್ವಾತಂತ್ರ್ಯದ ಶತಮಾನೋತ್ಸವವನ್ನು ಮಾಡಬಹುದಾಗಿತ್ತೆಂಬದನ್ನೂ ನಾವು ಮರೆಯಬಾರದು. ತಡವಾಗಿಯಾದರೂ ಸ್ವಾತಂತ್ರ್ಯವನ್ನು ಪಡೆದ ಭಾರತೀಯರಿಗೆ ೧೮೫೭ ರ ಸಂಗ್ರಾಮದ ಶತಮಾನೋತ್ಸವವನ್ನು ಮಾಡುವದರಲ್ಲಿ ಅತ್ಯಧಿಕ ಅಭಿಮಾನ, ಅತ್ಯಂತ ಹುರುಪು ಹುಮ್ಮಸುಗಳಿವೆ ಎಂದು ಬೇರೆ ಹೇಳಬೇಕಾಗಿಲ್ಲ.

(ಪ್ರಾಥಮಿಕ) ಶಿಕ್ಷಣದ ಮಟ್ಟ

ಕೇಂದ್ರ ಹಾಗೂ ರಾಜ್ಯ ಸರಕಾರಗಳ ವಾರ್ಷಿಕ ಆಯ-ವ್ಯಯಗಳ ಅಂದಾಜಿನ ಮೇಲೆ ವಿಧಾನ ಸಭೆಗಳ ನಡೆಯುತ್ತಿರುವದನ್ನು ವರ್ತಮಾನ ಪತ್ರಗಳಲ್ಲಿ ಎಲ್ಲರು ನೋಡಿರಲು ಸಾಕು. ಆಯಾ ಖಾತೆಗಳ ಬಗೆಗೆ ಮಾಡಿ ಅಂದಾಜನ್ನು ಒಪ್ಪುವಾಗ ಸ್ವಪಕ್ಷ ಪರಪಕ್ಷಗಳಿಂದ ವಿವರ್ಶಾತ್ಮಕ ರೀತಿಯಲ್ಲಿ ದೀರ್ಘ ಭಾಷಣಗಳೂ ಹೆಚ್ಚಿ ಸೂಚನೆಗಳೂ ಮಾಡಲ್ಪಟ್ಟಿವೆ. ಇಂಥ ವಾರ್ಷಿಕ ಅಧಿವೇಶನಗಳಲ್ಲಿ ಆಯ-ವ್ಯಯ ಪತ್ರಿಕೆಗಳನ್ನು ಸ್ವೀಕರಿಸುವಾ ಕೂಲಂಕಷ ವಿಚಾರ ನಡೆದು ಆಯಾ ಖಾತೆಗಳಿಗೆ ಸಂಬಂಧಿಸಿದ ಮಂತ್ರಿಗಳಿಗೆ ಅನೇಕ ವಿಷಯಗಳನ್ನು ಸೂಚಿಸು ಸಂಪ್ರದಾಯವು ವಿಧಾನ ಸಭೆಗಳಲ್ಲಿ ಕಂಡು ಬರುತ್ತದೆ. ಈ ರೀತಿಯಿಂದ ಜನ-ಸಾಮಾನ್ಯರಿಗೂ ಸರಕಾರ ಯೋಜನೆಗಳ ಬಗೆಗೆ ಪರಿಚಯವಾಗುವದು. ಶೈಕ್ಷಣಿ ಆಯ-ವ್ಯಯಗಳ ಅಂದಾಜ ಪತ್ರಿಕೆಗಳ ಮೇಲೆ ಚರ್ಚೆ ನಡೆದಾಗ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಅನೇ ವಿಷಯಗಳು ಚರ್ಚಿಸಲ್ಪಟ್ಟಿವೆ. ಅವುಗಳಲ್ಲಿ ಪ್ರಾಥಮಿ ಶಿಕ್ಷಣದ ಶೈಕ್ಷಣಿಕ ಮಟ್ಟವು ಕೆಳಗಿಳಿದಿರುವದು ಮುಖ್ಯವಾಗಿದೆ. ಈ ಬಗೆಗೆ ಇಲ್ಲಿಯ ಒಬ್ಬ ಸರಕಾರಿ ಅಧಿಕಾರಿಯು ತಮಗೆ ಪರಿಚಯವಿದ್ದ ಕಾಲೇಜದ ಪ್ರಿನ್ಸಿಪಾರಿಗೆ ಬರೆದ ಪತ್ರವು ಗಮನಾರ್ಹವಾಗಿದೆ. ಪತ್ರ ಮುಖ್ಯಾಂಶಗಳು ಕೆಳಗಿನಂತಿವೆ:—

"ಇದರ ಜೊತೆಗೆ ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದ ಒಬ್ಬ ವಿದ್ಯಾರ್ಥಿಯ ಪತ್ರವನ್ನು ಇಟ್ಟಿದ್ದೇನೆ. ಅವನು ಮಾಧ್ಯಮಿಕ ತರಗತಿಯ ೪ ನೇ ವರ್ಷದ ಅಭ್ಯಾಸ ಮಾಡುತ್ತಿದ್ದಾನೆ. ನೀವು ಪತ್ರವನ್ನು ಓದಿದ ಆ ವಿದ್ಯಾರ್ಥಿಯ ಬೌದ್ಧಿಕ ಹಾಗೂ ಬರಹದ ಮಟ್ಟ ನಿಮಗೆ ಸ್ಪಷ್ಟವಾಗುವದು. ಅದರಿಂದ ನೀವು ಶಾಲೆಗಳ ನಡೆದಿರುವ ಶಿಕ್ಷಣ ಕ್ರಮದ ಬಗೆಗೆ ಸಹಜವಾಗಿ ಊಹಿಬಹುದು. ಅವನಂತೆ ಅಭ್ಯಾಸ ಮಾಡುತ್ತಿದ್ದ ಮತ್ತೊಬ್ಬನಿಗೆ 'ರಾಮನ ತಾಯಿ ಯಾರು?' ಎಂದು ಕೇಳಲಾ

ಅವನು "ಸೀತೆ" ಎಂದು ತಟ್ಟನೇ ಉತ್ತರವಿತ್ತನು. ಆ ಉತ್ತರದಿಂದ ನನಗೆ ಬಹಳ ವ್ಯಥೆಯಾಯಿತು. ಹೀಗಾಗಿ ನನಗೆ ಪರಿಚಯವಿದ್ದ ಅನೇಕ ಪಾಲಕರು ಈಗಿನ ಶಿಕ್ಷಣ ಕ್ರಮವು ಸರಿಯಾಗಿ ಸಾಗಿರುವದಿಲ್ಲವೆಂದು ಹೇಳುವದರಲ್ಲಿ ಸತ್ಯಾಂಶವಿದೆ ಎಂದು ನಾನು ನಂಬಬೇಕಾಯಿತು. ಈ ಸಂದರ್ಭದಲ್ಲಿ ನನಗೆ ಅಭ್ಯಾಸ ಮಾಡಿದ ದಿನಗಳು ನೆನಪಿಗೆ ಬರುತ್ತವೆ. ಶಿಕ್ಷಕರು ಶ್ರಮವಹಿಸಿ ದುಡಿಯುತ್ತಿದ್ದರೆಂದೂ ನಾವೂ ಸಹ ಆತುರತೆಯಿಂದ ಅಭ್ಯಾಸ ಮಾಡುತ್ತಿದ್ದೆವೆಂದೂ ನನಗೆ ಅನಿಸುತ್ತದೆ. ಹಾಗೆ ಆಗಲು ಶಿಕ್ಷಕರ ಹೆದರಿಕೆಯೂ ನಮಗೆ ಇದ್ದಿತು. ಒಟ್ಟಿನಲ್ಲಿ ಮೇಲೆ ಕಾಣಿಸಿದ ವಿದ್ಯಾರ್ಥಿಯು ತನ್ನ ಪತ್ರದಲ್ಲಿ ತೋರಿಸಿದ ತಪ್ಪುಗಳನ್ನು ಆಗಿನ ಕಾಲದ ಸಾಮಾನ್ಯ ವಿದ್ಯಾರ್ಥಿಯು ಸಹ ಮಾಡುತ್ತಿದ್ದಿಲ್ಲವೆಂದು ಕಾಣುತ್ತದೆ. ಇನ್ನಷ್ಟು ವಿಚಾರ ಮಾಡಿದಾಗ ಇಂಥ ವಿದ್ಯಾರ್ಥಿಗಳು ಹೇಗೆ ತಾನೇ ಮೇಲಿನ ವರ್ಗಗಳಿಗೆ ಹೋಗುವರೆಂಬದು ಸಮಸ್ಯೆಯೇ. ಆ ವಿದ್ಯಾರ್ಥಿಯು 'ಡ' ಅಕ್ಷರವನ್ನು ಸಹ ಸರಿಯಾಗಿ ಬರೆಯದಿರುವದು ಆಶ್ಚರ್ಯದ ಸಂಗತಿ. ಇಂಥವೇ ಹಲವಾರು ವಿಷಯಗಳ ಬಗೆಗೆ ನಾನು ನಿಮ್ಮೊಡನೆ ಚರ್ಚಿಸಬೇಕೆಂದಿದ್ದೆ. ಈ ವಿದ್ಯಾರ್ಥಿಯ ಪತ್ರ ಬಂದ ಮೇಲಂತೂ ಅದನ್ನೇ ನಿಮ್ಮ ಲಕ್ಷಕ್ಕೆ ತರಬೇಕೆಂದು ಬಯಸಿ ಹಾಗೆ ಮಾಡಿದೆ. ದಯಮಾಡಿ ಕ್ಷಮಿಸಿರಿ. ಈ ಬಗೆಗೆ ನಿಮ್ಮ ವಿಚಾರಗಳನ್ನು ತಿಳಿಯಲು ನನಗೆ ಸಂತೋಷ."

ಈ ಪ್ರಕಾರ ಅವರು ಪತ್ರವನ್ನು ಮುಗಿಸಿದ್ದಾರೆ. ಅವರ ಆ ಪತ್ರಕ್ಕೆ ಉತ್ತರವೂ ಬಂದಿತು. ಅದರ ಬಗೆಗೆ ಮುಂದಿನ ಸಂಚಿಕೆಯಲ್ಲಿ ಕಾಣಿಸುವೆವು.

ರಾಜ್ಯದ ಶೈಕ್ಷಣಿಕ ಪರಿಶೀಲನೆಯ ಯೋಜನೆ

ಕೇಂದ್ರ ಸರಕಾರದ ಸೂಚನೆಯ ಮೇರೆಗೆ ನಮ್ಮ ರಾಜ್ಯ ಸರಕಾರವೂ ಶೈಕ್ಷಣಿಕ ಪರಿಶೀಲನೆಯನ್ನು ಕೈಕೊಂಡಿದೆ. ಈ ಕೆಲಸಕ್ಕೆ ಜಿಲ್ಹೆಗೆ ಒಬ್ಬೊಬ್ಬರಂತೆ ಅಧಿಕಾರಿಗಳನ್ನು ನೇಮಿಸಲಾಗಿದೆ. ಈ ಯೋಜನೆಯ ಉದ್ದೇಶಗಳು ಕೆಳಗಿನಂತಿವೆ:—

೧) ರಾಜ್ಯ ಘಟನೆಯಲ್ಲಿ ನಮೂದಿಸಿದಂತೆ ಹದಿನಾಲ್ಕು ವರುಷದೊಳಗಿನ ಮಕ್ಕಳಿಗೆ ಶಿಕ್ಷಣವನ್ನು ಒದಗಿಸುವ ಗುರಿಯನ್ನು ಕಾರ್ಯಗತ ಮಾಡುವದು.

೨) ರಾಜ್ಯದಲ್ಲಿದ್ದ ಶೈಕ್ಷಣಿಕ ಪರಿಸ್ಥಿತಿಯನ್ನು ಪರಿಚಯ ಮಾಡಿಕೊಳ್ಳುವದು.

೩) ಶಾಲೆಗಳಿಲ್ಲದ ಹಳ್ಳಿಗಳಲ್ಲಿ ಶಾಲೆಗಳನ್ನು ತೆರೆಯುವದು.

೪) ಶೈಕ್ಷಣಿಕ ಪ್ರಗತಿಗೆ ಅನುಕೂಲವಾಗುವಂತೆ ಹೊಸ ಸೂಚನೆಗಳನ್ನು ಮಾಡುವದು.

೫) ರಾಜ್ಯಗಳಲ್ಲಿ ಶೈಕ್ಷಣಿಕ ಏಕರೂಪತೆಯನ್ನು ಸಾಧಿಸುವದು.

ಈ ಉಪಯುಕ್ತವಾದ ಯೋಜನೆಯನ್ನು ಕೈಕೊಂಡಿರುವದು ನಿಜವಾಗಿಯೂ ಶ್ಲಾಘನೀಯವಾಗಿದೆ. ಈ ಯೋಜನೆಯನ್ವಯ ಪ್ರತಿಯೊಂದು ಜಿಲ್ಹೆಗೆ ನಿಯಮಿಸಲ್ಪಟ್ಟ ಪರಿಶೀಲನಾಧಿಕಾರಿಗಳು ತಮ್ಮ ಜಿಲ್ಹೆಗಳಲ್ಲಿ ಮೊದಲು ಶಾಲೆಗಳಿದ್ದ ಹಾಗೂ ಇಲ್ಲದ ಗ್ರಾಮ ನಗರಗಳ ಅಂಕಿ ಸಂಖ್ಯೆಗಳನ್ನು ಸಂಗ್ರಹಿಸುವರು. ಈಗಿದ್ದ ಶೈಕ್ಷಣಿಕ ಸೌಕರ್ಯಗಳಿಗೆ ಬಂದೊದಗಿದ ಅಡೆತಡೆಗಳನ್ನು ತಿಳಿದುಕೊಂಡು ಎಲ್ಲ ಕಡೆಗೂ ಶಿಕ್ಷಣ ದೊರೆಯುವಂತೆ ಸಾಧ್ಯ ಮಾಡಲು ಅವಶ್ಯವಾದ ಸೂಚನೆಗಳನ್ನು ಮಾಡುವದು.

ಈ ಕಾರ್ಯವು ಯಶಸ್ವಿಯಾಗಲು ಜನರ ಹಾಗೂ ಅಧಿಕಾರಿಗಳ ಸಹಾಯ ಅತ್ಯವಶ್ಯ ಅದನ್ನು ದೊರಕಿಸಲು ಈ ಕೆಲಸಕ್ಕೆ ನಿಯಮಿಸಲ್ಪಟ್ಟ ಅಧಿಕಾರಿಗಳು ಬೇರೆ ಬೇರೆ ಖಾತೆಗಳ ಅಧಿಕಾರಿಗಳನ್ನು ಹಳ್ಳಿಗಳ ಪ್ರಮುಖರನ್ನು ಭೆಟ್ಟಿಯಾಗಿ ಈ ಯೋಜನೆಯ ಮಹತ್ವವನ್ನು ತಿಳಿಸುವರು. ಮುಖ್ಯವಾಗಿ ಹಳ್ಳಿಗಳಲ್ಲಿರುವ ಶಾಲೆಗಳ ಶಿಕ್ಷಕರು ತಮಗೆ ದೊರೆಯುವ ಎಲ್ಲ ಪ್ರಸಂಗಗಳನ್ನು ಉಪಯೋಗಿಸಿ ಈ ಯೋಜನೆಯ ಮುನ್ನಡೆಗೆ ಸಹಾಯಕರಾಗುವರೆಂದು ನಂಬಿದ್ದೇವೆ.

ಅಗಸ್ಟ ತಿಂಗಳ ವೈಶಿಷ್ಟ್ಯ

ಪ್ರತಿ ವರುಷ ಕೆಲಕೆಲವು ತಿಂಗಳುಗಳಲ್ಲಿ ಮಹತ್ವವಾದ ಕಾರ್ಯಕ್ರಮಗಳು ಜರುಗುತ್ತಿರುವದು ಸರ್ವ ಸಾಮಾನ್ಯ ಸಂಗತಿಯಾಗಿದೆ. ಇಂಥ ತಿಂಗಳುಗಳಲ್ಲಿ ಅದರಲ್ಲಿಯೂ ಈ ವರುಷ ಅಗಸ್ಟ ತಿಂಗಳಕ್ಕೆ ಹೆಚ್ಚಿನ ವೈಶಿಷ್ಟ್ಯ ಬಂದಿದೆ. ಈ ತಿಂಗಳಾರಂಭದಲ್ಲಿ ಹಲ ಕೆಲವು ಕಡೆಗೆ ವನಮಹೋತ್ಸವ ಮುಗಿದಿದ್ದರೂ ಇನ್ನುಳಿದ ಕಡೆಗೆ ವೃಕ್ಷಾರೋಪಣ ಕಾರ್ಯವು ನಡೆದೇಯಿತ್ತು. ಮೊದ

ಲನೇ ದಿನಾಂಕದಂದು ಲೋಕಮಾನ್ಯ ಟಿಳಕರ ಪುಣ್ಯ ದಿನಾಚರಣೆ ನಡೆಯಿತು. ಅದರಂತೆ ದಿ. ೭ ರಂದು ದೇಶದಲ್ಲೆಲ್ಲ ಮೊಹರಮ್ ಹಬ್ಬವು ಆಚರಿಸಲ್ಪಟ್ಟಿತಲ್ಲದೆ, ಅದೇ ದಿನವೇ ವಿಶ್ವಕವಿ ಟಾಗೋರರ ಪುಣ್ಯ ದಿನವಾಗಿತ್ತು. ದಿ. ೧೫ ರಂದು ಸ್ವಾತಂತ್ರ್ಯ ದಿನೋತ್ಸವವೂ ಮರುದಿವಸ ಸ್ವಾತಂತ್ರ್ಯದ ಪ್ರಥಮ ಸಂಗ್ರಾಮದ ಶತಮಾನೋತ್ಸವವೂ ನಡೆಯುವವು. ಇವಲ್ಲದೆ ನಾರಳೀ ಪೌರ್ಣಿಮಾ, ಗೋಕುಲಾಷ್ಟಮಿ, ಶ್ರಾವಣ ಸೋಮವಾರ ಹಾಗೂ ಗಣೇಶ ಚತುರ್ಥಿ ಮೊದಲಾದ ಹಿಂದು ಹಬ್ಬಗಳು ಸಹ ಇದೇ ತಿಂಗಳಲ್ಲಿ ಬಂದಿವೆ. ಹೀಗಾಗಿ ಜೀವನ ಶಿಕ್ಷಣ ಶಾಲೆಗಳಲ್ಲಂತೂ ಕಾರ್ಯಕ್ರಮಗಳು ಎಡೆಬಿಡದೇ ಸಾಗಿ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಮೈತುಂಬ ಕೆಲಸ ಬೀಳುವದು ಅನಿವಾರ್ಯವಾದಂತೆ ಸಾಂಘಿಕ ಚಟುವಟಿಕೆಗಳನ್ನೇರ್ಪಡಿಸಲು ಅನುಕೂಲವೂ ಆಗಿದೆ.

ಪ್ರಕಟನೆಗಳು

ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಶತಮಾನೋತ್ಸವ

ಇದೇ ಜುಲೈ ತಿಂಗಳ "ಜೀವನ ಶಿಕ್ಷಣ" ಪತ್ರಿಕೆಯಲ್ಲಿ ಪ್ರಕಟಿಸಿದಂತೆ ನಮ್ಮ ಕಾಲೇಜದ ಶತಮಾನೋತ್ಸವವನ್ನು ಎಲ್ಲವೂ ಸರಿ ಹೋದರೆ, ಇದೇ ಡಿಸೆಂಬರ ತಿಂಗಳಲ್ಲಿ ಆಚರಿಸಬೇಕೆಂದು ನಿರ್ಣಯವಾದಂತಾಗಿದೆ. ಸ್ಥಾನಿಕ ಅಧಿಕಾರಿಗಳು ಕೂಡಿ ಈ ಬಗ್ಗೆ ದೀರ್ಘಾಲೋಚನೆ ಮಾಡಿ ಈ ಉತ್ಸವವು ಇದೇ ವರುಷ ನಡೆಯಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಉತ್ಸವಕ್ಕೆ ಸಂಬಂಧಿಸಿದ ಎಲ್ಲ ಕಾರ್ಯಗಳು ಕಾಲೇಜದ ಹಳೆ ವಿದ್ಯಾರ್ಥಿಗಳ ಮುಖಾಂತರವೇ ನಡೆಯುವದು ಯೋಗ್ಯವೆಂದೂ ಕಾಲೇಜದ ಈಗಿನ ಅಧಿಕಾರಿಗಳು ಅವರಿಗೆ ಎಲ್ಲ ದೃಷ್ಟಿಯಿಂದಲೂ ಸಹಕಾರ ನೀಡುವದು ಅವಶ್ಯವೆಂದೂ ಸೂಚಿಸಿ ಹಳೆ ವಿದ್ಯಾರ್ಥಿಗಳ ಪ್ರಾಸ್ತಾವಿಕ ಸಭೆಯೊಂದನ್ನು ಆದಷ್ಟು ಬೇಗನೇ ಕರೆಯಬೇಕೆಂದು ಮಾರ್ಗದರ್ಶನ ಮಾಡಿದ್ದಾರೆ. ಆದುದರಿಂದ ನಮ್ಮ ಕಾಲೇಜದ ಹಳೆವಿದ್ಯಾರ್ಥಿಗಳ ಪ್ರಾಧ್ಯಾಪಕರ ಹಾಗೂ ನಮ್ಮ ಸಂಸ್ಥೆಯ ಹಿತೈಷಿಗಳ ಸಭೆಯನ್ನು ಇದೇ ತಿಂಗಳು ಶನಿವಾರ ದಿ. ೧೭ ರಂದು ಸಂಜೆಯ ೬ ಘಂಟೆಗೆ ನಮ್ಮ ಕಾಲೇಜದ ಸಭಾಮಂದಿರದಲ್ಲಿ ಕರೆಯಲಾಗಿದೆ. ಎಲ್ಲರೂ ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂದು ಪ್ರಾರ್ಥಿಸುತ್ತೇವೆ.

ಆದಷ್ಟು ಹೆಚ್ಚು ಜನರು ಈ ಸಭೆಗೆ ಬರುವದು ಅವಶ್ಯವಾಗಿದೆ. ಯಾಕಂದರೆ ಉತ್ಸವದ ರೂಪ-ರೇಷೆಗಳನ್ನು ಈ ಸಭೆಯೇ ನಿರ್ಧರಿಸುವದು. ಉತ್ಸವದ ಕಾರ್ಯಕ್ರಮದ ವಿವರಗಳನ್ನೂ ಗೊತ್ತು ಮಾಡಲಾಗುವದು. ಕಾರ್ಯಕ್ರಮದ ಬೇರೆ ಬೇರೆ ಭಾಗಗಳನ್ನು ನೋಡಿಕೊಳ್ಳಲು ಬೇರೆ ಬೇರೆ ಸಮಿತಿಗಳನ್ನೂ ನೇಮಿಸಲಾಗುವದು; ಇವೇ ಮೊದಲಾದ ವಿಷಯಗಳ ಮೇಲೆ ಕೂಲಂಕಷ ವಿಚಾರ ನಡೆಯಬೇಕಾಗುವದು. ಆದುದರಿಂದ ನಮ್ಮ ಕಾಲೇಜದ ಹಳೆ ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ಬರುವರೆಂದು ನಾವು ನಂಬಿದ್ದೇವೆ.

ಈ ಸಭೆಗೆ ಬರುವಾಗ ತಾವು ನಮ್ಮ ಕಾಲೇಜದಿಂದ ನಡೆಯುವ ಜೀವನ ಶಿಕ್ಷಣ ಪತ್ರಿಕೆಯ ೧೮೬೧ನೆಯ ವರುಷದ ಜನೇವರಿಯಿಂದ ಜೂನದ ವರೆಗಿನ ಸಂಚಿಕೆಗಳ ಪ್ರತಿಗಳನ್ನು ದೊರಕಿಸಿಕೊಂಡು ತಂದರೆ ಅದೊಂದು ನಮಗೆ ದೊಡ್ಡ ಉಪಕಾರವಾಗುವದು. ನಮ್ಮ ಸಂಸ್ಥೆಯ ಮೊದಲಿನ ೮–೧೦ ವರುಷಗಳ ಕಾರ್ಯಕಲಾಪಗಳ ಮಾಹಿತಿ ದೊರೆಯುವದು ಬಹಳ ಕಠಿಣವಾಗಿದೆ. ನಮ್ಮ ಸಂಸ್ಥೆಯ ಉಗಮವು ೧೮೫೭ ರಲ್ಲಿ ಧಾರವಾಡದಲ್ಲಿಯೇ ಆಯಿತೆಂದು ನಂಬಲು ತಕ್ಕ ಕಾಗದ ಪತ್ರಗಳಿದ್ದರೂ ಅವೆಲ್ಲವೂ ಸುಸ್ಪಷ್ಟ ರೀತಿಯಲ್ಲಿರದಿರುವದು ಅಡಚಣಿಯಾಗಿದೆ. ಹತ್ತು ಸಾವಿರಕ್ಕೂ ಮಿಕ್ಕಬಹುದಾದ ನಮ್ಮ ಕಾಲೇಜದ ಹಳೇವಿದ್ಯಾರ್ಥಿಗಳಲ್ಲಿ ಕೆಲವರಿಗಾದರೂ ನಮ್ಮ ಸಂಸ್ಥೆಯ ಇತಿಹಾಸದ ಪರಿಚಯವಿರಬಹುದು. ಅಂಥವರು ದಯವಿಟ್ಟು ನಮಗೆ ನೆರವಾಗಬೇಕು. ನಾವು ಕರೆದ ಸಭೆಗೆ ಸ್ವಲ್ಪ ಮಟ್ಟಿಗೆ ಅನಾನುಕೂಲವಾದರೂ ಸಂಸ್ಥೆಯ ಅಭಿಮಾನದಿಂದ ಹೆಚ್ಚು ವಿದ್ಯಾರ್ಥಿಗಳು ಬರಬಹುದೆಂದು ನಾವು ತಿಳಿದಿದ್ದೇವೆ. ಒಂದು ವೇಳೆ ಬರುವದಾಗದಿದ್ದವರು ಸೂಚನೆಗಳನ್ನಾದರೂ ಕಳಿಸಬೇಕಾಗಿ ವಿನಂತಿ. ಸಭೆಯ ದಿನಾಂಕವನ್ನು ಲಕ್ಷ್ಯದಲ್ಲಿಟ್ಟು ಶನಿವಾರ ೧೭–೮–೫೭ರಂದು

ವಸ್ತುಸಂಗ್ರಹಾಲಯ ಹಾಗೂ ಸಾಲೆಗೆ ಅದರ ಮಹತ್ವ

ಲೇಖಕರು : ಶ್ರೀ ಆಯ್. ಎಸ್. ಬಿದರಿ, ಅ. ಡೆ. ಎ. ಇ. ಧಾರವಾಡ.

ಬದಲಾದ ಪರಿಸ್ಥಿತಿಗೆ ತಕ್ಕಂತೆ ಶಿಕ್ಷಣ ಪದ್ಧತಿಯಲ್ಲಿಯೂ ಬದಲಾವಣೆಯಾಗುವದು ಸಹಜ. ಪಾರತಂತ್ರ್ಯಕಾಲದ ಅಂದಿನ ಶಿಕ್ಷಣವು ಇಂದು ಮಾರ್ಪಾಟಾಗಿ ಹೊಸ ಶಿಕ್ಷಣ ಇಲ್ಲವೆ ಜೀವನ ಶಿಕ್ಷಣಕ್ಕೆ ಇಂಬುಗೊಟ್ಟಿದೆ. "ಮಾಡಿ ಕಲಿ," "ನೋಡಿ ಕಲಿ," "ಆಡಿ ಕಲಿ" ಎಂಬ ಶಿಕ್ಷಣ ತತ್ವಗಳು ಅಂದು ಕೇವಲ ಬಾಯಿಮಾತುಗಳಾಗಿದ್ದರೆ ಇಂದು ಕೃತಿಯಲ್ಲಿ ಇಳಿದು ಬಂದಿವೆ. ತತ್ಸಬಂಧವಾಗಿ ಇಂದಿನ ಶಾಲೆಗಳಲ್ಲಿ ಮಗುವು ಮಾಡಿ, ನೋಡಿ, ಆಡಿ ಜ್ಞಾನಾರ್ಜನೆಯನ್ನು ಮಾಡಿಕೊಳ್ಳುತ್ತಾನೆ. ಆರ್ಥಿಕ ಸಾಮಾಜಿಕ ಹಾಗೂ ಸಾಂಘಿಕ ಪರಿಸರಗಳಲ್ಲಿ ಆತನು ಮಾಡಿ ಕಲಿತರೆ, ನೈಸರ್ಗಿಕ ಪರಿಸ್ಥಿತಿಯ ಚಟುವಟಿಕೆಗಳಲ್ಲಿ ನೋಡಿ ಕಲಿಯುತ್ತಾನೆ. ಶಾರೀರಿಕ ಪರಿಸರದಲ್ಲಿ ಆಡಿ ಕಲಿಯುತ್ತಾನೆ. ಹೀಗಾಗಿ ಪುಸ್ತಕೀಯ ವಿದ್ಯೆಯ ಸಾಲೆಯು ಇಂದು ಅನೇಕ ಚಟುವಟಿಕೆಗಳ ಕೇಂದ್ರವಾಗಿದೆ. ಅಂದಿನ ಗಿಳಿ ಓದಿನ ಗಿಳಿಗಳು ಇಂದು ಸಾಲೆಯೇ ತಮ್ಮ ಸಮಾಜವೆಂದು ಭಾವಿಸಿ ಪುಸ್ತಕೀಯ ಜ್ಞಾನದ ಜೊತೆಗೆ ಅನೇಕ ಚಟುವಟಿಕೆಗಳನ್ನು ನಿರ್ಮಿಸಿಕೊಂಡು ನಡೆಯಿಸಿಕೊಂಡು ಬರುತ್ತಲಿದ್ದಾರೆ. ಇಂಥ ಚಟುವಟಿಕೆಗಳಲ್ಲಿ ವಸ್ತುಸಂಗ್ರಹಾಲಯವೂ ಒಂದು.

ಆದರ್ಶ ಸಾಲೆಯು ವಸ್ತುಸಂಗ್ರಹಾಲಯದಿಂದ ಕೂಡಿರಲೇಬೇಕಾಗಿದೆ. ಸಾಲೆಯು ದೊಡ್ಡದೂ ಸ್ಥಳಾನುಕೂಲತೆಯುಳ್ಳದ್ದೂ ಇದ್ದರೆ ವಸ್ತು ಸಂಗ್ರಹಕ್ಕಾಗಿ ಒಂದು ಪ್ರತ್ಯೇಕ ಕೋಣೆಯು ಇರುವದೇ ಲೇಸು. ಕೆಳಗಿನ ಪ್ರಾಥಮಿಕ ಸಾಲೆಯಿದ್ದು ಸ್ಥಳಾಭಾವವಿದ್ದರೆ ವರ್ಗಕೋಣೆಯ ಒಂದಿಷ್ಟು ಭಾಗವನ್ನು ವಸ್ತುಗಳ ಸಂಗ್ರಹಕ್ಕಾಗಿ ಕಾಯ್ದಿಡಬೇಕು.

ವಸ್ತುಗಳ ಸಂಗ್ರಹವು ಮಕ್ಕಳಿಂದಲೇ ಆದದ್ದಿರಬೇಕು. ಸಾಲೆಯಲ್ಲಿ ಇದು ಅವಶ್ಯವಾಗಿ ಇರಲೇಬೇಕೆಂದು, ಸಮೀಪದ ದೊಡ್ಡ ಶಹರದಿಂದ ಅಂದಚಂದದ ಆಟಿಗೆಯ ವಸ್ತುಗಳನ್ನೋ, ಒಡವೆಗಳನ್ನೋ, ಆಟಿಗೆಗಳನ್ನೋ, ಮತ್ತೇನನ್ನೋ ಕೊಂಡುತಂದು ವಸ್ತುಸಂಗ್ರಹಾಲಯವನ್ನು ನಿರ್ಮಿಸಿದರೆ ಅದು ಹಾಸ್ಯಾಸ್ಪದವಾಗುವದು. ಪೇಟೆಯಿಂದ ಕೊಂಡುತಂದ ಒಂದಾದರೂ ವಸ್ತುವು ಅಲ್ಲಿರಕೂಡದು. ಇದರಿಂದ ಯಾವ ಪ್ರಯೋಜನವೂ ಸಾಧಿಸದು. ಸಾಲೆಯಲ್ಲಿ ಸಂಗ್ರಹಿಸುವ ವಸ್ತುಗಳು ಆಯಾ ಸಾಲೆಯ ಸುತ್ತಲಿನ ಪ್ರದೇಶಗಳಲ್ಲಿ, ನೆರೆಹೊರೆಯಲ್ಲಿ, ಅಲ್ಲಿಯ ನಿಸರ್ಗದಲ್ಲಿ, ಸಮೀಪದ ಗುಡ್ಡ, ಕೊಳ್ಳ, ಗಿರಿ–ದರಿಗಳಲ್ಲಿ, ನದಿ–ಹಳ್ಳಗಳಲ್ಲಿ ಸಿಕ್ಕಬಹುದಾದ ವಿವಿಧ ಪ್ರಕಾರದ ಮಣ್ಣು, ಕಲ್ಲು, ಉಸುಕು, ಸಿಂಪು, ಶಂಖ, ಕಾಳು, ಬೀಜ, ಪಕ್ಷಿಗಳ ಗರಿಗಳು, ಎಲೆಗಳು, ವನಸ್ಪತಿಗಳು, ತೆನೆಗಳು, ಹೂಕಾಯಿಗಳು, ಹಣ್ಣುಗಳು, ಇವೇ ಮೊದಲಾದವು ಇರಬೇಕು. ಇವುಗಳನ್ನು ಸಾಲೆಯ ಮಕ್ಕಳೇ ಸಂಗ್ರಹಿಸಬೇಕು. ಈ ಸಂಗ್ರಹದ ಕೆಲಸವು ಆರಂಭದಲ್ಲಿ ಪ್ರವಾಸದ ಕಾಲಕ್ಕೆ ಆಗಬೇಕು. ಮುಂದೆ ಮಕ್ಕಳಲ್ಲಿ ಇಂಥ ನೋಡತಕ್ಕ ವಸ್ತುಗಳನ್ನು ಸಂಗ್ರಹಿಸುವ ರೂಢಿಯೇ ಉಂಟಾಗುವದು. ನಿತ್ಯದ ಕೆಲಸಗಳಲ್ಲಿ ತೊಡಗಿರುವಾಗಲೇ ಯಾವದೊಂದು ಆಕರ್ಷಕ ಇಲ್ಲವೆ ವಿಚಿತ್ರ ವಸ್ತುವು ಕಂಣಿಗೆ ಬಿದ್ದೊಡನೆ ಅದನ್ನು ಆಯ್ದು ಸಾಲೆಗೆ ತರುವರು. ಬಿಡುವಿನ ದಿನಗಳಲ್ಲಿ ಅವರು ಹೊಲಕ್ಕೆ ಹೋದಾಗ, ಹಳ್ಳಕ್ಕೆ ಸ್ನಾನಕ್ಕೆ ಹೊರಟಾಗ ಇಲ್ಲವೆ ಬೇರೆ ಯಾವದೇ ಕಾರಣದಿಂದ ಅಡ್ಡಾಡಲಿಕ್ಕೆ ಹೋದಾಗ ಯೋಗ್ಯ ವಸ್ತುಗಳನ್ನು ಹುಡುಕುವ ಒಂದು ರೂಢಿಯೇ ಬೆಳೆತು, ಅವು ದೊರೆತರೆ ಕೂಡಿಸಿ ಸಂಗ್ರಹಾಲಯಕ್ಕೆ ನೀಡುವರು.

ಆದರೆ ಕೇವಲ ಹಳ್ಳಿಯ ಸುತ್ತಲಿನ ಪರಿಸರಕ್ಕೆ ಮಾತ್ರ ಅಂಟಿಕೊಳ್ಳದೆ ವರ್ಷದಲ್ಲಿ ಒಂದೆರಡು ಸಲ ಅನತಿದೂರದ ನೋಡತಕ್ಕ ಐತಿಹಾಸಿಕ, ಪೌರಾಣಿಕ, ಭೌಗೋಲಿಕ ಇಲ್ಲವೆ ವೈಜ್ಞಾನಿಕ ದೃಷ್ಟಿಯಿಂದ ಮಹಲೆಯುಳ್ಳ ಸ್ಥಳಗಳಿಗೆ ಮಕ್ಕಳನ್ನು ಕರೆದೊಯ್ಯಬೇಕು. ಆ ಸ್ಥಳಗಳಿಗೆ ಹೋಗುವಾಗ ದಾರಿಯಲ್ಲಿ ಸಿಗಬಹುದಾದ ಒಳ್ಳೆ ವಸ್ತುಗಳನ್ನು ಇಲ್ಲವೆ ಆಯಾ ಮಹತ್ವದ ಸ್ಥಳಗಳಲ್ಲಿ ದೊರೆಯಬಹುದಾದ ವಸ್ತುಗಳನ್ನು ತಮ್ಮ ಹಳ್ಳಿಗಳಿಗೆ ಹೊಸತೆನಿಸಿದರೆ ಸಂಗ್ರಹಿಸಬಹುದು. ಕಾರವಾರದ ಕಡಲ ತೀರಕ್ಕೆ ಪ್ರವಾಸ ಕೈಕೊಂಡರೆ ಅಲ್ಲಿಯ ಸಮುದ್ರದ ದಡದಲ್ಲಿ ಸಿಕ್ಕಬಹುದಾದ ತರತರಹದ ಸಿಂಪು.

ಶಂಖ, ಇವೇ ಮೊದಲಾದವುಗಳನ್ನು ಸಂಗ್ರಹಿಸಿ ತರಬಹುದು.

ವಸ್ತುಸಂಗ್ರಹಾಲಯವು ಚಿತ್ರಗಳ ಸಂಗ್ರಹದಿಂದ ಕೂಡಿದ ಹೊತ್ತಿಗೆಗಳನ್ನು ಒಳಗೊಳ್ಳಬಹುದು. ಓದಿದ ನಂತರ, ಕಿರಾಣಿ ಇಲ್ಲವೆ ಇತರ ಅಂಗಡಿಗಳಿಗೆ ಹೋದ ನಿರುಪಯುಕ್ತವೆಂದು ಗಣಿಸಲ್ಪಟ್ಟ ವರ್ತಮಾನ ಪತ್ರ ಮತ್ತು ಹಲವು ಪ್ರಕಾರದ ಪತ್ರಿಕೆಗಳಲ್ಲಿ ಬಂದಿರುವ ಬಗೆಬಗೆಯ ಚಿತ್ರಗಳನ್ನು ಕತ್ತರಿಸಿ ಒಂದು ಪುಸ್ತಕದ ಕಾಗದಗಳಿಗೆ ಅಂಟಿಸಿ ಇಂಥ ಪುಸ್ತಕಗಳನ್ನು ಸಾಲೆಯ ವಸ್ತು ಸಂಗ್ರಹಾಲಯದಲ್ಲಿ ಇಡಬಹುದು. ಈ ಚಿತ್ರಗಳಲ್ಲಿ ನಮ್ಮ ಹಾಗೂ ಪರರಾಷ್ಟ್ರಗಳ ನಾಯಕರ ಚಿತ್ರಗಳಿರಬಹುದು. ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿ ನೋಡತಕ್ಕ ಐತಿಹಾಸಿಕ, ಪೌರಾಣಿಕ ಧಾರ್ಮಿಕ ಸ್ಥಳಗಳ ಚಿತ್ರಗಳಿರಬಹುದು. ಹೀಗೆ ಹಲವಾರು ತರಹದ ಚಿತ್ರಗಳ ಸಂಗ್ರಹದ ಪುಸ್ತಕಗಳನ್ನು ನಿರ್ಮಿಸಿ ಸಾಲೆಯಲ್ಲಿ ಇಡಬಹುದು. ಆದರೆ ಇಷ್ಟೇ, ಹೀಗೆ ಸಂಗ್ರಹವನ್ನು ಮಾಡುವಾಗ ಚಲಚ್ಚಿತ್ರ ತಾರೆಯರ ಭಾವಚಿತ್ರಗಳನ್ನೋ ಇಲ್ಲವೇ ಬೇರೆ ಅಶ್ಲೀಲ ಚಿತ್ರಗಳನ್ನೋ ಸಂಗ್ರಹಿಸದಂತೆ ನೋಡಬೇಕು.

ವಸ್ತುಸಂಗ್ರಹಾಲಯವು ಸಾಲೆಯಲ್ಲಿ ನಿರ್ಮಿತವಾದ ವಸ್ತುಗಳನ್ನೊಳಗೊಂಡಿರಬೇಕು. ಸಾಲೆಯಲ್ಲಿ ತಯಾರಿಸಲ್ಪಟ್ಟ ಶ್ರೇಷ್ಠ ತರಗತಿಯ ನೂಲಿನ ಲಡಿಗಳು, ಮಕ್ಕಳು ಬಿಡಿಸಿತಂದ ಒಳ್ಳೇಯ ತರಹದ ಹತ್ತಿ, ನೇಯ್ದ ಬೇರೆ ಬೇರೆ ಪ್ರಕಾರದ ಅರಿವೆ, ಸಾಲೆಯ ತೋಟದಲ್ಲಿ ಬೆಳೆದ ಎಲ್ಲರಿಗೂ ಆದರ್ಶವೆನಿಸಬಹುದಾದ ಬೆಳೆಗಳ ಒಂದು ಮಾದರಿ, ಮಕ್ಕಳು ತಯಾರಿಸಿದ ಕಾಗದದ, ರಟ್ಟಿನ ಮತ್ತು ಕಟ್ಟಿಗೆಯ ಸಾಮಾನುಗಳು ಇವೆಲ್ಲವನ್ನು ಸಾಲೆಯ ವಸ್ತುಸಂಗ್ರಹಾಲಯವು ಒಳಗೊಳ್ಳಬೇಕು.

ವಸ್ತುಸಂಗ್ರಹಾಲಯದಿಂದ ಸಾಲೆಗೆ ಎಂದಿಲ್ಲದ ಶೋಭೆಯು ತಲೆದೋರುವದು. ಮಕ್ಕಳಲ್ಲಿ ಸ್ವಾಭಾವಿಕವಾಗಿರುವ ಸಂಗ್ರಹ ಪ್ರವೃತ್ತಿಯು ಸನ್ಮಾರ್ಗದಲ್ಲಿ ಪ್ರವಹಿಸಿದಂತಾಗುವದಲ್ಲದೆ ಅವರ ಕುತೂಹಲ ಪ್ರವೃತ್ತಿಯು ಹೆಚ್ಚಾಗಿ ಸೌಂದರ್ಯದ ದೃಷ್ಟಿಯು ಮೂಡಿ ಬೆಳೆದು ಬರುವದು. ಸರಿಯಾದ, ಸಚ್ಛೀಲ ಜೀವನಕ್ಕೆ ಕಲಾತ್ಮಕ ದೃಷ್ಟಿಯು ಅವಶ್ಯವಲ್ಲವೇ ? ಅವರು ತಮ್ಮ ಸುತ್ತಲಿನ, ಅಷ್ಟೇ ಏಕೆ ದೂರದ ಪರಿಸರವನ್ನೂ, ನಿಸರ್ಗವನ್ನೂ ಪ್ರೀತಿಸುವ ಬುದ್ಧಿಯುಳ್ಳವರಾಗುವರು. ' ಎಲ್ಲಿ ಏನು? ' ಎಂಬುದು ಅವರಿಗೆ ಗೊತ್ತಾಗುವದು. ವಸ್ತು ಸಂಗ್ರಹಕ್ಕಾಗಿ ಮತ್ತು ಸಂಗ್ರಹಿಸಿದ ವಸ್ತುಗಳನ್ನು ಅಂದಚಂದವಾಗಿ ಹೊಂದಿಸುವದಕ್ಕಾಗಿ ಮಕ್ಕಳು ಸಾಂಘಿಕವಾಗಿ ಶ್ರಮಿಸಬೇಕಾಗುತ್ತದೆ. ಇದರಿಂದ ಸಂಘ ಜೀವನದ ಅರಿವು ಅವರಲ್ಲಿ ಮೂಡಿ ಬರುತ್ತಿದೆ. ಇದಲ್ಲದೆ ಸಂಗ್ರಹಿಸಿದ ವಸ್ತುಗಳಿಂದ ಮಕ್ಕಳಿಗೆ ಅಭ್ಯಾಸ ಪತ್ರಿಕೆಯಂತೆ ತಾವು ಕಲಿಯಬೇಕಾದ ಇತಿಹಾಸ, ಭೂಗೋಲ ವಿಜ್ಞಾನ ಮೊದಲಾದ ವಿಷಯಗಳನ್ನು ಕಲಿಸಲು, ಕಲಿಯಲು ಅನುಕೂಲವಾಗುವದು. ಶೈಕ್ಷಣಿಕ ಉಪಕರಣಗಳೆಂದು ಸಂದರ್ಭೋಚಿತವಾಗಿ ತೋರಿಸಲೂಬಹುದು; ಉಪಯೋಗಿಸಲೂಬಹುದು. ಸಂಗ್ರಹಿಸಿದ ಹಾಗೂ ತಯಾರಿಸಿದ ವಸ್ತುಗಳ ಮೇಲೆ ಆಯಾ ಬಾಲಕರ ಹೆಸರು, ವರ್ಗ, ದಿನಾಂಕಗಳನ್ನು ಬರೆದ ಚೀಟಿಯನ್ನು ಅಂಟಿಸಿದರೆ ಆ ಬಾಲಕರಿಗೆ ಉತ್ಸಾಹವೂ ಅಭಿಮಾನವೂ ಉಂಟಾಗುವದು. ಶಿಕ್ಷಕನು ಬೇರೆ ಬೇರೆ ವಿಷಯಗಳನ್ನು ಕಲಿಸುವಾಗ ಸಮಯೋಚಿತವಾಗಿ ಸಂಗ್ರಹಿಸಿದ ವಸ್ತುಗಳನ್ನು ಉಪಯೋಗಿಸಿಕೊಂಡಲ್ಲಿ ಪಾಠವು ಪರಿಣಾಮಕಾರಿಯೂ, ಅರ್ಥಪೂರ್ಣವೂ ಆಗುವದು.

'ಸಾಲೆಯು ಹಳ್ಳಿಯ ಕೇಂದ್ರವಾಗಬೇಕು.' ಎಂಬ ಆಶಯವುಳ್ಳ ಇಂದಿನ ದಿವಸಗಳಲ್ಲಿ ಸಾಲೆಯ ವಸ್ತು ಸಂಗ್ರಹಾಲಯವು ಹಳ್ಳಿಗೆ ಅತ್ಯಂತ ಉಪಯುಕ್ತ ಜ್ಞಾನ ಭಾಂಡಾರವಾಗಿ ಪರಿಣಮಿಸಬಹುದು. ಹಳ್ಳಿಯ ಜನರನ್ನು ವಿವಿಧ ಪ್ರಸಂಗಗಳಲ್ಲಿ ಸಾಲೆಗೆ ಬರಮಾಡಿಕೊಂಡು ಈ ವಸ್ತು ಸಂಗ್ರಹಾಲಯದಲ್ಲಿರುವ ಬಗೆಬಗೆಯ ವಸ್ತುಗಳನ್ನು ತೋರಿಸಿ ಜ್ಞಾನಮಾಡಿಕೊಟ್ಟರೆ ಅವರು ಆನಂದಿತರೂ ಜ್ಞಾನಭರಿತರೂ ಆಗುವರಲ್ಲದೆ ಸಾಲೆಯ ಬಗೆಗೆ, ಶಿಕ್ಷಕರ ಬಗೆಗೆ, ತಮ್ಮ ಮಕ್ಕಳ ಬಗೆಗೆ ಆದರಾಭಿಮಾನಗಳನ್ನು ತಾಳಿ ಸಾಲೆಗೆ ಎಂದಿಲ್ಲದ ಸಹಾಯ ಸಹಕಾರಗಳನ್ನು ನೀಡಲು ತಾವೇತಾವಾಗಿ ಮುಂದೆ ಬರುವರು.

ವಸ್ತುಸಂಗ್ರಹಾಲಯವು ಮಕ್ಕಳ ಕುತೂಹಲವನ್ನು ಕೆರಳಿಸಿ, ಸೌಂದರ್ಯದ ದೃಷ್ಟಿಯನ್ನು ಅರಳಿಸಿ ಜ್ಞಾನದಾನದ ಸಾಧನೆಯಾಗಿ ಪರಿಣಮಿಸುವದಲ್ಲದೆ ಗ್ರಾಮನಿವಾಸಿಗಳಿಗೆ ಸಹ ಜ್ಞಾನ ದೀವಟಿಗೆಯಾಗಿ ನಿಂದು, ಸಾಲೆ ಸಮಾಜಗಳಲ್ಲಿ ಪರಸ್ಪರ ಮಧುರ ಸಹಕಾರ ಸ್ನೇಹಗಳನ್ನು ಬೆಳೆಯಿಸಿ ಸಾಲೆಯು, ತನ್ಮೂಲಕ ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗುವದರಲ್ಲಿ ಸಂದೇಹವಿಲ್ಲ.

ಸಾಲೆಗೆ ಮೂತ್ರ ಹಾಗು ಗೊಬ್ಬರ ಕುಣಿಗಳ ಅವಶ್ಯಕತೆ

ಲೇಖಕರು : ಶ್ರೀ ಕೆ. ಎಸ್. ಕುಲಕರ್ಣಿ, ಎ. ಡಿ. ಇ. ಆಯ್. ಧಾರವಾಡ.

ಒಬ್ಬ ಸಾಮಾನ್ಯ ಮನುಷ್ಯನ ದೃಷ್ಟಿಯಲ್ಲಿ ಕಸವಾಗಿ ಕಂಡ ಪದಾರ್ಥಗಳೇ ವಿಜ್ಞಾನಿಯ ದೃಷ್ಟಿಯಲ್ಲಿ ರಸವಾಗಿ ಕಾಣುತ್ತಿರುವಾಗ ಅದರಲ್ಲಿ ಅಡಗಿರುವ ಶಾಸ್ತ್ರೀಯ ತತ್ವವನ್ನು ಎಲ್ಲರೂ ಅರಿತುಕೊಂಡು ಶಾಸ್ತ್ರೀಯ ದೃಷ್ಟಿಯನ್ನು ಪಡೆದರೆ ಕಸವು ರಸವಾಗುವದು. ಈ ದೃಷ್ಟಿಯಿಂದ ವಿಚಾರಿಸಿದಲ್ಲಿ ಶಾಲೆಯ ಆವಾರದಲ್ಲಿ ಮೂತ್ರಕುಣಿ ಹಾಗು ಗೊಬ್ಬರ ಕುಣಿಗಳ ಮಹತ್ವವು ತುಂಬ ಇದೆ.

ಮೂತ್ರದಲ್ಲಿ ಬಹಳಷ್ಟು ಲವಣಗಳು, ಆಮ್ಲ ಪದಾರ್ಥಗಳು, ಕ್ಷಾರಗಳು ಇರುತ್ತವೆ. ಅವುಗಳಲ್ಲಿ ಮುಖ್ಯ ಲವಣವೆಂದರೆ 'ಯುರಿಯಾ'.. ಅದರ ಮುಖ್ಯ ಘಟಕವೆಂದರೆ ನ್ಯಾಟ್ರೋಜನಯುಕ್ತವಾದ ಅಮೋನಿಯಾವು. ಮೂತ್ರವನ್ನು ಮನೆಯ ಸುತ್ತಲೂ ಮಾಡುವದರಿಂದ ಅದರಿಂದ ಹೊರಡುವ ದೂಷಿತ ಪದಾರ್ಥಗಳು, ರೋಗ ಜಂತುಗಳು ಊರ ಹವೆಯನ್ನು ಕೆಡಿಸುವವಲ್ಲದೆ, ರೋಗಗಳನ್ನು ಹರಡುವ ಸಾಧನಗಳಾಗುವವು. ಹಾಗೆ ಮಾಡದೆ ಮೂತ್ರವು ಸರಿಯಾದ ರೀತಿಯಲ್ಲಿ ಒಂದೆಡೆ ಸಂಗ್ರಹಿಸಲ್ಪಟ್ಟರೆ ಕೆಲವು ದಿನಗಳ ಮೇಲೆ ಉತ್ತಮ ಗೊಬ್ಬರವಾಗಿ ಪೈರನ್ನು ಬೆಳೆಯಿಸಲು ಸಹಾಯವಾಗುವದಲ್ಲದೆ, ಊರಲ್ಲಿಯ ಎಲ್ಲ ಮನೆಗಳೂ ಶಾಲೆಯ ಮಂದಿರಗಳೂ ಸ್ವಚ್ಛವಾಗಿ ಉಳಿದು ಆರೋಗ್ಯ ರಕ್ಷಣೆಯ ಕೆಲಸವೂ ಆದಂತಾಗುವದು. ವಾಯು ಮಂಡಲದಲ್ಲಿಯ ನೈಟ್ರೋಜನ್‌ವನ್ನು ಲವಣರೂಪದಲ್ಲಿ ಕೃತ್ರಿಮ ಗೊಬ್ಬರವೆಂದು ಶೇಖರಿಸಲು ಹಣ ಖರ್ಚು ಮಾಡುತ್ತಿರುವಾಗ ಮೂತ್ರದಿಂದ ಹೊರಡುವ 'ಯುರಿಯಾ'ವನ್ನು ಸಂಗ್ರಹಿಸಲು ಯೋಜನೆ ಮಾಡಿದರೆ, ಆರ್ಥಿಕ ಲಾಭವನ್ನು ದೊರಕಿಸಿದಂತಾಗುವದು. ಇದೇ ಮಾತು ಕೊಳೆಯುತ್ತಿರುವ ಮಲ, ಎಲೆ, ಕಸಕಡ್ಡಿ, ಹಣ್ಣುಕಾಯಿ ಇತರ ಎಲ್ಲ ಸೇಂದ್ರೀಯ ಪದಾರ್ಥಗಳಿಗೂ ಅನ್ವಯಿಸುತ್ತದೆ. ಇವೆಲ್ಲ ಪದಾರ್ಥಗಳು ಉಷ್ಣತೆ ಹಾಗು ಹಸಿ ಇವುಗಳಿಂದ ಕಳಿತು ಕೊಳೆತು ರೂಪಾಂತರ ಹೊಂದಿ ಗೊಬ್ಬರವಾಗುತ್ತವೆ. ಆದ್ದರಿಂದ ಊರನ್ನು ಸ್ವಚ್ಛವಾಗಿ ಮಾಡುವದಕ್ಕೂ ಕಸವನ್ನು ಗೊಬ್ಬರವನ್ನಾಗಿ ಮಾಡಿ, ತೋಟಪಟ್ಟಿಗಳಲ್ಲಿ ಪೈರನ್ನು ಬೆಳೆದು ನಾಡನ್ನು ಸಮೃದ್ಧ ಮಾಡಲಿಕ್ಕೂ ಮೂತ್ರಕುಣಿ ಹಾಗೂ ಗೊಬ್ಬರ ಕುಣಿಗಳ ಅವಶ್ಯಕತೆಯಿದೆ. ಇಂಥ ಕುಣಿಗಳ ರಚನೆ ಹಾಗು ಅವುಗಳಿಂದಾಗುವ ಲಾಭಗಳು ಜನರ ಪ್ರತ್ಯಕ್ಷ ನಿದರ್ಶನಕ್ಕೆ ಬಂದರೆ ಎಲ್ಲರೂ ಅವುಗಳ ರಚನೆಮಾಡಿ, ಸರಿಯಾಗಿ ಉಪಯೋಗಿಸಿಕೊಳ್ಳುವರು. ಇವೆಲ್ಲ ಸಂಗತಿಗಳು ವಿಶೇಷವಾಗಿ ಹಳ್ಳಿಯ ಜನರಿಗೆ ಹಾಗು ಬಾಲಕರಿಗೆ ತಿಳಿಯದೆ ಅವರು ಸಿಕ್ಕಸಿಕ್ಕಲ್ಲಿ ಮೂತ್ರ ಬಿಡುವದನ್ನು ಹೊಲಸು ಮಾಡುವದನ್ನು ಯಾರಾದರೂ ನೋಡಬಹುದು. ಶಾಲೆಯೆಂದರೆ ವಿಸ್ತೃತವಾದ ಮನೆ, ಸಣ್ಣ ಸಮಾಜ. ಇಂದಿನ ಬಾಲಕರು ನಾಳಿನ ನಾಗರಿಕರು, ಮೂರು ವರುಷದ ಬುದ್ಧಿ ನೂರು ವರುಷದ ವರೆಗೆ. ಹೀಗೆ ಅನುಭವದ ನುಡಿಗಳಿರುವಾಗ ಆರೋಗ್ಯ ಜೀವನದ ತಳಹದಿಯನ್ನು ಹಾಕುವ, ಕಸವನ್ನು ರಸವನ್ನಾಗಿ ಮಾಡಿ ಆರ್ಥಿಕ ಲಾಭವನ್ನು ಹೊಂದುವ ಸಂಗತಿಗಳನ್ನು ಕಲಿಸಲು ಮಕ್ಕಳ ಶಾಲಾ ಜೀವನವೇ ಯೋಗ್ಯ ಸಮಯವಾಗಿವೆ ಎಂದು ಬೇರೆ ಹೇಳಬೇಕಾಗಿಲ್ಲ. ಒಳ್ಳೆಯ ಚಟಗಳನ್ನು ಮೂಡಿಸುವ ಕೆಲಸವು ಶಿಕ್ಷಕರಿಂದಲೇ ಸಾಧ್ಯ· ಶಿಕ್ಷಕನು ಮುಂಬರುವ ಸಮಾಜದ ನಿರ್ಮಾಪಕನಿದ್ದಂತೆ. ಸಮಾಜವು ಅಷ್ಟೊಂದು ವಿಶ್ವಾಸದಿಂದ ಗುರುವರ್ಗವನ್ನು ಗೌರವಿಸುತ್ತಿದೆ. ಶಾಲೆಯಲ್ಲಿ ಮಾಡಿದ್ದನ್ನೇ, ನೋಡಿದ್ದನ್ನೇ ಬಾಲಕನು ತಾನು ದೊಡ್ಡವನಾದ ಮೇಲೆ ತನ್ನ ಮನೆಯಲ್ಲಿ ಅದನ್ನೇ ಮಾಡಿ, ನೋಡಿ ಲಾಭ ಪಡೆಯುವನು. ಆದ್ದರಿಂದ ಪ್ರತಿಯೊಬ್ಬ ಶಿಕ್ಷಕನು ಮೂತ್ರಕುಣಿ ಹಾಗು ಗೊಬ್ಬರ ಕುಣಿಗಳನ್ನು ಶಾಲೆಯಲ್ಲಿ ರಚಿಸಿ ಅವುಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳಲು ಶ್ರಮಪಡಬೇಕು. ಈಗ ಕೈತೋಟವು ಒಂದು ಮಹತ್ವದ ಅಂಗವಾಗಿರುವದರಿಂದ ಇಂತಹ ಕುಣಿಗಳ ಅವಶ್ಯಕತೆ ಇನ್ನಷ್ಟು ಹೆಚ್ಚುವದು. ಇದಲ್ಲದೆ ಇವುಗಳಿಂದ ತಯಾರಾಗುವ ಗೊಬ್ಬರವನ್ನು ಹಾಗೂ ಅವುಗಳ ಉಪಯುಕ್ತತೆಯನ್ನು ಕಂಡು ಹಿಡಿಯುವ ಪ್ರಯೋಗಗಳನ್ನು ಮಾಡಲು ಸಾಧ್ಯವಾಗುವದು.

ಮೂತ್ರಕುಣಿ ಮತ್ತು ಗೊಬ್ಬರ ಕುಣಿಗಳ ರಚನೆಯಲ್ಲಿ ಒಂದು ಸಾಮಾನ್ಯ ತತ್ವವಿದೆ. ಮಲಮೂತ್ರ,

ಕಸಕಡ್ಡಿ ಇತ್ಯಾದಿ ಸೇಂದ್ರಿಯ ಪದಾರ್ಥಗಳೆಲ್ಲ ನೆಲದ ಒಳಬದಿಯಲ್ಲಿ ಇದ್ದರೆ ಭೂಮಿಯಲ್ಲಿಯ ಉಷ್ಣತೆ ಹಾಗು ಹಸಿಗಳಿಂದ ಕಳಿತು ಕೆಲ ಸಮಯದ ನಂತರ ರೂಪಾಂತರ ಹೊಂದಿ ಗೊಬ್ಬರವಾಗುತ್ತದೆ. ಗೊಬ್ಬರದಲ್ಲಿ ಸೂಸು ಮಣ್ಣಿರುತ್ತದೆ. ಸೂಸುಮಣ್ಣೆಂದರೆ ನೀರಿನಲ್ಲಿ ಕರಗುವ ನೈಟ್ರೋಜನ್‌ಯುಕ್ತವಾದ ವಸ್ತುವನ್ನು ಕೊಡುವ ಪದಾರ್ಥ. ಇದೇ ವನಸ್ಪತಿಗಳ ಬೆಳವಣಿಗೆಗೆ ಬೇಕಾದ ಪದಾರ್ಥ. ನಿಜವಾದ ಕ್ರಮವು ಹೀಗಿರುವಾಗ ಕುಣಿಗಳನ್ನು ರಚಿಸಬೇಕು ಎಂದಾಗ ಉದ್ದ ಎಷ್ಟು? ಅಗಲ ಎಷ್ಟು? ಆಳ ಎಷ್ಟು? ಎಂಬ ಪ್ರಶ್ನೆಗಳು ಉದ್ಭವಿಸುವದು ಸ್ವಾಭಾವಿಕ. ಆದ್ದರಿಂದ ಎಲ್ಲದಕ್ಕೂ ಉಪಯೋಗ ಬೀಳುವ ಒಂದು ಸುಲಭ ಸೂತ್ರವನ್ನು ಕೊಡಲಾಗಿದೆ. ಯಾವದೇ ಕುಣಿ ಇರಲಿ, ಅದರ ಆಳಮಾತ್ರ ೩' ನಿಂದ ೩½' ಇರಬೇಕು. ಅಗಲ ೩' ನಿಂದ ೪'. ಗೊಬ್ಬರ ಕುಣಿಯ ಉದ್ದಳತೆಯನ್ನು ೪' ನಿಂದ ೬'ಗಳ ವರೆಗೆ ಹೆಚ್ಚಿಸಿಕೊಳ್ಳಬಹುದು.

ಮೂತ್ರಕುಣಿಯನ್ನು ರಚಿಸುವಾಗ ಕೆಲವು ಸಂಗತಿಗಳನ್ನು ಗಮನಿಸಬೇಕು. ಕಸಕಡ್ಡಿ ಎಲೆಗಳನ್ನೆಲ್ಲ ೨½' ವರೆಗೆ ಒತ್ತೊತ್ತಿ ತುಂಬಬೇಕು. ಆ ಮೇಲೆ ೩" ದಪ್ಪ ಗಟ್ಟಿ ಮಣ್ಣನ್ನು ಹಾಕಬೇಕು. ಅದರ ಬಾಯಿಯ ಎರಡೂ ಕರ್ಣಮಾರ್ಗವಾಗಿ ೬" ಅಗಲ ೩" ದಪ್ಪ ಉಸುಕನ್ನು ಹಾಕಿ ಎರಡು ಪಟ್ಟಿಗಳನ್ನು ತಯಾರಿಸಿ ಉಳಿದ ಭಾಗದಲ್ಲಿ ಮತ್ತೆ ೩" ದಪ್ಪ ಗಟ್ಟಿಮಣ್ಣನ್ನು ಹಾಕಬೇಕು. ನಂತರ ಆ ಕುಣಿಯ ಉದ್ದಗಲಗಳ ಮಧ್ಯದಲ್ಲಿ ೩' ನಿಂದ ೪' ಎತ್ತರವುಳ್ಳ ಎರಡು ತಟ್ಟಿಗಳನ್ನು ಒಂದಕ್ಕೊಂದು ಕಾಟಕೋನವಾಗಿ ನಿಲ್ಲಿಸಬೇಕು. ಅಂದರೆ ನಾಲ್ಕು ಮೂಲೆಗಳಲ್ಲಿ ಬಾಲಕರು ಕುಳಿತುಕೊಳ್ಳಲು ಸಾಧ್ಯವಾಗುವದು. ನಾಲ್ಕು ಮೂಲೆಗಳಲ್ಲಿ ಉಸುಕಿನ ಪಟ್ಟಿಯ ಎಡಬಲ ಕುಳಿತುಕೊಳ್ಳಲು ಎರಡೆರಡರಂತೆ ಇಟ್ಟಂಗಿಗಳನ್ನಾಗಲಿ ಸಣ್ಣ ಕಲ್ಲುಗಳನ್ನಾಗಲಿ ಇಡಬೇಕು. ಶಾಲೆಯಲ್ಲಿ ಒಂದೇ ಕಾಲಕ್ಕೆ ಇಂಥ ೨ ಕುಣಿಗಳಿರಬೇಕು. ಒಂದು ಬಾಲಕರಿಗಾಗಿ ಮತ್ತೊಂದು ಬಾಲಿಕೆಯರಿಗಾಗಿ. ಇಂಥ ಕುಣಿಗಳು ೪ರಿಂದ೬ ತಿಂಗಳಗಳ ವರೆಗೆ ಉಪಯೋಗಿಸಲು ಬರುವವು. ಕುಣಿಯಲ್ಲಿ ಮೂತ್ರವು ಹೆಚ್ಚಾಗಿ ನಾತ ಬರಹತ್ತಿದರೆ ಮತ್ತೆ ಇಂಥ ಎರಡು ಕುಣಿಗಳನ್ನು ರಚಿಸಬೇಕು. ತುಂಬಿದ ಮೂತ್ರಕುಣಿಗಳನ್ನು ೨–೩ ತಿಂಗಳುಗಳ ನಂತರ ಅಗಿದರೆ ಉತ್ತಮ ಗೊಬ್ಬರ ದೊರೆಯುತ್ತದೆ. ಇದರಲ್ಲಿ ಲವಣದ ಅಂಶ ಬಹಳವಿರುವದರಿಂದ ಪೈರಿಗೆ ಸ್ವಲ್ಪುಸ್ವಲ್ಪಾಗಿ ಉಪಯೋಗಿಸಬೇಕು. ಗೊಬ್ಬರ ಕುಣಿಗಳ ವಿಷಯದಲ್ಲಿ ೪' ಉದ್ದ × ೪' ಅಗಲ × ೩' ಆಳವುಳ್ಳ ಕುಣಿಯಲ್ಲಿ ಕಸಕಡ್ಡಿ ಎಲೆಗಳನ್ನು ಚೆಲ್ಲಿ ತುಂಬುತ್ತ ಹೋಗಬೇಕು. ತುಂಬಿದ ಮೇಲೆ ಆ ಮಣ್ಣನ್ನು ಹಾಕಿ ಮುಚ್ಚಿಡಬೇಕು. ನಾಲ್ಕಾರು ತಿಂಗಳುಗಳ ನಂತರ ಅಲ್ಲಿಯೂ ಗೊಬ್ಬರವಾಗುವದು. ಕುಣಿಗಳ ಉದ್ದಳತೆಯನ್ನು ೬ ರಿಂದ ೮'ನ ವರೆಗೂ, ಆಳವನ್ನು ೩ ರಿಂದ ೪'ನ ವರೆಗೂ ಹೆಚ್ಚಿಸಿಕೊಳ್ಳಬಹುದು. ಇಂಥ ಗೊಬ್ಬರದಲ್ಲಿ ಲವಣದ ಪ್ರಮಾಣ ಕಡಿಮೆ. ಸಾಕಷ್ಟು ಪ್ರಮಾಣದಲ್ಲಿ ಇಂಥ ಗೊಬ್ಬರವನ್ನು ಉಪಯೋಗಿಸಿಕೊಂಡರೆ ಕೈತೋಟದ ಪೈರಿನ ಬಹಳಷ್ಟು ಬೇಡಿಕೆಯು ಪೂರೈಸಲ್ಪಡುವದು. ಶಾಲೆಯಲ್ಲಿ ಇಂಥ ಕನಿಷ್ಟ ಎರಡು ಕುಣಿಗಳಾದರೂ ಇರಬೇಕು.

ಹೀಗೆಯೇ ಹರಿಪಾಯಖಾನೆಗಳನ್ನು ಹೆಚ್ಚಿಸಿಕೊಳ್ಳಬಹುದು. ೬' ಉದ್ದ × ೧' ಅಗಲ × ೨' ಆಳ ಇರುವ ಹರಿಯನ್ನು ತಯಾರಿಸಿಕೊಳ್ಳಬೇಕು. ಶೌಚ ಮಾಡಿದ ಮೇಲೆ ಮಲದ ಮೇಲೆ ತುಂಬಾ ಮಣ್ಣನ್ನು ಹಾಕಬೇಕು. ಪ್ರತಿಯೊಬ್ಬರೂ ಇದರಂತೆ ಮಾಡಬೇಕು. ಅಂದರೆ ನಾತವು ಬರುವದಿಲ್ಲ: ಸ್ಥಳವೂ ಕೂಡ ಹೊಲಸಾಗುವದಿಲ್ಲ. ಹರಿಯು ಒಂದು ಸ್ಥಳ ಪೂರ್ಣ ತುಂಬಿದ ಮೇಲೆ ಹರಿಯಗುಂಟ ಸರಿಯುತ್ತ ಹೋಗಬೇಕು. ಒಂದು ಹರಿ ತುಂಬಲು ನಾಲ್ಕಾರು ತಿಂಗಳುಗಳು ಬೇಕಾಗುತ್ತವೆ. ಹರಿಗೆ ತಟ್ಟಿಯ ಪರದೆ ಇರಬೇಕು. ಇಲ್ಲವೆ ಕಳ್ಳಿಯ ಸಾಲನ್ನಾದರೂ ಹಚ್ಚಬೇಕು. ಸಲಹೆ ಕೊಡಲು ಈ ಬಗ್ಗೆ ಸರಕಾರದವರು ತಜ್ಞರನ್ನು ನಿಯಮಿಸಿದ್ದು ಅವರಿಂದ ರಚನೆಯ ಬಗ್ಗೆ ಹೊಸ ಹೊಸ ಮಾದರಿಗಳನ್ನು ಅರಿತುಕೊಂಡರೆ ಹೆಚ್ಚು ಉತ್ತಮ. ಈ ಪ್ರಕಾರ ಕುಣಿಗಳನ್ನು ಹರಿ ಪಾಯಖಾನೆಗಳನ್ನು ಶಾಲೆ ಮಂದಿರಗಳ ಸಮೀಪದಲ್ಲಿ ಮನೆಯ ಆವಾರದಲ್ಲಿ ರಚಿಸಿದರೆ ಕಸ–ಕಡ್ಡಿ ಮಲಮೂತ್ರಗಳೇ ಕಾಣದಂತಾಗಿ ಮನುಷ್ಯನು ತನಗೆ ಇಡೀ ವರ್ಷದಲ್ಲಿ ಬೇಕಾಗುವ ಆಹಾರ ಧಾನ್ಯದ ೩/೪ ದಷ್ಟಾದರೂ ದೊರಕಿಸುವಷ್ಟು ಬೆಳೆಯನ್ನು ಬೆಳೆಯಲು ಗೊಬ್ಬರ ಸಂಗ್ರಹವಾಗುವದು. ಹಾಗೂ ರೋಗ ರುಜಿನಗಳಿಲ್ಲದೆ ಆರೋಗ್ಯ ಜೀವಿಯಾಗಿ ಬಾಳುವನು.

ಪ್ರಾರ್ಥನೆ ಹಾಗು ಅದನ್ನು ಸಾಗಿಸುವ ವಿಧಾನ

ಲೇಖಕರು : ಶ್ರೀ ಎಸ್. ಬಿ. ಪಾಟೀಲ, ಅ. ಡೆ. ಎ. ಇ. ಧಾರವಾಡ.

ಉದಯ ಕಾಲದಲ್ಲಿ ಎದ್ದು, ಪ್ರಾತಃಕಾಲದ ನಿತ್ಯ ಕರ್ಮಗಳನ್ನು ತೀರಿಸಿಕೊಂಡು ಕಾಯಕಕ್ಕೆ ತೊಡಗುವ ಮೊದಲು ಅಂದಿನ ತಮ್ಮ ಜೀವನವನ್ನು ಸುಖಮಯವಾಗಿ ಸಾಗಿಸುವಂತೆ ಸೃಷ್ಟಿಕರ್ತನನ್ನು ಅನನ್ಯ ಭಾವನೆಯಿಂದ ಹೃದಯ ಬಿಚ್ಚಿ ಬೇಡಿಕೊಳ್ಳುವದೇ ಪ್ರಾರ್ಥನೆಯು. "ಪ್ರಾರ್ಥನೆಯು ಹೃದಯದ ಕೂಗು" ಎಂದು ಮಹಾತ್ಮಾ ಗಾಂಧೀಜಿಯವರು ಹೇಳಿದುದೂ ಇದೇ ಮಾತನ್ನು ಪುಷ್ಟೀಕರಿಸುವದು. ದಿನದ ಕೆಲಸ ಬೊಗಸೆಗಳನ್ನು ತೀರಿಸಿದ ನಂತರ ಇದೇ ಬಗೆಯಾಗಿ ಪರಮಾತ್ಮನನ್ನು ಸ್ಮರಿಸುವ ರೂಢಿಯೂ ಉಂಟು. ಹೀಗೆ ಉದಯಾಸ್ತ ಕಾಲಗಳ ಪ್ರಾರ್ಥನೆಯು ಭಾರತೀಯ ಸಂಸ್ಕೃತಿಯಲ್ಲಿ ಹಾಸು ಹೊಕ್ಕಾಗಿ ಪುರಾತನ ಕಾಲದಿಂದ ನಡೆದು ಬಂದಿದೆ. ಅಂದಿನಿಂದ ಇಂದಿನ ವರೆಗೆ ಭಾರತದಲ್ಲಿ ಜರುಗಿದ ಹಲವಾರು ರಾಜಕೀಯ ವಿಪ್ಲವಗಳಿಗೆ ಸಿಕ್ಕು ಪರ ಸಂಸ್ಕೃತಿಗಳು ಕೆಲಮಟ್ಟಿಗೆ ಭರತ ಭೂಮಿಯ ಮೇಲೆ ತಮ್ಮ ಪ್ರಭಾವವನ್ನು ಬೀರಿದರೂ ಆರ್ಯ ಸಂಸ್ಕೃತಿಯು ತನ್ನದೇ ಆದ ಒಂದು ತನ್ನತನವನ್ನು ತಲೆಮಾರುಗಳಿಂದ ಉಳಿಸಿಕೊಂಡು ಬಂದಿದೆ. ತತ್ಪರಿಣಾಮವಾಗಿ ಇಂದು ಎಲ್ಲ ಮಠ-ಮಸೀದೆಗಳಲ್ಲಿ ಗುಡಿಗುಂಡಾರಗಳಲ್ಲಿ, ಪುಣ್ಯಕ್ಷೇತ್ರಗಳಲ್ಲಿ ಅದೇಕೆ ಅನೇಕ ಮನೆಗಳಲ್ಲಿ ಸಹ ಪ್ರಾರ್ಥನೆಯು ವೈಯಕ್ತಿಕವಾಗಿ ಇಲ್ಲವೆ ಸಾಮೂಹಿಕವಾಗಿ ನಡೆಯುತ್ತಿರುವದನ್ನು ನೋಡುತ್ತೇವೆ.

ಸಾಲೆಯು ಇದಕ್ಕೆ ಅಪವಾದವಾಗಿಲ್ಲ. ತೀರ ಬುನಾದಿಕಾಲದಿಂದಲೂ ಪ್ರಾರ್ಥನೆಯು ಸಾಲೆಯ ಜೀವನದಲ್ಲಿ ಸಾಗಿ ಬಂದಿದೆ. ಹಳೆಯ ಶಿಕ್ಷಣ ಪದ್ಧತಿಯಲ್ಲಿ ಈಗಿನಂತೆ ಕ್ರಮಬದ್ಧವಾಗಿ, ಮೆಟ್ಟಲು ಮೆಟ್ಟಲುಗಳಲ್ಲಿ ನಡೆಯುತ್ತಿರಲಿಲ್ಲವಾದರೂ ಒಂದೋ, ಎರಡೋ ಪ್ರಾರ್ಥನೆಯ ಪದ್ಯಗಳನ್ನು ಸಾಂಘಿಕವಾಗಿ ಅನ್ನುವದು ಬಳಕೆಯಲ್ಲಿತ್ತು.

ಅಂದಿನ ಹಳೆಯ ಶಿಕ್ಷಣವು ಜೀವನ ಶಿಕ್ಷಣದಲ್ಲಿ ರೂಪಾಂತರ ಹೊಂದಿದ ನಂತರ ಇಂದು ಪ್ರಾರ್ಥನೆಯು ಸಾಲೆಯ ಜೀವನದಲ್ಲಿ ಮಹತ್ವದ ಅಂಗವಾಗಿದೆ. ಈ ಹೊಸ ಶಿಕ್ಷಣವನ್ನು ಭಾರತದ ಜನತೆಗೆ ನೀಡಿದ ಆ ಭಾಗ್ಯವಿಧಾತನು ಪ್ರಾರ್ಥನೆಯ ಮಹತ್ವವನ್ನು ಹೃದಯಂಗಮವಾಗಿ ಹೇಳಿರುವನಲ್ಲದೇ ತನ್ನ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡಿದ್ದನು. ಇಂದಿನ ಶಿಕ್ಷಣ ಕ್ರಮದಲ್ಲಿ ಪ್ರಾರ್ಥನೆಗೆ ಅತ್ಯಂತ ಮಹತ್ವವಿದೆ. ಪ್ರಾರ್ಥನೆಯು ಮಕ್ಕಳಲ್ಲಿ, ಶಿಕ್ಷಕರಲ್ಲಿ, ಜನರಲ್ಲಿ ದೈವೀ ಭಾವನೆಯನ್ನು ಹುಟ್ಟಿಸಿ ಸಾಂಘಿಕ ಜೀವನದ ಅರಿವನ್ನು ಬೆಳೆಯಿಸಿ, ಆರ್ಯ ಸಂಸ್ಕೃತಿಯ ಪುನರುತ್ಥಾನಗೊಳಿಸಿ, ದೈವೀ ಭಾವನೆಯನ್ನು ಬೇರೂರಿಸಿ ನೈತಿಕ ಜಾಗೃತೆಯನ್ನುಂಟು ಮಾಡುವದು. ಇಂದಿನ ಪ್ರಾರ್ಥನೆಯಲ್ಲಿ ಕುರಾಣ ಪಠಣ, ಬಾಯ್ಬಲ್ ವಾಚನ, ಇವೂ ಸಹ ಸಮಾವೇಶವಾಗುವದರಿಂದ ಸರ್ವಧರ್ಮ ಸಹಿಷ್ಣುತೆಯು ಮಕ್ಕಳಲ್ಲಿ ಉಂಟಾಗುವದು. ಅದರಂತೆ ಪಂಚಾಂಗ ಓದುವದರಿಂದ ಪ್ರತಿದಿನದ ತಿಥಿ, ನಕ್ಷತ್ರ, ದಿನಾಂಕ ಮೊದಲಾದವು ಗೊತ್ತಾಗುವವು.

ನಿಜವಾದ ಪ್ರಾರ್ಥನೆಯ ಪದ್ಯಗಳು ಪರಮಾತ್ಮನನ್ನು ಕುರಿತಾದವು ಇರಬೇಕು. ಮೂವತ್ತುಕೋಟಿ ದೇವತೆಗಳನ್ನು ಹೊಗಳುವದಕ್ಕಿಂತ ಎಲ್ಲವನ್ನು ನಿರ್ಮಿಸಿದವನು, ರಕ್ಷಿಸುವವನು ಒಬ್ಬನೇ ಎಂದೂ ಆ ಚೇತನವೇ ಪರಮಾತ್ಮನೆಂದೂ ತಿಳಿದು, "ದೇವನೊಬ್ಬ ನಾಮಹಲವು" ಎಂಬ ಉಕ್ತಿಯಂತೆ ದೇವರು ಒಬ್ಬನೇ ಎಂದು ಭಾವಿಸಿ ರಚಿಸಿರುವ ಪದ್ಯಗಳನ್ನು ಅನ್ನಿಸಬೇಕು. ಪ್ರಾರ್ಥನಾ ಪದ್ಯಗಳು ಮಕ್ಕಳಿಗೆ ನಿಲುಕುವ ಹಾಗೂ ಮನಮೆಚ್ಚುವ ರಾಗದಲ್ಲಿ ರಚಿತವಾದವುಗಳಿರಬೇಕು. ಇದರಿಂದ ಮಕ್ಕಳು ಆ ರಾಗವನ್ನು ಸುಲಭವಾಗಿ ಗ್ರಹಿಸಿ, ಹಾಡಿ ತಣಿಯುವರಲ್ಲದೇ ಇತರರನ್ನೂ ತಣಿಸುವರು. ಅದರಂತೆ ಉತ್ತಮ ವಚನಗಳನ್ನು, ದಾಸರ ಪದಗಳನ್ನು ಆಗಾಗ ಅನ್ನಿಸಬೇಕು. ಅನೇಕ ದಿವಸಗಳ ವರೆಗೆ ಒಂದೇ ಪದ್ಯವನ್ನು ಅನ್ನಿಸುವದರಿಂದ ಮಕ್ಕಳಿಗೆ ಬೇಸರವಾಗುವದು. ಕಾರಣ ಒಂದು ಪದ್ಯದ ರೂಢಿಯಾದ ನಂತರ ಬೇರೆ ಪದ್ಯಗಳನ್ನು ಅನ್ನಿಸಬೇಕು. ಹೀಗೆ ವರ್ಷದಲ್ಲಿ ಪ್ರತಿತಿಂಗಳಿಗೆ ಹೊಸ ಹೊಸ ಪದ್ಯಗಳನ್ನು ಅನ್ನಿಸುತ್ತ ಹೋಗಬೇಕು. ಪ್ರಾರ್ಥನೆಯ ಪದ್ಯಗಳು ಅರ್ಥವಾಗುವಂಥವು ಇರಬೇಕು. ಮಕ್ಕ

ಳಿಗೆ ತಿಳಿಯುವಂತೆ ಆ ಪದ್ಯಗಳ ಅರ್ಥ ಹೇಳಿಕೊಡಬೇಕು. ಮಾತೃಭಾಷೆಯಲ್ಲಿ ರಚಿತವಾದ ಪದ್ಯಗಳನ್ನೇ ಹೆಚ್ಚಾಗಿ ಆಯ್ದುಕೊಳ್ಳಬೇಕು. ಹಿಂದೀ ಪ್ರಾರ್ಥನಾ ಪದ್ಯಗಳನ್ನು ಕಲಿಸಬಹುದು. ಆದರೆ ಕನ್ನಡದಲ್ಲಿ ಅವುಗಳ ಅರ್ಥವನ್ನು ಮಕ್ಕಳಿಗೆ ಹೇಳಿಕೊಡಬೇಕು.

ಮೇಲೆ ಹೇಳಿದಂತೆ ಪ್ರಾರ್ಥನೆಯು ಪ್ರತಿದಿನ ಮುಂಜಾನೆ ಸಾಲೆಗೆ ಬಂದಕೂಡಲೇ ನಡೆಯಬೇಕು. ಇದಕ್ಕೆ ಉದಯ ಕಾಲದ ಇಲ್ಲವೆ ಪ್ರಾತಃಪ್ರಾರ್ಥನೆಯೆನ್ನುವರು. ಸಾಯಂಕಾಲ ಸಾಲೆ ಬಿಡುವ ಮುಂಚೆಯೂ ಪ್ರಾರ್ಥನೆಯನ್ನು ಮಾಡಿಸುವದು ಒಳಿತು. ಉದಯ ಕಾಲದ ಪ್ರಾರ್ಥನೆಯು ಹಸನ್ಮುಖಿಯಾದ ಮಕ್ಕಳ ಮನವನ್ನು ಅರಳಿಸಿ ಅವರನ್ನು ಕರ್ತವ್ಯದಲ್ಲಿ ತೊಡಗಲು ಹುರಿಡುಂಬಿಸುತ್ತದೆ. ಈ ಸಮಯದ ಪ್ರಾರ್ಥನೆಯು ಶಾಂತಿ ಮಂತ್ರ, ಕುರಾಣ ಪಠಣ, ಬಾಯಬಲ್‌ನಲ್ಲಿಯ ಒಂದು ಶ್ಲೋಕದ ವಾಚನ, ಶರಣರ ವಚನಗಳಿಂದ ಕೂಡಿರಬೇಕಲ್ಲದೇ ಇವೆಲ್ಲ ಕ್ರಮವಾಗಿ ಆದ ನಂತರ ಒಂದೆರಡು ಪ್ರಾರ್ಥನಾ ಪದ್ಯಗಳು ಅನ್ನಲ್ಪಡಬೇಕು. ಬಳಿಕ ಮೊದಲೇ ನಿಯೋಜಿಸಿದಂತೆ ಓರ್ವನು ಅಂದಿನ ಪಂಚಾಂಗವನ್ನು ಅಂದರೆ ತಿಥಿ, ನಕ್ಷತ್ರ, ದಿನಾಂಕ ಮೊದಲಾದವುಗಳನ್ನು ಹೇಳಬೇಕು. ಬಳಿಕ ಇನ್ನೊಬ್ಬನು ಅಮೃತವಾಣಿಯನ್ನು ಹೇಳಬೇಕು. ನಂತರ ಅಂದಿನ ಸುದ್ದಿ ವಿತರಣೆಯನ್ನು ಮತ್ತೊಬ್ಬನು ಮಾಡಬೇಕು. ಇಷ್ಟೆಲ್ಲ ಆದ ನಂತರ ಯಾರಾದರೂ ಅತಿಥಿಗಳು ಬಂದಿದ್ದರೆ, ಇಲ್ಲವೆ ಸಾಲೆಯ ಮುಖ್ಯಾಧ್ಯಾಪಕರೇ ಆಗಲಿ ಏನಾದರೂ ಉಪದೇಶಪರ ಮಾತುಗಳನ್ನು ಸಾಮಾನ್ಯವಾಗಿ ಹೇಳುವದಿದ್ದರೆ ಹೇಳಬೇಕು. ಇದೂ ಮುಗಿದ ನಂತರ ಆಯಾ ವರ್ಗದ ಆರೋಗ್ಯ ಮಂತ್ರಿಯು ತನ್ನ ವರ್ಗದ ಮಕ್ಕಳ ಆರೋಗ್ಯ ತಪಾಸಣೆಯನ್ನು ಮಾಡಬೇಕು. ಮತ್ತು ವರ್ಗ ಮಂತ್ರಿಯು ಹಾಜರಿಯನ್ನು ತೆಗೆದುಕೊಳ್ಳಬೇಕು. ಕಂಡುಬಂದ ನ್ಯೂನತೆಗಳನ್ನು ತಮ್ಮ ವರ್ಗದ ಗುರುಗಳ ನಿದರ್ಶನಕ್ಕೆ ತರಬೇಕು. ಸಾಲೆಯ ದೈನಂದಿನ ಕೆಲಸ, ಸಭೆ, ಸಮಾರಂಭ ಇಲ್ಲವೆ ಬೇರೆ ಯಾವವೇ ಸಂಗತಿಗಳ ಬಗ್ಗೆ ಗುರುವರ್ಗದವರು ಏನಾದರೂ ಹೇಳುವದಿದ್ದರೆ ಅದನ್ನು ಇಲ್ಲಿ ಹೇಳಬಹುದು. ಹೀಗೆ ಪ್ರಾರ್ಥನೆಯು ಶಾಂತಿಮಂತ್ರ, ಕುರಾಣ ಹಾಗೂ ಬಾಯಬಲ್ ಪಠಣ, ಶರಣರ ವಚನ ಹೇಳುವದು, ಪ್ರಾರ್ಥನಾ ಪದ್ಯಗಳು, ಪಂಚಾಂಗ, ಅಮೃತವಾಣಿ, ಸಂಕ್ಷಿಪ್ತ ಸುದ್ದಿ ವಿತರಣ, ಪ್ರಾರ್ಥನೋತ್ತರ ಭಾಷಣ, ಹಾಜರಿ ಹಾಗೂ ಆರೋಗ್ಯ ತಪಾಸಣೆ, ಪ್ರಕಟನೆಗಳು ಮುಂತಾದ ಅಂಗಗಳಿಂದ ಕೂಡಿದೆ.

ಇಷ್ಟೆಲ್ಲ ವಿಧಿ ವಿಧಾನಗಳಿಂದ ಕೂಡಿದ ಪ್ರಾರ್ಥನೆಯನ್ನು ಸಾಗಿಸಲು ಇಡೀ ಸಾಲೆಗೆ ಪ್ರಾರ್ಥನಾ ಮಂತ್ರಿಯೆಂದು ಒಬ್ಬ ವಿದ್ಯಾರ್ಥಿಯು ಬೇಕಾಗುವನು. ಸಾಲೆಯ ಮುಖ್ಯ ಮಂತ್ರಿಯು ಇವನನ್ನು ಆರಿಸುವನು. ಈ ಪ್ರಾರ್ಥನಾ ಮಂತ್ರಿಯು ಮೇಲಿನ ವರ್ಗದವನೇ ಇರುವದು ಒಳಿತು. ಈತನು ನಿತ್ಯದ ಪ್ರಾರ್ಥನೆಯನ್ನು ಜರುಗಿಸುವನಲ್ಲದೆ, ಕುರಾಣವನ್ನು ಬಾಯಬಲ್ ಪದ್ಯ ಹೇಳುವದಕ್ಕೂ ಪಂಚಾಂಗ, ಅಮೃತವಾಣಿ, ಸುದ್ದಿ, ಇವೇ ಮೊದಲಾದವನ್ನು ಹೇಳುವದಕ್ಕೂ ವಾರಕ್ಕೊಂದು ಗುಂಪಿನಂತೆ ಮೇಲಿನ ವರ್ಗಗಳ ವಿದ್ಯಾರ್ಥಿಗಳಲ್ಲಿ ಸರತಿಯನ್ನು ಹಾಕಬೇಕು. ಹೀಗೆ ಮಾಡಿದ ಯೋಜನೆಯನ್ನು ಬರುವ ವಾರದ ಹಿಂದಿನ ದಿನವೇ ಸಂಬಂಧಿಸಿದ ವಿದ್ಯಾರ್ಥಿಗಳಿಗೆ ತಿಳಿಸಬೇಕು. ೪ನೆಯ ಇಯತ್ತೆಯಿಂದ ೭ನೆಯ ಇಯತ್ತೆಯವರೆಗಿನ ಮಕ್ಕಳಿಗೆ ಹೀಗೆ ಸರತಿ ಕೊಡುವದು ಒಳಿತು. ಹೀಗೆ ಮಾಡಿದ ಯೋಜನೆಯ ಒಂದು ವಹಿಯನ್ನೇ ಆತನು ತನ್ನ ಕಡೆಗೆ ಇಟ್ಟುಕೊಳ್ಳಬೇಕು. ಮತ್ತು ಮುಖ್ಯ ಗುರುಗಳ ಅನುಮತಿಯನ್ನು ಪಡೆದುಕೊಳ್ಳಬೇಕು. ೪ ರಿಂದ ೭ ನೆಯ ಇಯತ್ತೆಯ ಎಲ್ಲ ಮಕ್ಕಳಿಗೆ ಪ್ರಾರ್ಥನೆಯ ಒಂದಿಲ್ಲೊಂದು ಅಂಗಗಳಲ್ಲಿ ಭಾಗವಹಿಸುವ ಸರತಿಯು ಬರುವಂತೆ ನೋಡಿಕೊಳ್ಳಬೇಕು.

ಆಗಾಗ ಬದಲಿಸುವ ಪ್ರಾರ್ಥನಾ ಪದ್ಯಗಳು ಪ್ರತಿ ದಿನ ಬದಲಿಸಬಹುದಾದ ಶರಣರ ವಚನಗಳು, ಕುರಾನ ಮತ್ತು ಬಾಯಬಲ್ ಶ್ಲೋಕಗಳು ದಿನಾಲೂ ಹೊಸದಾಗಿ ಕೇಳಲ್ಪಡುವ ಅಮೃತವಾಣಿಗಳು ಇವೆಲ್ಲವೂ ಒಂದು ವಹಿಯಲ್ಲಿ ಬರೆದಿಡಲ್ಪಡಬೇಕು. ವರ್ಷಾಂತ್ಯದಲ್ಲಿ ಕೆಲವು ಪದ್ಯಗಳು, ಕುರಾಣ ಮತ್ತು ಬಾಯಬಲ್ ಶ್ಲೋಕಗಳು, ಶರಣರ ಅನೇಕ ವಚನಗಳು ಮತ್ತು ಅಮರವಾಣಿಗಳು, ಸಂಗ್ರಹಿಸಲ್ಪಟ್ಟಂಥ ಒಂದು ಹೊತ್ತಿಗೆಯೇ ನಮ್ಮೆದುರು ಕಂಡುಬರುವದು. ಮಕ್ಕಳು ಇದು ತಮ್ಮ ಸಂಗ್ರಹವೆಂದು ಆನಂದ ಪಟ್ಟರೆ ಊರವರು ಸಾಲೆಯ ಬಗ್ಗೆ ಅಭಿಮಾನ ಆದರವನ್ನು ತಳೆಯುವರು.

ಸಾಯಂಪ್ರಾರ್ಥನೆಯಲ್ಲಿ ಮೇಲ್ಕಾಣಿಸಿದ ಎಲ್ಲ ಅಂಗಗಳು ಇರುವದಿಲ್ಲ. ಅಲ್ಲಿ ಶಾಂತಿಮಂತ್ರದ ನಂತರ ಒಂದು ಪದ್ಯವಿದ್ದರೆ ಮುಗಿಯಿತು. ಇದನ್ನೂ ಪ್ರಾರ್ಥನಾ

ವಹಿಯಲ್ಲಿ ಬರೆದಿಡಬೇಕು. ಪ್ರಾರ್ಥನೆಯು ಆ ಮಕ್ಕಳಿಂದ ನಡೆಸಲ್ಪಟ್ಟರೂ ಸೂತ್ರಧಾರಿಯಾಗಿ ತೆರೆಯಹಿಂದೆ ಶಿಕ್ಷಕನು ಅವರಿಗೆ ಮಾರ್ಗದರ್ಶನ ಮಾಡುತ್ತಿರಬೇಕು. ಪ್ರಾರ್ಥನೆಯನ್ನು ನಡೆಸುವ ಬಗ್ಗೆ ಮಕ್ಕಳಲ್ಲಿ ಗುಂಪುಗಳನ್ನು ಮಾಡುವದರಲ್ಲಿ, ಪ್ರಾರ್ಥನಾ ಪದ್ಯಗಳು, ವಚನಗಳು, ಶ್ಲೋಕಗಳು, ಅಮರವಾಣಿಗಳು ಇವೇ ಮೊದಲಾದವನ್ನು ಆರಿಸುವಲ್ಲಿ, ಸುದ್ದಿ ಸಂಗ್ರಹಿಸುವದರಲ್ಲಿ ಆರಂಭದಲ್ಲಿ ಪ್ರಾರ್ಥನೆ ನಡೆಯಿಸುವದರಲ್ಲಿ ಸಹ ಶಿಕ್ಷಕನು ಮಕ್ಕಳಿಗೆ ಮಾರ್ಗದರ್ಶನ ಮಾಡಬೇಕು. ದಿನಾಲೂ ಕರಿಹಲಿಗೆಯ ಮೇಲೆ ಅಂದಿನ ಪಂಚಾಂಗವನ್ನು ಬರೆದು ಸಾಲೆಯ ಹೊರಬದಿಗೆ ಇಡಬೇಕು. ಇದರಿಂದ ಹಳ್ಳಿಗರಿಗೆ ಅಂದಿನ ತಿಥಿ ಮೊದಲಾದವುಗಳನ್ನು ತಿಳಿದುಕೊಳ್ಳಲು ಅನುಕೂಲವಾಗುವದು. ಪ್ರಾರ್ಥನೆಯ ಕಾಲಕ್ಕೆ ಅವಶ್ಯವಿರುವ ಸಮಯನಿಷ್ಠತೆ, ನಿಶ್ಚಲತೆ, ನಿಃಶಬ್ದತೆ, ಭಕ್ತಿ, ಗಾಂಭೀರ್ಯ ಇವುಗಳನ್ನು ಕಾಯ್ದುಕೊಳ್ಳಬೇಕು. ಯಾಂತ್ರಿಕತೆಯು ತಲೆದೋರದಂತೆ ಜಾಗೃತೆ ವಹಿಸಬೇಕು.

ಮೇಲೆ ಹೇಳಿದ ರೀತಿಯಲ್ಲಿ ಕ್ರಮಬದ್ಧವಾಗಿ ನಡೆದ ಪ್ರಾರ್ಥನೆಯು ಮಕ್ಕಳಲ್ಲಿ ದೈವೀ ಭಾವನೆಯನ್ನು ಹುಟ್ಟಿಸಿ, ನೀತಿಯ ನೆಲೆಗಟ್ಟಿನ ಮೇಲೆ ಅವರನ್ನು ನಿಲ್ಲಿಸುವದಲ್ಲದೇ ಭಾರತೀಯ ಸಂಸ್ಕೃತಿಯ ಬಗ್ಗೆ ಆದರಾಭಿಮಾನಗಳನ್ನು ತಾಳುವಂತೆ ಮಾಡುವದು.

ಚಂದಾದಾರರಲ್ಲಿ ಬಿನ್ನಹ

ಪ್ರತಿತಿಂಗಳು ೧೫ನೆಯ ದಿನಾಂಕಕ್ಕೆ "ಜೀವನ ಶಿಕ್ಷಣ" ಪತ್ರಿಕೆಯ ಸಂಚಿಕೆಗಳನ್ನು ನಿಮ್ಮ ನಿಮ್ಮ ವಿಳಾಸಕ್ಕೆ ಕಳುಹಿಸಲಾಗುತ್ತಿದೆ. ಇದರಲ್ಲಿ ಏನೂ ವ್ಯತ್ಯಯ ಬರಲಾರದು. ಹೀಗಿದ್ದೂ ಪತ್ರಿಕೆಗಳು ನಿಮಗೆ ತಲುಪದಿದ್ದಲ್ಲಿ ಸ್ಥಳಿಕ ಅಂಚೆ ಅಧಿಕಾರಿಗಳಿಗೆ ತಪ್ಪದೇ ಬರೆದುಕೊಳ್ಳಬೇಕು.

x x x

೧೯೫೭ನೇ **ಜುಲೈ ತಿಂಗಳ** ಸಂಚಿಕೆ ತಲುಪದಿದ್ದಲ್ಲಿ ನಮಗೆ ಬರೆಯಬೇಕು.

— ಪ್ರಧಾನ ಸಂಪಾದಕರು

ಪ್ರಾಥಮಿಕ ಶಾಲಾ ಪ್ರಮಾಣಪತ್ರ, ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರಿಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ ಎಸ್. ಕೆ. ಜೋಶಿ, ಮತ್ತು

ಶ್ರೀ ಜಿ. ಡಿ. ವಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. **ಬೆಲೆ ೧—೧೨—೦** ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಇದು ಕನ್ನಡದಲ್ಲಿಯೂ ಸಿಗುತ್ತದೆ,

ಜಿ. ವಾಯ್. ರಾಣೆ

ಪ್ರಕಾಶಕರು, ೨೪೩, ಕಸಬಾ ಪೇಟ ಪುಣೆ.

೧೯೫೬ನೆಯ ಇಸವಿಯಿಂದ ಪ್ರಾರಂಭವಾಗುವ ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

ಶೇಲಾರ ಕೃತ

ಪ್ರಾಥಮಿಕ ಭೂಮಿತಿ

[ಕ್ಷೇತ್ರಫಲ ಘನಫಲ ಸಹಿತ]

೪ ರಿಂದ ೭ ನೇಯ ವರ್ಗದ ವರೆಗಿನ ವಿಷಯವನ್ನೆಲ್ಲ ಒಳಗೊಂಡಿದೆ.

ಬೆಲೆ: ೧ರೂ. ೮ಆಣೆ ಮಾತ್ರ

ದೊರೆಯುವ ಸ್ಥಳ:—

ಸಾಯಿ ಪಬ್ಲಿಶಿಂಗ್ ಹಾವುಸ್,

ವಿಜಯ ರೋಡ, ಧಾರವಾಡ.

ಮೂಲ ಶಿಕ್ಷಣದ ಅರಿವು

ಅನುವಾದಕರು: **ಶ್ರೀ ಶಿಂತ್ರಿ ಬಸಪ್ಪನವರು,** ಬಿ.ಎ.,ಬಿ.ಟಿ.

(ಹಿಂದಿನ ಸಂಚಿಕೆಯಿಂದ ಬಂದದ್ದು)

೬ ಪ್ರಕರಣ

ಮೂಲ ಶಿಕ್ಷಣದಲ್ಲಿ ಶಿಕ್ಷಕರ ತರಬೇತು

ಕೆಲಸ ಮಾಡುವ ಶಿಕ್ಷಕರು ಸರಿಯಾಗಿ ಕೆಲಸ ಮಾಡದಿದ್ದರೆ, ಉತ್ಕೃಷ್ಟ ಶಿಕ್ಷಣಯೋಜನೆಯು ಸಹ ಕೆಡಬಲ್ಲದು; ಅದರಂತೆ, ಶಿಕ್ಷಕರು ಚನ್ನಾಗಿ ಕೆಲಸ ಮಾಡುವವರಿದ್ದರೆ, ಕೆಟ್ಟ ಯೋಜನೆಯನ್ನು ಚಲೋ ಯೋಜನೆಯನ್ನಾಗಿ ಮಾರ್ಪಡಿಸಬಲ್ಲರು. ಆವುದಾದರೊಂದು ಶಿಕ್ಷಣ ಪದ್ಧತಿಯ ಮೇಲ್ಮೆಯು ಸುಶಿಕ್ಷಿತರೂ ಸುಜ್ಞಾನಿಗಳೂ ತೃಪ್ತಮನಸ್ಕರೂ ಆಗಿದ್ದ ಶಿಕ್ಷಕರನ್ನು ದೊರಕಿಸುವದರ ಮೇಲೆ ಹೆಚ್ಚಾಗಿ ಅವಲಂಬಿಸಿರುತ್ತಿದೆ. ತಮ್ಮ ಕೆಲಸವನ್ನು ಹುರುಪು-ಹುಮ್ಮಸಗಳಿಂದಲೂ ನಿಷ್ಠೆಯಿಂದಲೂ ಮಾಡುವಂತಹ, ಚತುರ ಮತ್ತು ಸಮತೋಲ ಮನೋವೃತ್ತಿಯ ತರುಣ ಶಿಕ್ಷಕ-ಶಿಕ್ಷಕಿಯರನ್ನು ಶಿಕ್ಷಣ ಕಾಯಕದತ್ತ ಆಕರ್ಷಿಸಿಕೊಳ್ಳಲು ನಾವು ಶಕ್ತರಾಗಬೇಕು. ತೃಪ್ತಮನಸ್ಕರಲ್ಲದ ಶಿಕ್ಷಕರು ತಮ್ಮ ಕೆಲಸದಲ್ಲಿ ಮನಸಿಲ್ಲದೆ ಅದನ್ನು ಅಸ್ತವ್ಯಸ್ತವಾಗಿ ಮಾಡುವದರಿಂದ ಅವರು ರಾಷ್ಟ್ರಕ್ಕೆ ಗಂಡಾಂತರಕಾರಿ. ಏಕೆಂದರೆ, ಅವರು ತಮ್ಮಲ್ಲಿಯ ಅಸಂತೋಷವನ್ನೂ ಅನಾಸ್ಥೆಯನ್ನೂ ಅಸ್ತವ್ಯಸ್ತ ಕಾರ್ಯಪದ್ಧತಿಯನ್ನೂ ಲಕ್ಷೋಪಲಕ್ಷ ಮಕ್ಕಳಲ್ಲೆಲ್ಲ ಹರಡುವದರಿಂದ ರಾಷ್ಟ್ರದ ಹುರುಪೂ ಕಾರ್ಯಕ್ಷಮತೆಯೂ ಕುಗ್ಗುವವು. ಆದುದರಿಂದ, ಚಲೋ ಗಂಡಸರನ್ನೂ ಹೆಂಗಸರನ್ನೂ ಶಿಕ್ಷಣ ಕಾಯಕದತ್ತ ಆಕರ್ಷಿಸಿಕೊಳ್ಳಲು ಮತ್ತು ಕೊನೆಯ ವರೆಗೆ ಅವರು ತೃಪ್ತ ಮನಸಿನಿಂದ ಸೇವಾತತ್ಪರರಾಗುವಂತೆ-ಮಾಡಲು ಶಕ್ಯವಿದ್ದ ಪ್ರಯತ್ನವನ್ನೆಲ್ಲ ಕೈಕೊಳ್ಳುವದು ಲೇಸು.

ಮೂಲ ಶಿಕ್ಷಣವು ಆವುದಾದರೊಂದು ಕಾಯಕದ ಮುಖಾಂತರವೂ ಬೇರೆ ಚಟುವಟಿಕೆಗಳ ಮುಖಾಂತರವೂ ಅವುಗಳಲ್ಲಿ ಪಡೆದ ಅನುಭವಗಳ ಮುಖಾಂತರವೂ ಹೊಂದುವ ಶಿಕ್ಷಣವು. ಆದುದರಿಂದ, ಮುಂದೆ ಶಿಕ್ಷಕ-ಶಿಕ್ಷಕಿಯರಾಗ-ಬಯಸುವವರಿಗೆ ಮೂಲ ಕಾಯಕಗಳನ್ನು ಚನ್ನಾಗಿ ಕಲಿಸಲು ವ್ಯವಸ್ಥೆಯನ್ನು ಮಾಡಿಡುವದೊಳಿತು. ಬೇಸಿಕ್ ಸಾಲೆಗಳಲ್ಲಿ ಪ್ರಾರಂಭಿಸಿದ ಕಾಯಕಗಳನ್ನು ಮಕ್ಕಳ ವಯೋಮಾನಕ್ಕೆ ಒಗ್ಗುವಂತೆ ಮೇಲಿನ ಕೊನೆಯ ಇಯತ್ತೆಯ ವರೆಗೆ ಸಾಗಿಸಬೇಕೆಂಬ ನಿರೀಕ್ಷಣೆಯಿದೆ. ವಿದ್ಯಾರ್ಥಿಗಳು ಕಾರ್ಯದಲ್ಲಿ ಮೊದಲೇ ತರಬೇತಿಯನ್ನು ಹೊಂದಿದವರಿದ್ದರೆ ಅಂತಹವರಿಗೋಸ್ಕರ ಕಾಲೇಜುಗಳಲ್ಲಿ ಆ ಕಾಯಕವನ್ನು ಕಲಿಸುವ ಅವಶ್ಯಕತೆಯಿಲ್ಲ. ಆದರೆ, ಇಂತಹ ಸ್ಥಿತಿಯು ಪ್ರಾಪ್ತವಾಗುವ ವರೆಗೆ ಕಾಲೇಜುಗಳಲ್ಲಿ ಕಾಯಕವನ್ನು ಕಲಿಸುವದಕ್ಕೋಸ್ಕರ ಬಹಳಷ್ಟು ವೇಳೆಯನ್ನು ಮೀಸಲಾಗಿಡಬೇಕು—ನೂಲುವದು-ನೇಯುವದು-ಬಂಣಗಾರಿಕೆ-ಅಚ್ಚುಹಾಕುವದು, ಬಡಿಗತನ, ಒಕ್ಕಲತನ, ಇಲ್ಲವೆ ಬಹಳಷ್ಟು ಶೈಕ್ಷಣಿಕ ಲಾಭಗಳುಳ್ಳ ಆವುದಾದರೊಂದು ಕಾಯಕ. ಕಾಯಕಗಳ ಬಗೆಗೆ ತಾತ್ವಿಕ ವಿಚಾರಗಳನ್ನು ಕಲಿತರೆ ಸಾಲದು; ಆದರೆ, ಸ್ವತಃ ತಮ್ಮ ಕೈಯಿಂದ ಕೆಲಸ ಮಾಡಲು ಕಲಿಯಬೇಕು; ಕಾಯಕಗಳಲ್ಲಡಗಿದ್ದ ಕ್ರಮಗಳನ್ನೆಲ್ಲ ಸಂಪೂರ್ಣವಾಗಿ ಅರಿತುಕೊಂಡು ಸ್ವಲ್ಪವೂ ಹಾಳಾಗದಂತೆ ಎಚ್ಚರಿಕೆವಹಿಸಿ ಅವುಗಳಲ್ಲಿ ನೈಪುಣ್ಯವನ್ನು ಪಡೆಯಬೇಕು.

ಕಾಯಕವನ್ನರಿತುಕೊಳ್ಳುವದು ಅಷ್ಟೊಂದು ಮಹತ್ವದ ವಿಷಯವಲ್ಲ; ಆದರೆ ಅದರಿಂದ ಹೊರಹೊಮ್ಮುವ ಶೈಕ್ಷಣಿಕ ಲಾಭಗಳು ಮುಖ್ಯವಾದ ವಿಷಯವಾಗಿದೆ. ಮೂಲ ಶಿಕ್ಷಣದ ತಂತ್ರವು ಇದರಲ್ಲಡಗಿದೆ; ಮುಂದೆ ಶಿಕ್ಷಕರಾಗಬಯಸುವವರು ಆ ತಂತ್ರವನ್ನೆಲ್ಲರಿತುಕೊಂಡು ಅದರ ಕಾರ್ಯಕ್ರಮದ ಯೋಜನೆಯೊಂದನ್ನು ತಯಾರಿಸಿಟ್ಟುಕೊಂಡು ಅದನ್ನು ನಿರ್ವಹಿಸಲು ಸಮರ್ಥರಾಗಬೇಕು. ಕಾಯಕದಲ್ಲಿಯ ಬೇರೆ ಬೇರೆ ವಿಧಾನಗಳನ್ನೂ ಮಗವಿನ ಅನುಭವಗಳನ್ನೂ ಸಮವಾಯದಿಂದ ಅಭ್ಯಾಸ ಪತ್ರಿಕೆಯೊಳಗಿನ ವಿಷಯಗಳನ್ನು ಶಿಕ್ಷಕನು ತಾನು ಹೇಗೆ ಕಲಿಸಬೇಕೆಂಬುದನ್ನೂ ತಾನೇ ತನ್ನ ನಿತ್ಯದ ರೂಢಿಯಲ್ಲಿ ನಿರ್ಧರಿಸಿಕೊಳ್ಳಬೇಕು. ಟ್ರೇನಿಂಗ ಕಾಲೇ

ಜದ ಪ್ರಾಧ್ಯಾಪಕರು ಸಮವಾಯದ ತಾತ್ತ್ವಿಕ ವಿಚಾರಗಳನ್ನು ಕಲಿಸಿ ಅವುಗಳ ಪ್ರಯೋಗ ಮಾಡುವದರಲ್ಲಿ ಮಾರ್ಗದರ್ಶನ ಮಾಡಬಲ್ಲರಷ್ಟೇ; ಆದರೆ. ಆ ತಂತ್ರವನ್ನೆ ಅರಿತುಕೊಂಡು ಅದರಲ್ಲಿ ನಿಷ್ಣಾತನಾಗಬೇಕಾದರೆ, ಶಿಕ್ಷಕ-ವಿದ್ಯಾರ್ಥಿಯು ಸದಾ ತನ್ನ ಚಿಂತನೆ-ರೂಢಿ-ಪ್ರಯತ್ನಶೀಲತೆಗಳಿಂದಲೇ ಅದನ್ನು ಸಾಧಿಸಬಲ್ಲನು. ರೂಢಿಯ ಪಾಠಗಳ ಮಹತ್ವವು ಇದರಲ್ಲಡಗಿದೆ. ಒಟ್ಟಿನಲ್ಲಿ ಶಿಕ್ಷಕ-ವಿದ್ಯಾರ್ಥಿಯು ತಾನು ಕಲಿಸಬೇಕಾದ ಎಲ್ಲ ವಿಷಯಗಳ ಪರಿಚಿತವನಿರಬೇಕು, ಆವ ಕಾಯಕ ಮತ್ತು ಉಳಿದ ಆವ ಚಟುವಟಿಕೆಗಳ ಮುಖಾಂತರ ಕಲಿಸುವದಿರುತ್ತದೆಯೋ ಆ ಕಾಯಕ—ಚಟುವಟಿಕೆಗಳಲ್ಲಿ ತಜ್ಞನಾಗಿರಬೇಕು, ಮತ್ತು ಕೊನೆಯದಾಗಿ ಸಮವಾಯದ ತಂತ್ರದಲ್ಲಿ ನಿಷ್ಣಾತನಾಗಿರಬೇಕು. ಇದುವೇ ಮೂಲಶಿಕ್ಷಣದಲ್ಲಿ ತರಬೇತನ್ನು ಹೊಂದುವದರ ಗುಟ್ಟು.

ಇವುಗಳ ಹೊರತಾಗಿ ಸಾದಾ ಶಿಕ್ಷಣದ ತರಬೇತಿಯಲ್ಲಿರತಕ್ಕ ಹಲವು ಧ್ಯೇಯಗಳು ಮೂಲ ಶಿಕ್ಷಣದಲ್ಲಿ ತರಬೇತಿಯನ್ನು ಹೊಂದತಕ್ಕ ಶಿಕ್ಷಕರಿಗೂ ಅನ್ವಯಿಸುತ್ತಿವೆ. ಶಿಕ್ಷಕನ ವ್ಯಕ್ತಿತ್ವವು ಮಗುಗಳ ಮನಸಿನ ಮೇಲೆ ತನ್ನ ಮುದ್ರೆಯನ್ನೊತ್ತುವದರಿಂದ, ನಮ್ಮ ತರಬೇತಿಯ ಯೋಜನೆಯು ಶಿಕ್ಷಕ-ವಿದ್ಯಾರ್ಥಿಗಳಿಗೆ ತಮ್ಮ ತಮ್ಮ ಸಮತೋಲ ವ್ಯಕ್ತಿತ್ವವನ್ನು ರೂಪಗೊಳಿಸಿಕೊಳ್ಳಲು ಸಹಾಯಕವಾಗುವದು ಮುಖ್ಯವಾದದ್ದಿದೆ. ತಮ್ಮ ತಮ್ಮ ಕೈಯಲ್ಲಿ ಕಲಿಯುವ ಮಕ್ಕಳಿಗೆ ಸಾಂಸ್ಕೃತಿಕ ಹಿನ್ನೆಲೆಯನ್ನು ಒದಗಿಸಿ ಕೊಡಲು ಶಕ್ತರಾಗಬೇಕಾದರೆ, ನಮ್ಮ ಸಂಸ್ಕೃತಿಯ ವಿಶಾಲವಾದ ಅರಿವನ್ನು ಅವರು ಹೊಂದುವದು ಲೇಸು. ನಮ್ಮ ಸಮಾಜವು ಪ್ರಚಲಿತ ಯುಗದಲ್ಲಿ ಪ್ರಜಾಪ್ರಭುತ್ವಕ್ಕೆ ಒಗ್ಗುವಂತೆ ಪರಿವರ್ತನೆಯನ್ನು ಹೊಂದಬೇಕಾಗಿರುವದರಿಂದಲೂ, ನಮ್ಮ ದೇಶದಲ್ಲಿಯ ಪ್ರತಿಯೊಬ್ಬ ಗಂಡಸು ಹಾಗೂ ಹೆಂಗಸು ಪ್ರಜಾಪ್ರಭುತ್ವದ ತತ್ತ್ವಗಳನ್ನು ನಿಜವಾಗಿ ಅರಿತುಕೊಳ್ಳುವದರ ಮೇಲೆ ನಮ್ಮ ಬಾಳು ಅವಲಂಬಿಸಿರುವದರಿಂದಲೂ, ಸಾಲೆಗಳು ನಮ್ಮ ಮಗುವಿಗೆ ಚಿಕ್ಕಾರಭ್ಯದಿಂದ ಪ್ರಜಾಪ್ರಭುತ್ವದ ಹಿನ್ನೆಲೆಯ ದ್ಯೋತಕಗಳಾಗಿ ಪರಿಣಮಿಸುವದೊಳಿತು. ಈ ಉದ್ದೇಶವು ಸಫಲವಾಗಬೇಕಾದರೆ, ನಮ್ಮ ಶಿಕ್ಷಕ ವಿದ್ಯಾರ್ಥಿಗಳು ಪ್ರಜಾಪ್ರಭುತ್ವದ ಸಾಮಾಜಿಕ ರಾಜ್ಯಕೀಯ ಹಾಗೂ ಆರ್ಥಿಕ ತತ್ತ್ವಗಳನ್ನು ಅಭ್ಯಾಸ ಮಾಡಬೇಕಲ್ಲದೆ, ತಮ್ಮ ತರಬೇತಿಯ ಅವಧಿಯುದ್ದಕ್ಕೂ ಅವುಗಳ ಪ್ರಯೋಗವನ್ನು ತಮ್ಮ ನಿತ್ಯ ಜೀವನದಲ್ಲಿ ಮಾಡಿಕೊಳ್ಳುವದವಶ್ಯವಿದೆ. ಮಾನವನ ಬೆಳವಣಿಗೆಯು ಹಾಗೂ ಪ್ರಗತಿಯು ವಯದಿಂದ ವಯಕ್ಕೆ ಹೇಗೆ ರೂಪಗೊಳ್ಳುತ್ತ ಸಾಗುವದೆಂಬುದರ ಸಾಕಷ್ಟು ಅರಿವನ್ನು ಶಿಕ್ಷಕ-ವಿದ್ಯಾರ್ಥಿಗಳಿಗೆ ಪೂರೈಸಿದರೆ, ಅವರು ನಮ್ಮ ಮಗುಗಳಿಗೆ ಸಾಲೆಯ ಒಳಗೂ ಹೊರಗೂ ಮಾರ್ಗದರ್ಶನ ಮಾಡಲು ಸಾಮರ್ಥ್ಯವನ್ನು ಪಡೆಯುವರು.

ಈ ತರಬೇತು ಸ್ವಾಭಾವಿಕವಾಗಿ ತಾತ್ತ್ವಿಕವಾಗಿಯೂ ಪ್ರಾಯೋಗಿಕವಾಗಿಯೂ ಇರುವದುಂಟು. ತಾತ್ತ್ವಿಕ ವಿಭಾಗವು ಶಿಕ್ಷಕನು ಕಲಿಸಬೇಕಾಗುವ ವಿಷಯ ಸಂಗ್ರಹವನ್ನೆಲ್ಲೊಳಗೊಂಡಿದೆ; ಮಾತ್ರವಲ್ಲದೆ, ಶಿಕ್ಷಣದ ತಾತ್ತ್ವಿಕ ವಿಚಾರಗಳು, ಶಿಕ್ಷಣದ ಇತಿಹಾಸ, ಶೈಕ್ಷಣಿಕ ಮನಃಶಾಸ್ತ್ರ, ಕಲಿಸುವ ಪದ್ಧತಿಗಳು, ಸಾಲೆಯ ಸಂಘಟನೆ, ಸಾಮೂಹಿಕ ಆರೋಗ್ಯ, ಮುಂತಾದ ಶೈಕ್ಷಣಿಕ ಸಮಸ್ಯೆಗಳ ಅರಿವೂ ಅದರಲ್ಲಡಕವಾಗಿದೆ. ಶಿಕ್ಷಕ-ವಿದ್ಯಾರ್ಥಿಗಳ ಬುದ್ಧಿ ಮಟ್ಟಕ್ಕನುಗುಣವಾಗುವಂತೆ ಎಲ್ಲ ಟ್ರೇನಿಂಗ ಸಂಸ್ಥೆಗಳು ವಾಡಿಕೆಯಾಗಿ ಈ ಎಲ್ಲ ಕಾರ್ಯಗಳನ್ನು ಹೆಚ್ಚು ಕಡಿಮೆ ಪ್ರಮಾಣದಿಂದ ಮಾಡುತ್ತಿವೆ. ಪ್ರಜಾಪ್ರಭುತ್ವದ ಜೀವನವನ್ನು ಸಾಗಿಸುವ ಮತ್ತು ತಮ್ಮ ಆಡಳಿತವನ್ನು ತಾವೇ ಮಾಡಿಕೊಳ್ಳುವ ಸಾಂಘಿಕ ಜೀವನವನ್ನಷ್ಟು ಹೆಚ್ಚಿಗೆ ಸೇರಿಸಬೇಕಾಗುವದು. ಟ್ರೇನಿಂಗ ಸಂಸ್ಥೆಗಳಲ್ಲಿಯ ಶಿಕ್ಷಕ-ವಿದ್ಯಾರ್ಥಿಗಳು ಎಲ್ಲ ಕೆಲಸಗಳಲ್ಲಿ ಭಾಗವಹಿಸಿ ಪ್ರತ್ಯಕ್ಷ ಅನುಭವವನ್ನು ಪಡೆಯಬೇಕು ಮತ್ತು ಉಚ್ಚ-ನೀಚ ಭಾವನೆಯನ್ನು ತೊರೆದು ನಿಷ್ಠೆಯಿಂದ ಅವುಗಳನ್ನು ಮಾಡಬೇಕು. ಎಲ್ಲರು ಒಪ್ಪುವ ಹಾಗೆ ಸಾಮೂಹಿಕ ಕೆಲಸಗಳನ್ನು ಹೇಗೆ ಸಂಘಟಿಸಬೇಕೆಂಬುದನ್ನೂ, ನಿಯಮಗಳನ್ನು ಹೇಗೆ ಮಾಡಬೇಕೆಂಬುದನ್ನೂ, ಅವುಗಳ ಅಮಲಬಜಾವಣೆಯನ್ನು ಹೇಗೆ ಮಾಡಬೇಕೆಂಬುದನ್ನೂ, ಅವುಗಳನ್ನು ಹೇಗೆ ಪಾಲಿಸಬೇಕೆಂಬುದನ್ನೂ, ಮತ್ತು ಇವೆಲ್ಲವುಗಳಿಗಿಂತಲೂ ಹೆಚ್ಚಿನ ಮಾತೆಂದರೆ, ಸಾಮೂಹಿಕ ಹಿತದಲ್ಲಿಯೇ ತನ್ನ ವೈಯಕ್ತಿಕ ಹಿತವು ಅಡಗಿದೆಯೆಂಬ ತತ್ತ್ವವನ್ನು ಮನಗಾಣಿಸಿ ಕೊಡುವ ಸಾಮಾಜಿಕ ಭಾವನೆಯನ್ನು ಹೇಗೆ ಬೆಳೆಯಿಸಿಕೊಳ್ಳಬೇಕೆಂಬುದನ್ನೂ ಅವರು ಕಲಿತುಕೊಳ್ಳಬೇಕು. ಹೀಗೆ ಮಾಡುವದರಿಂದ ವೈಯಕ್ತಿಕ ಸ್ವಚ್ಛತೆ ಮತ್ತು ಆರೋಗ್ಯ ಹಾಗೂ ಸುತ್ತುಮುತ್ತಲಿನ ಸ್ವಚ್ಛತೆ ಮತ್ತು ಆರೋಗ್ಯ ಇವುಗಳನ್ನು ಕಾಪಾಡಿಕೊಳ್ಳುವ ಸಾಮಾಜಿಕ ಚಟಗಳು

ತಮ್ಮಷ್ಟಕ್ಕೆ ತಾವೇ ಬೆಳೆಯುವದುಂಟು. ಈ ಧ್ಯೇಯಗಳನ್ನು ಸಾಧಿಸಲು ಟ್ರೇನಿಂಗ ಸಂಸ್ಥೆಗಳಲ್ಲಿ ಕೇವಲ ತಾತ್ತ್ವಿಕವಾಗಿ ಹೇಳಿದರೆ ಸಾಲದು; ಆದರೆ, ಸುಸಂಘಟಿತವಾದ ಸಾಂಘಿಕ ಜೀವನದ ಪ್ರಯೋಗದಿಂದಲೇ ಅದು ಸಾಧ್ಯವು. ಆದುದರಿಂದ, ಮೂಲ ಶಿಕ್ಷಣದಲ್ಲಿ ಪರಿಣಾಮಕಾರಕವಾದ ತರಬೇತನ್ನು ಕೊಡುವದಾದರೆ, ಸುಸಂಘಟಿತವಾದ ಕೌಟುಂಬಿಕ ಜೀವನವು ಅತ್ಯಗತ್ಯವು.

ಮೇಲಾಗಿ, ಶಾಲೆಗಳು ಸುತ್ತುಮುತ್ತಲಿನ ಜನತೆಯಗೂಡ ಸಂಪರ್ಕವನ್ನಿಟ್ಟುಕೊಂಡು ಸಾಮಾಜಿಕ ಕೇಂದ್ರಗಳಾಗಿ ಕೆಲಸ ಮಾಡಬೇಕು. ಹಳ್ಳಿಗಳಲ್ಲಿ ಸಾಮಾಜಿಕ ಸೇವೆಗಾಗಿ ಶಿಕ್ಷಕ-ವಿದ್ಯಾರ್ಥಿಗಳನ್ನೊಯ್ಯಬೇಕು. ವಾರಕ್ಕೊಮ್ಮೆಯಾಗುವ ಹಳ್ಳಿಗಳ ಸಂತೆಯನ್ನೂ, ಸಮೀಪದಲ್ಲಿಯ ಗುಡಿ-ಗುಂಡಾರಗಳಲ್ಲಿ ಬಹಳಷ್ಟು ಜನರು ಕಲೆಯುವದನ್ನೂ, ಋತುಮಾನಗಳಿಗನುಸರಿಸಿ ಬದಲಾಗುವ ಚಟುವಟಿಕೆಗಳನ್ನೂ ನಿರೀಕ್ಷಿಸಿ ಎಷ್ಟು ತರಹಗಳಿಂದ ಆ ಹಳ್ಳಿಗರ ಸೇವೆಯನ್ನು ಮಾಡಲು ಶಕ್ಯವಿದೆಯೆಂಬುದನ್ನು ಶೋಧಕ ಬುದ್ಧಿಯಿಂದ ಕಂಡು ಹಿಡಿಯಬೇಕು. ಇವುಗಳನ್ನು ಪಠ್ಯೇತರ ಚಟುವಟಿಕೆಗಳೆಂದೆಣಿಸದೆ ಅಭ್ಯಾಸ ಪತ್ರಿಕೆಯೊಳಗಿನ ಮುಖ್ಯ ವಿಷಯಗಳೆಂದೇ ಅವು ಗಣಿಸಲ್ಪಡಬೇಕು.

(ಮುಂದುವರಿಯುವದು)

ಪ್ರಯೋಗದ ಯೋಜನೆಯಲ್ಲಿ ಅಡಕವಾದ ಮಾನಶಾಸ್ತ್ರದ ತಳಹದಿ

The psychological basis of the plan of work in the experiment

ಲೇಖಕರು : **ಶ್ರೀ ನೀ. ರೇ. ಹಿರೇಮಠ,** ಪ್ರಾಧ್ಯಾಪಕ, ಜೀ. ಶಿ. ಕೇಂದ್ರ, ಧಾರವಾಡ.

ಈ ಪ್ರಯೋಗದಲ್ಲಿ ಭಾಗವಹಿಸಿದ ೧ ನೆಯ ವರ್ಗದ ಮಕ್ಕಳು ೫ ರಿಂದ ೭ ವರುಷ ವಯಸ್ಸಿನ ಗುಂಪಿನವರೆಂದು ಹಿಂದೆ ಹೇಳಲಾಗಿದೆ. ಈ ಗುಂಪಿನ ಮಕ್ಕಳ ಮನೋಗುಣವನ್ನು ಮನದಂದು ಪ್ರಯೋಗದ ಯೋಜನೆಯನ್ನು ರೂಪಿಸಲಾಯಿತು. ಆದುದರಿಂದ ೫ ರಿಂದ ೭ ವರುಷದ ಮಕ್ಕಳ ಕೆಲವು ವೈಶಿಷ್ಟ್ಯಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ವರ್ಣಿಸಲಾಗಿದೆ:

೧) ೫ ರಿಂದ ೭ ವರುಷದ ಗುಂಪಿನಲ್ಲಿರುವ ಮಗು ತನ್ನ ಸುತ್ತಲಿನ ಜಗತ್ತಿನಲ್ಲಿ ತೀವ್ರ ಆಸಕ್ತಿಯನ್ನು ತೋರಿಸುತ್ತಾನೆ; ಆದರೆ ಅದು ಅವನ ಅನುಭವಗಳಿಗೆ ಮಾತ್ರ ಸಂಬಂಧಿಸಿರುತ್ತದೆ. ಪ್ರತ್ಯಕ್ಷ ಅನುಭವದ ಮೂಲಕ ಕಲಿಯುತ್ತಾನೆ. ತನ್ನ ಇಂದ್ರಿಯಗಳನ್ನು ಉಪಯೋಗಿಸಿ ಸುತ್ತಲಿನ ಜಗತ್ತನ್ನು ಶೋಧಿಸುತ್ತಾನೆ. ತ್ವಚೇಂದ್ರಿಯವು ಅವುಗಳಲ್ಲಿ ಎಲ್ಲಕ್ಕೂ ಹೆಚ್ಚು ಪ್ರಮುಖವಾದುದು.

೨) ಈ ವಯಸ್ಸಿನ ಮಗುವಿನಲ್ಲಿ ಬುದ್ಧಿ ಇಲ್ಲವೆ ತರ್ಕ ಪ್ರಧಾನವಲ್ಲ. ಅವನು ಬೇಸರವಿಲ್ಲದೆ ಕೇಳುವ "ಹೇಗೆ? ಏಕೆ," ಈ ಪ್ರಶ್ನೆಗಳು ಬುದ್ಧಿ ಜೀವಿಯ ವೇಷ ಧರಿಸಿದರೂ ಅವು ತಾನು ಮಾಡುವ ಪ್ರತ್ಯಕ್ಷ ಕೆಲಸ ಇಲ್ಲವೆ ನೋಡುವ ವಸ್ತುವಿಗೆ ಮಾತ್ರ ಸಂಬಂಧಿಸಿರುತ್ತವೆ. ಈ ಮಕ್ಕಳ ಜ್ಞಾಪಕಶಕ್ತಿಯು ಚನ್ನಾಗಿರುತ್ತದೆ. ತಾಳ ಮತ್ತು ಲಯಬದ್ಧವಾದ ಮತ್ತು ಪುನರುಕ್ತಿಗಳಿಂದ ಕೂಡಿದ ಸಂಗತಿಗಳು ಮಾತ್ರ ವಿಶೇಷವಾಗಿ ಆಕರ್ಷಿಸುತ್ತವೆ. ಆದರೆ ಓದು ಬರಹ ಮತ್ತು ಲೆಕ್ಕಗಳು ಈ ಗುಂಪಿಗೆ ಅಷ್ಟು ಒಗ್ಗುವಂತಹವಲ್ಲ.

೩) ತುದಿ ಮೊದಲಿಲ್ಲದ (ಹೆಚ್ಚಾದ) ಕಲ್ಪನಾ ಶಕ್ತಿಯು ಸಾಂಕೇತಿಕ ಚಿತ್ರಕಲೆ, ಪೌರಾಣಿಕ ಮತ್ತು ಕಾಲ್ಪನಿಕ ಕಥೆಗಳ ನಟನೆ ಮತ್ತು ಸ್ವಚ್ಛಂದ ಚಲನವಲನೆ ಇವುಗಳಿಗಾಗಿ ಹಂಬಲಿಸುತ್ತಿರುತ್ತದೆ. ಸೌಂದರ್ಯಾಭಿರುಚಿಗಿಂತ ಅದರ ಉತ್ಪಾದನೆಯಲ್ಲಿ ಅಡಕವಾದ ಚಲನವಲನೆಯು ಅವರನ್ನು ಹೆಚ್ಚಾಗಿ ಆಕರ್ಷಿಸುತ್ತದೆ. ಸೌಂದರ್ಯೋಪಾಸನೆಗಿಂದ ಗತಿಪ್ರಿಯತೆ ಮುಖ್ಯವಾದುದು. ತನ್ನ ಅವಿಷ್ಕರಣದ ಸೂಕ್ಷ್ಮತೆ ಇಲ್ಲವೆ ಪರಿಪೂರ್ಣತೆಗಾಗಿ ಆಲೋಚಿಸುವದಿಲ್ಲ. ಸಂಗೀತದಲ್ಲಿ ವಿಶೇಷವಾಗಿ ತಾಳಬದ್ಧವಾದ ಸಾಮೂಹಿಕ ಹಾಡು ರುಚಿಸುತ್ತವೆ. ಮೂಲೋದ್ಯೋಗಗಳ [illegible]

ಕಾಶಗಳು ಮತ್ತು ಅದರಿಂದ ಉಂಟಾಗುವ ಆನಂದವೇ ಅವನನ್ನು ಆಕರ್ಷಿಸುತ್ತವೆ. ಇಂಥಲ್ಲಿ ದೇವರನ್ನೇ ತಾನು ಅನುಕರಿಸುತ್ತಿರುವಂತೆ ಮಗುವಿಗೆ ಭಾಸವಾಗುತ್ತದೆ. ಯಾಕಂದರೆ ಒಂದು ಬಗೆಯಾಗಿ ಅವನೂ ಸೃಷ್ಟಿಸುತ್ತಾನೆ. ತನ್ನ ಕಲಾಕೃತಿಯಲ್ಲಿ ಸತ್ಯವಾದುದನ್ನು ಮತ್ತು ಒಳ್ಳೆಯದನ್ನು ಅವನು ಕಾಣುತ್ತಾನೆ. ಅದರಿಂದ ತನ್ನ ಕೈಕೆಲಸದಲ್ಲಿ ಅವನಿಗೊಂದು ಅನಿರ್ವಚನೀಯ ಆನಂದವು ತೋರುತ್ತದೆ.

೪) ತನ್ನ ಸಮವಯಸ್ಕರ ಸಹವಾಸ ಅವನಿಗೆ ಸೇರುತ್ತದೆ. ಈ ಅವಧಿಯಲ್ಲಿ ಅವನು ಒಂಟಿಗನಾಗಿ ಕಾರ್ಯಗೈಯುವ ಸ್ಥಿತಿಯಿಂದ "ಜೋಡಿ"ಯ ಸ್ಥಿತಿ, ಅಲ್ಲಿಂದ "ಗುಂಪುಗಟ್ಟಿ ತಿರುಗುವ" ಸ್ಥಿತಿ ಹೀಗೆ ನಿಧಾನವಾಗಿ ಸಾಗುತ್ತಾನೆ. ಒಬ್ಬಂಟಿಗನಾಗಿ ಆಡುವ ಆಟಕ್ಕಿಂತ ಇಬ್ಬರು ಮೂವರೊಡನೆ ಆಡುವ ಆಟ ಹೆಚ್ಚು ರುಚಿಸುತ್ತದೆ; ಆದರೆ ಇದೆಲ್ಲದರಲ್ಲಿ ಈರ್ಷೆಯು ಒಡೆದು ಕಾಣುತ್ತದೆ. ನಿಯಮಗಳನ್ನು ಸಹಿಸಲಾರ. ಒಳ್ಳೆಯ ಆಟಗಾರನ ಗುಣ ಅವನಲ್ಲಿ ಕಾಣುವದು ವಿರಳ.

೫) ಐದು ವರುಷದ ನಂತರ ಯಾವುದೋ ಒಂದು ಗುರಿಯನ್ನು ಸಾಧಿಸಲು ಮಕ್ಕಳು ಸಣ್ಣ ಸಣ್ಣ ಗುಂಪುಗಳಲ್ಲಿ ಕೂಡುತ್ತಾರೆ. ಆಟವೇ ಸಾಮಾನ್ಯವಾಗಿ ಪ್ರಧಾನವಾದ ಗುರಿಯಾಗಿರುತ್ತದೆ. ಆದರೆ ಮುಂದೆ ಈ ಆಟವು ಉದ್ದೇಶ ಪ್ರಧಾನವಾದದ್ದೂ ಮತ್ತು ನಿರ್ದಿಷ್ಟ ಗುರಿಯ ಸಾಧನೆಯ ಕಡೆಗೆ ಹೋಗುವಂತಹದೂ ಆಗುತ್ತದೆ. ಆ ಉದ್ದೇಶವು ತೀವ್ರ ಸಾಧಿಸುವಂತಹದಿರಬೇಕು. ಸ್ವಚ್ಛಂದ ಚಟುವಟಿಕೆಗಳಲ್ಲಿ ಸಹ ಅವನ ಅವಧಾನದ ಅವಧಿಯು ತೀರ ಚಿಕ್ಕದಾಗಿರುತ್ತದೆ. ಆದರೂ ಇಷ್ಟ ಸಾಧನೆಯ ಕಡೆಗೆ ಒಲವು ಕ್ರಮೇಣ ಹೆಚ್ಚುತ್ತ ಹೋಗುತ್ತದೆ.

೬) ಹಿರಿಯರನ್ನು ಅವನು ಮನ್ನಿಸುತ್ತಾನೆ. ಅವರಿಂದ ಭೌತಿಕ ಬೇಡಿಕೆಗಳು ಈಡೇರಬೇಕೆಂದೂ, ಅವರ ಮಾರ್ಗದರ್ಶನದ ಮೂಲಕ ತನಗೆ ಬೇಕಾದುದನ್ನು ಹುಡಿಕಿಕೊಳ್ಳಬೇಕೆಂದೂ ಅಪೇಕ್ಷಿಸುತ್ತಾನಲ್ಲದೆ, ತನ್ನ ರಕ್ಷಣೆ ಮತ್ತು ಸ್ಥಿರತೆ (ಸ್ಥೈರ್ಯ)ಗಳಿಗೆ ಅವಶ್ಯವಾದ ಪ್ರೀತಿ ಮತ್ತು ಗುಣಗ್ರಹಣ ಇವನ್ನೂ ಅವರಿಂದ ಅಪೇಕ್ಷಿಸುತ್ತಾನೆ.

೭) ತನಗೆ ತಿಳಿಯದ ಸಂಗತಿಗಳ ಭಯವು ಅವನನ್ನು ಪೀಡಿಸುತ್ತದೆ. ಪ್ರತಿ ನಿತ್ಯದಲ್ಲಿ ಎದುರಿಸಬೇಕಾದ ಇಂಥ ಭಯವನ್ನು ಹೋಗಲಾಡಿಸಲು ಅವನು ಹಿರಿಯರ ಸಹಾಯ ಕೋರುತ್ತಾನೆ.

೮) ಹಿರಿಯರನ್ನು ಅನುಕರಿಸಲು ಯತ್ನಿಸುತ್ತಾನೆ. ಆದರೆ ಅದು ತೋರಿಕೆಯಲ್ಲಿ ಮಾತ್ರವಲ್ಲ. ಹಿರಿಯರು ಮಾಡುವ ಕೆಲಸಗಳನ್ನೂ ಮಾಡಬಯಸುತ್ತಾನೆ. ಇದಕ್ಕೆ ಯಂತ್ರೋಪಕರಣಗಳನ್ನು ನಡಿಸಲು ಮತ್ತು ಅವುಗಳ ಕಾರ್ಯಪದ್ಧತಿ ಮತ್ತು ಉಪಯೋಗಗಳನ್ನು ತಿಳಿಯಲು ಹಾತೊರೆಯುತ್ತಾನೆ. ಈ ದೆಸೆಯಲ್ಲಿ "ಕೆಲಸ ಹುಡುಕುವ ಪುಟ್ಟ ಕಾರ್ಮಿಕ"ನೆಂದು ಅವನನ್ನು ವರ್ಣಿಸಬಹುದು. ಎಷ್ಟೇ ಹರಕುಮುರುಕಾಗಿರಲಿ ಆ ಕೆಲಸ ಮಾಡಬೇಕೆಂದು ಅವನ ಬಯಕೆ. ಆದರೆ ಅವನು ಮಾಡುವ ವಸ್ತುಗಳು ಉಪಯೋಗ ಬೀಳಬೇಕು ಮತ್ತು ತನ್ನವಾಗಿರಬೇಕು. ಯಾಕಂದರೆ ಈ ವಯಸ್ಸಿನಲ್ಲಿ ಸಂಪಾದನ ಪ್ರವೃತ್ತಿಯು ತೀಕ್ಷ್ಣವಾಗಿರುತ್ತದೆ.

ಕಾರ್ಯದ ಯೋಜನೆ:

ಮೇಲೆ ವಿವರಿಸಿದ ೫ ರಿಂದ ೭ ವರುಷದ ಮಕ್ಕಳ ವೈಶಿಷ್ಟ್ಯಗಳನ್ನೂ ಅವರ ಬೇಡಿಕೆಗಳನ್ನೂ ಮನವಂದು ಪ್ರಾಯೋಗಿಕ ವರ್ಗಗಳ ಅಭ್ಯಾಸದ ಕಾರ್ಯಕ್ರಮವನ್ನು ರೂಪಿಸಲಾಯಿತು. ಈ ಬೇಡಿಕೆಗಳನ್ನು ಈಡೇರಿಸಲು ಯೋಜಿಸಿದ ಗುರಿಗಳು ಇಂತಿವೆ:

ಗುರಿ ೧ : ಹೊಸದಾಗಿ ಶಾಲೆಗೆ ಬಂದ ಮಗುವಿಗೆ ಶಾಲೆಯ ಸಾಮಾಜಿಕ ಹಾಗು ನೈಸರ್ಗಿಕ ವಾತಾವರಣದ ಪರಿಚಯ ಮಾಡಿಕೊಟ್ಟು ಆತನಿಗೆ ತಿಳಿಯದ ಸಂಗತಿಗಳ ಭಯವನ್ನು ದೂರು ಮಾಡುವದು. ತನ್ಮೂಲಕ ಶಾಲೆಯ ವಾತಾವರಣದೊಡನೆ ಹೊಂದಿಕೊಳ್ಳುವಂತೆ ಶಾಲೆಯ ಕಾರ್ಯದಲ್ಲಿ ಆಸಕ್ತಿವಹಿಸುವಂತೆ ಹಾಗು ಶಾಲೆ "ನಮ್ಮ"ದೆಂಬ ಭಾವನೆ ಬರುವಂತೆ ಯತ್ನಿಸುವದು.

ಗುರಿ ೨ ವೈಯಕ್ತಿಕ ಹಾಗು ಸಾಮಾಜಿಕ (ಸಾಮೂಹಿಕ) ಸ್ವಚ್ಛತೆಯ ಚಟಗಳನ್ನು ಕಲಿಸುವದು.

ಗುರಿ ೩ ಭಾಷೆ ಮತ್ತು ಕಲೆಗಳಲ್ಲಿ ಆತ್ಮಾವಿಷ್ಕಾರಕ್ಕೆ ಅನುವು ಮಾಡಿಕೊಡುವದು. ತಾಳಬದ್ಧವಾದ ಹಾಡು, ಕುಣಿತ, ನಟನೆಗಳನ್ನು ಏರ್ಪಡಿಸುವದು.

ಗುರಿ ೪ ವರ್ಗ ಮತ್ತು ಶಾಲೆಯ ಕೈದೋಟದಲ್ಲಿ ಮೂಲೋದ್ಯೋಗದ ಚಟುವಟಿಕೆಗಳನ್ನು ಏರ್ಪಡಿಸಿ ರಚನಾತ್ಮಕ ಶಕ್ತಿಗಳಿಗೆ ಅವಕಾಶ ಕಲ್ಪಿಸಿಕೊಡುವದು.

ಗುರಿ ೫ ಸುತ್ತಲಿನ ನಿಸರ್ಗ ಹಾಗು ನೈಸರ್ಗಿಕ ಚಮತ್ಕಾರಗಳನ್ನು ನಿರೀಕ್ಷಿಸಲು ಅನುವು ಮಾಡಿಕೊಡುವದು.

ಗುರಿ ೬ ವೈಯಕ್ತಿಕ ಹಾಗು ಸಾಮೂಹಿಕ ಆಟಗಳನ್ನು ಏರ್ಪಡಿಸುವದು.

ಮೇಲಿನ ಈ ಗುರಿಗಳನ್ನು ಮುಂಬಯಿ ರಾಜ್ಯವು ಸಿದ್ಧಪಡಿಸಿದ ಅಭ್ಯಾಸ ಪತ್ರಿಕೆಯ ಮೂಲಕ ಪೂರೈಸಲು ಯತ್ನಿಸಲಾದರೂ ಅಭ್ಯಾಸ ಪತ್ರಿಕೆಯ ಗುಲಾಮರಾಗಿ ಅದನ್ನು ಪೂರೈಸಲು ಯತ್ನಿಸಿಲ್ಲ. ಈ ಅಭ್ಯಾಸ ಪತ್ರಿಕೆಯ ಕರ್ತೃಗಳೂ ಕೂಡ ಆ ರೀತಿ ಹೇಳಿಲ್ಲ. ಮೂಲ ಶಿಕ್ಷಣದಲ್ಲಿ (ಜೀವನ ಶಿಕ್ಷಣದಲ್ಲಿ) ಮಗುವಿನ (ಸದ್ಯದ ಮತ್ತು ಇಲ್ಲಿಯ) ಜೀವನ ಮುಖ್ಯ. ಅವನ ಸರ್ವಾಂಗೀಣ ವಿಕಾಸವೇ ಅಭ್ಯಾಸ ಪತ್ರಿಕೆಯ ಗುರಿ. ಮಕ್ಕಳು (ಶಾರೀರಿಕ ಹಾಗು ಬೌದ್ಧಿಕ ಆರೋಗ್ಯವುಳ್ಳ ಒಳ್ಳೆಯ ಸಾಮಾಜಿಕರಾಗಿ ಬೆಳೆಯಲು ನೆರವಾಗುವದೇ ಈ ಪ್ರಯೋಗದ ಕಾರ್ಯಕ್ರಮದ ಉದ್ದೇಶವಾಗಿತ್ತು. ಈ ಗುರಿಯನ್ನಿಟ್ಟುಕೊಂಡೇ ಚಟುವಟಿಕೆಗಳನ್ನು ಆಯ್ದುಕೊಳ್ಳಲಾಯಿತೇ ವಿನಃ ಮಕ್ಕಳ ಸ್ವಾಭಾವಿಕ ಒಲವಿನ ವಿರುದ್ಧ ಅಭ್ಯಾಸ ಪತ್ರಿಕೆಯನ್ನು ಹೇಗಾದರೂ ಮಾಡಿ ಪೂರೈಸಲೆಂದಲ್ಲ. ಆದರೆ ಅಭ್ಯಾಸ ಪತ್ರಿಕೆಯ ನೆರವನ್ನು (ಈ ಗುರಿ ಸಾಧಿಸಲು) ಧಾರಾಳವಾಗಿ ಪಡೆಯಲಾಗಿದೆ.

ಸ್ವಾಭಾವಿಕ ಸಮವಾಯದ ಮೂಲಕ ಸಾಧ್ಯವಾದ ಪಠ್ಯ ವಿಷಯಗಳನ್ನಷ್ಟೇ ಇಲ್ಲಿ ಕೊಡಲಾಗಿದೆ. ಓದು, ಬರಹ ಮತ್ತು ಲೆಕ್ಕಗಳಲ್ಲಿ ಮತ್ತು ಮೂಲೋದ್ಯೋಗದಲ್ಲಿ ಸಾಧಿಸಲಾದ ಪ್ರಗತಿಯು ಮಕ್ಕಳ ಬೇಡಿಕೆಗಳ ಮೂಲಕವೇ ದೃಢೀಕರಿಸಲ್ಪಟ್ಟಿದೆ. ಸಮವಾಯ ಪದ್ಧತಿಯನ್ನು ಸಾಧ್ಯವಿದ್ದಷ್ಟು ದಕ್ಷತೆಯಿಂದಲೂ ಶ್ರದ್ಧೆಯಿಂದಲೂ ಅನುಸರಿಸಲಾಗಿದೆ.

ಈ ರೀತಿ ಪ್ರತಿ ತಿಂಗಳು ಕೈಕೊಳ್ಳಲಾದ ಕಾರ್ಯಕ್ರಮದ ವಿವರಗಳನ್ನು ಸ್ಥೂಲರೂಪವಾಗಿ ಮುಂದೆ ಕೊಡಲಾಗಿದೆ.

ಇಂದಿನ ಮಕ್ಕಳ ಕೈಬರೆಹದ ದುರ್ದೆಶೆ

ಲೇಖಕರು : ಶ್ರೀ ಮ. ಗು. ಪಾಟೀಲ, ಶಿಕ್ಷಕರು ಕ. ಗಂ, ಶಾಲೆ ನಂ. ೫ ಟಿಳಕವಾಡಿ, ಬೆಳಗಾವಿ.

ಇಂದಿನ ಮಕ್ಕಳ ಕೈಬರೆಹವನ್ನು (Hand-writing) ನೋಡಿ ಅಸಹ್ಯ-ಪಟ್ಟುಕೊಳ್ಳುವ ಹಿರಿಯರ ನೇಕರನ್ನು ನಾವು ಎಲ್ಲಿಡೆಗೂ ನೋಡುವಂತಾಗಿದೆ. ಅದಕ್ಕೆ ಪ್ರಮುಖ ಕಾರಣ, ಇಂದು ಶಾಲೆಗಳಲ್ಲಿ ಶಿಕ್ಷಕರು ಮಕ್ಕಳ ಕೈಬರಹದ ಕಡೆಗೆ ಸಾಕಷ್ಟು ಗಮನಕೊಡದಿರುವದೇ ಆಗಿದೆಯೆಂದು ಧಾರಾಳವಾಗಿ ಹೇಳಬಹುದು.

ಉತ್ತಮ ಕೈಬರೆಹವು ವಿದ್ಯಾಭ್ಯಾಸದ ಪ್ರಮುಖ ಅಂಗಗಳಲ್ಲೊಂದಾಗಿರುವದು. ಶಿಕ್ಷಿತರೆನ್ನಿಸಿಕೊಳ್ಳುವ ಪ್ರತಿ ವ್ಯಕ್ತಿಗೂ ಸರಾಗವಾಗಿ ಓದಲಿಕ್ಕೆ, ಓದಿದುದನ್ನು ಮನನ ಮಾಡಿಕೊಳ್ಳಲಿಕ್ಕೆ ಬರಬೇಕಲ್ಲದೆ ಸ್ವಂತದ ಅನುಭವಗಳನ್ನು ಹೆರವರ ಮುಂದಿಡಲು ಸುಂದರವಾಗಿಯೂ ಸುವಾಚ್ಯವಾಗಿಯೂ ಬರೆಯಲಿಕ್ಕೂ ಬರಬೇಕು. ಆದರೆ ಇಂದಿನ ಮಕ್ಕಳ "ಬ್ರಹ್ಮಬರೆಹ" (ಓದಲಿಕ್ಕೆ ಬಾರದ ಅಸಹ್ಯವಾದ ಬರೆಹ) ವನ್ನು ನೋಡಿದರೆ ದೇವರೇ ಗತಿಯೆನ್ನುವಂತಾಗಿದೆ.

ಈ ಮೊದಲು ಅಂದರೆ, ಇಂದಿಗೆ ಸುಮಾರು ಹದಿನೈದು ಇಪ್ಪತ್ತು ವರ್ಷಗಳ ಪೂರ್ವದಲ್ಲಿ ಶಾಲೆಗಳಲ್ಲೆಲ್ಲ ಹುಡುಗರ ಕೈಬರೆಹ ತಿದ್ದುವದಕ್ಕಾಗಿ ಕಾಪೀ ಬರೆಹವು ಬರೆಯಿಸಲ್ಪಡುತ್ತಿತ್ತು, ಶಿಕ್ಷಕರು ಅವರ ಬರೆಹವನ್ನು ನೋಡಿ ತಿದ್ದಿಕೊಡುತ್ತಿದ್ದರು. ಉತ್ತಮ ಕೈಬರಹವನ್ನು ಸಾಧಿಸಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಆಗ ಪ್ರೋತ್ಸಾಹನೆಗಾಗಿ ಇನಾಮು(ಮೆಚ್ಚು)ಗಳು ಶಾಲೆಗಳಲ್ಲಿಯೂ ಸಭೆ-ಸಮ್ಮೇಲನಗಳಲ್ಲಿಯೂ ಕೊಡಲ್ಪಡುತ್ತಿದ್ದವು. ತತ್ಪರಿಣಾಮವಾಗಿ ಹುಡುಗರಲ್ಲಿ ಕೈಬರೆಹದ ಕಡೆಗೆ ಹೆಚ್ಚಿಗೆ ಗಮನ ಕೊಡಬೇಕೆಂಬ ಅರಿವು ಹುಟ್ಟುತ್ತಿತ್ತಲ್ಲದೆ ಅವರು ಉತ್ತಮ ಕೈ ಬರೆಹವನ್ನೂ ಸಾಧಿಸುತ್ತಿದ್ದರು.

ಇಂದು ಶಾಲೆಗಳಲ್ಲಿ ಮಕ್ಕಳ ಕೈ ಬರೆಹದ ಕಡೆಗೆ ಸಾಕಷ್ಟು ಗಮನ ಕೊಡಲ್ಪಡುತ್ತಿಲ್ಲೇಕೆಂದು ವಿಚಾರಿಸಿದರೆ ಶಿಕ್ಷಕರು ಈ ರೀತಿಯಾಗಿ ಉತ್ತರಿಸುತ್ತಾರೆ:– "ಈಗ ಶಾಲೆಗಳಲ್ಲಿ ನೂರಾಯೆಂಟು ವಿಷಯಗಳಾಗಿವೆ, ಒಂದನೆಯ

ಯತ್ತ್ರಿಯ ಮಡುಗರಿಗೀಗ ಪೌರನೀತಿ, ಭೂಗೋಲ, ಸಾಮಾನ್ಯಜ್ಞಾನ ಹೀಗೆ ಹಲವಾರು ವಿಷಯಗಳನ್ನು ಲಿಸಬೇಕಾಗಿದೆಯಲ್ಲದೆ ಅವುಗಳನ್ನೆಲ್ಲ ಯಾವದಾದ ಒಂದು ಚಟುವಟಿಕೆಯ ಮುಖಾಂತರವಾಗಿಯೇ ಹೇಳಿ ಕೊಡಬೇಕಾಗಿದೆ. ಆದುದರಿಂದ ವೇಳೆಯೇ ಸಾಕಾಗುವ ಲ್ಲ. ಕಾಪೀ ಬರೆಸಲು ವೇಳೆಯನ್ನು ಎಲ್ಲಿಂದ ತರಬೇಕು? ಇದು ಅಲ್ಲದೆ ನಮ್ಮ ಮೇಲಧಿಕಾರಿಗಳು ಬಂದವರೆಲ್ಲ ಹುಡು ರ ಚಟುವಟಿಕೆ,ವಿಷಯ ಇವುಗಳ ಬಗ್ಗೆಯೇ ಕೇಳುತ್ತಾರೆ. ಇಷ್ಟೆಲ್ಲ ಮಾಡುವದರಲ್ಲಿಯೇ ನಮಗೆ ಸಾಕು ಸಾಕಾಗಿ ಹೋಗುತ್ತದೆ. ಆ ಕಾಪಿ ಬರೆಹ ಎಲ್ಲಿ ಬರೆಸೋಣ! ನಮಗೆ ವೇಳೆಯೇ ಇಲ್ಲ." ಹೀಗೆಲ್ಲ ಮಾತಾಡಿ ತಮ್ಮ ಗುರುತರ ವಾದ ಹೊಣೆಯನ್ನು ಹಾರಿಸಿಕೊಳ್ಳಲು ಯತ್ನಿಸುವರು.

ವೇಳಾಪತ್ರಿಕೆಯಲ್ಲಿ ಬರೆಹದ ತಾಸು ಇದ್ದಾಗ ಹುಡುಗರಿಂದ "ನೋಡಿ ಬರೆಹ"ವನ್ನು ಬರೆಸುತ್ತ ಕೊಡುತ್ತಾರೆ. ೧, ೨, ೩ ನೆಯ ವರ್ಗಗಳ ಮಕ್ಕಳ ಬರೆಹ ತಿದ್ದಲು ಸಾಕಷ್ಟು ವೇಳೆ ಸಿಕ್ಕೋ ಗುತ್ತದೆ. ಆ ವೇಳೆಯಲ್ಲಿ ಅವರಿಗೆ ಪಾಟಿಯ ಮೇಲೆ ಜೋಡು ಗೆರೆಗಳನ್ನು ಹೊಡೆದು, ಗೆರೆಗುಂಟೆ ಅಂದರೆ, ಮೇಲಿನ ಗೆರೆಗೂ ಕೆಳಗಿನ ಗೆರೆಗೂ ತಾಗುವಂತೆ ಬಳಪ ದಿಂದ ಬರೆಯಲಿಕ್ಕೆ ಶಿಕ್ಷಕರು ಹೇಳಿ ಕೊಡಬೇಕು. ಮತ್ತು ಅವರ ತಪ್ಪು ತಡೆಗಳನ್ನು ತಿದ್ದಿ ಕೊಡಬೇಕು. ಮೇಲಿನ ವರ್ಗಗಳಲ್ಲಿ ಕಥೆ, ನಿಬಂಧ, ಟಿಪ್ಪಣಿ ಮುಂತಾದ್ದನ್ನು ಬರೆ ಯಿಸುವಾಗ ಕಾಗದದ ಮೇಲೆ ಗಲಗಿನಿಂದ (ಟಾಕು) ಚಂದಾಗಿ, ಅಂದಾಗಿ, ಅಚ್ಚುಕಟ್ಟಾಗಿ ವಿರಾಮ ಚಿಹ್ನ ಗಳನ್ನು ಕೊಟ್ಟು ಬರೆಯಲಿಕ್ಕೆ ಹೇಳಬೇಕು, ಬರೆಹದ ನಿಯಮಗಳನ್ನು ಪರಿಪಾಲಿಸಲು ಹಚ್ಚಬೇಕು. ಶಿಕ್ಷಕ ನಾದರೂ ಅವರಿಗೆ ಹೆಚ್ಚಾಗಿ ಮಾರ್ಗದರ್ಶನ ಮಾಡಬೇಕು. ಅಂದರೆ ಬರೆಹವು ಸುಧಾರಿಸಲಿಕ್ಕೆ ಶಕ್ಯವಾಗುವದು. ಮುತ್ತಿನಂಥಹ ಅಕ್ಷರ ಬರೆಯುವ ಮಕ್ಕಳನ್ನು ನೋಡಲು ಅವಕಾಶ ಸಿಕ್ಕುವದು; ಇಂದಿನ ದುರ್ದೆಶೆ ದೂರಾಗುವದು.

ಇಂದಿನ ಶಾಲಾಮಕ್ಕಳು ಫೌಂಟನ್ ಪೆನ್ನುಗಳನ್ನು ಧಾರಾಳವಾಗಿ ಉಪಯೋಗಿಸುತ್ತಿರುವದನ್ನು ನಾವು ಎಲ್ಲೆ ಡೆಯಲ್ಲಿಯೂ ನೋಡಬಹುದಾಗಿದೆ. ಪೆನ್ನು ಮಕ್ಕಳ ಕೈ ಬರೆಹವನ್ನು ಚಿತ್ತಾಕರ್ಷಕವಾಗಿ ಮಾಡಲು ಸಹಾಯ ಕಾರಿಯಾಗಲಾರದು. ಪೆನ್ನಿನ ಉಪಯೋಗವನ್ನು ಪಳ ಗಿದ ಕೈಯುಳ್ಳವರಾದ ಪ್ರಬುದ್ಧರು ಮಾಡುವದು ಉತ್ತಮ. ಪೆನ್ನು ಶೀಘ್ರವಾಗಿಯೂ ಸರಾಗವಾಗಿಯೂ ಬರೆಯಲು ನೆರವು ನೀಡುವದು. ಪ್ರಾಥಮಿಕ ಶಾಲೆಯ ಮಕ್ಕಳು ಬರೆಯಲು ಟಾಕು (ಲೆಕ್ಕಣಿಕೆ)ಗಳನ್ನೇ ಉಪ ಯೋಗಿಸುವದು ಹೆಚ್ಚು ಒಳಿತು. ಈ ಬಗ್ಗೆ ಶಿಕ್ಷಕರಿಗೆ, ಸರಕಾರಿ ಸೂಚನೆಯೊಂದು ಪರಿಪತ್ರದ ಮೂಲಕ ಈಗಾ ಗಲೇ ದೊರೆತಿದ್ದರೂ ಶಿಕ್ಷಕರು ಆ ಬಗ್ಗೆ ತಮ್ಮ ಗಮನ ವನ್ನು ಸಾಕಷ್ಟು ಪೂರೈಸಿಲ್ಲೆಂದು ಕಂಡುಬಾರದಿರದು. ಮಕ್ಕಳ ಸರ್ವತೋಮುಖ ಏಳ್ಗೆಯ ಹೊಣೆಹೊತ್ತ ಶಿಕ್ಷಕ-ಬಾಂಧವರು ತಮ್ಮ ಹೊಣೆಯರಿತು ನಡೆದುದಾದರೆ ಮಕ್ಕಳ ಏಳ್ಗೆ ಬೇಗನೆ ಸಾಧಿಸದಿರದು.

ನಯಾ ಪೈಸಾ — ನಯೆ ಪೈಸೆ

ಲೇಖಕರು : **ಶ್ರೀ ರಾ. ರು. ಕುಪ್ಪಸದ,** ಎಮ್.ಎ., ಬಿ.ಟಿ., ಮುಖ್ಯಾಧ್ಯಾಪಕರು ಸ. ಮಾ. ಕೃಷಿಶಾಲೆ, ವಿಜಾಪುರ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು.)

—೩—

ಅಪ್ಪ:– ಇನ್ನು ಹೊಸ ದುಡ್ಡು ಅಂದರೆ, ನಯಾ ಪೈಸಾ. ಹೊಸ ದುಡ್ಡುಗಳು ಅಂದರೆ, ನಯೆ ಪೈಸೆ. ಇವು ಗಳ ಬಗ್ಗೆ ಬಾಯಿಲೆಕ್ಕ ಹೇಳುವೆ. ಮಾಡುವೆಯಾ?

1 ರೂ. ಗೆ 100 ನ. ಪೈ. ಎಂದು ಹೇಳಿದಿ.

1 ಆಣೆಗೆ ನಯೆ ಪೈಸೆ ಎಷ್ಟು ? ಹೇಳು.

ಮಗು:– 1 ಆಣೆಗೆ $\frac{100}{16} = \frac{25}{4} = 6\frac{1}{4}$ ನಯೆ ಪೈಸೆ.

ಅ:– ನೀನು ಹೇಳಿದ್ದು ಸರಿ. 1 ಆಣೆಗೆ $6\frac{1}{4}$ ನಯೆ ಪೈಸೆ ಲೆಕ್ಕವಾಯಿತು. ಆದರೆ, ಮೇಲಿನ ಅಪೂರ್ಣಾಂಕ $\frac{1}{4}$ ನ. ಪೈ. ಬಿಟ್ಟು 1 ಆಣೆಗೆ 6 ನಯೆಪೈಸೆ ಎಂತಲೇ ಲೆಕ್ಕ ಹಿಡಿಯಬೇಕು. ತಿಳಿದುಕೋ.

ಈಗ ಹೇಳು. 2 ಆಣೆಗೆ ನಯೆಪೈಸೆ ಎಷ್ಟು?

ಮಗ:– 2 ಆಣೆಗೆ – 2ಆ$\times 6\frac{1}{4}$ =$12\frac{1}{2}$ ನ. ಪೈ.

ಅಪ್ಪ:– ಇಲ್ಲಿಯೂ ಮೇಲಿನ $\frac{1}{2}$ ನ. ಪೈ. ಬಿಟ್ಟು, 2ಆ. ಗೆ 12 ನಯೆ ಪೈಸೆ ಎಂದು ಲೆಕ್ಕ ಹಿಡಿಯಬೇಕು. ಈಗ 3 ಆ. ಗೆ ನಯೆಪೈಸೆ ಲೆಕ್ಕ ಮಾಡಿ ಹೇಳು.

ಮಗು:– 3 ಆಣೆಗೆ—3ಆ$\times 6\frac{1}{4}$=$18\frac{3}{4}$ ನಯೆ ಪೈಸೆ ಆಯಿತು.

ಅ:— ಇಲ್ಲಿ ನೋಡು. ಇಲ್ಲಿ $\frac{3}{4}$ ನ. ಪೈ. ಬಿಡುವಂತೆ ಇಲ್ಲ. ಇದು ಅರ್ಧಕ್ಕಿಂತ ಹೆಚ್ಚು ಇದೆ. ಇದನ್ನು 1 ನ. ಪೈ. ಅಂತ ತಿಳಿದು, 3 ಆ. ಗೆ 19 ನ. ಪೈ. ಎಂತಲೇ ಹೇಳಬೇಕು. ನೆನಪಿಟ್ಟುಕೋ.

ಈಗ 4 ಆ. ಗೆ ನ. ಪೈ. ಎಷ್ಟು? ಹೇಳು.

ಮ:— ಮೊದಲೇ ಹೇಳಿದ್ದೇನೆ. 4 ಆ. ಗೆ 25 ನ. ಪೈ. ಲೆಕ್ಕದಂತೆ ಸಹ 4ಆ$\times 6\frac{1}{4}$ = 25 ನಯೆ ಪೈಸೆ ಆಗುತ್ತವೆ. ಇದು ನೆನಪಿದೆ.

ಅ:— ಹಾಗಾದರೆ 5 ಆ. ಗೆ ನಯೆಪೈಸೆ ಎಷ್ಟು ಹೇಳು.

ಮ:- ಹೇಳುತ್ತೇನೆ. $6\frac{1}{4}\times 5 = 30+\frac{5}{4} = 30+1\frac{1}{4} = 31\frac{1}{4}$ ಅಪ್ಪಾ. $\frac{1}{4}$ ನಯಾ ಪೈಸಾ ಬಿಟ್ಟು. 31 ನಯೆ ಪೈಸೆ ಹೇಳಬೇಕಲ್ಲವೇ ?

ಅ:— ನೀನು ಮಾಡಿದ ಲೆಕ್ಕ ಸರಿ. 5 ಆ. ಗೆ, 31 ನಯೆ ಪೈಸೆ, ಹೌದು.

ಇದರಂತೆ, ೧೦ ಆ. ಗೆ ನಯೆಪೈಸೆ ಎಷ್ಟು ಎಂಬದನ್ನು ಹೇಳು.

ಮ:- 10ಆ $\times 6\frac{1}{4}$ =60+$\frac{10}{4}$ =60+$\frac{5}{2}$= $62\frac{1}{2}$. ಅಪ್ಪಾ ಇಲ್ಲಿಯೂ $\frac{1}{2}$ ಬಿಟ್ಟು 62 ನಯೆ ಪೈಸೆ ಆಗಲಿಲ್ಲವೇ ?

ಅ:— ಹೌದು, 10 ಆ. ಗೆ 62 ನಯೆ ಪೈಸೆ 11 ಆ. ಗೆ ನಯೆ ಪೈಸೆ ಎಷ್ಟು ಎಂಬದನ್ನು ಹೇಳು.

ಮ:— 11ಆ$\times 6\frac{1}{4}$ = 66+$\frac{11}{4}$ =66 +$2\frac{3}{4}$ $68\frac{3}{4}$. ಅಪ್ಪಾ, ಇಲ್ಲಿ $\frac{3}{4}$ ಇದನ್ನು 1 ಹಿಡಿದು, 11 ಆ. ಗೆ 69 ನಯೆ ಪೈಸೆ ಅಲ್ಲವೇ ?

ಅ:— ಸರಿ, ಸರಿ. ಆಣೆಗಳಿಗೆ ನಯೆ ಪೈಸೆ ಮಾಡುವ ಲೆಕ್ಕ ಕಲಿತಿ. ಅದನ್ನು ಹೇಗೆ ಮಾಡುವಿ ಹೇಳು.

ಮ:— ಕೊಟ್ಟ ಆಣೆಗಳಿಗೆ $6\frac{1}{4}$ದಿಂದ ಗುಣಿಸುತ್ತೇನೆ. $\frac{1}{2}$ಕ್ಕಿಂತ ಹೆಚ್ಚಿದ್ದರೆ ಅದನ್ನು 1 ನಯಾ ಪೈಸಾ ಎಂದು ತಿಳಿಯುತ್ತೇನೆ. ಈ ಲೆಕ್ಕದಿಂದ ಬರುವದೇ, ಆ ಕೊಟ್ಟ ಆಣೆಗಳಿಗೆ ನಯೆ ಪೈಸೆ ಆಗುತ್ತವೆ.

ಅ:— ಈ ಸೂತ್ರವನ್ನು ನೆನಪಿಡು. ಆ$\times 6\frac{1}{4}$ = ನಯೆ ಪೈಸೆ. $\frac{1}{2}$ ಹಾಗೂ $\frac{1}{2}$ ಕ್ಕಿಂತ ಕಡಿಮೆ ನಯಾ ಪೈಸ ಇದ್ದರೆ ಬಿಡು, $\frac{1}{2}$ ಕ್ಕಿಂತ ಹೆಚ್ಚಿಗಿದ್ದರೆ 1 ನಯಾಪೈಸ ಅಂತ ಹಿಡಿ. ಇದೇ ಸೂತ್ರವು.

—೪—

ಅ:— ನಯಾಪೈಸಾದ ಮೇಲೆ ಲೆಕ್ಕ ಹೇಳುತ್ತೇನೆ ಮಾಡುವೆಯಾ ?

ಮ:— ಓಹೋ, ಮಾಡುವೆ.

ಅ:— 1 ಆ. 6 ಪೈ. ಗಳಿಗೆ ನಯೆ ಪೈಸೆ ಎಷ್ಟು

ಮ:— 1 ಆ. ಗೆ — 6 ನಯೆ ಪೈಸೆ.

6 ಪೈಗೆ — 3 ನಯೆ ಪೈಸೆ.

∴ 1 ಆ. 6 ಪೈ. ಗೆ 9 ನಯೆ ಪೈಸೆ.

ಅ:— ನಿನ್ನ ಉತ್ತರವು ಸರಿ. ಆದರೂ ತಪ್ಪಿ ಲೆಕ್ಕ ಮಾಡುವದನ್ನು ತಪ್ಪಿದಿ. ಹೀಗಲ್ಲ, ಆ$\times 6\frac{1}{4}$ =ನಂ ಪೈಸೆ. ಈ ಸೂತ್ರವನ್ನು ಬಿಡತಕ್ಕದ್ದಲ್ಲ. ಇಲ್ಲಿ ನೋಡ ನಾನು ಈ ಲೆಕ್ಕ ಮಾಡಿ ತೋರಿಸುವೆ.

1ಆ $\times 6\frac{1}{4} = 6\frac{1}{4}$ ನಯೆಪೈಸೆ.

6 ಪೈ ಗೆ- $\frac{1}{2}\times 6\frac{1}{4} = 3\frac{1}{8}$ ನಯೆ ಪೈಸೆ.

∴ 1ಆ-6ಪೈ = $9\frac{3}{8}$ ನ. ಪೈ. 1 ಆ. ಪೈ. ಗೆ 9 ನಯೆ ಪೈಸೆ. ತಿಳಿಯಿತೇ. ಈಗ 2 ಆ. 6ಪೈಳಿಗೆ ನಯೆ ಪೈಸೆಗಳೆಷ್ಟು ಮಾಡು.

ಮ:— 2ಆ. $\times 6\frac{1}{4}$ =$12\frac{1}{2}$ ನಯೆ ಪೈಸೆ.

$\frac{1}{2}$ಆ. $\times 6\frac{1}{4}$ =$3\frac{1}{8}$ ನಯೆ ಪೈಸೆ.

∴ 2ಆ. 6 ಪೈ= $15\frac{5}{8}$ ನಯೆ ಪೈಸೆ.

∴ 2ಆ. 6 ಪೈಗಳಿಗೆ 16 ನಯೆ ಪೈಸೆ.

ಅ:— ಲೆಕ್ಕ ಬಹು ಸರಿಯಾಗಿ ಮಾಡಿದಿ. ಮೊದಲಿನಂತೆ ಮಾಡಿದ್ದರೆ, 2 ಆ. ಗೆ, 12 ನಯೆ ಪೈಸೆ.

$\frac{1}{2}$ ಆ. ಗೆ, 3 ನಯೆ ಪೈಸೆ.

ಹೀಗಾಗಿ 2 ಆ. 6 ಪೈಗೆ 15 ನಯೆ ಪೈಸೆ ಅನ್ನುವದು ತಪ್ಪಾಗುತ್ತಿತ್ತು. ಕಾರಣ ಮೇಲೆ ಹೇಳಿದ ಸೂತ್ರವನ್ನು (ಆ $\times 6\frac{1}{4}$=**ನಯೆ ಪೈಸೆ**) ಮರೆಯಬೇಡ ಈಗ ಲೆಕ್ಕ ಮಾಡು. 1 ಟೊಪ್ಪಿಗೆಗೆ 15 ಆ. 3 ಪೈಯಂತೆ 15 ಟೊಪ್ಪಿಗೆಗಳ ಕಿಮ್ಮತ್ತು ನಯೆ ಪೈಸೆಯಲ್ಲಿ ಹೇಳು.

ಮ:— 15ಆ. – 3 ಪೈ.

$\times$ 15

ರೂ. 14–4–9

∴ 4ಆ×6¼=25 ನಯೆಪೈಸೆ.

¾ಆ × 6¼=4 1/16, ಅಂದರೆ, 5ನಯೆಪೈಸೆ

∴ ರೂ. 14–4ಆ–9 ಪೈ=ರೂ. 14. 30 ನಯೆ ಪೈಸೆ.

ಅ:–– ಸರಿ. ಈಗ ಈ ಲೆಕ್ಕ ಮಾಡು.

2 ಆ. 3 ಪೈಗೆ ಒಂದರಂತೆ 100 ಮಾವಿನ ಹಣ್ಣುಗಳನ್ನು ಕೊಳ್ಳುತ್ತೇನೆ. ನಾನು 5 ರೂ. ಯ 3 ನೋಟು ಕೊಟ್ಟರೆ ತಿರುಗಿ ಎಷ್ಟು ನಯೆಪೈಸೆ ನನಗೆ ಬರುತ್ತವೆ?

ಮ:– 100 ಮಾವಿನ ಹಣ್ಣುಗಳಿಗೆ ರೂ. 14-1-0

∴ ರೂ.15–ರೂ.14–1=15 ಆ.

∴ 15ಆ × 6¼= 90 + 3¾

∴ 94 ನಯೆ ಪೈಸೆ ತಿರುಗಿ ಬರುತ್ತವೆ.

—೫—

ಅ:– ನೀನು ಲೆಕ್ಕ ಮಾಡಿದ್ದು ಸರಿ.

ಇನ್ನು ರೂಪಾಯಿಯಲ್ಲಿಯ ಭಾಗಗಳು ನಯೆ ಪೈಸೆಗಳೇ ಆಗುವದರಿಂದ, ಲೆಕ್ಕ ಬರೆಯುವಾಗ್ಗೆ ರೂಪಾಯಿ, ನಯೆ ಪೈಸೆ ಇಷ್ಟೇ ಬರೆಯಬೇಕಾಗುವದು. ಇಷ್ಟು ದಿನ ರೂ–ಆ–ಪೈ ಬರೆಯುತ್ತಿದ್ದೆವು. ಇನ್ನು ರೂ.–ನ. ಪೈ. ಬರೆಯುವದು.

5 ರೂ. 8 ನ. ಪೈ ಬರೆಯಬೇಕಾದರೆ, **ದಶಾಂಶ**ದಲ್ಲಿ ರೂ. 5 .08 ಬರೆದರಾಯಿತು.

109 ನಯೆ ಪೈಸೆ ಹೇಗೆ ಬರೆಯುವಿ ?

ಮ:– 100 ನ. ಪೈ. ಗೆ 1 ರೂ. ಆದ್ದರಿಂದ 09 ನ. ಪೈ. ಬರೆಯುವದು. ಹೀಗೆ: ರೂ. 1.9 ಅಲ್ಲವೇ?

ಅ:– ಅಲ್ಲ, ಅಲ್ಲ. ತಪ್ಪಿದಿ. ನೋಡು. ನಾನು ಈ ಮೇಲೆ ಹೇಳಿದಂತೆ, ರೂ. 1.09 ಅಂತಾ ಬರೆಯಬೇಕು.

2 ರೂ. 50 ನ. ಪೈ. ಬರೆಯಬೇಕಾದರೆ, ರೂ. 2 . 50 ಅಂತಾ ಬರೆಯಬೇಕು.

2 ರೂ. 5 ನ. ಪೈ. ಬರೆಯಬೇಕಾದರೆ, ರೂ. 2 . 05 ಅಂತಾ ಬರೆಯಬೇಕು. ತಿಳಿಯಿತೇ. ರೂ. 2 . 5 ಬರೆಯುವದು ತಪ್ಪು ನೋಡು.

ಈಗ, ಬರೆದು ತೋರಿಸು:

160 ನಯೆಪೈಸೆ; 1 ರೂ. 2 ನ. ಪೈ;
15 ನ. ಪೈ; 1 ರೂ. 5 ನ. ಪೈ;
5 ರೂ. 6 ನ. ಪೈ; 6 ರೂ. 60 ನ. ಪೈ.

ಮ:– 160 ನ. ಪೈ.= ರೂ. 1 . 60;
1 ರೂ. 2 ನ. ಪೈ=ರೂ. 1 . 02;
15 ನ. ಪೈ =ರೂ. 0 . 15; ಅಥವಾ
15 ನ. ಪೈ.
1 ರೂ. 5 ನ. ಪೈ=ರೂ. 1 . 05;
5 ರೂ. 6 ನ. ಪೈ=ರೂ. 5 .06;
6 ರೂ. 60 ನ. ಪೈ=ರೂ. 6 . 60;

ಅ:– ನೀನು ಬರೆದು ತೋರಿಸಿದ್ದು ಎಲ್ಲವೂ ಸರಿ ಅದೆ. ಒಳ್ಳೇದು. ಈಗ ಇಷ್ಟು ಸಾಕು. ಇಷ್ಟನ್ನು ನೆನಪಿಡು. ಮುಂದೆ ಮತ್ತೆ ಹೆಚ್ಚಿಗೆ ವಿಚಾರಿಸಿ, ಹೆಚ್ಚಿನ ಲೆಕ್ಕಗಳನ್ನು ಹೇಳುವೆ. ಈಗ ನೀನು ನಯೆ ಪೈಸೆಯ ಬಗ್ಗೆ ಕಲಿತದ್ದನ್ನು ನಿನ್ನ ಚಿಕ್ಕ ತಂಗಿಗೂ ಕಲಿಸು. ನಾಳೆ ನಿನ್ನ ತಂಗಿಯನ್ನೂ ಕರೆದುಕೊಂಡು ಬಾ. ನಿನಗೂ, ನಿನ್ನ ತಂಗಿಗೂ ಕೂಡಿಯೇ ಲೆಕ್ಕ ಹೇಳುತ್ತೇನೆ. ಯಾರು ಚನ್ನಾಗಿ ನಯೆ ಪೈಸೆಯ ಲೆಕ್ಕಗಳನ್ನು ಮಾಡುವಿರಿ. ನೋಡುವೆ.

ಈಗ ಆಡಲಿಕ್ಕೆ ಓಡು.

ಮೈಸೂರ ರಾಜ್ಯದ ಶೈಕ್ಷಣಿಕ ಪರಿಶೀಲನೆ

(Educational Survey in Mysore State)

ಶ್ರೀ ಹು. ಅ. ಶಿಗ್ಗಾಂವ, ಜಿಲ್ಹಾ ಶಿಕ್ಷಣ ಪರಿಶೀಲನಾ ಅಧಿಕಾರಿ, ಬೆಳಗಾಂವಿ.

ಹಿನ್ನೆಲೆ :—

ದಿನಾಂಕ ೧೫–೮–೧೯೪೭ರಂದು ಸ್ವಾತಂತ್ರ್ಯ ಪಡೆದು ದಿನಾಂಕ ೨೬–೧–೧೯೫೦ಕ್ಕೆ ಭಾರತವು ಜಾತ್ಯತೀತ, ವರ್ಗರಹಿತ, ಪ್ರಜಾಸತ್ತಾತ್ಮಕ ರಾಜ್ಯವಾಯಿತು. ಭಾರತದಲ್ಲಿ ಇದೊಂದು ದೊಡ್ಡ ಕ್ರಾಂತಿಯೆನ್ನಬಹುದು, ಕೂಡಲೇ ದೇಶದಲ್ಲಿ ಒಂದು ಹೊಸ ಯುಗವು ಆರಂಭವಾಯಿತು. ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿ ಬದಲಾವಣೆ ತಲೆದೋರಿತು. ಅವರಲ್ಲೂ ಬಹಳ ಪ್ರಯಾಸ

ದಿಂದ ಪಡೆದ ಪ್ರಜಾಸತ್ತಾತ್ಮಕ ರಾಜ್ಯವನ್ನು ಹೆಚ್ಚು ಭದ್ರವಾಗಿಯೂ, ಬಲಶಾಲಿಯನ್ನಾಗಿಯೂ, ಬೆಳಿಸ ಬೇಕಾದರೆ ಸಾರ್ವತ್ರಿಕ ಶಿಕ್ಷಣ ಕೊಡುವದು ಅತ್ಯವಶ್ಯ. ಅಂತೆಯೇ ರಾಜ್ಯದ ಸ್ವೀಕೃತವಾದ ಘಟನೆಯ ೪೫ನೆಯ ಕಲಮಿನಲ್ಲಿ "ಶಿಕ್ಷಣವನ್ನು ಕಡ್ಡಾಯವಾಗಿಯೂ ಪುಕ್ಕಟೆಯಾಗಿಯೂ" ಕೊಡುವ ಹೊಣೆಯನ್ನು ಸರಕಾರವು ಅಂಗೀಕರಿಸಿದೆ. ೧೪ ವರುಷವನಾಗುವದರೊಳಗಾಗಿ ದೇಶದ ಎಲ್ಲ ಬಾಲ-ಬಾಲಿಕೆಯರು ಶಿಕ್ಷಣ ಪಡೆಯಲೇಬೇಕು. ಮತ್ತು ಸರಕಾರವು ಅವರಿಗೆ ಎಲ್ಲ ಪ್ರಕಾರದ ಅನುಕೂಲತೆಗಳನ್ನು ಒದಗಿಸಲೇಬೇಕು ಎಂಬ ಘೋರಣೆಯನ್ನು ಸ್ವೀಕರಿಸಿ, ೧೦ ವರುಷದೊಳಗಾಗಿ ಈ ಪವಿತ್ರ ಹೊಣೆಯನ್ನು ನಿರ್ವಹಿಸತಕ್ಕದ್ದೆಂದು ನಿಶ್ಚಯಿಸಿತು. ಈ ಮಹತ್ವದ ನಿಶ್ಚಯವನ್ನು ಮಾಡಿ ಈಗ ೭ ವರುಷಗಳು ಗತಿಸಿದವು. ಈ ವರುಷ, ಈ ಪವಿತ್ರ ನಿಶ್ಚಯವನ್ನು ಕಾರ್ಯರೂಪಕ್ಕೆ ಇಳಿಸಲು ಕೇಂದ್ರ ಸರಕಾರವು ಟೊಂಕ ಕಟ್ಟಿ ನಿಂತಿದೆ. ರಾಜ್ಯ ಸರಕಾರಗಳಿಗೆಲ್ಲ ಆದೇಶಗಳನ್ನು ಕಳುಹಿಸಿ ಅವರ ಸಹಕಾರದೊಂದಿಗೆ ಸಾರ್ವತ್ರಿಕ ಶಿಕ್ಷಣವನ್ನು ಆದಷ್ಟು ಶೀಘ್ರ ಪ್ರಚಾರದಲ್ಲಿ ತರಲಿದೆ. ಅದಕ್ಕಾಗಿ ಈಗಿದ್ದ ಶೈಕ್ಷಣಿಕ ಪರಿಸ್ಥಿತಿಯ ಪರಿಶೀಲನೆ ಮಾಡುವದನ್ನು ಪ್ರಾರಂಭಿಸಿದೆ. ಎಲ್ಲ ರಾಜ್ಯಗಳಿಗೆ ತಮ್ಮಲ್ಲಿಯ ಸದ್ಯದ ಶಿಕ್ಷಣದ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಆದೇಶವಿತ್ತಿದೆ. ನಮ್ಮ ಮೈಸೂರ ರಾಜ್ಯವೂ ಈ ಆದೇಶಕ್ಕೆ ಓಗೊಟ್ಟಿದೆ.

ಶೈಕ್ಷಣಿಕ ಪರಿಶೀಲನೆಯ ಉದ್ದೇಶಗಳು :—

೧. ರಾಜ್ಯಘಟನೆಯ ೪೫ನೆಯ ಕಲಮಿನನ್ವಯ ೧೪ ವರ್ಷ ವಯಸ್ಸಿನೊಳಗಾಗಿ ಎಲ್ಲರಿಗೂ ಶಿಕ್ಷಣ ಕೊಡುವದು.

೨. ಈ ಶಿಕ್ಷಣ ಕೊಡಲು, ದೇಶದಲ್ಲಿ ಈಗಿದ್ದ ಶೈಕ್ಷಣಿಕ ಪರಿಸ್ಥಿತಿಯನ್ನು ಪೂರ್ಣವಾಗಿ ತಿಳಿದುಕೊಂಡು ಅದರ ಪರಮಾವಧಿ ಲಾಭವು ಎಲ್ಲರಿಗೆ ದೊರೆಯುವಂತೆ ಮಾಡುವದು.

೩. ಸಾಲೆಗಳಿಲ್ಲದ ಹಳ್ಳಿಗಳಲ್ಲಿ ಹೊಸ ಸಾಲೆಗಳನ್ನು ತೆರೆಯಲು ಶಾಸ್ತ್ರೀಯವಾದ ಮತ್ತು ವ್ಯಾವಹಾರಿಕವಾದ ಪದ್ಧತಿಯನ್ನು ಸಿದ್ಧಪಡಿಸುವದು.

೪. ಈ ಪರಿಶೀಲನೆಯ ಕಾಲಕ್ಕೆ ಬೇರೆ ಹೊಸ ಶೈಕ್ಷಣಿಕ ಸುಧಾರಣೆಗಳಿಗಾಗಿ ಸಾಧನಸಾಮುಗ್ರಿಗಳನ್ನು ಕಲೆಹಾಕುವದು.

೫. ಪ್ರತಿಯೊಬ್ಬ ಮಗುವಿಗೂ ಸುಲಭವಾಗಿ ಶಿಕ್ಷಣ ದೊರೆಯುವ ವ್ಯವಸ್ಥೆಯನ್ನು ಏರ್ಪಡಿಸುವದು.

೬. ಆ ಮೇಲೆ ಕ್ರಮವಾಗಿ ಒತ್ತಾಯ ಶಿಕ್ಷಣವನ್ನು ಕೈಕೊಳ್ಳುವದು.

ಈ ಉದ್ದೇಶಗಳನ್ನು ಸಾಧಿಸಲು ಕೈಕೊಂಡ ಉಪಾಯುಗಳು:—

ಕೇಂದ್ರ ಸರಕಾರವು ತನ್ನ ಶಿಕ್ಷಣ ಮಂತ್ರಿಗಳ ನೇತೃತ್ವದಲ್ಲಿ "ಹಿಂದುಸ್ತಾನದ ಶಿಕ್ಷಣ ಪರಿಶೀಲನೆ ವಿಭಾಗ" ಎಂದು ಒಂದು ಶಾಖೆಯನ್ನು ತೆರೆದಿದೆ. ಡಾ. ಬಿ. ಬಿ. ಸಾಮಂತ ಇವರನ್ನು ಈ ವಿಭಾಗದ ವಿಶೇಷಾಧಿಕಾರಿಯೆಂದು ನಿಯೋಜಿಸಿದೆ. ಪ್ರತಿಯೊಂದು ರಾಜ್ಯದಿಂದ ಒಬ್ಬ ಪರಿಶೀಲನಾ ಅಧಿಕಾರಿಯನ್ನು ಆಯ್ದು, ದಿಲ್ಲಿಯಲ್ಲಿ ತಾರೀಖು ೨೮-೧-೫೭ರಿಂದ ೧೫-೨-೫೭ರ ವರೆಗೆ ಒಂದು ತರಬೇತಿ ವರ್ಗವನ್ನು ತೆರೆದು ಶೈಕ್ಷಣಿಕ ಪರಿಶೀಲನೆಯ ಪದ್ಧತಿಯನ್ನು ಅವರಿಗೆ ತಿಳಿಸುವ ವ್ಯವಸ್ಥೆ ಮಾಡಿತು. ಶ್ರೀ ಜೆ. ಪಿ. ನಾಯಕ ಹಾಗು ಡಾ. ಬಿ. ಬಿ. ಸಾಮಂತ ಇವರೀರ್ವರು ಈ ತರಬೇತಿ ವರ್ಗದ ಸಂಚಾಲಕತ್ವವನ್ನು ವಹಿಸಿದ್ದರು. ಇವರು ಮೀರತ ತಹಸೀಲಿನ ಒಂದು ಮಾದರಿ ಪರಿಶೀಲನೆಯನ್ನು ಕೈಕೊಂಡು ಮುಂದೆ ಸ್ವತಂತ್ರವಾಗಿ, ತರಬೇತಿಗಾಗಿ ಬಂದ ಅಧಿಕಾರಿಗಳಿಂದ ಮೀರತದ ಉಳಿದ ೫ ತಹಶೀಲುಗಳ ಪರಿಶೀಲನೆಯನ್ನು ಮಾಡಿಸಿದರು. ತರುವಾಯ ರಾಜ್ಯಗಳಿಂದ ಬಂದ ಪರಿಶೀಲನಾ ಅಧಿಕಾರಿಗಳು ತಮ್ಮ ತಮ್ಮ ರಾಜ್ಯಗಳಿಗೆ ಹೋಗಿ ದಿಲ್ಲಿಯ ವರ್ಗದ ಮಾದರಿ ಮೇಲೆ, ಪ್ರತಿಯೊಂದು ಜಿಲ್ಹೆಗೆ ಒಬ್ಬರಂತೆ ಆಯ್ದು, ಜಿಲ್ಹಾ ಪರಿಶೀಲನಾ ಅಧಿಕಾರಿಗಳಿಗೆ ತರಬೇತಿಯನ್ನು ಕೊಟ್ಟರು. ಇಂಥದೊಂದು ವರ್ಗವು ನಮ್ಮ ರಾಜ್ಯದಲ್ಲಿ ಹಾಸನದಲ್ಲಿ ತಾ. ೭-೬-೫೭ರಿಂದ ೨೪-೬-೧೯೫೭ ವರೆಗೆ ನಡೆಯಿತು. ದಿಲ್ಲಿಯಲ್ಲಿ ತರಬೇತಿ ಪಡೆದ ಶ್ರೀ ಎಮ್. ಆರ್. ರಾಮಯ್ಯನವರು ಈ ವರ್ಗದ ಸಂಚಾಲಕತ್ವವನ್ನು ಸಾಗಿಸಿ ಹಾಸನ ತಾಲೂಕಿನ ಮಾದರಿ ಪರಿಶೀಲನೆ ಮಾಡಿ, ಉಳಿದ ೭ ತಾಲೂಕುಗಳ ಪರಿಶೀಲನೆಯನ್ನು ಜಿ.ಶಿ.ಪ. ಅಧಿಕಾರಿಗಳಿಂದ ಮಾಡಿಸಿ ಅವರವರ ಜಿಲ್ಹೆಗೆ ಮರಳಿ ಕಳಿಸಿದ್ದಾರೆ. ಈ ಜಿ.ಶಿ.ಪ. ಅಧಿಕಾರಿಗಳು ರಾಜ್ಯದ ೧೯ ಜಿಲ್ಹೆಗಳಲ್ಲಿ ತಮ್ಮ ಕಾರ್ಯವನ್ನು ಇದೀಗ ಪ್ರಾರಂಭಿಸಿದ್ದಾರೆ.

ಜಿಲ್ಹಾ ಶಿಕ್ಷಣ ಪರಿಶೀಲನಾಧಿಕಾರಿಗಳ ಕಾರ್ಯ:-

ಈ ಅಧಿಕಾರಿಗಳು ಜಿಲ್ಹೆಯಲ್ಲಿದ್ದ ಎಲ್ಲ ಪಟ್ಟಣ ಗಳ, ಗ್ರಾಮಗಳ ಗಣತಿಮಾಡುವರಲ್ಲದೆ ಅವುಗಳಿಗೆ ಸಂಬಂಧಿಸಿದ ಎಲ್ಲ ಮಜರೆ, ಹಟ್ಟಿ, ತಾಂಡೆ ಮುಂತಾದವು ಗಳನ್ನು ನಮೂದ ಮಾಡಿಕೊಳ್ಳುವರು. ಅವುಗಳಲ್ಲಿಯ ಜನಸಂಖ್ಯೆಯನ್ನೂ, ಶೈಕ್ಷಣಿಕ ಸೌಲಭ್ಯಗಳನ್ನೂ ತಿಳಿದು ಕೊಳ್ಳುವರು. ಗ್ರಾಮದಿಂದ ಗ್ರಾಮಕ್ಕೆ ಬರಹೋಗಲು ಮಧ್ಯದಲ್ಲಿದ್ದ ಅಡ್ಡಿ ಆತಂಕಗಳನ್ನು, ನದಿ, ಹಳ್ಳ, ಗುಡ್ಡ ಇತ್ಯಾದಿಗಳಂಥ ನೈಸರ್ಗಿಕ ಅಡೆತಡೆಗಳನ್ನು ತಿಳಿದು ಕೊಳ್ಳುವರು. ಸಾಲೆಗಳಿಲ್ಲದ ಮಜರೆ, ತಾಂಡೆ, ಹಟ್ಟಿ ಗಳಂಥ ಜನವಸತಿಗಳನ್ನು ಕಂಡು ಹಿಡಿಯುವರು. ಆ ಮೇಲೆ, ಈಗಿದ್ದ ಶಿಕ್ಷಣ ಸೌಲತ್ತಿನ ಪರಮಾವಧಿ ಲಾಭ ಎಲ್ಲರಿಗೆ ದೊರಕುವಂತೆಯೂ, ಸಾಲೆಗಳಿಲ್ಲದ ಗ್ರಾಮಗಳಿಗೆ ಸಾಲೆಗಳು ಸಿಗುವಂತೆಯೂ ಒಂದು ಯೋಜ ನೆಯನ್ನು ತಯಾರಿಸುವರು. ಆ ಯೋಜನೆಯ ರೂಪ ರೇಷೆಯು ಕೆಳಗಿನಂತಿದೆ:—

ಮುಂದಿನ ಶಿಕ್ಷಣ ಯೋಜನೆ :—

೧. ೩೦೦ ಜನವಸತಿಯುಳ್ಳ ಪ್ರತಿಯೊಂದು ಹಳ್ಳಿಗೆ ಇಲ್ಲವೆ ೩೦೦ ಜನವಸತಿಯಾಗುವ ೧ ಮೈಲಿನ ಅಂತರದಲ್ಲಿ ಇರುವ ಕೆಲವು ವಸತಿಗಳ ಸಮೂಹಕ್ಕೆ ಒಂದು ಕೆಳಗಿನ ಪ್ರಾಥಮಿಕ ಸಾಲೆಯನ್ನು ಕೊಡುವದು.

೨. ೧ ಮೈಲಿಗಿಂತ ದೂರ ಇದ್ದ ೩೦೦ಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ೨-೩-೪ ಹಳ್ಳಿಗಳಿಗೆ ಒಬ್ಬ ಸಂಚಾರಿ ಶಿಕ್ಷಕನನ್ನು ಕೊಡುವದು.

೩. ೧೫೦೦ ಜನಸಂಖ್ಯೆಯುಳ್ಳ ಹಳ್ಳಿಗೆ, ಇಲ್ಲವೆ ೩ ಮೈಲು ಅಂತರದಲ್ಲಿದ್ದ ಒಟ್ಟು ೧೫೦೦ ಜನಸಂಖ್ಯೆ ಯಾಗುವ ಹಳ್ಳಿಗಳ ಒಂದು ಸಮೂಹಕ್ಕೆ ಒಂದು ಪೂರ್ಣ ಪ್ರಾಥಮಿಕ ಸಾಲೆಯನ್ನು ಕೊಡುವದು.

೪. ೫೦೦೦ ಜನಸಂಖ್ಯೆಯ ಒಂದು ಗ್ರಾಮಕ್ಕೆ ಇಲ್ಲವೆ ೫ ಮೈಲಿನೊಳಗಿದ್ದ ಒಟ್ಟು ೫೦೦೦ ಜನಸಂಖ್ಯೆ ಯಾಗುವ ಹಳ್ಳಿಗಳ ಸಮೂಹಕ್ಕೆ ಒಂದು ಹಾಯಸ್ಕೂ ಲನ್ನು ಕೊಡುವದು.

ಮೇಲಿನ ಯೋಜನೆಯಿಂದ, ದೇಶದಲ್ಲಿದ್ದ ಎಲ್ಲ ಜನ ವಸತಿಗಳ ವಿಭಾಗಗಳಿಗೆ ಶಿಕ್ಷಣ ಸವಲತ್ತುಗಳನ್ನು ನೀಡಿದಂತಾಗುವದೆಂಬ ಭರವಸೆ ಎದ್ದು ಕಾಣುವದು. ೩೦೦ ಕಿಂತ ಕಡಿಮೆ ಜನವಸತಿಯುಳ್ಳ, ದೂರು ಸಿಡಿದು ನಿಂತ, ಗ್ರಾಮಗಳಿಗಾಗಿ ಬೇರೊಂದು ಯೋಜನೆಯನ್ನು ಕಲ್ಪಿಸಬೇಕಾಗುವದು.

ಶಿಕ್ಷಣ ಪರಿಶೀಲನೆಯ ಕಾರ್ಯದಲ್ಲಿ ಸಹಕಾರ:—

ಜಿಲ್ಹೆಯಲ್ಲಿದ್ದ ಎಲ್ಲ ಗ್ರಾಮ, ಮಜರೆ, ಹಟ್ಟಿ, ತಾಂಡೆ ಇತ್ಯಾದಿಗಳ ಸರಿಯಾದ ಗಣತಿಯಾಗಬೇಕಾದರೆ ಕಂದಾಯ ಖಾತೆಯ ಗೌಡರ ಹಾಗು ತಲಾಟಿ ಜನರ ಸಹಾಯ ಸಹಕಾರಗಳು ಅತ್ಯವಶ್ಯ. ಅವುಗಳ ನಿಜವಾದ ಸ್ಥಾನ, ಅವುಗಳ ಮಧ್ಯದಲ್ಲಿದ್ದ ಅಂತರ, ಈಗಿನ ಜನ ಸಂಖ್ಯೆ, ನೈಸರ್ಗಿಕ ಅಡೆತಡೆಗಳ ಕಲ್ಪನೆ, ಈ ತಲಾಟಿಗ ಳಿಂದಲೇ ಪಡೆಯಬೇಕು. ಆದುದರಿಂದ ಸರಕಾರದ ಆದೇ ಶದ ಮೇರೆಗೆ ಕಮಿಶನರ್, ಕಲೆಕ್ಟರ್, ಮಾಮಲೇದಾರ ರವರಿಂದ ಸರ್ಕಲ್ ಇನ್ಸಪೆಕ್ಟರ ಹಾಗು ತಲಾಟಿ ಜನರಿಗೆ ಸುತ್ತೋಲೆಗಳನ್ನು ಕಳಿಸಿದ್ದಾಗಿದೆ. ಜಿ. ಶಿ. ಪ. ಅಧಿಕಾ ರಿಯು ಕರೆಯಬಹುದಾದ ಸಭೆಗಳಲ್ಲಿ ಹಾಜರ ಇರಲು ತಿಳಿಸಿದ್ದಾಗಿದೆ. ಶಿಕ್ಷಣ ಸೌಕರ್ಯಗಳ ಕಲ್ಪನೆಯನ್ನು ಶಿಕ್ಷಣಾಧಿಕಾರಿಗಳಿಂದಲೇ ಪಡೆಯುವದು ವಿಹಿತ. ಆದ್ದ ರಿಂದ ಶಿಕ್ಷಣ ಖಾತೆಯ ಡಾಯರೆಕ್ಟರರಿಂದ ಜಿಲ್ಹೆಯ ಎಲ್ಲ ಶಿಕ್ಷಣಾಧಿಕಾರಿಗಳಿಗೂ, ಎ. ಓ. ರವರಿಗೂ, ಉಪ ಶಿಕ್ಷಣಾಧಿಕಾರಿಗಳಿಗೂ, ಶಿಕ್ಷಕರಿಗೂ, ಸುತ್ತೋಲೆಗಳ ಮುಖಾಂತರ ಜಿ. ಶಿ. ಪ. ಅಧಿಕಾರಿಗಳಿಗೆ ಎಲ್ಲ ಸಹಾಯ ಸಹಕಾರಗಳನ್ನು ಕೊಡಲು ತಿಳಿಸಿದ್ದಾಗಿದೆ. ಜಿ. ಶಿ. ಪ. ಅಧಿಕಾರಿಗಳು ತಾಲೂಕಿನ ಮಾಮಲೇದಾರರ ಸಂಗಡ ವಿಚಾರ ವಿನಿಮಯ ಮಾಡಿ ಪರಿಶೀಲನೆಯಲ್ಲಿ ಬೇಕಾಗುವ ಸಾಧನ ಸಾಮಗ್ರಿಗಳನ್ನು ಕಲೆಹಾಕಲು ಕೇಂದ್ರಗಳನ್ನು ಗೊತ್ತುಪಡಿಸುತ್ತಿದ್ದಾರೆ.ಈ ಕೇಂದ್ರಗಳಲ್ಲಿ ಶಿಕ್ಷಕರ ಹಾಗು ತಲಾಟಿಗಳ ಸಭೆಗಳು ಜರಗುವವು. ತಾಲೂಕಿನಲ್ಲಿ ೩-೪ ಸಭೆಗಳ ಏರ್ಪಾಟಾಗುವದು. ಈ ಸಭೆಯ ಪೂರ್ವದಲ್ಲಿ ಶಿಕ್ಷಕರಿಗೂ ತಲಾಟಿಗಳಿಗೂ ಕ್ರಮವಾಗಿ ಎ. ಓ. ರವರ ಮುಖಾಂತರ, ಹಾಗು ಮಾಮಲೇದಾರರ ಮುಖಾಂತರ ಪತ್ರಿಕೆಗಳು ಕಳಿಸಲ್ಪಡುವವು. ಈ ಪತ್ರಿಕೆಗಳನ್ನು ಸರಿಯಾದ ವಿವರಗಳೊಂದಿಗೆ, ನಿರ್ದಿಷ್ಟಪಡಿಸಿದ ತಾರೀ ಖಿಗೆ ಶಿಕ್ಷಕರೂ ತಲಾಟಿಗಳೂ ಹಾಜರ ಇದ್ದು ಜಿ. ಶಿ. ಪ. ಅಧಿಕಾರಿಯು ಕೇಳುವ ಎಲ್ಲ ಸತ್ಯ ಸಂಗತಿಗಳನ್ನು ಪೂರೈ ಸಬೇಕಾಗಿ ಕೇಳಿಕೊಳ್ಳುತ್ತೇವೆ. ಮತ್ತು ಈ ಶಿಕ್ಷಣ ಪರಿ ಶೀಲನೆಯ ಕಾರ್ಯದಲ್ಲಿ ಸಂಬಂಧಿಸಿದವರೆಲ್ಲರೂ ತನು ಮನದಿಂದ ಸಹಕಾರವನ್ನು ನೀಡುವರೆಂದು ಆಶಿಸುತ್ತೇವೆ.

ಪ್ರಕಟನೆಗಳು

(೪ನೆಯ ಪುಟದಿಂದ ಬಂದದ್ದು)

ಸಂಜೆಯ ೬ ಘಂಟೆಗೆ ಬರಬೇಕೆಂದು ಎಲ್ಲರನ್ನೂ ಮತ್ತೊಮ್ಮೆ ಪ್ರಾರ್ಥಿಸುವೆವು.

ಈ ಯೋಜನೆಗೆ ಹಿರಿಯ ಅಧಿಕಾರಿಗಳ ಉತ್ತೇಜನ ದೊರೆಯುವುದು ನಮ್ಮೆಲ್ಲರ ಭಾಗ್ಯ. ಆಗಿನ ಮುಂಬಯಿ ಕರ್ನಾಟಕದ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಹುದ್ದೆಯಿಂದ ನಿವೃತ್ತಿ ಹೊಂದಿದವರೂ, 'ಜೀವನ ಶಿಕ್ಷಣ'ದ ಸಂಪಾದಕ ಮಂಡಲದ ಸದಸ್ಯರೂ ನಮ್ಮ ಕಾಲೇಜದ ಹಿಂದಿನ ಪ್ರಾಧ್ಯಾಪಕರೂ ಆದ, ಶ್ರೀ ಬ.ಮ. ಶಿಂತ್ರಿ ಅವರು ನಮ್ಮ ಯೋಜನೆಗೆ ಬೆಂಬಲ ಕೋರಿ ಈಗಾಗಲೇ ಶತಮಾನೋತ್ಸವದ ನಿಧಿಗೆ ೧೦ ರೂಪಾಯಿಗಳ ದೇಣಿಗೆಯನ್ನು ಕಳಿಸಿದ್ದಾರೆ. ಅಲ್ಲದೆ ಈ ಉತ್ಸವದಲ್ಲಿ ಭಾಗವಹಿಸಲು ತಮಗೆ ತುಂಬಾ ಸಂತೋಷ ವಾಗುವದೆಂದು ತಿಳಿಸಿದ್ದಾರೆ. ಶತಮಾನೋತ್ಸವದ ಸಮಿತಿಯ ಪರವಾಗಿ ಅವರ ಉದಾರ ದೇಣಿಗೆಯನ್ನು ಕೃತಜ್ಞತಾ ಪೂರ್ವಕ ಸ್ವೀಕರಿಸಲಾಗಿದೆ.

ನಂ. ಎಸ್. ೧೧೯ (ಇ) ೬೬—ಎಚ್. ಧಾರವಾಡ

೨೩—೬—೫೭

ಸರಕಾರಿ ಕ್ರಮಿಕ ಪುಸ್ತಕಗಳ ಪೂರೈಕೆ

ನಮ್ಮ ಕಚೇರಿಯಿಂದ ಮಾರಾಟದ ಸಲುವಾಗಿ ೧ ರಿಂದ ೪ ನೆಯ ಇಯತ್ತೆಗಳ ಕನ್ನಡ ಕ್ರಮಿಕ ಪುಸ್ತಕಗಳನ್ನು ಕೊಳ್ಳಬಯಸುವ ಅಧಿಕೃತ ಮಾರಾಟಗಾರರು ಪುಸ್ತಕಗಳ ಬೆಲೆಯಲ್ಲಿ ನಿಯಮಾನುಸಾರ ರಿಯಾತನ್ನು ಮುರಿದು ಉಳಿದ ಹಣವನ್ನು ಟ್ರೇಝುರಿಯಲ್ಲಿ ಜಮಾ ಮಾಡಬೇಕು. ಬ್ಯಾಂಕಿನ ಮುಖಾಂತರ ಹಣವನ್ನು ಕಳಿಸಬೇಕೆನ್ನುವವರು ಇಂಡಿಯಾದ ರಿಝರ್ವ ಬ್ಯಾಂಕಿನ ಹುಂಡಿಗಳನ್ನು ನಮ್ಮ ಹೆಸರಿನಲ್ಲಿ ಈಂಡಿಯಾದ ಸ್ಟೇಟ ಬ್ಯಾಂಕ ಧಾರವಾಡ ಇದರ ಮೇಲೆ ಕಳಿಸಬೇಕು.

(ಸಹಿ. ಆರ್. ವಿಶ್ವನಾಥನ್)
ಡೆಪ್ಯುಟಿ ಡಿರೆಕ್ಟರ ಪಬ್ಲಿಕ ಇನ್‌ಸ್ಟ್ರಕ್ಶನ್
ಇವರ ಪರವಾಗಿ

ಕನ್ನಡ ವರ್ಧ ಪ್ರಾಯಿಜ ಪರೀಕ್ಷೆ ೧೯೫೭

ನಮ್ಮ ಕಾಲೇಜದಲ್ಲಿ ನಡೆಯುವದು. ಒಟ್ಟು ೩ ಪೇಪರಗಳಿದ್ದು ಪ್ರತಿಯೊಂದು ಪೇಪರು ೩ ತಾಸಿನದಿರುತ್ತದೆ. ಮೊದಲನೆಯ ಪೇಪರು ದಿ. ೧೯ ರಂದು ಮುಂಜಾನೆ ೧೧ ಘಂಟೆಗೆ ಪ್ರಾರಂಭವಾಗುವದು. ಆದುದರಿಂದ ಅರ್ಜಿಗಳನ್ನು ಸಲ್ಲಿಸಿದ ಉಮೇದವಾರರೆಲ್ಲರೂ ಅವಶ್ಯವಿದ್ದ ಸಾಧನಗಳೊಂದಿಗೆ ವೇಳೆಗೆ ಸರಿಯಾಗಿ ಹಾಜರಿರಬೇಕು.

ಪ್ರಾಥಮಿಕ ಶಿಕ್ಷಕರ ಪ್ರಮಾಣ ಪತ್ರ ಪುರವಣಿ ಪರೀಕ್ಷೆ

ಪ್ರಾಥಮಿಕ ಶಿಕ್ಷಕರ ಪ್ರಮಾಣ ಪತ್ರ ಪುರವಣಿ ಪರೀಕ್ಷೆ? ನಮ್ಮ ಕಾಲೇಜದ ಅನೇಕ ಹಳೆ ವಿದ್ಯಾರ್ಥಿಗಳು ಪತ್ರ ಬರೆದು ಇದೇ ಅಕ್ಟೋಬರದಲ್ಲಿ ಪುರವಣಿ ಪರೀಕ್ಷೆ ನಡೆಯುವ ಬಗ್ಗೆ ಮಾಹಿತಿ ಕೇಳುತ್ತಿದ್ದಾರೆ. ನಮಗೆ ಆ ಬಗ್ಗೆ ಇಲ್ಲಿಯ ವರೆಗೆ— ಯಾವ ಆದೇಶಗಳೂ ಬಂದಿಲ್ಲ. ಒಂದು ವೇಳೆ ಪುರವಣಿ ಪರೀಕ್ಷೆಯನ್ನಿಡುವದಾದರೆ ಆ ಬಗ್ಗೆ ವೃತ್ತಪತ್ರಿಕೆಗಳಲ್ಲಿ ಸಕಾಲದಲ್ಲಿ ಪ್ರಸಿದ್ಧಿಸಲಾಗುವದು.

ಪ್ರಿನ್ಸಿಪಾಲ
ಗ. ಮ. ಸ. ಟ್ರೇ. ಕಾಲೇಜ, ಧಾರವಾಡ

ಶಿಶುಗೀತೆಗಳ ಸ್ಪರ್ಧೆ

ಕನ್ನಡದಲ್ಲಿನ್ನೂ ಹುಲುಸಾಗಿ ಬೆಳೆಯಬೇಕಾಗಿರುವ ಶಿಶುಗೀತೆಗಳ ಸೃಷ್ಟಿಗೆ ಪ್ರೇರಣೆ ದೊರೆಯುವ ದೃಷ್ಟಿಯಿಂದ, ಬೆಳಗಾವಿ ಜಿಲ್ಹೆಯ ಶಮನೇವಾಡಿಯ ಸ್ನೇಹ ಪ್ರಕಾಶನದ ಪರವಾಗಿ ಒಂದು ಸ್ಪರ್ಧೆಯನ್ನೇರ್ಪಡಿಸಲಾಗಿದೆ. ಭಾಗವಹಿಸಲು ಬಯಸುವ ಕವಿಗಳು ಕೆಳಗಿನ ನಿಯಮುಗಳನ್ನನುಲಕ್ಷಿಸಿ, ತಮ್ಮ 'ಶಿಶುಗೀತೆ'ಗಳನ್ನು ಕಳಿಸಿ ಸಹಕರಿಸಬೇಕಾಗಿ ಬಿನ್ನಹವಿದೆ:—

೧) ಈ ಸ್ಪರ್ಧೆಯಲ್ಲಿ ಹೊಸ ಮೈಸೂರಿನ ಎಲ್ಲ ಭಾಗಗಳ ಕವಿಗಳೂ ಭಾಗವಹಿಸಬಹುದು. ಹೊರನಾಡಿನವರೂ ಭಾಗವಹಿಸಬಹುದು.

೨) ಕವಿತೆಯ ವಿಷಯಗಳನ್ನು ಕವಿಗಳೇ ಆರಿಸಿಕೊಳ್ಳಬಹುದು. ಆದರೆ ಅದು ಮಕ್ಕಳ ಮನಹಿಡಿಯುವಂತಿರಬೇಕು.

೩) ಈ ಮೊದಲು ಅಪ್ರಕಟಿತವೂ ಸ್ವತಂತ್ರವೂ ಇದ್ದ ಕವಿತೆಯನ್ನು ಮಾತ್ರ ಕಳಿಸಬೇಕು; ಕವಿತೆ ೨೫ ಸಾಲು ಮಿಕ್ಕಬಾರದು.

೪) ಕವಿತೆಗಳನ್ನು ದಿ. **೯—೮—೫೭** ರೊಳಗಾಗಿ ಎಂಟಾಣೆ ಪ್ರವೇಶ ಧನದೊಂದಿಗೆ ಕಳಿಸಬೇಕು. ಒಬ್ಬರು ಒಂದೇ ಕವಿತೆಯನ್ನು ಕಳಿಸಬೇಕು.

೫) ೧ನೆಯದು **೨೦ ರೂ.** ೨ನೆಯದು **೧೦ ರೂ.** ೩ನೆಯದು **೫ ರೂ.** ಹೀಗೆ ಮೂರು ಬಹುಮಾನಗಳನ್ನಿಡಲಾಗಿದ್ದು, ಅವುಗಳನ್ನು ಪುಸ್ತಕ ರೂಪದಲ್ಲಿ ಕೊಡಲಾಗುವದು.

೬) ಬಹುಮಾನಿತ ಕವಿತೆಗಳನ್ನೂ, ನಿರ್ಣಾಯಕ ಸಮಿತಿಯಿಂದ ಒಳ್ಳೆಯದೆಂದೆಣಿಸಲ್ಪಟ್ಟ ಕವಿತೆಗಳನ್ನೂ ಸೇರಿಸಿ "ಶಿಶುಗೀತ ಸಂಗ್ರಹ" ಒಂದನ್ನು ಪ್ರಕಟಿಸುವ ವಿಚಾರವಿದ್ದು, ಆ ಕವಿತೆಗಳನ್ನು ಪ್ರಕಟಿಸುವ ಹಕ್ಕು ಸ್ನೇಹ ಪ್ರಕಾಶನಕ್ಕೆ ಸೇರಿದೆ.

ವಿದ್ಯಾರ್ಥಿಗಳಿಗಾಗಿ

ಮೇಲಿನ ಬಹುಮಾನಗಳಲ್ಲದೆ, ಪ್ರಾಥಮಿಕ ಮಾಧ್ಯಮಿಕ ಶಾಲೆಗಳಲ್ಲಿ ಉದಯವಾಗುತ್ತಿರಬಹುದಾದ ಬಾಲ ಕವಿಗಳಿಗೂ ಪ್ರತ್ಯೇಕವಾಗಿ ಪ್ರೋತ್ಸಾಹನಪರ ಬಹುಮಾನಗಳನ್ನು ಇಡಲಾಗಿದೆ. ತಾವು ವಿದ್ಯಾರ್ಥಿಗಳಾಗಿರುವ ಬಗ್ಗೆ, ತಮ್ಮ ಓರ್ವ ಶಿಕ್ಷಕ ಪ್ರಮಾಣಪತ್ರದೊಂದಿಗೆ ವಿದ್ಯಾರ್ಥಿಗಳೂ ಕವಿತೆ ಕಳಿಸಬಹುದು. ಅವರಿಗೆ ಪ್ರವೇಶಧನ ನಾಲ್ಕಾಣೆ ಮಾತ್ರ.

ವಿಳಾಸ : **ಸ್ನೇಹ ಪ್ರಕಾಶನ,**
ಶಮನೇವಾಡಿ, ಜಿ. ಬೆಳಗಾವ.

"ಮೂಲ ಶಿಕ್ಷಣ"

"ಸಮಾಜದಲ್ಲಿಯ ಸಾಮಾನ್ಯ ಜನರೊಡನೆ ದುಡಿಯುವ ಶಿಕ್ಷಕರಿಗೆ ಕೆಲವು ಸೂಚನೆಗಳು"

ಅನುವಾದಕರು : **ಶ್ರೀಮತಿ ಪಿ. ಎ. ಭಾಸ್ಕರ,** ಲೇ. ಸು. ಹೆ. ಸ. ಟ್ರೇ. ಕಾ. ಧಾರವಾಡ.

ಭಾರತದಲ್ಲಿ ಮತ್ತು ಸಂಯುಕ್ತ ಸಂಸ್ಥಾನದಲ್ಲಿ, ಜಗತ್ತಿನ ಉಳಿದ ಪ್ರಜಾರಾಜ್ಯಗಳಲ್ಲಿಯಂತೆ ಶೈಕ್ಷಣಿಕ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಗೊತ್ತುಪಡಿಸುವಲ್ಲಿ ಶಾಲೆ ಮತ್ತು ಸಮಾಜದ ಹಿರಿಯರ ಮಧ್ಯದಲ್ಲಿ ನಿಕಟ ಸಂಬಂಧವಿದೆ. ಶಾಲೆಗಳ ಬಗ್ಗೆ ಜನರ ವಿಚಾರವೇನಿದೆ? ಶಾಲೆಯ ಉದ್ದೇಶಗಳು ಸಾಂಸ್ಕೃತಿಕ ರೂಢಿಗಳಿಗೆ ಹೇಗೆ ಹೊಂದಿಸಲ್ಪಡುತ್ತವೆ. ಸಾಮಾನ್ಯ ಶಿಕ್ಷಣವು ಸಮಾಜದ ಬೇಡಿಕೆಗಳನ್ನು ಎಷ್ಟರ ಮಟ್ಟಿಗೆ ಪೂರೈಸುತ್ತದೆ. ಸಮಾಜದಲ್ಲಿ ಶಾಲೆಯ ಮೂಲ ಪಾತ್ರವು ತೀರ ಬದಲಾಗಿದೆ. ಈ ಬದಲಾವಣೆಯು ಸಂಸ್ಥೆ ಮತ್ತು ಪರಿಭಾಷೆ ಎರಡನ್ನು ಅನ್ವಯಿಸುತ್ತದೆ. ಈ ಸಮಸ್ಯೆಗಳು ಔದ್ಯೋಗಿಕವಾದವು. ಇವುಗಳನ್ನು ಸಾಮಾನ್ಯ ಜನರು ಮತ್ತು ಎಲ್ಲರೂ ಎದುರಿಸಬೇಕಾಗುತ್ತದೆ.

ಗಾರ್ಡನರ ಮರ್ಫಿ ಇವರು ತಮ್ಮ ೧೯೫೩ರ "ಜನರ ಮನಗಳಲ್ಲಿ" ಎಂಬ ಪುಸ್ತಕದಲ್ಲಿ ತಮ್ಮ "ಯುನೆಸ್ಕೊ"ದ ಕೆಲಸದ ಬಗ್ಗೆ ವರದಿಯನ್ನು ಸಾದರ ಪಡಿಸಿದ್ದಾರೆ. ಇದು ವಿಶೇಷವಾಗಿ "ಮೂಲ ಶಿಕ್ಷಣ"ದ ಬೆಳವಣಿಗೆಯ ಬಗ್ಗೆ ಇರುತ್ತದೆ. ಡಾ. ಮರ್ಫಿಯವರು ಮೂಲ ಶಿಕ್ಷಣವನ್ನು ಕೆಳಗಿನ ಉಕ್ತಿಗಳಿಂದ ತಿಳಿಸಿದ್ದಾರೆ.

ಮೂಲ ಶಿಕ್ಷಣದಲ್ಲಿ ಮೂಲ ವಿಚಾರವೆಂದರೆ ಮಗುವು ಬೆಳವಣಿಗೆಯನ್ನು ಹೊಂದಿದಂತೆ ಅವನ ಜ್ಞಾನವು ಬೆಳದಂತೆ ಮತ್ತು ಅವನ ಶಕ್ತಿಯು ಬೆಳೆದಂತೆ ಎಲ್ಲ ಗುಂಪಿನ ಕಾರ್ಯಗಳಲ್ಲಿ ಭಾಗವಹಿಸಬೇಕು. ಗುಂಪಿನೊಡನೆ ಅವನು ಬೆಳೆಯುತ್ತ ತನ್ನ ಸ್ಥಾನವನ್ನು ಗಳಿಸಿಕೊಳ್ಳಬೇಕು.

ಇದರಲ್ಲಿ ಮುಖ್ಯ ಕಾರಣವೆಂದರೆ ಜೀವನದಲ್ಲಿ ಪೂರ್ಣವಾಗಿ ಭಾಗವಹಿಸಲು ಮಕ್ಕಳನ್ನು ತಯಾರಿಸುವದು. ಅವರು ಜೀವನದಲ್ಲಿ ಭಾಗವಹಿಸುವದನ್ನು ಪ್ರಾರಂಭಿಸಲು ಸಣ್ಣವರಿದ್ದಾಗ್ಗೆ ಮತ್ತು ಉತ್ಸಾಹವಿದ್ದಾಗ್ಗೆ ಕಲಿಸುವದಕ್ಕೆ ....

ಇದರೊಡನೆ ಮೂಲ ಶಿಕ್ಷಣ ಶಾಲೆಯು ಮಗುವಿಗೆ ಸಂಬಂಧಿಸಿದ ಸಂಸ್ಕೃತಿಯ ಭಾಷೆ, ಸಾಹಿತ್ಯ, ಗಣಿತ, ಸಂಗೀತ ಮೊದಲಾದವುಗಳ ಜ್ಞಾನವನ್ನು ಕೊಡುವದು.

ಮೂಲ ಶಿಕ್ಷಣದ ವಿಚಾರದಲ್ಲಿ ಮಗುವು ತನ್ನ ಕಣ್ಣು, ಕಿವಿ, ತ್ವಚೆ, ಮೊದಲಾದವುಗಳನ್ನು ಉಪಯೋಗಿಸುವನು. ಮತ್ತು ನಿಸರ್ಗವು ನಮಗೆ ಕೊಟ್ಟ ಸಾಧನಗಳಲ್ಲಿ ಅಡಗಿದ ತತ್ವ ನಿಯಮ ಮೊದಲಾದವುಗಳನ್ನು ಜ್ಞಾನದಿಂದ ಸಂಶೋಧನೆಯಿಂದ ತಿಳಿದುಕೊಳ್ಳುವನು.

ಈ ಶಿಕ್ಷಣದ ಯೋಜನೆಯು ಕೆಲವು ಭಾಗ ವ್ಯಕ್ತಿಗೂ ಕೆಲವು ಭಾಗ ಗುಂಪಿಗೂ ಅನ್ವಯಿಸುವದು.

ಎಲ್ಲ ಮಾನವರೂ ಈ ಶೈಕ್ಷಣಿಕ ಯೋಜನೆಯಲ್ಲಿ ಬಂಧು-ಬಾಂಧವರು. ಗಾಂಧಿಜಿಯವರು ಮತ್ತು ಉಳಿದ ಮೂಲ ಶಿಕ್ಷಣದಲ್ಲಿ ನಂಬಿಗೆಯುಳ್ಳವರು ಮಾನವ ಕುಟುಂಬವು ಒಂದು ಎಂಬ ನಂಬಿಗೆಯುಳ್ಳವರು ಆದ್ದರಿಂದ ಮೂಲ ಶಿಕ್ಷಣವು ಸಾಮಾನ್ಯ ಗುಂಪುಗಳ ತಾಳ್ಮೆಗೆ ಸಂಬಂಧಿಸಿದ್ದು ಮತ್ತು ಮಾನವತೆಯ ಉಚ್ಚ ಧ್ಯೇಯಕ್ಕೆ ಸಂಬಂಧಿಸಿದ್ದು.

ಜೀವನ ಶಿಕ್ಷಣ—ಮೂಲ ಶಿಕ್ಷಣ—ಸಂಘ ಶಾಲೆ-ಈ ಎಲ್ಲ ವಿಚಾರಗಳಲ್ಲಿ ಇರುವ ಮುಖ್ಯ ತತ್ವವು ಒಂದೇ. ಮೊದಲನೆಯ ಎರಡು ಪದಗಳು ಯುನೆಸ್ಕೊ ಮತ್ತು ಭಾರತಗಳಲ್ಲಿ ಉಪಯೋಗಿಸಲ್ಪಡುತ್ತದೆ. ಮೂರನೆಯ ಪದ ಸಂಘ ಸಾಲೆಯು ಅಮೇರಿಕಾ ಮತ್ತು ಫಿಲಿಪೈನ್ಸದಲ್ಲಿ ಉಪಯೋಗಿಸಲ್ಪಡುತ್ತದೆ.

ಸಂಘ ಶಾಲೆಯಲ್ಲಿ ಮಕ್ಕಳು ಮತ್ತು ಪ್ರೌಢರು ಕಲಿಯುವಿಕೆಯ ಸಾಧನಗಳನ್ನು ಉಪಯೋಗಿಸಲು ಕಲಿತುಕೊಳ್ಳುವರು. ಇದರಿಂದ ಅವರು ತಮ್ಮ ವೈಯಕ್ತಿಕ ಇರುವಿಕೆಯನ್ನು ತಮ್ಮ ಸಂಘವನ್ನು ಇದಕ್ಕೂ ಹೆಚ್ಚಾಗಿ ತಮ್ಮ ಸಮಾಜವನ್ನು ಸುಧಾರಿಸಿಕೊಳ್ಳುವರು. ಈ ಶಾಲೆಯು ಸಮಾಜವನ್ನೇ ಕಲಿಯುವಿಕೆಯ ಪ್ರಯೋಗ ಶಾಲೆಯನ್ನಾಗಿ ಉಪಯೋಗಿಸುವದು. ಜೀವಿಕೆಯ ಸಮಸ್ಯೆಗಳು ಮತ್ತು ರೀತಿಗಳ ಸುತ್ತಲೂ ಅಭ್ಯಾಸ ಪತ್ರಿಕೆಯು ರಚಿಸಲ್ಪಟ್ಟಿರುವದು. ಪ್ರೌಢ ಶಿಕ್ಷಣಕ್ಕೆ ಈ ಶಾಲೆಯೇ ಸಮಾಜ ಕೇಂದ್ರದಂತೆ ಉಪಯೋಗಿಸಲ್ಪಡುವದು. ಈ ಶಾಲೆಯು ಉಳಿದ ಶೈಕ್ಷಣಿಕ ಸಂಸ್ಥೆಗಳೊಡನೆ ಪೂರ್ಣ ಸಹಕಾರದಿಂದ ನಡೆಯುವದು. ಮಾನವನ ಎಲ್ಲ ವ್ಯವಹಾರಗಳಲ್ಲಿ ಈ ಶಾಲೆಯು ಪ್ರಜಾತತ್ವವನ್ನು ಆಚರಿಸುವದು. ಶಾಲೆಯ ಯೋಜನೆಯಲ್ಲಿ ಮತ್ತು ಕಾರ್ಯಕ್ರಮಗಳನ್ನು ಸಿದ್ಧಪಡಿಸುವಲ್ಲಿ ಸಾಮಾನ್ಯ ಜನರನ್ನು ಕೂಡಿಸಿಕೊಳ್ಳಲಾಗುವದು.

ಕೆಳಗೆ ಕೊಟ್ಟ ಸೂಚನೆಗಳು ಹಳ್ಳಿ ಮತ್ತು ಶಹರಗಳ ಸಮಾಜಗಳಲ್ಲಿ ದುಡಿಯುವವರಿಗೆ ಸಹಾಯಕ ಮಾರ್ಗದರ್ಶಿಗಳಾಗಬಹುದು.

೧] ಯಾವಾಗಲೂ ಸ್ವಾಗತದ ವಾತಾವರಣವು ಶಾಲೆಯಲ್ಲಿರಲಿ:— ಸಾಮಾನ್ಯ ಜನರಿಗೆ ಯಾವಾಗಲೂ ಸಾಕಷ್ಟು ಆದರ ಆತಿಥ್ಯವಿರಲಿ. ಅವರನ್ನು ಮಾನವರೆಂದು ಆದರಿಸಿರಿ. ಶಿಕ್ಷಕನೆಂದು ನಿನಗೆ ಸಮಾಜದ ಹಿರಿಯರಿಂದ ಆದರವು ಬೇಕಿದ್ದರೆ ನಿನ್ನಲ್ಲಿ ಅವರ ವಿಶ್ವಾಸವಿರಲೇಬೇಕು. ಅದು ಬೇಕಿದ್ದರೆ ನೀನು ಆ ಪ್ರಕಾರದ ಜನರಂತೆ ವರ್ತಿಸಬೇಕು. ನೀನು ಶಿಕ್ಷಕನೆಂದು ಮಾತ್ರ ನಿನಗೆ ಅದು ದೊರೆಯಲಾರದು. ಪ್ರೇಮದಿಂದ ನೀನು ಅದನ್ನು ಗಳಿಸಬೇಕು.

೨] ಪಾಲಕರು ತಮ್ಮ ಮಕ್ಕಳು ಇನ್ನೂ ಹೆಚ್ಚು ಬುದ್ಧಿವಂತರಾಗಬೇಕೆಂದು ಬಯಸುತ್ತಾರೆ ಎಂಬುದು ನೆನಪಿನಲ್ಲಿರಲಿ:— ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಅದರಲ್ಲಿಯೂ ಅಮೇರಿಕೆಯ ಜನರಲ್ಲಿ ವೈಯಕ್ತಿಕ ಬೆಳವಣಿಗೆಯ ಕನಸು ಕಂಡು ಬರುತ್ತವೆ. ಪಾಲಕರು ತಮ್ಮ ಮಕ್ಕಳು ತಮ್ಮಿಂದ ದೂರ ಇದ್ದು ಶಾಲೆಯನ್ನು ಕಲಿಯಬೇಕೆಂದು ಇಚ್ಛಿಸುವದಿಲ್ಲ. ನಿಮ್ಮ ಸಂಘ ಶಾಲೆಯ ಕಾರ್ಯಕ್ರಮಗಳನ್ನು ಸಮಾಜದ ಬೇಡಿಕೆಗಳಿಗೆ ಅನುಗುಣವಾಗುವಂತೆ ರಚಿಸಿದರೆ ಪರಾಧೀನತೆಯ ಭಯವು ಕಡಿಮೆಯಾಗುವದು. ಇದನ್ನು ಮಗು ಮತ್ತು ಹಿರಿಯರು ಯೋಜನೆಯಲ್ಲಿ ಭಾಗವಹಿಸುವದರಿಂದ ಬೆಳೆಯಿಸಿಕೊಳ್ಳಬಹುದು.

೩] ನಿಜವಾದ ಸಮಸ್ಯೆಗಳನ್ನು ತೆಗೆದುಕೊಳ್ಳಿರಿ:— ಉತ್ತಮ ಪರಿಣಾಮಕ್ಕೆ ಈ ಸಮಸ್ಯೆಗಳು ಮಹತ್ವದವು. [ಅ] ಮಕ್ಕಳು ಮತ್ತು ಪಾಲಕರಿಗೆ ಸಂಬಂಧ ಉಳ್ಳವು. [ಆ] ಧ್ಯೇಯಗಳಲ್ಲಿ ವಿರೋಧಾಭಾಸವಿಲ್ಲದವು. ಆದರೆ ಪದ್ಧತಿಗಳಲ್ಲಿ ಭಿನ್ನತೆ ಇರಬಹುದು. [ಇ] ಬಿಡಿಸಲು ಬರುವಂತಹವು. [ಈ] ಮಕ್ಕಳು ಹಿರಿಯರು ಸಮಾಜದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸುವಂತಹವು. [ಉ] ತಮ್ಮ ಸಮಸ್ಯೆಗಳ ಪರಿಹಾರಕ್ಕೆ [ಬೇರೆ ಬೇರೆ] ನಿಗತಕ್ಕ ಅನುಕೂಲವಿದ್ದ ಉಪಾಯಗಳನ್ನು ಹುಡುಕುವದು.

೪] ಬೇರೆ ಬೇರೆ ಸಮಿತಿಗಳಲ್ಲಿ ಮಕ್ಕಳು ಮತ್ತು ಹಿರಿಯರು ಸಂಘಟನೆಯಿಂದ ದುಡಿಯುವಂತಿರಬೇಕು:— ಸಂಘದ ಕೆಲಸದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಒಟ್ಟು ಕೆಲಸದ ಒಂದು ಭಾಗದ ಜವಾಬ್ದಾರಿಯನ್ನು ಹೊರುವನು. ಎರಡನೆಯವರಿಂದ ಪ್ರತಿಯೊಬ್ಬನು ಯೋಜನೆಯನ್ನು

ಉತ್ತಮಗೊಳಿಸಲು ಕಲಿಯಬಹುದು. ಸಂಘದ ಒಟ್ಟು ಕಾರ್ಯದ ಪ್ರಗತಿಯೊಡನೆ ಪ್ರತಿಯೊಬ್ಬರು ಪ್ರೋತ್ಸಾಹನೆ ಹೊಂದಬಹುದು. ಕೆಲವು ಪ್ರಮುಖ ಜನರನ್ನು ಯುಕ್ತಿಯಿಂದ ಪಂಗಡಗಳಲ್ಲಿ ಸೇರಿಸಿರಿ. ಜಯವು ದೊರೆತರೆ ಅದರ ಪ್ರತಿಫಲವನ್ನು ಸಾಮಾನ್ಯ ಜನರಿಗೆ ಕೊಡಲು ಮರೆಯಬೇಡಿರಿ.

೫] ದೊಡ್ಡ ಯೋಜನೆ ಇರಲಿ; ಆದರೆ ಚಿಕ್ಕದರಿಂದ ಪ್ರಾರಂಭವಾಗಲಿ, ನಂತರ ಸಾಧ್ಯವಿದ್ದಷ್ಟು ಗತಿಯಿಂದ ಮುಂದುವರಿಸಿರಿ:— ಮುಂದುವರೆಯುತ್ತಿರುವ ಯಾವದೇ ಕಾರ್ಯಕ್ರಮವು ಸಮಪಾತಳಿಯ ಮೇಲೆ ನಿಲ್ಲಲಾರದು. ಅದು ಮುಂದುವರಿಯುವದು ಅವಶ್ಯವು; ಇಲ್ಲವಾದರೆ ಅದರಲ್ಲಿಯ ಗತಿಯು (ಆಶೆಯು) ಕುಂದುವದು. ನಿಮ್ಮ ಯಶಸ್ಸನ್ನು ಬಣ್ಣಿಸುತ್ತ ಬಹಳ ಹೊತ್ತು ತಡೆಯಬೇಡಿರಿ. ಅದರ ಬದಲು ದೊಡ್ಡ ಯೋಜನೆಗಳನ್ನು ಬೆಳೆಸಿರಿ ಮತ್ತು ಅವುಗಳಲ್ಲಿ ಹೆಚ್ಚು ಜನರನ್ನು ತೊಡಗಿಸಿರಿ. ಸಂಬಂಧಿಸಿದ ಮತ್ತು ಗತಿ ಇದ್ದ ಜನರನ್ನಷ್ಟೇ ಸೇರಿಸಿಕೊಳ್ಳುವದು ಸರಿಯಲ್ಲ ,ಎಂಬುದನ್ನು ನೆನಪಿನಲ್ಲಿಡಿರಿ. ಅವರಾದರು ಯೋಜನೆಯಲ್ಲಿ ಆಸ್ಥೆಯಿಂದ ದುಡಿಯಬೇಕು. ಹೆಚ್ಚು ಪ್ರಯತ್ನ ಮತ್ತು ಆಸ್ಥೆಗೆ ವೈಯಕ್ತಿಕ ತೃಪ್ತಿಯೇ ಕಾರಣವು.

೬] ಸಂಘವೇ ತನ್ನ ಯೋಗ್ಯ ಬೆಲೆಯನ್ನು ಕಟ್ಟಲು ಅಣಿಗೊಳಿಸಿರಿ:— ಸಹಕಾರದಿಂದ ಯೋಜನೆಯ ಪರಿಣಾಮದಲ್ಲಿ ಎಲ್ಲರೂ ಭಾಗವಹಿಸುವದರಿಂದ ಅವರೆಲ್ಲರೂ ವಿವೇಕ ಮತ್ತು ಆಸಕ್ತಿಗಳಲ್ಲಿ ಕೂಡಿ ಬೆಳೆಯಬಲ್ಲರು. ಪರಿಣಾಮಕಾರಿ ಕ್ರಮವು ನಾವು ಹೇಗೆ ಮಾಡುತ್ತೇವೆ? ಎಂಬ ವಿಚಾರದ ಸಭೆಗಳು ಮೇಲಿಂದ ಮೇಲೆ ಇಲ್ಲದಿದ್ದರೆ ಸಾಧ್ಯವಾಗಲಾರದು.

೭] ಕಾರ್ಯಕ್ರಮವು ಬೆಳೆದಂತೆ ಅದು ರಚನೆ ಮತ್ತು ಸಂಘಟನೆಯಲ್ಲಿ ಅಭಿವೃದ್ಧಿಯನ್ನು ಹೊಂದುವದೆಂಬುದು ನಿಶ್ಚಿತವಾಗಿರಲಿ:— ಕ್ರಮವಿಲ್ಲದೆ ಕಡಿಮೆ ಸಂಘಟನೆಯಿಂದ ಪ್ರಾರಂಭಿಸಿದ ಮೇಲೆ ಯೋಜನೆಯನ್ನು ಜಾಗರೂಕತೆಯಿಂದ ಅಭಿವೃದ್ಧಿಪಡಿಸಿ ಮುಂದಾಳುತನವನ್ನು ಗಳಿಸುವದು ನಿಮಗೆ ಅವಶ್ಯವೆನಿಸಬಹುದು. ಆರಂಭದಲ್ಲಿ ಪಾಲಕರ ಸಭೆಗೆ ಅಥವಾ ಸಂಘದ ಆಲೋಚನಾ ಸಭೆಗೆ ತಾತ್ಪೂರ್ತಿಕ ಚೇರಮನ್ ಮತ್ತು ಕಾರ್ಯದರ್ಶಿಗಳನ್ನು ಆರಿಸಬಹುದು. ಆದರೆ ಮುಂದೆ ಕೂಡಲೇ ಶಾಶ್ವತ ಅಧಿಕಾರಿಗಳು ಅವಶ್ಯವಾಗಬಹುದು. ಕೆಲವು ಸಲ ಸಹಕಾರಿ ಸಾಂಘಿಕ ಯೋಜನೆಯು ನಿಷ್ಫಲವಾಗುವದು ಯಾಕೆಂದರೆ ಬೆಳೆಯುತ್ತಿರುವ ಕಾರ್ಯಕ್ರಮಗಳು· ರಚನೆಯ ಆಧಾರದಲ್ಲಿ ಹೆಚ್ಚಾಗಿ ಬೆಳೆಯುವವು.

೮] ಸಂಘ ಶಾಲೆಯ ಜವಾಬ್ದಾರಿಯು ಶಾಲೆಯ ಜನರ ಮೇಲೆ ಮಾತ್ರ ಇರಲಾರದೆಂದು ನೆನಪಿನಲ್ಲಿರಲಿ:— ಸಮಾಜದಲ್ಲಿ ಪ್ರತಿಯೊಬ್ಬರು ಶಿಕ್ಷಣ ಪಡೆಯುವದು ಸಂಘ ಶಾಲೆಯ ಯೋಗ್ಯ ಕಾರ್ಯವು. ಈ ಪ್ರಕಾರದ ಸಾಂಘಿಕ ಸಹಕಾರವನ್ನು ಮುಂದುವರಿಸಲಿಕ್ಕೆ ಶಿಕ್ಷಕರು ಮುಂದಾಳತನವನ್ನು ವಹಿಸಬಹುದು. ಆದರೆ ಸಂಘ ಶಾಲೆಯು ಯಾವ ಪ್ರಕಾರದಿಂದಲೂ ಅದರ ಪ್ರದರ್ಶನಾಲಯವಲ್ಲ. ಸಮಾಜದ ಸಾಮಾನ್ಯ ಜನರ ಮುಂದಾಳತ್ವವನ್ನು ಮನಸಾ ವಹಿಸಬೇಕೆಂದು ಅವರಿಂದ ಕೇಳಲ್ಪಟ್ಟವರು ಮತ್ತು ಅವರ ಮುಂದಾಳುತನದಲ್ಲಿ ನಡೆಯಬೇಕೆಂಬುವವರು ಸರಿಯಾದ ಮುಂದಾಳುಗಳಾಗರು.

೯] ಪ್ರಗತಿಯು ಕುಂಠಿತವಾದೊಡನೆ ಧೈರ್ಯಗುಂದ ಬೇಡಿರಿ:— ನಿಜವಾದ ಸಂಘ ಶಾಲೆಯನ್ನು ಮೂರು ದಿನ ಮೂವತ್ತು ದಿನ ಅಥವಾ ಮೂರು ವರ್ಷಗಳಲ್ಲಿ ಕಟ್ಟಲಾರಿರಿ. ಶಾಲೆ ಮತ್ತು ಸಮಾಜದಲ್ಲಿ ಬಹಳ ದಿವಸಗಳಿಂದ ಒಂದ ಒಣ ಸಂಪ್ರದಾಯಗಳು ಅಚಲತ್ವವು ಕಂಡು ಬರುತ್ತದೆ. ನಡವಳಿಕೆಯು ಮರ್ಯಾದೆ ಇಲ್ಲದುದಾದರೆ ಮನಸ್ಸಿಗೆ ಪರಿಣಾಮವಾಗಲಿ ನೀವು ಇತಿಹಾಸದ ಸರಿಯಾದ ಮಾರ್ಗದಲ್ಲಿರುವಿರಿ ಎಂಬುದು ನೆನೆಪಿನಲ್ಲಿರಲಿ. ಅಲ್ಲದೆ ಸಾವಿರಾರು ಶಿಕ್ಷಕ ಬಂಧುಗಳು ಇದೇ ದಿಶೆಯಲ್ಲಿ ದುಡಿಯುತ್ತಿರುವರೆಂಬುದನ್ನು ನೆನಪಿನಲ್ಲಿಡಿರಿ.

೧೦] ಕೊನೆಯದಾಗಿ ವ್ಯಕ್ತಿ ಶಿಕ್ಷಕನ ಸತ್ವಯುತ ಮಹತ್ವವನ್ನು ಮರೆಯಬೇಡಿರಿ:— ಎಷ್ಟೇ ಸುಸಜ್ಜಿತವಾದ ಯಾವದೇ ಶಾಲೆಯು ಶಿಕ್ಷಕರಿಗಿಂತ ಶ್ರೇಷ್ಠವಾಗಲಾರದು. ಹಳ್ಳಿಯಲ್ಲಿಯ ಒಂದೇ ಕೋಣೆಯಲ್ಲಿ ಬುದ್ಧಿವಂತ ತ್ಯಾಗಿ ಶಿಕ್ಷಕನಿಂದ ಕಲಿಸಲ್ಪಟ್ಟ ವಿದ್ಯಾರ್ಥಿಯು ಉತ್ತಮವಾಗುವನು. ಆದರೆ ಅನೇಕ ಕೋಣೆಗಳುಳ್ಳ, ಶಹರ ಶಾಲೆಯಲ್ಲಿಯ ಘಂಟೆಯನ್ನು ನಿರೀಕ್ಷಿಸುವ, ಅನೇಕ ಶಿಕ್ಷಕರುಳ್ಳ ಶಾಲೆಯಲ್ಲಿಯ ವಿದ್ಯಾರ್ಥಿಯು ಅಷ್ಟು ಉತ್ತಮವಾಗಲಾರನು.

ಸಂಘ ಶಾಲೆಯ ವಿಚಾರವು ಜೀವನ ಶಿಕ್ಷಣವು ಶೈಕ್ಷಣಿಕ ಪ್ರಗತಿಯಲ್ಲಿ ಒಪ್ಪಿಕೊಂಡ ಪ್ರಕಾರವು, ಈ ವಿಶಾಲ ವಿಧಾನವನ್ನು ಸ್ಥಾನಿಕ ಪರಿಣಾಮಕಾರಿ ಕಾರ್ಯಕ್ರಮಗಳಿಗೆ ಅನುಗುಣವಾಗುವಂತೆ ಪರಿವರ್ತಿಸಿಕೊಳ್ಳು

ವದು ನಮ್ಮ ಕಾಲದ ಶೈಕ್ಷಣಿಕ ಮುಂದಾಳುಗಳಿಗೆ ಬಿಟ್ಟ ವಿಷಯವು.

ಕಡಬನ್ನು ತಿನ್ನುವದರಿಂದ ಅದರ ಪರಿಣಾಮವು ತಿಳಿಯುವದೇ ಹೊರತು ಅದನ್ನು ತಯಾರಿಸಲು ಅನುಸರಿಸಿದ ಪಟ್ಟಿಯಿಂದ ತಿಳಿಯಲಾರದು. ಈ ಹಳ್ಳಿಯ ಶಾಲೆಯ ಯೋಜನೆಯ ಸಫಲತೆಯೂ ಅಥವಾ ನಿಷ್ಫಲತೆಯೂ ಅಂದಾಜು 'ಕೆಂಚೂಕಿ' ಎಂಬಲ್ಲಿ ಯಸುಧಾರಿಸಿದ ಶಾಲೆಯ ಅಳತೆಗೋಲಿನಿಂದ ಮಾಡಲ್ಪಡುವದು. ೧೯೫೭ರಲ್ಲಿ ಇದ್ದುದಕ್ಕಿಂತ ಐದು ಹತ್ತು ವರ್ಷಗಳ ನಂತರ ಈ ಶಾಲೆ ಮತ್ತು ಸಮಾಜಗಳಲ್ಲಿ ಎಷ್ಟು ಅಂತರವ್ಯತ್ಯಾಸ ಬರುವದು ಎಂಬುದನ್ನು ನೋಡುವದು ಬಹು ಮಾರ್ಮಿಕವಾದುದು.

ಜೀವನ ಶಿಕ್ಷಣ ಪ್ರಪಂಚದಲ್ಲಿ

ಹೊಳೆಮಣ್ಣೂರ– (ತಾ. ರೋಣ) ದಿ. ೧೫–೭–೫೭ರಂದು ಶ್ರೀ ಲ. ಬ. ಅಬ್ಬಿಗೇರಿ ಮಾಸ್ತರರು ನೌಕರಿಯಿಂದ ನಿವೃತ್ತರಾದ ಬಗ್ಗೆ ಸಭೆ ಸೇರಿತ್ತು. ಇವರು ತಮ್ಮ ಸೇವೆಯನ್ನು ತನುಮನದಿಂದ ಸಲ್ಲಿಸಿದ್ದಾರೆ. ಅವರು ಉಳಿದ ಶಿಕ್ಷಕರಿಗೆ, ನೀವೂ ನಿಮ್ಮ ಸೇವೆಯನ್ನು ತನುಮನದಿಂದ ಸಲ್ಲಿಸಿರಿ ಎಂದು ಹೇಳಿದರು.

ರತನಹಳ್ಳಿ– (ಜಿ. ವಿಜಾಪೂರ) ದಿ. ೧೩ರಂದು ಎ. ಡಿ. ಆಯ್. ಶ್ರೀ ವ್ಹಿ. ಸಿ. ಚಿಕ್ಕೋಡಿ ಬಿಜಾಪೂರ ಮತ್ತು ಶ್ರೀ ಜಿ. ಜ. ಪತಕೆ ಇವರ ಹಿರಿತನದಲ್ಲಿ ವಿದ್ಯಾರ್ಥಿಗಳಿಂದ ಪ್ರಕಟವಾದ ಇದೇ ಸಂಪ್ರಥಮ ಪ್ರಥಮ ಸಂಚಿಕೆ "ಘೋಷಣ" ಎಂಬ ಕೈಬರಹ ಮಾಸಪತ್ರಿಕೆಯು ಬೆಳಕು ಕಂಡಿತು.

ಹಮ್ಮಿಗಿ– (ಪೇಠಾ: ಮುಂಡರಗಿ) ದಿ. ೨೧–೭–೫೭ರಂದು ಇಲ್ಲಿಯ ಶಾಲಾ ಹೆ.ಮಾಸ್ತರವರ ನೇತೃತ್ವದಲ್ಲಿ ಕ್ರೀಡಾ ಮಹೋತ್ಸವವನ್ನು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಆಸ್ಥೆಯಿಂದ ಭಾಗವಹಿಸಿ ನೇರವೇರಿಸಿದರು. ಆ ಊರ ಶ್ರೀ ಉಟೋಜಿ ಮಾರವಾಡೆ ಇವರು ವಿ. ಮತ್ತು ಶಿಕ್ಷಕರಿಗೆ ಅನ್ನಸಂತರ್ಪಣೆ ಮಾಡಿದರು.

ಗಳತಗಿ– (ಚಿಕ್ಕೋಡಿ) ದಿ. ೨೧–೭–೧೯೫೭ರಂದು ಡೆ. ಎ. ಇ. ಮಿ. ಬಿ. ಬಿ. ಶೇಖ, ಬೆಳಗಾಂವ ಇವರ ಹಿರಿತನದಲ್ಲಿ ಶಿಕ್ಷಕರ ಗ್ರುಪ್ ಸ್ನೇಹ ಸಮ್ಮೇಲನದ ಉದ್ಘಾಟನ ನಡೆಯಿತು. ಮಿ. ಶೇಖರವರು ಹಳೆ, ಹೊಸ, ಶಿಕ್ಷಣ ಕ್ರಮದ ವಿಸ್ತೃತ ವಿವರಣೆ ಮಾಡಿದರು. ಮಿ. ಕು. ಖೋತ, ಅ. ಡೆ. ಎ. ಇ. ಬೆಳಗಾಂವ ಇವರು ಶತಸಾಂವತ್ಸರಿಕ ಮಹೋತ್ಸವವನ್ನು ಆಚರಿಸುವ ಬಗೆಯನ್ನು ಹೇಳಿದರು. ಮಿ. ವಿ. ಹಿರೇಮಠರು ಶೈಕ್ಷಣಿಕ ಪರಿಶೀಲನೆ ಬಗ್ಗೆ ಮಾತನಾಡಿದರು. ಮಿ. ಮೇಸ್ತ್ರಿ, ಅ. ಡೆ. ಎ. ಇ. ಬೆಳಗಾಂವ ಇವರು ಅನಿಯಮಿತ ವಿದ್ಯಾರ್ಥಿಗಳ ಬಗ್ಗೆ ಶಿಕ್ಷಕರು ಯಾವ ರೀತಿಯಿಂದ ಕಾಳಜಿ ವಹಿಸಬೇಕೆಂಬುದನ್ನು ಹೇಳಿದರು.

ಕನ್ನೂರ– ದಿ. ೧೯–೭–೫೭ನೇ ದಿವಸ ಭಾ. ದೇಶಪಾಂಡೆ, ಮುಖ್ಯ ಗುರು ಕನ್ನೂರ ಇವರ ಕಾಖಂಡಕಿ ಶಾಲೆಗೆ ವರ್ಗಾಯಿಸಿದ್ದರಿಂದ ಸಯವರನ್ನು ಬೀಳ್ಕೊಡಲು ಶ್ರೀ ಮ. ನಿ. ಪ್ರ. ಗುರೇಪ್ಪಾ ಪಟ್ಟದ ದೇವರು ಇವರ ಅಧ್ಯಕ್ಷತೆಯ ಸಮಾರಂಭ ನೆರವೇರಿತು.

ಕೊಡಗಾನೂರ– (ತಾ. ಮುದ್ದೇಬಿಹಾಳ) ೨೧–೭–೫೭ರಂದು ಗುರುಗಳ ಸೀಮಾ ಸಮ್ಮೇಲನ ಇಲ್ಲಿಯ ಶಿಕ್ಷಣಾಧಿಕಾರಿಗಳಾದ ಶ್ರೀ ಪಾವಟೆ ಚೆನ್ನನವರು ಇವರ ಅಧ್ಯಕ್ಷತೆಯಲ್ಲಿ, ಕರೆಯಲಾಗಿ ಬಾಲಕರು ಹೆಚ್ಚಾಗಿ ಶಾಲೆಗೆ ಬರುವ ಯೋಜನೆ ಬಗ್ಗೆ ಚರ್ಚೆಯಾಯಿತು.

ಗೋಪನಕೊಪ್ಪ– ದಿ. ೩೧–೭–೫೭ರಂದು ಶಾಲೆಯಿಂದ ೧೯೫೬ರಲ್ಲಿ ಮುಲ್ಕೀಪರೀಕ್ಷೆಯಲ್ಲಿ ಒಂದನೆಯ ನಂಬರು ಪಡೆದ ಕು. ಫ. ಯ. ಮಾದರ ಮತ್ತು ಕಲಿಸಿದ ಗುರುಗಳಾದ ಶ್ರೀ ಸಿ.ಭೀ. ಗಾಯದ ಇವರಿಗೆ ಸ್ಕೂಲ ಬೋರ್ಡಿನವರಿಟ್ಟ ಪಾರಿತೋಷಕವನ್ನು ರೂ.ಗಳಂತೆ, ಸ್ಕೂ. ಬೋ. ಚೇರಮನ್ ಶ್ರೀ ಸಿ. ಕುಲಕರ್ಣಿ ಇವರ ಅಧ್ಯಕ್ಷತೆಯಲ್ಲಿ ಶಿಕ್ಷಣ ಶಾಖೆ ಡಾಯರೆಕ್ಟರರಾದ ಶ್ರೀ ಮಾನ್ಯ ಎಸ್. ವ್ಹಿ. ಜೇಸ್ ಇವರ [illegible]

ಜಮಖಂಡಿ– ದಿ. ೨೫–೭–೫೭ರಂದು ಇಲ್ಲಿಯ ಕಾರಿ ಟ್ರೇನಿಂಗ ಕಾಲೇಜದಲ್ಲಿ ಎಂಟನೆಯ ಮಹೋ ೯ ಹಾಗೂ ವನ್ಯ ಪಶುಗಳ ರಕ್ಷಣೆಯ ಉತ್ಸವ, ಎರಡೂ ದಿನಾಚರಣೆಗಳು ಶ್ರೀಮಾನ್ಯ ಪಿ. ಎ. ಶಿಸಾಗರ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಅಧ್ಯ ು ಸದರಿ ದಿನಾಚರಣೆಗಳ ಮಹತ್ವವನ್ನೂ ಪ್ರಗತಿ ನ್ನು ಹೇಗೆ ಸಾಧಿಸಬೇಕೆಂಬದನ್ನು ತಿಳಿಸಿದರು.

ಜೀರಗಾಳ–ಈ ಗ್ರಾಮದಲ್ಲಿ ಶ್ರೀ ಸಂಗಮೇಶ್ವರ ಚನಾಲಯವನ್ನು ಸ್ಥಾಪಿಸಲೋಸುಗ ಕೆಳ ೩ ಮಹನೀಯರು ರೂಪಾಯಿಗಳನ್ನು ದೇಣಿಗೆ ಡಲು ವಾಗ್ದಾನ ಮಾಡಿರುವರು.

ರೂಪಾಯಿಗಳಂತೆ ದೇಣಿಗೆಕೊಡಲು ವಾಗ್ದಾನ ಾಡಿದವರು:–

ಶ್ರೀಗಳಾದ ಆರ್. ವಿ. ಪಾಟೀಲ, ಬಿ. ಎಲ್. ಸ್ಥಂ, ಎಚ್. ಎಸ್. ಹಲಗಲಿ, ಎಮ್. ಬಿ. ಜಮಾ ರ, ಬಿ. ಎಸ್. ಮುರಿಗೆಪ್ಪಗೋಳ, ಬಿ. ಎಸ್. ಠವ, ಎ. ಎಚ್. ರಡ್ಡಿ, ಕೆ. ಸಿ. ಮಠಪತಿ.

ರೂಪಾಯಿಗಳಂತೆ ಕೊಡಲು ವಾಗ್ದಾನ ಾಡಿದವರು:–

ಶ್ರೀಗಳಾದ ಆರ್. ಎಚ್. ಲಕಂ, ಎ. ಎ. ಜಾ ಾದಾರ, ಎಚ್. ಎಚ್. ಮೆಳ್ಳಿಗೇರಿ, ಎಲ್. ಆರ್. ಾಜಾ, ಎಮ್. ಎಮ್. ಜಾಮದಾರ, ಆರ್. ಎಚ್. ೀೇರ, ವ್ಹಿ. ಟಿ ರಡ್ಡಿ, ಆರ್. ಬಿ. ಲಕ್ಕ, ಇದಲ್ಲದೆ ್ನತರು ನೂರು ರೂಪಾಯಿ ಮೇಲ್ಪಟ್ಟು ಕೊಡಿಸಿ ಡುತ್ತೇವೆ ಎಂದು ವಾಗ್ದಾನ ಮಾಡಿರುವರು.

ಗುಂಡಕನಾಳ– (ತಾ. ಮುದ್ದೇಬಿಹಾಳ) ದಿ. –೭–೫೭ರಂದು ಶಿಕ್ಷಣಾಧಿಕಾರಿಗಳಾದ ಶ್ರೀ ಪಾವಟೆ ನ್ನಪ್ಪನವರು ಇವರ ನೇತೃತ್ವದಲ್ಲಿ ಶ್ರೀ ಬಸವೇಶ್ವರ ಚನಾಲಯ ಸ್ಥಾಪಿಸಲ್ಪಟ್ಟಿತು. ಸದರಿ ವಾಚನಾ ಯಕ್ಕೆ ಸಹಾಯ ನೀಡಿದ ಮಹನೀಯರ ಹೆಸರುಗಳು ಗಿನಂತಿವೆ—

ರೂ.ಗಳ ದೇಣಿಗೆ ಕೊಟ್ಟವರು

ಶ್ರೀಗಳಾದ ಎಮ್. ಬಿ. ಹಿರೇಮಠ, ಜಿ. ಸ್. ಪಾಟೀಲ, ಎಸ್. ಎಚ್. ಲಕ್ಕುಂಡಿ; . ಎಮ್. ಪಾಟೀಲ, ಪಿ. ಎಸ್. ಹೊಸಮನಿ.

೪ ರೂ.ಗಳ ದೇಣಿಗೆ ಕೊಟ್ಟವರು.

ಶ್ರೀಗಳಾದ ಜಿ. ಎಸ್. ಸಾವರದ, ಎಸ್. ಎಸ್. ಗಬಸಾವಳಗಿ, ಎಸ್. ಬಿ. ಮೇಟಿ, ಸಿ. ಬಿ. ಮಠ ಗುರೂಜಿ

೨ ರೂ.ಗಳ ದೇಣಿಗೆ ಕೊಟ್ಟವರು

ಶ್ರೀಗಳಾದ ಎಸ್. ವ್ಹಿ. ಬಾಣ್ಣಾಳ, ಸಿ. ಬಿ. ಸಾವ ರದ, ಎ. ಎಮ್. ಬಿರಾದಾರ, ಬಿ. ಎಸ್. ಬಿರಾದಾರ ಎಮ್. ಜಿ. ಬಿರಾದಾರ, ಎಮ್. ಎಸ್. ಬಿರಾದಾರ

೧ ರೂ. ದೇಣಿಗೆ ಕೊಟ್ಟವರು

ಶ್ರೀಗಳಾದ ಎಸ್. ಎ. ತಳವಾರಗೇರಿಮಠ, ಟಿ. ಎಸ್. ಬಿರಾದಾರ, ಎಚ್.ಎಸ್. ಬಿರಾದಾರ, ಡಿ ಎಸ್. ಮೇಟಿ, ಡಿ.ಎಚ್. ಹುನಕುಂಟಿ. ಅಂತೂ ೫೮ ರೂ.ಗಳು

ಬಂಕಾಪುರ– ದಿ. ೨೬–೭–೫೭ರಂದು ಕ. ಗಂ. ಶಾಲೆಯಲ್ಲಿ ಗ್ರೂಪ ಶಿಕ್ಷಕ–ಶಿಕ್ಷಕಿಯರ ಸಭೆಯು ಎ. ಡಿ. ಇ ಆಯ್. ಶ್ರೀ ಆರ್. ಎಚ್. ಕುಲಕರ್ಣಿ ಧಾರ ವಾಡ ಇವರ ಹಿರಿಯತನದಲ್ಲಿ ಜರಗಿ "ಸಾಂಸ್ಕೃತಿಕ" ಚಟುವಟಿಕೆಗಳ ವಿಷಯದ ಬಗ್ಗೆ ಚರ್ಚೆಯಾಯಿತು.

ನಾಗಠಾಣ– ಕ. ಗಂ. ಶಾಲೆಯಲ್ಲಿ ದಿ. ೨೭–೭–೫೭ರಂದು ಬಾಲಬಾಲಕಿಯರಲ್ಲಿ ಸಮಾಜ ಪೋಷಕರು, ಬುದ್ಧಿಜೀವಿಗಳೋ–ಶ್ರಮಜೀವಿಗಳೋ ಎಂಬ ವಿಷ ಯದ ಬಗ್ಗೆ ಚರ್ಚಾಕೂಟ ನಡೆಯಿತು. ಇದರಲ್ಲಿ ಬುದ್ಧಿಜೀವಿಗಳೇ ಸಮಾಜ ಪೋಷಕರೆಂದು ಬಹು ಮತದಿಂದ ಪಾಸಾಯಿತು

ಗೋವನಕೊಪ್ಪ– ಜೀವನ ಶಿಕ್ಷಣ ಶಾಲೆಯ ಉಪಗುರುಗಳಾದ ಸಿ. ಕ ಕಲ್ಲೊಳ್ಳಿ ಇವರಿಗೆ ಹಾನಾ ಪೂರ ಶಾಲೆಗೆ ವರ್ಗವಾದ ನಿಮಿತ್ತವಾಗಿ ಅವರನ್ನು ಬೀಳ್ಕೊಡುವ ಸಮಾರಂಭವು ದಿ. ೩೦–೭–೫೭ರಂದು ಶ್ರೀ ಎಮ್. ಎಸ್. ಮಾಳವಾಡ ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ಕಾಳೀಕೋಟೆ– ದಿನಾಂಕ ೩೦–೭–೫೭ರಂದು ಇಲ್ಲಿಯ ಸ್ಥಾನಿಕ ಎಲ್ಲ ಶಾಲೆಯ ಗುರುಗಳೂ ಬಾಲಕ ಬಾಲಕಿಯರೂ ಕೂಡಿ "ಸಾಂಸ್ಕೃತಿಕ" ಚಟುವಟಿಕೆ ಯನ್ನು ಶ್ರೀಮಾನ್ ಸಜ್ಜನ ಪ್ರಾ. ಚೇರಮನ್ ಡಿ. ಸ. ಬಿ. ಇವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು.

ಕೆರಗುಪ್ಪಿಯಲ್ಲಾಪೂರ– ದಿ. ೨೯–೭–೫೭ ರಂದು ಇಲ್ಲಿಯ ಜೀ. ಶಿ. ಶಾಲೆಯ ಗುರುಗಳೂ ಬಾಲ ಕರೂ ಕೂಡಿ ಶಿಕ್ಷಣಾಧಿಕಾರಿಗಳಾದ ಶ್ರೀ ರೋಹಿಡೇಕರ

ಇವರ ನೇತೃತ್ವದಲ್ಲಿ ಮತ್ತು ಅವರ ಅಮೃತ ಹಸ್ತದಿಂದ ಈ ವರ್ಷದ ವನಮಹೋತ್ಸವವನ್ನು ಜರುಗಿಸಲಾಯಿತು.

ಲಕ್ಷ್ಮೇಶ್ವರ– ದಿ. ೨೭–೭–೫೭ರಂದು ಜೀ. ಶಿ. ಶಾಲೆಯಲ್ಲಿ ಶ್ರೀ ಗಾಡಗೀಳ ವಕೀಲರ ಅಧ್ಯಕ್ಷತೆಯಲ್ಲಿ ವನಮಹೋತ್ಸವ ಸಮಾರಂಭವು ಜರುಗಿಸಲ್ಪಟ್ಟಿತು. ಈ ಸಭೆಯಲ್ಲಿ ವನಸ್ಪತಿಗಳ ರಕ್ಷಣೆಯ ಕೆಲಸವು ಮುಖ್ಯವಾದದ್ದು ಎಂಬ ನಿರ್ಣಯ ಸ್ವೀಕರಿಸಲ್ಪಟ್ಟಿತು.

ಯರಗಲ್ಲ– (ತಾಲೂಕ–ಸಿಂದಗಿ) ದಿ. ೧–೮–೫೭ ರಂದು ಈ ಊರ ಶಾಲೆಯ ಆವಾರದಲ್ಲಿ ಮಾನ್ಯ ಎಸ್. ರಾಮನಾಥನ್ ಜಿಲ್ಹಾಧಿಕಾರಿಗಳು ಇವರ ಅಮೃತ ಹಸ್ತದಿಂದ ಗಿಡನೆಡುವ ಸಮಾರಂಭವು ಜರುಗಿಸಲ್ಪಟ್ಟಿತು.

ಯಂಡಿಗೇರಿ– (ತಾ| ಬದಾಮಿ) ದಿ. ೨೭–೭–೫೭ ರಂದು ಕ. ಗಂ. ಶಾಲೆಯಲ್ಲಿ ಇಲ್ಲಿಯ ಭಾಗದ ಬೀಟ ಆಫೀಸರರಾದ ಶ್ರೀ ವಾಯ್. ಡಿ. ಉಣಕಲ್ಲ ಇವರ ನೇತೃತ್ವದಲ್ಲಿ ವನಮಹೋತ್ಸವವು ಜರುಗಿಸಲ್ಪಟ್ಟಿತು.

ಜಮಖಂಡಿ– ೨೭ ರಂದು ಇಲ್ಲಿಯ ಸ. ಪ ಶಾಲೆಯಲ್ಲಿ ಶ್ರೀ ಎಮ್. ಬಿ. ಹಿರೇಮಠ ಇವರ ಹ ದಿಂದ ಸಸಿ ನೆಡುವ ಕಾರ್ಯಕ್ರಮವು ಜರುಗಿಸಲ್ಪಟ್ಟಿ

ಕಾಕೋಳ– ಈ ಶಾಲೆಯ ವನಮಹೋತ್ಸ ಶಿಕ್ಷಕ ಹಾಗೂ ವಿದ್ಯಾರ್ಥಿಗಳಿಂದ ಯಶಸ್ವಿಯಾಗಿ ಜರು ಲ್ಪಟ್ಟಿತು. ಇದೇ ಎಪ್ರೀಲ ತಿಂಗಳಲ್ಲಿ ಜರುಗಿದ ಪಿ. ಎ ಸಿ. ಸರ್ಟಿಫಿಕೇಟುಗಳನ್ನು ಶ್ರೀ ಎಸ್. ಕೊಂಬಳಿ ಇ ಹಸ್ತದಿಂದ ಹಂಚಲಾಯಿತು.

ಭಗತವಾಡ– ೨೩. ಜಿ. ಶಿ. ಶಾಲೆಯಲ್ಲಿ ಗು. ಶ್ರೀ ಬಿ. ಎ. ನಾಯಕ ಇವರ ಹಿರಿತನದಲ್ಲಿ ಲೋ ಮಾನ್ಯ ತಿಲಕರ ಜಯಂತಿಯನ್ನು ಆಚರಿಸಲಾಯಿತು

ಕೊಲ್ಹಾರ– ಈ ವರ್ಷ ನಮ್ಮ ಶಾಲೆ ನಾಗಚವತಿಯ ದಿವಸ ಸರಸ್ವತಿಯ ಪೂಜೆಯನ್ನು ಒ ಸಡಗರದಿಂದ ಆಚರಿಸಲಾಯಿತು. ಈ ದಿನ ಇಷ್ಟೊ ಭಕ್ತಿಯಿಂದ ಸರಸ್ವತಿಯನ್ನು ಏಕೆ ಪೂಜಿಸಬೇಕ ದನ್ನು ಅಂದಿನ ಸಭೆಯಲ್ಲಿ ಮಕ್ಕಳಿಗೆ ಸಾಕಷ್ಟು ಪರಿಚ ಮಾಡಿ ಕೊಟ್ಟದ್ದಾಯಿತು.

೧೯೫೭ನೇ ಎಪ್ರಿಲದಲ್ಲಿ ಜರುಗಿದ ಪ್ರಾ. ಶಾ. ಪ್ರ. ಪ. ಪರೀಕ್ಷೆಯಲ್ಲಿ ಯಶಸ್ಸುಗಳಿಸಿದ ಶಾಲೆಯ ಊರಗಳ ಪರಿಣಾಮ

ಶಾಲೆಯ ಊರ ಹೆಸರು	ಕಳಿತವರ ಸಂಖ್ಯೆ	ಪಾಸಾದ ಸಂಖ್ಯೆ	ಕಲಿಸಿದ ಗುರುಗಳ ಹೆಸರು
ಉರ್ದು ಗರ್ಲಸ್ಕೂಲ ನಂ. ೧ ಬಾಗಲಕೋಟ	೭	೬	ಎಚ್. ಎಮ್. ವಿಜಾಪೂರಕರ ವ. ಗು.
ಕ. ಗಂ. ಶಾಲೆ ಮಳಗಿ (ಕಾರವಾರ)	೫	೪	ಲ. ರ. ಕಾಮತ
,, ಗೋಪನಕೊಪ್ಪ	೧೧	೯	ಸಿ. ಛೀ. ಗಾಯದ
,, ರಡ್ಡೇರತಿಮ್ಮಾಪೂರ	೧೨	೯	ಚ. ಬ. ಬಿರಾದಾರ

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ರ್ಣ ಸಂಧಿ! ಸಚಿತ್ರ ಗ್ರಂಥ !! ಸುಂದರ ಮುದ್ರಣ !!!

"ಶಿಕ್ಷಣ-ಶಿಕ್ಷಕ-ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-ಮನ ುವಂಥ, **ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂದ, ಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟಕ ವಿದ್ಯಾಲಯದ ಉಪ ಕುಲಪತಿಗಳಾದ ರ್‍ಯಾಂಗ್ಲರ್ ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆದಂಥ, ೇಷ ಗ್ರಂಥ.**

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿಯರ ಬಣ್ಣಗಳಲ್ಲಿ ೪೧ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ ಅಮರ ಸಾಹಿತ್ಯ ಗ್ರಂಥ. **ದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.**

ದಿ. ೧೫ ಆಗಸ್ಟ ೫೭ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ ಅಧ್ಯಕ್ಷತೆ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ

ವಿವರಗಳಿಗೆ ಇಂದೇ ಈಗಲೇ ಬರೆಯಿರಿ ಪ್ರೋತ್ಸಾಹನೆ ಕೊಡಿರಿ.

ಪ್ರತಿ ೩ ರೂ.] ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್. [ಸುಂದರ ಪ್ರತಿ ೪ ರೂ

ವಿಳಾಸ :- ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಿಕೋಟಾ, ಜಿಲ್ಲಾ:— ವಿಜಾಪುರ.

ಸುಬೋಧ ಹಿಂದೀ ಕನ್ನಡ ವ್ಯಾಕರಣ

● ★ ●

ಇದನ್ನು ಬರೆದವರು ಹಿಂದೀ ಕ್ಷೇತ್ರದಲ್ಲಿ ಹೆಸರು ಪಡೆದ **ಶ್ರೀ ಗುರುನಾಥ ಜೋಶಿ** ಅವರು. ತಮ್ಮ ಆಳವಾದ ದಿಂದ ಅಲ್ಲಲ್ಲಿ ಕನ್ನಡ ವ್ಯಾಕರಣಕ್ಕೆ ಹೋಲಿಸಿ ಸುಲಭ ಭಾಷೆಯಲ್ಲಿ ಸರ್ವರಿಗೂ ತಿಳಿಯುವಂತೆ ಬರೆದಿದ್ದಾರೆ. ಲ್ಲಿ ಕೇವಲ ವ್ಯಾಕರಣದ ನಿಯಮಗಳು ಇರದೆ ಹಿಂದೀಯಿಂದ ಕನ್ನಡಕ್ಕೂ ಕನ್ನಡದಿಂದ ಹಿಂದೀಗೂ ಂತರ ಮಾಡುವದಕ್ಕೆ ವಾಕ್ಯಗಳೂ ಕೊಡಲ್ಪಟ್ಟಿವೆ. ಇದರಿಂದ ಕಲಿಯಬಯಸುವವರೆಲ್ಲರೂ ಸುಲಭವಾಗಿ ಯನ್ನು ಕಲಿಯಬಹುದಾಗಿದೆ. ಈ ಪುಸ್ತಕವನ್ನು ಕನ್ನಡದ ಸುಪ್ರಸಿದ್ಧ ಸಾಹಿತಿಗಳಾದ, **ಪ್ರಿನ್ಸಿಪಾಲ ಕೆ. ಗೋಕಾಕ ಅವರು ಸ್ವಾಗತಿಸಿದ್ದಾರೆ.** ಇಂದೇ ಇದನ್ನು ತರಿಸಿಕೊಂಡು ಹಿಂದೀಯನ್ನು ಕಲಿಯಿರಿ. ನೂರಾ ಹನ್ನೆರಡು ಪುಟಗಳು! ಬೆಲೆ ಕೇವಲ ೧೪ ಆಣೆ. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ನು !

ಕೆಳಗಿನ ಪತ್ತೆಗೆ ಬರೆಯಿರಿ.

ಕನ್ನಡ ಸಾಹಿತ್ಯ ಪ್ರಕಾಶನ, ಧಾರವಾಡ.

ಶ್ರೀ ಅರವಿಂದ ಪ್ರಭಾವಿತೆಯೂ ಶ್ರೀ ತಾಯಿಯವರ ಪ್ರಾಸಾದಿಕತೆಯೂ ಒಂದೆಡೆಗೆ ತೋರುವ ಪವಿತ್ರ ಸಾಹಿತ್ಯದಿಂದ

ವಾಚನಾಲಯದ ಬೆಲೆ ಹೆಚ್ಚಿಸಬೇಡವೇ ?

ಹಾಗಿದ್ದರೆ, ಕೆಳಗೆ ಕಾಣಿಸಿದ ಪುಸ್ತಕಗಳನ್ನು ತರಿಸಿಕೊಳ್ಳಿರಿ.

೧.	ನನ್ನನಲ್ಲ (ಅಂತರ್ಮುಖಗೊಳಿಸುವ ದಿ. ಮಧುರಚೆನ್ನರ ಸಮಗ್ರ ಕವನ ಸಂಗ್ರಹ	೧-೧೨
೨.	ಆತ್ಮಸಂಶೋಧನ (ದಿ. ಮ.ಧ.ರಚೆನ್ನರ ಜೀವನದ ಕಲಶಪ್ರಾಯದ ಪ್ರಾಂಜಲ ಸಾಹಿತ್ಯ)	೧- ೮
೩.	ಪವಿತ್ರ ಜೀವನ (ಹೊಸಕಾಲದ ಋಷಿ ಟಾಲಸ್ಟಾಯರ ಕಥಾಸಂಕಲನ)	೧- ೨
೪.	ಸುಂದರ ಕಥೆಗಳು (ಮಕ್ಕಳಿಗೂ ಮಕ್ಕಳಂಥವರಿಗೂ ಶ್ರೀ ತಾಯಿಯವರು ಹೇಳಿದುವು)	೧- ೪
೫.	ಶ್ರೀ ಅರವಿಂದರು (ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ)	೧- ೮
೬.	ಶ್ರೀ ಅರವಿಂದರ ಪತ್ರಗಳು (ಪೂರ್ಣಜೀವನದ ಸಿರಿಮೊಳಕೆ)	೦- ೮
೭.	ಸ್ವರ್ಗದೋಲೆಗಳು (ಕನ್ನಡಿಗರ ಕೈಗೆ ಬಂದ ಸಾಂಸ್ಕೃತಿಕ ಕನ್ನಡಿ)	೧- ೮
೮.	ಮುಗಿಲ ಜೇನು (ಮಿಂಚಿನ ಶಲಾಖೆಯಂಥ ಕವನ ಸಂಕಲನ)	೧- ೩
೯.	ಸಪ್ತಪದಿ (ವಿದ್ಯಾರ್ಥಿಗಳ ಮೆಚ್ಚಿಕೆಯ ಏಕಾಂಕಗಳು)	೧- ೪
೧೦.	ಭಾರತದ ಭವ್ಯಸಿದ್ಧತೆ (ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ)	೧- ೦
೧೧.	ಬೆಟ್ಟದ ಹೊಳೆ (ಜೀವನ ಪ್ರಬೋಧಕವಾದ ಕಾದಂಬರಿ)	೧- ೪
೧೨.	ಗರತಿಯ ಬಾಳು (ಹೆಣ್ಣಿನ ಮಾಯೆಯಲ್ಲಿ ಕಪಿಲ ಸಿದ್ಧಮಲ್ಲಿಕಾರ್ಜುನ)	೧- ೪
೧೩.	ಬಾಳಬಟ್ಟೆ (ಆಧುನಿಕ ಬಾಳಿನ ಬಂಡಾಟಕ್ಕೆ ಚಿಕಿತ್ಸೆ)	೧- ೮
೧೪.	ಪೂಜಾ (ಅತೀಂದ್ರಿಯ ಜಾಗ್ರತಿಯ ಮಿಸುಕು)	೦-೧೨
೧೫.	ಜೀವನ ದೃಷ್ಟಿ (ಭವ್ಯ ಬದುಕಿನ ಜೊಕ್ಕಸ)	೧- ೨
೧೬.	ಕನ್ನಡ ಕುಲದೀಪ ಬಸವಣ್ಣ (ಹಿಡಿದರೆ ಹಿಡಿಕೆಯಲ್ಲಿ ಬಿಟ್ಟರೆ ಮನೆತುಂಬ)	೧- ೦

ಕನ್ನಡದಲ್ಲಿ ಶ್ರೀ ಅರವಿಂದರ ಸಾಹಿತ್ಯ ಬೇಕಾದರೆ ಬರೆಯಿರಿ. ಮೇಲೆ ಕಾಣಿಸಿದ ಪುಸ್ತಕಗಳನ್ನೆಲ್ಲ ತರಿಸಿಕೊಂಡಲ್ಲಿ ಅಂಚೆ ನಾವೇ ವಹಿಸುವೆವು.

ಶ್ರೀ ಅರವಿಂದ ಗ್ರಂಥಾಲಯ ಪ್ರೋ:— **ಚಡಚಣ** ಜಿ. ವಿಜಾ

ಶ್ರೀ ಜಿ. ಎ. ಬಸವರಾಜ ಅವರ

ಬಯಲಿನುಡಿಯಲ್ಲಿ

ಬೆಲೆ : ೬೦ ನಯೆ

[ಕಥಾ ಸಂಕಲನ]

- ಕೇವಲ ೨-೮-೦ (ಅಂಚೆ ಸೇರಿ) ವಾರ್ಷಿಕ ಚಂದಾಹಣದಲ್ಲಿ ಮಾಲೆಯ ಐಸಿಯ ಕುಸುಮವನ್ನಾಗಿ **ಪಡೆಯಿರಿ.**
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ನಾಲ್ಕೈದು ಕೃತಿಗಳು ೪೦೦ ಪುಟಗಳಲ್ಲಿ.
- ಎಪ್ರಿಲದಿಂದ ಎಪ್ರಿಲಕ್ಕೆ ಒಂದು ವರುಷ.
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಶ್ರೇಷ್ಠ ಸಾಹಿತಿಗಳ ಕೃತಿಗಳನ್ನು ಪ್ರಕಟಿಸಿ ಚಂದಾದಾರರಿಗೆ ಕೈ ಬೆಲೆಯಲ್ಲಿ ಕೊಡಲಾಗುವದು. (ಅಂಚೆ ಬೇರೆ)
- ಶಿಕ್ಷಕರಿಗೆ ವಿಶೇಷ ಸವಲತ್ತುಗಳಿವೆ. **ಕೂಡಲೇ** ಚಂದಾದಾರರಾಗಿ ತಮ್ಮದೇ ಆದ ಶಿಕ್ಷಕರ ಸಂಸ್ಥೆಯು ಚಿರಸ್ಥಾಯಿ ನಿಲ್ಲುವಂತೆ ನೆರವು ನೀಡಿರಿ. ಈ ಅತ್ಯಲ್ಪಹಣ ತಮ್ಮ ಶಿಕ್ಷಕ ಮಿತ್ರರ ಏಳ್ಗೆಗೆ ಮೀಸಲಾಗಿದೆ.

★ ಮುಂಬೈ ರಾಜ್ಯದ ಶಿಕ್ಷಣಾಧಿಕಾರಿಗಳಿಂದ ಶಾಲಾವಾಚನಾಲಯಗಳಿಗೆ ಮಂಜೂರಾದ ೩೦೦ ಜನ ಶ್ರೇಷ್ಠ ಸಾಹಿ ವಿವಿಧ ಕೃತಿ, ಪರಿಚಯಗಳನ್ನೊಳಗೊಂಡ ' ಆಣೆಕಲ್ಲು ' ' ಪುಟಚೆಂಡು ' ಕಥೆ, ಕವನಗಳ ಪುಸ್ತಕಗಳು ನಿಮ್ಮಲ್ಲಿ ಕೆಲವೇ ಪ್ರತಿ ಉಳಿದಿವೆ. ಈಗಲೇ ತರಿಸಿಕೊಳ್ಳಿರಿ ಚಂದಾದಾರರಿಗೆ ಮಾತ್ರ ಕೈ ಬೆಲೆ (ಅಂಚೆ ಬೇರೆ) ಬೆಲೆ ೧೨ ಆಣೆಯ

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ : **ಬಿಜಾಪುರ**

Printed by Shri S. F. Kattimani, at Manohar Power Printing Press, Hubli. Edited Published by Sjts. S. P. Patil, B. M. Shintri, S. R. Tatti & Smti. P. A. Bhaskar, at the Kan Jeevan Shikshan Office, Govt. Training College for Men, Dharwar.

ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

(೧) ಶಿಕ್ಷಣ ಖಾತೆಯ ಉಪಮಂತ್ರಿಗಳಾದ ಶ್ರೀಮತಿ ಗ್ರೇಸ ತಕ್ಕರರವರು ಸ. ಗಂ. ಟ್ರೇ. ಕಾಲೇಜವನ್ನು ಸಂದರ್ಶಿ

(೨) ನೇಗೆಯ ಕೋಣೆಯನ್ನು ನಿರೀಕ್ಷಿಸುತ್ತಿರುವದು.

(೩) ಪ್ರಾ. ಸ್ಕೂಲ ವಿದ್ಯಾರ್ಥಿಗಳು ಮಾಡಿದ ಹೊಲವನ್ನು ನಿರೀಕ್ಷಿಸುತ್ತಿರುವುದು.

(೪) ಗಿಡ ನೆಡುವುದು.

(೫) ಗಿಡನೆಡುವ ಕಾರ್ಯವನ್ನು ಮುಗಿಸಿಕೊಂಡು ಡೆ|| ಎ. ಇನ್ಸಪೆಕ್ಟರರು ಹಾಗೂ ಪ್ರಿನ್ಸಿಪಾಲರೊಡನೆ ಬರುತ್ತಿ

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : ಶ್ರೀ ಜಿ. ಕೆ. ಕೊಪ್ಪಿಕರ, ಬಿ.ಎ.(ಆನರ್ಸ), ಬಿ.ಎಸ್‌ಸಿ., ಎಮ್.ಇಡಿ.
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : ಶ್ರೀ ಎಸ್. ಪಿ. ಪಾಟೀಲ, ಬಿ.ಎ., ಬಿ.ಟಿ., ಡಿ.ಪಿ.ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗದ (ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ಶೆಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೩] ಸಪ್ಟಂಬರ ೧೯೫೭ [ಸಂಚಿಕೆ ೪

— ಪರಿವಿಡಿ —

ವಿಷಯ			ಪುಟ
೧	ಸಂಪಾದಕೀಯ	....	೨
೨	ಟ್ರೇನಿಂಗ ಕಾಲೇಜದ ಶತಾಬ್ದಿ ಸಮಾರಂಭದ ವಿಷಯಗಳು	....	೪
೩	ಗ್ರಂಥ ವಿಮರ್ಶೆ	....	೭
೪	ಧಾರವಾಡ ಮುನಸಿಪಲ್ ಕ್ಷೇತ್ರದಲ್ಲಿ ಬಹುಮಾನಿತ ವಿದ್ಯಾರ್ಥಿನಿಯರು	....	೭
೫	ಜೀವನ ಶಿಕ್ಷಣ ಪ್ರಪಂಚದಲ್ಲಿ	....	೮
೬	ಸುದ್ದಿಗಳು	....	೯
೭	ಶಾಲಾ ಆಹಾರದ ಶೈಕ್ಷಣಿಕ ಹಾಗೂ ಸಾಮಾಜಿಕ ಪಾರ್ಶ್ವಗಳು	ಶ್ರೀ ಎಮ್. ಬಿ. ಪಾಟೀಲ-ಕುಲಕರ್ಣಿ	೧೩
೮	ಮೂಲ ಶಿಕ್ಷಣದ ಅರಿವು	.... ಶ್ರೀ ಶಿಂತ್ರಿ ಬಸಪ್ಪನವರು	೧೬
೯	ಪ್ರಾಥಮಿಕ ಶಿಕ್ಷಣದಲ್ಲಿ ವ್ಯವಹಾರಿ ಹಾಗು ದಶಾಂಶ ಅಪೂರ್ಣಾಂಕಗಳು	.... ಶ್ರೀ ನೀ. ರೇ. ಹಿರೇಮಠ	೧೮
೧೦	ನಾನು ಶಿಕ್ಷಕನೇ ?	.... ಶ್ರೀ ರಾ. ರು. ಕುಪ್ಪಸದ	೨೩
೧೧	ಭಾರತದ ಮುಂದಿನ ವಿದ್ಯಾಭ್ಯಾಸದ ರೀತಿನೀತಿ	.... ಶ್ರೀ ಶೆಟ್ಟಿ ಶಾಮರಾಯರು	೨೭+೧೨

ಮುಖಚಿತ್ರ: "ಸಂಯುಕ್ತ ಕರ್ನಾಟಕ"ದ ಕೃಪೆಯಿಂದ.

ಸಂಪಾದಕೀಯ

ಶಿಕ್ಷಣ ಖಾತೆಯ ಉಪಮಂತ್ರಿಗಳ ಸಂದರ್ಶನ

ನಮ್ಮ ರಾಜ್ಯದ ಶಿಕ್ಷಣ ಖಾತೆಯ ಉಪಮಂತ್ರಿಗಳಾದ ಶ್ರೀಮತಿ ಗ್ರೇಸ ಟಕ್ಕರ ಇವರು ಈ ತಿಂಗಳ ಪ್ರಾರಂಭದಲ್ಲಿ ಧಾರವಾಡಕ್ಕೆ ಬಂದಿದ್ದರು. ಇದು ಅವರ ಮೊದಲನೆಯ ಭೆಟ್ಟಿಯಾಗಿತ್ತು. ದಿ. ೧ರಂದು ಇಲ್ಲಿಗೆ ಬಂದು ದಿ. ೨ ಹಾಗೂ ೩ರಂದು ಸ್ಥಾನಿಕ ಶಿಕ್ಷಣ ಸಂಸ್ಥೆಗಳಿಗೆ ಸಂದರ್ಶನವನ್ನಿತ್ತು ಶಿಕ್ಷಕರ ಹಾಗೂ ಮುಖ್ಯಾಧ್ಯಾಪಕರ ಸಭೆಗಳಲ್ಲಿ ಶೈಕ್ಷಣಿಕ ಸಮಸ್ಯೆಗಳನ್ನು ಕುರಿತು ಮಾತನಾಡಿದರು. ದಿ. ೧ರ ಸಾಯಂಕಾಲ ಪ್ರಾದೇಶಿಕ ಗ್ರಂಥಾಲಯವನ್ನು ಸಂದರ್ಶಿಸಿದರು. ಮರುದಿನ ಬೆಳಿಗ್ಗೆ ಗಂಡು ಮಕ್ಕಳ ಹಾಗೂ ಹೆಣ್ಣುಮಕ್ಕಳ ಕಾಲೇಜುಗಳನ್ನು, ಮಧ್ಯಾಹ್ನದಲ್ಲಿ ವಿಶ್ವವಿದ್ಯಾಲಯ ಹಾಗೂ ಪದವೀಧರ ಜೀವನ ಶಿಕ್ಷಣ ಕೇಂದ್ರಗಳಿಗೆ ಭೆಟ್ಟಿಯನ್ನಿತ್ತು ಅಂದು ಸಂಜೆಗೆ ಮುಖ್ಯಾಧ್ಯಾಪಕರ ಸಭೆಯಲ್ಲಿ ಭಾಗ ವಹಿಸಿದ್ದರು. ಮರುದಿನ ಮಾಧ್ಯಮಿಕ ಶಾಲೆಗಳಲ್ಲಿಯ ಕೆಲಸವನ್ನು ನಿರೀಕ್ಷಿಸಿ ಆ ದಿನ ಸಂಜೆಗೆ ಸ್ಥಾನಿಕ ಸಂಸ್ಥೆಗಳಲ್ಲಿಯ ಶಿಕ್ಷಕರ ಸಭೆಯಲ್ಲಿ ಉಪಸ್ಥಿತರಾಗಿ ರಾಜ್ಯಗಳ ಪುನರ್ಘಟನೆಯ ಪರಿಣಾಮವಾಗಿ ಮೈಸೂರು ರಾಜ್ಯದ ಶಿಕ್ಷಣ ಕ್ರಮದಲ್ಲಿ ಉದ್ಭವಿಸಿದ ಹಲವಾರು ಸಮಸ್ಯೆಗಳನ್ನು ಕುರಿತು ಚರ್ಚಿಸಿದರು. ದಿ. ೪ರಂದು ಹುಬ್ಬಳ್ಳಿಯ ಶಿಕ್ಷಣ ಸಂಸ್ಥೆಗಳಿಗೆ ಭೆಟ್ಟಿಯನ್ನಿತ್ತರು. ಶ್ರೀಮತಿಯವರು ತಮ್ಮ ೩-೪ ದಿನಗಳ ಪ್ರವಾಸದಲ್ಲಿ

೯ರೆ ಶಿಕ್ಷಣ ಸಂಸ್ಥೆಗಳನ್ನು ಸಂದರ್ಶಿಸಿ ಅಲ್ಲಿ ನಡೆದ ಕಾರ್ಯಕಲಾಪಗಳನ್ನು ನಿರೀಕ್ಷಿಸಿ ಶೈಕ್ಷಣಿಕ ಸಮಸ್ಯೆಗಳ ಬಗೆಗೆ ಒಳ್ಳೆಯ ಆಸ್ಥೆಯಿಂದ ವಿಚಾರ ವಿನಿಮಯ ಮಾಡಿದರು. ಶ್ರೀಮತಿ ಟಕ್ಕರರು ದಿನಾಂಕ ೨ರಂದು ಮುಂಜಾನೆ ೮ ಗಂಟೆಯ ಸುಮಾರಕ್ಕೆ ನಮ್ಮ ಕಾಲೇಜಕ್ಕೆ ಆಗಮಿಸಿದರು. ಈ ಸಂಸ್ಥೆಯ ಕಾರ್ಯಕ್ರಮದ ಬಗೆಗೆ ಪ್ರಿನ್ಸಿಪಾಲರೊಡನೆ ಮೊದಲು ಚರ್ಚಿಸಿ ಆಮೇಲೆ ಬೇರೆ ಬೇರೆ ವಿಭಾಗಗಳನ್ನು ನಿರೀಕ್ಷಿಸಿದರು. ಪ್ರ್ಯಾಕ್ಟಿಸಿಂಗ ಸ್ಕೂಲಿನ ಫಾರ್ಮ, ಭೋಜನಾಲಯ, ಕ್ರಾಫ್ಟ್‌ಹಾಲ್, ಕೋಳಿ ಸಂಗೋಪನ, ತೋಟ ಮುಂತಾದ ವಿಭಾಗಗಳಲ್ಲಿ ದೈನಂದಿನ ಕೆಲಸಗಳನ್ನು ನಿರೀಕ್ಷಿಸುತ್ತ ಆಯಾ ಶಿಕ್ಷಕರೂ ಹಾಗೂ ವಿದ್ಯಾರ್ಥಿಗಳೊಡನೆ ಚರ್ಚಿಸಿದರು. ಆ ಮೇಲೆ ಕಾಲೇಜಿನ ಸಭಾ ಮಂದಿರದಲ್ಲಿ ವಿದ್ಯಾರ್ಥಿಗಳನ್ನೂ ಶಿಕ್ಷಕರನ್ನೂ ಉದ್ದೇಶಿಸಿ ಭಾಷಣ ಮಾಡಿದರು. ತಮ್ಮ ಭಾಷಣದಲ್ಲಿ ಸುಮಾರು ಎರಡು ತಾಸುಗಳವರೆಗೆ ತಾವು ನೋಡಿದ ಎಲ್ಲ ಭಾಗಗಳ ಕೆಲಸವು ಉನ್ನತಮಟ್ಟದ್ದಾಗಿದೆಯೆಂದೂ ಶಿಕ್ಷಕರೂ ವಿದ್ಯಾರ್ಥಿಗಳೂ ಸಮಭಾಗಿಗಳಾಗಿ ಕೆಲಸ ಮಾಡುತ್ತಿರುವದನ್ನು ನೋಡಿ ತಮಗಾದ ಸಂತೋಷವನ್ನು ವ್ಯಕ್ತ ಮಾಡಿದರು. ಇಂಥ ಪ್ರಶಾಂತವಾದ ಪರಿಸ್ಥಿತಿಯಲ್ಲಿ ಅಭ್ಯಾಸ ಮಾಡುವ ಪ್ರಸಂಗ ಬಂದೊದಗಿದ ಶಿಕ್ಷಕ ವಿದ್ಯಾರ್ಥಿಗಳೆಲ್ಲರೂ ಸುದೈವಿಗಳೆಂದೂ ತಾವು ಭಾವಿಸಿರುವದಾಗಿ ತಿಳಿಸಿದರು. ಇಂಥ ಹಿರಿಯ ಸಂಸ್ಥೆಯಲ್ಲಿ ತರಬೇತನ್ನು ಹೊಂದಿ ತಿರುಗಿ ತಮ್ಮ ಶಾಲೆಗಳಿಗೆ ಹೋದ ಮೇಲೆ ಒಳ್ಳೇ ದಕ್ಷತೆಯಿಂದಲೂ ಸ್ವಾರ್ಥತ್ಯಾಗದಿಂದಲೂ ದುಡಿದು ಮುಂದಿನ ಪೀಳಿಗೆಯನ್ನು ಉದ್ಧಾರ ಮಾಡುವ ಪವಿತ್ರ ಕಾರ್ಯವನ್ನು ಸಾಗಿಸಿ, ತಮಗೂ ಮತ್ತು ತಮಗೆ ತರಬೇತನ್ನು ಕೊಟ್ಟ ಸಂಸ್ಥೆಗೂ ಕೀರ್ತಿಯನ್ನು ತರುವರೆಂದು ಆಶಿಸಿದರು. ತಮಗೂ ಸಹ ಶಿಕ್ಷಕಿಯರಾಗಿ ಕೆಲಸ ಮಾಡುವ ಸುದೈವ ದೊರೆತಿತ್ತೆಂದೂ ಅದರಿಂದ ಶಿಕ್ಷಕರು ಎದುರಿಸಬೇಕಾದ ಅಡಚಣಿಗಳ ಪರಿಚಯವು ತಮಗಿದೆಯೆಂದೂ ಸೂಚಿಸಿದರು. ನಮ್ಮ ಕಾಲೇಜಕ್ಕೆ ಕೊಟ್ಟ ಸಂದರ್ಶನದಿಂದ ತಮಗಾದ ಸಂತೋಷವನ್ನು ಮತ್ತೊಮ್ಮೆ ವ್ಯಕ್ತಮಾಡಿ ತಮ್ಮ ಭಾಷಣವನ್ನು ಮುಗಿಸಿದರು. ಇದಾದ ಮೇಲೆ ಕಾಲೇಜದ ತೋಟದಲ್ಲಿ ಗಂಧದ ಗಿಡವೊಂದನ್ನು ನೆಟ್ಟು ತಮ್ಮ ಸಂದರ್ಶನವನ್ನು ಮುಗಿಸಿದರು.

ಪ್ರಾಥಮಿಕ ಶಿಕ್ಷಣದ ಮಟ್ಟ

ಕಳೆದ ಸಂಚಿಕೆಯಲ್ಲಿ ಪಾಲಕರಲ್ಲಿಯೂ, ಜನಸಾಮಾನ್ಯರಲ್ಲಿಯೂ ಈಗಿನ ಪ್ರಾಥಮಿಕ ಶಿಕ್ಷಣದ ಮಟ್ಟ ಕೆಳಮುಖವಾಗಲು ಅನೇಕ ಕಾರಣಗಳಿವೆ. ಅವುಗಳಲ್ಲಿ ಕೆಲವು ಹೀಗಿವೆ:—

೧) ಹೆಚ್ಚು ಶೈಕ್ಷಣಿಕ ಯೋಗ್ಯತೆಯುಳ್ಳವರು ಶಿಕ್ಷಕ ವೃತ್ತಿಗೆ ಬರಲು ಒಪ್ಪುವದಿಲ್ಲ. ಮೊದಲಿಗೆ ಬಂದರೂ ಅವರು ಅಲ್ಲಿ ಉಳಿಯುವದಿಲ್ಲ. ಹೀಗಾಗಲು ಕೆಲವು ಕಾರಣಗಳುಂಟು.

ಸಂಪಾದಕೀಯ

೨) ಶಿಕ್ಷಕ ವೃತ್ತಿಯಲ್ಲಿ ಕೊನೆಯವರೆಗೂ ಉಳಿಯುವದರಲ್ಲಿ ಅನೇಕ ಶೈಕ್ಷಣಿಕ ಯೋಗ್ಯತೆಗಳು ಉನ್ನತ ಮಟ್ಟದವು ಆಗಿರುವದಿಲ್ಲ. ಮತ್ತು ತಮ್ಮ ಯೋಗ್ಯತೆಯನ್ನು ಹೆಚ್ಚಿಸಿಕೊಳ್ಳಲು ಅವರು ಪ್ರಯತ್ನಿಸುವದಿಲ್ಲ.

೩) ಶಿಕ್ಷಣ ಖಾತೆಯಲ್ಲಿರುವ ಎಲ್ಲ ಶಿಕ್ಷಕರು ತರಬೇತಿಯನ್ನು ಹೊಂದಿರುವದಿಲ್ಲ. ಕೆಲವು ವರುಷಗಳ ಹಿಂದೆ ಶಾಲೆಗಳ ಸಂಖ್ಯೆ ಕಡಿಮೆ ಇದ್ದಾಗ ಉತ್ತಮ ಪರಿಸ್ಥಿತಿಯುಳ್ಳ ಪಾಲಕರ ಮಕ್ಕಳು ಶಾಲೆಗೆ ಬರುತ್ತಿದ್ದರು. ಅಂಥವರಲ್ಲಿ ಬಹು ಭಾಗದಲ್ಲಿ ಕಲಿಯುವ ಆಸ್ಥೆ ಇರುತ್ತಿತ್ತು. ಹೀಗಾಗಿ ಶಿಕ್ಷಣವು ಪರಿಣಾಮಕರವಾಗುತ್ತಿತ್ತು. ಇತ್ತೀಚೆಗೆ ಶಾಲೆಗಳ ಸಂಖ್ಯೆಯು ಹೆಚ್ಚಾದಂತೆ ಶಾಲೆಗಳಿಗೆ ಬರುವ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಾಯಿತು. ತೀರ ಬಡವರ ಮಕ್ಕಳು ಸಹ ಶಾಲೆಗೆ ಬರಹತ್ತಿದರು. ಹೀಗಾಗಿ ಒಬ್ಬೊಬ್ಬ ಶಿಕ್ಷಕರಿಗೆ ಬೀಳುವ ವಿದ್ಯಾರ್ಥಿಗಳ ಸಂಖ್ಯೆ ದೊಡ್ಡದಾಗುತ್ತ ಹೋದಂತೆ ಪ್ರಗತಿಯ ಮಟ್ಟ ಕೆಳಗಿಳಿಯಿತು. ಇದಲ್ಲದೆ ಅಭ್ಯಾಸ ಕ್ರಮದಲ್ಲಿಯ ಬದಲಾವಣೆ ಇಮಾರತುಗಳ ಅಭಾವ ಉಪಕರಣಗಳ ಕೊರತೆ ಹಾಗೂ ಶಿಕ್ಷಣ ನಡೆಯುವ ವೇಳೆಯ ನಿರ್ಬಂಧ ಮುಂತಾದವುಗಳು ಸಹ ಶಿಕ್ಷಣದ ಮಟ್ಟ ಕೆಳಗಿಳಿಯಲು ಕಾರಣಗಳಾಗಿವೆ. ನಮ್ಮ ಮಕ್ಕಳ ಶಿಕ್ಷಣದ ಬಗೆಗೆ ಪಾಲಕರಲ್ಲಿ ಕಂಡು ಬರುವ ಅನಾಸ್ಥೆ ನಿಷ್ಕಾಳಜಿ ಮೊದಲಾದ ಸಂಗತಿಗಳನ್ನೂ ನಾವು ಲಕ್ಷಿಸಬೇಕು. ಇವೆಲ್ಲವು ಶಿಕ್ಷಣದ ಭಾರವನ್ನು ಹೊತ್ತವರಿಗೆ ಗೊತ್ತಿಲ್ಲವೆಂತಲ್ಲ; ಆದರೆ ಶಿಕ್ಷಕರಲ್ಲಿ ನಿಸ್ವಾರ್ಥ ಸೇವಾಬುದ್ಧಿ ಕರ್ತವ್ಯದಕ್ಷತೆಗಳು ಬೇಕಾಗಿದ್ದಂತೆ ಪಾಲಕರಲ್ಲಿಯೂ ತಮ್ಮ ಮಕ್ಕಳ ಶಿಕ್ಷಣದ ಬಗೆಗೆ ಅಚಲವಾದ ಆಸ್ಥೆ ಅತ್ಯವಶ್ಯ. ಈ ಸಮಸ್ಯೆಯ ಬಗೆಗೆ ಅವಶ್ಯವಾದ ಪರಿಹಾರವನ್ನು ಪಾಲಕರೂ ಆಡಳಿತೆಗಾರರೂ ಹಾಗೂ ಶಿಕ್ಷಕರೂ ಸಮಭಾಗಿಗಳಾಗಿ ಕಾಣುವದು ಸಾಧ್ಯವಿದೆಯೆಂದು ನಮಗೆನಿಸುತ್ತದೆ.

ಜೀವನ ಶಿಕ್ಷಣದ ಬಗ್ಗೆ ಇರುವ ತಪ್ಪು ತಿಳಿವಳಿಕೆಗಳು

ಸುಮಾರು ೨೦ ವರುಷಗಳ ಹಿಂದೆ ಪೂಜ್ಯ ಬಾಪೂಜಿಯವರು ಮಕ್ಕಳ ಶಿಕ್ಷಣವನ್ನು ಕುರಿತು ತಮ್ಮ ವಿಚಾರವನ್ನು ರಾಷ್ಟ್ರದ ಮುಂದೆ ಇಟ್ಟರು. ಅಂದಿನಿಂದ ಇಂದಿನವರೆಗೆ ಪ್ರಾಥಮಿಕ ಶಿಕ್ಷಣದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗುತ್ತ ಬಂದು ಜೀವನ ಶಿಕ್ಷಣ ಕ್ರಮವೇ ರಾಷ್ಟ್ರೀಯ ಶೈಕ್ಷಣಿಕ ಧೋರಣೆಯಾದ ಸಂಗತಿಯು ಎಲ್ಲರಿಗೂ ಸುಪರಿಚಿತವಾಗಿದೆ. ಹೀಗಿದ್ದರೂ ಜನ ಸಾಮಾನ್ಯರಲ್ಲಿ ಜೀವನ ಶಿಕ್ಷಣದ ಬಗೆಗೆ ನೈಜವಾದ ಕಲ್ಪನೆಗಳು ಇಲ್ಲದಿರುವದರಿಂದ ತಪ್ಪು ತಿಳಿವಳಿಕೆಗಳಿಗೆ ಆಸ್ಪದ ಉಂಟಾಗಿದೆ. ಅನೇಕ ತಪ್ಪು ತಿಳಿವಳಿಕೆಗಳಲ್ಲಿ ಕೆಳಗಿನವು ಮುಖ್ಯವಾಗಿವೆ:—

೧) ಜೀವನ ಶಿಕ್ಷಣವು ಹಳ್ಳಿಗಾಡುಗಳಿಗೆ ಮಾತ್ರ ಮೀಸಲಾಗಿಟ್ಟ ಶಿಕ್ಷಣ.

೨) ಶಿಕ್ಷಣ ಶಾಲೆಗಳು ಕೇವಲ ನೂಲುವ ಹಾಗೂ ಒಕ್ಕಲುತನ ಶಾಲೆಗಳಾಗಿವೆ. ಇಂಥ ಶಾಲೆಗಳಲ್ಲಿ ದೈಹಿಕ ಶ್ರಮಕ್ಕೆ ಹೆಚ್ಚು ಸ್ಥಾನ ಕೊಡಲ್ಪಟ್ಟಿದೆ.

೩) ಇಂಥ ಶಾಲೆಗಳಲ್ಲಿ ತಯಾರಾದ ವಸ್ತುಗಳಿಗೆ ಯೋಗ್ಯ ಬೆಲೆ ಬರುವದಿಲ್ಲ.

೪) ಮೂಲೋದ್ಯೋಗವೇ ಮಿಗಿಲಾದ ಶಾಲೆಗಳಲ್ಲಿ ಬೇಸರಿಕೆ ಬೇಗನೇ ಬರುತ್ತದೆ.

೫) ಜೀವನ ಶಿಕ್ಷಣ ಶಾಲೆಗಳ ಉತ್ಪನ್ನದಿಂದ ಅವಕ್ಕೆ ಹತ್ತುವ ಪೂರ್ಣ ಖರ್ಚನ್ನು ಮೇಳ ಮಾಡುವದು ಅಸಾಧ್ಯ. ಈ ದೃಷ್ಟಿಯಿಂದ ಅದು ಸ್ವಾವಲಂಬಿಯಾಗಲಾರದು.

೬) ಮೂಲೋದ್ಯೋಗದ ಮುಖಾಂತರವೇ ಮಕ್ಕಳ ಜ್ಞಾನವನ್ನು ಬೆಳೆಸುವದು ಕಷ್ಟ. ಸಮವಾಯ ತತ್ವವು ಪ್ರತ್ಯಕ್ಷ ರೂಢಿಯಲ್ಲಿ ಅಸ್ವಾಭಾವಿಕ ಸಂಬಂಧೀಕರಣವಾಗಿದೆ. ಒಟ್ಟಿನಲ್ಲಿ ಶಾಲೆಗಳಲ್ಲಿ ಕಲಿತ ಮಕ್ಕಳ ಬೌದ್ಧಿಕ ಮಟ್ಟ ಕಡಿಮೆಯಾಗುತ್ತದೆ. ಇವಲ್ಲದೆ ಇನ್ನೂ ಅನೇಕ ತರದ ಸಣ್ಣ ಪುಟ್ಟ ತಪ್ಪು ತಿಳಿವಳಿಕೆಗಳೂ ಸಹ ಉಂಟು. ಜೀವನ ಶಿಕ್ಷಣದ ಜನ-ಸಾಮಾನ್ಯರಲ್ಲಿರುವ ಈ ತರದ ತಪ್ಪು ತಿಳಿವಳಿಕೆಗಳನ್ನು ಹೋಗಲಾಡಿಸಲು ನಾವು ಪ್ರಯತ್ನಿಸಬೇಕು. ಈ ಬಗೆಗೆ ಶಿಕ್ಷಕರೂ ಶಿಕ್ಷಣಾಭಿಮಾನಿಗಳೂ ಹಾಗೂ ಅಧಿಕಾರಿಗಳೂ ತಮ್ಮ ವಿಚಾರಗಳನ್ನು ಸಂಗ್ರಹಿಸಿ ನಮಗೆ ತಿಳಿಸಿದರೆ ಅವನ್ನೇ ಮುಂಬರುವ ಸಂಚಿಕೆಯಲ್ಲಿ ಒಳ್ಳೇ ಸಂತೋಷದಿಂದ ಪ್ರಸಿದ್ಧಿಸುವೆವು.

ಧಾರವಾಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಶತಾಬ್ದಿ ಸಮಾರಂಭ

ಧಾರವಾಡ ಗಂ. ಮ. ಸ. ಟ್ರೇ. ಕಾ. ೧೮೫೭ರಲ್ಲಿ ಆರಂಭವಾಗಿದ್ದು ೧೯೫೭ಕ್ಕೆ ಒಂದು ನೂರು ವರುಷಗಳು ಆಗಿ ಹೋದವು. ಕರ್ನಾಟಕದಲ್ಲಿ ಶಿಕ್ಷಣ ಪ್ರಸಾರ, ಸಾಹಿತ್ಯ ಸೇವೆ ಹಾಗೂ ಸಂಸ್ಕೃತಿಯ ಪುನರುಜ್ಜೀವನ ಕಾರ್ಯದಲ್ಲಿ ಈ ಸಂಸ್ಥೆಯು ಸಲ್ಲಿಸಿದ ಸೇವೆಯು ಅಪಾರ ವಾಗಿದೆ. ರಾಷ್ಟ್ರದ ಏಳ್ಗೆಗೆ ಮೂಲವಾದ ಶಿಕ್ಷಣದಂಥ, ಪವಿತ್ರವಾದ ಕಾರ್ಯದಲ್ಲಿ ಶ್ರಮಿಸುತ್ತಿರುವ ಕನ್ನಡ ನಾಡಿನ ಶಿಕ್ಷಕ ವೃಂದಕ್ಕೆ ಈ ಸಂಸ್ಥೆಯು ಮಾತೃ ಸ್ವರೂಪವಾಗಿದೆ. ಅದರಂತೆ ಕನ್ನಡ ನಾಡಿನ ಜನತೆಗೆಲ್ಲ ಪೂಜ್ಯವಾಗಿದೆ. ಇಂಥ ಹಿರಿಯ ಸಂಸ್ಥೆಗೆ ಒಂದು ನೂರು ವರುಷಗಳು ಆದ ಸಂದರ್ಭದಲ್ಲಿ ಅದರ ಉಪಕಾರ ಸ್ಮರಣಾರ್ಥ ಒಂದು ಉತ್ಸವವನ್ನು ನೆರವೇರಿಸುವದು ಎಲ್ಲ ಶಿಕ್ಷಕರ ಹಾಗೂ ಸಮಸ್ತ ಕನ್ನಡಿಗರ ಕೃತಜ್ಞತೆಯ ದ್ಯೋತಕವಾಗಿದೆ. ಆದುದರಿಂದ ಇದೇ ವರುಷ ಈ ಸಂಸ್ಥೆಯ ಶತಾಬ್ದಿ ಸಮಾರಂಭವನ್ನು ಜರುಗಿಸಬೇಕೆಂದು ನಿರ್ಣಯಿಸಲಾಗಿದೆ.

ಈ ಶತಾಬ್ದಿ ಸಮಾರಂಭವನ್ನು ಜರುಗಿಸುವ ಕಾರ್ಯದಲ್ಲಿ ಈ ಸಂಸ್ಥೆಯ ಹಳೇ ವಿದ್ಯಾರ್ಥಿಗಳು ಹೆಚ್ಚಿಗೆ ಭಾಗ ವಹಿಸುವದು ಉಚಿತವೆಂದು, ಅಂಥ ವಿದ್ಯಾರ್ಥಿಗಳ ಹಾಗು ಪ್ರಾಧ್ಯಾಪಕರ ಸಭೆಯೊಂದನ್ನು ದಿ. ೧೭-೮-೧೯೫೭ ರಂದು ಕಾಲೇಜದ ಸಭಾ ಭವನದಲ್ಲಿ ಕರೆಯಲಾಯಿತು. ಈ ಸಭೆಗೆ ಈ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳಲ್ಲಿ ಒಬ್ಬರಾದ ಶ್ರೀ ಸ. ಪ. ಗಾಂವಕರರು ಅಧ್ಯಕ್ಷರಾಗಿದ್ದರು. ಕಾಲೇಜದ ಪ್ರಿನ್ಸಿಪಾಲರು ಈ ಶತಾಬ್ದಿ ಸಮಾರಂಭದ ಹಿನ್ನೆಲೆಯ ಸವಿಸ್ತಾರ ಸಂಗತಿಗಳನ್ನು ವಿವರಿಸಿದರು. ಸಭೆಯಲ್ಲಿ ಉಪಸ್ಥಿತರಿದ್ದ ಸ್ಥಾನಿಕ ಶಿಕ್ಷಣಾಧಿಕಾರಿಗಳಿಗೂ ಹಲವಾರು ಹಳೆಯ ವಿದ್ಯಾರ್ಥಿಗಳಿಗೂ ಪ್ರಾಧ್ಯಾಪಕರಿಗೂ ಈ ಶತಾಬ್ದಿ ಸಮಾರಂಭದ ಅವಶ್ಯಕತೆಯ ಮನವರಿಕೆಯಾಗಿ ಎಲ್ಲರೂ ಒಮ್ಮತದಿಂದ ಅದನ್ನು ಒಪ್ಪಿಕೊಂಡರು. ನಂತರ ಹನ್ನೆರಡು ಜನರನ್ನೊಳಗೊಂಡ ಒಂದು ಕಾರ್ಯಕಾರಿ ಸಮಿತಿಯು ರಚಿಸಲ್ಪಟ್ಟು ಶ್ರೀ ಗಾಂವಕರರು ಕಾರ್ಯಾಧ್ಯಕ್ಷರೆಂದೂ ಪ್ರಿನ್ಸಿಪಾಲರು ಕಾರ್ಯದರ್ಶಿಗಳೆಂದೂ ಶ್ರೀ ಶಿಂತ್ರಿಯವರು ಕೋಶಾಧ್ಯಕ್ಷರೆಂದೂ ಆರಿಸಲ್ಪಟ್ಟರು. ಶ್ರೀ ಗಾಂವಕರರ ಸಮಾರೋಪ ಭಾಷಣದೊಂದಿಗೆ ಸಭೆಯ ಕಾರ್ಯವು ಕೊನೆಗೊಂಡಿತು. ಮುಂದೆ ದಿ. ೨೨-೮-೧೯೫೭ರಂದು ಕಾರ್ಯಕಾರಿ ಸಮಿತಿಯ ಸಭೆಯನ್ನು ಕರೆದು ಅನೇಕ ವಿಷಯಗಳು ಚರ್ಚಿಸಲ್ಪಟ್ಟನಂತರ ಶ್ರೀ ಬಿ. ಎಮ್. ಶಿಂತ್ರಿಯವರು ಉಪಕಾರ್ಯಾಧ್ಯಕ್ಷರೆಂದೂ ಶ್ರೀ ಟಿ. ಎಮ್. ದೇಸಾಯಿಯವರು ಸಹಕಾರ್ಯದರ್ಶಿಗಳೆಂದೂ ನಿರ್ಣಯಿಸಲಾಯಿತು. ಉತ್ಸವದ ಕಾರ್ಯನಿರ್ವಹಣೆಗೆ ಧನ ಸಹಾಯದ ಅವಶ್ಯಕತೆಯಿದ್ದುದರಿಂದ ನಿಧಿ ಸಂಗ್ರಹದ ವಿಚಾರವಾಗಿ ಕೆಳಗಿನಂತೆ ನಿಧಿಯನ್ನು ಸಂಗ್ರಹಿಸಲು ಒಂದು ಗೊತ್ತುವಳಿಯು ಸ್ವೀಕೃತವಾಯಿತು.

೫ ರೂಪಾಯಿಗಳಿಗಿಂತ ಹೆಚ್ಚು ನಿಧಿ ಕೊಡುವ ಶಿಕ್ಷಣಾಭಿಮಾನಿಗಳೆಲ್ಲರೂ ಸ್ವಾಗತ ಸಮಿತಿಯ ಸದಸ್ಯರಾಗಲರ್ಹರು.

೫ ರೂ. ಕೊಡುವ ಶಿಕ್ಷಕರೆಲ್ಲರೂ ಸ್ವಾಗತ ಸಮಿತಿಯ ಸದಸ್ಯರಾಗಲರ್ಹರು.

೩ ರೂ. ಕೊಡುವ ಶಿಕ್ಷಕರೆಲ್ಲರೂ ೧ನೇ ತರಗತಿಯ ಪ್ರತಿನಿಧಿಗಳು.

೨ ರೂ. ಕೊಡುವ ಶಿಕ್ಷಕರೆಲ್ಲರೂ ೨ನೇ ತರಗತಿಯ ಪ್ರತಿನಿಧಿಗಳು.

೧ ರೂ. ಕೊಡುವ ಶಿಕ್ಷಕರೆಲ್ಲರೂ ೩ನೇ ತರಗತಿಯ ಪ್ರತಿನಿಧಿಗಳು.

ಈ ವಿವರಗಳಿಗನ್ವಯಿಸಿ ಪಾವತಿ ಪುಸ್ತಕಗಳನ್ನು ತಯಾರಿಸಿ ನಿಧಿ ಸಂಗ್ರಹ ಕಾರ್ಯ ಪ್ರಾರಂಭಿಸಬೇಕೆಂದು ನಿರ್ಣಯವಾಯಿತು.

ಈ ಸಮಾರಂಭವನ್ನು ಯಶಸ್ವಿಯಾಗಿ ಜರುಗಿಸುವ ಕಾರ್ಯದಲ್ಲಿ ನೆರವಾಗಿ ತನು, ಮನ, ಧನಗಳಿಂದ ಸಹಾಯ ಸಲ್ಲಿಸುವ ಭಾರವು ಶಿಕ್ಷಕವೃಂದ ಹಾಗೂ ಸಾರ್ವಜನಿಕರ ಮೇಲೆ ಇದೆ. ಉದಾತ್ತ ಧ್ಯೇಯವನ್ನು ಲಕ್ಷಿಸಿ ಆರಂಭಿ

ಸಿರುವ ಈ ಕಾರ್ಯದಲ್ಲಿ ಎಲ್ಲರೂ ನೆರವಾಗುವರೆಂದು ನಮಗೆ ನಂಬಿಗೆ ಇದೆ.

ನಿಧಿಯನ್ನು ಸಲ್ಲಿಸುವ ವಿಷಯದಲ್ಲಿ ಒಂದು ಅರಿಕೆ ಮಾಡಿಕೊಳ್ಳುವದು ಅವಶ್ಯವೆನಿಸುವದು. ಬೆಳಗಾಂವ, ಧಾರವಾಡ, ವಿಜಾಪೂರ ಹಾಗೂ ಕಾರವಾರ ಈ ನಾಲ್ಕು ಜಿಲ್ಹೆಗಳ ಶಿಕ್ಷಕರೂ, ಸಾರ್ವಜನಿಕರೂ ತಮಗೆ ಇಷ್ಟವೆನಿಸಿದ ತರಗತಿಯ ನಿಧಿಯನ್ನು ನೇರವಾಗಿ ಶತಾಬ್ದಿ ಸಮಾರಂಭ ಸಮಿತಿ (ಗಂ.ಮು.ಸ.ಟ್ರೇ. ಕಾ.) ಗೆ ಇಲ್ಲವೆ ಆಯಾ ಜಿಲ್ಹೆಗಳ ತಾಲೂಕಾ ಶಾಲಾ ಮಾಸ್ತರರ ಕಡೆಗೆ ಕಳಿಸಿದರೆ ಅವರಿಂದ ನಿಧಿಯು ಸಮಿತಿಗೆ ಮುಟ್ಟುವದು. ಆದ್ದರಿಂದ ಎಲ್ಲ ಶಿಕ್ಷಕರು ಹಾಗು ಉಳಿದವರು ತಮ್ಮ ನಿಧಿಯನ್ನು ಆಯಾ ತಾಲೂಕಾ ಶಾಲಾ ಮಾಸ್ತರರ ಕಡೆಗೆ ಸಲ್ಲಿಸಬೇಕೆಂದು ವಿನಂತಿಸುವೆವು. ತಾಲೂಕಾ ಶಾಲಾ ಮಾಸ್ತರರಿಗೆ ಈ ಬಗೆಗೆ ಆಯಾ ಸ್ಕೂಲ ಬೋರ್ಡುಗಳ ಚೇಅರಮನ್‌ರ ಮುಖಾಂತರ ವಿನಂತಿಸಲಾಗಿದೆ. ಮಾತೃ ಸ್ವರೂಪದಲ್ಲಿದ್ದ ಈ ಹಿರಿಯ ಸಂಸ್ಥೆಯ ಶತಾಬ್ದಿ ಸಮಾರಂಭಕ್ಕೆ ಎಲ್ಲರೂ ಮುಕ್ತ ಹಸ್ತದಿಂದ ಸಹಾಯ ಸಲ್ಲಿಸಬೇಕೆಂದು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುವೆವು. ನೇರವಾಗಿ ನಿಧಿಯನ್ನು ಸಲ್ಲಿಸುವವರು ಕೆಳಗಿನ ವಿಳಾಸಕ್ಕೆ ಕಳಿಸಿಕೊಡಬೇಕು. ನಿಧಿಯನ್ನು ಸಲ್ಲಿಸುವ ಮಹಾಶಯರೆಲ್ಲರು ನಿಧಿ ಸಲ್ಲಿಸಿದ ಬಗೆಗೆ ತಪ್ಪದೆ ಪಾವತಿಯನ್ನು ಪಡೆಯಬೇಕಾಗಿ ವಿನಂತಿ.

ವಿಳಾಸ:
ಪ್ರಿನ್ಸಿಪಾಲ, ಗಂ. ಮು.
ಸರಕಾರಿ ಟ್ರೇ. ಕಾ.
ಧಾರವಾಡ.

ಬಿ. ಎಮ್. ಶಿಂತ್ರಿ
ಉಪಾಧ್ಯಕ್ಷರು, ಕಾರ್ಯಕಾರಿ ಸಮಿತಿ

ಗಂ. ಮು. ಸ. ಟ್ರೇ. ಕಾ. ಶತಾಬ್ದಿ ಸಮಾರಂಭ
ಸಮಿತಿಯ ಕಚೇರಿ, ಧಾರವಾಡ.

ಶ್ರೀಗಳಾದ ಯಾವತ್ತೂ ತಾಲೂಕ ಶಾಲಾ ಮಾಸ್ತರರಿಗೆ—

ವಿಷಯ–ಶತಾಬ್ದಿ ಸಮಾರಂಭ

ಮಹನೀಯರೆ,

ಗ. ಮು. ಸರಕಾರಿ ಟ್ರೇ. ಕಾ.ದ ಶತಾಬ್ದಿ ಸಮಾರಂಭವನ್ನು ಇದೇ ವರ್ಷ ಜರುಗಿಸಲಾಗುವದೆಂಬ ಬಗೆಗೆ ಪ್ರಕಟನೆಗಳನ್ನು ತಾವೆಲ್ಲರೂ ಪತ್ರಿಕೆಗಳಲ್ಲಿ ಓದಿ ತಿಳಿದಿರಲು ಸಾಕು. ಈ ಸಮಾರಂಭ ಕಾರ್ಯಕ್ಕೆ ನಿಧಿಸಂಗ್ರಹ ಅತ್ಯಂತ ಮಹತ್ವದ್ದಾಗಿದೆ. ನಿಧಿಯನ್ನು ಸಲ್ಲಿಸುವ ಸಲುವಾಗಿ ಎಲ್ಲ ಶಿಕ್ಷಕರಿಗೂ, ಶಿಕ್ಷಣಾಭಿಮಾನಿಗಳಾದ ಸಾರ್ವಜನಿಕರಿಗೂ ವಿನಂತಿಸಲಾಗಿದೆ. ನಿಧಿಯ ಹಣವನ್ನು ಶಿಕ್ಷಕರಿಗೂ ಸಾರ್ವಜನಿಕರಿಗೂ ಆಯಾ ಜಿಲ್ಹೆಗಳ ತಾಲೂಕ ಶಾಲಾ ಮಾಸ್ತರರ ಮುಖಾಂತರ ಸಮಾರಂಭ ಸಮಿತಿಗೆ ಸಲ್ಲಿಸಿದರೆ ಹೆಚ್ಚು ಅನುಕೂಲವಾಗುವದು. ಆದುದರಿಂದ ತಾವು ನಿಮ್ಮ ತಾಲೂಕಿನಲ್ಲಿ ಸಂಗ್ರಹಿಸಿದ ಹಣವನ್ನು ನಮ್ಮ ಕಡೆಗೆ ಕಳಿಸಬೇಕೆಂದು ವಿನಂತಿಸುವೆವು. ನಿಧಿ ಸಂಗ್ರಹ ಕಾರ್ಯದಲ್ಲಿ ನಮಗೆ ನೆರವಾಗುವ ಬಗೆಗೆ ಆಯಾ ಸ್ಕೂ. ಬೋ. ಚೇಅರಮನ್ನರ ಸೂಚನೆಗಳು ಬರುವವು.

ನಿಧಿ ಸಂಗ್ರಹದ ಬಗೆಗೆ ಸಮಾರಂಭ ಸಮಿತಿಯಿಂದ ತಯಾರಿಸಲ್ಪಟ್ಟ ಪಾವತಿ ಪುಸ್ತಕಗಳನ್ನು ತಮ್ಮ ಕಡೆಗೆ ಕಳಿಸಲಾಗಿದೆ. ನಿಧಿಯನ್ನು ಸಲ್ಲಿಸಿದವರ ಯಾದಿಯೊಂದನ್ನು ನಮ್ಮ ಕಡೆಗೆ ಕಳಿಸಬೇಕೆಂದು ವಿನಂತಿ. ಈ ಯಾದಿಗಳನ್ನು ವಾರಕ್ಕೊಮ್ಮೆ ಕಳಿಸಿದರೆ ನೆಟ್ಟಗೆ. ಈ ವಿಷಯದಲ್ಲಿ ತಗಲುವ ಅಂಚೆಯ ಖರ್ಚನ್ನು ನಿಧಿಯ ಹಣದಿಂದ ಪೂರೈಸಿಕೊಳ್ಳಲಿಕ್ಕೆ ಅಡ್ಡಿ ಇಲ್ಲ. ಹೀಗೆ ಮಾಡಿದ ಖರ್ಚನ್ನು ಸದರಿಯ ಯಾದಿಯಲ್ಲಿ ಕಳಿಸಿದರೆ ನಮ್ಮ ಲೆಕ್ಕಪತ್ರಗಳನ್ನು ಬರೆಯುವಾಗ ಅನುಕೂಲವಾಗುವದು.

ಬಿ. ಎಮ್. ಶಿಂತ್ರಿ
ಕೋಶಾಧ್ಯಕ್ಷರು ಹಾಗೂ ಉಪಕಾರ್ಯಾಧ್ಯಕ್ಷರು
ಸಮಾರಂಭ ಸಮಿತಿ ಗ. ಮು. ಟ್ರೇ. ಕಾ. ಧಾರವಾಡ

ಕನ್ನಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ ಧಾರವಾಡ

ಶತಾಬ್ದಿ ಸಮಾರಂಭ

ಬಿನ್ನಹ

ಈ ವರುಷ ಈ ಕಾಲೇಜದ ಶತಾಬ್ದಿ ಸಮಾರಂಭವನ್ನು ಜರುಗಿಸಬೇಕೆಂಬ ವಿಷಯವನ್ನು ಪತ್ರಿಕೆಗಳಲ್ಲಿ ಓದಿ ಅತ್ಯಂತ ಸಂತೋಷವಾಗಿದೆ. ಆದುದರಿಂದ ಈ ಕಾಲೇಜದ ಹಳೆಯ ವಿದ್ಯಾರ್ಥಿಗಳು ಮುಂದೆ ಬಂದು ಈ ಸಮಾರಂಭವನ್ನು ನೆರವೇರಿಸಲು ನಿರ್ಣಯ ಮಾಡಿದ ಬಗ್ಗೆ ಅವರನ್ನು ಅಭಿನಂದಿಸುವೆನು. ಕರ್ನಾಟಕದ ಶಿಕ್ಷಣ, ಸಾಹಿತ್ಯ ಹಾಗೂ ಸಂಸ್ಕೃತಿಯ ಬೆಳವಣಿಗೆಯ ನೂರಾರು ವರುಷಗಳ ಇತಿಹಾಸವನ್ನು ನಾವು ನೋಡಿದಾಗ ಈ ಸಂಸ್ಥೆಯಿಂದ ಸಲ್ಲಿಸಲ್ಪಟ್ಟ ಅಮೋಘವಾದ ಸೇವೆಯು ಎಲ್ಲರ ನಿದರ್ಶನಕ್ಕೆ ಬಾರದೆ ಇರದು. ಕಳೆದ ಶತಮಾನದ ಪೂರ್ವಾರ್ಧದಲ್ಲಿ ಕನ್ನಡದಲ್ಲಿ ಶಿಕ್ಷಣ ನಡೆಯುವ ಶಾಲೆಗಳು ಈ ಭಾಗದಲ್ಲಿ ಇಲ್ಲದಾಗ ಈ ಸಂಸ್ಥೆಯು ಜನ್ಮತಾಳಿ ಬಾಲ್ಯಾವಸ್ಥೆಯ ಹಲ ಕೆಲವು ಅಡೆ–ತಡೆಗಳನ್ನು ಸಹಿಸಿ ಕೊನೆಗೆ ಕನ್ನಡ ಮಾತೆಯ ಕೀರ್ತಿ ಧ್ವಜವನ್ನು ನಾಡಿನಲ್ಲೆಲ್ಲ ಏರಿಸಿ ಸಮಸ್ತ ಕನ್ನಡಿಗರಿಗೆ ಅಪಾರವಾದ ಉಪಕಾರವನ್ನು ಮಾಡಿರುವದು ಎಲ್ಲರ ಪುಣ್ಯ ಸ್ಮರಣೆಯ ವಿಷಯವಾಗಿದೆ. ಈ ಸಂಸ್ಥೆಯನ್ನು ಸ್ಥಾಪಿಸಿ, ಬೆಳಿಸಿ ಉಳಿಸಿದ ಅನೇಕ ಮಹಾನುಭಾವರ ಸೇವೆಯನ್ನು ಈ ಸಮಾರಂಭದ ಮೂಲಕ ಸ್ಮರಿಸುವದು ಅತ್ಯವಶ್ಯ. ಅಂಥ ಮಹಾನುಭಾವರಲ್ಲಿ ಡೆಪ್ಯೂಟಿ ಚೆನ್ನಬಸಪ್ಪನವರು ಭುಜಂಗರಾವ ಹುಯಿಲಗೋಳರವರು, ಶ್ರೀ ರಾವಜಿ ಕರಂದೀಕರ ಹಾಗೂ ದಿವಾನ ಬಹಾದ್ದೂರ ಶ್ರೀ ದೊಡ್ಡ ಇವರೇ ಅಗ್ರಗಣ್ಯರು. ಇವರಿಂದಾದ ದೀರ್ಘ ಪರಿಶ್ರಮದ ಫಲವಾಗಿ ಕನ್ನಡ ಮಾತೆ ಬದುಕಿದ್ದಾಳೆ. ಯಾವ ದೃಷ್ಟಿಯಿಂದ ನೋಡಿದರೂ ಕನ್ನಡಿಗರಲ್ಲಿ ಈಗ ಕಾಣುತ್ತಿರುವ ನವ ಜಾಗೃತಿಯ ಮೂಲ ಬೇರುಗಳ ಉಗಮವು ಈ ಸಂಸ್ಥೆಯ ಸ್ಥಾಪನೆಯಲ್ಲಿಯೇ ಅಡಕವಾಗಿದೆ. ಆದುದರಿಂದ ಈ ಹಿರಿಯ ಸಂಸ್ಥೆಯ ಶತಾಬ್ದಿ ಸಮಾರಂಭವನ್ನು ನೆರವೇರಿಸುವದು ಕೇವಲ ಆ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳದಾಗಿರದೇ ಪ್ರತಿಯೊಬ್ಬ ಕನ್ನಡಿಗನ ಆದ್ಯಕರ್ತವ್ಯವಾಗಿದೆಯೆಂದರೆ ಅದರಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ. ಈ ಪವಿತ್ರ ಕಾರ್ಯಕ್ಕೆ ಕನ್ನಡಿಗರೆಲ್ಲರೂ ಮುಖ್ಯವಾಗಿ ಆ ಸಂಸ್ಥೆಯಲ್ಲಿ ತರಬೇತಿ ಹೊಂದಿದವರೆಲ್ಲರೂ ಧನ ರೂಪದಿಂದ ನೆರವಾಗುವರೆಂದು ನಾನು ಆಶಿಸಿದ್ದೇನೆ.

ತಮ್ಮ

ಸಿ. ಕೆ. ಕುಲಕರ್ಣಿ

ಚೇರಮನ್ ಡಿ. ಎಸ್. ಬಿ. ಧಾರವಾಡ

ಶಿಕ್ಷಕರಲ್ಲಿ ವಿನಂತಿ

ನಾವು ಕಳೆದ ತಿಂಗಳಲ್ಲಿ ಬಿನ್ನವಿಸಿಕೊಂಡಂತೆ ಪ್ರಾಥಮಿಕ ಶಿಕ್ಷಣದ ಹಿಂದಿನ ಸಂಚಿಕೆಗಳನ್ನು ಕಳಿಸಿ ಶಿಕ್ಷಕರು ನಮಗೆ ಸಹಾಯ ಮಾಡಿದ್ದಾರೆ. ಅದರಂತೆ ಈ ಕೆಳಗೆ ಕಾಣಿಸಿದ ಕವಿತಾ ಸಂಗ್ರಹವನ್ನು ಕಳಿಸಲಿಕ್ಕೆ ವಿನಂತಿಸುತ್ತೇವೆ.

೧. ಶ್ರೀ ಶಿವಾಜಿ ಯಜ್ಞೇಶ್ವರ ವಾಜಪೇಯ ಇವರಿಂದ ೧೮೮೧ರ ಜಾನೆವರಿಯಲ್ಲಿ ರಚಿತವಾದ **"ಶೋಕಾರ್ತ ಗೀತ".**

೨. ಶತಮಾನೋತ್ಸವದ ಅಂಗವಾಗಿ ಸ್ಮಾರಕ ಸಂಪುಟವನ್ನು ಪ್ರಕಟಿಸುವ ಯೋಜನೆಯಾಗಿದೆ. ಕಾಲೇಜದ ಬಗೆಗೆ ಶಿಕ್ಷಕರಿಂದ ತಯಾರಾದ ಲೇಖನಗಳು ಬಂದರೆ ಪರಮಸಂತೋಷ. ಹಳೆ ವಿದ್ಯಾರ್ಥಿಗಳ ಸವಿ ನೆನಹುಗಳ ಬಗೆಗಾಗಲಿ, ಕಾಲೇಜದ ದೀರ್ಘ ಸೇವೆಯನ್ನು ಕುರಿತಾಗಲಿ ಇಲ್ಲವೇ ಜೀವನ ಶಿಕ್ಷಣದ ಯಾವದಾದರೊಂದು ಭಾಗಕ್ಕೆ ಸಂಬಂಧಿಸಿಯಾಗಲಿ ಲೇಖನಗಳನ್ನು ಇಲ್ಲವೆ ಕವನಗಳನ್ನು ನಮ್ಮ ಕಡೆಗೆ ಅಕ್ಟೋಬರ ತಿಂಗಳ ದಿನಾಂಕ ೧೦ರೊಳಗಾಗಿ ಕಳಿಸಬೇಕಾಗಿ ವಿನಂತಿ.

— ಸಂಪಾದಕರು

ಗ್ರಂಥ ವಿಮರ್ಶೆ

ಆಶಾಕಿರಣ

ಶ್ರೀ ಸನದಿಯವರ ಮೊದಲ ಕೃತಿಯಾದ 'ಆಶಾಕಿರಣ'ವೆಂಬುದು ಒಂದು ಕಿರಿ ಹೊತ್ತಿಗೆಯು; ಅದು ೪೦ ಸುನೀತಗಳ ಸಂಕಲನವು. ಅವರ ಆಶೆ-ಆಕಾಂಕ್ಷೆಗಳು ಈ ಕವನಗಳ ಸಾಲುಗಳಲ್ಲಿ ಪಲ್ಲವಿಸಿವೆ.

ಅವರು 'ಏಳು ಕವಿ, ರವಿಯಾಗು—ನುಡಿ ಬೆಳಗೆ' ಎಂದು ತನ್ನನ್ನು ತನ್ನವರನ್ನು ಭಾಷಾ ಸೇವೆಗೆ ಅಣಿಗೊಳಿಸುವರು.

'ಇದು ಆಶೆ—ಅನಂತತೆಯಿತ್ತ ಸಂಕ್ಷಿಪ್ತ ಭಾಷೆ,
ಎಳೆಯಬಹುದಿದರಲ್ಲಿ ಬದುಕಿನ ರೂಪ—ರೇಷೆ'
ಎಂದು ಕಾವ್ಯವಾಣಿಯ ನೀಡಿ ತಮ್ಮ ಕಾವ್ಯ ಪ್ರತಿಭೆಯ ಹಾಗೂ ಕಲ್ಪನಶಾಕ್ತಿಯ ಅಂಕುರವನ್ನು ಪ್ರದರ್ಶಿಸಿದ್ದಾರೆ.

ಈ ನಾಲ್ವತ್ತು ಸುನೀತಗಳಲ್ಲಿ ಅವರು ಬಳಸಿದ ಹಿತ-ಮಿತವಾದ ಭಾಷೆ, ಬೆದುಕಬೇಕಾದುದನ್ನು ಕಲಾತ್ಮಕವಾಗಿ ಬೆದಕುವ ಹದ, ಜಗದ ಗೆಳೆತನದ ಮೌಲ್ಯದ ಮೂಲದ ಅರಿವು ಇವುಗಳಲ್ಲಿ ಅವರ ವ್ಯಕ್ತಿ ವೈಶಿಷ್ಟ್ಯವಿದೆ.

ಇವರು ವ್ಯಕ್ತಿಗತ ಕಷ್ಟ-ಕಾರ್ಪಣ್ಯಗಳನ್ನು ಸರಸವಾಗಿ ಹಾಡಿದ್ದಾರೆ. ಸಮಾಜದ ಅಸಹ್ಯ ರೀತಿ-ನೀತಿಗಳನ್ನು ನಿಷ್ಠುರವಾಗಿ ಖಂಡಿಸಿದ್ದಾರೆ. ವ್ಯಕ್ತಿ ಗೌರವವನ್ನು ಕಾವ್ಯಮಯವಾಗಿ ಹಾಡಿದ್ದಾರೆ. ಹೀಗೆ ಎಲ್ಲೆಲ್ಲಿಯೂ ತಮ್ಮ ಭಾಷೆಯ ವೈಖರಿಯನ್ನು ತೋರಿಸಿದ್ದಾರೆ.

ಪ್ರಾಯಮರಿ ಸ್ಕೂಲ ಧಾರವಾಡ (Municipal Area) ದಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿನಿಯರು ೧೯೫೭-೫೮ರ ಉತ್ಸವ ಕಾಲದಲ್ಲಿ ದೊರಕಿಸಿದ ವಿದ್ಯಾರ್ಥಿನಿಯರ ಹೆಸರು ಮತ್ತು ಅವರ ಬಹುಮಾನ ಕೆಳಗಿನಂತಿದೆ.

ಕ್ರ. ಸಂ.		ವಿದ್ಯಾರ್ಥಿನಿಯರ ಹೆಸರು	ಅವರು ಕಲಿಯುತ್ತಿರುವ ಶಾಲೆ	ತರಗತಿ	ಅವರು ಕಲಿಯುವ ಈಯತ್ತೆ	ಬಹುಮಾನ ಬೆಲೆ
೧	ಕುಮಾರಿ	ಸರೋಜಿನಿ ಕುಲಕರ್ಣಿ	ಕ. ಹೆ. ಶಾಲೆ ನಂ. ೪.	೧ ನೇ ತರಗತಿ	೪	೧ ರೂ.
೨	,,	ವಿಜಯಾ ಹಿರೇಮಠ	,,	೨ ನೇ ತರಗತಿ	೪	೧ ರೂ.
೩	,,	ಗಾಯತ್ರಿ ಗರಗ	,,	೨ ನೇ ತರಗತಿ	೪	೧ ರೂ.
೪	,,	ಲಲಿತಾ ಅನದ	ಕ. ಹೆ. ಶಾಲೆ ನ. ೩.	,,	೪	೧ ರೂ.
೫	,,	ಶಕುಂತಲಾ ಹನಮರ	ಪ್ರ್ಯಾ. ಸ್ಕೂ. ಸ. ಹೆ. ಟ್ರೇ. ಕಾಲೇಜ	೩ ನೇ ,,	೪	೧ ರೂ.
೬	,,	ಉಷಾ ರಾಯದುರ್ಗ	ಕ. ಹೆ. ಸೆಂಟ್ರಲ್ ಸ್ಕೂಲ	೧ ನೇ ತರಗತಿ	೫	೨ ರೂ.
೭	,,	ಶಾಂತಾ ಮೆಣಸಿನಕಾಯಿ	,,	೨ ನೇ ,,	೫	೨ ರೂ.
೮	,,	ಶೋಭಾ ಬಾಂಡೇಕರ	ಪ್ರ್ಯಾ. ಸ್ಕೂ ಸ. ಹೆ. ಟ್ರೇ. ಕಾಲೇಜ	೩ ನೇ ,,	೫	೨ ರೂ.
೯	,,	ಸುಗಂಧಾ ಗುರುಮಠ	ಕ. ಹೆ. ಸೆಂಟ್ರಲ್ ಸ್ಕೂಲ	೧ ನೇ ,,	೬	೨ ರೂ.
೧೦	,,	ಪಂಪಾ ವ್ಹಿ. ಮಲ್ಲಾಬಾದಿ	ಪ್ರ್ಯಾ. ಸ್ಕೂ. ಸ. ಹೆ. ಟ್ರೇ. ಕಾಲೇಜ	೨ ನೇ ,,	೬	೨ ರೂ.
೧೧	,,	ಶಾಂತಾ ಆರ್. ಹನಮರ	,,	೩ ನೇ ,,	೬	೨ ರೂ.

ಜೀವನ ಶಿಕ್ಷಣ ಪ್ರಪಂಚದಲ್ಲಿ

೧೯೫೭ನೆಯ ಇಸವಿಯ ಸ್ವಾತಂತ್ರ್ಯೋತ್ಸವ

ಊರು	ಶಾಲೆ	ಅಧ್ಯಕ್ಷತೆಯಲ್ಲಿ ಜರುಗಿತು.
೧. ಕಾಕೋಳ	ಕ. ಗಂ. ಶಾಲೆ	—
೨. ಬೆಳಗಲಿ	,,	ಶ್ರೀ ಎಸ್. ಎಮ್. ಕೊಣ್ಣೂರ
೩. ಮುಂಡರಗಿ	,,	,, ಮೆ| ಖಾದ್ರಿ ಮಾಮಲೇದಾರ
೪. ಚಿಕ್ಕಪಡಸಲಗಿ	,,	,, ಎಸ್. ಎಸ್. ಪಾಟೀಲ
೫. ನಿಡಗುಂದಿ	,,	—
೬. ಹಿರೇಕೋಡಿ	,,	,, ಎಸ್. ಡಿ. ಕೋತಬಳಿ
೭. ಕರಮುಡಿ	,,	—
೮. ಕಮತಗಿ	,,	,, ಪಿ. ಎಮ್. ನಾಡಗೌಡ
೯. ದುಂಡಸಿ	,,	,, ಮಿರಜಕರ
೧೦. ವರೂರ	,,	,, ಪಕ್ಕೀರಗೌಡಾ ಪಾಟೀಲ
೧೧. ಇಲಕಲ್ಲ	,,	,, ಚನಬಸಪ್ಪ ಹರಿಹರ
೧೨. ತೋಳಮಟ್ಟಿ	,,	,, ಆರ್. ಟಿ. ಪಾಟೀಲ
೧೩. ಕೋಟಮುಚಗಿ	,,	,, ಸಣ್ಣರಾಮಪ್ಪ ನೀರಲಗಿ
೧೪. ಆಡೀಕಾರಹಟ್ಟಿ	,,	,, ಜಿ. ಎಚ್. ಪಾಟೀಲ
೧೫. ಕಲ್ಲೂರ	,,	,, ಡಿ. ವಾಯ್. ಜಿ. ಅದರಗುಂಚಿ
೧೬. ಧನ್ನೂರ	,,	—
೧೭. ಮುತ್ತಲದಿನ್ನಿ ತಾಂಡೆ	,,	,, ಪೋಲೀಸ ಪಾಟೀಲ ಕಂದಗಲ್ಲ
೧೮. ಕಂದಗಲ್ಲ	,,	,, ರಾಚಯ್ಯನವರು
೧೯. ಆಸಂಗಿ	,,	,, ವ್ಹಿ. ಎಮ್. ಕಾಮತ (ಮಾಮಲೇದಾರ)
೨೦. ಖಾನಾಪೂರ	,,	,, ಜ್ಯೂಡಿಸಿಯಲ್ ಮೆಜಿಸ್ಟ್ರೇಟ
೨೧. ಜಮಖಂಡಿ	,,	,, ಪ್ರಾಂತ ಆಫೀಸರ
೨೨. ಗುಳೇದಗುಡ್ಡ	,,	,, ಎಮ್. ಆರ್. ಪಟ್ಟಣಶೆಟ್ಟಿ
೨೩. ಆಲದಗೆರಿ	,,	—
೨೪. ನಾಗಸೂರ	,,	,, ವಸ್ತ್ರದ
೨೫. ಬನ್ನಿಕೊಪ್ಪ	,,	,, ಬಿ. ಆರ್. ಅಣ್ಣಿಗೇರಿ
೨೬. ಅಂಡಗಿ	,,	—
೨೭. ತೆರ್ನಮಕ್ಕಿ	,,	,, ಕುಪ್ಪಯ್ಯ ನಾಯಕರ
೨೮. ಚಿಕ್ಕುಂಬಿ	,,	ಶ್ರೀಮತಿ ಪರ್ವತಿಗೌಡ್ರ ಕೊ. ಸುಳ್ಳದ
೨೯. ಲಕ್ಕಲಕಟ್ಟಿ	,,	—
೩೦. ಹತ್ತರಕಿಹಾಳ	,,	—
೩೧. ಬಿಸಲದಿನ್ನಿ	,,	ಶ್ರೀ ಎ. ಎಸ್. ಗದ್ದನಕೇರಿಮಠ

	ಊರು	ಶಾಲೆ		ಅಧ್ಯಕ್ಷತೆಯಲ್ಲಿ ಜರುಗಿತು
೩೨.	ತೆಲಗಿ	ಕ. ಗಂ. ಶಾಲೆ	ಶ್ರೀಮತಿ	ಪದ್ಮಾವತಿಬಾಯಿ ಅಂಗಡಿ
೩೩.	ಕೋರವಾರ	,,		—
೩೪.	ಸೂಳೇಭಾವಿ	,,	ಶ್ರೀ	ಶೇಷಪ್ಪ ಧೂಪದ
೩೫.	ಅರಳೇಶ್ವರ	,,	,,	ಪುಟ್ಟನಗೌಡಾ ಪಾಟೀಲ
೩೬.	ಮುಗಳಹಳ್ಳಿ	,,	,,	ಎನ್. ಬಿ. ಬಡಿಗೇರ
೩೭.	ಶೇಡಬಾಳ	,,	,,	ಕೆ. ಬಿ. ಪಾಟೀಲ
೩೮.	ನಾಲತವಾಡ	,,	,,	ಎಮ್. ಎನ್. ಗೋರಬಾಳ
೩೯.	ಕೆಲವಡಿ	,,	,,	ಎಚ್. ಆರ್. ಕುಲಕರ್ಣಿ
೪೦.	ಅಮೀನಗಡ	ಕ. ಗಂ. ಶಾ. ಹಾಗೂ ಕ. ಹೆ. ಶಾ	,,	ವೆಂಕನಗೌಡಾ ಪಾಟೀಲ
೪೧.	ಭಗತವಾಡಾ	ಕ. ಗಂ. ಶಾ	,,	ಬಿ. ಎಸ್. ನಾಯ್ಕರ
೪೨.	ಅಸನೋಟಿ	ಮ. ಗಂ. ಶಾ.	,,	,,
೪೩.	ಮಧೇವಾಡಾ	ಕ. ಗಂ. ಶಾ.	,,	,,
೪೪.	ತುಪ್ಪದಕುರಹಟ್ಟಿ	,,	,,	ಎನ್. ಎಸ್. ಭೂಸನೂರಮಠ
೪೫.	ಬಾಬಾನಗರ	,,	,,	ಚೌಕಿಮಠಸ್ವಾಮಿ
೪೬.	ಗೋಲಗೇರಿ	,,	,,	ರಾಮಸ್ವಾಮಿ ಸಾಹೇಬ
೪೭.	ಖೇಡಗಿ	,,		—
೪೮.	ಹಳದೂರ	,,		—
೪೯.	ಗುಳೇದಗುಡ್ಡ	ಕ. ಗಂ. ಶಾ. ನಂ. ೩	,,	ಎಮ್. ಎಮ್ ಹುಲ್ಯಾಳ
೫೦.	ಹೊಸೂರ	ಕ. ಗಂ. ಶಾ.	,,	ಎಮ್. ಟಿ. ಸಾಸನೂರ
೫೧.	ಹೆಬ್ಬಾಳ	ಕ. ಗಂ. ಶಾ. ಹಾಗೂ ಕ. ಹೆ. ಶಾ.		—
೫೨.	ನಾಗರಾಳ	ಕ. ಗಂ. ಶಾ.		—
೫೩.	ಇಲಕಲ್ಲ	ಉ. ಗಂ. ಶಾ.	,,	ವೀರನಗೌಡಾ ಪಾಟೀಲ
೫೪.	ಅಂಕಲಗಿ	ಕ. ಗಂ. ಶಾ.	,,	ಡಾ. ದೇಶಪಾಂಡೆ

ಸುದ್ದಿಗಳು

ಅರಳೇಶ್ವರ : ಇಲ್ಲಿಯ ಕ. ಗಂ. ಶಾಲೆಗೆ ಗ್ರಾಮ ಪಂಚಾಯತಿಯ ವತಿಯಿಂದ ೧೩೦ ರೂ.ಯ ಗಡಿಯಾರ ತರುಣ ಮಿತ್ರ ಮಂಡಳಿ ವತಿಯಿಂದ ೨೦ ರೂ. ಯ ಕೊಡ ಹಾಗೂ ತಂಬಿಗಿ ಮತ್ತು ಊರ ನಾಗರಿಕರಿಂದ ಶ್ರೀ ಮಲ್ಲಿಕಾರ್ಜುನ ವಾಚನಾಲಯಕ್ಕೆ ೫೦ ರೂ. ಕೊಡಲಾಯಿತು.

ತೆಲಗಿ : ಕ. ಗಂ. ಶಾಲೆಗೆ ಶ್ರೀ ಎಮ್. ಹಂಡಗಿಯವರು ಒಂದು ಹಿತ್ತಾಳಿಯ ನೀರಿನ ಟಾಕಿಯನ್ನು, ಶ್ರೀ ವ್ಹಿ. ಪಿ. ಸಿ. ತೆಲಗಿಯವರು ೧ ತಂಬಿಗಿ ವಾಟಿ, ಶ್ರೀ ಬಿ. ಲಕ್ಕಶೆಟ್ಟಿಯವರು ೨ ಸ್ಟೀಲ ಗ್ಲಾಸ ಮತ್ತು ಶ್ರೀ ಶಿ. ಮಂಗಳವೇಢೆಯವರು ೩೦ ರೂಪಾಯಿ ಉದಾರ ಕಾಣಿಕೆಯಾಗಿ ಕೊಟ್ಟರು.

ಮುಗಳಹಳ್ಳಿ : ಊರ ನಾಗರಿಕರು ೧೦೦ ರೂ. ಬೆಲೆಯ ಧ್ವಜಕಟ್ಟೆ ಕಟ್ಟಿಸಿಕೊಟ್ಟರು. ಮತ್ತು ವಾಚನಾಲಯದ ಸ್ಥಾಪನೆಗಾಗಿ ೫೦ ರೂ. ದೇಣಿಗೆ ಕೊಟ್ಟರು.

ಶೇಡಬಾಳ : ಕಳೆದ ಸಲ ೭ನೆಯ ವರ್ಗವನ್ನು ಅತ್ಯುತ್ತಮರೀತಿಯಿಂದ ಕಲಿಸಿದ ಗುರುಗಳಾದ ಶ್ರೀ ಘೋಸಗೆಯವರನ್ನು ಊರ ನಾಗರಿಕರು ಸತ್ಕರಿಸಿ ಬೆಳ್ಳಿಯ ಕಪ್ಪನ್ನು ಕಾಣಿಕೆಯಾಗಿ ಕೊಟ್ಟರು.

ಸೂಳೇಭಾವಿ : ಇಲ್ಲಿಯ ಗ್ರಾಮ ಪಂಚಾಯತರು ಶಾಲೆಯ ಉಪಯೋಗಕ್ಕೆ ಬೇಕಾದ ಸಾಮಾನುಗಳ ಬಗ್ಗೆ ೪೦ ರೂ. ಹಾಗೂ ಮಿಠಾಯಿಯ ಬಗ್ಗೆ ೧೧ ರೂ. ಕೊಟ್ಟರು.

ಇಲಕಲ್ಲ : ದಿ. ೧೪ರಂದು ಜರುಗಿದ ತಾಲೂಕಾ ಪಂದ್ಯಾಟದಲ್ಲಿ ಮಧ್ಯವರ್ತಿ ಶಾಲೆಯ ಬಾಲಕರಾದ ಚೌಧರಿ, ಪಾಟೀಲ, ಹುನಕುಂಟಿ ಮತ್ತು ಸಾಲೀಮಠ ಈ ವಿದ್ಯಾರ್ಥಿಗಳು 'ರಿಲೇಶ' ಹಾಗೂ ೧೦೦ ಮಿ ಓಟದಲ್ಲಿ ಮೊದಲಿಗರಾಗಿ ಈ ಶಾಲೆಗೆ ಜಯವನ್ನಿತ್ತರು.

ಆಸಂಗಿ : ದಿ. ೧೪, ೧೫-೮-೫೭ರ ದಿವಸ ನಡೆದ ತಾಲೂಕಾ ಪಂದ್ಯಾಟದಲ್ಲಿ ಕ. ಗಂ. ಶಾಲೆಯ ವಿದ್ಯಾರ್ಥಿಗಳಾದ ಖೇಮಣ್ಣವರ, ದಾವಲ ಅಥಣಿ ಹಾಗೂ ಸಾಲಗುಡಿ ಖೇಮಣ್ಣವರ ಇವರು ಭಾಗವಹಿಸಿ ೨ ಕಪ್ಪು ಹಾಗೂ ೨ ಮೆಡಲ್‌ಗಳನ್ನು ಪಡೆದುಕೊಂಡು ಬಂದಿರುವರು.

ಹತ್ತರಕಿಹಾಳ : ಶ್ರೀ ಮ. ಶಿ. ಪ್ರ. ಸ್ವ. ವೀರಭದ್ರ ದೇಶಿಕೇಂದ್ರ ಸ್ವಾಮಿಗಳು, ಶ್ರೀಶೈಲ ಆತ್ಮಕೂರ ಜಗದ್ಗುರು ಮತ್ತು ವೀರಭಿಕ್ಷಾವರ್ತಿಮಠರವರು ಧ್ವಜಸ್ತಂಭಕ್ಕೆ ೫೧ ರೂ. ವಾಚನಾಲಯಕ್ಕೆ ೧೦ ರೂ. ಈ ಪ್ರಕಾರ ಆಶೀರ್ವದಿಸಿದರು.

ಸಂಕೇಶ್ವರ : (ತಾಲೂಕ ಹುಕ್ಕೇರಿ) ಈ ಭಾಗದ ಪ್ರಾಥಮಿಕ ಶಿಕ್ಷಕರ ಗ್ರುಪ್ ಸಮ್ಮೇಲನವು ದಿ. ೪-೮-೫೭ರಂದು ಪ್ರೋ. ಎ. ಇ. ಸಾಹೇಬ ರೋಹಿಡೇಕರ ಬೆಳಗಾಂವ ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ಹಳಿಯಾಳ : ದಿ. ೧೫ರಂದು ಮೆ. ಮಾಮಲೇದಾರ ಸಾಹೇಬ ಇವರ ಅಧ್ಯಕ್ಷತೆಯಲ್ಲಿ ಜರುಗಿದ 'ರಾಷ್ಟ್ರೀಯ ಕ್ರೀಡಾ ಮಹೋತ್ಸವ'ದಲ್ಲಿ ಯಶಸ್ಸು ದೊರಕಿಸಿದ ಆಟಗಾರರಿಗೆ ಶ್ರೀ ಆ. ಜಿ. ಕಾಮತ ಇವರ ಅಮೃತ ಹಸ್ತದಿಂದ ಪ್ರಶಸ್ತಿಪತ್ರ ಮತ್ತು ಪಾರಿತೋಷಕಗಳನ್ನು ವಿತರಣ ಮಾಡಲಾಯಿತು.

ಉದಾರ ದೇಣಿಗೆ

ಹೊಸೂರ : ಶ್ರೀಮತಿ ಮಲ್ಲಮ್ಮ ಕೊಂ. ಗುರಪ್ಪ ಬಶೆಟ್ಟೆಯವರು ಮರಣೋನ್ಮುಖ ಸಮಯದಲ್ಲಿ ವಾಗ್ದಾನ ಮಾಡಿದ ಮೇರೆಗೆ ಅವರ ಸುಪುತ್ರರಾದ ಕರಬಸಪ್ಪ ವ ಸಿದ್ಧರಾಮಪ್ಪ ತಂದಿ ಗುರಪ್ಪ ಬಶೆಟ್ಟೆಯವರು ೧೫ ಗುಂಠೆ ಕ್ಷೇತ್ರ ಜಮೀನನ್ನು ಕ. ಗಂ. ಶಾಲಾ ಕಟ್ಟಡದ ಬಗ್ಗೆ ಉದಾರ ದೇಣಿಗೆಯಾಗಿ ಕೊಟ್ಟಿರುತ್ತಾರೆ.

ನರೇಗಲ್ಲ : ದಿ. ೨೬, ೨೭-೭-೫೭ರಂದು ರೋಣ ತಾಲೂಕಿನಲ್ಲಿ ನಡೆದ ನವಮೈಸೂರು ರಾಜ್ಯದ 'ಪ್ರಥಮ ಕ್ರೀಡಾ ಮಹೋತ್ಸವ'ದಲ್ಲಿ ಇಲ್ಲಿಯ ಕ. ಹೆ. ಶಾಲೆಯ ವಿದ್ಯಾರ್ಥಿನಿಯರು ಭಾಗವಹಿಸಿ ಪ್ರಥಮಸ್ಥಾನ ಪಡೆದುದಲ್ಲದೆ ನಮ್ಮ ಶಾಲೆಗೆ ನಾಲ್ಕು ಬೆಳ್ಳಿಯ ಕಪ್ಪುಗಳು, ನಾಲ್ಕು ಮೆಡಲ್‌ಗಳು ಮತ್ತು ೧೦ ಮೆಡ್ಜ್ಯೋಲೆಗಳನ್ನು ದೊರಕಿಸಿದ್ದಾರೆ.

ಮಿರ್ಜಿಕೋಟೆ : ದಿ. ೧೬—೮—೫೭ ರಂದು ಶ್ರೀಮಾನ್ ಎ. ಬಿ. ದಾತಾರ, ಡಿ. ಡಿ. ಸಿ. ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಶ್ರೀ ಶಿಂತ್ರಿ ಬಸಪ್ಪನವರು ಇಟ್ಟ ಪಾರಿತೋಷಿಕ ವಿತರಣ ಸಮಾರಂಭವು ಕ. ಗಂ. ಶಾಲೆಯಲ್ಲಿ ಜರುಗಿತು. ಈ ಸಾರೆ ಪ್ರಥಮ ಸ್ಥಾನ ಗಳಿಸಿದ ಕುಮಾರ ಎಮ್. ಜಿ. ಮುಂಟೂರ ಇವರಿಗೆ ೧೫ ರೂ. ದ್ವಿತೀಯ ಸ್ಥಾನ ಗಳಿಸಿದ ಕು| ಬಿ. ಜಿ. ಜೋಶಿ ಇವರಿಗೆ ೧೦ ರೂ. ಗಳನ್ನು ಅಧ್ಯಕ್ಷರ ಹಸ್ತದಿಂದ ವಿತರಣ ಮಾಡಲಾಯಿತು. ಕೊನೆಗೆ ಶ್ರೀ ಶಿಂತ್ರಿ ಬಸಪ್ಪನವರು ಈ ಊರ ಶಾಲೆಗಾಗಿ ಪಾರಿತೋಷಿಕಗಳನ್ನಿಟ್ಟ ಉದ್ದೇಶವನ್ನು ಸ್ಪಷ್ಟಪಡಿಸಿದರು.

ಬಡ ವಿದ್ಯಾರ್ಥಿಗಳಿಗೆ ಅನ್ನಸಂತರ್ಪಣೆ

ದಿ. ೧೫ ರಂದು ವಿಜಾಪೂರ ಸ. ಕೃಷಿ ಮಾಧ್ಯಮಿಕ ಶಾಲೆಯ ಮುಖ್ಯಾಧ್ಯಾಪಕರಾದ ಶ್ರೀ ಆರ್. ಆರ್. ಕುಪ್ಪಸದ ಇವರು, "ಬಡವರೊಡನೆ ದೇವರು ಇದ್ದಾನೆ" "ಬಡವರು ಉಂಡರೆ ದೇವರು ಉಂಡಂತೆ" ಎಂಬ ಸದ್‌ಗೃಹಿಕೆಯಿಂದ, ಇಲ್ಲಿಯ ಮಾಧ್ಯಮಿಕ ಶಾಲೆಗಳಲ್ಲಿಯ ಬಡ ವಿದ್ಯಾರ್ಥಿಗಳೆಲ್ಲರ ಪ್ರತಿನಿಧಿಗಳೆಂದು ಪ್ರತಿಯೊಂದು ಶಾಲೆಯಿಂದ ಇಬ್ಬರು ಬಡ ವಿದ್ಯಾರ್ಥಿಗಳನ್ನು (ಯಾವ ಜಾತಿ-ಧರ್ಮವನ್ನೆಣಿಸದೆ) ತಮ್ಮ ಮನೆಗೆ ಬರಮಾಡಿಕೊಂಡು ಅವರಿಗೆ ಅನ್ನಸಂತರ್ಪಣೆಯನ್ನು ಮಾಡಿ ಸಂತೈಸಿದರು.

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ರ್ಣ ಸಂಧಿ! **ಸಚಿತ್ರ ಗ್ರಂಥ!!** **ಸುಂದರ ಮುದ್ರಣ!!!**

"ಶಿಕ್ಷಣ-ಶಿಕ್ಷಕ-ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-ಮನ ಸುವಂಥ, **ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂದ, ಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟಕ ವಿದ್ಯಾಲಯದ ಉಪ ಕುಲಪತಿಗಳಾದ ರ್‍ಯಾಂಗ್ಲರ್ ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆದಂಥ,** ೋಘ ಗ್ರಂಥ.

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿಯರ ಬಣ್ಣಗಳಲ್ಲಿ ೪೧ ಫೋಟೋ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ ಅಮರ ನಾಹಿತ್ಯ ಗ್ರಂಥ. **ದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.**

ದಿ. ೧೫ ಆಗಸ್ಟ ೫೬ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ ಅಧ್ಯಕ್ಷತೆ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ.

ವಿವರಗಳಿಗೆ ಇಂದೇ ಈಗಲೇ ಬರೆಯಿರಿ. ಪ್ರೋತ್ಸಾಹನೆ ಕೊಡಿರಿ.

ಪ್ರತಿ ೩ ರೂ.] **ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್.** **[ಸುಂದರ ಪ್ರತಿ ೪ ರೂ.**

ವಿಳಾಸ :- ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಿಕೋಟಾ, ಜಿಲ್ಹಾ:— ವಿಜಾಪುರ.

ಸುಬೋಧ ಹಿಂದೀ ಕನ್ನಡ ವ್ಯಾಕರಣ

● ★ ●

ಇದನ್ನು ಬರೆದವರು ಹಿಂದೀ ಕ್ಷೇತ್ರದಲ್ಲಿ ಹೆಸರು ಪಡೆದ **ಶ್ರೀ ಗುರುನಾಥ ಜೋಶಿ** ಅವರು. ತಮ್ಮ ಆಳವಾದ ದಿಂದ ಅಲ್ಲಲ್ಲಿ **ಕನ್ನಡ ವ್ಯಾಕರಣಕ್ಕೆ ಹೋಲಿಸಿ** ಸುಲಭ ಭಾಷೆಯಲ್ಲಿ ಸರ್ವರಿಗೂ **ತಿಳಿಯುವಂತೆ** ಬರೆದಿದ್ದಾರೆ. ಲ್ಲಿ ಕೇವಲ ವ್ಯಾಕರಣದ ನಿಯಮಗಳು ಇರದೆ ಹಿಂದೀಯಿಂದ ಕನ್ನಡಕ್ಕೂ ಕನ್ನಡದಿಂದ **ಹಿಂದೀಗೂ** ಂತರ **ಮಾಡುವದಕ್ಕೆ ವಾಕ್ಯಗಳೂ ಕೊಡಲ್ಪಟ್ಟಿವೆ.** ಇದರಿಂದ **ಕಲಿಯಬಯಸುವವರೆಲ್ಲರೂ ಸುಲಭವಾಗಿ** ಯನ್ನು ಕಲಿಯಬಹುದಾಗಿದೆ. ಈ ಪುಸ್ತಕವನ್ನು ಕನ್ನಡದ ಸುಪ್ರಸಿದ್ಧ ಸಾಹಿತಿಗಳಾದ, **ಪ್ರಿನ್ಸಿಪಾಲ ಕೆ. ಗೋಕಾಕ ಅವರು ಸ್ವಾಗತಿಸಿದ್ದಾರೆ.** ಇಂದೇ ಇದನ್ನು ತರಿಸಿಕೊಂಡು ಹಿಂದೀಯನ್ನು **ಕಲಿಯಿರಿ.** ನೂರಾ **ಹನ್ನೆರಡು ಪುಟಗಳು!** ಬೆಲೆ **ಕೇವಲ** ೧೪ ಆಣೆ. **ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ನು !**

ಕೆಳಗಿನ ಪತ್ತೆಗೆ ಬರೆಯಿರಿ.

ಕನ್ನಡ ಸಾಹಿತ್ಯ ಪ್ರಕಾಶನ, ಧಾರವಾಡ.

(೩೮ನೆಯ ಪುಟದಿಂದ ಬಂದದ್ದು)

ಇಂದಿನ ಯುಗದ ಅಗತ್ಯಗಳೂ ಸಮಸ್ಯೆಗಳೂ ಬೇರೆಯಾಗಿವೆ. ಅದಕ್ಕೆ ಅನುಗುಣವಾದ, ನಿಜವಾದ ಸ್ವಾತಂತ್ರ್ಯದ ಗುರಿಯ ಕಡೆಗೆ ಸಾಗುವ, ಎಲ್ಲರ ಹಿತವನ್ನು ಸಾಧಿಸುವ ವಿದ್ಯಾಭ್ಯಾಸದ ವ್ಯವಸ್ಥೆಯನ್ನು ಮಾಡುವದಕ್ಕೆ ಈ ಸಮಸ್ಯೆಗಳು ಈ ದೊಡ್ಡ ದೇಶದ ನಾಗರಿಕರಿಗೆ ಆಹ್ವಾನವನ್ನಿತ್ತಿವೆ.

ನಮ್ಮ ಮುಂದಿನ ಪ್ರಶ್ನೆಯು ಇಂತಿದೆ: ಈ ಮಹಾ ಆಹ್ವಾನಕ್ಕೆ ಉತ್ತರ ಕೊಡುವ ಸಾಹಸವನ್ನು ನಾವು ಮಾಡೋಣವೋ ಬೇಡೋ? ಒಂದು ದೃಢಸಂಕಲ್ಪವನ್ನು ಮಾಡಿ ಭಾರತದ ಕಲ್ಯಾಣಕ್ಕೆ ಅಷ್ಟೇ ಅಲ್ಲದೆ ಎಲ್ಲರ ಕಲ್ಯಾಣಕ್ಕೆ ಬೇಕಾಗುವ ಒಂದು ಶಿಕ್ಷಣ ವಿಜ್ಞಾನವನ್ನು, ಒಂದು ವಿದ್ಯಾಭ್ಯಾಸದ ಕಾರ್ಯಕ್ರಮವನ್ನು ರಚಿಸೋಣವೋ ಬೇಡವೋ?

ಈ ಪ್ರಶ್ನೆಗೆ ಒಂದೇ ಉತ್ತರ: ಈ ಯುಗವು ನಮಗೆ ಇತ್ತ ಆಹ್ವಾನವನ್ನು ಸ್ವೀಕರಿಸಿ ಆರ್ಥಿಕ, ನೈತಿಕ, ಬೌದ್ಧಿಕ ಸಾಧನಗಳನ್ನೆಲ್ಲ ಕೂಡಿಸಿ ಅದಕ್ಕೆ ಉತ್ತರವನ್ನು ಹುಡುಕೋಣ.

ನಾವು ಬಡತನ, ಐಶ್ವರ್ಯವನ್ನು ದುಡ್ಡಿನಿಂದ ಅಳೆಯುವದಾದರೆ ನಮ್ಮ ದೇಶವು ಬಡ ದೇಶವೇ ಸರಿ. ಜಗತ್ತಿನ ಬಹುಸಂಖ್ಯಾಕ ಜನರ ಸ್ಥಿತಿಯೂ ಹೀಗೆಯೇ ಇದೆ. ಬಡ ಜನರೇ ಇತರ ಬಡ ಜನರ ಶೈಕ್ಷಣಿಕ ಅಗತ್ಯಗಳಿಗೆ ಸರಿಹೋಗುವ ವ್ಯವಸ್ಥೆಯನ್ನು ಸೂಚಿಸಬಲ್ಲರು. ರಾಷ್ಟ್ರೀಯ ಶಿಕ್ಷಣದ ಒಂದು ವಿಸ್ತೃತ ಕಾರ್ಯಕ್ರಮವನ್ನು ಅಮಲಿನಲ್ಲಿ ತರುವದಕ್ಕೆ ಬೇಕಾಗುವ ತರಬೇತಿ ಹೊಂದಿದ ಸುಶಿಕ್ಷಿತ ಅಧ್ಯಾಪಕರ ಸಂಖ್ಯೆಯು ಈಗ ಸಾಕಷ್ಟಿಲ್ಲ; ಇದು ನಮಗೆ ಗೊತ್ತಿದೆ. ಇತರ ಎಷ್ಟೋ ದೇಶಗಳಲ್ಲಿಯೂ ಈ ಪರಿಸ್ಥಿತಿ ಇದೆ. ನಮ್ಮ ದೇಶದ ಸುಶಿಕ್ಷಿತ ಮತ್ತು ಸ್ಥಿತಿವಂತ ವರ್ಗದವರು ಜನಸಾಮಾನ್ಯರ ಸುಖ ದುಃಖಗಳಿಗೆ ಲಕ್ಷ್ಯಹಾಕುವದಿಲ್ಲ. ಪ್ರಪಂಚದಲ್ಲಿ ಎಲ್ಲವೂ ಹೀಗೆಯೇ ಇದೆ. ನಮ್ಮ ಸಮಸ್ಯೆಗಳು ನಮಗಷ್ಟೇ ಸಂಬಂಧಿಸಿದವಾಗಿರದೇ ಜಗತ್ತಿನ ಭಾಗ್ಯಹೀನ ಜನರೆಲ್ಲರಿಗೂ ಸಂಬಂಧಿಸಿದವಾಗಿವೆ. ಈ ಸಾಮಾನ್ಯ ಸಮಸ್ಯೆಗೆ ನಾವು ನಮ್ಮಿಂದ ಆಗುವ ನಿವಾರಣೆಯ ಪ್ರಯತ್ನ ಮಾಡಲೇಬೇಕು.

ಇದಕ್ಕೆ ನಾವು ನಮ್ಮ ಗುರಿಯನ್ನು ಸ್ಪಷ್ಟವಾಗಿ ಅರಿತುಕೊಳ್ಳಬೇಕು, ಅದರ ಮೂಲಭೂತವಾದ ತತ್ತ್ವಗಳನ್ನು ನಿರ್ದಿಷ್ಟಪಡಿಸಬೇಕು; ಈ ಗುರಿ, ತತ್ವಗಳಿನುಸರಿಸಿ ಒಂದು ಶಿಕ್ಷಣ ವ್ಯವಸ್ಥೆಯನ್ನು ಅಸ್ತಿತ್ವದಲ್ಲಿ ತರುವ ನಿರ್ಧಾರವನ್ನು ಮಾಡಬೇಕು.

ಮತಭೇದವಾವುದೂ ಇಲ್ಲದ ಮೊದಲನೆಯ ನಿರ್ದೇಶಕ ತತ್ತ್ವವಾವುದೆಂದರೆ ಶಿಕ್ಷಣವು ಎಲ್ಲರಿಗಾಗಿಯೂ ಎಲ್ಲರ ಶ್ರೇಯಸ್ಸಿಗಾಗಿಯೂ ಇರಬೇಕು. "ಜನರಿಗಾಗಿ ಶಿಕ್ಷಣ, ಜನರಿಂದ ಶಿಕ್ಷಣ, ಜನರ ಶಿಕ್ಷಣ"– ಈ ತತ್ವವನ್ನು ಎಲ್ಲರೂ ತಾತ್ವಿಕವಾಗಿ ಒಪ್ಪುತ್ತಾರೆ— "ಪ್ರಜಾಸತ್ತೆಯ ಆಡಳಿತಕ್ಕಾಗಿ ಶಿಕ್ಷಣ"—ಎಂಬುದೇ ಈ ಕಾಲದ ಕೂಗು. ಆದರೆ ನಾವು ಪ್ರಾಮಾಣಿಕರಾಗಿ ಹೇಳುವದಾದರೆ ದೇಶದಲ್ಲಿಯ ಇದುವರೆಗಿನ ಶಿಕ್ಷಣ ಧೋರಣವೂ ಕಾರ್ಯಕ್ರಮವೂ ಈ ತತ್ವವನ್ನು ಅನುಷ್ಠಾನಕ್ಕೆ ತಂದಿಲ್ಲ. ಅದು ಅಲ್ಪ ಸಂಖ್ಯಾಕ ಭಾಗ್ಯವಂತರ ವರ್ಗದ ಬೇಡಿಕೆಗಳ ಪೂರ್ತಿಯಾಗಿದೆ. ಭಾರತದಲ್ಲಿ ಅಥವಾ ಪ್ರಪಂಚದಲ್ಲಿ ಶಿಕ್ಷಣವು ಎಲ್ಲರಿಗೂ ಎಲ್ಲರ ಹಿತಕ್ಕೂ ಇರುವದಾದರೆ ಅದು ಸಾಮಾನ್ಯ ಜನಸಮೂಹದ ಅಗತ್ಯಗಳಿಗೆ ಸಂಬಂಧಿಸಬೇಕು. ಈ ಜನರು ಅತಿ ಕಷ್ಟಕರವಾದ ಸ್ಥಿತಿಯಲ್ಲಿ, ಜೀವನಕ್ಕೆ ಅವಶ್ಯವಿರುವ ವಸ್ತುಗಳನ್ನು ನಿರ್ಮಿಸುವ ಕೈಕೆಲಸದಲ್ಲಿ, ತೊಡಗಿರುತ್ತಾರೆ. ಆದ್ದರಿಂದ ಭಾರತದ ಮುಂದಿನ ಪ್ರಾಥಮಿಕವಾಗಲಿ ಮಾಧ್ಯಮಿಕವಾಗಲಿ, ವಿಶ್ವವಿದ್ಯಾಲಯದ ಮಟ್ಟದ್ದಾಗಲಿ ವಿದ್ಯಾಭ್ಯಾಸವು ಭಾಗ್ಯವಂತರ ಪರಂಪರೆಯ ರೀತಿ ನೀತಿಗಳಿಂದ ಮುಕ್ತವಾಗಿ ಕೆಳಮಟ್ಟದ ಜನರ ಜೀವನದೊಂದಿಗೆ ಒಂದಾಗಬೇಕು. ನಮ್ಮದು ಬಡ ದೇಶ, ನಮ್ಮ ಶಿಕ್ಷಣವು, ಮಾನವರ ಸೇವೆಗಾಗಿ ತಮ್ಮ ಸ್ವ ಕೈಗಳಿಂದ ಪರಿಶ್ರಮಿಸುವ, ಬಡ ಜನರ ಶಿಕ್ಷಣ. ಹೀಗೆ ಹೇಳುವ ಧೈರ್ಯವೂ ಸಾಮರ್ಥ್ಯವೂ ನಮ್ಮಲ್ಲಿವೆಯೇ?

"ಎಲ್ಲರಿಗಾಗಿ ಶಿಕ್ಷಣ, ಎಲ್ಲರ ಹಿತಕ್ಕಾಗಿ ಶಿಕ್ಷಣ" ಎಂಬ ನಿರ್ದೇಶಕವನ್ನು ನಾವು ಒಪ್ಪಿಕೊಂಡರೆ "ಎಲ್ಲರ ಹಿತ"ವೆಂಬದಾವದು ಎಂಬದರ ಸ್ಪಷ್ಟ ಕಲ್ಪನೆಯು ನಮಗೆ ಬೇಕು— ಈಗ ನಮ್ಮ ದೇಶದಲ್ಲಿಯ ಆರ್ಥಿಕ ಸಾಮಾಜಿಕ ರೀತಿ ನೀತಿಗೆ ಸರಿ ಹೋಗುವ ಕಲ್ಪನೆಯು ಬೇಕು; ಅದು ಈ ಕಾಲದ ತಾತ್ಪೂರ್ತಿಕ ಅವಶ್ಯಕತೆಗಳನ್ನು ಮಾತ್ರ ಪೂರಯಿಸುವದಾಗಿರದೆ ಮಾನವ ಸಮಾಜದ ಮೂಲಭೂತವಾದ ನೈತಿಕ ಶಾಸನಗಳ ಮೇಲೆ ನಿಂತು ಸಾರ್ವಕಾಲಿಕ ಮೌಲ್ಯದ್ದಾಗಿರಬೇಕು.

(ಮುಂದುವರಿಯುವದು)

ಶಾಲಾ ಆಹಾರದ ಶೈಕ್ಷಣಿಕ ಹಾಗು ಸಾಮಾಜಿಕ ಪಾರ್ಶ್ವಗಳು

ಶ್ರೀ ಎಮ್. ಬಿ. ಪಾಟೀಲ–ಕುಲಕರ್ಣಿ, ಸರಕಾರೀ ಗಂಡು ಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.

ಮಕ್ಕಳು ಸರಿಯಾದ ಭೋಜನ ಚಟಗಳನ್ನು ಅಳವಡಿಸಿಕೊಳ್ಳುವಲ್ಲಿ ಶಾಲಾ ಭೋಜನ ವ್ಯವಸ್ಥೆಗೆ ಅಗ್ರಪಟ್ಟವಿದೆ. ಆರೋಗ್ಯಕರ ಭೋಜನ ಚಟಗಳು ಅಂಟಿಕೊಂಡ ಮಕ್ಕಳು ತಮ್ಮ ಮನೆಯಲ್ಲಿಯೂ ಇಂಥ ವಾತಾವರಣವನ್ನೇ ಅಪೇಕ್ಷಿಸುತ್ತಾರೆ. ಅಂತಿಮವಾಗಿ ಈ ಒಳ್ಳೆಯ ಚಟಗಳು ಇಡಿ ಸಮಾಜದಲ್ಲಿ ಪಸರಿಸದಿರಲಾರವು. ಆದುದರಿಂದಲೆ ಶಾಲಾ ಆಹಾರವು ಶೈಕ್ಷಣಿಕ ಮಹತ್ತ್ವವುಳ್ಳದ್ದೆಂದು ಹೇಳುವದುಂಟು. ಇದು ಎಷ್ಟರಮಟ್ಟಿಗೆ ಸತ್ಯದ ಒರೆಗಲ್ಲಿಗೆ ನಿಲ್ಲಬಹುದು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಶಾರೀರಿಕ ಹಾಗು ಶೈಕ್ಷಣಿಕ ದೃಷ್ಟಿಯಿಂದ ಮಗುವು ಇನ್ನೂ ತೀರ ಪ್ರಾರಂಭಿಕ ಹಂತದಲ್ಲಿರುತ್ತದೆ. ಬೆಳಿಗೆಯ, ಚಟುವಟಿಕೆಯ ಮಗುವಿನ ದೈನಂದಿಕ ಊಟದಲ್ಲಿ ಸಾಕಷ್ಟು ಪೌಷ್ಟಿಕ ದ್ರವ್ಯಗಳಿರುವದು ಆವಶ್ಯಕವಿರುತ್ತದೆ. ಪೋಷಣ ದೃಷ್ಟಿಯಿಂದ ಹಾಗು ಮಗುವಿನಲ್ಲಿ ಒಳ್ಳೆಯ ಚಟಗಳು ರೂಪಗೊಳ್ಳುವಲ್ಲಿ ಯೋಜನಾಬದ್ಧ ಶಾಲಾ ಆಹಾರವು ಸನ್ನದ್ಧವಾಗಿರುವದರಲ್ಲಿ ಸಂದೇಹವಿಲ್ಲ.

ಇಲ್ಲಿ ಒಂದು ಮಾತನ್ನು ಹೇಳುವದವಶ್ಯವಾಗಿದೆ. ಶಾಲೆಯಲ್ಲಿ ಅಡಿಗೆಯನ್ನು ತಯಾರಿಸುವ ಹಾಗು ಉಣ್ಣುವ ಪದ್ಧತಿಯು ಮನೆಯಲ್ಲಿಗಿಂತ ಒಡೆದು ಕಾಣುವಂತೆ ಭಿನ್ನವಿರಕೂಡದು. ಹಾಗಿದ್ದ ಪಕ್ಷದಲ್ಲಿ ಶಾಲೆ ಹಾಗು ಮನೆಯ ನಡುವೆ ಯಾವ ಹಾರ್ದಿಕ ಸಂಬಂಧವೂ ಕಂಡು ಬರುವದಿಲ್ಲ. ಶಾಲೆ ಹಾಗೂ ಮನೆಗಳ ದೃಷ್ಟಿಕೋನದಲ್ಲಿ ಏಕತೆ ಇರದಿದ್ದರೆ ಮಗುವು ಏನನ್ನೂ ಕಲಿಯಲಾರ. ಮಗುವಿಗೆ ಅವು ಪರಸ್ಪರ ಹೊಂದಾಣಿಕೆಯಿಲ್ಲದ, ಸಿಡಿದು ನಿಂತ ಎರಡು ಜಗತ್ತುಗಳಾಗಿ ಕಂಡು ಬರುವವು. ಶಾಲೆ ಹಾಗು ಮನೆಗಳಲ್ಲಿ ಹೊಂದಾಣಿಕೆಯಿದ್ದರೆ ಶಾಲಾ ಆಹಾರದಿಂದ ಉತ್ತೇಜಿತನಾದ ಮಗುವು ಮನೆಯಲ್ಲಿ ಅದರ ಬಗ್ಗೆ ಚರ್ಚೆ ಮಾಡಿ ಕುಟುಂಬದ ಕುತೂಹಲವನ್ನು ಕೆರಳಿಸುತ್ತಾನೆ; ಮತ್ತು ಬಹುಶಃ ಮನೆಯ ಆಹಾರದ ಆಯ್ಕೆಯ ಮೇಲೆ ಪರಿಣಾಮ ಬೀರಲು ಶಕ್ತನಾಗುತಾ ನೆ.

ಊನ ಪೋಷಣೆ ಹಾಗು ಆರ್ಥಿಕ ಅವನತಿ ಇರುವ ದೇಶಗಳಲ್ಲಿ ಶಾಲಾ ಆಹಾರವು ಮಗುವಿನ ಆರೋಗ್ಯ ರಕ್ಷಾಕವಚವಾಗುತ್ತದೆ. ಇಂಥ ನಾಡುಗಳಲ್ಲಿಯೂ ಕೂಡ ಶಾಲಾ ಆಹಾರದ ಶೈಕ್ಷಣಿಕ ಪಾರ್ಶ್ವವನ್ನು ಮರೆಯಕೂಡದು. ಏನಿಲ್ಲೆಂದರೂ ಮಗುವು ತಾನು ಉಣ್ಣುವ ಆಹಾರದ ಮೇಲೆ ಆರೋಗ್ಯವವಲಂಬಿತವಾಗಿದೆ ಎಂಬುದನ್ನಾದರೂ ತಿಳಿದುಕೊಳ್ಳುವನು. ಸಂಬಂಧಿತ ಕುಟುಂಬಗಳು ಉಪಯುಕ್ತ ಆಹಾರ ಧಾನ್ಯ ಬೆಳೆಯುವಂತೆ ಪರಿಸ್ಥಿತಿ ನಿರ್ಮಾಣವಾಗುವದು. ಪೋಷಕ ದ್ರವ್ಯಗಳು ಆದಷ್ಟು ಕಡಿಮೆ ನಾಶವಾಗುವಂಥಹ ಪಾಕ ಸಿದ್ಧ ಮಾಡುವ ಕಲೆಗೆ ಉತ್ತೇಜನ ಸಿಗುವದು. ಮಗುವಿನಲ್ಲಿಯ ಸಂಶೋಧಕ, ಚಿಕಿತ್ಸಕ ಪ್ರವೃತ್ತಿಯ ಸದುಪಯೋಗ ಮಾಡಿಕೊಳ್ಳಬೇಕು. ಪೌಷ್ಟಿಕ ಆಹಾರವೆಂದರೇನು? ಆರೋಗ್ಯ ರಕ್ಷಣೆಯಲ್ಲಿ ಅದರ ಪಾತ್ರವಾವುದು? ಎಂಬ ಅನೇಕ ಮಹತ್ತ್ವದ ವಿಷಯಗಳ ಮೇಲೆ ಸರಿಯಾದ ಬೆಳಕು ಬೀಳುತ್ತದೆ. ಚಿಕಿತ್ಸಕ ಪ್ರವೃತ್ತಿಯ ಉದಾತ್ತೀಕರಣ ಸಾಧ್ಯವಾಗುತ್ತದೆ.

ಶಾಲಾ ಆಹಾರದ ವ್ಯವಸ್ಥೆಯಿಂದ ಪೌಷ್ಟಿಕ ಆಹಾರದ ಶಿಕ್ಷಣವನ್ನು ಸಂಬಂಧೀಕರಿಸುವ ಒಂದು ಉದ್ಬೋಧಕ ಉದಾಹರಣೆಯು 'ಇಸ್ರಾಯಿಲ'ದಲ್ಲಿ ಸಿಗುತ್ತದೆ. ಪ್ರಾಥಮಿಕ ಶಾಲೆಯ ೬, ೭, ೮ ನೆಯ ತರಗತಿಗಳ ವಿದ್ಯಾರ್ಥಿಗಳು ಪ್ರಾಯೋಗಿಕ ಪಾಕ ಶಾಲೆಗಳಲ್ಲಿ ಸರತಿಯಂತೆ ಕೆಲಸ ಮಾಡುತ್ತಾರೆ. ಪ್ರತಿ ವಿದ್ಯಾರ್ಥಿಯು ತಾನೆ ಆಯವ್ಯಯದ ಲೆಕ್ಕ ಇಡುತ್ತಾನೆ; ಹಾಗು ಪ್ರತಿ ದಿನದ ಆಹಾರದ ಖರ್ಚನ್ನು ತೆಗೆಯುತ್ತಾನೆ. ಇಂಥ ಅನುಭವದಿಂದ ಮಗುವು ಮಿತವ್ಯಯದ ಶುಚಿರ್ಭೂತ ಆಹಾರವನ್ನು ತಯಾರಿಸಲು ಕಲಿಯುತ್ತಾನೆ. ಹಾಗೂ ಎಲ್ಲರಿಗೂ ರುಚಿಸುವಂಥಹ ಆಹಾರವನ್ನು ಕಂಡುಕೊಳ್ಳುತ್ತಾನೆ.

ಶಾಲಾ ಭೋಜನದ ಸಂಬಂಧದಲ್ಲಿ ಬಾಲಕರ ಸಂಗಡ ಸಂಪರ್ಕ ಬರುವ ಶಿಕ್ಷಕರ ದೃಷ್ಟಿಕೋನಕ್ಕೆ ಮಹ

ತ್ತ್ವವಿದೆ. ಮಗುವಿನ ಮನಸ್ಸು ಕೋಮಲವಿರುತ್ತದೆ. ಹಿರಿಯರ ವಿಚಾರಗಳನ್ನು, ಚಟಗಳನ್ನು ಅನುಕರಿಸುತ್ತಿರುತ್ತಾನೆ. ಅದುದರಿಂದ ಕೇವಲ ಶಾಲಾ ಪರಿಸರದಲ್ಲಷ್ಟೇ ....ಮಗುವಿಗೆಪೌಷ್ಟಿಕತೆಯ ಬಗ್ಗೆ ಬೋಧಿಸಿದರೆ ಸಾಲದು. ಪಾಲಕ–ಶಿಕ್ಷಕರ ಸಮ್ಮೇಳನದಿಂದ ಶಾಲಾ ಭೋಜನ ಉಪಕ್ರಮದ ಬಗ್ಗೆ ಸರಿಯಾದ ಜ್ಞಾನ ಪ್ರಕಾಶ ಹರಡುವಂತೆ ನೋಡಿಕೊಳ್ಳಬೇಕು. ಪೋಷಣೆಯ ಬಗ್ಗೆ ನಿರಾಡಂಬರ ಭಾಷಣ ಹಾಗು ಶೈಕ್ಷಣಿಕ ಚಲನಚಿತ್ರಗಳ ವ್ಯವಸ್ಥೆ ಮಾಡಬೇಕು.

ಇನ್ನಿತರ ದೇಶಗಳ ಭೋಜನ ಪದ್ಧತಿ ಹಾಗು ಊಟದ ಪದಾರ್ಥಗಳನ್ನು ಬಳಕೆಯಲ್ಲಿ ತರುವದು, ಅಂತರ್ರಾಷ್ಟ್ರೀಯ ಸೌಹಾರ್ದತೆಯನ್ನು ಕಾಯುವಲ್ಲಿ, ಅಪೇಕ್ಷಣೀಯವಾಗಿದೆ. ಶಾಲಾ ಆಹಾರವು ಇಂಥ ಸುಸಂಧಿಯನ್ನು ಒದಗಿಸಬಲ್ಲದಾಗಿದೆ. ಹೊಸ ಊಟದ ಪದಾರ್ಥದ ರುಚಿ ತಿಳಿಯಲು ಹಾಗೂ ಅದರ ಪ್ರಚಾರ ಮಾಡಲು ಶಾಲಾ ಆಹಾರ ವ್ಯವಸ್ಥೆಯೆ ತಕ್ಕುದಾಗಿದೆ. ಏಕೆಂದರೆ ಚಟಗಳನ್ನು ಇನ್ನೂ ರೂಢಿಸಿಕೊಳ್ಳಬೇಕಾದ ಎಳೆಯ ಮಕ್ಕಳು ಹೊಸ ಆಹಾರವನ್ನು ಪ್ರೌಢರಿಗಿಂತ ಹೆಚ್ಚು ಆಸಕ್ತಿಯಿಂದ ಬರಮಾಡಿಕೊಳ್ಳುತ್ತಾರೆ. ಅವರ ಮನಸ್ಸು ಜ್ಞಾನದ ಎಲ್ಲ ಬಾಗಿಲುಗಳಿಗೂ ಮುಕ್ತವಿರುತ್ತದೆ.

ಶಾಲಾ ಆಹಾರವು ಒಳ್ಳೆಯ ಗುಣಗಳನ್ನು ರೂಢಿಸಬಲ್ಲ ಸಾಮಾಜಿಕ ಸಂಸ್ಥೆಯೂ ಆಗಬಲ್ಲದು. ಮಗುವು ತನ್ನ ಸಂಗಡಿಗ ಗೆಳೆಯರೊಡನೆ ಹಿರಿಯರ ಸಮ್ಮುಖದಲ್ಲಿ ಶಾಲಾ ಆಹಾರವನ್ನು ಆನಂದದಿಂದ ಆಸ್ವಾದನ ಮಾಡುತ್ತಾನೆ. ಆ ಸಮಯದಲ್ಲಿ ಒಳ್ಳೆಯ ಆಹ್ಲಾದಕ ಊಟದ ಪದ್ಧತಿ ಹಾಗು ಸಂತಸಪರ ಸಂಭಾಷಣೆ ಇವು ಆವಶ್ಯಕ ಎಂಬುದನ್ನು ಕಂಡುಕೊಳ್ಳುತ್ತಾನೆ. ಆಹಾರದ ಬಗ್ಗೆ ಎರಡನೆಯವರ ಅಭಿರುಚಿ, ದೃಷ್ಟಿಕೋನಗಳು ತನ್ನಂತೆಯೆ ಇರಬೇಕೆಂಬ ನಿಯಮವಿಲ್ಲ ಎಂಬುದನ್ನು ಅರಿಯುತ್ತಾನೆ. ಅಭಿರುಚಿಯಲ್ಲಿ ವೈವಿಧ್ಯತೆ ಇದ್ದರೂ ಅದು ಘರ್ಷಣೆಗೆ ಮೂಲವಾಗಬಾರದೆಂದು ಕಂಡುಕೊಳ್ಳುತ್ತಾನೆ. ಎರಡನೆಯವರ ಭಿನ್ನಾಭಿಪ್ರಾಯಕ್ಕೆ ಗೌರವ ಕೊಡುವದು ಸೂಕ್ತವೆಂಬ ಮಂತ್ರದ ಅರಿವುಂಟಾಗುತ್ತದೆ. ಮಗುವು ಸಮಾಜದ ಸಂಘಟಿತ ಘಟಕವಾಗುವ ಯೋಗ್ಯತೆಯನ್ನು ಶಾಲಾ ಆಹಾರವು ಕೊಡಬಲ್ಲುದಾಗಿದೆ.

ಶಾಲಾ ಆಹಾರ ಹಾಗು ಮಗುವಿನ ಮನೆಯ ಜೀವನ ಇವುಗಳಲ್ಲಿಯ ಸಂಬಂಧವು ಗಣನೀಯವಾಗಿದೆ. ಶಾಲಾ ಆಹಾರ ವ್ಯವಸ್ಥೆಯು ಪ್ರಚಲಿತ ಧಾರ್ಮಿ
ಹಾಗು ಸಾಮಾಜಿಕ ಸಂಪ್ರದಾಯಗಳ ಸಂಗಡ ಘರ್ಷ
ಮಾಡುವ ಅನೇಕ ಸಂದರ್ಭಗಳು ಒದಗಬಹುದು. ಶಾ
ಯಲ್ಲಿಯ ಅಪರಾಹ್ನ ಕಾಲದ ಊಟವು ಮಗುವು ಮನೆ
ಮಧುರ ವಾತಾವರಣಕ್ಕೆ ಎರವಾಗುವಂತೆ ಮಾಡ
ದೆಂದು 'ಬೆಲ್ಜಿಯಮ್' 'ಆಯರ್ಲಂಡ'ಗಳಲ್ಲಿ ಕೂಗೆದ್ದಿ
ತಾಯಿಯು ನೌಕರಿಯನ್ನು ಮಾಡದ ಗರತಿಯಾಗಿದ
ತನ್ನ ಮಕ್ಕಳು ಮನೆಯಲ್ಲಿಯೆ ಊಟ ಮಾಡುವದ
ಸಾಮಾನ್ಯವಾಗಿ ಫ್ರಾನ್ಸದೇಶದ ಮಾತೆ ಪ್ರಬಲವಾ
ಇಚ್ಛಿಸುತ್ತಾಳೆ. ಮನೆಯ ಅಂತಃಕರಣ ಸಂಮೀ
ಮಧುರ ವಾತಾವರಣವನ್ನು ಎಂಥ ಉಚ್ಚ ಶ್ರೇಣಿ
ಶಾಲೆಯೂ ಹೊಂದಲಾರದು. ಆದರೂ ಕೂಡ ಸ
ಜದ ಅಂಧಶ್ರದ್ಧೆಗಳನ್ನು ನಿವಾರಿಸುವಲ್ಲಿ ವರ್ಗ–ವ
ಗಳ ಬೇರುಗಳನ್ನು ಸಡಿಲಿಸುವಲ್ಲಿ, ಮಕ್ಕಳ ಶಾಸ್ತ್ರೀ
ಪೋಷಣೆಯಲ್ಲಿ—ಶಾಲೆಯ ಸಾಂಘಿಕ ಊಟವು ಅ
ಶೀಯ ಪಾತ್ರವನ್ನು ವಹಿಸುವದೆಂಬುದು ನಿರ್ವಿವಾ
ಜಾತೀಯ ಸಂಕೋಲೆಗಳಿಂದ ಬಿಡಿಸಿ ಮಕ್ಕಳ
ಸ್ವಚ್ಛಂದ ಹಕ್ಕಿಗಳನ್ನಾಗಿ ಮಾಡಬೇಕಿದ್ದರೆ ಇ
ಸಾಂಘಿಕ ಊಟದ ವ್ಯವಸ್ಥೆಯು ಶಾಲೆಯಲ್ಲಿರುವ
ಅತ್ಯಾವಶ್ಯಕ.

ಶಾಲಾ ಆಹಾರಕ್ಕೆ ಇನ್ನೂ ಒಂದು ಬಗೆಯ ಆ
ಪವೇಳಬಹುದು. ಶಾಲೆಯಲ್ಲಿ ಪೌಷ್ಟಿಕ ಆಹಾರವ
ಕೊಡುವರೆಂದು ಕೆಲ ಪಾಲಕರು ತಮ್ಮ ಮಕ್ಕಳ ಮನೆ
ಊಟದ ಬಗ್ಗೆ ಅಲಕ್ಷಮಾಡಬಹುದು. ಆದರೆ ಸಾಮಾ
ವಾಗಿ ಅಜ್ಞಾನದ ಪರಿಹರಿದ ಯಾವ ಪಾಲಕನೂ ಇ
ತಪ್ಪು ಗ್ರಹಿಕೆಯನ್ನು ಮಾಡಿಕೊಳ್ಳಲಾರನು.

ಮಕ್ಕಳ ಕಲ್ಯಾಣದ ಕರ್ತವ್ಯವೆಂದರೆ 'ಹೊಣೆ
ಕೆಯ ಹಂಚಿಕೆ'ಎಂಬುದನ್ನು ನಿಸ್ಸಂದೇಹವಾಗಿ ಒಪ್ಪಿಕೊ
ಬೇಕು. ಅನುಭವದ ಅಸ್ತಿವಾರದ ಮೇಲೆ ಹೇಳುವದಾದ
ಶಾಲಾ ಭೋಜನಗಳು ಪಾಲಕರ ಪವಿತ್ರ ಕರ್ತವ್ಯದ
ಅನಾವಶ್ಯಕ ತೊಂದರೆಗಳನ್ನು ಒಡ್ಡಲಾರವು. ಶಾ
ಭೋಜನ ಯೋಜಕರಲ್ಲೂ ಪಾಲಕ ವರ್ಗದಲ್ಲೂ ಬಂಧು
ಸಂಬಂಧವನ್ನು ಕಾಯ್ದುಕೊಳ್ಳುವದೆ ಆದ್ಯ ಕರ್ತವ್ಯ
ಗಿದೆ. ಇದಕ್ಕಾಗಿ ಪಾಲಕರಿಗೆ ತಮ್ಮ ಹೊಣೆಗಾರಿಕೆ
ಅರಿವಾಗುವಂತೆ ಶಾಲಾ ಭೋಜನ ಚಟುವಟಿಕೆಗಳ
ಸಕ್ರಿಯ ಭಾಗವಹಿಸುವಂತೆ ಪ್ರೇರೇಪಿಸಬೇಕು. ಭಿ
ಪತ್ರಗಳು, ಚರ್ಚಾಕೂಟಗಳು, ಪ್ರದರ್ಶನ ಸಮಾರಂ

ಮೊದಲಾದ ಶೈಕ್ಷಣಿಕ ಚಟುವಟಿಕೆಗಳು ಈ ದಿಶೆಯಲ್ಲಿ ಅತ್ಯಂತ ಸಹಾಯಕವಾಗಿವೆ. ಮಗುವಿನ ಶಾರೀರ ದಾರ್ಢ್ಯವು ಮನೆ ಹಾಗು ಮಠಗಳ ಪರಸ್ಪರ ,ಸಹಕಾರ ಸಹಾಯಗಳ ಮೇಲೆಯೆ ಅವಲಂಬಿತವಾಗಿದೆ ಎಂಬುದು ಸ್ವಚ್ಛಳವಾದ ಸತ್ಯ ಸಂಗತಿ. ಶಾಲಾ ಆಹಾರವು ಸರಿಯಾಗಿ ಸಂಯೋಜಿಸಲ್ಪಟ್ಟರೆ ಶಿಕ್ಷಣದಲ್ಲಿಯ ಪಾಲಕರ ಸಹಕಾರದ ವಿರಾಟ ಸಮಸ್ಯೆಯು ತಾನಾಗಿಯೆ ಬಿಟ್ಟು ಹೋಗುತ್ತದೆ.

ಶಾರೀರ ಸೌಷ್ಠವವುಳ್ಳ ಮಕ್ಕಳು ನಿರ್ಮಾಣವಾಗುವಂತೆ ಮಾಡುವದು ಶಿಕ್ಷಣದ ಸ್ವೀಕೃತ ಧ್ಯೇಯವಾಗಿದೆ. ಎಲ್ಲ ಐಹಿಕ ಸಾಧನೆಗಳಿಗೂ ಆರೋಗ್ಯವು ಮೂಲಭೂತವಾದದ್ದು. ಮಗುವಿನ ಮಾನಸಿಕ ಹಾಗು ನೈತಿಕ ವಿಕಾಸಕ್ಕೆ ದೈಹಿಕ ವಿಕಾಸವು ತಳಹದಿಯಾಗಿದೆ. ಆರೋಗ್ಯಹೀನನಾದ ದುರ್ಬಲ ವ್ಯಕ್ತಿಯ ಬುದ್ಧಿಶಕ್ತಿ, ಪಾಂಡಿತ್ಯ ನಿರರ್ಥಕ. 'ನಿರ್ಮಲ ದೇಹದಲ್ಲಿ ಒಳ್ಳೆಯ ಮನಸ್ಸು' ಎಂಬುದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ದೇಹದಾರ್ಢ್ಯವಿಲ್ಲದ ವ್ಯಕ್ತಿಯ ಮಾನಸಿಕ ಸಂಪತ್ತು ಪೂರ್ಣವಾಗಿ ವಿಕಸಿಸದೆ ವ್ಯರ್ಥವಾಗಿ ಮೊಗ್ಗೆಯಲ್ಲಿಯೆ ಮುದುಡ ಬಹುದು. ಉದ್ಯೋಗ ಶೀಲತೆ, ಸಹನಶೀಲತೆ, ಗಾಢ ಆಲೋಚನಾಶಕ್ತಿ ಮುಂತಾದವುಗಳು ದೈಹಿಕ ಆರೋಗ್ಯದ ಮೇಲೆ ಅವಲಂಬಿತವಿರುತ್ತವೆ. ಮಾನಸಿಕ ಸಂಪತ್ತು ಪೂರ್ಣಫಲಪ್ರದವಾಗಬೇಕಾದರೆ ದೈಹಿಕ ಆರೋಗ್ಯವನ್ನು ದುರ್ಲಕ್ಷಿಸುವಂತಿಲ್ಲ. ಇದೂ ಅಲ್ಲದೆ ಯಾವನೊಬ್ಬ ಬಡಕಲು ವ್ಯಕ್ತಿಯಲ್ಲಿಯ ಸಹಕಾರ, ಸದ್ಭಾವನೆ, ಪರೋಪಕಾರ ಮುಂತಾದ ಒಳ್ಳೆಯ ನೈತಿಕ ವಿಚಾರಗಳು ಆಚರಣೆಯಲ್ಲಿಬಾರದೆ ಮುಗಿಲು ಮಲ್ಲಿಗೆಯಾಗಬಹುದು. ಸುವಿಚಾರಗಳು ಆಚಾರದಲ್ಲಿ ಬರಬೇಕಾದರೆ ಆರೋಗ್ಯವು ಅಡಿಗಲ್ಲಾಗಿರಬೇಕು. ಆರೋಗ್ಯವು ಮುಖ್ಯವಾಗಿ ಆಹಾರದ ಮೇಲೆ ಅವಲಂಬಿತವಾಗಿರುತ್ತದೆ.

ನಮ್ಮ ನಾಡು ಬಡವರ ಬೀಡು; ಅಜ್ಞಾನಿಗಳ ಬೀಡು. ಮಕ್ಕಳಿಗೆ ಪೌಷ್ಟಿಕ ಆಹಾರದ ಆವಶ್ಯಕತೆಯ ಮಹತ್ತ್ವವು ಅನೇಕರಿಗೆ ಗೊತ್ತಿಲ್ಲ. ಆದುದರಿಂದ ರಾಷ್ಟ್ರೀಯ "ಶಾಲಾ ಆಹಾರ" ವ್ಯವಸ್ಥೆಗೆ ಅತ್ಯಂತ ಮಹತ್ತ್ವವಿದೆಯೆಂಬುದು ನಿರ್ವಿವಾದ. ಜ್ಞಾನ ಲಾಲಸೆ, ಸೌಂದರ್ಯಾನುಭೂತಿ, ಹೃದಯ ಪರಿಪಕ್ವತೆ ಇವುಗಳ ಸಂಗೋಪನೆಯ ಗರಡೀ ಸಾಧನೆ ಶಾಲೆಯ ಪವಿತ್ರ ವಾತಾವರಣವೆ ಆಗ ಬೇಕಾದುದು ಅವಶ್ಯವಾಗಿದೆ.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ: ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ
ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ ಎಸ್. ಕೆ. ಜೋಶಿ, ಮತ್ತು
ಶ್ರೀ ಜಿ. ಡಿ. ವಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. **ಬೆಲೆ ೧—೧೨—೦** ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.
ಇದು ಕನ್ನಡದಲ್ಲಿಯೂ ಸಿಗುತ್ತದೆ,

ಜಿ. ವಾಯ್. ರಾಣೆ
ಪ್ರಕಾಶಕರು, ೩೪೩, ಕಸಬಾ ಪೇಟ ಪುಣೆ.

೧೯೫೬ನೆಯ ಇಸವಿಯಿಂದ ಪ್ರಾರಂಭವಾಗುವ ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

ಶೇಲಾರ ಕೃತ

ಪ್ರಾಥಮಿಕ ಭೂಮಿತಿ

[ಕ್ಷೇತ್ರಫಲ ಘನಫಲ ಸಹಿತ]

೪ ರಿಂದ ೭ ನೇಯ ವರ್ಗದ ವರೆಗಿನ ವಿಷಯವನ್ನೆಲ್ಲ ಒಳಗೊಂಡಿದೆ.

ಬೆಲೆ: ೧ರೂ. ೮ಆಣೆ ಮಾತ್ರ

ದೊರೆಯುವ ಸ್ಥಳ:—

ಸಾಯಿ ಪಬ್ಲಿಶಿಂಗ್ ಹಾವುಸ್,
ವಿಜಯ ರೋಡ, ಧಾರವಾಡ.

ಮೂಲ ಶಿಕ್ಷಣದ ಅರಿವು

(ಹಿಂದಿನಿಂದ ಸಾಗಿಬಂದದ್ದು)

ಅನುವಾದಕರು : **ಶ್ರೀ ಶಿಂತ್ರಿ ಬಸಪ್ಪನವರು,** ಬಿ.ಎ.,ಬಿ.ಟಿ.

ಸಾಮೂಹಿಕ ಪ್ರಾರ್ಥನೆಯನ್ನಿಟ್ಟುಕೊಳ್ಳುವದು ಹೆಚ್ಚಿನ ಸಂಸ್ಕೃತಿಯ ಲಕ್ಷಣವಾಗಿದ್ದಂತೆ ಮೂಲ ಶಿಕ್ಷಣಕ್ಕೆ ಅಗತ್ಯವಾಗಿ ಬೇಕಾಗಿದ್ದ ಲಕ್ಷಣವೂ ಆಗಿದೆ. ಧರ್ಮದ ಹುಚ್ಚು ಒಂದು ತರಹದ ರೋಗವಿರುವದರಿಂದ ಅದನ್ನು ತೆಗೆದೊಗೆಯುವದು ಲೇಸು. ಅದೊಂದು ಬೌದ್ಧಿಕ ವಿಷಮ ದೃಷ್ಟಿಯ ಹಾಗೂ ಅಪಕ್ವ ವಿಚಾರದ ಗುರುತು. ತನ್ನ ಧರ್ಮವು ತನಗೆ ಹಿತವನ್ನುಂಟು ಮಾಡುವದರಿಂದ ಅದರಂತೆ ವರ್ತಿಸಲು ಪ್ರತಿಯೊಬ್ಬನು ಸ್ವತಂತ್ರನಿರುವಂತೆ ಬೇರೆಯವರ ಧರ್ಮಗಳು ಅವರವರಿಗೆ ಹಿತಕಾರಿಯಾಗಿರುವದರಿಂದ ಆಯಾ ಧರ್ಮಗಳ ಬಗೆಗೆ ಪ್ರತಿಯೊಬ್ಬನು ಗೌರವವನ್ನು ತಳೆಯಬೇಕು. ಈ ಸಂದರ್ಭದಲ್ಲಿ ಸಾಮಾಜಿಕ ರೂಢಿಗಳಿಗೂ ಧರ್ಮಕ್ಕೂ ಆವ ಸಂಬಂಧವು ಇಲ್ಲವೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳುವದೊಳಿತು. ಅಸ್ಪೃಶ್ಯತೆಯು ದುಷ್ಟ ಸಾಮಾಜಿಕ ಪದ್ಧತಿಯಾಗಿರುವದರಿಂದ ಅದನ್ನು ಸರ್ವ ವಿಧದಿಂದಲೂ ತೆಗೆದು ಹಾಕಬೇಕು. ಅದರಂತೆ, ಚಿಕ್ಕ ವಯಸ್ಸಿನಲ್ಲಿ ಲಗ್ನ ಮಾಡುವದು, ವರದಕ್ಷಿಣೆ, ಇವೂ ಸಹ ದುಷ್ಟ ಪದ್ಧತಿಗಳು. ಇಂತಹ ಪದ್ಧತಿಗಳು ಎಲ್ಲ ಧರ್ಮಗಳಲ್ಲಿರುವದುಂಟು. ಈ ಪದ್ಧತಿಗಳಿಗೂ ಆಯಾ ಧರ್ಮಗಳ ತಾತ್ತ್ವಿಕ ವಿಚಾರಗಳಿಗೂ ಆವ ಸಂಬಂಧವೂ ಇರುವದಿಲ್ಲ. ಪರಧರ್ಮಸಹಿಷ್ಣುತೆಯು ಸಂಸ್ಕೃತಿಗೆ ಅವಶ್ಯವಾಗಿ ಬೇಕಾಗಿದ್ದಂತೆ ಪ್ರಜಾಪ್ರಭುತ್ವವುಳ್ಳ ಸಮಾಜದ ಕಾರ್ಯಾಚರಣೆಗೂ ಅಗತ್ಯವಾಗಿ ಬೇಕು. ನಮ್ಮಲ್ಲಿ ಪರಸ್ಪರ ಒಕ್ಕಟ್ಟು, ಪ್ರೇಮಾದರ ಭಾವನೆಗಳನ್ನು ಹುಟ್ಟಿಸಲು ನಾವೆಲ್ಲರು ಸಾಮೂಹಿಕ ಪ್ರಾರ್ಥನೆಗೋಸ್ಕರ ಒತ್ತಟ್ಟಿಗೆ ಕಲೆಯುವದವಶ್ಯವಿದೆ. ಸಾಲೆಗೆ ಬರುವ ಎಲ್ಲ ಜಾತಿಗಳ ಹಾಗೂ ಸಮಾಜಗಳ ಮಕ್ಕಳಿಗೆ ಕಲಿಸಬೇಕಾಗುವ ಶಿಕ್ಷಕರಿಗಂತೂ ಈ ಮಾತು ಇನ್ನೂ ಹೆಚ್ಚಿನ ಮಹತ್ವವುಳ್ಳದ್ದಿದೆ. ನಮ್ಮ ಮೂಲ ಶಿಕ್ಷಣದ ಟ್ರೇನಿಂಗ ಸಂಸ್ಥೆಗಳಲ್ಲಿಯ ಕೌಟುಂಬಿಕ ಜೀವನದಲ್ಲಿ ಮುಂಜಾನೆಯ ಹಾಗೂ ಸಂಜೆಯ ಸಾಮೂಹಿಕ ಪ್ರಾರ್ಥನೆಗಳಿಗೆ ಸ್ಥಾನವಿರುವದು ಲೇಸು. ಎಲ್ಲ ಧರ್ಮಗಳ ಉಪದೇಶಗಳನ್ನು ಸಹಾನುಭೂತಿಯಿಂದಲೂ ಗೌರವದಿಂದಲೂ ಅರಿತುಕೊಳ್ಳಲು ಈ ಸಂದರ್ಭದಲ್ಲಿ ಪ್ರಯತ್ನಿಸಬೇಕು. ಕ್ರಿಸ್ತ, ಮಹಮ್ಮ
ಬುದ್ಧ, ರಾಮ, ಕೃಷ್ಣ, ರಾಮಕೃಷ್ಣ, ಮುಂತಾದ
ಜಯಂತಿಗಳು ಬೇರೆ ಧರ್ಮಗಳ ಅಭ್ಯಾಸವನ್ನು ಮಾಡ
ಸುಪ್ರಸಂಗಗಳನ್ನು ಸಾಕಷ್ಟು ಒದಗಿಸಿ ಕೊಡುತ್ತಿ
[ನಮ್ಮಲ್ಲಿಯ ಬಸ್ತವ-ಮಧ್ವ-ಶಂಕರಾಚಾರ್ಯರ ಜಯಂ
ಗಳನ್ನು ಈ ಮಾ■ಯಲ್ಲಿ ಸೇರಿಸಲಡ್ಡಿಯಿಲ್ಲ–ಅನುವಾ
ಕರು].

ನಮ್ಮ ಸಂಸ್ಕೃತಿಯ ಹಿನ್ನೆಲೆಯನ್ನು ಬಲಪಡಿಸ
ನಮ್ಮ ಭಾಷೆಗಳನ್ನು ಹೆಚ್ಚು ಆಳವಾಗಿ ಅಭ್ಯಾಸ ಮಾ
ಬೇಕಾಗುವದು. ಪ್ರತಿಯೊಬ್ಬ ಪದವೀಧರನು ಪರಭಾ
ಯಾದ ಇಂಗ್ಲೀಷನ್ನು ಕಲಿಸಬಲ್ಲನಾದರೂ ತ
ತಾಯ್ನುಡಿಯಾದ ತಮಿಳು ಇಲ್ಲವೆ ತೆಲುಗನ್ನು ಕಲಿಸ
ಅನರ್ಹನೆಂದು ಗಣಿಸಲ್ಪಟ್ಟಿದ್ದುದು ನಮ್ಮ ದೇಶದಲ್ಲಿಂ
ದೊಂದು ವಿಲಕ್ಷಣವಾದ ಸಂಗತಿಯು. ಅದಕ್ಕೋಸ್ಕ
ಒಬ್ಬ ತಮಿಳು ಇಲ್ಲವೆ ತೆಲುಗು ಪಂಡಿತನೇ ಬೇಕ
ಮಿಡಲ್ ಸ್ಕೂಲುಗಳಲ್ಲಿ ಸಹ ತರಬೇತಿಯನ್ನು ಹೊಂದಿ
ಮಾಧ್ಯಮಿಕ ಶಿಕ್ಷಕನು ಇಂಗ್ಲೀಷ ಕಲಿಸಬಲ್ಲನಾದರ
ತಮಿಳು ಇಲ್ಲವೆ ತೆಲುಗು ಭಾಷೆಯನ್ನು ಕಲಿಸಲು ಆಯ
ಭಾಷೆಯ ಪಂಡಿತನೇ ಬೇಕು. ಇದರ ಅರ್ಥವೇನು
ಅರ್ಥವಿಷ್ಟೇ. ಪದವೀಧರನಾಗಲಿ ಇಲ್ಲವೆ ತರಬೇತನ
ಹೊಂದಿದ ಮಾಧ್ಯಮಿಕ ಶಿಕ್ಷಕನಾಗಲಿ ಪರಭಾಷೆಯಾ
ಇಂಗ್ಲೀಷನ್ನು ಕಲಿಸಲು ಸಾಕಷ್ಟು ಜ್ಞಾನವನ್ನು ಸಂ
ದಿಸಿದ್ದಾನೆ, ಆದರೆ ತನ್ನ ಮಾತೃಭಾಷೆಯನ್ನು ಕಲಿಸ
ಬೇಕಾಗುವ ಜ್ಞಾನಭಂಡಾರವು ಆತನಲ್ಲಿಲ್ಲ. ಇದರ ಪ
ಣಾಮದಿಂದ ನಮ್ಮ ಸಾಲೆ–ಕಾಲೇಜುಗಳಲ್ಲಿ,ನಮ್ಮ ಭಾ
ಗಳು ಕೀಳು ತರಗತಿಯನ್ನು ಹೊಂದಿದುದು ಕಂಡು ಬ
ತ್ತದೆ. ಕೆಳದರ್ಜೆಯಲ್ಲಿ ತಮಿಳು ಪಂಡಿತನನ್ನು ನೇ
ಸುವ ಪದ್ಧತಿಯು ಹಿಂದಿನ ಗುಲಾಮಗಿರಿಯ ಕಾಲ
ಕುರುಹು; ಅದನ್ನು ಬೇಗನೆ ಕಿತ್ತೊಗೆಯುವದು ಲೇಸ
ತನ್ನ ತಾಯ್ನುಡಿಯನ್ನು ಕಲಿಸಲು ಅವಶ್ಯವಿದ್ದ ಜ್ಞಾ
ಮಟ್ಟವನ್ನು ಪ್ರತಿಯೊಬ್ಬ ಶಿಕ್ಷಕನು ಸಂಪಾದಿಸಬೇಕ
ಮೇಲಿನ ಇಯತ್ತೆಗಳನ್ನು ಕಲಿಸಲು ಮಾತ್ರ ಆಳವಾ

ಜ್ಞಾನವು ಅವಶ್ಯ. ಹೀಗೆ ಮಾಡುವದರಿಂದ ನಮ್ಮ ಶಿಕ್ಷಕರೂ ವಿದ್ಯಾರ್ಥಿಗಳೂ ಹೆಚ್ಚಿನ ಸಂಸ್ಕೃತಿಯ ಹಿನ್ನೆಲೆಯನ್ನು ಪಡೆಯಲು ಸಹಾಯಕವಾದಂತಾಗುವದು.

ಟ್ರೇನಿಂಗ ಸಂಸ್ಥೆಯಿಂದ ಹೊರಬಿದ್ದ ಕೂಡಲೆ ಶಿಕ್ಷಕರ ತರಬೇತಿಯು ಮುಕ್ತಾಯವನ್ನು ಹೊಂದಿತೆಂದು ಕಲ್ಪಿಸಕೂಡದು. ಪದವೀಧರನಾದ ಕೂಡಲೆ ಹೇಗೆ ಜ್ಞಾನಾರ್ಜನೆಯು ಮುಗಿದಂತಾಗಲಾರದೋ [ಯಾಕಂದರೆ, ಜ್ಞಾನಾರ್ಜನೆಯು ಜೀವನದುದ್ದಕ್ಕೂ ಹಬ್ಬಿದೆ], ಹಾಗೆಯೇ ಶಿಕ್ಷಕನ ತರಬೇತು ಅನುಭವದಿಂದಲೂ ಅಭ್ಯಾಸದಿಂದಲೂ-ಆತನ ಜೀವನದುದ್ದಕ್ಕೂ ಹೆಚ್ಚುತ್ತ ಹೋಗುವದುಂಟು. ಶಿಕ್ಷಣವು ನಿತ್ಯವೂ ಬೆಳೆಯುತ್ತ ನಡೆದಿರುವದೊಂದು ವ್ಯಾವಹಾರಿಕ ಶಾಸ್ತ್ರವು. ಮಗುವಿನ ವಿಕಾಸಕ್ಕೋಸ್ಕರ ದಿನಾಲು ಹೊಸ ಸಂಗತಿಗಳು, ಹೊಸ ಪದ್ಧತಿಗಳು, ಹೊಸ ದೃಷ್ಟಿಗಳು, ಶೋಧಿಸಲ್ಪಡುತ್ತಲಿವೆ. ಮುಂಗಾಲು ಪುಟಿಗೆಯಿಂದ ಈ ಹೊಸ ವಿಚಾರಗಳನ್ನು ಅಳವಡಿಸಿಕೊಳ್ಳದಿದ್ದವನು ಸಮರ್ಥ ಹಾಗೂ ಪರಿಣಾಮಕಾರಕ ಶಿಕ್ಷಕನಾಗಲಾರ. ಈ ಉದ್ದೇಶಕ್ಕೋಸುಗ ನಮ್ಮ ಶಿಕ್ಷಕ-ಶಿಕ್ಷಕಿಯರಿಗೆ ಅವರವರ ನೌಕರಿಯ ಅವಧಿಯಲ್ಲಿ ಆಗಾಗ ಹೊಸ ತರಬೇತನ್ನು ಕೊಡುವ ಏರ್ಪಾಡನ್ನು ಮಾಡಿಡುವದು ಅವಶ್ಯವಿದೆ. ಇಂತಹ ತರಬೇತೆಂದರೆ ಮಾದರಿ ಸಂಸ್ಥೆಗಳಿಗೆ ಸಂದರ್ಶನಗಳು, ಸಾಮೂಹಿಕ ಸಮಸ್ಯೆಗಳನ್ನು ಚರ್ಚಿಸುವ ಶಿಕ್ಷಕ-ಶಿಕ್ಷಕಿಯರ ಸಭೆಗಳು, ಹೆಚ್ಚಿನ ಮಟ್ಟದ ಸಂಸ್ಥೆಗಳಲ್ಲಿ ಬೇಸಿಗೆಯಲ್ಲಿ ನಡೆಯುವ ವರ್ಗಗಳು, ಶೈಕ್ಷಣಿಕ ಸಮ್ಮೇಲನಗಳು, ಲಘು ತರಬೇತಿಯ ವರ್ಗಗಳು, ವ್ಯವಸಾಯಕ್ಕೆ ಸಂಬಂಧಿಸಿದ ವಿಷಯಗಳ ಬಗೆಗೆ ಭಾಷಣಗಳು ಹಾಗೂ ಲೇಖಗಳು. ನೌಕರಿಯಲ್ಲಿದ್ದವರಿಗೋಸ್ಕರ ಅತ್ಯಾಧುನಿಕ ತರಬೇತೆಂದರೆ "ಶಿಕ್ಷಕರ ಕಾರ್ಯಾಲಯಗಳು."

ಹೆಚ್ಚಿನ ಮಟ್ಟದ ಸಂಸ್ಥೆಗಳಲ್ಲಿ ಬೇಸಿಗೆಯಲ್ಲಿ ನಡೆಯುವ ವರ್ಗಗಳಲ್ಲಿ ನೌಕರಿಯಲ್ಲಿದ್ದ ಶಿಕ್ಷಕ-ಶಿಕ್ಷಕಿಯರಿಗೆ ಕೊಡ ಮಾಡಿದ ತರಬೇತು ವ್ಯವಸಾಯದ ಮುನ್ನಡೆಗೆ ಕಾರಣೀಭೂತವಾದ ಸಂಗತಿಯು ಮಹತ್ವವುಳ್ಳದ್ದೂ ಜನಪ್ರಿಯವೂ ಆಗಿದೆ. ನಮ್ಮ ಎಷ್ಟೋ ವಿಶ್ವವಿದ್ಯಾನಿಲಯಗಳೂ ಶಿಕ್ಷಕರ ಕಾಲೇಜುಗಳೂ ಇಂತಹ ವರ್ಗಗಳನ್ನು ಇನ್ನೂ ವರೆಗೂ ತೆರೆದಿಲ್ಲವೆಂಬುದು ದುರ್ದೈವದ ಸಂಗತಿಯು. ತಮ್ಮ ವ್ಯವಸಾಯದಲ್ಲಿ ಪ್ರಗತಿಯನ್ನು ಹೊಂದಲು ಉತ್ಕಟೇಚ್ಛೆಯುಳ್ಳ ಶಿಕ್ಷಕರಿಗೋಸ್ಕರ ಇಂತಹ ವರ್ಗಗಳನ್ನು ಪ್ರತಿವರ್ಷ ಬೇಸಿಗೆಯ ದೀರ್ಘ ಬಿಡುವಿನಲ್ಲಿ ತಪ್ಪದೆ ತೆರೆಯುವ ಏರ್ಪಾಡೊಂದನ್ನು ಮಾಡಿಡುವದವಶ್ಯವಿದೆ. ಬೇಸಿಗೆಯ ವರ್ಗಗಳಲ್ಲಿ ಬಹುತರವಾಗಿ ಉಪನ್ಯಾಸಗಳು ನಡೆಯುತ್ತಿವೆ; ಮತ್ತು ಶಿಕ್ಷಕರ ಕಾರ್ಯಾಲಯದಲ್ಲಿ ಮೂಲ ಕಾಯಕದ ಬಗೆಗಿದ್ದ ನಿರ್ದಿಷ್ಟ ಸಮಸ್ಯೆಗಳನ್ನು ಅನುಭವಿಕರೆಲ್ಲರು ಕೂಡಿಕೊಂಡು ಬಗೆಹರಿಸಿಕೊಳ್ಳುವರು. ಕಾರ್ಯಾಲಯದ ಮುಖ್ಯ ಲಕ್ಷಣಗಳೆಂದರೆ ಅನೌಪಚಾರಿಕತೆ, ಅನುಕೂಲತೆ, ಮತ್ತು ಕಾಯಕದಲ್ಲಿ ಹೆಚ್ಚಿನ ಕೌಶಲ್ಯವನ್ನು ಪಡೆಯುವ ಬಗೆ. ಅದು ವಾಡಿಕೆಯಾಗಿ ೨೦-೩೫ ಜನರದೊಂದು ಸಂಣ ತಂಡವಿರುತ್ತಿದೆ. ಸ್ವಾತಂತ್ರ್ಯ ಮತ್ತು ಆತ್ಮವಿಶ್ವಾಸ ಇವು ವಾಡಿಕೆಯಾಗಿ ಅದರ ಪರಿಣಾಮಗಳು. ಅದರಲ್ಲಿ ಪ್ರತಿಯೊಬ್ಬ ಸದಸ್ಯನು ತನಗೆ ಮನ್ನಣೆಯಿದೆಯೆಂದೂ ತನ್ನ ಸಮಸ್ಯೆಯು ಎಲ್ಲರಿಂದ ಲಕ್ಷ್ಯ ಕೊಡಲ್ಪಡುವದೆಂದೂ ತನ್ನ ಅನುಭವದಿಂದಲೇ ಚರ್ಚೆಯು ಪ್ರಾರಂಭವಾಗುವದೆಂದೂ ಕಂಡುಕೊಳ್ಳುವನು. ಕಾರ್ಯಾಲಯದ ಲಾಭಗಳೆಂದರೆ ಚರ್ಚೆಗಳ ಪರಿಣಾಮದಿಂದ ಸಮಸ್ಯೆಗಳ ಅರಿವು ಹೆಚ್ಚು ಚನ್ನಾಗಿ ಆಗುವಿಕೆ ಮತ್ತು ಕೌಟುಂಬಿಕ ಜೀವನದ ಪ್ರಭಾವದಿಂದ ಪ್ರತಿಯೊಬ್ಬ ಸದಸ್ಯನು ತನ್ನಲ್ಲಿ ಹುದುಗಿದ್ದ ವೈಶಿಷ್ಟ್ಯಗಳನ್ನು ತೋರಿಸುವಿಕೆ. ಸಾಕ್ಷರಿಗಳಾದ ಪ್ರಬುದ್ಧರಿಗೋಸ್ಕರ ಸಾಹಿತ್ಯವನ್ನು ತಯಾರಿಸಲು ಬೇಕಾಗುವ ಶಿಕ್ಷಕರನ್ನು ತರಬೇತುಗೊಳಿಸಲು ದಿಲ್ಲಿಯ ಹತ್ತರವಿದ್ದ ಅಲೀಪೂರವೆಂಬಲ್ಲಿ ಭಾರತಸರಕಾರದವರಿಂದ ಸಂಘಟಿಸಲ್ಪಟ್ಟ ಸಾಹಿತ್ಯಿಕ ಕಾರ್ಯಾಲಯವೊಂದಕ್ಕೆ ಸಂದರ್ಶನವೀಯುವ ಪ್ರಸಂಗವೊಂದು ನನಗೆ [ಗ್ರಂಥಕಾರರಿಗೆ] ಒದಗಿ ಬಂದಿತ್ತು; ಮತ್ತು ಅಲ್ಲಿ ಅವರು ಉಪಯೋಗಿಸಿದ ವಿಧಾನಗಳನ್ನೂ ದೊರಕಿಸಿದ ಪರಿಣಾಮಗಳನ್ನೂ ನೋಡಿ ನನ್ನ [ಗ್ರಂಥಕಾರರ] ಮನಸಿನ ಮೇಲೆ ಪರಿಣಾಮವಾಯಿತು.

ನೌಕರಿಯಲ್ಲಿದ್ದಾಗ ತರಬೇತನ್ನು ಹೊಂದಲು ಶಿಕ್ಷಕರನ್ನು ಮನವೊಲಿಸಲು ಅವರಿಗೆ ಉತ್ತೇಜನ ಸಿಗುವಂತೆ ಏನಾದರೊಂದು ವ್ಯವಸ್ಥೆಯನ್ನು ಮಾಡಿಡುವದವಶ್ಯವಿದೆ. ಮೇಲಿನ ಗ್ರೇಡುಗಳಲ್ಲಿಯ ಜಾಗೆಗಳಿಗೋಸ್ಕರ ಅರ್ಹತೆಯನ್ನು ಪಡೆಯಲು ಕೆಳಗಿನ ದರ್ಜೆಗಳಲ್ಲಿಯ ನೌಕರದಾರರಿಗೆ ಪ್ರಸಂಗಗಳನ್ನು ಸರಕಾರದ ಎಷ್ಟೋ ಖಾತೆಗಳಲ್ಲಿ ಒದಗಿಸಿ ಕೊಡುವದುಂಟು. ಶಿಕ್ಷಣ ಖಾತೆಯಲ್ಲಿ ಇಂತಹ ವ್ಯವಸ್ಥೆಯಿಲ್ಲದಿರುವದು ಆಶ್ಚರ್ಯವು. ನೌಕರಿಯಲ್ಲಿದ್ದು ತರಬೇತನ್ನು ಹೊಂದಿದವರಿಗೆ ಪಗಾರದಲ್ಲಿ ಬಡತಿ

ಇಲ್ಲವೆ ಮೇಲಿನ ದರ್ಜೆಯಲ್ಲಿಯ ಜಾಗೆಗಳಿಗೋಸ್ಕರ ಅರ್ಹತೆ ಸಿಗಬೇಕು. ಇಂತಹ ಪ್ರಸಂಗಗಳನ್ನು ಒದಗಿಸಿ ಕೊಡದ ಹೊರತು ಶಿಕ್ಷಕರಲ್ಲಿ ಹೆಚ್ಚಿನ ತರಬೇತನ್ನು ಹೊಂದಬೇಕೆಂಬ ಸ್ಫೂರ್ತಿಯು ಒಡಮೂಡಲಾರದು.

ಶಿಕ್ಷಕನ ತರಬೇತೆಂದರೆ ಅದು ಅವಶ್ಯವಾಗಿ ಮುಂದಾಳ್ತನದಲ್ಲಿ ತರಬೇತಾಗಿದೆ; ಮುಂದಾಳುವಾಗಿ ಆತನು ನಮ್ಮ ಮಕ್ಕಳಿಗೆ ಅತ್ಯುತ್ತಮ ವಿಕಾಸವನ್ನು ಹೊಂದಲು ಮಾರ್ಗದರ್ಶಕನಾಗಬೇಕು ಮತ್ತು ಸಹಾಯಕ ನಾಗಬೇಕು. ಕೆಲವು ವಿಷಯುಗಳಲ್ಲಿ ಬರೇ ಜ್ಞಾನ ಮಾಡಿಕೊಟ್ಟರೆ ಅದು ಶಿಕ್ಷಣವಾಯಿತೆಂದು ತಿಳಿದುಕೊಳ್ಳುವದು ಸಂಕುಚಿತ ದೃಷ್ಟಿಯು. ಪ್ರತಿಯೊಂದು ಮಗುವು ತನ್ನ ಬುದ್ಧಿಮಟ್ಟಕ್ಕನುಸರಿಸಿ ವಿಕಾಸವನ್ನು ಹೊಂದುವದು, ಪ್ರತಿಯೊಂದು ಮಗುವಿನ ಸಮಸ್ಯೆಗಳನ್ನರಿತುಕೊಂಡು ಅವು ಅದರ ವಿಕಾಸಕ್ಕೆ ಆತಂಕವನ್ನೊಡ್ಡದಂತೆ ಅವುಗಳನ್ನು ಬಿಡಿಸಲು ಸಹಾಯವನ್ನೀಯುವದು, ಮತ್ತು ಪ್ರತಿಯೊಂದು ಮಗುವು ತನ್ನ ವಿಕಾಸವನ್ನು ತಾನೇ ಅತ್ಯುತ್ತಮವಾಗಿ ಮಾಡಿಕೊಳ್ಳಲು ಪ್ರಸಂಗವನ್ನೊದಗಿಸಿ ಕೊಡುವದು, ಇವೇ ನಿಜವಾದ ಶಿಕ್ಷಣವು. ಈ ಪ್ರಕಾರ ಮಗುವಿಗೆ ಸಹಾಯವನ್ನು ಸಲ್ಲಿಸುವದೇ ನಿಜವಾದ ಶಿಕ್ಷಣವು. ಇದನ್ನು ನಿರ್ವಹಿಸಲು ಹೆಚ್ಚಿನ ಬುದ್ಧಿಮಟ್ಟವೂ, ಮುಂದಾಳ್ತನವೂ, ಆತ್ಮಸಂಯಮನವೂ, ಕೋಮಲಾಂತಃಕರಣವೂ, ಕೆಲಸ ಮಾಡುವ ಹಿಡಿತವೂ, ನ್ಯಾಯಶೀಲತೆಯೂ, ಹುರುಪೂ, ಅವಶ್ಯವಾಗಿ ಬೇಕು. ಶಿಕ್ಷಕ–ವಿದ್ಯಾರ್ಥಿಗಳಲ್ಲಿ ಈ ಗುಣಗಳನ್ನು ಹುಟ್ಟಿಸುವಂತೆ ಟ್ರೇನಿಂಗ ಸಂಸ್ಥೆಗಳು ಸಂಘಟಿಸಲ್ಪಡಬೇಕು. ಈ ವ್ಯವಸಾಯಕ್ಕೋಸ್ಕರ ಬರುವ ಶಿಕ್ಷಕರನ್ನೂ ಈಗಿನ ತರಬೇತಿಯ ಮಟ್ಟವನ್ನೂ ಅವಲೋಕಿಸಿದರೆ, ಭವಿಷ್ಯತ್ತು ಸ್ವಲ್ಪ ನಿರಾಶಾಜನಕವಿರುವದೆಂಬುದು ನಮಗೆ ಹೊಳೆಯದಿರಲಾರದು. ನಮ್ಮ ಶಿಕ್ಷಣ ಪದ್ಧತಿಯ ಮಟ್ಟವನ್ನು ನಾವು ಸುಧಾರಿಸಬೇಕಾಗಿದ್ದರೆ ಈ ಸಮಸ್ಯೆಯನ್ನು ಎದುರಿಸಿ ಅದನ್ನು ಬಗೆಹರಿಸಲು ಕ್ರಮಗಳನ್ನು ನಾವು ಕೈಕೊಳ್ಳಬೇಕು.

(ಮುಂದುವರಿಯುವದು)

ಪ್ರಾಥಮಿಕ ಶಿಕ್ಷಣದಲ್ಲಿ ವ್ಯವಹಾರಿ ಹಾಗು ದಶಾಂಶ ಅಪೂರ್ಣಾಂಕಗಳು

ಲೇಖಕರು : **ಶ್ರೀ ನೀ. ರೇ. ಹಿರೇಮಠ,** ಪ್ರಾಧ್ಯಾಪಕರು ಜೀವನ ಶಿಕ್ಷಣ ಕೇಂದ್ರ, ಧಾರವಾಡ.

ದಶಕ ನಾಣ್ಯ ಪದ್ಧತಿಯು ಇದೇ ವರುಷ ಎಪ್ರಿಲ್ ದಿಂದ ಆರಂಭವಾಗಿದೆ. ನಮ್ಮ ನಿತ್ಯ ವ್ಯವಹಾರದಲ್ಲಿದ್ದ ಅರ್ಧರೂಪಾಯಿ, ಪಾವಲಿ, ಚವಲಿ, ಆಣೆ, ಅರ್ಧ ಆಣೆ, ದುಡ್ಡು ಈ ನಾಣ್ಯಗಳು ಇನ್ನು ಕೆಲ ಕಾಲದಲ್ಲಿಯೇ ೫೦, ೨೫, ೧೦, ೫ ಹಾಗೂ ೨ ನಯೆ ಪೈಸೆಗಳಲ್ಲಿ ರೂಪಾಂತರ ಹೊಂದುವವು. ಕಚೇರಿಯ ಹಣದ ಲೆಕ್ಕಪತ್ರಗಳೆಲ್ಲ ರೂಪಾಯಿ ಮತ್ತು ಅದರ ಭಾಗಗಳಾದ ನಯೆ ಪೈಸೆಗಳಲ್ಲಿ ನಾಗಹತ್ತಿವೆ. ಕೆಲವು ದೊಡ್ಡ ಕಂಪನಿಗಳೂ ಹಾಗು ವ್ಯವಹಾರಸ್ಥರೂ ಹೊಸ ನಾಣ್ಯ ಪದ್ಧತಿಯನ್ನೇ ಅನುಸರಿಸ ಹತ್ತಿದ್ದಾರೆ. ಮಕ್ಕಳು ಕೊಳ್ಳುವ ಪಠ್ಯಪುಸ್ತಕಗಳ ಮೇಲಂತೂ ರೂ. ೧.೭೫, ರೂ. ೨.೫೦ ಮುಂತಾದ ಅಂಕಿಗಳು ಬಂದಿವೆ. ಹೀಗಾಗಿ ಅಪ್ರತ್ಯಕ್ಷವಾಗಿ ದಶಾಂಶ ಸಂಖ್ಯೆಗಳು ಬಳಕೆಯಲ್ಲಿ ಬಂದು ಬಿಟ್ಟಿವೆ. ಇನ್ನು ಕೆಲ ಕಾಲದಲ್ಲಿ "ದಶಕ ಪದ್ಧತಿಯ ಅಳತೆ"ಗಳೂ ಬರುವವಿವೆ.

ಆದರೆ ದಶಾಂಶ ಅಪೂರ್ಣಾಂಕದ ಲೆಕ್ಕಗಳು ಸದ್ಯದ ಪ್ರಾ. ಶಾಲೆಗಳ ಅಭ್ಯಾಸ ಪತ್ರಿಕೆಯಲ್ಲಿ ೬ ನೇ ವರ್ಗದವರೆಗೂ ಬರುವದೇ ಇಲ್ಲ. ಅಂದರೆ ಮಕ್ಕಳು ಸುಮಾರು ೧೨ ವರುಷದವರಾಗುವ ವರೆಗೂ ದಶಾಂಶ ಚಿನ್ಹ ಹಾಗು ದಶಾಂಶ ಅಂಕಿಗಳ ಕಲ್ಪನೆಯು ಆಗುವಂತಿಲ್ಲ. ಇದು ಹೀಗೆಯೇ ಸಾಗುವದು ಸರಿಯೋ ಎಂಬ ಪ್ರಶ್ನೆಯು ಕೆಲವು ಶಿಕ್ಷಕರಲ್ಲಿ ಬರುವದು ಸ್ವಾಭಾವಿಕ. ದಶಾಂಶ ಅಂಕಿಗಳ ಓದು ಹಾಗು ಬರಹಗಳನ್ನು ಎರಡು ಸ್ಥಾನಗಳ ವರೆಗೆ ಮಾತ್ರ ೩ ನೇ ವರ್ಗದಿಂದ ಆರಂಭಿಸಬೇಕೆಂದೂ ಕೆಲವರ ಅಭಿಪ್ರಾಯವಿದೆ. ಯಾಕಂದರೆ ಹಣ, ಉದ್ದಳತೆ ಮತ್ತು ತೂಕ ಇವುಗಳಿಗೆ ಸಂಬಂಧಿಸಿದ ವಿವಿಧ ಪರಿಮಾಣದ ಲೆಕ್ಕಗಳು ೩ ನೆಯ ವರ್ಗದಿಂದಲೇ ಅಭ್ಯಾಸ ಪತ್ರಿಕೆಯಲ್ಲಿ ಆರಂಭವಾಗುತ್ತವೆ. ಜೀವನ ಶಿಕ್ಷಣ ಶಾಲೆಗಳಲ್ಲಿ ನೂಲುವದು, ಬಡಿಗತನ, ತೋಟಗಾರಿಕೆ,

ಅಲ್ಲಿಕೇರಿ, ಪ್ರವಾಸ ಮುಂತಾದ ಪ್ರಸಂಗಗಳಲ್ಲಿ ಮಕ್ಕಳು ಪ್ರತ್ಯಕ್ಷ ತೂಕ, ಅಳತೆ ಹಾಗು ಹಣದ ವ್ಯವಹಾರಗಳನ್ನು ಮಾಡುವದರಿಂದ ಹಣ ಕೂಡಿಸುವದು ಹಾಗು ಕಳೆಯುವದು ಮುಂತಾದವು ಅನಿವಾರ್ಯವಾಗುತ್ತವೆ. ಹೊಸ ತೂಕ ಅಳತೆಗಳು ಬಂದರೆ ಅದರ ಲೆಕ್ಕಗಳೂ ಬರುವವು. ಅಂಥ ಪ್ರಸಂಗದಲ್ಲಿ ಅಪ್ರತ್ಯಕ್ಷವಾಗಿ ದಶಾಂಶ ಪದ್ಧತಿಯ ಬೇರೀಜು ಹಾಗು ವಜಾಬಾಕಿಗಳು ಅನಿವಾರ್ಯವಾಗುತ್ತವೆ. ಸದ್ಯದ ಕಡ್ಡಾಯದ (ಒತ್ತಾಯದ) ಶಿಕ್ಷಣವು ೧೧ ವರುಷಕ್ಕೆ ಅಂದರೆ ೫ ನೆಯ ವರ್ಗಕ್ಕೆ ಮಾತ್ರ ಮರ್ಯಾದಿತವಾದುದರಿಂದ ಹಳ್ಳಿಗಾಡಿನಲ್ಲಿಯ ಬಹಳಷ್ಟು ಮಕ್ಕಳ ಶಿಕ್ಷಣವು ಅಲ್ಲಿಗೇ ನಿಂತು ಬಿಡುತ್ತದೆ. ಇನ್ನೂ ೧೦ ವರುಷಗಳ ವರೆಗೆ ಈ ಪರಿಸ್ಥಿತಿಯು ಸುಧಾರಿಸುವ ಲಕ್ಷಣಗಳೂ ಇಲ್ಲ. ಹೀಗಾದಲ್ಲಿ ೬ ನೆಯ ವರ್ಗದ ವರೆಗೆ ದಶಾಂಶ ಅಂಕಿಗಳ ಪರಿಚಯವನ್ನು ಮುಂದೂಡಿದರೆ ನಮ್ಮ ಭಾವೀ ನಾಗರಿಕರಲ್ಲಿ ಬಹುಭಾಗವು ದಶಕ ಪದ್ಧತಿಯ ನಾಣ್ಯ, ತೂಕ ಹಾಗು ಅಳತೆಗಳ ಬೇರೀಜು ಮತ್ತು ವಜಾಬಾಕಿಗಳನ್ನು ಅರಿಯದೇ ಹೋಗುವ ಸಂಭವವಿದೆ. ಇಂಥ ಪ್ರಸಂಗದಲ್ಲಿ ದಶಾಂಶ ಅಪೂರ್ಣಾಂಕದ ಬೇರೀಜು ಹಾಗು ವಜಾಬಾಕಿಗಳನ್ನು ಕನಿಷ್ಠ ೧೧ ವರ್ಷದೊಳಗಾಗಿ ಮುಗಿಸುವದು ಕ್ರಮಪ್ರಾಪ್ತವಲ್ಲವೆ? ಕೆಲವು ಪಾಶ್ಚಾತ್ಯ ದೇಶಗಳಲ್ಲಿ ಕಡ್ಡಾಯದ ಶಿಕ್ಷಣದ ಅವಧಿಯು ಮಗುವಿನ ೧೬ ನೆಯ ವಯಸ್ಸಿನ ವರೆಗೆ ಹೋಗುವದರಿಂದ ಆ ದೇಶದ ಅಭ್ಯಾಸ ಪತ್ರಿಕೆಯಲ್ಲಿ ೧೨ ನೆಯ ವಯಸ್ಸಿಗೆ ಬಂದರೂ ನಾಗರಿಕ ಜೀವನದ ಬೇಡಿಕೆಯು ಪೂರ್ತಿಯಾಗುತ್ತದೆ. ಆದರೆ ಭಾರತದ ಪರಿಸ್ಥಿತಿಯು ಬೇರೆಯಾಗಿದೆ.

ದಶಾಂಶ ಅಪೂರ್ಣಾಂಕಗಳ ಅಭ್ಯಾಸವನ್ನು ಮುಂದೂಡಬೇಕೆಂದು ಪ್ರತಿಪಾದಿಸುವ ಅಮೇರಿಕೆಯ ಸಂಶೋಧನೆಗಳಲ್ಲಿ [1] ಒಂದು ಮಾತು ಒಡೆದು ಕಾಣುತ್ತದೆ. ದಶಕ (ಮೀಟರ) ಪದ್ಧತಿಯ ತೂಕ ಅಳತೆಗಳು ಪಾಶ್ಚಾತ್ಯ ದೇಶಗಳ ಬಳಕೆಯಲ್ಲಿ (ಪೇಟೆಯಲ್ಲಿ) ಬಹಳ ಅಪರೂಪವಾಗಿವೆ. ಆ ಅಳತೆಗಳು ಮಕ್ಕಳ ಅನುಭವಕ್ಕೆ ಬಾರವು. ಆದುದರಿಂದ ಆ ಅಳತೆಗಳಿಗೆ ಸಂಬಂಧಿಸಿದ ದಶಾಂಶ ಅಪೂರ್ಣಾಂಕಗಳು ಮಕ್ಕಳಿಗೆ ಅಷ್ಟೇನೂ ಅವಶ್ಯವಿಲ್ಲ. ಈ ಬಗೆಯಾಗಿ ದಶಾಂಶ ಅಪೂರ್ಣಾಂಕದ ಅಭ್ಯಾಸದ ವಿರೋಧಿಗಳ ವಾದವು ಮೀಟರ ಪದ್ಧತಿಯ ವಿರೋಧ ಹಾಗು ಅವು ನಿತ್ಯ ಬಳಕೆಯಲ್ಲಿ ಕಾಣದಿರುವಿಕೆ ಇವುಗಳ ಮೇಲೆ ನಿಂತಿದೆ.

ಈ ಎರಡೂ ಮುದ್ದೆಗಳು ಭಾರತದ ಭವಿತವ್ಯ ದೃಷ್ಟಿಯಿಂದ ಅಷ್ಟು ಸರಿಯಲ್ಲ; ಯಾಕಂದರೆ.

೧) ನಾವು ದಶಕ ಪದ್ಧತಿಯ ನಾಣ್ಯ, ತೂಕ-ಅಳತೆಗಳನ್ನು ಸ್ವೀಕರಿಸಿದ್ದೇವೆ. ಆದುದರಿಂದ ನಿತ್ಯ ಬಳಕೆಯಲ್ಲಿ ಅವು ಬರುವವೆಂಬಲ್ಲಿ ಸಂದೇಹವಿಲ್ಲ.

೨) ನಮ್ಮ ಘಟನೆಯಂತೆ ಶಿಕ್ಷಣವು ಪ್ರಾಥಮಿಕ ಶಿಕ್ಷಣವು ಜೀವನ (ಬೇಸಿಕ್) ಶಿಕ್ಷಣದ ಸ್ವರೂಪದ್ದಾಗುವದು. ಮತ್ತು ಈ ಕ್ರಮದಲ್ಲಿ ವಿವಿಧ ಚಟುವಟಿಕೆಗಳ ಅಂಗವಾಗಿ ಮಕ್ಕಳು—ಹಣ, ತೂಕ—ಅಳತೆಗಳನ್ನು ಪ್ರತ್ಯಕ್ಷ ಉಪಯೋಗಿಸುವರು.

೩) ಆದುದರಿಂದ ಕಡ್ಡಾಯದ ಪ್ರಾಥಮಿಕ ಶಿಕ್ಷಣದ ಮಟ್ಟದಲ್ಲಿ ದಶಾಂಶ ಅಪೂರ್ಣಾಂಕಗಳ ಸ್ಥೂಲ ಅಭ್ಯಾಸವು ಮಕ್ಕಳ ಅನುಭವದ ಅಳವಿನಲ್ಲಿಯದೂ ಹಾಗು ವ್ಯವಹಾರ್ಯವೂ ಆಗುವಲ್ಲಿ ಸಂದೇಹವಿಲ್ಲ.

ದಶಾಂಶ ಅಪೂರ್ಣಾಂಕಗಳ ಅಭ್ಯಾಸವನ್ನು ಆದಷ್ಟು ತೀವ್ರವಾಗಿ ಆರಂಭಿಸಬೇಕೆನ್ನುವ ಪಾಶ್ಚಾತ್ಯ ಶಿಕ್ಷಣ ತಜ್ಞರೂ ಇದ್ದಾರೆ. ಇಂಗ್ಲಂಡದ ಪ್ರೊ. ಜೆ. ಬಿ. ಥೋಮ್ಸನ್ [2] ಅವರು ೧ ಅಥವಾ ೨ ನೆಯ ವರ್ಗದಲ್ಲಿ ಒಂದು ಸ್ಥಾನದ ವರೆಗೆ ದಶಾಂಶ ಅಪೂರ್ಣಾಂಕಗಳ ಓದು ಬರಹ ಆರಂಭಿಸಬೇಕೆಂದಿದ್ದಾರೆ. ೩ ನೆಯ ವರ್ಗದಲ್ಲಿ ೨ ಸ್ಥಾನಗಳ ವರೆಗೆ ಸಾಗಬಹುದು. ಗಡುಚಾದ ವ್ಯವಹಾರಿ ಅಪೂರ್ಣಾಂಕಗಳ ಬೇರೀಜು, ವಜಾಬಾಕಿಗಳನ್ನು ಕಲಿಸಲು ಲ. ಸಾ. ಅ. ಅಥವಾ ಲ. ಸಾ. ಭಾ. ದ ಜ್ಞಾನವು ಅವಶ್ಯ. ಹೀಗೆ ಒಂದರಿಂದೊಂದು ಕಠಿಣವಾದ ಕ್ರಿಯೆಗಳಲ್ಲಿ ರೂಢಿ ಮಾಡಿಸುವ ಅನವಶ್ಯಕ ಶ್ರಮ ತಪ್ಪಿಸಲು ದಶಾಂಶ ಅಪೂರ್ಣಾಂಕಗಳ ಮೊರೆ ಹೊಗಬೇಕೆಂದಿದ್ದಾರೆ. ಇದೇ ಬಗೆಯಾಗಿ ಪ್ರತಿಪಾದಿಸಿದ ಜಾನ್ಸನ್ ಜೆ. ಟಿ. ಎಂಬ ಅಮೇರಿಕೆಯ ಗಣಿತ ಶಿಕ್ಷಕರೂ ಇದ್ದಾರೆ.

ದಶಾಂಶ ಪದ್ಧತಿಯ ಉಗಮ:

ದಶಾಂಶ ಪದ್ಧತಿಯು ಹಿಂದೂ ಸಂಖ್ಯಾ ಪದ್ಧತಿಯ ಮುಂದುವರೆದ ಕಲ್ಪನೆಯಂತಿದೆ. ಅಂದರೆ ಹಿಂದು—

1. Encyclopedia of Educational Research P P 45–6.
Macmillan & Co. NewYork 1950.

2. The Art of Teaching Arithmetic P. 132–33.
Longman Green & Co. London 1923.

ಸಂಖ್ಯಾ ಪದ್ಧತಿಯಲ್ಲಿರುವ ಅಂಕಿಗಳ ಸ್ಥಾನ ಕಲ್ಪನೆಯನ್ನು ಏಕ್ಕಂ ಸ್ಥಾನದಿಂದ ಮುಂದುವರಿಸಿದಂತಿದೆ. ಸಹಸ್ರ, ಶತಂ, ದಹಂ, ಏಕ್ಕಂ ಸ್ಥಾನಗಳು ಎಡದಿಂದ ಬಲಕ್ಕೆ ಸಾಗುವವು. ಇವು ಒಂದು ರಾಶಿಯ (ಗುಂಪಿನ) ಲ್ಲಿಯ ಪೂರ್ಣ ವಸ್ತುಗಳನ್ನು ಎಣಿಸಲು ಉಪಯೋಗವಾಗುವವು. ಒಂದು ವೇಳೆ ಆ ರಾಶಿಯಲ್ಲಿ ೩೫೩೮ ಪೂರ್ಣ ವಸ್ತುಗಳು ಹಾಗು ಕೆಲವು ತುಂಡುಗಳು ಇದ್ದರೆ ಹಿಂದೂ ಸಂಖ್ಯಾ ಪದ್ಧತಿ (ಸ್ಥಾನ ಪದ್ಧತಿ) ಯಿಂದ ಬರೆಯುವದು ಹೇಗೆ?

ಈ ಸಮಸ್ಯೆಯು ಹಿಂದು ಪದ್ಧತಿ ರಚಿಸಿದ ಮೇಧಾವಿಗಳಿಗೆ ಹೊಳೆಯಬೇಕಾಗಿತ್ತು. ಹಿಂದು ಪದ್ಧತಿಯು ೬ ನೆಯ ಶತಮಾನದ ಹೊತ್ತಿಗೆ ಪರಿಪೂರ್ಣವಾದರೂ ದಶಾಂಶ ಪದ್ಧತಿಯು ೧೬ ನೆಯ ಶತಮಾನದ ವರೆಗೂ ಸಂಶೋಧಿಸಲ್ಪಡಲಿಲ್ಲ.[3] ದಶಾಂಶ ಪದ್ಧತಿಯನ್ನು ಬೆಲ್ಜಿಯಮ್‌ದ "ಸಾಯಮನ್ ಸ್ಟಿವ್ಹೆನ್" ಎಂಬವರು ೧೫೮೫ ರಲ್ಲಿ ಕಂಡು ಹಿಡಿದರು; ಮತ್ತು ದಶಾಂಶ ಚಿಹ್ನವನ್ನು "ನೇಪಿಯ"ನೆಂಬ ಸ್ಕಾಟಲಂಡದ ಗಣಿತಜ್ಞನು ಹುಡುಕಿ ತೆಗೆದನು. ಆದರೆ ದಶಾಂಶ ಅಂಕಿಗಳನ್ನು ಸಾಮಾನ್ಯ ಜನರು ವ್ಯವಹಾರದಲ್ಲಿ ಬಳಸಲಿಲ್ಲ. ಪ್ರಯೋಗ ಶಾಲೆಗಳಲ್ಲಿ ಹಾಗು ಸಂಶೋಧನಗಳಲ್ಲಿ ಮಾತ್ರ ಅವುಗಳನ್ನು ಬಳಸುತ್ತಿದ್ದರು.[4]

ವ್ಯವಹಾರಿ ಅಪೂರ್ಣಾಂಕಗಳು ಶಾಲೆಯಲ್ಲಿ ಮೊದಲು ಏಕೆ ಬಂದವು:

೧. ಹಿಂದು ಸಂಖ್ಯಾ ಪದ್ಧತಿಯು ಬಳಕೆಯಲ್ಲಿ ಬಂದು ಒಂದು ಸಾವಿರ ವರುಷದ ನಂತರ ದಶಾಂಶ ಪದ್ಧತಿಯು ಹುಟ್ಟಿದ್ದರಿಂದ ಈ ಮಧ್ಯಂತರದಲ್ಲಿ ಅಪೂರ್ಣ ವಸ್ತುಗಳ ಲೆಕ್ಕಾಚಾರವು ವ್ಯವಹಾರಿ ಅಪೂರ್ಣಾಂಕಗಳಲ್ಲಿ ನಡೆಯಬೇಕಾದುದು ಸ್ವಾಭಾವಿಕ.

೨. ದಶಾಂಶ ಸಂಖ್ಯೆಗಳನ್ನು ನಿತ್ಯ ವ್ಯವಹಾರದಲ್ಲಿ ತರಲು ಮುಖ್ಯ ಕಾರಣವಾದ ಮಿಟರ ಅಥವಾ ದಶಕ ಪದ್ಧತಿಯು ಫ್ರಾನ್ಸ ರಾಜ್ಯ ಕ್ರಾಂತಿಯ ನಂತರ ಅಂದರೆ ೧೭೮೯ ನಂತರ ಬಂದಿತು. ಅದು ವರೆಗೆ ಬ್ರಿಟಿಶ ಪದ್ಧತಿಯ ಕ್ವಾರ್ಟರ, ಪೌಂಡ, ಫೂಟುಗಳು ಜಾರಿಯಲ್ಲಿದ್ದವು. ಮತ್ತು ಅದರ ಭಾಗಗಳು ಅರ್ಧ, ಗಿರ್ಧ, ೧/೮, ೧/೧೬, ಇದ್ದುದರಿಂದ ೧/೩, ೧/೮ ಮುಂತಾದ ಅಪೂರ್ಣಾಂಕಗಳೇ ವ್ಯವಹಾರದಲ್ಲಿದ್ದವು.

೩. ಫ್ರಾನ್ಸದ ರಾಜ್ಯ ಕ್ರಾಂತಿಗೆ ವಿರೋಧವಾಗಿದ್ದ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಆ ಕ್ರಾಂತಿಯ ಫಲವಾಗಿ ಹೊರಟ ದಶಕ ಪದ್ಧತಿಯನ್ನು ದ್ವೇಷಿಸಹತ್ತಿರಬೇಕು. ಹೀಗಾಗಿ ದಶಾಂಶ ಅಂಕಿಗಳು ಸಾಮ್ರಾಜ್ಯಶಾಹಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಜನಪ್ರಿಯವಾಗಲಿಲ್ಲ.

೪. ಫ್ರಾನ್ಸದಲ್ಲಿ ಅರಸುತನವು ಪುನಃ ಜಾರಿಯಲ್ಲಿ ಬರಲು ದಶಕ ಪದ್ಧತಿಯ ತೂಕ ಅಳತೆಗಳು ಶಿಥಿಲವಾದವು. ಹಾಗು ಮೊದಲಿನಿಂದಲೂ (ಕ್ರಿಸ್ತ ಶಕದ ಪೂರ್ವದಿಂದಲೂ) ಉಪಯೋಗಿಸುತ್ತ ಬಂದ ಹಳೆಯ ಪದ್ಧತಿಯ ಅಳತೆಗಳು ಪುನಃ ಉಪಯೋಗದಲ್ಲಿ ಬಂದವು. ಮತ್ತು ಅದರೊಡನೆ ೧/೩, ೧/೪, ೧/೮ ಇವೂ ಹೆಚ್ಚು ಬಳಕೆಯಲ್ಲಿ ಬಂದವು.

೫. ಮೊದಲಿನಿಂದಲೂ ರಾಜಕೀಯ ರಂಗದಲ್ಲಿ ಹಾಗು ಸಾಮ್ರಾಜ್ಯ ವಿಸ್ತಾರದಲ್ಲಿ ಸ್ಪರ್ಧಿಸುತ್ತ ಬಂದ ಫ್ರಾನ್ಸ ಮತ್ತು ಇಂಗ್ಲಂಡಗಳು ತಮ್ಮ ತೂಕ ಅಳತೆಗಳನ್ನು ಹಾಗು ಅವುಗಳ ಮೂಲಕ ತಮ್ಮ ಸಂಸ್ಕೃತಿಯನ್ನು ಹಬ್ಬಿಸಲು ಹೆಣಗಿವೆ. ಹೀಗಾಗಿ ವ್ಯವಹಾರಿ ಹಾಗು ದಶಾಂಶ ಅಪೂರ್ಣಾಂಕಗಳ ನಡುವೆ ಸ್ಪರ್ಧೆಯು ನಡದೇ ಇದ್ದಂತಿದೆ. ಬ್ರಿಟಿಶರು ತಮ್ಮ ತೂಕ ಅಳತೆಗಳಲ್ಲಿ ಬದಲಾವಣೆಗಳನ್ನು ಸೂಚಿಸಲು ೧೩ ನೆಯ ಶತಮಾನದಿಂದ (Magna Charta 1215) ಪ್ರಯತ್ನಿಸಿದರೂ ಅದರಲ್ಲಿ ಯಾವ ಹೆಚ್ಚಿನ ಮಾರ್ಪಾಟೂ ಆಗಿಲ್ಲ.[5] ಬ್ರಿಟಿಶರು ತಮ್ಮ ಪರಂಪರೆಯನ್ನು ಎಷ್ಟು ತೊಡಕಿನದಾದರೂ ಬಿಡುವವರಲ್ಲ. ದಶಕ ಪದ್ಧತಿಯನ್ನು ಸ್ವೀಕರಿಸಿದರೆ ಫ್ರೆಂಚ ಸಂಸ್ಕೃತಿಯನ್ನು ಅಪ್ರತ್ಯಕ್ಷವಾಗಿ ಒಪ್ಪಿಕೊಂಡಂತಾಗುವದೆಂಬ ಭಯ ಅವರಿಗಿತ್ತು. ದಶಕ ಪದ್ಧತಿಯ ಮೂಲಕ ತಮ್ಮ ಸಂಸ್ಕೃತಿಯ ಹಿರಿಮೆಯನ್ನು ಜಗತ್ತಿನಲ್ಲಿ ಪಸರಿಸಬೇಕೆಂದು ಫ್ರಾನ್ಸ ದೇಶವೂ ಹೆಣಗಿದ ಸಾಕ್ಷಿಗಳಿವೆ.[6]

3. Cajori Florian A History of Elementary Mathematics P. 151–55. The Macmillan Co. New York, 1907.

4. Wilson Grey Teaching the New Arithmetic, P. 238. Meqraw Hill Book Co· New York 1951.

5. Ibid P,233.

6. Ibid P. 300.

೬. ಬ್ರಿಟಿಶ ಪದ್ಧತಿಯು ಜಾರಿಯಲ್ಲಿರುವ ದೇಶಗಳಲ್ಲೆಲ್ಲ ವ್ಯವಹಾರಿ ಅಪೂರ್ಣಾಂಕಗಳಿಗೆ ಅಗ್ರಸ್ಥಾನ ದೊರೆತಿದೆ. ಅದರಿಂದ ಅವು ಪ್ರಾಥಮಿಕ ಮಟ್ಟದಲ್ಲಿ ತೀರ ಮೊದಲು ಬಂದಿವೆ. ದಶಾಂಶ ಸಂಖ್ಯೆಗಳು ಅಂಥ ದೇಶದಲ್ಲಿ ವಿಜ್ಞಾನ, ಹೆಚ್ಚಿನ ಉದ್ದಿಮೆ ಹಾಗು ವ್ಯಾಪಾರಗಳಲ್ಲಿ ಬರುವದರಿಂದ ಅದನ್ನು ಮಾಧ್ಯಮಿಕ ಮಟ್ಟ (ಅಂದರೆ ೬ ನೆಯ ವರ್ಗ) ಕ್ಕೆ ಮುಂದೂಡಲಾಗಿದೆ.

ಭಾರತದಲ್ಲಿ ಬ್ರಿಟಿಶ್ ಶಿಕ್ಷಣವೇ ಜಾರಿಯಲ್ಲಿರುವದರಿಂದ ಅದೇ ಅಭ್ಯಾಸ ಕ್ರಮವನ್ನು ನಾವು ಅನುಸರಿಸಿದ್ದೇವೆ. ಆದುದರಿಂದ ನಮ್ಮ ಅಭ್ಯಾಸ ಪತ್ರಿಕೆಗಳಲ್ಲಿಯೂ ಪ್ರಾಥಮಿಕ ೬ ನೆಯ ವರ್ಗದಲ್ಲಿಯೇ ದಶಾಂಶ ಅಪೂರ್ಣಾಂಕಗಳು ಬಂದಿವೆ.

ನಮ್ಮ ನಿಲುಮೆ

೧. ನಮಗೆ ಘೂಟು, ಪೌಂಡುಗಳಾಗಲಿ, ದಶಕ ಪದ್ಧತಿಗಳಾಗಲಿ ಹೊಸವೇ. ಆದುದರಿಂದ ಪರಂಪರೆಯ ಅಭಿಮಾನಕ್ಕಿಂತಲೂ ನಮಗೆ ಉಪಯುಕ್ತತೆ ಮುಖ್ಯ. ಆ ದೃಷ್ಟಿಯಿಂದಲೇ ಈ ಪ್ರಶ್ನೆಯನ್ನು ಬಿಡಿಸಬೇಕು.

೨. ಭಾರತದ ಪ್ರಜಾರಾಜ್ಯವು ದಶಕ ಪದ್ಧತಿಯನ್ನು ಸ್ವೀಕರಿಸಿದ್ದರಿಂದ ಅದಕ್ಕೆ ಅನುಗುಣವಾದ ಸಂಖ್ಯಾಲೇಖನ ಹಾಗು ಲೆಕ್ಕಾಚಾರಗಳನ್ನು ಶಾಲೆಯಲ್ಲಿ ಕಲಿಸಬೇಕಾದದು ಅನಿವಾರ್ಯ. ಈ ಕಾರ್ಯವು ಕಡ್ಡಾಯದ ಪ್ರಾಥಮಿಕ ಶಿಕ್ಷಣದ ಅವಧಿಯಲ್ಲಿ ಸಾಧಿಸಲ್ಪಡಬೇಕು.

೩. ಸಾಂಸ್ಕೃತಿಕ ದೃಷ್ಟಿಯಿಂದ ವಿಚಾರಿಸಿದರೆ, ದಶಾಂಶ ಪದ್ಧತಿಯು ಮೇಲೆ ವಿವರಿಸಿದಂತೆ ಹಿಂದೂ ಸಂಖ್ಯಾ ಪದ್ಧತಿಯ ಮುಂದಿನ ಹೆಜ್ಜೆಯಾಗಿದೆ; ಆದುದರಿಂದ ನಮ್ಮ ಸಂಸ್ಕೃತಿಗೆ ತೀರ ಸಮೀಪವಾದುದು.

೪. ಹೀಗೆಂದ ಮಾತ್ರಕ್ಕೆ ವ್ಯವಹಾರಿ ಅಪೂರ್ಣಾಂಕಗಳನ್ನು ಪೂರ್ಣ ಬಿಟ್ಟು ಕೊಡಬೇಕಾಗಿಲ್ಲ. ಉಪಯುಕ್ತತೆಯನ್ನು ಮನದಂದು ಯೋಗ್ಯ ಸ್ಥಾನವನ್ನು ಎರಡೂ ಅಪೂರ್ಣಾಂಕಗಳಿಗೆ ಕೊಡಬೇಕು. ೧/೨, ೧/೪, ೩/೪, ಮುಂತಾದ ಅಪೂರ್ಣಾಂಕಗಳು ಗ್ರಹಿಸಲು ಸುಲಭವಾಗಿದ್ದು ನಿತ್ಯ ಬಳಕೆಯಲ್ಲಿ ಹೇರಳವಾಗಿ ಕಂಡು ಬರುವದರಿಂದ ಅವುಗಳನ್ನು ಬಿಟ್ಟು ಕೊಡಕೂಡದು. ಅವುಗಳಿಗೆ ಮೊದಲಿನ ಸ್ಥಾನ ಕೊಡುವದು ಒಳಿತು. ಅದರ ನಂತರ ದಶಾಂಶ ಅಪೂರ್ಣಾಂಕಗಳನ್ನು ಕಲಿಸಬೇಕು. ಎಷ್ಟು ಕಲಿಸಬೇಕೆಂಬುದು ಮಾತ್ರ ಸಾಮಾನ್ಯ ಜೀವನದಲ್ಲಿ ಅವುಗಳ ಬಳಕೆಗೆ ಪರಿಮಿತವಾಗಬೇಕು.

ಅಪೂರ್ಣಾಂಕಗಳ ಶಿಕ್ಷಣದಲ್ಲಿ ಕೆಲವು ಸಂಶೋಧನೆಗಳು :

ದಶಾಂಶ ಅಪೂರ್ಣಾಂಕಗಳನ್ನು ೬ ನೆಯ ವರ್ಗದಲ್ಲಿ ಅಂದರೆ ೧೨ ನೆಯ ವಯಸ್ಸಿಗೇ ಆರಂಭಿಸುವ ಪರಿಪಾಠವು ಬಹುದಿನಗಳಿಂದ ಬಂದಿದೆ—ಎಂದು ಹಿಂದೆ ವಿವರಿಸಲಾಗಿದೆ. ಬ್ರಿಟಿಶ್ ಹಾಗು ಅಮೇರಿಕೆಗಳಲ್ಲಿಯೂ ಇದೇ ಪದ್ಧತಿ ಇದೆ. ವ್ಯವಹಾರಿ ಅಪೂರ್ಣಾಂಕಗಳ ಪರಿಚಯವು (೧/೨, ೧/೪, ೩/೪) ಮಾತ್ರ ೩ ನೆಯ ವರ್ಗದಿಂದಲೇ ಆರಂಭವಾಗುತ್ತದೆ.ವ್ಯವಹಾರದಲ್ಲಿ ೧/೨,೧/೪,೩/೪, ೧/೮,೧/೧೨, ೧೧/೨ ಮುಂತಾದ ಅಪೂರ್ಣಾಂಕಗಳು ಹೆಚ್ಚಾಗಿ ಬಳಿಕೆಯಲ್ಲಿ ಇದ್ದುದರಿಂದ ಈ ಅಪೂರ್ಣಾಂಕಗಳ ಪರಿಚಯವು ಮಕ್ಕಳಿಗೆ ಇರಬೇಕೆಂಬುದೇ ಇದಕ್ಕೆ ಕಾರಣ. ಅರ್ಧ ಹಣ್ಣು ಅಥವಾ ಹಾಳಿ, ಗಿರ್ಧ ರೊಟ್ಟಿ ಹೀಗೆ ಅರ್ಧ, ಗಿರ್ಧ ಈ ಪದಗಳು ನಿತ್ಯ ಬಳಿಕೆಯಲ್ಲಿವೆ. ಆದುದರಿಂದ ೧/೨, ೧/೪ ಇವುಗಳ ಪರಿಚಯವು ಆದಷ್ಟು ಬೇಗ ಆಗಬೇಕು.

ದಶಾಂಶ ಅಪೂರ್ಣಾಂಕಗಳು ಈ ರೀತಿಯಾಗಿ ಮಗುವಿನ ಸುತ್ತಲೂ ಬಳಿಕೆಯಲ್ಲಿದ್ದುದು ಕಡಿಮೆ, ಆದುದರಿಂದ ಅವುಗಳನ್ನು ಅಷ್ಟು ತೀವ್ರ ಕಲಿಸುವದು ಸರಿಯಲ್ಲವೆಂದು ಕೆಲ ಶಿಕ್ಷಣ ತಜ್ಞರ ಮತವಿದೆ. ಇದರಲ್ಲಿ ಎರಡು ಶೈಕ್ಷಣಿಕ ವಿಚಾರಗಳು ಅಡಕವಾಗಿವೆ.

೧. ಶಿಕ್ಷಣದ ವಸ್ತುವು ಮಗುವಿನ ಸದ್ಯದ ಜೀವನ ಹಾಗು ಸಮಸ್ಯೆಗಳಿಂದ ನಿರ್ಧರಿಸಲ್ಪಡಬೇಕು. ಪ್ರೌಢ ಜೀವನ ಬೇಡಿಕೆಗಳು ಮಗುವಿನ ಅಭ್ಯಾಸದ ವಿಷಯವಾಗಕೂಡದು. ಶಿಕ್ಷಣವು ಪ್ರೌಢ ಜೀವನದ ಪೂರ್ವ ತಯಾರಿ ಅಲ್ಲ. ಆದರೆ ಅದರ ಪೂರ್ವ ಸಿದ್ಧತೆಯು— ಸದ್ಯದ ಮಗುವಿನ ಜೀವನದ ಸಮಸ್ಯೆಗಳನ್ನು ಯಶಸ್ವಿ ರೀತಿಯಿಂದ ಎದುರಿಸಿ ಜೀವಿಸುವಲ್ಲಿದೆ.

೨. ಮಗುವು ಪ್ರೌಢನಾಗಿ ಬೆಳೆದ ಮೇಲೆ ನಿತ್ಯ ಉಪಯೋಗ ಬೀಳುವ ತಂತ್ರಗಳ ಮೂಲಭೂತ ಅಭ್ಯಾಸವು ಪ್ರಾಥಮಿಕ ಶಾಲೆಯಲ್ಲಿಯೇ ಸಾಗಬೇಕು. ಯಾಕಂದರೆ ಜನಾಂಗದ ಬಹು ಭಾಗದ ಅಭ್ಯಾಸವು ಈ ಹಂತಕ್ಕಿಂತ ಮುಂದೆ ಹೋಗುವದಿಲ್ಲ.

ಎರಡನೆಯ ವಿಚಾರ ಧಾರೆಯು ಭಾರತದಲ್ಲಿ ಕಂಡು ಬರುವ ಅಭ್ಯಾಸ ಪತ್ರಿಕೆಯ ಅದರಲ್ಲಿಯೂ ಗಣಿತ

ಅಭ್ಯಾಸ ಪತ್ರಿಕೆಯ ತಳಹದಿಯಾದಂತಿದೆ. ಕೇವಿನ ಲೆಕ್ಕಗಳು, ಚಕ್ರಬಡ್ಡಿ ತೆಗೆಯುವದು, ಎರಡಕ್ಕಿಂತ ಹೆಚ್ಚು ಪದಗಳುಳ್ಳ ವ್ಯವಹಾರಿ ಅಪೂರ್ಣಾಂಕಗಳ ಲೆಕ್ಕಗಳು ಅಪೂರ್ಣಾಂಕಗಳ ಗುಣಾಕಾರ ಮತ್ತು ಭಾಗಾಕಾರ ಲ. ಸಾ. ಭಾ., ದೃಢಭಾಜಕ ಮುಂತಾದವುಗಳು ಎರಡನೆಯ ಉದ್ದೇಶವನ್ನೂ ಮೀರಿವೆ. ಯಾಕೆಂದರೆ ಪ್ರೌಢ ಜೀವನದ ಸಾಮಾನ್ಯ ವ್ಯವಹಾರಗಳಲ್ಲಿ ಕಂಡು ಬರುವ ಗಣಿತದ ಅಂಶಗಳು ತೀರ ಸ್ವಲ್ಪ ಹಾಗೂ ಸುಲಭವೂ ಇವೆ. ಈ ದಿಶೆಯಲ್ಲಿ ಅಮೇರಿಕೆಯಲ್ಲಿ ಸಾಕಷ್ಟು ಸಂಶೋಧನೆಗಳಾಗಿವೆ. ಅದರ ಮೂಲಕ ಪ್ರಾಥಮಿಕ ಶಾಲೆಯಲ್ಲಿ ಗಣಿತದ ಯಾವ ಕ್ರಿಯೆಗಳನ್ನು ಕಲಿಸಬೇಕೆಂಬುದನ್ನು ನಿರ್ಧರಿಸಿದ್ದಾರೆ. ಭಾರತದಲ್ಲಿ ಈ ಬಗೆಯ ಸಂಶೋಧನೆಗಳು ಇನ್ನೂ ಆಗಬೇಕಾಗಿವೆ.

ಅಪೂರ್ಣಾಂಕಗಳ ಮಟ್ಟಿಗೆ ಹೇಳುವದಾದರೆ: ೧/೨,೧/೪ ಈ ಅಪೂರ್ಣಾಂಕಗಳೇ ವಿಶೇಷವಾಗಿ ಬಳಿಸಲ್ಪಡುತ್ತವೆ. ಅದರಲ್ಲಿ ೧/೨ ವನ್ನು ೬೦% ವ್ಯವಹಾರಗಳಲ್ಲಿ ೧/೪ವನ್ನು ೧೩% ವ್ಯವಹಾರಗಳಲ್ಲಿ ೩/೪ಮತ್ತು ೧/೩ಗಳನ್ನು ಸುಮಾರು ಅನುಕ್ರಮವಾಗಿ ೫% ಮತ್ತು ೬%ವ್ಯವಹಾರಗಳಲ್ಲಿ;೨/೩ ಮತ್ತು ೧/೮ ಗಳನ್ನು ಸುಮಾರು ಅನುಕ್ರಮವಾಗಿ ೨% ಮತ್ತು ೧/೬ ವನ್ನು೧% ವ್ಯವಹಾರಗಳಲ್ಲಿ ಬಳಿಸಲಾಗುತ್ತದೆಂದು ಅಮೇರಿಕೆಯ ಸಂಶೋಧನೆಗಳಲ್ಲಿ ಕಂಡು ಬಂದಿದೆ.ಉಳಿದ ಅಪೂರ್ಣಾಂಕಗಳು ಗಮನಾರ್ಹ ಪ್ರಮಾಣದಲ್ಲಿಲ್ಲ. ಈ ಅಭ್ಯಾಸವನ್ನು ವಿದ್ಯಾರ್ಥಿಗಳ ಸಹಾಯದಿಂದ ೧೯೩೭ ರಲ್ಲಿ ಕೈಕೊಳ್ಳಲಾಯಿತು. ಎಂಟು ಬೇರೆ ಬೇರೆ ಸ್ವತಂತ್ರ ಸಂಶೋಧನಾ ಗುಂಪುಗಳು ಈ ಅಭ್ಯಾಸದಲ್ಲಿ ಭಾಗವಹಿಸಿದ್ದವು.ಅವು ಒಟ್ಟು ೧೨೬೧೩ವ್ಯವಹಾರಗಳನ್ನು ಪೃಥಕ್ಕರಿಸಿ ೭೧ ಬೇರೆ ಬೇರೆ ಅಪೂರ್ಣಾಂಕಗಳು ಒಟ್ಟು ಉಪಯೋಗಿಸಲ್ಪಟ್ಟವೆ ಎಂದು ಕಂಡು ಹಿಡಿದಿದ್ದಾರೆ. ತಂದೆ ತಾಯಿಗಳು, ಪಾಲಕರು, ಕೂಲಿಗಳ ಅಭ್ಯಾಸ, ಅಡಿಗೆಯ ಪುಸ್ತಕಗಳಲ್ಲಿಯ ಸಂಖ್ಯೆಗಳು ಮುಂತಾದ ಪ್ರಸಂಗಗಳಲ್ಲಿ ಈ ಅಪೂರ್ಣಾಂಕಗಳು ಬಂದಿವೆ. ೧/೨ದಿಂದ 2/144 ರ ವರೆಗಿನ ಅಪೂರ್ಣಾಂಕಗಳು ಮಾತ್ರ ನಿತ್ಯ ವ್ಯವಹಾರದಲ್ಲಿ ಬಳಿಸಲ್ಪಡುವವೆಂದು ಕಂಡುಹಿಡಿದಿದ್ದಾರೆ. ಎಲ್ಲಕ್ಕೂ ಹೆಚ್ಚಿನ ಅಂಶವು ೧೪, ಅದರಲ್ಲಿಯೂ ೧ ರಿಂದ ೫ ರ ವರೆಗಿನ ಅಂಕಿಗಳೇ ಹೆಚ್ಚು.

ಛೇದದಲ್ಲಿಯೂ ಕೂಡ ೧ ರಿಂದ ೬ ರ ವರೆಗಿನ ಸಂಖ್ಯೆಗಳೇ ವಿಶೇಷ; ೯, ೧೦, ೧೨ ಮತ್ತು ೧೬ ಈ ಸಂಖ್ಯೆಗಳೂ ಕಡಿಮೆ ಪ್ರಮಾಣದಲ್ಲಿ ಬರುವವು. ಹೆಚ್ಚಿನ ಸಂಖ್ಯಾ ಛೇದಗಳು ತೀರ ವಿರಳವಾಗಿ ಬರುವವು. [7]

ಆದರೆ ನಮ್ಮ ಶಾಲೆಗಳಲ್ಲಿ ಕಲಿಸುವ ಅಪೂರ್ಣಾಂಕಗಳು ಯಾರ ಎದೆಯನ್ನೂ ಒಡೆಸುವವು! ನಮ್ಮ ಪಠ್ಯ ಪುಸ್ತಕಗಳಲ್ಲಿ ಕಲ್ಪನಾತೀತವಾದ ಅಪೂರ್ಣಾಂಕಗಳು ಬಂದು ಬಿಡುವವು.617 ೩೮೯/೭೩, ಇಂತಹ ಸಂಖ್ಯೆ ಬಂದರೆ ಅಚ್ಚರಿ ಪಡಬೇಕಾಗಿಲ್ಲ. ಇವು ಸ್ವಾಭಾವಿಕವೆಂದೇ ನಮ್ಮ ಶಿಕ್ಷಣ ತಜ್ಞರ ಮತವಿದ್ದಂತಿದೆ. ಇದೇ ಮಾತು ದಶಾಂಶ ಅಪೂರ್ಣಾಂಕಗಳಿಗೂ ಅನ್ವಯಿಸುವದು.

೧೯೧೯ ರಲ್ಲಿ ಗಾಯ್ ವಿಲ್ಸನ್‌ರವರು ಕೈಕೊಂಡ ಅಭ್ಯಾಸದಲ್ಲಿ ೧೪,೫೮೩ ನಿತ್ಯ ಜೀವನದ ಸನ್ನಿವೇಶಗಳನ್ನು (ಪ್ರಸಂಗಗಳನ್ನು) ಸಂಗ್ರಹಿಸಿ ಅದರಲ್ಲಿ ೨೧,೮೯೮ ಕ್ರಿಯೆಗಳು ಬಳಿಸಲ್ಪಟ್ಟವೆಯೆಂದು ಪೃಥಕ್ಕರಿಸಿದ್ದಾರೆ. ಇವುಗಳಲ್ಲಿ ೭ ಕ್ರಿಯೆಗಳು ಮಾತ್ರ ದಶಾಂಶ ಅಪೂರ್ಣಾಂಕಗಳನ್ನೊಳಗೊಂಡಿವೆಯೆಂತೆ. ೧೯೪೩ ರಲ್ಲಿ ಕೈಕೊಳ್ಳಲಾದ ಇನ್ನೊಂದು ಅಭ್ಯಾಸದಲ್ಲಿ ರಸೆಲ್ ಗಾರ್ಲಂಡ ಬಿ. ಅವರು ದೊಡ್ಡ ವ್ಯವಹಾರಗಳಲ್ಲಿ ತೊಡಗಿದ ಜನರಲ್ಲಿ ೮೦% ಜನಗು ದಶಾಂಶ ಅಪೂರ್ಣಾಂಕಗಳನ್ನು ಬಳಸುವದೇ ಇಲ್ಲ; ೧೫% ಜನರಿಗೆ ದಶಾಂಶ ಅಪೂರ್ಣಾಂಕಗಳನ್ನು ಓದಲು ಬಂದರೆ ಸಾಕು; ಇನ್ನುಳಿದ ೫% ಜನರು ಮಾತ್ರ ಪ್ರತ್ಯಕ್ಷವಾಗಿ ದಶಾಂಶಗಳನ್ನು ಬಳಸುತ್ತಾರೆ. ಆದರೆ ಅವರಿಗೆ ಬೇಕಾದ ಜ್ಞಾನವನ್ನು ಅವರು ಆಯಾ ಕೆಲಸದ ಪೂರ್ವ ತರಬೇತಿಯ ಅವಧಿಯಲ್ಲಿ ಪಡೆಯುತ್ತಾರೆ—[8] ಎಂದು ಕಂಡು ಹಿಡಿದಿದ್ದಾರೆ.

(ಮುಂದುವರೆಯುವದು)

---

7. Ibid P P 198–99
8. Russel Garlend B "Decimal Usage in Occupational world" Doctor's dessertation Boston University 1943.

"ನಾನು ಶಿಕ್ಷಕನೇ ?"

ಲೇಖಕರು : **ಶ್ರೀ ರಾ. ರು. ಕುಪ್ಪಸದ,** ಮುಖ್ಯಾಧ್ಯಾಪಕರು, ಸರಕಾರಿ ಮಾಧ್ಯಮಿಕ ಕೃಷಿಶಾಲೆ, ಬಿಜಾಪೂರ.

೧

ಮೇಲಿನದೊಂದು ಪ್ರಶ್ನೆ; ಸುಲಭ ಪ್ರಶ್ನೆ. ಎರಡೇ ಶಬ್ದಗಳ, ಆರಕ್ಕರಗಳ ಸರಳ ಪ್ರಶ್ನೆಯಲ್ಲವೇ, ಈ ಪ್ರಶ್ನೆಯು ಉತ್ತರವಾದರೂ ಅತಿ ಸುಲಭವಾದುದು. ಅತಿ ಬೇಗನೇ ಉತ್ತರಿಸ ಬಹುದಾಗಿದೆ. ಎರಡು ಶಬ್ದಗಳ ಪ್ರಶ್ನೆಗೆ ಕೇವಲ ಎರಡು ಅಕ್ಷರಗಳ ಒಂದೇ ಶಬ್ದದ ಉತ್ತರವು "ಹೌದು" ಅಥವಾ "ಅಲ್ಲ" ಅಂದಮೇಲೆ, ಪ್ರಶ್ನೆಯೂ ಸುಲಭ; ಪ್ರಶ್ನೆಗಿಂತ ಉತ್ತರವೂ ಸುಲಭ. ಇದ್ದರಿರಬೇಕು, ಇಂಥಹ ಸುಲಭ ಪ್ರಶ್ನೆಗಳು !! ಸುಲಭ ಉತ್ತರಗಳು !!!

ಮೇಲಿನ ತಲೆಬರಹವು ಒಂದು ಪ್ರಶ್ನೆ ಇದೆ, ಅದನ್ನು ಉತ್ತರಿಸಬೇಕೇ ? ಪ್ರಶ್ನೆ ಯಾವುದು ?

ಪ್ರಶ್ನೆ:— ನಾನು ಶಿಕ್ಷಕನೇ ?

ಈ ತಲೆಬರಹದ ಪ್ರಶ್ನೆಯನ್ನು ಉತ್ತರಿಸಲು, ತುಸು ತಲೆತುರಿಸಿಕೊಳ್ಳಲೂ ಬೇಕಾಗುತ್ತಿದೆ. ಮನಸ್ಸಿನಿಂದ ಉತ್ತರಿಸಬೇಕೆಂದರೇ, ತುಸು ತಲೆ ಭಾರವೂ ಆಗ ಬಹುದು; ಇಲ್ಲವೇ ತಲೆಭಾರವು ಇಳಿಯಲೂ ಬಹುದು. ಅದೆಲ್ಲ ಉತ್ತರಿಸುವ ಶಿಕ್ಷಕನನ್ನು ಅಥವಾ ವ್ಯಕ್ತಿಯನ್ನು ಅವಲಂಬಿಸಿದೆ. ಕಾಣಲಿಕ್ಕೇನೋ ಮೇಲಿನ ಪ್ರಶ್ನೆಯು ಸುಲಭ ಪ್ರಶ್ನೆಯೇ ಆಗಿದೆ; ನೋಡಲಿಕ್ಕೇನೋ ಕೊಡ ತಕ್ಕ ಉತ್ತರವೂ ಸುಲಭವೇ. ಆದರೆ ಈಪ್ರಶ್ನೋತ್ತರಗಳು ಹೊರಗೆ ಕಾಣುವಂತೆ ಒಳಗೂ ಹಾಗಿವೆಯೇ? ಎಂಬ ಪಶ್ನೆ ! ಹೊರಗಣ್ಣಿಗೆ ಕಾಣುವಂತೆಯೇ, ಒಳಗಣ್ಣಿಗೂ ಕಾಣುತ್ತವೆಯೇ ಎಂಬದೊಂದು ದೊಡ್ಡ ಪ್ರಶ್ನೆ. ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡಬೇಕೆಂಬ ತತ್ವದ ಕಡೆಗೆ ನಮ್ಮ ಲಕ್ಷ್ಯವು ಸಹಸಾ ಹೋಗುತ್ತದೆ, ಇರಲಿ. ಮೇಲಿನ ಪ್ರಶ್ನೆಯನ್ನು ಉತ್ತರಿಸಬೇಕಾಗಿದ್ದರೆ ಇದನ್ನೋದಿ ಉತ್ತರಿಸಿರಿ.

ಈ ತಲೆಬರಹದ ಪ್ರಶ್ನೆಯನ್ನು ತುಸು ಪೃಥಕ್ಕರಿಸಿ ನಲ್ಲಿ, ಮತ್ತೆ ಈ ಕೆಳಗಿನ ಉಪಪ್ರಶ್ನೆಗಳು ಉದ್ಭವಿಸುವದು ಸಹಜವಾಗಿದೆ:—

(ಅ) ಪ್ರಶ್ನೆಯನ್ನು ಪುರುಷ ಶಿಕ್ಷಕರಿಗೇನೇ ಕೇಳಲಾಗಿದೆಯೇ ಹೇಗೆ ? ಯಾಕಂದರೆ, 'ಶಿಕ್ಷಕನೇ?' ಎಂದು ಪುಲ್ಲಿಂಗರೂಪದಲ್ಲಿದೆ. 'ಶಿಕ್ಷಕಿ'ಯರು ಉತ್ತರಿಸ ಬಾರದೇ ಹೇಗೆ ?

(ಆ) 'ನಾನು ಶಿಕ್ಷಕನೇ ?' ಎಂದು ಪ್ರಶ್ನೆ ಇದೆ. ಅಂದರೆ, ಶಿಕ್ಷಕರಾಗಿ ಕೆಲಸ ಮಾಡುವವರಿಗೆ 'ತಾವು ಶಿಕ್ಷಕರು ಹೌದೋ, ಅಲ್ಲವೋ ? ಎಂದು ಸಂಶಯ ಬರುತ್ತದೆಯೇ ? ಇದೆಂತಹ ಪ್ರಶ್ನೆ ?

(ಇ) ಶಿಕ್ಷಕರಾಗದೇ ಇದ್ದವರು ಈ ಮೇಲಿನ ಪ್ರಶ್ನೆಯನ್ನು ಉತ್ತರಿಸ ಬೇಕೇ ಹೇಗೆ ? ಹೆಸರಿನಿಂದ ಅಥವಾ, ಉದ್ಯೋಗದಿಂದ ಶಿಕ್ಷಕರಾಗವೇ ಇದ್ದವರು, ಶಿಕ್ಷಕರ ಕಾರ್ಯವನ್ನು ಮಾಡಬಹುದೇ, ಮಾಡಲು ಶಕ್ಯವೇ ? ಎಂಬ ಪ್ರಶ್ನೆ !

(ಈ) ಪ್ರಶ್ನೆ ಇದೆ ; "ನಾನು ಶಿಕ್ಷಕನೇ ?" ಪ್ರಶ್ನೆಯನ್ನು ಕೇಳುವವರು ಲೇಖಕರಲ್ಲವೇ, ಎಂದು ಓದುಗರು ಪ್ರಶ್ನಿಸಬಹುದಾಗಿದೆ. ಅಂದರೆ, ಅವರು 'ನಾನು ಶಿಕ್ಷಕನೇ ?' ಎಂದು ನನ್ನ ಪರವಾಗಿ ಉತ್ತರಿಸಬೇಕಾಯಿತಲ್ಲ ! ಇದನ್ನು ಉತ್ತರಿಸುವದೆಂದರೆ, ಒಂದು ರೀತಿಯಿಂದ ಅತಿ ಸುಲಭ. ಮತ್ತೊಂದು ರೀತಿಯಿಂದ ಅತಿ ಕಠಿಣ.

ಈ ತೆರನಾಗಿ ಒಂದರ ಹಿಂದೊಂದು ಪ್ರಶ್ನೆಯು, ಉಪ ಪ್ರಶ್ನೆಯೂ ಬರುವುದುಂಟು, ಕಾರಣ, ತಲೆಬರಹದ ಪ್ರಶ್ನೆಯನ್ನು ಉತ್ತರಿಸಬೇಕೇ ಅಥವಾ ಮೇಲ್ಕಾಣಿಸಿದ ಪ್ರಶ್ನೆ, ಉಪಪ್ರಶ್ನೆಗಳನ್ನು ಉತ್ತರಿಸಬೇಕೇ ಎಂಬದೊಂದು ಮತ್ತೊಂದು ಪ್ರಶ್ನೆ. ಇದರ ಅನುಕ್ರಮ ನಂಬರು (ಉ) ಎನ್ನಿರಿ.

ಪ್ರಶ್ನೆ ಒಂದಿರಲಿ, ಎರಡಿರಲಿ, ಪ್ರಶ್ನೆ ಇರಲಿ, ಉಪ ಪ್ರಶ್ನೆ ಇರಲಿ; ಪ್ರಶ್ನೆಯ ನಂಬರು (ಉ) ಇರಲಿ, (ಊ), (ಎ), (ಏ), (ಐ) ಇರಲಿ. ಪ್ರಶ್ನೆಯನ್ನು ಕೇಳಲಾಗಿದೆ ಎಂದ ಮೇಲೆ ಅದನ್ನು ಉತ್ತರಿಸಬೇಕು; ಅದಕ್ಕೆ ಉತ್ತರ ಬೇಕು. ಪ್ರಶ್ನೆಯನ್ನು ಕೊಟ್ಟಿದೆ ಎಂದ ಮೇಲೆ, ಉತ್ತರವನ್ನು ಕೊಡಲೇಬೇಕಾಗಿದೆ. ಯಾಕಂದರೆ, ಯಾವದೇ

ಪರೀಕ್ಷೆಯಲ್ಲಿ ಪ್ರಶ್ನೆ ಕಾಗದವನ್ನು ತೆಗೆದುಕೊಂಡ ಮೇಲೆ, ಆಯಾ ಪ್ರಶ್ನೆಗಳಿಗೆ ಉತ್ತರವನ್ನು ಬರೆಯ ಬೇಕಾಗುವುದಲ್ಲವೇ. ಯಾವ ಪ್ರಶ್ನೆಗೆ ಯಾವ ಉತ್ತರವನ್ನು ಕೊಡಬೇಕು; ಹೇಗೆ ಕೊಡಬೇಕು ಎಂಬದನ್ನು ಅರಿತಿದ್ದರೇ ಮಾತ್ರ ಪ್ರಶ್ನೆಗೆ ಅನುರೂಪ ವಾದ ಮತ್ತು ಸರಿಯಾದ ಉತ್ತರವು ಬರುವುದು. ಇಲ್ಲ ವಾದರೆ, ಪ್ರಶ್ನೆಗೆ ಉತ್ತರ ಕೊಟ್ಟರಾಯಿತು ಎಂಬ ಭಾವನೆಯಿಂದ ನಾಗಿದ್ದಾದರೆ, ಅದರ ಪರಿಣಾಮವು ಹೇಗೋ ಹೇಗಾಗಬಹುದು.

೨

ಅದಿರಲಿ. ಇನ್ನೊಂದು ಪ್ರಶ್ನೆ:–

(i) ಒಮ್ಮೊಮ್ಮೆ ಪ್ರಶ್ನೆಯನ್ನು ಪ್ರಶ್ನೆಯಿಂದಲೇ ಉತ್ತರಿಸ ಬೇಕಾಗುತ್ತದೆ.

(ii) ಒಮ್ಮೊಮ್ಮೆ ಪ್ರಶ್ನೆಯಲ್ಲಿಯೇ ಅದರ ಉತ್ತ **ರವು ಅಡಕವಾಗಿರುತ್ತದೆ.**

(iii) ಒಮ್ಮೊಮ್ಮೆ ಏನು ಉತ್ತರವನ್ನು ಕೊಟ್ಟರೂ, ಅದು ಅರ್ಧಮರ್ಧವಾದರೂ ಸರಿಯಾಗು ತ್ತದೆ. ನೋಡಿರಿ, ಉದಾ:– ಈ ಪ್ರಶ್ನೆಯನ್ನು. ಪ್ರಶ್ನೆ:– ಹೌದು, ಅಲ್ಲ ಹೇಳಿರಿ.

೧. ಸೂರ್ಯನಿಗಿಂತ ಚಂದ್ರನು ದೊಡ್ಡವನು

೨. ಮುಂಬಯಿ ನಗರವು ಸಮುದ್ರ ತೀರದಲ್ಲಿದೆ.

ಈ ಎರಡೂ ಪ್ರಶ್ನೆಗಳಿಗೂ "ಹೌದು" ಎಂದರೂ ಅರ್ಧ ಸರಿ; "ಅಲ್ಲ" ಎಂದು ಉತ್ತರ ಕೊಟ್ಟರೂ ಅರ್ಧ ಸರಿ. ಇದೆಂತಹ ಪ್ರಶ್ನೆ ? ಒಳ್ಳೆಯದು. ಕೊಟ್ಟ ಪ್ರಶ್ನೆಗೆ ಉತ್ತರವನ್ನು ಕೊಡಬೇಕೇ ಎಂಬ ನಿರ್ಬಂಧವೆಲ್ಲಿದೆ ? ಎಷ್ಟೋ ಪರೀಕ್ಷೆಗಳಲ್ಲಿ, ಎಷ್ಟೋ ಉಮೇದವಾರರು ಪ್ರಶ್ನೆ ಗಳಿದ್ದ ಪ್ರಶ್ನೆಕಾಗದವನ್ನು ತಕ್ಕೊಂಡು, ಒಂದೂ ಉತ್ತರವಿಲ್ಲದ ಉತ್ತರ–ಪುಸ್ತಕವನ್ನು ಕೊಡುವುದಿಲ್ಲವೇ? ಇದೊಂದು ಅವರ ಸ್ವಾತಂತ್ರ್ಯದ ಕುರುಹು; ಇದೊಂದು ಅವರ ಹಕ್ಕು.

(iv) ಒಮ್ಮೊಮ್ಮೆ, ಪ್ರಶ್ನೆಗೆ ಉತ್ತರವನ್ನು **ಕೊಡಬೇಕೆನ್ನುವ ವೃಥ ಭಕ್ತಿಯಿಂದ ಉತ್ತರವನ್ನು ಕೊಟ್ಟದ್ದೂ ಕೂಡಾ ಕಾಣುತ್ತದೆ.** ಒಮ್ಮೊಮ್ಮೆ ಪ್ರಶ್ನೆ ಗಳು ಹೀಗೆ ಇರುತ್ತವೆ

ಪ್ರ:– ಕೆಳಗೆ ತೆರವಿದ್ದಲ್ಲಿ ಯೋಗ್ಯ ಶಬ್ದ ತುಂಬಿರಿ.

ಬೆಂಗಳೂರು ನಗರದ ಜನಸಂಖ್ಯೆ…………ಇದೆ.

ಉ:– ಬೆಂಗಳೂರು ನಗರದ ಜನಸಂಖ್ಯೆ ನನಗೆ ಗೊತ್ತಿಲ್ಲ ಇದೆ.

ಇದು ಸರಿಯಾದ ಉತ್ತರವೇ ಹೇಗೆ? ಓದುಗರೇ ವಿಚಾರಿಸಿ, ಈ ಉತ್ತರಕ್ಕೆ ಸಿಗಬೇಕಾದ ಗುಣಗಳನ್ನು ಕೊಡಬೇಕು !

ಇಷ್ಟೆಲ್ಲಾ ವಿಚಾರಿಸಲಾಗಿ, ಶಿಕ್ಷಕನಾದವನು ವಿದ್ಯಾರ್ಥಿಗಳಿಗೆ, ಪರೀಕ್ಷೆಯಲ್ಲಿ ಪ್ರಶ್ನೆಗಳನ್ನು ಹೇಗೆ ಬಿಡಿಸ ಬೇಕೆಂಬುವದನ್ನು ಕಲಿಸಲೇ ಬೇಕಾಗುತ್ತದೆ. ಇಲ್ಲವಾ ದರೆ, ಅವನು ಶಿಕ್ಷಕನೇ ? ಜೀವನದಲ್ಲಿಯ ಅನೇಕ ಪ್ರಶ್ನೆಗಳನ್ನು ಬಿಡಿಸಲೂ, ವಿದ್ಯಾರ್ಥಿಗಳಿಗೆ ಶಿಕ್ಷಕನಾದ ವನು ಕಲಿಸಬೇಕಾಗುತ್ತದೆ. ಇಲ್ಲವಾದರೆ, ಅವನು ಶಿಕ್ಷ ಕನೇ ? ಇದು ಒಂದು ಹೆಚ್ಚಿನ ಜಟಿಲ ಪ್ರಶ್ನೆ.

೩

ಅಂದ ಮೇಲೆ, ಶಿಕ್ಷಕನು ಆಗಾಗ್ಗೆ ಪ್ರಶ್ನೆಗಳನ್ನು ಬಿಡಿಸಲೇ ಬೇಕಾಗುತ್ತದೆ ಎಂದಂತಾಯಿತು. ವಿದ್ಯಾರ್ಥಿ ಗಳಿಗೆ ಪ್ರಶ್ನೆಗಳನ್ನು ಕೇಳಲೇ ಬೇಕಾಗುತ್ತದೆ. ತನಗೂ ಪ್ರಶ್ನೆಗಳನ್ನು ಆಗಾಗ್ಗೆ ಕೇಳಲೂ ಬೇಕಾಗುತ್ತದೆ. ವಿದ್ಯಾ ರ್ಥಿಗಳಿಗೆ ಪ್ರಶ್ನೆಗಳನ್ನು ಕೇಳುವದಕ್ಕಿಂತ ಶಿಕ್ಷಕನು ತನಗೇ ಪ್ರಶ್ನೆಗಳನ್ನು ಕೇಳಿಕೊಳ್ಳುವದೊಳಿತು. ಅಂದ ರೇನೇ ಅವನು ಯೋಗ್ಯ ಶಿಕ್ಷಕನು, ಅವನೇ ಆದರ್ಶ ಶಿಕ್ಷಕನು; ಅವನೇ ಜೀವನ ಶಿಕ್ಷಕನು. "ನಾನು ಶಿಕ್ಷಕನೇ ?" ಈ ಪ್ರಶ್ನೆಯು ಪ್ರತಿಯೊಬ್ಬ ಶಿಕ್ಷಕನ ಕಣ್ಮುಂದೆ ಇರಲೇಬೇಕು ಅಂದರೆ, ಈ ಪ್ರಶ್ನೆಯನ್ನು ಒಂದು ಹಲಿಗೆಯ ಮೇಲೆ ಬರೆದು ಶಿಕ್ಷಕನ ಸಮ್ಮುಖದಲ್ಲಿ ಕಾಣುವಂತೆ ಇಟ್ಟುಕೊಳ್ಳಬೇಕೆಂಬರ್ಥದಲ್ಲಿ ಅಲ್ಲ. ಹಾಗೆ ಹಲಿಗೆಯ ಮೇಲೆ ಬರೆಯದೇ ಇದ್ದರೂ, ಈ 'ನಾನ ಶಿಕ್ಷಕನೇ ?' ಎಂಬ ಪ್ರಶ್ನೆಯು ಪ್ರತಿಯೊಬ್ಬ ಶಿಕ್ಷಕನ ಹೃದಯದಲ್ಲಿ ಯಾವಾಗಲೂ ಕಟೆಯುತ್ತಿರಬೇಕು. ಈ ಪ್ರಶ್ನೆಗೆ ಕ್ಷಣಕ್ಷಣಕ್ಕೆ ಶಿಕ್ಷಕನು ಉತ್ತರಿಸಬೇಕಾಗುತ್ತದೆ ಈ ಪ್ರಶ್ನೆಯನ್ನು ಮರೆತಾಗ್ಗೆ ಶಿಕ್ಷಕನು ಶಿಕ್ಷಕನಾಗಿ ಉ ಯಲು ಶಕ್ಯವಿಲ್ಲ. ಹೆಸರಿನಿಂದ ಮಾತ್ರ ಉಳಿಯ ಬಹುದು ಆದರೆ ತಾತ್ಪರ್ಯದಲ್ಲಿ ಮತ್ತು ನೈಜವಾಗಿ **ಅವನು** ಶಿಕ್ಷ ನಾಗಿರಲು ಶಕ್ಯವಿಲ್ಲ. ಇದೆಲ್ಲ **ಮೇಲಿನ ವಿಷಯವು** ಗಹ

ವಾದದ್ದೇನೋ ನಿಜ; ಆದಾಗ್ಯೂ ಅದು ಗಮನೀಯವಾಗಿದೆ. ಅದರತ್ತ ನಮ್ಮ ಗಮನವು ಹೋಗಲೇ ಬೇಕು. ಇರಲಿ. ಸರ್ವಸಾಮಾನ್ಯ, ನಿತ್ಯ ವ್ಯವಹಾರದ ಮಾತುಗಳನ್ನಾದರೂ ನಾವು ವಿಚಾರಿಸ ಬೇಕಲ್ಲವೇ.

ಅದೆಷ್ಟೋ ಜನ ಶಿಕ್ಷಕರು, ಶಿಕ್ಷಕರೆಂದು ನಾಮಕರಣ ಪಡೆದವರು, ತಾವು ಶಿಕ್ಷಕರೆಂದು ಕರೆದುಕೊಳ್ಳಲು ಅರ್ಹರಿರುವುದಿಲ್ಲ; ಮತ್ತು ತಾವು ಶಿಕ್ಷಕರು ಹೌದು ಎನ್ನುವಷ್ಟು ಮನೋಧೈರ್ಯವೂ ಅವರಿಗಿರುವುದಿಲ್ಲ. ಯಾವ ಅನಿವಾರ್ಯ ಕಾರಣದಿಂದಲೋ, ಅಥವಾ ಪರಿಸ್ಥಿತಿಯ ಮೂಲಕವಾಗಿಯೋ ಅವರು ಶಿಕ್ಷಕರ ಹೆಸರನ್ನು ಪಡೆದು ಹೇಗೋ ಹೇಗೋ ಕಾರ್ಯ ಸಾಗಿಸುತ್ತಲಿರುವರೆಂಬುದನ್ನು ಹೇಳಲೂ ವಿಷಾದವಾಗುತ್ತದೆ. ಮತ್ತು ಅವರ ಆತ್ಮವು ಹಗಲೆಲ್ಲ "ನೀವು ಶಿಕ್ಷಕರಲ್ಲ" ಎಂದು ಚುಚ್ಚುತ್ತಿರುತ್ತದೆ; ಅವರ ಹೃದಯವೂ ಕೂಡ ಹಾಗೆಯೇ ಕೂಗುತ್ತಿರುತ್ತದೆ. ಇಂತಹ ಮಹನೀಯರು ಹೆಸರಿನಿಂದ ಮಾತ್ರ ಶಿಕ್ಷಕರೆಂದು ಕರೆಯಿಸಿ ಕೊಳ್ಳುವ ಶಿಕ್ಷಕರುಮಾತ್ರ. ಅವರು ತಮ್ಮ ಆತ್ಮವನ್ನು, ಹೃದಯವನ್ನು ತುಳಿಯುತ್ತ, ತಮ್ಮ ಹೃದಯದ ಕರೆಯನ್ನು ದೂರೀಕರಿಸುತ್ತ, ಆತ್ಮವಂಚನೆಯಲ್ಲಿಯೇ ತಮ್ಮ ದೈನಂದಿನ ಕಾರ್ಯದಲ್ಲಿ ತೊಡಗುತ್ತಾರೆ. ಇವರು ಹಸುಮಕ್ಕಳಿಗೆ ನೀಡುವ ಶಿಕ್ಷಣವು ಎಷ್ಟರ ಮಟ್ಟಿಗೆ 'ಜೀವನ ಶಿಕ್ಷಣ' ವಾಗಬಹುದೆಂಬುದು ಸಂಶಯವು.

೪

"ನಾನು ಶಿಕ್ಷಕನೆ ?" ಈ ಪ್ರಶ್ನೆಗೆ 'ಹೌದು' ಎಂದು ಉತ್ತರಿಸುವ ಪುರುಷನೇ ಶಿಕ್ಷಕನು. 'ಶಿಕ್ಷಕ' ಎಂಬ ಹೆಸರಿನ ಪಟ್ಟಿಯನ್ನು ಅಥವಾ ಬಿಲ್ಲೆಯನ್ನು ಅವನ ರಟ್ಟೆಗಾಗಲೀ ಅವನ ಹೊಟ್ಟೆಗಾಗಲೀ ಅಥವಾ ಅವನ ಹಣೆಗಾಗಲೀ ಹಚ್ಚುವ ಅವಶ್ಯಕತೆಯಿಲ್ಲ. ಶಿಕ್ಷಕನನ್ನು ನೋಡಿದ ಕೂಡಲೇ' ಆತನು 'ಶಿಕ್ಷಕ'ನು ಹೌದು; ಎಂಬ ಕಳೆಯೂ ಅವನ ಮುಖದಿಂದ, ನೇತ್ರಗಳಿಂದ ಹೊರಚಿಮ್ಮುತ್ತಿರುತ್ತದೆ. 'ಶಿಕ್ಷಕ'ನ ತೇಜವೂ, ಬೆಳಕೂ ಅವನ ಮೈತುಂಬ ತುಂಬಿ, ಅವನ ರೋಮ ರೋಮಗಳಲ್ಲಿ ಪಸರಿಸಿ, ಅವನ ಪಂಚೇಂದ್ರಿಯಗಳ ಮುಖಾಂತರ ಯಾವಾಗಲೂ ಹೊರ ಚೆಲ್ಲುತ್ತಿರಬೇಕು. ಅಂದರೇನೇ, ಆ 'ಶಿಕ್ಷಕ'ನ ಬೆಳಕು, ಓಜಸ್ಸುತೇಜಸ್ಸು ಮಕ್ಕಳಲ್ಲಿ ಒಡಮೂಡಲು ಅನುವಾಗುತ್ತದೆ. ಇಲ್ಲವಾದರೆ, ಇವನು ಶಿಕ್ಷಕನಲ್ಲದಿದ್ದರೂ, ಒತ್ತಾಯದಿಂದ ಇವನನ್ನು 'ಶಿಕ್ಷಕ' ನೆಂದಾಗಿ ಕರೆದಲ್ಲಿ ಅವನ ಹಣೆಗೆ ಹಣೆಪಟ್ಟಿಯನ್ನು ಹಚ್ಚಬೇಕಾಗುವ ಪ್ರಸಂಗ ಬರಬಹುದು. ಇವನೊಬ್ಬ ನೌಕರ; ಪಗಾರಕ್ಕಾಗಿ ಕೆಲಸ ಮಾಡುವ, ಪಗಾರ ತಕ್ಕೊಳ್ಳುವ 'ಶಿಕ್ಷಕ' ಎಂದು ಅವನನ್ನು ಕರೆಯಲು ಏನೊಂದು ಅಭ್ಯಂತರವಿಲ್ಲ. ಶಿಕ್ಷಕನಾದವನಿಗೆ ಇಂತಹ ಪಟ್ಟಿಯನ್ನು ಹಚ್ಚುವ ಅವಶ್ಯಕತೆಯೇ ಇಲ್ಲವೆಂದೋ ಏನೋ, 'ಸ್ಟೇಶನ್ ಮಾಸ್ತರ' ಮುಂತಾದ ನೌಕರರಿಗೆ ಕೊಟ್ಟಂತೆ ಶಾಲಾ ಮಾಸ್ತರರಿಗೆ (ಶಿಕ್ಷಕರಿಗೆ) ಹೆಸರಿನ ಪಟ್ಟಿಯನ್ನು ಹಚ್ಚಿ ಕೊಳ್ಳುವ ಅಪ್ಪಣೆ (ಹುಕುಂ) ಇಲ್ಲವಂತೆ ಕಾಣುತ್ತದೆ.

ಪ್ರತಿಯೊಬ್ಬ ಶಿಕ್ಷಕನೂ (ಪುರುಷನಿರಲಿ, ಸ್ತ್ರೀ ಇರಲಿ) "ನಾನು ಶಿಕ್ಷಕನು; ನಾನು ಶಿಕ್ಷಕನು ಹೌದು, ಹೌದು" ಎಂದು ಒಳ್ಳೆಯ ಅಭಿಮಾನದಿಂದಲೂ, ಹುಮ್ಮಸದಿಂದಲೂ ಹೇಳುವಂತಾಗಬೇಕು. ಹಾಗೆ ಹೇಳಲೂ, ಅವನ ಆತ್ಮಧೈರ್ಯವಿರಬೇಕಲ್ಲದೆ, ಅವನ ಹೃದಯವೂ ಅದಕ್ಕೆ ಹೌದು, ಹೌದೆನ್ನುತ್ತಿರಬೇಕು. ನಿತ್ಯಜೀವನದಲ್ಲಿ ಕಾಣಿಸಿಕೊಳ್ಳುವ ಅನೇಕ ಶಿಕ್ಷಕರು 'ನೀವು ಶಿಕ್ಷಕರೇ ?' ಎಂಬ ಪ್ರಶ್ನೆಗೆ ನೇರವಾಗಿ ಉತ್ತರವನ್ನು ಕೊಡಲಾರರು. 'ನಾವು ಶಿಕ್ಷಕರು' ಎಂದು ಇಷ್ಟೇ ಉತ್ತರವನ್ನು ಕೊಡಬೇಕಾದರೆ, ಅವರ ಹೃದಯವೂ ನಡುನಡುಗಿ ಅದೆಷ್ಟೋ ಹುದುಗುತ್ತದೆ. ಅಲಲ ! ಹಾಯ್ !! ಇದೆಂತಹ ಪರಿಸ್ಥಿತಿಯು !!! ದೇವರೇ, ಬೇಗ ಕಣ್ದೆರೆ; ಬೇಗ ಆಶೀರ್ವದಿಸು. ಇಂತಹ ಪರಿಸ್ಥಿತಿಯು ಬೇಗನೇ ಮಾಯವಾಗಲಿ, ದೂರವಾಗಲಿ, ಕಣ್ಮರೆಯಾಗಲಿ.

೫

ಅದೊಂದು ಕಾಲವಿತ್ತು. ಶಾಲೆಗೆ ಬಾಲಕರು ಹೋಗಬೇಕಾದರೆ ಅವರಿಗೆ ಅದೊಂದು ಸಮಸ್ಯೆಯಾಗಿತ್ತು. ಶಾಲೆಗೆ ಹೋಗುವುದೆಂದರೆ, ಮಕ್ಕಳು ಅಳುಕುತ್ತ, ಬಳುಕುತ್ತ, ಅಳುತ್ತ ಹೋಗುವ ಪ್ರಸಂಗವೊಂದಿತ್ತು. ಆದರೆ, ಇದೊಂದು ಕಾಲಬಂದಿದೆ. ಮೇಲಿನ ವಾಕ್ಯದಲ್ಲಿ 'ಬಾಲಕರು' ಇದ್ದಲ್ಲಿ 'ಶಿಕ್ಷಕರು, ಎಂದು ಶಬ್ದವನ್ನು ಬದಲಿಸಿ ಓದುವ ಪ್ರಸಂಗವು ಬಂದಿದೆ! ಶಾಲೆಗೆ ಹೋಗುವುದೆಂದರೆ, ಶಿಕ್ಷಕರು ಅಳುಕುತ್ತ, ಬಳುಕುತ್ತ, ಅಂಜುತ್ತ ಹೋಗುತ್ತಿರುವ ಪ್ರಸಂಗವೂ ಬಂದಿದೆ. (ಇದು ಎಲ್ಲ ಶಿಕ್ಷಕರಿಗೂ ಅನ್ವಯಿಸುತ್ತವೆಂದು

ದಯವಿಟ್ಟು ತಿಳಿಯಬೇಡಿರಿ. ಕಾಲಮಹಿಮೆಯ ತಿರುಳನ್ನು ತಿಳಿಸಲು ಹಾಗೂ ವಿದ್ಯಾರ್ಥಿ, ಶಿಕ್ಷಕರಲ್ಲಿ ಕಾಲಾನುಗುಣವಾಗಿ ಬದಲಾಗುವ ಪರಿಸ್ಥಿತಿಯನ್ನು ಅರಿಯಲು ಮಾತ್ರ ಮೇಲಿನದನ್ನೆಲ್ಲ ಹೇಳಬೇಕಾಗಿದೆ. ಮೇಲಿನ ವಿಷಯವು ಈಗಿನ ಎಲ್ಲ ಶಿಕ್ಷಕರಿಗೂ ಅನ್ವಯಿಸದಿದ್ದರೂ, ಕೆಲ ಶಿಕ್ಷಕರಿಗಾದರೂ, ಅನ್ವಯಿಸದೆ ಬಿಡುವಂತಿಲ್ಲವೆಂಬ ನಿಚ್ಚಳ ಮಾತನ್ನು ಉಚ್ಚರಿಸಿದಲ್ಲಿ, ಯಾವ ಶಿಕ್ಷಣ ಪ್ರೇಮಿಯೂ ಕಿಚ್ಚಾಗನು ಎಂಬ ಉಚ್ಚ ಭಾವನೆಯಿಂದ ಮಾತು ಹೇಳಿದ್ದಾಗಿದೆ.) ಈ ಸ್ಪಷ್ಟೀಕರಣವು ಇಷ್ಟಕ್ಕೇ ನಾಕೆನ್ನುವುದೇ ಇಷ್ಟ. ನಮ್ಮ ವಿಷಯದ ಕಡೆಗೆ ಸಾಗುವಾ.

'ನಾನು ಶಿಕ್ಷಕನು.' ನನ್ನ ದೈನಂದಿನ ಕೆಲಸವೆಂದರೆ, ಶಿಕ್ಷಕನ ಕೆಲಸ. ಈ ಕೆಲಸವನ್ನು ಬಿಟ್ಟು ಬೇರಾವ ಕೆಲಸವೂ ನನಗಿಲ್ಲ. ಇತ್ತಿತರ ಕೆಲಸವೂ ನನಗೆ ಬೇಡ. ಶಿಕ್ಷಕನಾಗಿ ದುಡಿಯುವ ಉದ್ಯೋಗವನ್ನು ನಾನು ಕೈಕೊಂಡಿದ್ದೇನೆ. ನಾನು ಆಜನ್ಮ ಶಿಕ್ಷಕನು. ಶಿಕ್ಷಕನಾಗಿ ದುಡಿಯುವೆ. ನನ್ನ ಜನ್ಮಪರ್ಯಂತ ಶಿಕ್ಷಕನಾಗಿಯೇ ದುಡಿಯುವೆ. ಶಿಕ್ಷಕನೆಂದು ದುಡಿದೇ ದುಡಿಯ ಬೇಕೆನ್ನುವೆ. ಈ ಉದ್ಯೋಗವೇ ನನ್ನ ಕಾಯಕವು. ಈ ಕಾಯಕದಲ್ಲಿಯೇ ನನ್ನ ಕೈಲಾಸವಿದೆ. ಈ ಕಾಯಕವೇ ಕೈಲಾಸವು.

ಈ ಮಾತನ್ನು ಪ್ರತಿನಿತ್ಯ ಉಚ್ಚರಿಸುವ ಶಿಕ್ಷಕರೆಷ್ಟಿದ್ದಾರೆ? ಈ ಮಾತನ್ನು ಕೃತಿಯಲ್ಲಿ ಇಳಿಸಿದ ಶಿಕ್ಷಕರೆಷ್ಟಿದ್ದಾರೆ? ಈ ಮಂತ್ರವನ್ನೇ ನಿತ್ಯ ಜಪಿಸುವ ಶಿಕ್ಷಕರೆಷ್ಟು? ಈ ಶಿಕ್ಷಕರೂಪೀ ದೇವತೆಯನ್ನೇ ದಿನಾಲೂ ಪೂಜಿಸುವ ಶಿಕ್ಷಕ-ಶಿಕ್ಷಕಿಯರೆಷ್ಟು? ಈ ಶಿಕ್ಷಕ-ಕಾಯಕವನ್ನೇ ನೆಚ್ಚಿ ನಿಚ್ಚ ಕಾಯಕವನ್ನು ಸಾಗಿಸುತ್ತಲಿರುವ ಶಿಕ್ಷಕ-ಶಿಕ್ಷಕಿಯರಲ್ಲಿಯ ಶರಣ ಬಾಂಧವರೆಷ್ಟು? ಈ ಪ್ರಶ್ನೆಗಳಿಗೆ ಸದಯಾಂತಃಕರುಣೆಗಳಿಂದ ಉತ್ತರವು ಬೇಕೆಂಬಾಶೆಯ ಈ ನಮ್ರ ಲೇಖಕರ ಸವಿನಯ ಬೇಡಿಕೆ. ಉತ್ತರವನ್ನು ಕೊಡಬಯಸುವ ಮಹನೀಯರು ಸಿಕ್ಕಿದಾದರೆ, ಲೇಖಕರ ಮೇಲಿನ ಸ್ಪಷ್ಟೀಕರಣದ ಅವಶ್ಯಕತೆಯೇ ಇಲ್ಲ, ಅದು ಅಲ್ಲಿಯೇ ಉಳಿಯಲಿ.

೬

ನಾನು ಶಿಕ್ಷಕನು. ಶಾಲೆಗೆ ಹೊರಟೆ. ಬಾಲ ಬಾಲಿಕೆಯರು, ಚಿಕ್ಕ ವಿದ್ಯಾರ್ಥಿಗಳು ನನ್ನನ್ನು 'ಗುರು'ಗಳೆಂದು ಕರೆಯುತ್ತಾರೆ. ನಾನು ಗುರು; ಅವರು ಶಿಷ್ಯರು. ನಾನು ಮನೆಯಿಂದ ಶಾಲೆಗೆ ಹೊರಟಾಗ್ಗೆ, ಶಾಲೆಯ ಆವರಣದಲ್ಲಿ ಬಂದಾಗ್ಗೆ, ಶಾಲೆಯ ಹೊಸ್ತಲದಲ್ಲಿ ಕಾಲಿಡುವಾಗ್ಗೆ, ನಾನು 'ಗುರು' ಆಗಿಯೇ ಬಿಟ್ಟಿದ್ದೇನೆ. ಶಾಲೆಯಲ್ಲಿ ಕಲಿತಿರುವ, ಕಲಿಯಬೇಕೆಂದಿರುವ ಅಲ್ಲಿ ಕುಳಿತಿರುವ ವಿದ್ಯಾರ್ಥಿಗಳೆಲ್ಲರೂ, ನನ್ನ ಅಂದರೆ, ಗುರುವಿನ ದಾರೀ ಕಾಯುವ ಮುದ್ದು ಮಕ್ಕಳೆಲ್ಲರೂ ನನ್ನ ಶಿಷ್ಯರೇ, ಇದೆಂತಹ ಭಾವನೆ. ಈ ಭಾವನೆಯಿಂದ ನಾನು ಶಾಲೆಯಲ್ಲಿ ದಿನಾಲು ಕಾಲಿಡುವೆನೇ? ಈ 'ಗುರು-ಶಿಷ್ಯ' ಭಾವನೆಯಿಂದ ನನ್ನ ಸಮ್ಮುಖದಲ್ಲಿರುವ ಮಕ್ಕಳೆಲ್ಲರೂ ನನ್ನನ್ನು ಕಾಣುವರೇ?

ನಾನು ಶಾಲೆಗೆ ಬಂದೆ. ನನ್ನ ಕಾಯಕವನ್ನು ಪ್ರಾರಂಭಿಸುವ ಮೊದಲು ನನ್ನ ಶಿಷ್ಯರೊಡನೆ ಪ್ರಾರ್ಥನೆಗೈಯುವೆ. ಪ್ರಾರ್ಥನೆಯು ಪ್ರಾರ್ಥನೆಯಾಗುವುದಲ್ಲವೇ? ನನ್ನ ಪ್ರಾರ್ಥನೆಯು ಹೆಸರಿಗಾಗಿ, ಬರೇ ಶಬ್ದಕ್ಕಾಗಿ ಪ್ರಾ-ರ್ಥ-ನೆ ಯಾಗುವುದಿಲ್ಲವಲ್ಲವೇ? ಬಾಪೂಜಿಯವರ ಮಾತಿನಲ್ಲಿ, **"ಪ್ರಾರ್ಥನೆ ಬರೇ ನಾಲಿಗೆಯ ನುಡಿಯಲ್ಲ; ಅಂತಃಕರುಣದ ಮಹಾಪೂರ"** ಇಂತಹ ಪ್ರಾರ್ಥನೆಯಾದರೆ ಸರಿ; ಇಲ್ಲವಾದರೆ, ಪ್ರಾರ್ಥನೆಯು ಅಪಾರ್ಥವೇ ಸರಿ. 'ಶಾಂತಂ ಪಾಪಂ'

ನನ್ನನ್ನು ನನ್ನ ಶಿಷ್ಯರು ನೋಡುತ್ತಿದ್ದಾರೆ. ನನ್ನ ಕಡೆಗೇ ಅವರ ಲಕ್ಷ್ಯವು. ಗುರುವಿನ ಕಡೆಗೆ ಶಿಷ್ಯರ ಲಕ್ಷ್ಯವೆಲ್ಲ. ನಾನು ನನ್ನ ಶಿಷ್ಯರ ಲಕ್ಷ್ಯವನ್ನು ಸೆಳೆಯುತ್ತೇನಲ್ಲವೇ. ನನ್ನ ಅರಿವೆ-ಅಂಚಡಿ ಹೇಗಿವೆ? ಅವು ಸರಿಯಾಗಿರುವವಲ್ಲವೇ? ನಾನು ಹಾಕಿಕೊಂಡ ಅರಿವೆಗಳು ಸ್ವಚ್ಛವಾಗಿರುವವಲ್ಲವೇ? ಅಲ್ಲದೇ, ಅವೆಲ್ಲವುಗಳೂ ಓರಣವಾಗಿವೆಯಲ್ಲವೇ? ಅವು ಯಾವ ಬಗೆಯಿಂದಲೂ ಅಸ್ತ-ವ್ಯಸ್ತವಾಗಿಲ್ಲವಲ್ಲವೇ? ನನ್ನ ಅಂಗಿ, ಅರಿವೆ, ವಸ್ತ್ರಗಳೆಲ್ಲ ಸರಿಯಾಗಿವೆ, ಓರಣವಾಗಿವೆ, ಸ್ವಚ್ಛವಿವೆ, ಎಲ್ಲ ರೀತಿಯಿಂದಲೂ ಸರಿಯಿವೆ: ನನ್ನ ಶಿಷ್ಯರು ನೋಡಲಿಕ್ಕೆ ಯೋಗ್ಯವಾಗಿವೆ. ಸರಿ. ನನಗೆ ತುಂಬಾ ಸಮಾಧಾನವಿದೆ.

ಶಾಲೆಯಲ್ಲಿ ನಾನು ಮಕ್ಕಳಿಗೆ ಕಲಿಸಬೇಕಲ್ಲವೇ, ಶಾಲೆಯ ತನಕ ನನ್ನಡೆಗೆ ಬಂದ ಮಕ್ಕಳಿಗೆ ನಾನು ಕಲಿಸಿಯೇ, ಅವರನ್ನು ಮನೆಗೆ ಕಳಿಸಬೇಕಲ್ಲವೇ. ಇಲ್ಲಿಯವರೆಗೆ ಬಂದವರನ್ನು ಸುಮ್ಮನೇ ಹಿಂದಿರುಗಿ ಕಳಿಸುವದೆಂತು? ಅವರನ್ನು ಬರಿಗೈಯಿಂದ ಕಳಿಸುವುದು ಯೋಗ್ಯವಲ್ಲ; ನನಗೆ ಶೋಭಿಸಲಿಕ್ಕಿಲ್ಲ, ಇದಕ್ಕೆ ನನ್ನ ಮನಸ್ಸೂ ಒಪ್ಪಲಿಕ್ಕಿಲ್ಲ. ಶಾಲೆಗೆ ಬಂದ ಮಕ್ಕಳು, ಬರಿಗೈಯಿಂದ

ಹಿಂದಿರುಗಿದರೆ ನಾನು ಮರಮರನೆ ಮರುಗುತ್ತೇನೆ. ಅವರೂ ಮರುಗಬಹುದೆಂದು ನಾನು ಮರುಗುವೆ. ಹೀಗೆ ಎಂದೂ ಮಾಡಗೊಡಲಿಕ್ಕಿಲ್ಲ, ಆಗಗೊಡಲಿಕ್ಕಿಲ್ಲ. ನನ್ನ ಹತ್ತಿರ ಇದ್ದ ಎಡೆಯನ್ನು ನನ್ನೀ ಮಕ್ಕಳಿಗೆ ನೀಡಿಯೇ ನೀಡುವೆ; ಪ್ರೀತಿಯಿಂದ ನೀಡುವೆ; ಹರುಷದಿಂದ ಹಾಡುವೆ. ಮಣಿಮಣಿದು ಕುಣಿಯುವೆ; ಹಾರಿ, ಹಾರಿ ಜಿಗಿಯುವೆ. ಮಕ್ಕಳೆಲ್ಲ ನೀಡಿದ್ದನ್ನೆಲ್ಲ ಉಣ್ಣುವರು; ಉಂಡದ್ದನ್ನೆಲ್ಲ ಕರಗಿಸುವರು, ಅರಗಿಸಿಕೊಳ್ಳುವರು. ನಾನು ನೀಡಿದಂತೆ, ನೀಡಿದ ಹಾಗೆ ಅವರು ಉಣ್ಣುವರು. ನಾನು ಹಾಡಿದಂತೆ ಹಾಡುವರು, ನಾನು ಕುಣಿದಂತೆ ಕುಣಿಯುವರು. ನಾನೂ ಅವರೂ ಕೂಡಿಯೇ ಹಾಡುವೆವು, ಕೂಡಿಯೇ ಕುಣಿಯುವೆವು, ಕೂಡಿಯೇ ಉಣ್ಣುವೆವು. ನಾವು ಮಾಡುವದೆಲ್ಲ ಕೂಡಿಯೇ, ಒಂದಾಗಿಯೇ. ನಾವೆಲ್ಲ ಒಂದೇ. ನಮ್ಮಲ್ಲಿ ಯಾವ ಭೇದಭಾವವೂ ಇಲ್ಲ. ನಾನೆಂದರೆ ನನ್ನ ಶಿಷ್ಯರು; ನನ್ನ ಶಿಷ್ಯರೆಂದರೇ ನಾನು. ಗುರು ಶಿಷ್ಯರು ಒಂದೇ. ಗುರುವು ಶಿಷ್ಯನಾಗಿ, ಶಿಷ್ಯನು ಗುರುವಾಗುವನು. ಇದೇ ಗುರು ಬಯಸುವುದು, ಇದೇ ಶಿಷ್ಯನು ಆಶಿಸುವುದು. ಇದೇ ಗುರು ಶಿಷ್ಯರ ಐಕ್ಯ. ಇದೇ ಶಿಕ್ಷಕ–ವಿದ್ಯಾರ್ಥಿಗಳ ಕಾಯಕ-ಕೈಲಾಸ.

ನಾನು ಪಾಠ ಹೇಳುವೆನು. ಮಕ್ಕಳು ನನ್ನ ಪಾಠ ಕೇಳುವರು. ನಾನು ಮಕ್ಕಳಿಗೆ ಪ್ರಶ್ನೆ ಕೇಳುವೆನು, ಅವರು ಉತ್ತರ ಕೊಡುವರು. ನಾನು ಕೇಳುವ ಪ್ರಶ್ನೆಗೆ ನಾನು ಉತ್ತರ ಕೊಡಬಲ್ಲೆನೇ? ಇದೂ ಒಂದು ಪ್ರಶ್ನೆ. ನನ್ನ ಪ್ರಶ್ನೆಯು ತಿಳಿಯದಿದ್ದರೆ, ಮಕ್ಕಳು ನನಗೇ ತಿರುಗಿ ಪ್ರಶ್ನೆ ಕೇಳುವ ಸಂಭವವಿದೆ. ಆಗ್ಗೆ ಆ ಮಕ್ಕಳ ಪ್ರಶ್ನೆಗೆ ನಾನು ಸಮರ್ಪಕ ಉತ್ತರ ಕೊಡಲು ಸಮರ್ಥನಿರುವೆನೇ? ಚಿಕ್ಕ ಮಕ್ಕಳೂ ಕೂಡ ಒಮ್ಮೊಮ್ಮೆ ನನ್ನ ತಿಳುವಳಿಕೆಗೆ ನಿಲುಕದ ಪ್ರಶ್ನೆಗಳನ್ನು ಕೇಳುತ್ತಾರಲ್ಲ! ಮಕ್ಕಳಿಗೆ ನಾನು ಕಲಿಸುತ್ತಿರುವಾಗ್ಗೆ, ಅವರೂ ನನಗೆ ಕಲಿಸುತ್ತಿರುತ್ತಾರೆ. ಅವರು ಕಲಿಯುವಾಗ್ಗೆ ನಾನೂ ಕಲಿಯುತ್ತಲಿರುತ್ತೇನೆ. ಅವರಿಗೆ ಕಲಿಸುತ್ತ ನಾನೂ ಕಲಿಯುತ್ತೇನೆ. ಅವರು ನನ್ನಿಂದ ಕಲಿಯುತ್ತ ನನಗೂ ಕಲಿಸುತ್ತಿರುತ್ತಾರೆ. ಈ ದ್ವಂದ್ವ ಯುದ್ಧವೂ ಸಮರಸ ಏಕೀಕರಣವೂ, ಸಮಾನ ಬಾಂಧವ್ಯವೂ ಕ್ಷಣಕ್ಷಣಕ್ಕೂ ನಡೆದೇ ಇರುತ್ತದೆ. ಇದನ್ನು ನಾನು 'ಶಿಕ್ಷಕನಾದವನು' ಅರಿತಿರುವೆನೇ? ಅರಿತಿದ್ದರೆ, ಸಾಕು. ಅದೇ ನನ್ನ ಜೀವನಾಧಾರವಾದ ಜೀವನ ಶಿಕ್ಷಣ.

ಈ ವರೆಗೆ ನಾನು ಹೇಳಿದುದನ್ನೆಲ್ಲ ನೀವು ಕೇಳಿಕೊಂಡಿರಲ್ಲವೇ, ನೀವು ಕೇಳಿದಿರಿ. ನನ್ನ ಮಟ್ಟಿಗೆ ನಾನು ಹೇಳಿದ್ದಾಯಿತು. 'ನಾನು ಶಿಕ್ಷಕನೇ?' ಎಂಬ ಪ್ರಶ್ನೆಯನ್ನು ನೀವೂ ನಿಮ್ಮಷ್ಟಕ್ಕೆ ಕೇಳಿಕೊಂಡು ನೀವೂ ಉತ್ತರವಿತ್ತು ದಾದರೆ ನಾನು ಕಿವಿಗೊಟ್ಟು ಕೇಳುವೆ. ಈ ಮೇಲೆ ಹೇಳಿದುದನ್ನೆಲ್ಲ ನೀವು ಕೇಳಿದ್ದಾಯಿತು, ಓದಿದ್ದಾಯಿತು, ತಲೆ ಬರಹದ ಪ್ರಶ್ನೆಗೂ ಮತ್ತೆ ಅದರಿಂದ ಉದ್ಭವಿಸಿದ (ಅ)–(ಉ) ಉಪ–ಪ್ರಶ್ನೆಗಳಿಗೂ ಉತ್ತರ ಕೊಡಲು ಪ್ರತಿಯೊಬ್ಬ ಶಿಕ್ಷಕನು ಈಗ ಸನ್ನದ್ಧನಾಗಿರಬಹುದೆಂದು ತಿಳಿಯುವೆ. ಶಿಕ್ಷಕರಿಂದ ಬರುವ ಉತ್ತರವನ್ನು ಕೇಳ ಬಯಸುವೆ.

ಭಾರತದ ಮುಂದಿನ ವಿದ್ಯಾಭ್ಯಾಸದ ರೀತಿನೀತಿ

ಅಖಿಲಭಾರತ ಆಕಾಶವಾಣಿ ಕಾರ್ಯಕ್ರಮದಲ್ಲಿ [೧೯೫೩ರಲ್ಲಿ]

ಶ್ರೀಮತಿ ಆಶಾದೇವಿ ಆರ್ಯನಾಯಕಂರವರು ಮಾಡಿದ ಭಾಷಣ.

ಅನುವಾದಕರು : **ಶ್ರೀ ತಟ್ಟಿ ಶಾಮರಾಯರು**

ಭಾರತದ ಶಿಕ್ಷಣದ ಭವಿತವ್ಯದ ಪ್ರಶ್ನೆಯನ್ನು ದೇಶದ ಎಲ್ಲ ಸ್ತ್ರೀ ಪುರುಷರೂ ತಮಗೆ ವಿಶೇಷ ಸಂಬಂಧಿ ದ್ದೆಂದು ಭಾವಿಸಬೇಕು. ನಮ್ಮ ರಾಷ್ಟ್ರದ ಕಲ್ಯಾಣವು ಈ ಪ್ರಶ್ನೆಯ ಸಮರ್ಪಕವಾದ ಪರಿಹಾರವನ್ನವಲಂಬಿಸಿ ಸುವದು; ಇಷ್ಟೇ ಅಲ್ಲ ಪ್ರಪಂಚದ ನಿಜವಾದ ಶಾಂತಿಯೂ ಸ್ವಾತಂತ್ರ್ಯವೂ ಸಹ ಅದನ್ನವಲಂಬಿಸಿರುವ ಸಂಭವವಿದೆ. ಇದು ಜನಸಾಮಾನ್ಯರ ಯುಗ; ಪ್ರಪಂಚದ ಎಲ್ಲ ಭಾಗಗಳ ದೀನ ದರಿದ್ರ ಜನಗಳೂ ತಮಗೆ ಜ್ಞಾನ ಹಾಗು ಸ್ವಾತಂತ್ರ್ಯ ಲಭಿಸಬೇಕೆಂದು ಧಿಟ್ಟತನದಿಂದ ಕೇಳುತ್ತಿದ್ದಾರೆ. ನಾವು ರಾಜಕೀಯ ಸ್ವಾತಂತ್ರ್ಯವನ್ನು ಸಾಧಿಸಿ

ದ್ದರೂ ನಮ್ಮ ರಾಷ್ಟ್ರಕ್ಕೆ ಆರ್ಥಿಕ ಸಾಮಾಜಿಕ ಸ್ವಾತಂತ್ರ್ಯದ ಗುರಿಯು ಇನ್ನೂ ದೂರವಾಗಿಯೇ ಇದೆ; ಒಟ್ಟಿನಲ್ಲಿ ನಾವಿನ್ನೂ ಹಿಂದುಳಿದ ಬಡ ಜನರ ವರ್ಗಕ್ಕೆ ಸೇರಿದವರೇ ಆಗಿದ್ದೇವೆ.

ನಮ್ಮ ರಾಷ್ಟ್ರದ ಜನರು ಸಹಜವಾಗಿಯೂ ಶಾಂತಿಯುತವಾಗಿಯೂ ಭಾರತದ ಹೊಣೆಯನ್ನರಿತ ಬುದ್ಧಿವಂತ ನಾಗರಿಕರಾಗುವಂತೆ ನಾವು ನಮ್ಮ ಜನರ ಮುಂದಿನ ಶಿಕ್ಷಣ ಕಾರ್ಯಕ್ರಮವನ್ನು ರೂಪಿಸಬಲ್ಲೆವಾದರೆ—ಹಾಗು ಪ್ರಪಂಚದ ನಾಗರಿಕರಾಗುವಂತೆಯೂ ಮಾಡಬಲ್ಲೆವಾದರೆ ಜಗತ್ತಿನ ಪ್ರಾಕೃತಿಕ ಹಾಗು ಸಾಂಸ್ಕೃತಿಕ ಸಂಪತ್ತನ್ನು ಬೆಳೆಸುವದರಲ್ಲಿ ನಮ್ಮ ಪೂರ್ಣ ಸಹಕಾರವನ್ನು ನೀಡಿ ಅದರಲ್ಲಿ ನಾವೂ ಸಮಭಾಗಿಗಳಾಗಬಹುದು. ಇದರಲ್ಲಿ ನಮಗೆ ಯಶವು ದೊರೆತರೆ ನಮ್ಮ ರಾಷ್ಟ್ರವು ಒಳ್ಳೆಯ ಯೋಗ್ಯ ರಾಷ್ಟ್ರವಾಗುವದಲ್ಲದೆ ಪ್ರಪಂಚದ ಸ್ಥಿತಿಯೂ ಉತ್ತಮಗೊಳ್ಳುವದು.

ಹಾಗಾದರೆ ಇನ್ನೊಮ್ಮೆ ನಮ್ಮನ್ನು ನಾವು ವಿಚಾರಿಸೋಣ—ದೇಶದ ಭವಿಷ್ಯತ್ ಕಾಲದ ವಿದ್ಯಾಭ್ಯಾಸದ ಸ್ವರೂಪ-ಈ ಅವಸರದ ಜೀವಾಳದ ಪ್ರಶ್ನೆಯತ್ತ ನಮ್ಮ ಲಕ್ಷ್ಯವು ಹೊರಳಿದೆಯೇ?

ಹೆಚ್ಚಾಗಿ ಅರೆಹೊಟ್ಟೆಯಿಂದ ಜೀವಿಸುವ ನಮ್ಮ ಬಹುಸಂಖ್ಯಾಕ ಜನರು ಬಾಳಿನ ಭವಣೆಯಿಂದ ಬೆಂದು ಬೆಂಡಾಗಿರುವದರಿಂದ ಈ ದೊಡ್ಡ ಪ್ರಶ್ನೆಯನ್ನು ಪರಿಶೀಲಿಸುವದಕ್ಕೆ ಸಮಯವೂ ಉತ್ಸಾಹವೂ ಅದರ ಬಗ್ಗೆ ಸ್ಪಷ್ಟ ಕಲ್ಪನೆಯೂ ಯಾವದೂ ಇಲ್ಲ.

ಆದರೆ ವಿದ್ಯಾಭ್ಯಾಸದ ಭಾಗ್ಯ ದೊರೆತಿರುವ ಮತ್ತು ತಕ್ಕಮಟ್ಟಿಗೆ ಸುಖದ ಜೀವನವನ್ನು ನಡೆಯಿಸಬಲ್ಲ ನಾವು ಈ ಸವಾಲನ್ನು ಹಾಕಿಕೊಳ್ಳೋಣ— ನಮ್ಮ ರಾಷ್ಟ್ರವನ್ನು ಅದರ ಈಗಿರುವ ಮಟ್ಟದಿಂದ, ಸಮರ್ಪಕವಾದ ಶಿಕ್ಷಣ ನೀತಿಯ ಉಪಾಯದಿಂದ, ಮಾನವನ ಶ್ರೇಷ್ಠತೆಯ ಘನತೆಯ ಪರಮಾವಧಿಯ ಮಟ್ಟಕ್ಕೆ ಎತ್ತುವ ಮಹತ್ತರವಾದ ಕಾರ್ಯವು ನಮ್ಮ ಲಕ್ಷ್ಯವನ್ನು ಕದಡಿದೆಯೇ? ಹಾಗಿದ್ದರೆ ಈ ಸಮಸ್ಯೆಯನ್ನು ಮೊದಲು ಎದುರಿಸೋಣ; ಈ ಕಾರ್ಯಕ್ರಮದ ನಿರ್ದೇಶಕ ತತ್ವಗಳೂ ಪದ್ಧತಿಗಳೂ ಯಾವವಿರಬೇಕೆಂಬದನ್ನು . ತಿಳಿದುಕೊಳ್ಳಲಿಕ್ಕೆ ಪ್ರಯತ್ನ ಮಾಡಿ ಅವನ್ನು ಅನುಷ್ಠಾನಕ್ಕೆ ತರುವದಕ್ಕೆ ಯಾವ ಉಪಾಯಗಳನ್ನು ಯೋಜಿಸಬೇಕೆಂಬದನ್ನು ನೋಡೋಣ.

ವೇದ ಕಾಲದದಿಂದ ಪರಂಪರೆಯಿಂದ ಬಂದ ವಿದ್ಯೆಯ ವಿಷಯವಾಗಿ ಒಂದು ಪ್ರಾಚೀನ ಉಕ್ತಿಯಿದೆ· "ಸಾ ವಿದ್ಯಾ ಯಾ ವಿಮುಕ್ತಯೇ," ನಿಜವಾದ ಸ್ವಾತಂತ್ರ್ಯದೆಡೆಗೆ ಒಯ್ಯುವದೇ ವಿದ್ಯೆಯು. ಈ ವ್ಯಾಖ್ಯೆಯು ನಮ್ಮ ರಾಷ್ಟ್ರೀಯ ಪ್ರಜ್ಞೆಯ ಅಂತರಾಳದಿಂದ ಹೊ ಹೊಮ್ಮಿರುತ್ತವೆ. ಅದು ಇಂದಿಗೂ ಇಂದಿನ ವೈಜ್ಞಾನಿ ತಾಂತ್ರಿಕ ಯುಗದಲ್ಲಿಯೂ ಅಷ್ಟೇ ಸತ್ಯವಾಗಿದೆ.

ಅದು ನಿತ್ಯ ಸನಾತನವಾದ ಸತ್ಯವಾಗಿದೆ ಯಾವದು ಮನುಷ್ಯನನ್ನು ಭೌತಿಕ, ಆರ್ಥಿಕ, ಸಾಮಾಜಿಕ, ರಾಜಕೀಯ ಬಂಧನದಿಂದ ಮುಕ್ತ ಮಾಡುವದೊ ಅದೇ ವಾಸ್ತವವಾದ ವಿದ್ಯೆ. ಅದು ಅವನಲ್ಲಿ ನೂತ ನಿರ್ಮಿತಿ ಶಕ್ತಿಯನ್ನೂ, ತನ್ನ ಜೀವನವನ್ನು ತನ ಸ್ವಮನೋಗತದಂತೆ, ತನ್ನ ಬಾಂಧವರ ಜೀವನಕೆ ಹೊಂದಿಕೊಳ್ಳುವಂತೆ, ಎಲ್ಲರ ಹಿತಕ್ಕಾಗಿ ನಿರೂಪಿಸು ಸಾಮರ್ಥ್ಯವನ್ನು ಉಂಟು ಮಾಡಬಲ್ಲದು. ಮಾನ ಸಮಾಜದ ಈ ಅಂತಿಮ ಗುರಿಯು—ಸರ್ವರ ಹಿತದ ಕ ಗುರಿಯು— ನಮ್ಮ ಪುರಾತನರ ಒಂದು ಪ್ರಾರ್ಥನೆಯ ಹೀಗೆ ಹೇಳಲ್ಪಟ್ಟಿದೆ:

ಸರ್ವೇ ವೈ ಸುಖಿನಃ ಸಂತು
ಸರ್ವೇ ಸಂತು ನಿರಾಮಯಾಃ |
ಸರ್ವೇ ಭದ್ರಾಣಿ ಪಶ್ಯಂತು
ಮಾ ಕಶ್ಚಿತ್ ದುಃಖಭಾಕ್ ಭವೇತ್ ||

"ಎಲ್ಲರೂ ಸುಖದಿಂದಿರಲಿ, ರೋಗರುಜಿನಗಳಿಲ್ಲ ಇರಲಿ, ಎಲ್ಲರೂ ಎಲ್ಲರ ಬಗೆಗೆ ಶುಭೇಚ್ಛೆಯನ್ನು ತಾಳಲಿ, ಈ ಪ್ರಪಂಚದಲ್ಲಿ ಶೋಕವೂ ದುಃಖವೂ ಇಲ್ಲದಾಗಲಿ."

ಆಧುನಿಕ ಪ್ರಪಂಚದ ಹಿನ್ನೆಲೆಯನ್ನನುಲಕ್ಷಿಸಿ ಆಧುನಿಕ ಯುಗದ ಭಾಷೆಯಲ್ಲಿ ಯುಕ್ತರಾಷ್ಟ್ರ ಸಂಘ ಶಾಸನದಲ್ಲಿ ಇದೇ ಗುರಿಯು ಪ್ರತಿಪಾದಿತವಾಗಿದೆ....... "ಸಮಾಜದ ಪ್ರಗತಿಗೆ, ಹೆಚ್ಚು ವ್ಯಾಪಕವಾದ ಸ್ವಾತಂತ್ರ್ಯದಲ್ಲಿ ಶ್ರೇಷ್ಠವಾದ ಜೀವನ ಸಾಗಿಸುವದಕ್ಕೆ."

ಮಾನವ ಜಾತಿಯ ಅಖಂಡ ಇತಿಹಾಸದಲ್ಲಿ ಶಿ ಕ್ಷಣದ ಗುರಿಯು ಇದೊಂದೇ ಆಗಿದೆ. ಆಯಾ ಕಾಲದ ಸ್ಥಿತಿಗತಿಗನುಸರಿಸಿ ಆಯಾ ಜನರ ಅಗತ್ಯಗಳಿಗೆ ಯೋಗ್ಯವಾದ ರೀತಿಯಲ್ಲಿ ಈ ದಿವ್ಯ ಗುರಿಯನ್ನು ಮುಟ್ಟುವದಕ್ಕೆಂದು ವಿದ್ಯೋಪದೇಶಕರನ್ನೂ ವಿದ್ಯಾಪದ್ಧತಿಗಳನ್ನೂ ಜಗತ್ತಿನ ನಾಗರಿಕತೆಗಳು ಕಾಲ ಕಾಲಕ್ಕೆ ಕೊಟ್ಟಿವೆ.

(ಪುಟ ೧೨ ಕ್ಕೆ)

ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ



(೧) ಸ್ವಾತಂತ್ರ್ಯ ದಿನೋತ್ಸವದ ಅಂಗವಾಗಿ ಮೆ|| ಎಜ್ಯುಕೇಶನಲ್ ಇನಸ್ಪೆಕ್ಟರರಾದ ಶ್ರೀ ಕೊಪ್ಪಿಕರರು ಧ್ವಜಾರೋಹಣವನ್ನು ನೆರವೇರಿಸುವ ದೃಶ್ಯ.

(೨) ಮೆ|| ಎಜ್ಯುಕೇಶನಲ್ ಇನಸ್ಪೆಕ್ಟರರು ಭಾಷಣ ಮಾಡುತ್ತಿರುವರು.

(೩) ಗಂ. ಸ. ಟ್ರೇ. ಕಾಲೇಜದ ಶಿಕ್ಷಕ ವಿದ್ಯಾರ್ಥಿಗಳು ಉಂಕಿ ಮಾಡುತ್ತಿರುವುದು.

(೪) ಗ. ಸ. ಟ್ರೇ. ಕಾಲೇಜದ ಪರವಾಗಿ ಡೆ. ಡಾಯರೆಕ್ಟರರು ಗಿಡ ನೆಡುವ ದೃಶ್ಯ.

(೫) ಪ್ರಾ. ಸ್ಕೂಲಿನ ಪರವಾಗಿ ಡೆ. ಡಾ. ಶ್ರೀ ಜೇವೂರವರು ಗಿಡ ನೆಡುವ ದೃಶ್ಯ.

ಶ್ರೀ ಅರವಿಂದ ಪ್ರಭಾವಿತೆಯೂ ಶ್ರೀ ತಾಯಿಯವರ ಪ್ರಾಸಾದಿಕತೆಯೂ ಒಂದೆಡೆಗೆ ತೋರುವ ಪವಿತ್ರ ಸಾಹಿತ್ಯದಿಂದ

ವಾಚನಾಲಯದ ಬೆಲೆ ಹೆಚ್ಚಿಸಬೇಡವೇ ?

ಹಾಗಿದ್ದರೆ, ಕೆಳಗೆ ಕಾಣಿಸಿದ ಪುಸ್ತಕಗಳನ್ನು ತರಿಸಿಕೊಳ್ಳಿರಿ.

೧.	ನನ್ನನಲ್ಲ (ಅಂತರ್ಮುಖಗೊಳಿಸುವ ದಿ. ಮಧುರಚೆನ್ನರ ಸಮಗ್ರ ಕವನ ಸಂಗ್ರಹ	....	೧–೧೨
೨.	ಆತ್ಮಸಂಶೋಧನ (ದಿ. ಮಧುರಚೆನ್ನರ ಜೀವನದ ಕಲಶಪ್ರಾಯದ ಪ್ರಾಂಜಲ ಸಾಹಿತ್ಯ)	....	೧– ೮
೩.	ಪವಿತ್ರ ಜೀವನ (ಹೊಸಕಾಲದ ಋಷಿ ಟಾಲಸ್ಟಾಯರ ಕಥಾಸಂಕಲನ)	....	೧– ೨
೪.	ಸುಂದರ ಕಥೆಗಳು (ಮಕ್ಕಳಿಗೂ ಮಕ್ಕಳಂಥವರಿಗೂ ಶ್ರೀ ತಾಯಿಯವರು ಹೇಳಿದುವು)	....	೧– ೪
೫.	ಶ್ರೀ ಅರವಿಂದರು (ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ)	....	೧– ೮
೬.	ಶ್ರೀ ಅರವಿಂದರ ಪತ್ರಗಳು (ಪೂರ್ಣಜೀವನದ ಸಿರಿನೊಳಿಕೆ)		೦– ೮
೭.	ಸ್ವರ್ಗದೋಲೆಗಳು (ಕನ್ನಡಿಗರ ಕೈಗೆ ಬಂದ ಸಾಂಸ್ಕೃತಿಕ ಕನ್ನಡಿ)	....	೧– ೮
೮.	ಮುಗಿಲ ಜೇನು (ಮಿಂಚಿನ ಶಲಾಖೆಯಂಥ ಕವನ ಸಂಕಲನ)	....	೧– ೮
೯.	ಸಪ್ತಪದಿ (ವಿದ್ಯಾರ್ಥಿಗಳ ಮೆಚ್ಚಿಕೆಯ ಏಕಾಂಕಗಳು)	....	೧– ೪
೧೦.	ಭಾರತದ ಭವ್ಯಸಿದ್ಧತೆ (ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ)	....	೧– ೦
೧೧.	ಬೆಟ್ಟದ ಹೊಳೆ (ಜೀವನ ಪ್ರಚೋದಕವಾದ ಕಾದಂಬರಿ)	....	೧– ೪
೧೨.	ಗರತಿಯ ಬಾಳು (ಹೆಣ್ಣಿನ ಮಾಯೆಯಲ್ಲಿ ಕಪಿಲ ಸಿದ್ಧಮಲ್ಲಿಕಾರ್ಜುನ)	....	೧– ೪
೧೩.	ಬಾಳಬಟ್ಟೆ (ಆಧುನಿಕ ಬಾಳಿನ ಒಂಡಾಟಕ್ಕೆ ಚಿಕಿತ್ಸೆ)	....	೧– ೮
೧೪.	ಪೂಜಾ (ಅತೀಂದ್ರಿಯ ಜಾಗ್ರತಿಯ ಮಿಸುಕು)	....	೧–೧೨
೧೫.	ಜೀವನ ದೃಷ್ಟಿ (ಭವ್ಯ ಬದುಕಿನ ಬೊಕ್ಕಸ)	....	೧– ೨
೧೬.	ಕನ್ನಡ ಕುಲದೀಪ ಬಸವಣ್ಣ (ಹಿಡಿದರೆ ಹಿಡಿಕೆಯಲ್ಲಿ ಬಿಟ್ಟರೆ ಮನೆತುಂಬ)	....	೧– ೦

ಕನ್ನಡದಲ್ಲಿ ಶ್ರೀ ಅರವಿಂದರ ಸಾಹಿತ್ಯ ಬೇಕಾದರೆ ಬರೆಯಿರಿ. ಮೇಲೆ ಕಾಣಿಸಿದ ಪುಸ್ತಕಗಳನ್ನೆಲ್ಲ **ತರಿಸಿಕೊಂಡಲ್ಲಿ** ಅಂಚೆ **ನಾವೇ ವಹಿಸುವೆವು.**

ಶ್ರೀ ಅರವಿಂದ ಗ್ರಂಥಾಲಯ ಪೋ:— **ಚಡಚಣ** ಜಿ. ವಿಜಾ

ಶ್ರೀ ಜಿ. ಎ. ಬಸವರಾಜ ಅವರ

ಬಯಲಿನುಡಿಯಲ್ಲಿ

ಬೆಲೆ : ೬೦ ನಯೆ

[ಕಥಾ ಸಂಕಲನ]

- ಕೇವಲ ೨–೮–೦ (ಅಂಚೆ ಸೇರಿ) ವಾರ್ಷಿಕ ಚಂದಾಹಣದಲ್ಲಿ ಮಾಲೆಯು ಹನೆಯ ಕುಸುಮುವನ್ನಾಗಿ **ಪಡೆಯಿರಿ.**
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಸಾಹಿತ್ಯದ ಕೃತಿಗಳು ೪೦೦ ಪುಟಗಳಲ್ಲಿ.
- ಎಪ್ರಿಲದಿಂದ ಎಪ್ರಿಲಕ್ಕೆ ಒಂದು ವರುಷ.
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಶ್ರೇಷ್ಠ ಸಾಹಿತಿಗಳ ಕೃತಿಗಳನ್ನು ಪ್ರಕಟಿಸಿ ಚಂದಾದಾರರಿಗೆ ಕ್ಕೆ ಬೆಲೆಯಲ್ಲಿ ಕೊಡಲಾಗುವದು. (ಅಂಚೆ ಜೇರೆ)
- ಶಿಕ್ಷಕರಿಗೆ ವಿಶೇಷ ಸವಲತ್ತುಗಳಿವೆ. ಕೂಡಲೇ ಚಂದಾದಾರರಾಗಿ ತಮ್ಮದೇ ಆದ ಶಿಕ್ಷಕರ ಸಂಸ್ಥೆಯು ಚಿರಸ್ಥಾಯಿಯ ನಿಲ್ಲುವಂತೆ ನೆರವು ನೀಡಿರಿ. ಈ ಅತ್ಯಲ್ಪಹಣ ತಮ್ಮ ಶಿಕ್ಷಕ ಮಿತ್ರರ ಏಳ್ಗೆಗೆ ಮೀಸಲಾಗಿದೆ.

★ ಮುಂಬೈ ರಾಜ್ಯದ ಶಿಕ್ಷಣಾಧಿಕಾರಿಗಳಿಂದ ಶಾಲಾವಾಚನಾಲಯಗಳಿಗೆ ಮಂಜೂರಾದ ೩೦೦ ಜನ ಶ್ರೇಷ್ಠ ಸಾಹಿ ವಿವಿಧ ಕೃತಿ, ಪರಿಚಯಗಳನ್ನೊಳಗೊಂಡ 'ಆಣೆಕಲ್ಲು' 'ಪುಟಚೆಂಡು,' ಕಥೆ, ಕವನಗಳ ಪುಸ್ತಕಗಳು ನಿಮ್ಮಲ್ಲಿ ಕೆಲವೇ ಪ್ರತಿ ಉಳಿದಿವೆ. ಈಗಲೇ ತರಿಸಿಕೊಳ್ಳಿರಿ ಚಂದಾದಾರರಿಗೆ ಮಾತ್ರ ಕ್ಕೆ ಬೆಲೆ (ಅಂಚೆ ಬೇರೆ) ಬೆಲೆ ೧೨ ಆಣೆ

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

Printed by Shri S. F. Kattimani, at Manohar Power Printing Press, Hubli. Edited Published by Sjts. S. P. Patil, B. M. Shintri, S. R. Tatti & Smti. P. A. Bhaskar, at the Kan Jeevan Shikshan Office, Govt. Training College for Men, Dharwar.

ಜೀವನ ಶಿಕ್ಷಣ

ಪ್ರಧಾನ ಸಂಪಾದಕರು:
ಶ್ರೀ ಎಸ್ ಬಿ. ಪಾಟೀಲ

ಸಂಪುಟ ೧ ಸಂಚಿಕೆ ... ಅಕ್ಟೋಬರ ... ವಾ. ೩ಂ. ೪ ರೂ

CONTD IN NEXT ROLL

CONTD IN
NEXT ROLL

END

END

END

END

END